
ಆಧುನಿಕ ಭಾರತದ
ನಿರ್ಮಾಪಕರು

ರವೀಂದ್ರನಾಥ ಠಾಕೂರ್

ಹಿರಣ್ಮಯ ಬ್ಯಾನರ್ಜಿ



ಆಧುನಿಕ ಭಾರತದ ನಿರ್ಮಾಪಕರು

ರವೀಂದ್ರನಾಥ ಠಾಕೂರ್

ಹಿರಣ್ಮಯ್ ಬ್ಯಾನರ್ಜಿ

ಅನುವಾದ : ಎಲ್. ಎಸ್. ಶೇಷಗಿರಿರಾವ್

ಪ್ರಕಾಶನ ವಿಭಾಗ

ಸಮಾಚಾರ ಮತ್ತು ಪ್ರಸಾರ ಮಂತ್ರಿಶಾಖೆ

ಭಾರತ ಸರ್ಕಾರ

ಸೆಪ್ಟೆಂಬರ್ 1986 (September 1986)

ಭಾದ್ರ 1908 (Bhadra 1908)

Rabindranath Tagore
(Kannada)

Rs. 20.00

ನಿರ್ದೇಶಕರು, ಪ್ರಕಾಶನ ವಿಭಾಗ, ಸಮಾಚಾರ ಮತ್ತು ಪ್ರಸಾರ ಮಂತ್ರಿಶಾಖೆ, ಭಾರತ ಸರ್ಕಾರ, ಪಾಟಿಯಾಲ ಹೌಸ್, ನವ ದೆಹಲಿ–110001 ಇವರಿಂದ ಪ್ರಕಟಿತ

ಮಾರಾಟದ ಕೇಂದ್ರಗಳು • ಪ್ರಕಾಶನ ವಿಭಾಗ

* ಸೂಪರ್ ಬಜಾರ್, ಕನ್ನಾಟ್ ಪ್ಲೇಸ್, ನವ ದೆಹಲಿ–110001
* 8, ಎಸ್ಪ್ಲನೇಡ್ ಈಸ್ಟ್, ಕಲ್ಕತ್ತ–700001
* ಕಾಮರ್ಸ್ ಹೌಸ್, ಕರೀಂಭಾಯ್ ರೋಡ್, ಬಲ್ಲಾರ್ಡ್ ಪಿಯರ್, ಮುಂಬೈ–400038
* ಎಲ್.ಎಲ್.ಎ. ಆಡಿಟೋರಿಯಂ, 736, ಅಣ್ಣಾಸಾಲೈ, ಮದರಾಸ್–600002
* ಬಿಹಾರ್ ಸ್ಟೇಟ್ ಕೋ-ಆಪರೇಟಿವ್ ಬ್ಯಾಂಕ್ ಬಿಲ್ಡಿಂಗ್, ಅಶೋಕ ರಾಜಪಥ, ಪಾಟ್ನಾ–800004
* ಪ್ರೆಸ್ ರೋಡ್, ತಿರುವನಂತಪುರ–695001
* 10-ಬಿ, ಸ್ಟೇಷನ್ ರೋಡ್, ಲಖನೌ–226001
* ಸ್ಟೇಟ್ ಆರ್ಕಿಯಲಾಜಿಕಲ್ ಮ್ಯೂಸಿಯಂ ಬಿಲ್ಡಿಂಗ್, ಪಬ್ಲಿಕ್ ಗಾರ್ಡನ್, ಹೈದರಾಬಾದ್–500004

ಆಂಧ್ರ ಪ್ರಿಂಟರ್ಸ್, ಮುನಿರ್ಕಾ, ನವ ದೆಹಲಿ - 110067 ಇವರಿಂದ ಮುದ್ರಿತ

ವಿಷಯಸೂಚಿಕೆ

ಅಧ್ಯಾಯ		ಪುಟ
1.	ಪೂರ್ವಿಕರು	1
2.	ಕುಟುಂಬ	22
3.	ಜನನ ಮತ್ತು ಬಾಲ್ಯ	39
4.	ವಿದ್ಯಾಭ್ಯಾಸ	52
5.	ಸಹಜ ಸಾಹಿತ್ಯಶಕ್ತಿಯ ಬೆಳವಣಿಗೆ	67
6.	ಮದುವೆ ಮತ್ತು ಕುಟುಂಬ ಜೀವನ	85
7.	ಶಿಕ್ಷಣದಲ್ಲಿ ಪ್ರಯೋಗ	101
8.	ನೋವು ಮರೆಯಲು ಪ್ರಯತ್ನಗಳು	114
9.	ಆಧ್ಯಾತ್ಮಿಕ ಆತ್ಮಸಾಕ್ಷಾತ್ಕಾರ	132
10.	ವಿಶ್ವಮಾನ್ಯ ವ್ಯಕ್ತಿ	156
11.	ಭಾರತದ ಆಧ್ಯಾತ್ಮಿಕ ರಾಯಭಾರಿ	170
12.	ಶಿಕ್ಷಣ ತಜ್ಞರು ಮತ್ತು ಸಮಾಜ ಕಾರ್ಯನಿರತರು	201
13.	ಚಿತ್ರಕಾರರಾಗಿ	216
14.	ಕಡೆಯ ದಿನಗಳು	232
	ಅನುಬಂದ—ಅ (ವಂಶವೃಕ್ಷಗಳ ಪಟ್ಟಿ)	246
	ಅನುಬಂಧ—ಆ (ರವೀಂದ್ರನಾಥ ಠಾಕೂರರ ಮುಖ್ಯ ಕೃತಿಗಳ ಪಟ್ಟಿ)	250

ಈ ಮಾಲೆಯನ್ನು ಕುರಿತು

ನಮ್ಮ ರಾಷ್ಟ್ರೀಯ ನವೋದಯ ಮತ್ತು ಸ್ವಾತಂತ್ರ್ಯ ಸಾಧನೆಗಳಿಗೆ ಮುಖ್ಯವಾಗಿ ಕಾರಣರಾದ ಭಾರತದ ಶ್ರೇಷ್ಠ ಪುತ್ರರ ಮತ್ತು ಪುತ್ರಿಯರ ಹೋರಾಟಗಳ ಮತ್ತು ಸಾಧನೆಗಳ ಕಥೆಯನ್ನು ಇಂದಿಗಾಗಿ ಮತ್ತು ಬರಲಿರುವ ಪೀಳಿಗೆಗಳಿಗಾಗಿ ದಾಖಲೆ ಮಾಡುವುದು ಈ ಮಾಲೆಯ ಉದ್ದೇಶ. ಕೆಲವು ಕೃತಿಗಳನ್ನು ಬಿಟ್ಟರೆ ಇಂತಹ ಅಧಿಕಾರಯುತ ಜೀವನ ಚರಿತ್ರೆಗಳು ದೊರೆಯುತ್ತಿಲ್ಲ.

ವಿಷಯವನ್ನು ಚೆನ್ನಾಗಿ ಅರಿತವರು ಬರೆದ ಮತ್ತು ಬಳಸಲು ಅನುಕೂಲವಾದ ಪುಸ್ತಕಗಳಾಗಿ, ಮಹಾನ್ ನಾಯಕರ ಜೀವನವನ್ನೂ ಮತ್ತು ಕೆಲಸ ಕಾರ್ಯಗಳನ್ನೂ ಅವರ ಯುಗವನ್ನೂ ಸರಳವಾದ ಭಾಷೆಯಲ್ಲಿ ಸಂಗ್ರಹವಾಗಿ ನಿರೂಪಿಸುವಂತೆ ಈ ಜೀವನ ಚರಿತ್ರೆಗಳನ್ನು ಯೋಜಿಸಲಾಗಿದೆ. ಇವು ಸಮಗ್ರ ಅಧ್ಯಯನಗಳಾಗಬೇಕು ಎಂಬುದಾಗಲಿ ಇನ್ನೂ ವಿವರವಾದ ಜೀವನ ಚರಿತ್ರೆಗಳ ಸ್ಥಾನವನ್ನು ಆಕ್ರಮಿಸಬೇಕು ಎಂಬುದಾಗಲಿ ಉದ್ದೇಶವಲ್ಲ.

ಈ ಜೀವನಚರಿತ್ರೆಗಳನ್ನು ಬರೆಯುವ ಕಾರ್ಯವನ್ನು ಹಲವರಿಗೆ ವಹಿಸಿಕೊಡಬೇಕಾಯಿತು. ಆದುದರಿಂದ ಇದನ್ನು ಕಾಲಕ್ರಮಕ್ಕನುಗುಣವಾಗಿ ಪ್ರಕಟಿಸುವುದು ಸಾಧ್ಯವಾಗಿಲ್ಲ. ಆದರೂ ಸ್ವಲ್ಪ ಕಾಲದಲ್ಲಿಯೇ ರಾಷ್ಟ್ರದ ಎಲ್ಲ ಮಹಾನ್ ವ್ಯಕ್ತಿಗಳೂ ಈ ಮಾಲೆಯನ್ನು ಬೆಳಗುವರೆಂದು ನಮ್ಮ ಭರವಸೆ.

ಈ ಇಡೀ ಮಾಲೆಯ ಸಂಪಾದಕರು ಶ್ರೀ ಆರ್. ಆರ್. ದಿವಾಕರ್ ಅವರು.

ಮುನ್ನುಡಿ

ಆಧುನಿಕ ಭಾರತದ ನಿರ್ಮಾಪಕರಲ್ಲಿ ಎಲ್ಲರೂ ಒಪ್ಪುವಂತೆ ರವೀಂದ್ರನಾಥ ಠಾಕೂರರದು ಬಹು ಉನ್ನತ ಸ್ಥಾನ. ಅವರ ಕೊಡುಗೆಗಳ ಸಂಖ್ಯೆ ದೊಡ್ಡದಷ್ಟೇ ಅಲ್ಲ ಅವಕ್ಕೆ ತಪ್ಪದೇ ಇದ ವಿಶಿಷ್ಟ ಗುಣವೂ ಉಂಟು. ಅವು ಮುಖ್ಯವಾಗಿ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಿಗೂ ಸಂಬಂಧಿಸಿದವು. ಆದರೆ ಅವಕ್ಕೇ ಸೀಮಿತವಲ್ಲ. ಇತರ ಕ್ಷೇತ್ರಗಳಿಗೂ ಉಕ್ಕಿ ಹರಿಯುತ್ತವೆ. ಅವರು ಒಬ್ಬ ಸೃಜನಶೀಲ ಬರಹಗಾರ ಎನ್ನುವುದಕ್ಕೆ ಹೆಚ್ಚಿನ ವಿವರಣೆಯೇನೂ ಅಗತ್ಯವಿಲ್ಲ. ಅದು ಅಷ್ಟು ಚೆನ್ನಾಗಿ ಗೊತ್ತಿರುವ ವಿಚಾರ ಅಷ್ಟೆ ಅಲ್ಲ. ತಮ್ಮ ಹೆಸರಿನಲ್ಲಿಯೇ ಹೊಸದೊಂದು ಸಂಗೀತ ಪಂಥವನ್ನೇ ಸೃಷ್ಟಿಸಿದ ಬಹು ಶ್ರೇಷ್ಠ ವಾಗ್ಗೇಯಕಾರರು ಎಂದು, ಭಾರತದ ಸಾಂಪ್ರದಾಯಿಕ ನೃತ್ಯಗಳನ್ನು ಪುನರುಜ್ಜೀವನಗೊಳಿಸಿ, ಹೊಸದೊಂದು ಪಂಥವನ್ನೇ ನಿರ್ಮಿಸಿದ ನೃತ್ಯ ಪ್ರತಿಪಾದಕರು ಎಂದು. ಮತ್ತು ಕಡೆಯದಾಗಿ ಮುಪ್ಪಿನಲ್ಲಿ ಚಿತ್ರಕಾರರಾಗಿ ವಿದೇಶಗಳ ಕಲಾಭಿಜ್ಞರಿಂದಲೂ ಮುಕ್ತಕಂಠದಿಂದ ಪ್ರಶಂಸೆ ಪಡೆದ ವ್ಯಕ್ತಿ ಎಂದು ಅವರು ಹೆಸರಾಗಿದ್ದಾರೆ.

ಇತರ ಕ್ಷೇತ್ರಗಳಿಗೂ ಹಬ್ಬಿದ ಅವರ ಸಾಧನೆ ಇದಕ್ಕಿಂತ ಕಡಿಮೆಯದಲ್ಲ. ಶಿಕ್ಷಣ ತಜ್ಞರಾಗಿ ಅವರು ಹೊಸ ವಿಚಾರಗಳನ್ನು ತಂದುಕೊಟ್ಟರು. ಅವುಗಳನ್ನು ಬಳಸಿ ಪ್ರಯೋಗ ಮಾಡುವಾಗ ವಿಶ್ವಭಾರತಿ ಎಂಬ ಅದ್ವಿತೀಯ ಶಿಕ್ಷಣ ಸಂಸ್ಥೆಯನ್ನು ಕಟ್ಟಿದರು. ಅನುಕಂಪ ತುಂಬಿದ ಮಾನವತಾವಾದಿಯಾಗಿ ಅವರು ಗ್ರಾಮೀಣ ಜನತೆಯ ಸ್ಥಿತಿಗತಿಗಳನ್ನು ಸುಧಾರಿಸಲು ಗ್ರಾಮೀಣ ಪುನರ್ನಿರ್ಮಾಣದಲ್ಲಿ ಹೊಸ ಪ್ರಯೋಗಗಳನ್ನು ಮಾಡಿದರು. ಈ ವಿಷಯದಲ್ಲಿ ಮುಂದೆ ಯೋಜನಾ ಆಯೋಗವು ಪ್ರಾರಂಭಿಸಿದ ಸಾಮುದಾಯಿಕ ಅಭಿವೃದ್ಧಿ ಕಾರ್ಯಕ್ರಮದ ಕೆಲಸವನ್ನು ಮುಂದಾಗಿಯೇ ಗ್ರಹಿಸಿದ್ದರು, ಮಾಡಿ ತೋರಿಸಿದ್ದರು. ರಾಜಕೀಯ ಚಟುವಟಿಕೆಗಳಿಂದ ಠಾಕೂರರು ದೂರವಿರಬಯಸಿದರೂ ನಮ್ಮ ದೇಶದ ಗಂಭೀರ ರಾಜಕೀಯ ಬೆಳವಣಿಗೆಗೆ ಅವರ ಸೂಕ್ಷ್ಮ ಮನಸ್ಸು ಪ್ರತಿಕ್ರಿಯೆ

ತೋರಿಸದೆ ಉಳಿಯುವುದು ಸಾಧ್ಯವಾಗಲಿಲ್ಲ. 1905 ರಲ್ಲಿ ಬಂಗಾಳದಲ್ಲಿ ವಂಗ ಭಂಗ ಚಳವಳಿಯಲ್ಲಿ ಅವರು ಆಳವಾಗಿ ಧುಮುಕಿದ್ದು ಮತ್ತು 1919 ರಲ್ಲಿ ಜಲಿಯನ್‌ವಾಲಾಬಾಗಿನ ಕಗ್ಗೊಲೆಯ ನಂತರ ಅವರು ನೈಟ್‌ಹುಡ್ ಪ್ರಶಸ್ತಿಯನ್ನು ತಿರಸ್ಕರಿಸಿದುದು ಇದಕ್ಕೆ ನಿದರ್ಶನ ಎನ್ನಬಹುದು. ದೇಶ ವಿರೋಧಿ ಚಳವಳಿಗೆ ಪೂರಕವಾಗಿ 'ರಾಖೀಬಂಧನ' ವಿಧಿಯನ್ನು ಪ್ರಾರಂಭಿಸಿದ್ದು ಮತ್ತು ನಮ್ಮ ದೇಶಾಭಿಮಾನದ ಭಾವಗಳನ್ನು ಇಂದಿಗೂ ಉದ್ದೀಪಿಸಬಲ್ಲ ದೇಶಭಕ್ತಿ ಗೀತೆಗಳ ಸಂಕಲನವನ್ನು ರಚಿಸಿದ್ದು ವಂಗಭಂಗ ಚಳವಳಿಯ ಸಂದರ್ಭದಲ್ಲಿ.

ಹೀಗೆ ಠಾಕೂರರ ಸ್ವಭಾವ ಸಂಕೀರ್ಣವಾದದ್ದು, ಬಹುಮುಖವಾದದ್ದು. ಅವರ ಜೀವನ ಚರಿತ್ರೆಯನ್ನು ಬರೆಯುವವನ ಕಾರ್ಯವನ್ನು ಸ್ವಲ್ಪ ಕ್ಲಿಷ್ಟಗೊಳಿಸುವುದು ಈ ಸಂಕೀರ್ಣತೆಯೇ. ಈ ಜೀವನವೃತ್ತಾಂತದಲ್ಲಿ ಅವರ ಸ್ವಭಾವದ ವಿವಿಧ ಮುಖಗಳನ್ನೂ ನಮ್ಮ ಪಿತ್ರಾರ್ಜಿತಕ್ಕೆ ಅವರ ಕೊಡುಗೆಗಳನ್ನೂ, ಅವರ ಸಾಧನೆಗಳಿಗೂ ಅವರ ವರ್ಣರಂಜಿತ ಬಾಳಿನ ಘಟನೆಗಳಿಗೂ ಇರುವ ಸಂಬಂಧವನ್ನು ವಿವರಿಸುವುದರ ಮೂಲಕ ನಿರೂಪಿಸಲು ಪ್ರಯತ್ನಿಸಲಾಗಿದೆ. ಈ ಮಾಲೆಯ ಮಿತಿಗಳಲ್ಲಿ ಇಲ್ಲಿ ನಿರೂಪಿಸಿದ ಸಾಮಗ್ರಿಯು ಸಾಕಷ್ಟು ವ್ಯಾಪಕವೆಂದು ತೋರುವುದೆಂದೂ ಈ ಹಿರಿಯರ ಬಾಳಿನ ತೃಪ್ತಿಕರ ದರ್ಶನವನ್ನು ತೋರುವುದೆಂದೂ ಆಶಿಸುತ್ತೇನೆ.

ನನ್ನ ಹೃದಯಕ್ಕೆ ತುಂಬಾ ಹತ್ತಿರವಾದ ವಸ್ತುವನ್ನು ಕುರಿತು ಈ ಜೀವನ ಚರಿತ್ರೆಗಳ ಮಾಲೆಗೆ ಈ ಕೊಡುಗೆ ನೀಡುವಂತೆ ನನ್ನನ್ನು ಆಹ್ವಾನಿಸಿದ್ದು ದೊಡ್ಡ ಗೌರವ ಎಂದು ಭಾವಿಸುತ್ತೇನೆ.

ಮೇ 9, 1971 — ಹಿರಣ್ಮಯ್ ಬ್ಯಾನರ್ಜಿ

ಅಧ್ಯಾಯ ೧

ಪೂರ್ವಿಕರು

ಠಾಕೂರ್ ಕುಟುಂಬದವರು 'ವೇಣೀ ಸಂಹಾರ' ಎನ್ನುವ ಪ್ರಸಿದ್ಧ ಸಂಸ್ಕೃತ ನಾಟಕದ ಕರ್ತೃ, ಭಟ್ಟನಾರಾಯಣ ತಮ್ಮ ಪೂರ್ವಿಕ ಎಂದು ಹೇಳುತ್ತಾರೆ. ಭಟ್ಟನಾರಾಯಣ ಮೊದಲು ವಾಸವಾಗಿದ್ದುದು ಕನೂಜಿನಲ್ಲಿ. ಬಂಗಾಳದ ರಾಜ ಆದಿಸೂರನ ಆಹ್ವಾನದಂತೆ ಆತ ಎಂಟನೆಯ ಶತಮಾನದಲ್ಲಿ ಇನ್ನು ನಾಲ್ಕು ಮಂದಿ ಪ್ರಖ್ಯಾತ ಬ್ರಾಹ್ಮಣರೊಂದಿಗೆ ಅವನ ಆಸ್ಥಾನಕ್ಕೆ ಬಂದ ಎಂದು ತೋರಿಸಿಕೊಡುವ ಐತಿಹಾಸಿಕ ಸಾಕ್ಷ್ಯವಿದೆ. ರಾಜ ಅವನಿಗೆ ವಿಶಾಲವಾದ ಜಮೀನನ್ನು ಬಹುಮಾನವಾಗಿ ಕೊಟ್ಟ, ಅಷ್ಟೇ ಅಲ್ಲ, ಅವನ ಗಂಡು ಮಕ್ಕಳಿಗೂ ಇದೇ ರೀತಿಯಲ್ಲಿ ಭೂಮಿಯನ್ನು ಕೊಟ್ಟ.

ಅವನ ಮೊದಲನೆಯ ಮಗ ಆದಿವರಾಹನು ವೀರಭೂಮಿ ಜಿಲ್ಲೆಯ ಬಂದ್ಯಘಾಟೀ ಎನ್ನುವ ಹಳ್ಳಿಯಲ್ಲಿ—ಈಗ ಅದರ ಹೆಸರು ಬಂದೀಘಾಟ್ ಎಂದು—ನೆಲೆಸಿದ. ಅವನ ಸಂತತಿಯವರು ಈ ಹಳ್ಳಿಯಿಂದಲೇ ತಮ್ಮ ಹೆಸರನ್ನು ಪಡೆದರು, ಬಂದ್ಯೋಪಾಧ್ಯಾಯರು ಎಂದು ಜನ ಅವರನ್ನು ಕರೆಯಲಾರಂಭಿಸಿದರು. ಮತ್ತೊಬ್ಬ ಮಗ, ಕಾಯ್ ಎಂಬ ಹೆಸರಿನವನು. ಬರ್ದ್ವಾನ್ ಜಿಲ್ಲೆಯ ಕುಶ್ ಎಂಬ ಹಳ್ಳಿಯಲ್ಲಿ ನೆಲೆಸಿದ. ಅವನ ಸಂತತಿಯವರಿಗೆ ಆ ಹಳ್ಳಿಯಿಂದ, ಕುಶಾರಿ

ಗಳು ಎಂದೇ ಹೆಸರಾಯಿತು. ಈ ಎರಡು ಶಾಖೆಗಳಲ್ಲಿ ಠಾಕೂರ್ ಕುಟುಂಬ ಯಾವುದಕ್ಕೆ ಸೇರಿದ್ದು ಎನ್ನುವ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ. ಒಂದು ಅಭಿಪ್ರಾಯ ಠಾಕೂರ್ ಕುಟುಂಬಕ್ಕೆ ಕುಶಾರಿಗಳೊಡನೆ ಸಂಬಂಧ ಕಲ್ಪಿಸುತ್ತದೆ. ಮತ್ತೊಂದು ಬಂದ್ಯೋಪಾಧ್ಯಾಯರೊಡನೆ ಕಲ್ಪಿಸುತ್ತದೆ. ಠಾಕೂರ್ ಮನೆತನದವರು ತಾವು ಆದಿವರಾಹನ ಸಂತತಿಯವರೆಂದೂ, ಪ್ರಾರಂಭದಲ್ಲಿ ತಮ್ಮ ಮನೆತನದ ಹೆಸರು ಬಂದ್ಯೋಪಾಧ್ಯಾಯ ಎಂದೂ ಹೇಳುತ್ತಾರೆ.*

ಇವರ ನಂತರ ಕುಟುಂಬದ ಚಲನ ವಲನಗಳು ಹಲವು ಶತಮಾನಗಳ ಕಾಲ ಅಸ್ಪಷ್ಟವಾಗಿಯೇ ಉಳಿದವು. ಆದರೆ ರವೀಂದ್ರನಾಥರ ದೂರದ ಪೂರ್ವಿಕ, ಪೂರ್ವ ಬಂಗಾಳದ ಜೆಸ್ಸೂರ್ ಜಿಲ್ಲೆಯ ಪೀತಾಭೋಗ್ ಗ್ರಾಮದ ಜಗನ್ನಾಥ, ಬಿಂಗುಟಿಯದ ಸುಖದೇವರಾಯ್ ಚೌಧುರಿಯ ಒಬ್ಬ ಮಗಳನ್ನು ಮದುವೆಯಾಗಿ ಅದೇ ಜಿಲ್ಲೆಯಲ್ಲಿ ನೆಲಸಿದ ಎಂದು ಹೇಳುತ್ತಾರೆ.

ಮತ್ತೆ ಅವರ ವಿಷಯ ನಾವು ಕೇಳುವುದು ಹದಿನೆಂಟನೆಯ ಶತಮಾನದಲ್ಲಿ. ಜಾಬ್ ಚಾರ್‌ನಾಕನು ಆಗಲೇ ಕಲ್ಕತ್ತೆಯ ಅಸ್ತಿಭಾರವನ್ನು ಸ್ಥಾಪಿಸಿದ್ದ. ಫೋರ್ಟ್ ವಿಲಿಯಂ ಇರುವ ಸ್ಥಳದಲ್ಲಿ ಹತ್ತಿರವೇ ಒಂದು ಬಂದರನ್ನು ತೆರೆದುದೂ ಆಗಿತ್ತು. ಕಲ್ಕತ್ತದ ಸ್ಥಾಪನೆಗೆ ಜಾಬ್ ಚಾರ್‌ನಾಕನು ಕೊಂಡುಕೊಂಡ ಮೂರು ಹಳ್ಳಿಗಳಲ್ಲಿ ಒಂದಾದ ಗೋವಿಂದಪುರದ ಭಾಗವಾಗಿತ್ತು ಈ ಬಂದರು. ಈ ಬಂದರಿನಲ್ಲಿ ಈಸ್ಟ್ ಇಂಡಿಯಾ ಕಂಪೆನಿ ಚುರುಕಾಗಿ ವ್ಯಾಪಾರ ನಡೆಸುತ್ತಿತ್ತು. ಊರು ಚಿಕ್ಕದಾಗಿದ್ದರೂ ಊರಿನಲ್ಲಿನ ಸುರಕ್ಷತೆ ಮತ್ತು ಜೀವನೋಪಾಯಕ್ಕೆ ಇದ್ದ ಅನುಕೂಲಗಳು ಹೆಚ್ಚು ಹೆಚ್ಚಾಗಿ ಹೊರಗಿನ ಜನರನ್ನು ಆಕರ್ಷಿಸಲು ಪ್ರಾರಂಭಿಸಿದ್ದವು. ಜನರು ಬಂದು ಅಲ್ಲಿ ನೆಲಸಿದರು, ನೆಲಸುತ್ತಿದ್ದಂತೆಯೇ ಅದರ ಬೆಳವಣಿಗೆಯ ವೇಗವನ್ನು ಚುರುಕುಗೊಳಿಸಿದರು.

ಜಗನ್ನಾಥನ ಮೊಮ್ಮಗ ಪಂಚಾನನನ್ನು ಈ ಊರು ಆಕರ್ಷಿಸಿತು, ಜೆಸ್ಸೂರು ಜಿಲ್ಲೆಯ ದೂರದ ಹಳ್ಳಿಯಲ್ಲಿ ನೆಲಸಿದ್ದ ಅವನು ಭಾಗ್ಯವನ್ನರಸಿ ಇಲ್ಲಿಗೆ ಬಂದ. ಬೆಳೆಯುತ್ತಿದ್ದ ಬಂದರಿನ ಬಳಿ ನದಿಯ ದಡದಲ್ಲಿ ಅವನು ವಾಸಿಸಲು ಪ್ರಾರಂಭಿಸಿದ

* ರತೀಂದ್ರನಾಥ ಠಾಕೂರ್. 'ಆನ್ ದಿ ಎಡ್ಜಸ್ ಆಫ್ ಟೈಂ; ಕ್ಷಿತೀಂದ್ರನಾಥ ಠಾಕೂರ್. ದ್ವಾರಕಾನಾಥ್ ಠಾಕೂರರ್ ಜೀವನೀ'

ಎಂದು ಕಾಣುತ್ತದೆ. ಆ ಪ್ರದೇಶದಲ್ಲಿದ್ದ ಜನರು ಮೀನುಗಾರಿಕೆಯಿಂದ ಅಥವಾ ರೇವಿನಲ್ಲಿ ವ್ಯಾಪಾರದ ಸರಕನ್ನು ಸಾಗಿಸುವ ಕೂಲಿ ಕೆಲಸದಿಂದ ಹಾಗೂ ಹೀಗೂ ಹೊಟ್ಟೆ ಹೊರೆಯುತ್ತಿದ್ದವರು. ಪಂಚಾನನನು ಇಂತಹ ಜನಸಾಮಾನ್ಯರ ಮಧ್ಯೆ ವಾಸಿಸುತ್ತಿದ್ದ ಮೇಲು ಜಾತಿಯ ಏಕಾಕಿ ಬ್ರಾಹ್ಮಣ. ಆದರೂ ಅವನು ಇದಕ್ಕೆ ಹೊಂದಿಕೊಳ್ಳದ ಎಡವಟ್ಟು ಮನುಷ್ಯನೇನೂ ಆಗಿರಲಿಲ್ಲ. ಅವನದು ಸ್ನೇಹದ ಸ್ವಭಾವ, ಉದಾತ್ತ ಗುಣ. ಆದುದರಿಂದ ಅವನು ಅವರೊಡನೆ ಸಮಾಧಾನದಿಂದ ಬಾಳುವುದು ಸಾಧ್ಯವಾದದ್ದು ಮಾತ್ರವಲ್ಲ, ಪ್ರೀತಿಯ ಬಾಂಧವ್ಯವನ್ನು ಬೆಳೆಸಿ ಕೊಳ್ಳುವುದೂ ಸಾಧ್ಯವಾಯಿತು. ವಾಸ್ತವವಾಗಿ, ಅವನ ನೆರೆ ಹೊರೆಯವರು ಅವನನ್ನು ಗೌರವಿಸುತ್ತಿದ್ದುದಷ್ಟೇ ಅಲ್ಲ, ಪ್ರೀತಿಸಲೂ ಪ್ರಾರಂಭಿಸಿದರು. ಅವನನ್ನು 'ಠಾಕೂರ್' ಎಂದು ಸಂಬೋಧಿಸಲು ಪ್ರಾರಂಭಿಸಿದರು. ಈ ನಾಮಧೇಯದ ಅರ್ಥ ದೇವರಂತಹ ಮನುಷ್ಯ, ದೇವಮಾನವ ಎಂದು.

ಈಸ್ಟ್ ಇಂಡಿಯಾ ಕಂಪೆನಿಯ ವರ್ತಕರ ನಿಕಟ ಸಂಪರ್ಕವಾಗುವಂತಹ ಯಾವುದೋ ವೃತ್ತಿಯನ್ನು ಪಂಚಾನನ ಕೈಗೊಂಡಿದ್ದಿರಬೇಕು. ಅವನ ವಾಸಸ್ಥಳದ ಸನ್ನಿವೇಶ ಈ ಸಾಧ್ಯತೆಯನ್ನು ದೃಢಪಡಿಸುತ್ತದೆ. ಅವನ ನೆರೆಹೊರೆಯವರು ಅವನನ್ನು 'ಠಾಕೂರ್' ಎಂದು ಕರೆಯುತ್ತಿದ್ದುದನ್ನು ಕೇಳಿ ವರ್ತಕರೂ ಅವರನ್ನು ಅನುಸರಿಸಲು ಪ್ರಯತ್ನಿಸಿದರೆಂದು ನಂಬಲಾಗಿದೆ. ಯೂರೋಪಿಯನ್ನರ ತುಟಿಯಲ್ಲಿ ಭಾರತೀಯ ಪದಗಳು ವಿಚಿತ್ರ ಮಾರ್ಪಾಟನ್ನು ಪಡೆಯುವುದು ವಿರಳವಲ್ಲ. ಇದೇ ಪ್ರಕ್ರಿಯೆಯಿಂದ ಈ 'ಠಾಕೂರ್' ಎನ್ನುವ ಮೂಲ ಬಂಗಾಳಿ ಪದ 'ಟ್ಯಾಗೋರ್' ಎಂಬ ರೂಪ ತಾಳಿತು, ಕಡೆಗೆ ಇದರಿಂದ ಅವನ ಕುಟುಂಬಕ್ಕೆ 'ಟ್ಯಾಗೋರ್' ಎಂದೇ ಹೆಸರು ಬಂದಿತು.

ಪಂಚಾನನಿಗೆ ಒಬ್ಬ ಮಗ, ಹೆಸರು ಜಯರಾಮ. ಅವನು ಈಸ್ಟ್ ಇಂಡಿಯಾ ಕಂಪೆನಿಯಲ್ಲಿ ಅಮೀನ (ಬಾಂದಿನವನು, ಮೋಜಣಿದಾರ, ಸರ್ವೆಯರ್) ಆದ. ಅವನ ಆಡಳಿತದಲ್ಲಿ ಕುಟುಂಬ ಅಭಿವೃದ್ಧಿ ಪಡೆದಂತೆ ಕಾಣುತ್ತದೆ. ಇದರಿಂದ ಅವನು 1756 ರಲ್ಲಿ ತೀರಿಕೊಂಡಾಗ ಅವನ ಹೆಂಡತಿ ಮತ್ತು ನಾಲ್ಕು ಮಂದಿ ಗಂಡು ಮಕ್ಕಳಿಗೆ ಸಾಕಷ್ಟು ಹಣವನ್ನು ಬಿಟ್ಟು ಹೋದ. ಗಂಡು ಮಕ್ಕಳಲ್ಲಿ

ಜೇಮ್ಸ್ ಫ್ಯಾರೆಲ್ 'ದ ಟ್ಯಾಗೋರ್ ಫ್ಯಾಮಿಲಿ'

ನಾವು ಗಮನಿಸಬೇಕಾದದ್ದು ಎರಡನೆಯವನಾದ ನೀಲಮಣಿ ಮತ್ತು ಮೂರನೆಯವನಾದ ದರ್ಪನಾರಾಯಣ. ಕೆಲವು ರಾಜಕೀಯ ಘಟನೆಗಳಿಂದಾಗಿ ಬೇಗನೇ ಈ ಕುಟುಂಬವು ಗೋವಿಂದ ಪುರದಲ್ಲಿದ್ದ ಮನೆಯನ್ನು ಬಿಡಬೇಕಾಯಿತು. ಮುರ್ಷಿದಾಬಾದಿನ ಯುವಕ ನವಾಬ ಸಿರಾಜುದ್ದೌಲ ಕಂಪೆನಿಗೆ ತೀವ್ರ ವಿರೋಧಿಯಾದ, ಮತ್ತು 1756 ರಲ್ಲಿ ಕಲ್ಕತ್ತೆಗೆ ಸೈನ್ಯದೊಡನೆ ಬಂದು ನಗರವನ್ನು ವಶಮಾಡಿಕೊಂಡ. ಈಗ ಜನರಲ್ ಪೋಸ್ಟ್ ಆಫೀಸ್ ಇರುವ ಸ್ಥಳದಲ್ಲಿ ಆಗ ಕೋಟೆ ಇದ್ದಿತು. ಒಂದಾದ ಮೇಲೊಂದು ಘಟನೆಗಳು ನಡೆದು ಹೋದವು. ಕ್ಲೈವ್‌ನ ನಾಯಕತ್ವದಲ್ಲಿ ಸೈನ್ಯವೊಂದು ನವಾಬನ ರಾಜಧಾನಿ ಮುರ್ಷಿದಾಬಾದಿನತ್ತ ಸಾಗಿ ಹೋಯಿತು, ಪ್ಲಾಸಿ ಕದನದಲ್ಲಿ ನವಾಬನನ್ನು ಸಂಪೂರ್ಣವಾಗಿ ಸೋಲಿಸಿತು. ಇದರ ನಂತರ ಅಧಿಕಾರಕ್ಕಾಗಿ ನಡೆದ ಹೋರಾಟದಲ್ಲಿ ಸಿರಾಜುದ್ದೌಲನ ಕೊಲೆಯಾಯಿತು, ಅವನ ಸೈನ್ಯಾಧಿಪತಿ ಮೀರ್ ಜಾಫರ್ ಅವನ ಸ್ಥಾನದಲ್ಲಿ ಬಂಗಾಳದ ಪ್ರಭುವಾದ. ಹೀಗೆ ಬಂಗಾಳದಲ್ಲಿ ಮತ್ತೆ ಶಾಂತಿ ಸ್ಥಾಪನೆಯಾಗುತ್ತಲೇ ಈಸ್ಟ್ ಇಂಡಿಯಾ ಕಂಪೆನಿಯು ಕಲ್ಕತ್ತೆಗೆ ಇನ್ನೂ ಪರಿಣಾಮಕಾರಿಯಾದ ರಕ್ಷಣೆಯನ್ನು ಒದಗಿಸುವ ವಿಷಯಕ್ಕೆ ತೀವ್ರ ಗಮನ ಕೊಟ್ಟಿತು. ಹೊಸದೊಂದು ಕೋಟೆಗೆ ಯೋಜನೆ ಸಿದ್ಧವಾಯಿತು, ಕೋಟೆಯನ್ನು ಗೋವಿಂದಪುರದಲ್ಲಿ, ಎಂದರೆ ಅದು ಈಗ ಇರುವ ನಿವೇಶನದಲ್ಲಿ, ಕಟ್ಟಬೇಕೆಂದು ತೀರ್ಮಾನವಾಯಿತು. ಈ ನಿವೇಶನವನ್ನು ವಶಪಡಿಸಿಕೊಳ್ಳಲಾಗುವುದೆಂದು ಪ್ರಕಟಣೆ ಹೊರಟಿತು. ಪರಿಣಾಮವಾಗಿ, ಠಾಕೂರು ಮನೆತನ ಸ್ಥಳವನ್ನು ಕಳೆದು ಕೊಂಡಿತು.

ಕುಟುಂಬದ ಯಜಮಾನ ನೀಲಮಣಿ ಉತ್ತರ ಕಲ್ಕತ್ತೆಕ್ಕೆ ಸ್ಥಳಾಂತರ ಮಾಡಲು ನಿರ್ಧರಿಸಿದ. ಪಥೂರಿಯಾಘಟ್ಟದಲ್ಲಿ ನದಿಯ ಬಳಿ ಒಂದಿಷ್ಟು ಭೂಮಿಯನ್ನು ಕೊಂಡುಕೊಂಡು ತನ್ನ ಸಂಸಾರಕ್ಕಾಗಿ ಒಂದು ಮನೆಯನ್ನು ಕಟ್ಟಿದ. ಕಾಂಪೌಂಡಿನಲ್ಲಿ ಒಂದು ದೇವಸ್ಥಾನವನ್ನು ಕಟ್ಟಿ ಕೆಲವು ದೇವತಾ ವಿಗ್ರಹಗಳನ್ನು ಪ್ರತಿಷ್ಠಾಪಿಸಲು ಅವನ ತಾಯಿ ಹಣವನ್ನು ಕೊಟ್ಟಳು. ಅದಾದ ನಂತರ ಸಂಸಾರದ ನಿರ್ವಹಣೆಯನ್ನು ಮೂರನೆಯ ಸಹೋದರ ದರ್ಪನಾರಾಯಣನಿಗೆ ವಹಿಸಿ ನೀಲಮಣಿ ಬೇರೆಡೆ ತನ್ನ ಅದೃಷ್ಟವನ್ನು ಪರೀಕ್ಷಿಸಲು ಕಲ್ಕತ್ತೆಯನ್ನು ಬಿಟ್ಟುಹೋದಂತೆ ಕಾಣುತ್ತದೆ.

ಕಡೆಗೆ ಅವನು ಈಸ್ಟ್ ಇಂಡಿಯಾ ಕಂಪೆನಿಯ ಒಬ್ಬ ಕಲೆಕ್ಟರನ ಶಿರಸ್ತೆದಾರ್

(ಮುಖ್ಯ ಗುಮಾಸ್ತ) ಆಗಿ ನೌಕರಿ ಪಡೆದುಕೊಂಡ. ಆ ಹೊತ್ತಿಗೆ ಕಂಪೆನಿಯು ಆಡಳಿತ ಬಂಗಾಳಕ್ಕೆ ಮಾತ್ರವಲ್ಲದೆ ಒರಿಸ್ಸಾ ಮತ್ತು ಬಿಹಾರ್‌ಗಳಿಗೂ ವ್ಯಾಪಿಸಿತ್ತು. ಆತ ಎಲ್ಲಿ ಕೆಲಸದಲ್ಲಿದ್ದ ಎಂಬುದರ ವಿಷಯವೂ ವಿವಾದಾತ್ಮಕ. ಒಂದು ಅಭಿಪ್ರಾಯದ ಪ್ರಕಾರ ಅವನಿದ್ದದ್ದೂ ಚಿಟ್ಟಗಾಂಗಿನಲ್ಲಿ. ಮತ್ತೊಂದು ಅಭಿಪ್ರಾಯದ ಪ್ರಕಾರ ಕಟಕ್‌ನಲ್ಲಿ. ವಿವರಗಳನ್ನು ಹೇಳಹೊರಡದೆ, ಒಟ್ಟಾರೆ ಸಾಕ್ಷ್ಯ ಅವನು ಕಟಕ್‌ನಲ್ಲಿದ್ದ ಎಂಬ ಅಭಿಪ್ರಾಯವನ್ನೇ ಸಮರ್ಥಿಸುತ್ತದೆ ಎನ್ನಬಹುದು. ಅವನು ಕಟಕ್‌ನಲ್ಲಿದ್ದಷ್ಟು ದೀರ್ಘಕಾಲವೂ ಕಂಪೆನಿಯ ನೌಕರಿಯಲ್ಲಿದ್ದ ಎಂದು ನಾವು ಊಹಿಸಬಹುದು. ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತ ವ್ಯಾಪ್ತಿ 1803ರ ಎರಡನೆಯ ಮರಾಠಾ ಯುದ್ಧ ಮುಗಿಯುವವರೆಗೆ ಕಟಕ್ಕಿಗೆ ಹಬ್ಬಲಿಲ್ಲ ಎಂದು ಕಾಣುತ್ತದೆ. ಆದರೂ ನೀಲಮಣಿ ಕಂಪೆನಿಯ ವಾಣಿಜ್ಯ ಚಟುವಟಿಕೆಗಳ ಸಂಬಂಧದಲ್ಲಿ ಸೇವೆ ಸಲ್ಲಿಸಿದ್ದ ಎನ್ನುವುದು ಸಾಧ್ಯತೆಗೆ ಹೊರತಾದದ್ದಲ್ಲ.

1784 ರಲ್ಲಿ ನೀಲಮಣಿ ಪಥೂರಿಯಾಘಟ್ಟದಲ್ಲಿ ತನ್ನ ಕುಟುಂಬದ ಮನೆಗೆ ಹಿಂದಿರುಗಲು ತೀರ್ಮಾನಿಸಿದ. ಈ ನಡುವೆ ದರ್ಪನಾರಾಯಣನು ಹಣಕಾಸಿನ ವ್ಯವಹಾರದಿಂದ ತುಂಬಾ ಶ್ರೀಮಂತನಾಗಿದ್ದ. ನೀಲಮಣಿ ಮನೆಯಿಂದ ದೂರದಲ್ಲಿದ್ದ ದೀರ್ಘಕಾಲದಲ್ಲಿ ತಾನು ನೌಕರಿಯಲ್ಲಿದ್ದ ಸ್ಥಳದಿಂದ ತಪ್ಪದೆ ಹಣ ಕಳುಹಿಸುತ್ತಿದ್ದನೆಂದು ಕಾಣುತ್ತದೆ. ಇದು ತಮ್ಮನ ಸಂಪತ್ತನ್ನು ಹೆಚ್ಚಿಸಿತೆಂದು ಭಾವಿಸಬಹುದು. ಈ ಕಾರಣ ಹೇಳಿ ನೀಲಮಣಿ ತಮ್ಮನ ಲಾಭದಲ್ಲಿ ಒಂದು ಪಾಲನ್ನು ಕೊಡಬೇಕೆಂದು ಕೇಳಿದ. ಅವನ ಕೇಳಿಕೆಯನ್ನು ತಮ್ಮ ತಿರಸ್ಕರಿಸಿದ ಎಂದೂ ಕಾಣುತ್ತದೆ.

ಈ ತಿರಸ್ಕಾರ ನೀಲಮಣಿಯ ಮನಸ್ಸಿನ ಮೇಲೆ ಎಷ್ಟೊಂದು ತೀವ್ರ ಪರಿಣಾಮ ಮಾಡಿತೆಂದರೆ ಅವನು ಹಿಂದೆ ತಾನು ಪ್ರತಿಷ್ಠಾಪಿಸಿದ್ದ ದೇವತಾ ವಿಗ್ರಹಗಳನ್ನು ಮಾತ್ರವೇ ತೆಗೆದುಕೊಂಡು ಕುಟುಂಬದ ಮನೆಯನ್ನೇ ಬಿಟ್ಟು ಹೊರಟುಹೋದ. ಈ ಮರ್ಯಾದಸ್ಥನ ಸಂಕಟದಿಂದ ಶ್ರೀಮಂತ ನೆರೆಯವನಾಗಿದ್ದ ವೈಷ್ಣವದಾಸ್ ಸೇಠ್ ತುಂಬಾ ಮರುಕವಾಯಿತು. ಠಾಕೂರರ ಮೂಲಗೃಹದಿಂದ ಆಗ್ನೇಯಕ್ಕೆ ಕೆಲವು ಫರ್ಲಾಂಗುಗಳ ದೂರದಲ್ಲಿ ಜೊರಸಾಂಕೊ ಪ್ರದೇಶದಲ್ಲಿದ್ದ ಸಾಕಷ್ಟು ದೊಡ್ಡ ಭೂಮಿಯನ್ನು ವೈಷ್ಣವದಾಸನು ಕೂಡಲೇ ನೀಲಮಣಿಗೆ

ಕೊಟ್ಟು ಬಿಟ್ಟನು.* ಈಗ ದ್ವಾರಕನಾಥ ಓಣಿಯಲ್ಲಿನ ಆರನೆ ನಂಬರಿನ ಮನೆ ಎಂದು ಪರಿಚಿತವಾಗಿರುವ ಕಟ್ಟಡ ಜೊರಸಾಂಕೊದಲ್ಲಿ ಸುಮಾರು 1784 ರಲ್ಲಿ ಠಾಕೂರರ ಕುಟುಂಬದ ಮನೆಯಾದದ್ದು ಹೀಗೆ.

ಲಾಭವನ್ನು ಹಂಚಿಕೊಳ್ಳುವ ವಿಷಯದಲ್ಲಿ ಅಣ್ಣತಮ್ಮಂದಿರಲ್ಲಾದ ವೈಮನಸ್ಯ ಇಬ್ಬರಿಗೂ ಸ್ನೇಹಿತರಾಗಿದ್ದ ವ್ಯಕ್ತಿಗಳ ಸದ್ಭಾವನೆಯ ಪ್ರಯತ್ನಗಳಿಂದ ಸ್ವಲ್ಪ ಕಾಲದ ನಂತರ ಪರಿಹಾರವಾಯಿತು ಇಂದು ಕಾಣುತ್ತದೆ. ನೀಲಮಣಿಯ ಎಲ್ಲ ಕೇಳಿಕೆಗಳನ್ನು ಸಂಪೂರ್ಣವಾಗಿ ತೀರ್ಮಾನ ಮಾಡಲು ದರ್ಪನಾರಾಯಣನು ಒಂದು ಲಕ್ಷ ರೂಪಾಯಿಗಳನ್ನು ಸಲ್ಲಿಸಿದ. ಅಲ್ಲಿಗೆ ಈ ವಿಷಯ ಅಂತಿಮವಾಗಿ ಮುಗಿಯಿತು ಎಂದು ಭಾವಿಸಲಾಯಿತು.**

ನೀಲಮಣಿ 1791 ರಲ್ಲಿ ಮರಣಹೊಂದಿದ. ಅವನಿಗೆ ಮೂವರು ಗಂಡು ಮಕ್ಕಳು-ರಾಮಲೋಚನ, ರಾಮಮಣಿ ಮತ್ತು ರಾಮವಲ್ಲಭ. ರಾಮಲೋಚನ ಮತ್ತು ರಾಮಮಣಿ ಅಕ್ಕತಂಗಿಯರನ್ನು ಮದುವೆಯಾದರು. ರಾಮಲೋಚನನ ಹೆಂಡತಿ ಮೇನಕಾ ದೇವಿ ಒಬ್ಬ ಮಗನನ್ನು ಹಡೆಯುವ ಭಾಗ್ಯ ಪಡೆದಿದ್ದಳು. ಮಗನಿಗೆ ರಾಧಾನಾಥ ಎಂದು ಹೆಸರಿಟ್ಟಿದ್ದರು. ಕೆಲವು ವರ್ಷಗಳ ನಂತರ, 1974 ರಲ್ಲಿ, ಅವಳಿಗೆ ಇನ್ನೊಂದು ಗಂಡು ಮಗು ಆಯಿತು; ಅದರ ಹೆಸರು ದ್ವಾರಕನಾಥ. ಅಕ್ಕ ಅಲಕಾ ದೇವಿಯು ಈ ಎರಡನೆಯ ಮಗುವನ್ನು ತಾನು ದತ್ತು ತೆಗೆದು ಕೊಳ್ಳಲು ಅವಕಾಶಕೊಡಬೇಕೆಂದು ಅಪೇಕ್ಷಿಸಿದಳು. ಅವಳ ತಂಗಿ ಮತ್ತು ಮೈದುನ ಕೂಡಲೇ ಒಪ್ಪಿದರು. ಅವರದು ಎರಡು ರೀತಿಗಳ ಬಾಂಧವ್ಯ. ಇಬ್ಬರೂ ಒಂದೇ ಸಂಸಾರದವರು. ಆದುದರಿಂದ ಇದು ಸುಲಭವಾಯಿತು. ದುರದೃಷ್ಟ ದಿಂದ ಎರಡನೆಯ ಮಗ ಹುಟ್ಟಿ ಒಂದು ವರ್ಷ ಕಳೆಯುವಷ್ಟರಲ್ಲಿ ಮೃತ್ಯುವಿನ ಕ್ರೂರಹಸ್ತ ಮೇನಕಾ ದೇವಿಯನ್ನು ಸೆಳೆದುಕೊಂಡು ಹೋಯಿತು. ಕಾನೂನು ಬದ್ಧವಾಗಿ ದತ್ತು ಕ್ರಮವನ್ನು ಸಂಪೂರ್ಣಗೊಳಿಸಲು ಅಗತ್ಯವಾದ ಕಾರ್ಯಕ್ರಮ ನಡೆಯುವುದು ಸಾಧ್ಯವಾಗಲಿಲ್ಲ.

ಕಾನೂನುಬದ್ಧವಾಗಿ ದತ್ತು ಕೊಡುವ ಪ್ರಶ್ನೆಯು ಐದು ವರ್ಷಗಳ ನಂತರ

---

* ಜೇಂಸ್ ಫ್ಯಾರೆಲ್, 'ದಿ ಟ್ಯಾಗೋರ್ ಫ್ಯಾಮಿಲಿ'

** ಭಾವಸಿಂಧು ದತ್ತ, 'ಮಹರ್ಷಿ ದೇವೇಂದ್ರನಾಥ ಟ್ಯಾಗೋರ್'

1799 ರಲ್ಲಿ ಮತ್ತೆ ಬಂದಿತು. ಆಕ್ಷೇಪಿಸಲು ತಂದೆಗೆ ಯಾವ ಕಾರಣವೂ ಕಾಣಲಿಲ್ಲ. ಕಾರ್ಯಕ್ರಮ ನಡೆಯಿತು. ದ್ವಾರಕನಾಥನ್ನು ಕಾನೂನಿನ ಪ್ರಕಾರವೇ ತನ್ನ ದೊಡ್ಡಪ್ಪ ರಾಮಲೋಚನನ ಮಗನ ಸ್ಥಾನವನ್ನು ಪಡೆದ. ಆದರೆ ಕಾನೂನಿನ ದೃಷ್ಟಿಯಿಂದ ಅಗತ್ಯವಾಗಿದ್ದ ಕಾರ್ಯಕ್ರಮ ನಡೆಯುವುದಕ್ಕೆ ಎಷ್ಟೋ ಮೊದಲು ದೊಡ್ಡಮ್ಮ ಅಲಕಾ ದೇವಿಯು ಮಗನನ್ನು ಹೆತ್ತ ತಾಯಿಯ ಸ್ಥಾನ ವನ್ನು ತುಂಬುವ ಅಧಿಕಾರವನ್ನು ತನ್ನ ಯೋಗ್ಯತೆಯಿಂದಲೇ ಸಂಪಾದಿಸಿದ್ದಳು. ಅವನಿನ್ನೂ ಕಂಕುಳ ಮಗುವಾಗಿದ್ದಾಗಲೇ ಅವನ ಹೊಣೆಯನ್ನು ವಹಿಸಿಕೊಂಡು ಹೆತ್ತ ತಾಯಿಯಿಂದ ಅವನಿಗೆ ದೊರಕುತ್ತಿದ್ದಷ್ಟೆ ಎಚ್ಚರಿಕೆಯಿಂದ ಬೆಳೆಸಿದಳು.

1807 ರಲ್ಲಿ ರಾಮಲೋಚನ ತೀರಿಕೊಂಡಾಗ ದ್ವಾರಕಾನಾಥ ಹದಿಮೂರ ನೆಯ ವರ್ಷಕ್ಕೆ ಕಾಲಿಟ್ಟಿದ್ದ.

ತಮ್ಮ ಕುಟುಂಬದ ಚರಿತ್ರೆಯಲ್ಲಿ ಮಾತ್ರವಲ್ಲ, ದೇಶದ ಚರಿತ್ರೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುವುದು ದ್ವಾರಕನಾಥರ ಭಾಗ್ಯವಾಗಲಿತ್ತು. ವಾಸ್ತವ ವಾಗಿ, ಪಾಶ್ಚಾತ್ಯ ಸಂಸ್ಕೃತಿಯ ಪ್ರಬಲ ಪ್ರಭಾವಕ್ಕೆ ಸಿಕ್ಕಿದ ಕೆಲವರು ಪ್ರಮುಖ ರಲ್ಲಿ ಅವರೂ ಒಬ್ಬರು. ಇನ್ನೊಬ್ಬ ಮಹಾನುಭಾವ ರಾಮಮೋಹನ ರಾಯ್. ಇಬ್ಬರಿಗೂ ವಯಸ್ಸಿನಲ್ಲಿ ಇಪ್ಪತ್ತು ವರ್ಷಗಳಿಗೂ ಮೀರಿದ ಅಂತರವಿದ್ದರೂ ತಮ್ಮ ಸ್ವಭಾವಗಳಲ್ಲಿನ ಸಾಮ್ಯದಿಂದ ಅವರು ಪರಸ್ಪರ ಆಕರ್ಷಿತರಾದರು. ಇಬ್ಬರದೂ ಸಮರ್ಥ ವ್ಯಕ್ತಿತ್ವ. ಇಬ್ಬರದೂ ಉದಾರ ಮನೋಭಾವದ ದೃಷ್ಟಿ, ಇಬ್ಬರ ಹೃದಯಗಳಲ್ಲಿಯೂ ನಿಷ್ಠ ರಾಷ್ಟ್ರೀಯತೆ ಮನೆ ಮಾಡಿತ್ತು. ದೇಶದ ದುಃಸ್ಥಿತಿ ಯನ್ನೂ ಉತ್ತಮಪಡಿಸುವ ಪ್ರಯತ್ನಗಳಲ್ಲಿ ದ್ವಾರಕಾನಾಥರು ರಾಮಮೋಹನರ ಕಿರಿಯ ಪಾಲುದಾರನಂತೆ ದುಡಿದಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

ದ್ವಾರಕನಾಥರು ಚಿಕ್ಕ ವಯಸ್ಸಿನಲ್ಲಿ ಬ್ರಿಟಿಷರೊಂದಿಗೆ ನಿಕಟ ಸಂಪರ್ಕ ಬೆಳೆಸಲು ತಾವಾಗಿಯೇ ತೀರ್ಮಾನಿಸಿದ್ದಂತೆ ಕಾಣುತ್ತದೆ. ಪ್ರಗತಿಪರ ವಿಚಾರ ಗಳಿಂದ ಪ್ರೇರಿತರಾದ ಅವರು, ಆ ಜನತೆ ಪ್ರತಿನಿಧಿಸುತ್ತಿದ್ದ ಸಂಸ್ಕೃತಿಯಲ್ಲಿ ತನ್ನ ಜನತೆಯನ್ನು ಮೇಲೆತ್ತಬಲ್ಲ ಅಂಶಗಳೂ ಇವೆ ಎನ್ನುವುದನ್ನೂ ಗುರುತಿಸದೆ ಇರಲಿಲ್ಲ. ಈ ಮೆಚ್ಚಿಕೆ ಸಹಜವಾಗಿ ಅವರನ್ನು ಬ್ರಿಟಿಷರತ್ತ ಸೆಳೆಯಿತು. ಅವರೊಡನೆ ನಿಕಟ ಸಂಪರ್ಕ ಬೆಳೆಸುವುದು ಸಾಧ್ಯವಾಗುವಂತೆ ಅವರ ಭಾಷೆಯ ಮೇಲೆ ಪ್ರಭುತ್ವ

ಪಡೆಯಲು ಅವರು ನಿರ್ಧರಿಸಿದರು. ಇಂತಹದೇ ಅಭಿಪ್ರಾಯಗಳನ್ನು ಹೊಂದಿದ್ದು ತಾವೇ ಸ್ವಂತ ಶ್ರಮದಿಂದ ಇಂಗ್ಲೀಷ್ ಭಾಷೆಯನ್ನು ಕರಗತ ಮಾಡಿಕೊಂಡ ರಾಮಮೋಹನರಾಯರ ಮೇಲ್ಪಂಕ್ತಿಯನ್ನು ದ್ವಾರಕನಾಥರು ಅನುಸರಿಸಿದರು. ಆ ಕಾಲದ ರೂಢಿಯಂತೆ ಅರಾಬಿಕ್ ಮತ್ತು ಪರ್ಷಿಯನ್ ಭಾಷೆಗಳನ್ನು ಅಧ್ಯಯನ ಮಾಡಿ, ಅವರು ಇಂಗ್ಲೀಷನ್ನು ಕರತಲಾಮಲಕ ಮಾಡಿಕೊಳ್ಳುವ ಕೆಲಸವನ್ನು ಶ್ರದ್ಧೆಯಿಂದ ಪ್ರಾರಂಭಿಸಿದರು. ಜೊರಸಾಂಕೊದಲ್ಲಿ ಷೆರ್‌ಬೊರ್ನ್‌ರಶಾಲೆ ಇತ್ತು.ಅವರು ಆ ಶಾಲೆಯನ್ನು ಸೇರಿಕೊಂಡರು. ಅಲ್ಲಿನ ಅಭ್ಯಾಸವು ಮುಗಿದ ನಂತರ ಜೆ.ಎಸ್. ಗೋರ್ಡನ್ ಮತ್ತು ಜೇಮ್ಸ್ ಕಾಲ್ಡರ್‌ರಂತಹ ಖಾಸಗಿ ಉಪಾಧ್ಯಾಯರಿಂದ ಪಾಠ ಹೇಳಿಸಿಕೊಂಡರು. ತಮ್ಮ ಇಂಗ್ಲೀಷ್ ಜ್ಞಾನವನ್ನು ಇನ್ನೂ ಹೆಚ್ಚಿಸಿಕೊಳ್ಳಲು ರಾಮಮೋಹನರ ಆಪ್ತಸ್ನೇಹಿತ, ಬ್ಯಾಪ್ಟಿಸ್ಟ್ ಮಿಷನಿನ ವಿಲಿಯಂ ಆಡಮ್ಸ್ ನಿಂದಲೂ ಪಾಠ ಹೇಳಿಸಿಕೊಂಡರು.

ಇಂಗ್ಲೀಷ್‌ಭಾಷೆಯ ಮೇಲೆ ಪ್ರಭುತ್ವ ಪಡೆದುಕೊಂಡನಂತರ ಅವರು ಇಪ್ಪತ್ತು ನಾಲ್ಕು ಪರಗಣಗಳ ಶಿರಸ್ತೆದಾರರಾಗಿ ಮೊದಲ ಬಾರಿಗೆ ನೌಕರಿಗೆ ಸೇರಿದರು. ಅವರ ಕರ್ತವ್ಯ ನಿರ್ವಹಣೆಯ ದಕ್ಷತೆ ಮೇಲಧಿಕಾರಿಗಳನ್ನು ಎಷ್ಟು ಮೆಚ್ಚಿಸಿತು ಎಂದರೆ, ಅವರ ಸಾಮರ್ಥ್ಯದ ಬಳಕೆಗೆ ಇನ್ನೂ ಹೆಚ್ಚಿನ ಅವಕಾಶ ನೀಡಲು ಅವರಿಗೆ ಬೇಗನೆ ಬಡ್ತಿ ಕೊಡಲು ಅವರು ತೀರ್ಮಾನಿಸಿದರು. ಹೀಗೆ ಅವರನ್ನು ಉಪ್ಪಿನ ಮಂಡಳಿಯ ದಿವಾನನ ಸ್ಥಾನಕ್ಕೇರಿಸಿದರು. ಅವರ ಕಾರ್ಯ ಪ್ರಚೋದಕ ಶಕ್ತಿ. ದಕ್ಷತೆ ಮತ್ತು ಪ್ರಾಮಾಣಿಕತೆಗಳಿಂದ ಬಹು ಬೇಗನೆ ಮತ್ತೊಂದು ಬಡ್ತಿ ದಕ್ಕಿತು. ಅದೇ ವರ್ಷ ಅವರನ್ನು ಕಂದಾಯ, ಉಪ್ಪು ಮತ್ತು ಅಫೀಮು ಮಂಡಳಿಯ ದಿವಾನನನ್ನಾಗಿ ನೇಮಿಸಿದರು.

ಆದರೆ ಅವರಂತಹ ದಕ್ಷತೆ ಮತ್ತು ಆಕಾಂಕ್ಷೆಗಳಿಂದಿದ್ದ ಮನುಷ್ಯನ ಸಾಮರ್ಥ್ಯದ ಬಳಕೆಗೆ ಅಧಿಕಾರದ ನಿರ್ಬಂಧಗಳ ದೆಸೆಯಿಂದ ಸಾಕಷ್ಟು ಸ್ವಾತಂತ್ರ್ಯ ದೊರಕುವಂತಿರಲಿಲ್ಲ. ಆಡಳಿತಗಾರನಾಗಿ ಅವರು ತಮ್ಮ ದಕ್ಷತೆಯನ್ನು ತೋರಿಸಿಕೊಟ್ಟಿದ್ದರು. ಆದರೆ ವ್ಯಾಪಾರ ಮತ್ತುವಾಣಿಜ್ಯಗಳು ತಮ್ಮಕೌಶಲ್ಯವನ್ನು ಪರೀಕ್ಷಿಸುವುದು ಅವರ ಬಾಳಿನ ಹಿರಿಯ ಆಕಾಂಕ್ಷೆಗಳಲ್ಲಿ ಒಂದಾಗಿತ್ತು. ಇದಕ್ಕೆ ಅವರಿಗೆ ಸಾಕಷ್ಟು ಅವಕಾಶ ದೊರೆತಿರಲಿಲ್ಲ. ಕೈಗಾರಿಕಾ ಕ್ರಾಂತಿಯು ನೇರವಾದ ಪರಿಣಾಮವಾಗಿ ವಾಣಿಜ್ಯ ವೇಗವಾಗಿ ವಿಚಾರಗೊಳ್ಳುತ್ತಿದ್ದುದರಿಂದ ಕಲ್ಕತ್ತೆಯಲ್ಲಿ ಬ್ಯಾಂಕಿಂಗ್ ಸೌಲಭ್ಯಗಳ

ಬೇಡಿಕೆ ಬೆಳೆಯುತ್ತಿತ್ತು. ಈ ಅಗತ್ಯದ ಪೂರೈಕೆಗಾಗಿ 1806 ರಲ್ಲಿ ಕಲ್ಕತ್ತೆಯಲ್ಲಿ 'ಬಂಗಾಳ ಬ್ಯಾಂಕ್'ನ ಸ್ಥಾಪನೆ ಆಯಿತು. ಆದರೆ ಬ್ಯಾಂಕಿಂಗ್ ವ್ಯವಹಾರಕ್ಕೆ ಇನ್ನೂ ಅವಕಾಶವಿತ್ತು. ಆದುದರಿಂದ ದೇವೇಂದ್ರನಾಥರು 1839 ರಲ್ಲಿ, ಇನ್ನೂ ನೌಕರಿಯಲ್ಲೇ ಇದ್ದಾಗಲೇ ಹದಿನಾಲ್ಕು ಲಕ್ಷ ರೂಪಾಯಿಗಳ ಬಂಡವಾಳ ಹೊಂದಿದ ತಮ್ಮ ಬ್ಯಾಂಕನ್ನು 'ಯೂನಿಯನ್ ಬ್ಯಾಂಕ್' ಎಂಬ ಹೆಸರಿನಿಂದ ಸ್ಥಾಪಿಸಿದರು. ಅದರ ನಿರ್ವಹಣೆಯಲ್ಲಿ ಎಷ್ಟು ದಕ್ಷತೆ ಇತ್ತೆಂದರೆ 1839 ರ ಹೊತ್ತಿಗೆ ಅದರ ಬಂಡವಾಳ ಒಂದು ಕೋಟಿ ರೂಪಾಯಿಗಳನ್ನು ಮೀರಿತ್ತು.

ನೌಕರಿಯಲ್ಲಿದ್ದಾಗಲೇ ಅವರು ಈಸ್ಟ್ ಇಂಡಿಯಾ ಕಂಪೆನಿಯ ಹಿತಾಸಕ್ತಿಗಳ ಮೇಲೆ ನೇರ ಪ್ರಭಾವ ಬೀರುವ ವಿಷಯವೊಂದರಲ್ಲಿ ಆಸಕ್ತಿ ಬೆಳೆಸಿಕೊಂಡರು. ಬ್ರಿಟಿಷ್ ಸಂಸತ್ತು ನೀಡಿದ್ದ ಸನ್ನದೊಂದರ ಪ್ರಕಾರ ಈಸ್ಟ್ ಇಂಡಿಯಾ ಕಂಪೆನಿಗೆ ಭಾರತದಲ್ಲಿ ವ್ಯಾಪಾರದ ಏಕಸ್ವಾಮ್ಯತೆ ಲಭ್ಯವಾಗಿತ್ತು, ಸನ್ನದನ್ನು ಪ್ರತಿ ಇಪ್ಪತ್ತು ವರ್ಷಕ್ಕೊಮ್ಮೆ ನವೀಕರಿಸಬೇಕಾಗಿತ್ತು. ಈ ಮಧ್ಯೆ ಸ್ವತಂತ್ರ ವ್ಯಾಪಾರಗಾರರ ಬೆಳೆಯುತ್ತಿದ್ದ ಸಮೂಹ ಕಂಪೆನಿಗೆ ಪ್ರತಿಸ್ಪರ್ಧಿಯಾಗಿ ಕಾಣಿಸಿಕೊಂಡಿತ್ತು ಮತ್ತು ಕಂಪೆನಿಯ ಏಕಸ್ವಾಮ್ಯದ ಹಕ್ಕುಗಳನ್ನು ಕೊನೆಗಾಣಿಸಬೇಕೆಂದು ಬಲವಾಗಿ ತಗಾದೆ ಮಾಡುತ್ತಿತ್ತು. ಇದರ ಪರಿಣಾಮವಾಗಿ, 1813 ರಲ್ಲಿ ಸನ್ನದನ್ನು ನವೀಕರಿಸಿದಾಗ ಅದರ ಏಕಸ್ವಾಮ್ಯ ಹಕ್ಕುಗಳನ್ನು ತೆಗೆದುಹಾಕಲಾಯಿತು. ಸನ್ನದನ್ನು ಮತ್ತೆ ನವೀಕರಿಸುವ ಸಮಯ ಸಮೀಪಿಸಿದಂತೆ ಕಂಪೆನಿಯ ವ್ಯಾಪಾರದ ಹಕ್ಕುಗಳನ್ನು ಸಂಪೂರ್ಣವಾಗಿ ತೆಗೆದುಹಾಕಬೇಕೆಂಬ ಚಳುವಳಿ ಬಲವಾಯಿತು. ಸುಮಾರು 1829 ರಲ್ಲಿ, ಅದು ಎಷ್ಟು ಪ್ರಬಲವಾಗಿತ್ತೆಂದರೆ ಈ ವಿಷಯವಾಗಿ ಇಂಗ್ಲೆಂಡಿನಲ್ಲಿಯೂ ಕಲ್ಕತ್ತೆಯಲ್ಲಿಯೂ ಉಗ್ರ ವಿವಾದ ನಡೆಯುತ್ತಿತ್ತು.

ದ್ವಾರಕನಾಥರು ಈ ವಿವಾದದಲ್ಲಿ ಭಾಗಿಯಾಗಿದ್ದುದು ಕಾಣಬರುತ್ತದೆ. ವ್ಯಾಪಾರ ಮುಕ್ತವಾಗಿರಬೇಕು, ಕಂಪೆನಿಯ ವ್ಯಾಪಾರದ ಹಕ್ಕುಗಳನ್ನು ರದ್ದುಗೊಳಿಸಬೇಕು ಎಂಬುದು ಅವರ ಅಭಿಪ್ರಾಯ. ಈ ವಿಷಯದ ಚರ್ಚೆಗಾಗಿ 1829 ರ ಡಿಸೆಂಬರ್ 15 ರಂದು ಕಲ್ಕತ್ತೆಯ ಪುರಭವನದಲ್ಲಿ ಒಂದು ಸಾರ್ವಜನಿಕ ಸಭೆ ನಡೆಯಿತು. ಅಲ್ಲಿ ದ್ವಾರಕನಾಥರು ಕಂಪೆನಿಯ ವ್ಯಾಪಾರದ ಹಕ್ಕುಗಳನ್ನು ರದ್ದು ಮಾಡುವ ಕೇಳಿಕೆಯ ನಿರ್ಣಯವನ್ನು ಮಂಡಿಸಿದರು. ಬ್ರಿಟಿಷ್ ಸರ್ಕಾರವು

ಸಾರ್ವಜನಿಕ ಒತ್ತಾಯಕ್ಕೆ ಮಣಿಯಿತು. 1833 ರಲ್ಲಿ ಸನ್ನದನ್ನು ನವೀಕರಿಸಲು ನಿರಾಕರಿಸಿ ಕಂಪೆನಿಯ ವ್ಯಾಪಾರದ ಹಕ್ಕುಗಳನ್ನು ರದ್ದುಗೊಳಿಸಿತು.

ವ್ಯಾಪಾರ ವಾಣಿಜ್ಯಗಳ ಕ್ಷೇತ್ರದಲ್ಲಿ ತಮ್ಮ ಅದೃಷ್ಟವನ್ನು ಪರೀಕ್ಷಿಸಲು ದ್ವಾರಕನಾಥರಿಗೆ ಇದೇ ಅವಕಾಶ. ಇವರ ಸದುಪಯೋಗ ಪಡೆಯಲು ಅವರು ಹಿಂದು ಮುಂದೆ ನೋಡಲಿಲ್ಲ. 1834 ರ ಆಗಸ್ಟ್ 1 ರಂದು ಕಂದಾಯ, ಉಪ್ಪು, ಮತ್ತು ಅಫೀಮು ಮಂಡಳಿಯ ದಿವಾನ್ ಪದವಿಗೆ ರಾಜೀನಾಮೆ ನೀಡಿದರು. ಅವರು ರಾಜಿನಾಮೆ ಕೊಟ್ಟ ಉತ್ಸಾಹದಲ್ಲಿಯೇ ಮಂಡಳಿಯೂ ಅದನ್ನು ಅಂಗೀಕರಿಸಿತು. ದ್ವಾರಕನಾಥರ ಸಾಮರ್ಥ್ಯಗಳ ಬಳಕೆಗೆ ಸರ್ಕಾರದ ಹೊರಗಡೆ ಹೆಚ್ಚು ಅವಕಾಶ ಉಂಟೆಂಬುದನ್ನು ಮಂಡಳಿ ಗುರುತಿಸಿತು. ಮಂಡಳಿಯ ಕಾರ್ಯದರ್ಶಿ ಹೆನ್ರಿ ಮೆರೆಡಿತ್ ಪಾರ್ಕರನು ರಾಜೀನಾಮೆಯನ್ನು ಅಂಗೀಕರಿಸಿ ಬರೆದ ಪತ್ರದಲ್ಲಿ ಈ ಭಾವನೆಗಳನ್ನು ವ್ಯಕ್ತಪಡಿಸುವ ಭಾಗಗಳಲ್ಲದೆ ದ್ವಾರಕನಾಥರ ಗುಣಗಳನ್ನು ಮೆಚ್ಚಿಕೊಂಡ ಭಾಗಗಳೂ ಇದ್ದವು. ಇದಕ್ಕೆ ಸಂಬಂಧಿಸಿದ ಭಾಗವನ್ನು ಕೆಳಗೆ ಉದ್ಧರಿಸಿದೆ:

"ನಿಮ್ಮ ಯೋಗ್ಯತೆ ಮತ್ತು ಪ್ರಾಮಾಣಿಕತೆಗಳನ್ನು ಕುರಿತು ಮಂಡಳಿಗಿರುವ ಮಹತ್ತರ ಅರಿವು ಮತ್ತು ಈ ಕಚೇರಿಯೊಂದಿಗೆ ನಿಮ್ಮ ಸಂಬಂಧದಿಂದ ಸಾರ್ವಜನಿಕ ಹಿತಗಳಿಗೆ ಆಗಿರುವ ಪ್ರಯೋಜನ ಇವು ಮಂಡಳಿಯ ಕಾರ್ಯಕಲಾಪಗಳಲ್ಲಿ ದಾಖಲೆಯಾಗಿರುವುದರಿಂದ, ನಿಮ್ಮ ಹಿಂದಿನ ಸೇವೆಗೆ ಮಂಡಳಿಯ ಹಾರ್ದಿಕ ಮೆಚ್ಚುಗೆ ಇದೆ ಎನ್ನುವುದಕ್ಕಿಂತ ಹೆಚ್ಚಾಗಿ ಏನನ್ನೂ ಈಗ ಹೇಳುವ ಅಗತ್ಯವಿಲ್ಲ."

ಇದರ ನಂತರ ಇದೇ ಅಧಿಕಾರಿಯಿಂದ ಒಂದು ವೈಯಕ್ತಿಕ ಪತ್ರ ಬಂದಿತು. ಅಧಿಕಾರಿಗೆ ದ್ವಾರಕನಾಥರಲ್ಲಿ ವಿಶೇಷ ಆದರ ಬೆಳೆದು ಬಂದಿತ್ತು. ಈ ಪತ್ರದಲ್ಲಿ ದ್ವಾರಕನಾಥರ ಹಲವು ಗುಣಗಳನ್ನು ಕುರಿತು ಅತನ ಮೆಚ್ಚಿಕೆ ಇನ್ನೂ ಹೆಚ್ಚಿನ ವಾಕ್ಸಂಪತ್ತಿನಿಂದ ವ್ಯಕ್ತವಾಗಿತ್ತು. ಅದರಲ್ಲಿ ಹೀಗಿದೆ: "ನನ್ನ ಪ್ರೀತಿಯ ದ್ವಾರಕನಾಥ್, ನಿಮ್ಮ ದೇಶಬಾಂಧವರಿಗೆ ಗೌರವ ಮತ್ತು ಪ್ರಾಮಾಣಿಕತೆಗಳ ಆದರ್ಶವಾಗಿ ಮುಂದುವರಿಯಿರಿ. ಜನ ಒಳೆಯ ಮಾತನ್ನಾಡಲಿ ಕೆಟ್ಟಮಾತನ್ನಾಡಲಿ ಸತ್ಯನಿಷ್ಠರಾಗಿಯೇ ಮುನ್ನಡೆಯಿರಿ. ನಿಮ್ಮ ಆತ್ಮಸಾಕ್ಷಿಯ ಒಪ್ಪಿಗೆಗೇ ಮಹತ್ವ ನೀಡಿ, ನಿಜವಾದ ಜ್ಞಾನ ಮತ್ತು ಬೌದ್ಧಿಕ ನಾಗರಿಕತೆಯ ಮಾರ್ಗದಲ್ಲಿ ಮುಂದಕ್ಕೆ ಸಾಗಿರಿ."

ದ್ವಾರಕನಾಥರು ತಮ್ಮ ಬಾಳಿನ ಹೊಸ ಅಧ್ಯಾಯುವನ್ನು ತಮ್ಮ ಎಂದಿನ ಕಾರ್ಯ ಪ್ರಚೋದಕ ಶಕ್ತಿ ಮತ್ತು ಕಲ್ಪನೆಗಳೊಡನೆಯೇ ಪ್ರಾರಂಭಿಸಿದರು. ವಿಲಿಯಂ ಕಾರ್ ಎಂಬಬ್ರಿಟಿಷ್‌ವರ್ತಕನನ್ನು ತಮ್ಮೊಡನೆಪಾಲುದಾರನನ್ನಾಗಿ ತೆಗೆದುಕೊಂಡು'ಕಾರ್, ಟ್ಯಾಗೋರ್ ಅಂಡ್ ಕಂಪೆನಿ' ಎಂಬ ಹೆಸರಿನ ಕಂಪೆನಿಯನ್ನು ಪ್ರಾರಂಭಿಸಿದರು. ಅವರ ಎಚ್ಚರಿಕೆಯ ನಿರ್ವಹಣೆಯಿಂದ ಅದು ನಿರೀಕ್ಷಣೆಯನ್ನು ಮೀರಿ ವರ್ಧಿಸಿತು. ಬಂಗಾಳದಲ್ಲೆಲ್ಲ ಶಾಖೆಗಳನ್ನು ತೆರೆಯಿತು. ನೀಲಿ ಮತ್ತು ಸಕ್ಕರೆಗಳ ವ್ಯವಹಾರ, ಜಮೀನಿನ ಆಸ್ತಿಯ ನಿರ್ವಹಣೆ ಇವೂ ಸೇರಿದಂತೆ ಸಾಧ್ಯವಾದ ಎಲ್ಲ ವ್ಯವಹಾರ ಗಳಲ್ಲಿ ಅದು ತೊಡಗಿತು. ಅವರ ಧೈರ್ಯ ಮತ್ತು ಕಲ್ಪನಾ ಶಕ್ತಿಗಳಿಂದ ಕಂಪೆನಿಗೆ ಬೇರೆ ಬಗೆಗಳಲ್ಲಿಯೂ ಘನತೆ ಲಭಿಸಿತು. ಪಾಶ್ಚಾತ್ಯ ಜಗತ್ತಿನಲ್ಲಿ ರೂಪಿಸಿದ ತಂತ್ರಜ್ಞಾನವನ್ನು ನಮ್ಮ ದೇಶದಲ್ಲಿ ಮೊಟ್ಟ ಮೊದಲು ಬಾರಿಗೆ ಬಳಸಿದ ಹಲವು ಆಗ್ರಗಾಮಿಗಳ ಪ್ರಯತ್ನಗಳನ್ನು ಅವರುಕೈಗೊಂಡರು. ಆವಿಯಿಂದಶಕ್ತಿ ಪಡೆಯುವ ಸೆಳೆ ದೋಣಿಗಳ ನೆರನಿಂದ ಸರಕನ್ನು ಕೊಂಡೊಯ್ಯುವ ದೋಣಿಗಳನ್ನು ಎಳೆಯುವ ವ್ಯವಹಾರವನ್ನು 1837 ರಲ್ಲಿ ಪ್ರಾರಂಭಿಸಿದರು. ಈ ಸೆಳೆ ದೋಣಿಗಳಿಗೆ ಕಲ್ಲಿದ್ದ ಲನ್ನು ಒದಗಿಸಲು, ಕಲ್ಲಿದ್ದಲನ್ನು ಗಣಿಯಿಂದ ಹೊರತೆಗೆಯಲು ರಾಣೀಗಂಜ್ ಪ್ರದೇಶದಲ್ಲಿ ಬಂಗಾಳ ಕಲ್ಲಿದ್ದಲು ಕಂಪೆನಿಯನ್ನು ಪ್ರಾರಂಭಿಸಿದರು. ಇದೊಂದು ಹೊಸ ಪ್ರಯತ್ನ. ಇಂತಹ ಪ್ರಯತ್ನ ಭಾರತದಲ್ಲಿ ಇದೇ ಮೊದಲನೆಯದು. ಸೆಳೆ ದೋಣಿಗಳ ದುರಸ್ತಿಗಾಗಿ, ಹಡಗುಗಳ ದುರಸ್ತಿಗಾಗಿ ಸೌಲಭ್ಯಗಳನ್ನು ಒದಗಿ ಸುತ್ತಿದ್ದ ಕಿಡ್ಡರ್‌ಪುರದಲ್ಲಿ ಒಂದು ಹಡಗು ಕಟ್ಟೆಯನ್ನು ಪ್ರಾರಂಭಿಸಿದರು.

ಕಾರ್, ಟ್ಯಾಗೋರ್ ಕಂಪೆನಿಯ ನಿರ್ವಹಣೆ ಎಷ್ಟು ಕೌಶಲ್ಯ ಮತ್ತು ದಕ್ಷತೆಯಿಂದ ಮುಂದುವರೆಯಿತೆಂದರೆ ಸ್ವಲ್ಪ ಕಾಲದಲ್ಲಿಯೇ ಅದು ಕಲ್ಕತ್ತದ ಪ್ರಮುಖ ಕಂಪೆನಿಗಳಲ್ಲಿ ಒಂದೆಂದು ಖ್ಯಾತಿಯನ್ನು ಪಡೆಯಿತು. ಅದು ಸಮೃದ್ಧ ವಾಗಿ ಲಾಭವನ್ನು ಗಳಿಸಿತು. ದ್ವಾರಕನಾಥರು ಬಹು ಶ್ರೀಮಂತರಾದರು.ಹಣವನ್ನು ಗಳಿಸುವುದು ಹೇಗೆ ಎಂದು ತಿಳಿದಿದ್ದಂತೆಯೇ ದ್ವಾರಕನಾಥರು ಅದನ್ನು ಖರ್ಚು ಮಾಡುವುದುಹೇಗೆ ಎಂದೂಬಲ್ಲವರಾಗಿದ್ದರು. ಅನುಕಂಪದ ಹೃದಯ, ಸುಖಪಡುವ ತೀವ್ರಬಯಕೆ ಎರಡನ್ನೂ ಪಡೆದಿದ್ದ ಅವರುರಾಜನಂತೆ ಹಣವನ್ನು ವೆಚ್ಚಮಾಡಿದರು. ಅವರ ವೆಚ್ಚದಲ್ಲಿ ಬಹು ಭಾಗ ದಾನ ಧರ್ಮಗಳಿಗಾಗಿ ಆಗುತ್ತಿದ್ದರೆ ಗಣನೀಯ

ಭಾಗ ಸಾಮಾಜಿಕ ಕಾರ್ಯಕ್ರಮಗಳತ್ತ ಹರಿಯುತ್ತಿತ್ತು. ಯುರೋಪಿಯನ್ನರ ಸಮುದಾಯದೊಂದಿಗೆ ನಿಕಟವಾದ ಸಾಮಾಜಿಕ ಬಾಂಧವ್ಯ ಇರುವುದು ಅಗತ್ಯ ಎಂದು ನಂಬಿದ್ದ ಅವರು ರಾಜಾಂತಸ್ತಿನ ವೈಭವದ ಸಂತೋಷ ಕೂಟಗಳನ್ನು ವ್ಯವಸ್ಥೆ ಮಾಡುತ್ತಿದ್ದರು. ಇದಕ್ಕಾಗಿ ಅವರು ಬೆಲಗಾಚಿಯದಲ್ಲಿ ಒಂದು ಸಣ್ಣ ತೋಟದಮನೆಯನ್ನು ಕಟ್ಟಿಸಿದ್ದರು. ಅಲ್ಲಿಅವರು ತಮ್ಮ ಯುರೋಪಿಯನ್ ಗೆಳೆಯರಿಗಾಗಿ ಏರ್ಪಡಿಸಿದ ಸಂತೋಷ ಕೂಟಗಳಿಗೆ ಸಮಾಜದ ಅತ್ಯಂತ ಪ್ರತಿಷ್ಠಿತರು ಆಕರ್ಷಿತರಾಗುತ್ತಿದ್ದರು, ಅವರಲ್ಲಿ ಹಿರಿಯ ಅಧಿಕಾರಿಗಳೂ ಗವರ್ನರರ ಸಮೀಪದ ಬಂಧುಗಳೂ ಇರುತ್ತಿದ್ದರು. ಅವರ ಸಂತೋಷ ಕೂಟಗಳು ಕಲ್ಕತ್ತದ ಪ್ರಮುಖ ಸಾಮಾಜಿಕ ಆಗು ಹೋಗುಗಳಿಗೆ ಸೇರಿದುವು ಎಂದು ಜನ ಗುರುತಿಸುವಂತಾಯಿತು, ಮತ್ತು ಆ ಕಾಲದಲ್ಲಿ ಅದಕ್ಕೆ ಪತ್ರಿಕೆಗಳಲ್ಲಿ ಶೀರ್ಷಿಕೆಗಳ ಮೇಲ್ಪಂಕ್ತಿಯ ಗೌರವ ದೊರೆಯುತ್ತಿತ್ತು.

ಇಂತಹ ವರದಿಗಳಲ್ಲಿ, ಎಲ್ಲರನ್ನೂ ಆಹ್ವಾನಿಸಿದ ಗೃಹಸ್ಥರಾಗಿ ದಾರಕನಾಥರ ಪಾತ್ರವನ್ನು ಸೊಗಸಾಗಿ ನಿರೂಪಿಸುವ ಒಂದು ವರದಿಯನ್ನು ಉಲ್ಲೇಖಿಸಿದರೆ ಸ್ವಾರಸ್ಯವಾಗಿರಬಹುದು. 1841ರ ಫೆಬ್ರವರಿ 26ರ 'ಕಲ್ಕತ್ತ ಕುರಿಯರ್'ನ ಸಂಚಿಕೆ ದ್ವಾರಕನಾಥರ ಸಂತೋಷ ಕೂಟವನ್ನು ಕುರಿತು ಈ ವರದಿ ನೀಡಿತು :

"ನಿನ್ನೆ ರಾತ್ರಿ ದ್ವಾರಕನಾಥ ಠಾಕೂರರ ಮನೆಯಲ್ಲಿನ ಕೂಟಕ್ಕೆ ಅಪೂರ್ವ ಉಜ್ವಲತೆ ಇತ್ತು. ಕೂಟಕ್ಕೆ ಆನರಬಲ್ ಮಿಸ್ ಈಡನ್, ಸರ್ ಇ ರಿಯಾನ್ ಮತ್ತು ಕಲ್ಕತ್ತೆಯ ಸಮಾಜದ ಪ್ರಮುಖರಲ್ಲಿ ಬಹು ಮಂದಿ ಬಂದಿದ್ದರು. (ಬಹು ಒಳ್ಳೆಯ ಅಭಿರುಚಿಯಿಂದ ಅಲಂಕರಿಸಲಾಗಿದ್ದ) ಮನೆ ಮತ್ತು ಉದ್ಯಾನಗಳು ಪ್ರಕಾಶಮಾನವಾಗಿ ದೀಪಗಳಿಂದ ಬೆಳಗುತ್ತಿದ್ದವು. ಈವರೆಗೆ ಇಂಡಿಯಾದಲ್ಲಿ ಕಂಡೇ ಇರದಂತಹ ಬಾಣಬಿರುಸುಗಳು, ಮನೆಯ ಯಜಮಾನರು ಎಂದಿನಂತೆ ಎಲ್ಲರೊಡನೆ ತುಂಬ ಸೌಜನ್ಯದಿಂದ ನಡೆದುಕೊಂಡು ಎಲ್ಲರ ಸೌಕರ್ಯಗಳಿಗೆ ವಿಶೇಷ ಗಮನ ಕೊಡುತ್ತಿದ್ದರು. ಅತಿಥಿಗಳು ಎಷ್ಟು ಸಂತೋಷದಿಂದಿದ್ದರೆಂಬುದನ್ನು ಅವರೆಲ್ಲ ಎಷ್ಟು ತಡವಾಗುವವರೆಗೆ ಅಲ್ಲೇ ಇದ್ದರು ಎನ್ನುವುದು ತೋರಿಸುತ್ತದೆ."

ಅವರ ಜೀವನದ ವೈಭವ ಮತ್ತು ಬಿಡುಗೈಯ ಔದಾರ್ಯ ಅವರಿಗೆ 'ರಾಜ' ಎನ್ನುವ ಹೆಸರನ್ನು ತಂದು ಕೊಟ್ಟಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಜನರ ಸಮ್ಮತಿಯಿಂದ ಅವರು ರಾಜರಾದರು. ಆದರೆ ಇದು ಅವರ ಹಿರಿಮೆಯ ಬಹುಮುಖೀ ಶ್ರೀತ್

ಭಾಗ ಅಷ್ಟು ಅವರ ಪ್ರಗತಿಪರ ವಿಚಾರಗಳು, ತೀವ್ರವಾದ ಸ್ವಾತಂತ್ರ್ಯ ಪ್ರೇಮ ಮತ್ತು ಹೃದಯ ವೈಶಾಲ್ಯ ಅವರಿಗೆ ಇದಕ್ಕಿಂತ ಹೆಚ್ಚಿನ ಮನ್ನಣೆಯನ್ನು ತಂದು ಕೊಟ್ಟವು. ಅವರು ಜನರ ಪ್ರೀತಿ ಗೌರವಗಳನ್ನು ಗೆದ್ದರು ಮತ್ತು ಭಾರತೀಯ ಮತ್ತು ಯುರೋಪಿಯನ್ ಎರಡೂ ಸಮುದಾಯಗಳ ಆದರವನ್ನು ಗಳಿಸಿ ಕೊಂಡರು.

ದ್ವಾರಕನಾಥರ ಪ್ರಗತಿಪರ ದೃಷ್ಟಿ ಸಹಜವಾಗಿ ಅವರನ್ನು ದೇಶಕ್ಕೆ ಕಲ್ಯಾಣವನ್ನುಂಟುಮಾಡುವ ಚಳವಳಿಗಳಿಗೆ ಆಕರ್ಷಿಸಿತು. ಈ ವಿಷಯದಲ್ಲಿ ಅವರು ತಮಗಿಂತ ಹಿರಿಯರೂ, ಸಮಕಾಲೀನರೂ ಆಗಿದ್ದ ರಾಮಮೋಹನರಾಯರ ಮೇಲ್ಪಂಕ್ತಿಯನ್ನು ಅನುಸರಿಸಿದರು. ಮತ್ತು ಅವರ ಸಮೀಪ ಅನುವರ್ತಿಗಳಾಗಿ ಮನಃಪೂರ್ವಕವಾಗಿ ಬೆಂಬಲ ನೀಡಿದರು. ಈ ಚಟುವಟಿಕೆಗಳು ಅವರ ಬಾಳಿನ ಆದಿಭಾಗದಿಂದಲೇ ಪ್ರಾರಂಭವಾದುವು ಮತ್ತು ರಾಮಮೋಹನರು ತೀರಿಕೊಂಡ ನಂತರವೂ ಮುಂದುವರೆದುವು. ಇಬ್ಬರೂ ಇಂಗ್ಲೀಷ್‌ನಲ್ಲಿ ವಿದ್ಯಾಭ್ಯಾಸವನ್ನು ಪಡೆದುಕೊಂಡಿದ್ದರು ಮತ್ತು ಅದರ ಮೇಲೆ ಪ್ರಭುತ್ವ ಪಡೆದುಕೊಂಡ ನಂತರ ವೈಜ್ಞಾನಿಕ ದೃಷ್ಟಿಯನ್ನು ಆಧರಿಸಿದ ಹೊಸ ಜ್ಞಾನದ ಸತ್ವವನ್ನೂ ಸವಿದಿದ್ದರು. ನಮ್ಮ ಜನತೆ ಎಚ್ಚೆತ್ತು ತಮ್ಮ ನಿಜ ಸ್ವರೂಪವನ್ನು ಕಂಡುಕೊಳ್ಳಬೇಕು, ಇದಕ್ಕಾಗಿ ಹೊಸ ಜ್ಞಾನದ ವಿಚಾರಗಳನ್ನು ಅವರ ಮನಸ್ಸುಗಳಿಗೆ ಹರಿಸಬೇಕು, ಎಂಬುದನ್ನು ಇಬ್ಬರೂ ಅರ್ಥಮಾಡಿಕೊಂಡಿದ್ದರು. ಆದರೆ ಈ ದೇಶದ ಯುವ ಜನತೆಗೆ ಇಂಗ್ಲೀಷ್ ಶಿಕ್ಷಣ ಪಡೆಯಲು ದೊಡ್ಡ ಪ್ರಮಾಣದಲ್ಲಿ ಸೌಕರ್ಯಗಳನ್ನು ಒದಗಿಸದಿದ್ದರೆ ಇದನ್ನು ಸಾಧಿಸುವುದು ಸಾಧ್ಯವಿರಲಿಲ್ಲ. ಆದರೆ ದೇಶವನ್ನು ಆಗ ಆಳುತ್ತಿದ್ದ ಸರ್ಕಾರಕ್ಕೆ ಇದನ್ನು ಮಾಡಲು ಮನಸ್ಸಿರಲಿಲ್ಲ. ಆದುದರಿಂದ 'ಪ್ರಥಮ ಪ್ರಯತ್ನವು ಜನತೆಯಿಂದಲೇ ಆಗಬೇಕು' ಎಂದು ಅವರು ನಿರ್ಧರಿಸಿದರು.

ಹತ್ತೊಂಬತ್ತನೆಯ ಶತಮಾನದ ಎರಡನೆಯ ದಶಕದಲ್ಲಿ ಇಂಗ್ಲೀಷ್ ಶಿಕ್ಷಣ ಬೇಕೆಂಬ ಚಳವಳಿ ಬಂಗಾಲದಲ್ಲಿ ಪ್ರಾರಂಭವಾದದ್ದು ಹೀಗೆ. ಆ ಹೊತ್ತಿಗೆ ಕಲ್ಕತ್ತದಲ್ಲಿ ನೆಲೆಸಿದ್ದ ರಾಮಮೋಹನರು ಇದಕ್ಕೆ ನಾಯಕರಾದರು. ಆದರ ಕಾರ್ಯದ ಬಹು ಭಾಗ ಸ್ಕಾಟ್ಲೆಂಡಿನವನಾದ ಡೇವಿಡ್ ಹೇರ್ ಎಂಬಾತನ ಮೇಲೆ ಬಿತ್ತು. ಆತ ಭಾರತಕ್ಕೆಬಂದದ್ದು ಗಡಿಯಾರಗಳ ವ್ಯಾಪಾರಿಯಾಗಿ. ಆದರೆ ಉದಾರ ಸ್ವಭಾವದವನಾದ ಆತನಿಗೆ ಇಲ್ಲಿನ ಜನತೆಯಲ್ಲಿ ಪ್ರೀತಿ ಹುಟ್ಟಿತು, ಆತ ಅವರ

ಸೇವೆಗೆ ತನ್ನನ್ನು ಒಪ್ಪಿಸಿಕೊಂಡ. ರಾಮಮೋಹನರು ಕೈಗೊಂಡ ಕೆಲಸಕ್ಕೆ ಸರ್ವಸಮರ್ಥನೆ ನೀಡಲು ಆತ ನಿರ್ಧರಿಸಿದ. ಚಂದಾ ಕೂಡಿಸಲು ಮನವಿಗಳನ್ನು ಕಳುಹಿಸಲಾಯಿತು. ಅವಕ್ಕೆ ದೊರೆತ ಪ್ರತಿಕ್ರಿಯೆಯೂ ಉದಾರವಾಗಿತ್ತು. ದ್ವಾರಕನಾಥರೇ ಹತ್ತು ಸಾವಿರ ರೂಪಾಯಿಗಳನ್ನು ನೀಡಿದರು. ಸಂಗ್ರಹವಾದ ಹಣದಿಂದ ಕಾಲೇಜ್ ಸ್ಕ್ವೇರ್‌ನಲ್ಲಿ ಭೂಮಿಯನ್ನು ಕೊಂಡಿದ್ದಾಯಿತು, 1817ರ ಜನವರಿ 20 ರಂದು ಅಲ್ಲಿ ಹಿಂದೂ ಕಾಲೇಜನ್ನು ತೆರೆಯಲಾಯಿತು. ಅದರ ಗುರಿ "ನಿಜವಾದ ಜ್ಞಾನವು ಯೂರೋಪಿನ ಮೂಲಗಳಿಂದ ಹಿಂದೂಸ್ತಾನದ ಬುದ್ಧಿಶಕ್ತಿಗೆ ಪ್ರವಹಿಸಲು ಮುಖ್ಯ ಕಾಲುವೆಯನ್ನು ತೆರೆಯುವುದು" ಎಂದು ಹೇಳಲಾಗಿತ್ತು.

ದ್ವಾರಕನಾಥರಿಗೆ ಇಂಗ್ಲೀಷ್ ಶಿಕ್ಷಣ ಪ್ರಸಾರದಲ್ಲಷ್ಟೇ ಅಲ್ಲದೆ ಅನ್ವಯಿಕ ವಿಜ್ಞಾನ ಅದರಲ್ಲಿಯೂ ವೈದ್ಯಕೀಯ ವಿಜ್ಞಾನದಲ್ಲಿ—ತಿಳಿವಳಿಕೆಯ ಪ್ರಸಾರ ದಲ್ಲಿಯೂ ಆಸಕ್ತಿ ಇತ್ತು. ಆದುದರಿಂದ ಅವರು ಪಾಶ್ಚಾತ್ಯ ವಿಧಾನದಲ್ಲಿ ವೈದ್ಯಕೀಯ ಚಿಕಿತ್ಸೆ ನೀಡಲು ಭಾರತೀಯರಿಗೆ ಶಿಕ್ಷಣ ಕೊಡುವುದಕ್ಕಾಗಿ 1835ರಲ್ಲಿ ಕಲ್ಕತ್ತದಲ್ಲಿ ವೈದ್ಯಕೀಯ ಕಾಲೇಜನ್ನು ತೆರೆಯಲು ಲಾರ್ಡ್ ವಿಲಿಯಂ ಬೆಂಟಿಂಕರು ಮಾಡಿದ ನಿರ್ಧಾರವನ್ನು ಸ್ವಾಗತಿಸಿದರು. ಮೇಧಾವಿ ವಿದ್ಯಾರ್ಥಿ ಗಳನ್ನು ಈ ಕಾಲೇಜಿಗೆ ಆಕರ್ಷಿಸುವುದಕ್ಕಾಗಿ ಅವರು ಅಂತಹ ವಿದ್ಯಾರ್ಥಿಗಳಿಗೆ ಬಹುಮಾನ ನೀಡುವುದಕ್ಕಾಗಿಯೇ ಎರಡು ಸಾವಿರ ರೂಪಾಯಿಗಳ ದತ್ತಿಯನ್ನು ನೀಡಿದರು. ಅವರು ಬ್ರಿಟನ್ನಿಗೆ ಮೊದಲ ಬಾರಿ ಭೇಟಿಕೊಟ್ಟಾಗ ಪಾಶ್ಚಾತ್ಯ ವೈದ್ಯಕೀಯ ಚಿಕಿತ್ಸೆಯ ಉತ್ಕೃಷ್ಟತೆ ಅವರಿಗೆ ಎಷ್ಟೊಂದು ಮನದಟ್ಟಾಯಿ ತೆಂದರೆ, ಭಾರತೀಯ ವೈದ್ಯರಿಗೆ ಬ್ರಿಟನ್ನಿನಲ್ಲಿ ವೈದ್ಯವಿಜ್ಞಾನದಲ್ಲಿ ಉನ್ನತ ಶಿಕ್ಷಣ ಪಡೆಯಲು ಅನುಕೂಲ ಕಲ್ಪಿಸಿಕೊಡಬೇಕೆಂದು ಅವರು ತೀರ್ಮಾನಿಸಿದ್ದರು. ಅವರ ಪ್ರಯತ್ನದ ಫಲವಾಗಿ ಸರ್ಕಾರವು ವೈದ್ಯ ವಿಜ್ಞಾನದಲ್ಲಿ ಪದವೀಧರರಾದ ಭಾರತೀಯರಿಗೆ ಹೊರದೇಶಗಳಲ್ಲಿ ಶಿಕ್ಷಣ ಪಡೆಯಲು ಎರಡು ವಿದ್ಯಾರ್ಥಿ ವೇತನ ಗಳನ್ನು ಕೊಡಲು ಒಪ್ಪಿತು. ಈ ಪ್ರಯತ್ನಗಳಿಗೆ ಪೂರಕವಾಗಿ, ಅವರೇ ಇನ್ನಿಬ್ಬರು ಪದವೀಧರರನ್ನು ಆರಿಸಿ ಇಂಗ್ಲೆಂಡಿನಲ್ಲಿ ಶಿಕ್ಷಣಕೊಡಿಸಲು ಅಗತ್ಯವಾದ ವೆಚ್ಚವನ್ನೂ ತಾವೇ ವಹಿಸಿಕೊಂಡರು.

ದ್ವಾರಕನಾಥರು ಇನ್ನೊಂದು ಕ್ಷೇತ್ರದಲ್ಲಿಯೂ ರಾಮಮೋಹನರೊಡನೆ ಒಟ್ಟುಗೂಡಿ ಶ್ರಮಿಸಿದರು. ಹಿಂದೂ ವಿಧವೆಯರು ತಮ್ಮ ಗಂಡಂದಿರ ಚಿತೆಯ

ಮೇಲೆ ಪ್ರಾಣಾರ್ಪಣೆ ಮಾಡಲು ಅವಕಾಶ ನೀಡುವ ಸತಿ ಎನ್ನುವ ಧಾರ್ಮಿಕ ಪದ್ಧತಿಗೆ, ಇದಕ್ಕೆ ಸಂಬಂಧಿಸಿದ ಹಲವು ಅಂಶಗಳಿಂದಾಗಿ, ಕಳೆದ ಶತಮಾನದ ಕಡೆಯ ಭಾಗದಲ್ಲಿ ಅಸಾಧಾರಣ ಜನಪ್ರಿಯತೆ ಲಭ್ಯವಾಗಿತ್ತು. ಗಂಡನ ಆಸ್ತಿಯಲ್ಲಿ ಆಸಕ್ತಿ ಇದ್ದು ಮುಂದೆ ವಾರಸುದಾರರಾಗಲಿದ್ದವರ ದುರಾಸೆ ಆಗಾಗ ಅವರ ವೈದಿಕ ಪ್ರಜ್ಞೆಯ ಹಿಂಜರಿತನವನ್ನು ಗೆದ್ದು ಅವರು ಕೈಗೊಳ್ಳುವ ಕ್ರಮಗಳನ್ನು ನಮ್ಮ ದೇಶದ ಧಾರ್ಮಿಕ ವಿಧಿಗಳಲ್ಲಿ ಪರಕೀಯರ ಹಸ್ತಕ್ಷೇಪ ಕ್ಕ ಎಂದು ಜನ ಭಾವಿಸ ಬಹುದು ಎನ್ನುವ ಆತಂಕ. ಆದುದರಿಂದ ರಾಮಮೋಹನರು ಅನುಸರಿಸಿದ ವಿಧಾನವೇ ಬೇರೆ. ಅವರು ಈ ಆಚರಣೆಗೆ ಶಾಸ್ತ್ರಗಳ ಬೆಂಬಲವಿಲ್ಲ ಎಂದು ಲಾರ್ಡ್ ಆಮ್‌ಹರ್ಸ್ಟ್‌ನಿಗೆ ಮನಗಾಣಿಸಲು ಪ್ರಯತ್ನಿಸಿದರು. ಬೆಂಬಲವಿಲ್ಲ ಎನ್ನುವುದು ವಾಸ್ತವವೂ ಆಗಿತ್ತು. ರಾಮಮೋಹನರ ವಾದಗಳು ನ್ಯಾಯವೆಂದು ಆತ ಒಪ್ಪಿದರೂ ಏನನ್ನು ಮಾಡಲೂ ಹಿಂಜರಿದ. 1828 ರಲ್ಲಿ ಲಾರ್ಡ್ ಆಮ್‌ಹರ್ಸ್ಟ್‌ನು ಹೇಳಿದ ಈ ಕೆಳಗಿನ ಮಾತುಗಳಲ್ಲಿ ಆತನ ಭಾವನೆಗಳ ಬಹು ಪ್ರಾಮಾಣಿಕವಾಗಿ ವ್ಯಕ್ತವಾಗುತ್ತವೆ :

"ಈ ದುಷ್ಟತನದ ವೈಪರೀತ್ಯವನ್ನೂ ನಾನು ತಿಳಿದುಕೊಂಡಿಲ್ಲ ಎಂಬ ಭಾವನೆ ಬರುವ ಅಪಾಯವಿದ್ದರೂ ನಾನು ಪ್ರಾಮಾಣಿಕವಾಗಿ ಈ ಮಾತನ್ನು ಹೇಳಬೇಕು— ಈಗ ಈ ದೇಶದ ಜನರಲ್ಲಿ ಹರಡುತ್ತಿರುವ ತಿಳಿವಳಿಕೆಯ ಪ್ರಗತಿಯಿಂದ ಈ ಅಸಹ್ಯಕರ ಮೂಢನಂಬಿಕೆಯು ಕ್ರಮಕ್ರಮವಾಗಿ ಮೂಲೆಪಾಲಾಗುವುದೆಂದು ನಾವು ಭರವಸೆಯಿಟ್ಟುಕೊಳ್ಳಬೇಕೆಂದು ಶಿಫಾರಸು ಮಾಡುವುದರ ಕಡೆಗೆ ನನ್ನ ಮನಸ್ಸು ವಾಲುತ್ತದೆ.*

ಆದರೆ ಲಾರ್ಡ್ ವಿಲಿಯಂ ಬೆಂಟಿಂಕನು ಗೌರ್ನರ್ ಜನರಲ್ ಸ್ಥಾನವನ್ನು ವಹಿಸಿಕೊಂಡ ನಂತರ ಈ ಕೆಲಸ ಕಾರ್ಯಕ್ಕೆ ಚುರುಕು ಬಂತು. ವಿಷಯಗಳನ್ನು ಗ್ರಹಿಸಲು ಅವನ ಮನಸ್ಸು ಸಿದ್ಧವಾಗಿತ್ತು ಮತ್ತು ಅವನ ಹೃದಯದಲ್ಲಿ ಸಹಾನು ಭೂತಿ ಇತ್ತು. ಆದುದರಿಂದ ಆತನು ರಾಮಮೊಹನರು ಮುಂದಿಟ್ಟ ವಾದ ಸಾಧುವಾದುದೆಂಬುದನ್ನು ಗುರುತಿಸಿದ. 1829 ರ ಡಿಸೆಂಬರ್ 4 ರಂದು ಹದಿನೇಳನೆಯ ರೆಗ್ಯುಲೇಷನ್ ಅಂಗೀಕರಿಸಿ ಈ ಪದ್ಧತಿಯು ನ್ಯಾಯಬಾಹಿರ ಮತ್ತು

* ಜೇಂಸ್ ಫ್ಯಾರೆಲ್, 'ದಿ ಟ್ಯಾಗೋರ್ ಫ್ಯಾಮಿಲಿ'

ಶಾಸನದ ಪ್ರಕಾರ ಶಿಕ್ಷಾರ್ಹ ಎಂದು ಸಾರಿ ಅದನ್ನು ಕೊನೆಗಾಣಿಸಲು ಆತ ಹಿಂಜರಿಯಲಿಲ್ಲ. "ಈ ವಿಧಿಗೆ ಆಧಾರ ಧಾರ್ಮಿಕ ಸಮ್ಮತಿಗಿಂತ ಮುಖ್ಯವಾಗಿ ಪದ್ಧತಿಯೇ" ಎಂದು ರಾಮಮೋಹನರು ಹೇಳಿದ ಮಾತಿನಿಂದ ಆತ ಬಹುಮಟ್ಟಿಗೆ ಪ್ರಭಾವಿತನಾದ. ಇದು ಲಾರ್ಡ್ ಬೆಂಟಿಂಕನು 1829ರ ನವೆಂಬರ್ 8 ರಂದು ಬರೆದ ಪತ್ರದಿಂದ ದೃಢಪಡುತ್ತದೆ.

ಈ ವಿಧಿಯನ್ನು ಕೊನೆಗಾಣಿಸಲು ಗೌರ್ನರ್ ಜನರಲ್‌ನ ಮನಸ್ಸನ್ನು ಒಲಿಸುವುದರಲ್ಲಿ ರಾಮಮೋಹನರಿಗೆ ದ್ವಾರಕನಾಥರು ನೆರವಾದರು ಎಂಬ ಸಂಗತಿ ಹೆಚ್ಚು ಪ್ರಚಾರವಾಗಿಲ್ಲ. ಆದರೆ ಇದನ್ನು ದೃಢಪಡಿಸಲು ನಂಬಲರ್ಹವಾದ ಸಾಕ್ಷ್ಯವಿದೆ. ಅವರು ಯೂರೋಪಿಯನ್ ಸಮುದಾಯದ ಗೌರವಕ್ಕೆ ಪಾತ್ರರಾಗಿ ರಾಜ್ಯಾಡಳಿತದ ಮುಖ್ಯಸ್ಥನನ್ನು ಸುಲಭವಾಗಿ ನೋಡುವ ಅವಕಾಶ ಪಡೆದು ಗಣ್ಯಸ್ಥಾನ ಗಳಿಸಿದ್ದುದರಿಂದ ಅವರಿಗೆ ಇದು ಸಾಧ್ಯವಾಯಿತು. ರಾಮಮೋಹನರ ಪ್ರಗತಿಪರ ವಿಚಾರಗಳನ್ನು ಒಪ್ಪಿಕೊಂಡಿದ್ದ ದ್ವಾರಕನಾಥರು ಈ ವಿಧಿಗೆ ಶಾಸ್ತ್ರಗಳ ಒಪ್ಪಿಗೆ ಇರಲಿಲ್ಲ ಎನ್ನುವುದನ್ನು ಒತ್ತಿ ಹೇಳಿದರು. ಲೇಡಿ ಬೆಂಟಿಂಕರು ದ್ವಾರಕನಾಥರಿಗೆ ಬರೆದ ಪತ್ರದಿಂದ ಕೆಳಗೆ ಉದ್ಧರಿಸಿರುವ ಭಾಗ ಇದನ್ನು ಖಚಿತಪಡಿಸುತ್ತದೆ:

"ಈ ವಿಷಯದಲ್ಲಿ ಬಹು ತೀವ್ರವಾದ ಆಸಕ್ತಿಯನ್ನು ವಹಿಸಿ, ಸತಿ ಎಂಬ ಭಯಂಕರ ವಿಧಿಯು ಶಾಸನದಷ್ಟೇ ಶಕ್ತಿಯನ್ನು ಗಳಿಸಿಕೊಂಡಿದ್ದರೂ ವಾಸ್ತವವಾಗಿ ಹಿಂದುಗಳ ಶಾಸ್ತ್ರಗಳು ಅದನ್ನು ಪ್ರೋತ್ಸಾಹಿಸಲಿಲ್ಲ ಎನ್ನುವ ಬಹು ಮುಖ್ಯವಾದ ಸಂಗತಿಯನ್ನು ತಿಳಿಸಿಕೊಟ್ಟವರು ಕಲ್ಕತ್ತದ ದೇಶೀಯ ಜನತೆಯಲ್ಲಿಯೇ ದಿವಂಗತ ರಾಮಮೋಹನರಾಯ್ ಅವರು ಮತ್ತು ನೀವು ಎಂದು ಹೇಳಲು ನನಗೆ ಬಹಳ ಸಂತೋಷವಾಗುತ್ತದೆ."*

ದ್ವಾರಕನಾಥರ ವಾಕ್ ಸ್ವಾತಂತ್ರ್ಯದ ಪ್ರೇಮ ಅವರನ್ನು ಇನ್ನೊಂದು ವಾದ ವಿವಾದಕ್ಕೂ ಎಳೆಯಿತು. ಅದರಲ್ಲಿಯೂ ಅವರು ವಿಶೇಷ ಜಯವನ್ನು ಗಳಿಸಿದರು. ಆ ಶತಮಾನ ಮುಗಿಯುವ ಹೊತ್ತಿಗೆ ವೃತ್ತ ಪತ್ರಿಕೆಗಳು ಕಲ್ಕತ್ತೆಯಲ್ಲಿ ಒಂದು ಪರಿಣಾಮಕಾರಿಯಾದ ಸಂಸ್ಥೆಯಾಗಿ ಸ್ಥಾನಗಳಿಸಿಕೊಂಡಿದ್ದವು. ದುರದೃಷ್ಟವಶಾತ್

* ಕ್ಷಿತೀಂದ್ರನಾಥ ಠಾಕೂರ್, 'ದ್ವಾರಕಾನಾಥ್ ಠಾಕೂರೆರ್ ಜೀವನಿ'

ಸಮಾಜದಲ್ಲಿ ಗಣ್ಯಸ್ಥಾನಗಳಲ್ಲಿದ್ದವರನ್ನು ಹೀನೈಸುವುದು ಕೆಲವು ಪತ್ರಿಕಾ ಕರ್ತರ ಅಭ್ಯಾಸವಾಯಿತು. ಇದರಿಂದ 1799 ರಷ್ಟು ಮುಂಚಿತವಾಗಿಯೇ ಸರ್ಕಾರವು ಪತ್ರಿಕೆಗಳಲ್ಲಿ ಪ್ರಕಟವಾಗುವ ವಿಷಯಗಳ ಪೂರ್ವಪರೀಕ್ಷೆಗೆ ಕ್ರಮ ಗಳನ್ನು ಕೈಗೊಳ್ಳುವುದು ಅಗತ್ಯವಾಯಿತು. ಇದರಿಂದ ಒಂದು ಚರ್ಚೆ ಪ್ರಾರಂಭ ವಾಗಿ ಒಂದು ಪಕ್ಷವು ಪೂರ್ವಪರೀಕ್ಷೆಯನ್ನು ಸಮರ್ಥಿಸಿತು. ಮತ್ತೊಂದು, ಪರೀಕ್ಷೆಯನ್ನು ಹಿಂತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಿತು. ಈ ಪಕ್ಷಗಳ ನಡುವಣ ಸೆಣಸಾಟ ಹಲವು ದಶಕಗಳ ಕಾಲ ಸಾಗಿತ್ತು. ಅವುಗಳ ಭಾಗ್ಯವೂ ಏರುಪೇರಾ ಗುತ್ತಿತ್ತು. 1813 ರಲ್ಲಿ ಪತ್ರಿಕೆಗಳ ನಿಯಂತ್ರಣಗಳ ಕ್ರಮಗಳು ಇನ್ನೂ ಉಗ್ರ ವಾದಾಗ 1817 ರಲ್ಲಿ ಲಾರ್ಡ್ ಹೇಸ್ಟಿಂಗ್ಸನು ಅವನ್ನು ಸಂಪೂರ್ಣವಾಗಿ ತೆಗೆದು ಹಾಕಿದನು. ಆದರೆ 1823 ರಲ್ಲಿ ಅವನ್ನು ಮತ್ತೆ ಜಾರಿಗೆ ತರಲಾಯಿತು. ಮತ್ತು ಹೊಸ ಶಾಸನವು ಅಪ್ಪಣೆ ಅಥವಾ ಲೈಸೆನ್ಸ್ ಇಲ್ಲದೆ ಯಾವ ಹೊಸ ಪತ್ರಿಕೆಯನ್ನೂ ಹೊರ ತರಬಾರದೆಂದು ವಿಧಿಸಿತು.

1835 ರಲ್ಲಿ ಈ ಪೂರ್ವಪರೀಕ್ಷೆಯನ್ನು ಹಿಂತೆಗೆದುಕೊಳ್ಳಬೇಕೆಂಬ ಚಳವಳಿ ತೀವ್ರವಾಯಿತು. ನಿಯಂತ್ರಣವನ್ನು ಕೊನೆಗಾಣಿಸಬೇಕೆಂದು ವಿನಂತಿಸು ವಲ್ಲಿ ಯೂರೋಪಿಯನ್ ಮತ್ತು ಭಾರತೀಯ ಸಮುದಾಯಗಳು ಒಂದಾದವು. ಈ ಚಳವಳಿಯ ಭಾಗವಾಗಿ ಕಲ್ಕತ್ತೆಯ ಪುರಸಭಾ ಭವನದಲ್ಲಿ ಒಂದು ಸಾರ್ವಜನಿಕ ಸಭೆ ನಡೆಯಿತು. ನಿಯಂತ್ರಣವನ್ನು ರದ್ದುಗೊಳಿಸಬೇಕೆಂದು ಕೇಳುವ ನಿರ್ಣಯ ವನ್ನು ಅಲ್ಲಿ ಅಂಗೀಕರಿಸಲಾಯಿತು. ದ್ವಾರಕನಾಥರು ಈ ಚಳವಳಿಯಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಿ ಭಾರತೀಯ ಮತ್ತು ಯೂರೋಪಿಯನ್ ಸಮುದಾ ಯಗಳೆರಡರ ಪ್ರೀತಿಯನ್ನು ಗಳಿಸಿಕೊಂಡರು. ಆಗ ಗೌರ್ನರ್ ಜನರಲ್ ಆಗಿದ್ದ ಸರ್ ಚಾರ್ಲ್ಸ್ ಮೆಟ್‌ಕಾಫನು ಪತ್ರಿಕೆಗಳ ಮೇಲಿನ ಎಲ್ಲ ನಿರ್ಬಂಧಗಳನ್ನು ತೆಗೆದು ಹಾಕಿದುದರಿಂದ ಚಳವಳಿಗೆ ಅನಿರೀಕ್ಷಿತ ವಿಜಯ ದೊರಕಿತು. ಈ ಜಯದ ಸಂಭ್ರಮದ ಆಚರಣೆಗಾಗಿ 1838 ರ ಫೆಬ್ರುವರಿ 9 ರಂದು ಭೋಜನ ಕೂಟವನ್ನು ಏರ್ಪಡಿಸಲಾಗಿತ್ತು. ಅಲ್ಲಿ ಹೆನ್ರಿ ಮೆರೆಡಿತ್ ಪಾರ್ಕರನು ಅಂದು ರಾತ್ರಿ ಅವರೆಲ್ಲ ಯಾವ ಯಶಸ್ಸನ್ನು ಸ್ವಾಗತಿಸಲು ಸೇರಿದ್ದರೋ ಅದಕ್ಕಾಗಿ ದ್ವಾರಕನಾಥರು ಸಲ್ಲಿಸಿದ ಸೇವೆಗಾಗಿ ಅವರ ಆರೋಗ್ಯವನ್ನು ಹಾರೈಸಿ ಸ್ವಸ್ತಿಪಾನ ಮಾಡಬೇಕೆಂದು ಸೂಚಿಸಿದ.*

* ಕ್ಷಿತೀಂದ್ರನಾಥ ಠಾಕೂರ್, 'ದ್ವಾರಕಾನಾಥ ಠಾಕೂರೆರ್ ಜೀವನಿ'

ತಾವು ಆಸಕ್ತಿ ವಹಿಸಿದ ಎಲ್ಲ ವಿಷಯಗಳಲ್ಲಿ ಇಂತಹ ಅಭೂತಪೂರ್ವ ಯಶಸ್ಸನು ಸಾಧಿಸಿದ ನಂತರ ದ್ವಾರಕನಾಥರು ಸಹಜವಾಗಿ ತಾವು ಸ್ಥಾಪಿಸಿದ ವಾಣಿಜ್ಯ ಸಂಸ್ಥೆಗಳ ಭವಿಷ್ಯದ ಕಡೆಗೆ ಮನಸ್ಸನ್ನು ತಿರುಗಿಸಿದರು. 1829 ರಲ್ಲಿ ಪ್ರಾರಂಭವಾದ ಯೂನಿಯನ್ ಬ್ಯಾಂಕ್ ಮತ್ತು 1834 ರಲ್ಲಿ ಸ್ಥಾಪಿತವಾದ ಕಾರ್, ಟ್ಯಾಗೋರ್ ಅಂಡ್ ಕಂಪೆನಿಯು ಅವರ ಸ್ವಂತ ಮೇಲ್ವಿಚಾರಣೆಯಲ್ಲಿ ಒಂದು ರೀತಿಯ ಅಭಿವೃದ್ಧಿಯನ್ನು ಸಾಧಿಸಿದುವು. ಈ ಎರಡು ಸಂಸ್ಥೆಗಳ ಶಿಲ್ಪಿಯಾಗಿದ್ದ ಅವರಿಗೆ ಸಹಜವಾಗಿ ಭವಿಷ್ಯದಲ್ಲಿ ಅವುಗಳ ಭದ್ರತೆಯನ್ನು ಕುರಿತು ಚಿಂತೆಯಿತ್ತು.

ತಮ್ಮ ಹಿರಿಯ ಮಗ ದೇವೇಂದ್ರನಾಥರಿಗೆ ಈ ಸಂಸ್ಥೆಗಳ ವ್ಯವಹಾರಗಳಲ್ಲಿ ಆಸಕ್ತಿಯನ್ನು ಕುದುರಿಸಿ ಮುಂಚೆ ಈ ಎರಡು ಸಂಸ್ಥೆಗಳ ಆಡಳಿತದ ಮುಖ್ಯಾಧಿಕಾರಿಯಾಗಿ ಕೆಲಸ ಮಾಡಲು ಶಿಕ್ಷಣ ಕೊಡುವುದೇ (ಇದನ್ನು ಸಾಧಿಸುವ) ಅತ್ಯುತ್ತಮ ಮಾರ್ಗ ಎಂದು ಅವರಿಗೆ ತೋರಿತು. ಆದರೆ ಈ ಭರವಸೆ ಸುಳ್ಳಾಯಿತು. ಸ್ವಭಾವತಃ ದೇವೆಂದ್ರನಾಥರು ಬಹು ಧಾರ್ಮಿಕ ಮನೋಭಾವದವರು. ಅವರಿಗೆ ಬ್ಯಾಂಕುಗಳನ್ನಾಗಲೀ, ವಾಣಿಜ್ಯ ಸಂಸ್ಥೆಗಳನ್ನಾಗಲೀ ನಡೆಸುವುದರಲ್ಲಿ ಹೆಚ್ಚು ಆಸಕ್ತಿಯಿರಲಿಲ್ಲ. ಮಗನಿಗೆ ವ್ಯಾಪಾರ ವ್ಯವಹಾರಗಳಲ್ಲಿ ಆಸಕ್ತಿಯಿಲ್ಲದೆ ಇದ್ದುದರಿಂದ ದ್ವಾರಕನಾಥರು ತಾವು ಸ್ಥಾಪಿಸಿದ ವಾಣಿಜ್ಯ ಸಂಸ್ಥೆಗಳ ಭವಿಷ್ಯ ಅನಿಶ್ಚಿತ ಎಂದೂ ತೀರ ಕೆಡುಕೇ ಸಂಭವಿಸಿದರೆ ತಮ್ಮ ಸಂಸಾರವು ಹಣಕಾಸಿನ ಮುಗ್ಗಟ್ಟನ್ನು ಎದುರಿಸಬೇಕಾಗಬಹುದೆಂದೂ ನಿರೀಕ್ಷಿಸುವಂತಾಯಿತು.

ಇಂತಹ ಸನ್ನಿವೇಶದಲ್ಲಿ ತಮ್ಮ ಮುಂದಿನ ಅತ್ಯುತ್ತಮ ಮಾರ್ಗವೆಂದರೆ ಹಣಕಾಸಿನ ಕಷ್ಟ ಒದಗಿದರೆ ಸಂಸಾರಕ್ಕೆ ನಿಗದಿಯಾಗಿ ಒಂದು ವರಮಾನ ಬರುವಂತೆ ಒಂದಿಷ್ಟು ಆಸ್ತಿಯನ್ನು ಬೇರೆ ತೆಗೆದಿಡುವುದೇ ಎಂದು ಅವರಿಗೆ ತೋರಿತು. ಉತ್ತರ ಬಂಗಾಳದಲ್ಲಿ ಮತ್ತು ಒರಿಸ್ಸಾ ರಾಜ್ಯದ ಕಟಕ್‌ನಲ್ಲಿ ಇದ್ದ ನಾಲ್ಕು ಜಮೀನುದಾರಿ ತೋಟಗಳನ್ನು ಸೇರಿಸಿ ಅವನ್ನು ತಮ್ಮ ಹತ್ತಿರದ ನೆಂಟರಾಗಿದ್ದ ಮೂರು ಮಂದಿ ನ್ಯಾಸನಿರ್ವಾಹಕರು ನೋಡಿಕೊಳ್ಳುವ ನ್ಯಾಸವನ್ನು ಕಾನೂನು ಪತ್ರದ ಮೂಲಕ ರಚಿಸಿದರು. ಈ ಆಸ್ತಿಗಳೊಡನೆ ನೇರ ಸಂಬಂಧವಿಟುಕೊಳ್ಳಲು ಗಂಡು ಮಕ್ಕಳಿಗೆ ಅವಕಾಶವಿರಲಿಲ್ಲ. ಆದರೆ ಅವರಿಗೆ ಲಾಭದಲ್ಲಿ ಭಾಗವಿತ್ತು. 1840ರ ಆಗಸ್ಟ್ ತಿಂಗಳಲ್ಲಿ ಈ ಕಾನೂನು ಪತ್ರವು ಆಯಿತು.

ಸುಮಾರು ಈ ಸಮಯದಲ್ಲಿ ದ್ವಾರಕನಾಥರಿಗೆ ಕಲ್ಕತ್ತೆಯ ಅಡಾವುಡಿ ಜೀವನದಿಂದ ತಾವು ದೂರವಾಗಬೇಕೆಂದು ಮನಸ್ಸಿನಲ್ಲಿ ಒತ್ತಡವಿದ್ದಂತೆ ತೋರುತ್ತದೆ. ಈ ಭಾವನೆಗೆ ಹಲವಾರು ಅಂಶಗಳು ಕಾರಣವಾಗಿರಬಹುದು. ಅವರು ಉತ್ತರ ಭಾರತದಲ್ಲಿ ಪ್ರವಾಸ ಕೈಗೊಂಡು ಮನೆಯಿಂದ ದೂರವಿದ್ದ ಸಮಯದಲ್ಲಿ 1838 ರಲ್ಲಿ ಅವರ ಪ್ರೀತಿಯ ತಾಯಿ ಅಲಕಾ ದೇವಿ ತೀರಿಕೊಂಡರು. ಇದರ ನಂತರ 1839 ರ ಜನವರಿಯಲ್ಲಿ ಅವರ ಹೆಂಡತಿ ದಿಗಂಬರಿ ದೇವಿಯವರ ಅಕಾಲ ಮರಣ ಸಂಭವಿಸಿತು. ಇದರಿಂದ ಅವರಿಗೆ ತೀವ್ರ ಆಘಾತವಾಗಿರಬೇಕು. ತಾವು ಬಯಸಿದಂತೆ ಮೊದಲನೆಯ ಮಗನ ಪ್ರವೃತ್ತಿ ರೂಪುಗೊಳ್ಳಲಿಲ್ಲ ಎನ್ನುವುದೂ ಇನ್ನೊಂದು ಅಂಶವಾಗಿರಬೇಕು. ಪ್ರಾಯಶಃ ಇವೆಲ್ಲವೂ ಸೇರಿ ಅವರಿಗೆ ತಾವು ಸ್ವಲ್ಪ ಕಾಲವಾದರೂ ತಮ್ಮ ಕೆಲಸ ಕಾರ್ಯಗಳ ತಾಣದಿಂದ ದೂರವಿರಬೇಕು ಎನ್ನಿಸಿತು. ಹೀಗಾಗಿ ಅವರು ಬ್ರಿಟನ್ನಿಗೆ ಭೇಟಿಕೊಡುವ ಯೋಚನೆ ಮಾಡಿದರು.

ಅವರ ಪ್ರವಾಸ 1842 ರ ಜನವರಿ 9 ರಂದು ಪ್ರಾರಂಭವಾಯಿತು. ಅಂದು ಅವರು ತಮ್ಮ ಸೋದರಳಿಯ ಚಂದ್ರಮೋಹನ ಚಟರ್ಜಿಯೊಡನೆ ಬ್ರಿಟನ್ನಿಗೆ ಹೊರಟರು. ಬ್ರಿಟನ್ನಿನಲ್ಲಿ ವೇಲ್ಸ್, ಸ್ಕಾಟ್ಲೆಂಡ್ ಮತ್ತು ಹಲವಾರು ಭಾಗಗಳಿಗೆ ಭೇಟಿಕೊಟ್ಟು, ತಮ್ಮ ಪ್ರಿಯ ಮಿತ್ರ ರಾಮಮೋಹನರ ನೆನಪಿಗಾಗಿ ಬ್ರಿಸ್ಟಲಿನಲ್ಲಿ ಒಂದು ಸ್ಮಾರಕವನ್ನು ನಿರ್ಮಿಸಿ ಅವರು ಮಾರನೆಯ ವರ್ಷ ಜನವರಿಯಲ್ಲಿ ಹಿಂದಿರುಗಿದರು.

ಅವರು ಪ್ಯಾರಿಸಿನಲ್ಲೂ ಕೆಲವು ದಿನಗಳನ್ನು ಕಳೆದರೆಂದೂ ಅಲ್ಲಿ ಅವರಿಗೆ ಚಕ್ರವರ್ತಿ ಲೂಯಿ ಫಿಲಿಪ್ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದನೆಂದೂ ದ್ವಾರಕನಾಥರೂ ಅಷ್ಟೇ ವೈಭವದ ಸತ್ಕಾರ ಕೂಟವನ್ನು ಏರ್ಪಡಿಸಿದರೆಂದೂ ತೋರುತ್ತದೆ. ಈ ಪ್ರವಾಸದಲ್ಲಿ ವಿಶಿಷ್ಟವಾಗಿ ಎದ್ದು ಕಾಣುವ ಸಂಗತಿ ಎಂದರೆ, ಅವರು ಯೂರೋಪಿನಲ್ಲಿದ್ದಾಗ ಎಲ್ಲೆಲ್ಲಿಯೂ ಅದರಲ್ಲಿಯೂ ಬ್ರಿಟನ್ನಿನಲ್ಲಿ, ಅವರಿಗೆ ಸ್ವಯಂ ಪ್ರೇರಣೆಯಿಂದ ಜನರು ನೀಡಿದ ಆದರದ ಸ್ವಾಗತ.

ಲಂಡನ್ನಿನಲ್ಲಿ ಮಹಾರಾಣಿಯೇ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದಳಲ್ಲದೆ ಲಾರ್ಡ್ ಮೇಯರರೂ ಮ್ಯಾನ್ಸನ್ ಹೌಸಿನಲ್ಲಿ ಒಂದು ಭೋಜನ ಕೂಟವನ್ನು ಏರ್ಪಡಿಸಿದರು. ಅವರ ಆರೋಗ್ಯ ಭಾಗ್ಯಕ್ಕೆ ಸ್ವಸ್ತಿಪಾನವನ್ನು

ಸೂಚಿಸುತ್ತ ಲಾರ್ಡ್ ಮೇಯರರು, "ನನ್ನ ಬಲಗಡೆ ಕುಳಿತಿರುವ ಸ್ನೇಹಿತರು ಅವರ ಶ್ರೇಷ್ಠ ಸ್ವಭಾವ ಮತ್ತು ಉನ್ನತ ಸಾಧನೆಗಳಿಂದ ಸಮಾಜಕ್ಕೆ ಭೂಷಣ ಪ್ರಾಯರಾಗಿದ್ದಾರೆ. ನಮ್ಮ ದೇಶಬಾಂಧವರನ್ನು ಅವರು ಭಾರತದಲ್ಲಿ ಸದಾ ಅಂತಃಕರಣದಿಂದ ಕಾಣುತ್ತಿರುವುದಕ್ಕಾಗಿ ಬ್ರಿಟನ್ನಿನ ಪ್ರತಿಯೊಬ್ಬ ಪ್ರಜೆಯೂ ಅವರಿಗೆ ಕೃತಜ್ಞರಾಗಿರಬೇಕು," ಎಂದರು.*

ಅವರು ಎಡಿನ್‌ಬರೋಗೆ ಭೇಟಿ ಇತ್ತಾಗ ಇದೇ ಬಗೆಯ ವಿಶ್ವಾಸಪೂರ್ವಕ ಸ್ವಾಗತ ದೊರೆಯಿತು. ಆ ಸಂದರ್ಭಕ್ಕೆ ಉಚಿತವಾಗಿದ್ದ ಸಮಾರಂಭದಲ್ಲಿ ನಗರದ ಲಾರ್ಡ್ ಪ್ರವೋಸ್ಟರೂ ಇತರ ಅಧಿಕಾರಿಗಳೂ ಅವರ ಹಿರಿಯ ವ್ಯಕ್ತಿತ್ವದಲ್ಲಿ ಮೆಚ್ಚಿಗೆ ತೋರುವುದಕ್ಕಾಗಿ ಅವರನ್ನು 'ಬರ್ಜೆಸ್' (ಪೌರ) ಮತ್ತು 'ಗಿಲ್ಡ್ ಬ್ರದರ್' (ವ್ಯಾಪಾರಸಂಸ್ಥೆಯ ಸಹೋದರ) ಎಂದು ಬರಮಾಡಿಕೊಂಡರು. 'ಅವರು ಭಾರತ ಸಾಮ್ರಾಜ್ಯದ ದೇಶೀಯ ವರ್ತಕ'ನ ಮಾತಿರಲಿ, ಬ್ರಿಟನ್ನಿನ ಒಬ್ಬ ಪ್ರಜೆಗೆ ಬಹು ಅಪರೂಪದ ಗೌರವ ಇದು. ಅಲ್ಲಿನ ಪತ್ರಿಕೆಗಳಲ್ಲಿ ಇದಕ್ಕೆ ಮುಖ್ಯ ಶೀರ್ಷಿಕೆಯೇ ದೊರೆತಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. 'ಸ್ಕಾಟ್ಸ್‌ಮನ್' ಎನ್ನುವ ಪತ್ರಿಕೆ, "ನಿನ್ನೆ ಎಡಿನ್‌ಬರೋ ಕೌನ್ಸಿಲ್ ಚೇಂಬರಿನಲ್ಲಿ ಗ್ರೇಟ್ ಬ್ರಿಟನ್ನಿನ ಚರಿತ್ರೆಯಲ್ಲಿ ಹಿಂದೆಂದೂ ನಡೆಯದಿದ್ದ ಸಂಗತಿಯೊಂದು ನಡೆಯಿತು. ಒಬ್ಬ ಹಿಂದೂ ಮಹನೀಯರಿಗೆ ನಗರದ ಸ್ವಾತಂತ್ರ್ಯ (ವಿಶೇಷ ಪದಾಧಿಕಾರ) ವನ್ನು ನೀಡಲಾಯಿತು" ಎಂದು ಬರೆಯಿತು.

ಭಾರತದ ಜನತೆಯ ಪ್ರತಿನಿಧಿಯೆಂದು ದ್ವಾರಕನಾಥರಲ್ಲಿ ಗ್ರೇಟ್ ಬ್ರಿಟನ್ನಿನ ಜನ ಕಂಡದ್ದು ಅವರ ಮನಸ್ಸನ್ನು ಎಷ್ಟು ಒಲಿಸಿತೆಂದರೆ ಅವರು ಭಾರತಕ್ಕೆ ಹಿಂದಿರುಗುವ ಮುನ್ನ ಸರ್ಕಾರ ಅವರನ್ನು ಯಾವುದಾದರೊಂದು ರೀತಿಯಲ್ಲಿ ಗೌರವಿಸಬೇಕೆಂದು ಅವರು ವಿನಂತಿಸಿದರು. ಲಂಡನ್ನಿನ 'ಬೆಂಗಾಲ್ ಹೆರಾಲ್ಡ್'ನ ಒಂದು ಸಂಪಾದಕೀಯದಲ್ಲಿ ಈ ಭಾವನೆಯನ್ನು ಬಹು ಸಮರ್ಥವಾಗಿ ಪ್ರತಿಪಾದಿಸಲಾಯಿತು. ಆದರಿಂದ ಪ್ರಸ್ತುತವಾದ ಭಾಗವನ್ನು ಕೆಳಗೆ ಕೊಟ್ಟಿದೆ:

"ಈಗಿನ ಸರ್ಕಾರವು ದ್ವಾರಕನಾಥರ ಅಸಾಧಾರಣ ಸದ್ಗುಣಗಳನ್ನು ಎಷ್ಟರ ಮಟ್ಟಿಗೆ ಮೆಚ್ಚಿದೆ ಎನ್ನುವುದನ್ನು ಅವರ ದೇಶಬಾಂಧವರಿಗೆ ತೋರಿಸಿಕೊಡುವ ಕ್ರಮಗಳನ್ನು ಕೈಗೊಳ್ಳದೆಯೇ ದ್ವಾರಕನಾಥ ಟಾಗೋರರಂತಹ ಹಿರಿಯರು ನಮ್ಮ

* ಕ್ಷಿತೀಂದ್ರನಾಥ ಠಾಕೂರ್, 'ದ್ವಾರಕನಾಥ ಠಾಕೂರೇರ್ ಜೀವನ'

ದೇಶದಿಂದ ಹೊರಡಲು ಸಾಧ್ಯವಾಗುತ್ತದೆ ಎಂದು ನಾವು ನಂಬಲು ಸಾಧ್ಯವೇ ಇಲ್ಲ."*

1843 ರಲ್ಲಿ ಕಲ್ಕತ್ತೆಗೆ ಹಿಂದಿರುಗಿ ದ್ವಾರಕನಾಥರು ತಮ್ಮ ಎಂದಿನ ಕೆಲಸ ಕಾರ್ಯಗಳಲ್ಲಿ ನಿರತರಾದರು. ಆದರೆ ಅವರಿಗೆ ತಮ್ಮ ಕೆಲಸದಲ್ಲಿ ಮನಸ್ಸನ್ನು ತೊಡಗಿಸಲು ಸಾಧ್ಯವಾಗಲಿಲ್ಲ ಎಂದು ಕಾಣುತ್ತದೆ. ಒಂದೆರಡು ವರ್ಷಗಳಲ್ಲಿ ಅವರು ಮತ್ತೆ ಬ್ರಿಟನ್ನಿಗೆ ಭೇಟಿಕೊಡಲು ತೀರ್ಮಾನಿಸಿದರು. ಸಾರ್ವಜನಿಕ ಜೀವನ ದಿಂದ ನಿವೃತ್ತರಾಗಿ ತಮ್ಮ ದೇಶದಿಂದಾಚೆ ಅನಿರ್ದಿಷ್ಟ ಕಾಲ ವಾಸ ಮಾಡುವ ಮನಃಸ್ಥಿತಿಯಲ್ಲಿ ಅವರಿದ್ದರೆಂಬುದು ಸ್ಪಷ್ಟ.

1845 ರ ಮಾರ್ಚ್ ಎಂಟರಂದು ಅವರು ಮತ್ತೆ ಭಾರತವನ್ನು ಬಿಟ್ಟು ಗ್ರೇಟ್ ಬ್ರಿಟನ್ನಿಗೆ ಹೊರಟರು. ಈ ಬಾರಿ ಅವರೊಡನೆ ಅವರ ಕಡೆಯ ಮಗ ನಾಗೇಂದ್ರನಾಥನು ಹೊರಟ. ಅವರು ಸರ್ರೆಯಲ್ಲಿ ಒಂದು ಹಳ್ಳಿಯಲ್ಲಿನ ಮನೆ ಯಲ್ಲಿ ಬಹುಪಾಲು ವಾಸಿಬೇಕೆಂದೇ ಉದ್ದೇಶಿಸಿದ್ದರು. ಆದರೆ ಮರು ವರ್ಷವೇ ಮಾರಕ ಕಾಯಿಲೆಯೊಂದು ಅವರನ್ನು ಅವರಿಸಿದ್ದು, ಸ್ವದೇಶದಿಂದ ಬಹು ದೂರದ ನಾಡಿನಲ್ಲಿ 1846 ರ ಆಗಸ್ಟು ಒಂದರಂದು ಅವರು ಕಣ್ಮುಚ್ಚಿದರು. ಆಗ ಅವರಿಗೆ ಐವತ್ತೆರಡು ವರ್ಷ, ಅಷ್ಟೇನೂ ವಯಸ್ಸಾಗಿರಲಿಲ್ಲ ಎಂದೇ ಹೇಳಬೇಕು.

ವಿಶಾಲ ಕ್ಷೇತ್ರದಲ್ಲಿ ಕೆಲಸ ಮಾಡಿ ಹಲವು ರೀತಿಗಳಲ್ಲಿ ಕೀರ್ತಿ ಸಂಪನ್ನವಾಗಿದ್ದ ವರ್ಣರಂಜಿತ ಬಾಳೊಂದು ಹೀಗೆ ಮುಗಿಯಿತು. ಅವರ ಮೇಧಾಶಕ್ತಿ ಮತ್ತು ಅಂತಃಕರಣದ ಸ್ವಭಾವದಿಂದ ಅವರು ಕಲ್ಕತ್ತೆಯ ಜನರಿಗೆ ತುಂಬಾ ಪ್ರಿಯರಾಗಿ ದ್ದರು. ಅವರು ತೆರವು ಮಾಡಿದ ಸ್ಥಾನವನ್ನು ಬೇರೆ ಯಾರೂ ತುಂಬಲು ಸಾಧ್ಯ ವಿರಲಿಲ್ಲ. ಅವರ ಮೇಲ್ಪಂಕ್ತಿ ಅವರ ಮೊಮ್ಮಗ ರವೀಂದ್ರನಾಥರ ಕಲ್ಪನೆಗೆ ಚೈತನ್ಯ ನೀಡಿರಬೇಕು. ಅವರು ತೀರಿಕೊಂಡ ನಂತರ ಸ್ವಲ್ಪ ಕಾಲದಲ್ಲಿ ಹಣಕಾಸಿನ ಬಿಕ್ಕಟ್ಟಿಗೆ ಅವರ ಸಂಸಾರ ಸಿಕ್ಕಿಕೊಂಡಾಗ ದ್ವಾರಕನಾಥರ ದೂರ ದೃಷ್ಟಿಯು ಸಂಪೂರ್ಣ ವಿನಾಶದಿಂದ ಸಂಸಾರವನ್ನು ಕಾಪಾಡಿತು. ಕುಟುಂಬದ ಪೋಷಣೆಗಾಗಿ ಅವರು ಮಾಡಿದ್ದ ನ್ಯಾಸಪತ್ರ ಅವರ ಮಕ್ಕಳು ದುಂದುಗಾರಿಕೆ ಮಾಡದೆ ನೆಮ್ಮದಿಯಾಗಿರುವಷ್ಟು ಆರ್ಥಿಕ ಸುಭದ್ರತೆಯನ್ನು ಕಲ್ಪಿಸಿಕೊಟ್ಟಿತು. ಹೀಗೆ ಮುಂದಿನ ಪೀಳಿಗೆಗಳ ಕಾಲದಲ್ಲಿ ಮನೆಯಲ್ಲಿ ಬೆಳೆದ ಸಾಂಸ್ಕೃತಿಕ ವಾತಾ ವರಣವನ್ನು ಸೃಷ್ಟಿಸಲು ಅದು ಪರೋಕ್ಷವಾಗಿ ನೆರವಾಯಿತು.

---

* ಸತ್ಯೇಂದ್ರನಾಥ ಠಾಕೂರ್. 'ಆಮರ್ ಬಾಲ್ಯ ಕಥಾ'

ಅಧ್ಯಾಯ ೨

ಕುಟುಂಬ

ದ್ವಾರಕನಾಥರಿಗೆ ಮೂವರು ಗಂಡು ಮಕ್ಕಳು. ದೊಡ್ಡವನು ದೇವೇಂದ್ರನಾಥ, ಎರಡನೆಯವನು ಗಿರೀಂದ್ರನಾಥ ಮತ್ತು ಕೊನೆಯವನು ನಾಗೇಂದ್ರನಾಥ. ಗಿರೀಂದ್ರ ಮತ್ತು ನಾಗೇಂದ್ರರು ಚಿಕ್ಕ ವಯಸ್ಸಿನಲ್ಲಿ ತೀರಿಕೊಂಡರು. ನಾಗೇಂದ್ರ ನಾಥರಿಗೆ ಮಕ್ಕಳೇ ಇರಲಿಲ್ಲ. ಗಿರೀಂದ್ರನಾಥನಿಗೆ ಇಬ್ಬರು ಗಂಡು ಮಕ್ಕಳು. ಗಣೇಂದ್ರನಾಥ ಮತ್ತು ಗುಣೇಂದ್ರನಾಥ. ದುರದೃಷ್ಟದಿಂದ ಅವರೂ ತಂದೆ ಯಂತೆ ಬಹು ಚಿಕ್ಕ ವಯಸ್ಸಿನಲ್ಲಿ ಮರಣ ಹೊಂದಿದರು. ದೊಡ್ಡವನಿಗೆ ಮಕ್ಕಳಿರ ಲಿಲ್ಲ. ಗುಣೇಂದ್ರನಾಥನಿಗೆ ಮೂರು ಜನ ಗಂಡು ಮಕ್ಕಳು. ಮುಂದೆ "ಬೆಂಗಾಲಿ ಸ್ಕೂಲ್ ಆಫ್ ಆರ್ಟ್"ನ ಸ್ಥಾಪಕನಾಗಿ ಕೀರ್ತಿ ಗಳಿಸಿದ ಅವನೀಂದ್ರನಾಥನು ಕೊನೆಯವನು. ದ್ವಾರಕನಾಥರು ತಮ್ಮ ಉಯಿಲಿನಲ್ಲಿ ಕಲ್ಕತ್ತದ ದ್ವಾರಕನಾಥ ಟ್ಯಾಗೋರ್ ಓಣಿಯಲ್ಲಿದ್ದ ಆಸ್ತಿಯನ್ನು ತಮ್ಮ ಇಬ್ಬರು ಹಿರಿಯ ಗಂಡು ಮಕ್ಕಳಲ್ಲಿ ಪಾಲು ಮಾಡಿದ್ದರು. ಆ ಆಸ್ತಿಯೆಂದರೆ ಎರಡು ಕಟ್ಟಡಗಳು— ಈಗ "ಮಹರ್ಷಿ ಭವನ" ಎಂದು ಹೆಸರು ಪಡೆದಿರುವ ದೊಡ್ಡ, ಹರಡಿಕೊಂಡಿದ್ದ ಮನೆ. ಈ ಎರಡನೆಯ ಮನೆಗೆ "ಬೈಠಕ್ ಖಾನ ಬಾರಿ" ಎಂದು ಹೆಸರಾಯಿತು. ಅಣ್ಣ ದೇವೇಂದ್ರನಾಥರಿಗೆ ಪೂರ್ವಿಕರ ಮನೆ ಸೇರಿತು, ಗಿರೀಂದ್ರನಾಥನಿಗೆ ದ್ವಾರಕ

ನಾಥರೇ ಕಟ್ಟಿಕೊಂಡಿದ್ದ ಮನೆಯನ್ನು ಕೊಡಲಾಯಿತು. ಈಚೆಗೆ ಈ ಮನೆಯನ್ನು ಕೆಡವಿ ಬಿಟ್ಟಿದ್ದಾರೆ. ದೇವೇಂದ್ರನಾಥರ ಹೆಸರನ್ನಿಟ್ಟಿದ್ದ ಪೂರ್ವಿಕರ ಮನೆಯನ್ನು ರವೀಂದ್ರ ಭಾರತಿ ವಿಶ್ವವಿದ್ಯಾನಿಲಯವು ಪಡೆದುಕೊಂಡು ಅದನ್ನು ವಸ್ತು ಸಂಗ್ರಹಾಲಯವನ್ನಾಗಿ ಮಾರ್ಪಡಿಸಿದೆ.

ದೇವೇಂದ್ರನಾಥರು ಹುಟ್ಟಿದ್ದು 1817 ರ ಮೇ ಹದಿನೈದರಂದು. ಒಂದು ವಿಚಿತ್ರ ಆಕಸ್ಮಿಕ ಎಂದರೆ ಹಿಂದೂ ಕಾಲೇಜಿನ ಸ್ಥಾಪನೆಯಾಗಿ ಬಂಗಾಳದ ತರುಣರಿಗೆ ಇಂಗ್ಲೀಷ್ ವಿದ್ಯಾಭ್ಯಾಸ ಪಡೆಯಲು ಮೊದಲ ಬಾರಿಗೆ ಅವಕಾಶ ಪ್ರಾಪ್ತವಾದದ್ದು ಅದೇ ವರ್ಷ. ಚಿಕ್ಕ ವಯಸ್ಸಿನಲ್ಲಿ ಅವರಿಗೆ ಸ್ವಲ್ಪಕಾಲ. ಬಂಗಾಳಿಗಳಿಗೆ ಇಂಗ್ಲೀಷ್ ವಿದ್ಯಾಭ್ಯಾಸ ನೀಡಲು ಉತ್ತರ ಕಲ್ಕತ್ತೆಯಲ್ಲಿ ರಾಮಮೋಹನರಾಯರು ಪ್ರಾರಂಭಿಸಿದ್ದ ಶಾಲೆಯಲ್ಲಿ ಓದು. ಅನಂತರ ಸ್ವಲ್ಪಕಾಲ ಹಿಂದೂ ಕಾಲೇಜ್‌ನಲ್ಲೆ ವಿದ್ಯಾಭ್ಯಾಸ ದೊರೆಯಿತು. 1834 ರಲ್ಲಿ, ಇನ್ನೂ ಹದಿವಯಸ್ಸಿನಲ್ಲಿದ್ದಾಗ, ಅವರ ತಂದೆ ದ್ವಾರಕನಾಥರು ಅವರನ್ನು ಹಿಂದೂ ಕಾಲೇಜ್‌ನಿಂದ ಬಿಡಿಸಿ ತಮ್ಮ ಬ್ಯಾಂಕಿನಲ್ಲೇ ಶಿಕ್ಷಣಕ್ಕಾಗಿ ಸೇರಿಸಿಕೊಂಡರು.

ಆದರೆ ದೇವೇಂದ್ರನಾಥರಿಗೆ ಹುಟ್ಟಿನಿಂದಲೇ ದೈವಭಕ್ತಿ ಮತ್ತು ಧರ್ಮನಿಷ್ಠೆಗಳ ಬಾಳಿನ ಹಂಬಲ ಒಳಗೊಳಗೆ ಇತ್ತು. ಕೌತುಕದ ಸಂಗತಿ ಎಂದರೆ, ಅವರ ಬಾಲ್ಯದಲ್ಲಿ ತಮ್ಮ ತಂದೆಯ ವಿಶೇಷ ಸಂಪತ್ತು ಲಭ್ಯ ಮಾಡಿಕೊಟ್ಟ ನೆಮ್ಮದಿಯ ಮತ್ತು ಭೋಗಗಳ ಜೀವನವನ್ನು ಸವಿಯುತ್ತಿದ್ದಂತೆ ಕಂಡಿತು; ಒಳಗಿನ ಹಂಬಲ ಸುಪ್ತವಾಗಿಯೇ ಇತ್ತು. ಅವರ ಜೀವನದಲ್ಲಿನ ಮೊದಲನೆಯ ಆಘಾತದ ಒತ್ತಡ ಈ ಒಳ ಹಂಬಲವನ್ನು ಥಟ್ಟನೆ ಎಚ್ಚರಿಸಿತು. 1838 ರಲ್ಲಿ ಅವರ ತಂದೆ ಊರಿನಲ್ಲಿ ಇಲ್ಲದೆ ಇದ್ದಾಗ ಅವರ ಅಜ್ಜಿ ಅಲಕಾ ದೇವಿಗೆ ತೀವ್ರ ಕಾಯಿಲೆಯಾಯಿತು. ಅವಳನ್ನು ನೋಡಿಕೊಳ್ಳುತ್ತಿದ್ದ ವೈದ್ಯನು ಅವಳ ಪ್ರಾಣ ಉಳಿಯುವುದಿಲ್ಲ ಸಾವು ಬಹಳ ಸಮೀಪದಲ್ಲಿದೆ ಎಂದು ಭಾವಿಸಿ ಆಕೆಯನ್ನು ಭಾಗೀರಥಿ ನದಿಯ ದಂಡೆಗೆ ಕರೆದೊಯ್ಯಲು ಸೂಚಿಸಿದ. ಆಗಿನ ಕಾಲದಲ್ಲಿ ಇಹಲೋಕವನ್ನು ಬಿಡಲು ಅತ್ಯಂತ ಅಪೇಕ್ಷಣೀಯವಾದ ರೀತಿ ಅದು ಎಂದು ಜನ ಭಾವಿಸಿದ್ದರು. ಆದರೆ ವೈದ್ಯನ ನಿರೀಕ್ಷೆಗೆ ಲೆಕ್ಕ ತಪ್ಪಿತ್ತೆಂದು ಸ್ಪಷ್ಟವಾಯಿತು. ಆ ಧರ್ಮಿಷ್ಠ ಹೆಂಗಸು ಮೂರು ದಿನಗಳ ನಂತರ ತೀರಿಕೊಂಡಳು. ಇದರಿಂದ ಆಕೆಯನ್ನು ನದಿಯತೀರಕ್ಕೆ ಕರೆದುಕೊಂಡು ಹೋದ ಕಾಲ ಸೂಕ್ತವಾದುದ್ದಲ್ಲ ಎಂಬುದು ಸ್ಪಷ್ಟವಾಯಿತು.

ಅಜ್ಜಿಯಲ್ಲಿ ವಿಶೇಷ ಪ್ರೀತಿಯನ್ನಿಟ್ಟುಕೊಂಡಿದ್ದ ದೇವೇಂದ್ರನಾಥರು ಆಕೆ ನದಿಗೆ ವಶಳಾಗುವವರೆಗೆ ಅವಳ ಹತ್ತಿರವೇ ನದೀ ತೀರದಲ್ಲಿ ಇರಬೇಕಾಯಿತು. ಆಕೆಯ ಸಾವಿನ ಹಿಂದಿನ ರಾತ್ರಿ ದೇವೇಂದ್ರನಾಥರಿಗೆ ಎಲ್ಲವನ್ನೂ ಬಿಟ್ಟುಬಿಡಬೇಕೆಂಬ ವೈರಾಗ್ಯ ಬಲವತ್ತರವಾಗಿತ್ತು. ಇದರ ಪ್ರಭಾವ ಅವರ ಬಾಳನ್ನು ಮಾರ್ಪ ಡಿಸಿತು.

ಅಲ್ಲಿಂದಾಚೆ ಅವರು ಕ್ಷುಲ್ಲಕ ಸಂತೋಷಕ್ಕೆ ಒಲಿಯುವ ಹುಡುಗಾಟಿಕೆಯ ಶ್ರೀಮಂತ ಪುತ್ರನಾಗಿರಲಿಲ್ಲ. ತಮ್ಮ ಮನಸ್ಸಿಗೆ ಸಮಾಧಾನವನ್ನೂ ಭದ್ರತೆಯ ಭಾವನೆಯನ್ನೂ ಕೊಡುವಂತಹ ತಮ್ಮ ಹೃದಯದಲ್ಲಿ ನಿಲ್ಲಿಸಿದ ಪರಮಾತ್ಮನನ್ನು ಬೇಡುವ ಭಕ್ತರಾದರು. ದೈವ ಅವರ ಸಮಸ್ಯೆಗೆ ಉತ್ತರವನ್ನೂ ನೀಡಿತು. ಒಂದು ದಿನ ಬೆಳಗ್ಗೆ ಒಂದು ಪುಸ್ತಕದಿಂದ ಹರಿದು ಹೋಗಿ ಗಾಳಿಯಲ್ಲಿ ತೇಲಾಡುತ್ತಿದ್ದ ಹಾಳೆಯೊಂದು ಅವರ ಕೈಗೆ ಸಿಕ್ಕಿತು. ಓದಿ ನೋಡಿದಾಗ ಅದು ಈಶಾವಾಸ್ಯ ಉಪನಿಷತ್ತಿನ ಮೊದಲ ಶ್ಲೋಕವನ್ನು ಒಳಗೊಂಡಿತ್ತು. ಶ್ಲೋಕ ಇದು—

ಈಶಾವಾಸ್ಯಮಿದಂ ಸರ್ವಂ
ಯತ್ ಕಿಂಚ ಜಗತ್ಯಾಂ ಜಗತ್
ತೇನ ತ್ಯಕ್ತೇನ ಭುಂಜೀಥಾ
ಮಾಗೃಧಃ ಕಸ್ಯಸ್ವಿದ್ಧನಮ್

(ಜಗತ್ತಿನಲ್ಲಿ ಯಾವ ಯಾವುದು ಜೀವನವೋ ಅದೆಲ್ಲ ಈಶ್ವರನಿಂದ ತುಂಬಿದೆ. ಆದ್ದರಿಂದ ಆತನ ಹೆಸರಿನಲ್ಲಿ ತ್ಯಾಗ ಮಾಡಿ ನೀನು ಯಥಾ ಪ್ರಾಪ್ತ ವಾದದ್ದನ್ನು ಅನುಭವಿಸು. ಇನ್ನೊಬ್ಬರಿಗೆ ಸೇರಿದ್ದನ್ನು ಅಪಹರಿಸಬೇಡ.) ಇದ ರಿಂದ ಅವರಿಗೆ ತಮ್ಮ ಸಮಸ್ಯೆಗೆ ಪರಿಹಾರ ಸಿಕ್ಕಿದಂತಾಯಿತು. ಅವರ ಭಕ್ತಿ ಭರಿತ ಹೃದಯದ ಅದ್ವೈತ ನಿರಾಕಾರ ಬ್ರಹ್ಮನ ಉಪಾಸನೆಯಲ್ಲಿ ನೆಮ್ಮದಿಯನ್ನು ಕಂಡುಕೊಂಡಿತು. ಮಾನವ ರೂಪದಲ್ಲಾಗಲೀ, ದೇವತೆಯ ರೂಪದಲ್ಲಾಗಲೀ ಭಗವಂತನನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ, ಆವನು ಅಷ್ಟು ಮಹಿಮೆಯುಳ್ಳವನು ಮತ್ತು ನಿರ್ಮಲನು ಎನ್ನಿಸಿತು ಅವರಿಗೆ.

ರಾಮಮೋಹನರು ದೇವೇಂದ್ರನಾಥರ ತಂದೆಯ ಸ್ನೇಹಿತರು ಮತ್ತು ಸ್ವತಃ ದೇವೇಂದ್ರನಾಥರ ಗುರು. ದೇವೇಂದ್ರನಾಥರು ಅವರ ಸಮೀಪವರ್ತಿಯಾದರು

ಮತ್ತು ಅವರಿಂದ ಬಹಳ ಪ್ರಭಾವಿತರಾದರು. ಈ ಕಾಲದಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಒತ್ತಡದಿಂದ ಇಡೀ ದೇಶದಲ್ಲಿ ಭರದಿಂದ ಸಾಗುತ್ತಿದ್ದ ಧಾರ್ಮಿಕ ಆಂದೋಳನವನ್ನು ಕುರಿತು ನಾವಿಲ್ಲಿ ಹೇಳಬೇಕು, ವಿಷಯಾಂತರವಾಗುವುದಾದರೂ. ಧಾರ್ಮಿಕ ಕ್ಷೇತ್ರದಲ್ಲಿ ಬಂಗಾಳದ ಹಿಂದೂಗಳು— ಅಷ್ಟೇಕೆ ಭಾರತದ ಎಲ್ಲೆಡೆಯ ಹಿಂದೂಗಳು— ಪರಮಾತ್ಮನನ್ನು ಸಾಕಾರನನ್ನಾಗಿ ಭಾವಿಸಿ ಒಂದು ವಿಗ್ರಹದಲ್ಲಿ ಆಹ್ವಾನಿಸಿ ಪೂಜಿಸುವುದು ಸಂಪ್ರದಾಯವಾಗಿದೆ. ಆ ದಿನಗಳಲ್ಲಿ ನಮ್ಮ ದೇಶದ ಆಡಳಿತಗಾರರಾದ ಇಂಗ್ಲೀಷರು ಕ್ರೈಸ್ತ ಧರ್ಮಕ್ಕೆ ಹೊಂದಿಕೊಂಡಿದ್ದವರು ಇದನ್ನು ಮೂರ್ತಿಪೂಜೆ ಎಂದು ಖಂಡಿಸಿದರು. ಆ ದಿನಗಳಲ್ಲಿ ಹಿಂದೂ ಕಾಲೇಜಿನಲ್ಲಿ ವಿದ್ಯಾಭ್ಯಾಸ ಪಡೆದ ಹಿಂದೂಗಳಿಗೆ ದುರ್ಬಲವಾಗುತ್ತಿದ್ದ ತಮ್ಮ ಸಂಸ್ಕೃತಿಯ ಶಾಸ್ತ್ರಗಳಿಗಿಂತ ತಾಂತ್ರಿಕ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆಯನ್ನು ಗಳಿಸಿದ್ದ ಇಂಗ್ಲೀಷರ ಸಂಸ್ಕೃತಿಯ ಹೊರವೈಭವ ಮಹತ್ವದ್ದಾಗಿ ಕಂಡಿತು. ಅವರಲ್ಲಿ ಹಲವರು ಹಿಂದೂ ಧರ್ಮದಲ್ಲಿ ಆಕರ್ಷಣೆ ಕಳೆದುಕೊಂಡು ಕ್ರೈಸ್ತಮತವನ್ನು ಸ್ವೀಕರಿಸಿದರು. ರಾಮಮೋಹನರಿಗೂ ಅವರ ಭಾವನೆಗಳೇ ಇದ್ದವು. ಆದರೆ ಇತರ ರೀತಿಗಳಲ್ಲಿ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಲು ಅವರ ರಾಷ್ಟ್ರೀಯ ದೃಷ್ಟಿ ನೆರವಾಯಿತು. ತಮ್ಮಂತೆಯೇ ವಿಚಾರ ಮಾಡುವವರಿಗಾಗಿ ಅವರು ಬ್ರಹ್ಮಸೂತ್ರಗಳ ಆಧಾರದ ಮೇಲೆ ನಿರಾಕಾರ ರೂಪದ ಆರಾಧನೆಯನ್ನು ಪ್ರಾರಂಭಿಸಿದರು. ಈ ಪ್ರಯತ್ನದಲ್ಲಿ ಅವರು ನಿರಾಕಾರ ಬ್ರಹ್ಮನ ಕಲ್ಪನೆಯನ್ನು ಸ್ವೀಕರಿಸುವವರ ಅನುಕೂಲಕ್ಕಾಗಿ ಒಂದು ಸಂಸ್ಥೆಯನ್ನು ಪ್ರಾರಂಭಿಸಿ ಅದಕ್ಕೆ “ಆತ್ಮೀಯ ಸಭಾ” ಎಂದು ಹೆಸರು ಕೊಟ್ಟರು. ಇದು ನಡೆದದ್ದು 1815 ರಲ್ಲಿ. ಅನಂತರ ಅವರು ತಮ್ಮ ಸುತ್ತ ಸೇರಿದ ಬಳಗವನ್ನು ಸಂಘಟಿಸುವುದರ ಅಗತ್ಯವನ್ನು ಕಂಡುಕೊಂಡರು. ಅದಕ್ಕೆ “ಬ್ರಾಹ್ಮೋ ಸಮಾಜ” ಎಂದು ಹೆಸರು ಕೊಟ್ಟು 1828 ರಲ್ಲಿ ಉತ್ತರ ಕಲ್ಕತಾದ ಜೊರಸಾಂಕೋ ಪ್ರದೇಶದಲ್ಲಿ ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ಪೂಜಾ ಮಂದಿರವನ್ನಾಗಿ ಪರಿವರ್ತಿಸಿದರು. ಅವರು ಬ್ರಿಟನ್ನಿಗೆ ತೆರಳುವ ಮೊದಲು ಬ್ರಾಹ್ಮೋ ಸಮಾಜಕ್ಕಾಗಿ ಚಿತ್‌ಪುರ ರಸ್ತೆಯ 55/1 ಸಂಖ್ಯೆಯ ಮನೆಯಲ್ಲಿ ಒಂದು ಪೂಜಾ ಮಂದಿರವನ್ನು ನಿರ್ಮಿಸಿದರು. 1833 ರಲ್ಲಿ ಅವರು ಬ್ರಿಸ್ಟಲಿನಲ್ಲಿ ತೀರಿಕೊಂಡನಂತರ ಈ ಹೊಸ ಸಮುದಾಯಕ್ಕೆ ಸಮರ್ಥ ನಾಯಕತ್ವ ಇಲ್ಲದೆ ಹೋಯಿತು.

ರಾಮಮೋಹನರ ಸಾವಿನಿಂದ ಬರಿದಾದ ಸ್ಥಾನವನ್ನು ದೇವೇಂದ್ರನಾಥರು ತುಂಬಬೇಕೆಂದು ವಿಧಿ ಸಂಕಲ್ಪಿಸಿದ್ದಂತೆ ಕಾಣುತ್ತದೆ. ರಾಮಮೋಹನರಂತೆ ಅವರೂ ನಿರಾಕಾರ ಸ್ವರೂಪ ಪರಮಾತ್ಮನ ಆರಾಧನೆಗೆ "ತತ್ತ್ವ ಬೋಧಿನಿ ಸಭೆ"ಯನ್ನು ಸ್ಥಾಪಿಸಿದರು. ಬ್ರಾಹ್ಮೋ ಸಮಾಜದ ಸ್ಥಾಪನೆಯಾದಾಗ ಅವರಿನ್ನೂ ಹನ್ನೆರಡು ವರ್ಷದ ಹುಡುಗ. ದೊಡ್ಡವರಾದಾಗ ಬ್ರಾಹ್ಮೋ ಸಮಾಜ ಮತ್ತು ಅದರ ವ್ಯವಹಾರಗಳತ್ತ ಸಹಜವಾಗಿ ಅವರ ಮನಸ್ಸು ಒಲಿಯಿತು. ಅವರು 1843 ರಲ್ಲಿ ಅದಕ್ಕೆ ಭೇಟಿಕೊಟ್ಟಾಗ ಅದು ಅನುಸರಿಸುತ್ತಿದ್ದ ತತ್ತ್ವಗಳು ತಮ್ಮ ತತ್ತ್ವಗಳನ್ನೇ ಹೋಲುತ್ತಿದ್ದುದನ್ನು ಕಂಡರು. ಅದನ್ನು ತಾವು ವಹಿಸಿಕೊಂಡು ತಾವು ಸ್ಥಾಪಿಸಿದ್ದ ಸಭೆಯನ್ನು ವಿಸರ್ಜಿಸಿದರು.

ಸಮಾಜಕ್ಕೆ ಪ್ರಸಾರ ದೊರಕಿಸಿಕೊಡಲು ಅವರು 1843 ರಲ್ಲಿ 'ತತ್ತ್ವ ಬೋಧಿನಿ ಪತ್ರಿಕಾ' ಎಂಬ ಪತ್ರಿಕೆಯನ್ನು ಸ್ಥಾಪಿಸಿದರು. ಶೈಶವದಲ್ಲಿದ್ದ ಈ ಸಮುದಾಯದ ಉದ್ದೇಶವನ್ನು ಸಾರ್ಥಗೊಳಿಸುವುದೇ ಇದರ ಮುಖ್ಯ ಗುರಿಯಾಗಿದ್ದರೂ, ಅವರ ದೂರದೃಷ್ಟಿ ಮತ್ತು ಕಲ್ಪನಾಶಕ್ತಿಗಳಿಂದ ಇದು ಅವರ ಕಾಲದಲ್ಲಿ ಸಂಸ್ಕೃತಿಯ ಪ್ರಮುಖವಾಣಿಯಾಯಿತು,

ಅವರ ಸಮರ್ಥ ನಾಯಕತ್ವದಲ್ಲಿ ಹೊಸ ಸಮುದಾಯ ಮತ್ತೆ ವರ್ಧಿಸಿತು. ಸ್ವಲ್ಪಕಾಲದಲ್ಲೆ ಈ ನವಧಾರ್ಮಿಕ ಅನುಷ್ಠಾನಕ್ಕೆ ಸುಸಂಸ್ಥಾಪಿತ ಧರ್ಮದ ಮಾನ್ಯತೆಯನ್ನು ಗಳಿಸಿಕೊಡಲು ಅವರು ನಿರ್ಧರಿಸಿದರು, ಅವರ ದಿಗ್ದರ್ಶನದಲ್ಲಿ ಬ್ರಹ್ಮ ಧರ್ಮವಾಗಿ ಪರಿವರ್ತನೆಗೊಂಡಿತು. ಬಂಗಾಳಿ ಸಂವತ್ಸರದಂತೆ 1250 ರ ಪೌಷ ಸಪ್ತಮಿಯಂದು (ಅಂದರೆ, 1843 ರ ಡಿಸೆಂಬರ್ 23 ರಂದು) ಅವರು ತಮ್ಮ ಇಪ್ಪತ್ತು ಮಂದಿ ಅನುಯಾಯಿಗಳೊಂದಿಗೆ ಈ ಹೊಸ ಧರ್ಮದ ದೀಕ್ಷೆಯನ್ನು ಸ್ವೀಕರಿಸಿದರು. ಅಂದಿನಿಂದ ಈ ದಿನವನ್ನು ಆ ಸಮುದಾಯ ಒಂದು ಪವಿತ್ರ ದಿನವನ್ನಾಗಿ ಆಚರಿಸುತ್ತ ಬಂದಿದೆ.

ಕಟ್ಟ ಕಡೆಗೆ ಅವರ ಜನ್ಮ ಸಹಜ ಭಗವದ್ಭಕ್ತಿಯ ಅಭಿವ್ಯಕ್ತಿಗೆ ಯೋಗ್ಯವಾದ ಅವಕಾಶ ದೊರೆಕಿದಂತಾಯಿತು. ಕ್ರಮೇಣ ಅವರು ಪ್ರಾಪಂಚಿಕ ವ್ಯವಹಾರಗಳಿಂದ ದೂರವಾದರು ತಮ್ಮೆಲ್ಲ ಶಕ್ತಿಯನ್ನೂ ತಾವು ಸ್ವೀಕರಿಸಿದ ಧರ್ಮಕ್ಕೆ ಅರ್ಪಿಸಿದರು. ಅವರು ಎಷ್ಟು ಚೈತನ್ಯದಿಂದ ದುಡಿದರೆಂದರೆ, 1858 ರ

ಹೊತ್ತಿಗೆ ಅವರು ಬಂಗಾಳದಲ್ಲೆಲ್ಲ ಶಾಖೆಗಳನ್ನು ಪ್ರಾರಂಭಿಸಿದರಲ್ಲದೆ ದೂರದ ಉತ್ತರ ಪ್ರದೇಶದ ಬರ್ಲಿಯಲ್ಲೂ ಶಾಖೆಯನ್ನು ತೆರೆದರು.

ಅವರು ಶ್ರದ್ಧೆಯಿಂದ ಕೆಲಸ ಮಾಡಿದುದರಿಂದ ಅವರು ಸ್ವೀಕರಿಸಿದ್ದ ಧರ್ಮ ವರ್ಧಿಸಿದರೂ ಕುಟುಂಬದ ವಾಣಿಜ್ಯ ಸಂಸ್ಥೆಗಳು ಅಲಕ್ಷ್ಯಕ್ಕೆ ಗುರಿಯಾಗಿ ಬಾಡಿ ಹೋದವು. ಅವರ ತಂದೆ ದ್ವಾರಕನಾಥರು ಬದುಕಿದ್ದಷ್ಟು ಕಾಲ ಏನೂ ತೊಂದರೆ ಯಾಗಲಿಲ್ಲ, ಆದರೆ ಅವರು ನಿಧನರಾದ ಮೇಲೆ ಈ ಅಲಕ್ಷ್ಯ ಅನರ್ಥಕ್ಕೆ ಎಡೆಕೊಟ್ಟಿತು. ಅವರ ತಂದೆ ತೀರಿಕೊಂಡ ಒಂದೇ ವರ್ಷದೊಳಗೆ 1847 ರಲ್ಲಿ ಯೂನಿಯನ್ ಬ್ಯಾಂಕ್ ಕುಸಿಯಿತು. ಮರುವರ್ಷ "ಕಾರ್, ಟ್ಯಾಗೊರ್ ಕಂಪೆನಿ" ಮುಚ್ಚಿ ಹೋದದ್ದರಿಂದ ಇನ್ನೂ ಗಂಭೀರದ ಪರಿಣಾಮ ಉಂಟಾಯಿತು. ಕಂಪೆನಿಯು ಸಾಲಗಾರರಿಗೆ ಕೊಡಬೇಕಾಗಿದ್ದ ಹಣ ಬಹು ದೊಡ್ಡ ಮೊತ್ತವಾಗಿತ್ತು. ಕಂಪೆನಿಯು ಪಾಲುದಾರ ಸಂಸ್ಥೆಯಾದುದರಿಂದ ಈ ಸಾಲಗಳನ್ನು ತೀರಿಸಲು ಸಂಸಾರದ ಆಸ್ತಿಯನ್ನೆಲ್ಲ ತೆಗೆದುಕೊಂಡು ಬಿಡುವ ಸಾಧ್ಯತೆಯಿತ್ತು.

ಸಂಸಾರವು ಈಗ ದುಸ್ತರವಾದ ಆರ್ಥಿಕ ಹಾನಿಯನ್ನು ಎದುರಿಸಬೇಕಾಯಿತು. ಇದನ್ನು ಅತ್ಯಂತ ಅಚಲಿತ ಸ್ಥೈರ್ಯದಿಂದ ಎದುರಿಸಿ ದೇವೇಂದ್ರನಾಥರು ಆದರ್ಶವೆನಿಸಬಹುದಾದ ನೈತಿಕ ಧೈರ್ಯವನ್ನು ತೋರಿಸಿದರು. ಈ ವಿಪತ್ತು ಅವರ ಉನ್ನತ ನೈತಿಕ ಗುಣಗಳನ್ನು ಬೆಳಕಿಗೆ ತರುವ ಅವಕಾಶವೂ ಆಯಿತು. ಈ ಆರ್ಥಿಕ ವಿನಾಶದಿಂದ ಅವರಿಗೆ ಉಳಿಯುತ್ತಿದ್ದುದು ದಟ್ಟ ದಾರಿದ್ರ್ಯ ಮಾತ್ರ. ಆದರೆ ಅವರ ತಂದೆಯವರು ದೂರ ದೃಷ್ಟಿಯಿಂದ ಸಾಲಗಾರರು ಮುಟ್ಟಲು ಸಾಧ್ಯವಾಗದಂತೆ ಬಾಡಿಗೆ ದುಡಿಯುವ ಕೆಲವು ತೋಟಗಳನ್ನು ಒಂದು ನ್ಯಾಸಪತ್ರದ ಮೂಲಕ ಪ್ರತ್ಯೇಕವಾಗಿಟ್ಟಿದ್ದರು. ಆದರೆ ದೇವೇಂದ್ರನಾಥರು ಇದರ ಪ್ರಯೋಜನ ಪಡೆದುಕೊಳ್ಳಲು ಇಷ್ಟಪಡಲಿಲ್ಲ. ಅದರ ಬದಲು, ಸಂಸಾರದ ಸಾಲಗಳನ್ನು ತೀರಿಸಲು ಈ ತೋಟಗಳ ವರಮಾನವನ್ನೂ ಕೊಡಲು ತಾವೇ ಮುಂದಾದರು. ಈ ಉದಾತ್ತ ನಡವಳಿಕೆಯನ್ನು ಸಾಲಗಾರರು ಮೆಚ್ಚಿದರು. ಈ ಜಮೀನುಗಳಿಂದ ಬಂದ ವರಮಾನದಲ್ಲಿ ಸಂಸಾರಕ್ಕೆ ಪ್ರತಿ ವರ್ಷ 25,000 ರೂಪಾಯಿಗಳನ್ನು ಕೊಡಬೇಕೆಂದು ಉಳಿದ ಹಣವನ್ನು ಸಾಲಗಳ ಮರುಪಾವತಿಗಾಗಿ ಬಳಸಿಕೊಳ್ಳಬೇಕೆಂದು ಒಪ್ಪಿಗೆಯಾಯಿತು. ದೇವೇಂದ್ರನಾಥರ ಸ್ಫೂರ್ತಿಯಿಂದ ಕುಟುಂಬವು ಈ ಅಗ್ನಿಪರೀಕ್ಷೆಯನ್ನು ಹರ್ಷದಿಂದಲೇ ಎದುರಿಸಿತು.

ಭೋಗ ವಸ್ತುಗಳನ್ನೆಲ್ಲ ಮಾರಿದ್ದಾಯಿತು, ಕಟ್ಟುನಿಟ್ಟಾದ ಮಿತವ್ಯಯದಿಂದ ಕಂಪೆನಿಯು ದಿವಾಳಿಯಾದ ಹತ್ತು ವರ್ಷಗಳಲ್ಲಿ ಸಾಲವಷ್ಟನ್ನೂ ತೀರಿಸಲಾಯಿತು. ಅನಂತರ ಈ ಜಮೀನುಗಳ ಇಡೀ ವರಮಾನವು ಸಂಸಾರಕ್ಕೆ ಉಳಿಯಿತು. ಶ್ರೀಮಂತ ರೀತಿಯಲ್ಲಿ ಅಲ್ಲದಿದ್ದರೂ ನೆಮ್ಮದಿಯಿಂದ ಸಂಸಾರ ಬಾಳು ವಂತಾಯಿತು.

ದೇವೇಂದ್ರನಾಥರು ಮುಂದೆ ಹಲವಾರು ವರ್ಷಗಳು ಬ್ರಾಹ್ಮೋ ಸಮಾಜ ದಲ್ಲಿ ಸಕ್ರಿಯಾ ಆಸಕ್ತಿಯನ್ನಿಟುಕೊಂಡಿದ್ದರು. ಅವರ ಈ ಕೆಲಸದಲ್ಲಿ ಆ ಕಾಲದ ಅತ್ಯಂತ ತೀಕ್ಷ್ಣ ಬುದ್ಧಿಯ ಒಬ್ಬ ಯುವಕ, ಕೇಶವ ಚಂದ್ರ ಸೇನರ ನೆರವು ದೊರೆ ಯಿತು. ಕಲ್ಕತ್ತದ ಪ್ರತಿಷ್ಠಿತ ಕುಟುಂಬವೊಂದರಲ್ಲಿ ಹುಟ್ಟಿದ ಅವರು ತಮ್ಮ ತೀಕ್ಷ್ಣ ಬುದ್ಧಿಯಿಂದ ಮತ್ತು ವಾಕ್‌ಪಟುತ್ವ ಸಾಮರ್ಥ್ಯದಿಂದ ದೇವೇಂದ್ರನಾಥರ ಹೃದಯವನ್ನು ಗೆದ್ದುಕೊಂಡರು. ಅವರಲ್ಲಿ ಒಬ್ಬ ಸಮರ್ಥ ಸಹಾಯಕನನ್ನು ಕಂಡ ದೇವೇಂದ್ರನಾಥರು ಅವರನ್ನು 1862 ರಲ್ಲಿ ಬ್ರಾಹ್ಮೋ ಸಮಾಜದ ಆಚಾರ್ಯ ಪೀಠಕ್ಕೇರಿಸಲು ಹಿಂದೆಗೆಯಲಿಲ್ಲ. ಅವರಿಗೆ ಬ್ರಹ್ಮಾನಂದ ಎಂಬ ಪ್ರಶಸ್ತಿಯನ್ನು ಕೊಟ್ಟರು. ಅವರ ಜೋಡಿ ನಾಯಕತ್ವದಲ್ಲಿ ಸಮಾಜದ ಸ್ಥಿತಿ ಬಹು ಚೆನ್ನಾಗಿ ಅಭಿವೃದ್ಧಿಗೊಂಡಿತು.

ದುರದೃಷ್ಟದಿಂದ, ಮುಂದೆ ಕೆಲವೇ ವರ್ಷಗಳಲ್ಲಿ ಸಮಾಜದಲ್ಲಿ ಒಡಕು ಕಾಣಿಸಿಕೊಂಡಿತು. ಸಮಾಜದ ನಾಯಕರು ಪರಸ್ಪರರಿಂದ ದೂರವಾದರು. ಹೊಸ ಧರ್ಮ ಹೇಗೆ ಬೆಳೆಯಬೇಕೆಂಬ ವಿಷಯದಲ್ಲಿ ಸಮುದಾಯದ ಕಿರಿ ವಯಸ್ಸಿನವರ ಅಭಿಪ್ರಾಯಗಳು ದೇವೇಂದ್ರನಾಥರ ಅಭಿಪ್ರಾಯಗಳಿಂದ ಭಿನ್ನವಾಗಿದ್ದವು. ಆ ಗುಂಪಿನವರಲ್ಲಿ ವಿಪರೀತದ ವಿಚಾರಗಳು ಮೊಳಕೆ ಇಟ್ಟವು. ಈ ಯುವ ವಿಭಾಗ ದವರು ತೀವ್ರ ರೀತಿಯ ಕ್ರಮಗಳನ್ನು ಕೈಗೊಳ್ಳಲು ಬಯಸಿದರು. ಇಂತಹ ಕ್ರಮಗಳಿಂದ ಸಮಾಜದ ಮತ್ತು ಇನ್ನೂ ವಿಶಾಲವಾದ ಹಿಂದೂ ಸಮುದಾಯದ ನಡುವೆ ಕಂದರ ಏರ್ಪಡುತ್ತಿತ್ತು. ಆದರೆ ದೇವೇಂದ್ರನಾಥರಿಗೆ ತಮ್ಮ ಧರ್ಮದ ರಾಷ್ಟ್ರೀಯ ಲಕ್ಷಣವನ್ನು ಉಳಿಸಿಕೊಳ್ಳುವ ತೀವ್ರ ಅಪೇಕ್ಷೆಯಿತ್ತು. ಆದುದರಿಂದ ಅವರು ಹಿಂದೂಗಳೊಡನೆ ಸಂಬಂಧವನ್ನು ಕಡಿದುಕೊಳ್ಳಲು ಒಪ್ಪುವ ಸಂಭವವೇ ಇರಲಿಲ್ಲ. ಹಿಂದೂ ಧರ್ಮದ ಪರಿಧಿಯೊಳಗೇ ಉಳಿದು ಹೊಸ ಧರ್ಮದ ಪ್ರಗತಿಶೀಲ ವಿಚಾರಗಳನ್ನು ಅದಕ್ಕೆ ಹರಿಸುವುದು ಅವರ ಯೋಜನೆಯಾಗಿತ್ತು.

ಅವರ ಅಭಿಮಾನಗಳು ಏರ್ಪಡಿಸಿದ ಸತ್ಕಾರ ಕೂಟದಲ್ಲಿ ಉತ್ತರ ಕೊಡುತ್ತ ಅವರು ಆಡಿದ ಮಾತುಗಳಿಂದ ಇದು ದೃಢಪಡುತ್ತದೆ : "ನಾನು ಬಹು ಆಳವಾಗಿ ಪ್ರೀತಿಸುವ ಹಿಂದೂಸ್ತಾನದ ಹಿಂದೂ ಸಮುದಾಯವನ್ನು ಪವಿತ್ರ ಬ್ರಾಹ್ಮೋ ಧರ್ಮದೊಡನೆ ನಿಕಟ ಸಂಪರ್ಕದ ಮೂಲಕ ಸುಧಾರಿಸಿ ಬೆಳೆಸುವುದು ನನ್ನ ಪವಿತ್ರ ಕಾರ್ಯ."

ಆದುದರಿಂದ ಅವರು ಸಂಯಮದ ದಾರಿಯನ್ನು ಹಿಡಿಯಬೇಕೆಂದು ವಿನಂತಿ ಮಾಡಿದರು. ಆದರೆ ಕೇಶವ ಚಂದ್ರರ ನಾಯಕತ್ವದಲ್ಲಿದ್ದ ಯುವಕರಿಗೆ ಅವರ ಸಾವಧಾನತೆಯ ಬುದ್ಧಿವಾದವನ್ನು ಕೇಳುವಷ್ಟು ತಾಳ್ಮೆಯಿರಲಿಲ್ಲ. ಇದರಿಂದ ಇಬ್ಬರು ನಾಯಕರ ನಡುವೆ ಬಿಕ್ಕಟ್ಟು ತಲೆದೋರಿತು. ಇದು ಎಷ್ಟು ತೀವ್ರವಾಯಿತೆಂದರೆ ಕಡೆಗೆ ಕೇಶವ ಚಂದ್ರರು ಮೂಲ ಸಮುದಾಯದಿಂದ ಸಿಡಿದು ಹೋಗಿ "ಭಾರತ ವರ್ಷೀಯ ಬ್ರಾಹ್ಮೋಮಂದಿರ" ಎಂಬ ಹೆಸರಿನ ಹೊಸದೊಂದು ಸಮುದಾಯವನ್ನೇ ಸ್ಥಾಪಿಸುವ ತೀವ್ರ ಹೆಜ್ಜೆಯನ್ನಿಟ್ಟರು. ತಮ್ಮ ಸಮುದಾಯಕ್ಕಾಗಿಯೇ ಅವರು 1896 ರಲ್ಲಿ ಪ್ರತ್ಯೇಕವಾದ ಆರಾಧನಾಮಂದಿರವನ್ನು ಕಟ್ಟಿದರು. ದೇವೇಂದ್ರನಾಥರು ಮೊದಲಿನ ಸಮುದಾಯದ ನಾಯಕರಾಗಿ ಉಳಿದರು. ಹೊಸ ಸಮುದಾಯದಿಂದ ಅದನ್ನು ವಿಂಗಡಿಸಲು ಅದಕ್ಕೆ "ಆದಿಬ್ರಾಹ್ಮೋ ಸಮಾಜ" ಎಂಬ ಹೆಸರನ್ನು ಕೊಡಲಾಯಿತು.

ದೇವೇಂದ್ರನಾಥರಿಗೆ ಮೊಟ್ಟಮೊದಲ ಚಿಂತೆ ರಾಮಮೋಹನರು ಸ್ಥಾಪಿಸಿದ ಬ್ರಾಹ್ಮೋ ಪಂಥದ ಅಭಿವೃದ್ಧಿಯಾದರೂ ಅವರಿಗೆ ಮೂಲ ಹಿಂದೂ ಧರ್ಮದಲ್ಲಿ ಇರಲಿಲ್ಲ. ಹೊರಗಿನವರ ದಾಳಿಗಳಿಂದ ಹಿಂದೂ ಸಮಾಜವನ್ನು ರಕ್ಷಿಸುವುದು ತಮ್ಮ ಕರ್ತವ್ಯ ಎಂದು ಅವರು ತಿಳಿದಿದ್ದರು. ಅಗತ್ಯವಾದಾಗ ಅವರು ಹಿಂದೂಗಳ ನಾಯಕತ್ವವನ್ನು ವಹಿಸಿಕೊಳ್ಳಲು ಹಿಂದೆಗೆಯುತ್ತಿರಲಿಲ್ಲ. ಅಲೆಗ್ಸಾಂಡರ್ ಡಫ್ ಎನ್ನುವ ಕ್ರೈಸ್ತ ಮತವಿಚಾರ ಪ್ರಚಾರಕನು ಹಿಂದೂಗಳನ್ನು ಸೆಳೆದುಕೊಳ್ಳಲು ಅನುಸರಿಸಿದ ಸಂದೇಹಾಸ್ಪದವಾದ ವಿಧಾನಗಳಿಂದ ಅಂತಹ ಒಂದು ಸಂದರ್ಭ ಉಂಟಾಯಿತು. ಆತನು ತನ್ನ ಶಾಲೆಯಲ್ಲಿದ್ದ ಉಮೇಶ ಚಂದ್ರ ಸರ್ಕಾರ್ ಎಂಬ ಹದಿವಯಸ್ಸಿನ ಹುಡುಗನಿಗೆ ಕ್ರೈಸ್ತ ಮತವನ್ನು ಸೇರಲು ಮನವೊಲಿಸಿದ್ದನು. ಸರ್ಕಾರ್ ತನಗಿಂತ ಚಿಕ್ಕ ವಯಸ್ಸಿನ ಹುಡುಗಿಯನ್ನು ಮದುವೆಯಾಗಿದ್ದ. ಡಫ್ ಅವರಿಬ್ಬರನ್ನೂ ಒಟ್ಟಿಗೆ ಮತಾಂತರಗೊಳಿಸುವ ಯೋಚನೆ ಮಾಡಿದ. ಆ ಚಿಕ್ಕ

ಹುಡುಗಿ ಪ್ರಯಾಣ ಮಾಡುತ್ತಿದ್ದಾಗ ಅವಳನ್ನು ಅಪಹರಿಸಲಾಯಿತು. ದೇವೇಂದ್ರನಾಥರಿಗೆ ಈ ಸುದ್ದಿ ತಿಳಿದಾಗ ಅವರು ರೋಷಗೊಂಡರು. ಇಂತಹ ಕೊಳಕು ಮಾರ್ಗಗಳಿಂದ ಮತಾಂತರಗೊಳಿಸುವುದನ್ನು ತಡೆಯಲು ಹಿಂದೂ ಸಮುದಾಯದ ಪರವಾಗಿ ಒಂದು ತೀವ್ರವಾದ ಚಳವಳಿಯನ್ನೇ ಪ್ರಾರಂಭಿಸಿದರು. ಅವರ ಪ್ರಯತ್ನದಿಂದ ಮತಪ್ರಚಾರಕರ ವಿರುದ್ಧ ಸಾರ್ವಜನಿಕ ಅಭಿಪ್ರಾಯವನ್ನು ಬೆಳೆಸಲು ಒಂದು ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಯಿತು, ಮತ್ತು ಮತ ಪ್ರಚಾರಕರ ಶಾಲೆಗಳನ್ನು ಬಹಿಷ್ಕರಿಸಲು ಚಳವಳಿಯನ್ನು ಪ್ರಾರಂಭಿಸಲಾಯಿತು.

ಕೇಶವ ಚಂದ್ರರಲ್ಲಿ ದೇವೇಂದ್ರನಾಥರಿಗೆ ಬಹು ಆದರ ಎಂಬುದು ಸ್ಪಷ್ಟ. ಕೇಶವ ಚಂದ್ರರು ದೂರವಾದ ಮೇಲೆ ದೇವೇಂದ್ರನಾಥರಿಗೆ ತಮ್ಮ ಪಂಥದ ಪರವಾಗಿ ಕೆಲಸ ಮಾಡುವುದರಲ್ಲಿ ಆಸಕ್ತಿ ಮಾಯವಾಯಿತು. ಅವರು ಹಿಮಾಲಯದಲ್ಲಿ ಧ್ಯಾನದಲ್ಲಿ ಕಾಲ ಕಳೆಯ ಪ್ರಾರಂಭಿಸಿದರು. ಮತ್ತು ವಿರಕ್ತ ಜೀವನಕ್ಕೆ ಮರಳಿದರು. ಏಕಾಂತ ಸ್ಥಳಗಳನ್ನು ಹುಡುಕುವಾಗಲೇ ಬೋಲ್‌ಪುರದ ಬಳಿಯ ಪ್ರಸಿದ್ಧ ಮೂಲೆ ತಾಣ ಅವರ ಕಣ್ಣಿಗೆ ಬಿದ್ದುದು. ಇಲ್ಲಿ ಅವರು ಶಾಂತಿನಿಕೇತನವನ್ನು ಪ್ರಾರಂಭಿಸಿದರು. ಮುಂದೆ ಅವರ ಮಗ ರವೀಂದ್ರನಾಥರ ಹೆಸರಿನ ಜತೆಯಾಗಿ ಈ ಸ್ಥಳ ಪ್ರಸಿದ್ಧವಾಯಿತು. ತೀರ ಆಗತ್ಯವಾದಾಗ ಬಿಟ್ಟು ಅವರು ಮನೆಗೆ ಹಿಂದಿರುಗುತ್ತಲೇ ಇರಲಿಲ್ಲ. ಇಂತಹ ಒಂದು ಸಂದರ್ಭದಲ್ಲಿ ಅವರು ತಮ್ಮ ಕಡೆಯ ಮಗ ರವೀಂದ್ರನಾಥನನ್ನು ತಮ್ಮೊಡನೆ ಹಿಮಾಲಯಕ್ಕೆ ಕರೆದೊಯ್ದರು. ಡಾಲ್ ಹೌಸಿಯ ಹತ್ತಿರ ಬಕ್ರೋಟ ಬಳಿ ಅವರ ಜೊತೆಗೆ ಮೂರು ತಿಂಗಳನ್ನು ಕಳೆದರು. ಸುಲಭವಾಗಿ ಪ್ರಭಾವಿತರಾಗುವ ಎಳೆಯ ರವೀಂದ್ರನ ಮನಸ್ಸಿನ ಮೇಲೆ ಈ ನಿಕಟವಾದ ಸಹವಾಸ ಅಲ್ಪಕಾಲದ್ದಾದರೂ ಗಾಢವಾದ ಪರಿಣಾಮವನ್ನು ಉಂಟು ಮಾಡಿತು. ಸೂಕ್ತವಾದ ಘಟ್ಟದಲ್ಲಿ ನಾವು ಇದನ್ನು ವಿವರವಾಗಿ ಗುಮನಿಸ ಬೇಕಾಗುತ್ತದೆ.

ಇದರ ನಂತರ, ಇಳಿ ವಯಸ್ಸೂ ಅವರಿಗೆ ತೊಂದರೆ ಕೊಡುತ್ತಿದ್ದ ಕಾಲದಲ್ಲಿ ದೇವೇಂದ್ರನಾಥರ ಆರೋಗ್ಯ ಕೆಟ್ಟಿತು. ವೈದ್ಯರ ಸಲಹೆಯಂತೆ ಅವರು ಹಿಮಾಲಯದಲ್ಲಿ ಎತ್ತರದ ಬೆಟ್ಟಗಳಲ್ಲಿ ವಾಸಿಸುವುದನ್ನು ಬಿಡಬೇಕಾಯಿತು. ಆದರೂ ಅವರು ಮನೆಗೆ ಹಿಂದಿರುಗಲಿಲ್ಲ.

ಅವರಿಗೆ ಅಂತರ್ವಾಣಿಯೊಂದು ಕೇಳಿಸಿದಾಗಲೇ ಅವರು 1898 ರಲ್ಲಿ ತಮ್ಮ ಪೂರ್ವಿಕರ ಮನೆಗೆ ಹಿಂದಿರುಗಲು ತೀರ್ಮಾನಿಸಿದರು. ಸಾವು ತಮ್ಮನ್ನು ಸಮೀಪಿ ಸುತ್ತಿದೆ ಎಂದು ಆವರು ನಿರೀಕ್ಷಿಸಲು ಪ್ರಾರಂಭಿಸಿ, ಅದಕ್ಕಾಗಿ ಸಿದ್ಧವಾಗಲು ನಿರ್ಧರಿಸಿದರು. ಅವರ ಮನೆಯ ಮೂರನೆಯ ಅಂತಸ್ತಿನಲ್ಲಿ ಅವರಿಗೆ ಪ್ರಿಯವಾದ ಕೊಠಡಿಯಲ್ಲಿ ವಾಸಿಸಲಾರಂಭಿಸಿದರು. ಅಲ್ಲಿ ಧ್ಯಾನ ಮತ್ತು ಧಾರ್ಮಿಕ ಪ್ರವಚನಗಳಲ್ಲೇ ಅವರು ಸಂಪೂರ್ಣವಾಗಿ ಮಗ್ನರಾದರು. ಅವರ ವೈಯಕ್ತಿಕ ಅಗತ್ಯವನ್ನು ನೋಡಿಕೊಳ್ಳಲು ಆವರ ಜೊತೆಗಿರುತ್ತಿದ್ದವರೆಂದರೆ ಅವರ ಆಪ್ತ ಕಾರ್ಯದರ್ಶಿ ಪ್ರಿಯನಾಥ ಶಾಸ್ತ್ರಿ ಮತ್ತು ಅವರ ವಿಧವೆಯಾದ ಮೊದಲನೆಯ ಮಗಳು ಸೌದಾಮಿನಿ ದೇವಿ. ಅವರು 1905 ರ ಜನವರಿಯಲ್ಲಿ ಮರಣ ಹೊಂದಿದರು.

ನಾವು ಆಗಲೇ ಕಂಡಿರುವಂತೆ ದೇವೇಂದ್ರನಾಥರು ಪರಸ್ಪರ ವಿರುದ್ಧವಾದ ಹಲವು ಸದ್ಗುಣಗಳ ತವರಾಗಿದ್ದರು. ಮನೆಯ ವ್ಯವಹಾರಗಳಿಂದ ನಿರ್ಲಿಪ್ತರಾಗಿದ್ದ ರೆಂಬುದು ಅವರು ತಮ್ಮ ಆಸ್ತಿ ಭೂಮಿಕಾಣಿಗಳಿಗೆ ಆಗತ್ಯವಾದ ಗಮನ ಕೊಡುವು ದಕ್ಕೆ ಅಡ್ಡಿ ಬರಲಿಲ್ಲ. ಮತ್ತು, ಪರೋಕ್ಷವಾದ ಮೇಲ್ವಿಚಾರಣೆಯಿಂದ ಆವರು ದಕ್ಷವಾದ ನಿರ್ವಹಣೆಯನ್ನು ಸಾಧ್ಯ ಮಾಡಿಕೊಂಡರು. ತಮ್ಮ ಅಭ್ಯಾಸಗಳಲ್ಲಿ ಅವರು ಕ್ರಮವನ್ನು ಅನುಸರಿಸುತ್ತಿದ್ದರು. ಸಮತೋಲನದ ಸೊಗಸಾದ ಅರಿವಿತ್ತು ಅವರಿಗೆ. ತಮ್ಮ ಸಂಸಾರದ ಸದಸ್ಯರಿಗೆ ನೆಮ್ಮದಿಯ ಜೀವನ ಮತ್ತು ಯೋಗ್ಯ ವಿದ್ಯಾಭ್ಯಾಸ ದೊರೆಯುವುದೆಂದು ಖಚಿತ ಮಾಡಿಕೊಂಡರು ಅವರು. ಆದರೆ ಅವರಿಗೆ ಭೋಗ ಜೀವನಕ್ಕೆ ಅವಕಾಶ ಕೊಡುತ್ತಿರಲಿಲ್ಲ. ಅದರ ಬದಲು, ಸಾಂಸ್ಕೃತಿಕ ಚಟುವಟಿಕೆಗಳು ಅಥವಾ ರಾಷ್ಟ್ರೀಯ ಹಿತವನ್ನು ಸಾಧಿಸುವ ಕೆಲಸಗಳಿಗೆ ಸ್ವಲ್ಪವೂ ಅಸಮಾಧಾನವಿಲ್ಲದೆ ಹಣಕಾಸಿನ ನೆರವನ್ನು ನೀಡುತ್ತಿದ್ದರು. ತಮ್ಮ ಸಂಸಾರದಲ್ಲಿ ತಮ್ಮನ್ನು ಅವಲಂಬಿಸಿದವರನ್ನು ನಡೆಸಿಕೊಳ್ಳುವ ರೀತಿಯಲ್ಲಿ ಅವರು ತೋರಿಸಿದ ಸೊಗಸಾದ ಸಮತೋಲನ ಪ್ರಜ್ಞೆಯಿಂದಲೇ ಅವರ ಸಂಸಾರದವರು ಬಾಳಿನಲ್ಲಿ ಉತ್ತಮವಾದುದನ್ನೆಲ್ಲ ಉತ್ಸಾಹದಿಂದ ಬೆಳೆಸಿಕೊಳ್ಳುವಂತಹ ಅದ್ವಿತೀಯ ವಾತಾವರಣವನ್ನು ಸೃಷ್ಟಿಸಲು ಸಾಧ್ಯವಾಯಿತು. ಶ್ರೀಮಂತ ಮನೆಗಳ ಮಕ್ಕಳು ಸಾಮಾನ್ಯವಾಗಿ ತಮ್ಮ ಹಣವನ್ನು ಕೀಳು ಇಂದ್ರಿಯ ಸುಖಗಳಲ್ಲಿ ವ್ಯರ್ಥ ಮಾಡುತ್ತಾರೆ. ದೇವೇಂದ್ರನಾಥರ ಗಂಡು ಮಕ್ಕಳೂ ಹೆಣ್ಣು ಮಕ್ಕಳೂ ಸೊಸೆಯಿಂದಿರೂ ಈ ದಾರಿಯನ್ನು ಅನುಸರಿಸದೆ ಸಾಂಸ್ಕೃತಿಕ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲೇ ಸಂಪೂರ್ಣವಾಗಿ ಮಗ್ನರಾದರು.

ಅವರ ಮಕ್ಕಳಿಗೆ ಅವರಲ್ಲಿ ಪ್ರೀತಿ ಮತ್ತು ಗೌರವಗಳು ಇದ್ದವು. ತಮ್ಮ ತಂದೆಯ ಮನೋಧರ್ಮದಿಂದ ದಕ್ಕಿದ ಉತ್ತಮ ಫಲಗಳನ್ನು ಅವರು ಸಂಪೂರ್ಣವಾಗಿ ಮೆಚ್ಚಿಕೊಂಡರು. ಅವರ ಮೆಚ್ಚಿಕೆಯು ರವೀಂದ್ರನಾಥರ ಈ ಮಾತುಗಳಲ್ಲಿ ಸೊಗಸಾಗಿ ಪ್ರತಿಬಿಂಬಿತವಾಗಿದೆ :

"ಶ್ರೀಮಂತಿಕೆ ಮತ್ತು ಸಮೃದ್ಧಿಗಳ ನಡುವೆ ಬೆಳೆದರೂ ನಮ್ಮನ್ನು ಆಡಂಬರ ಮತ್ತು ಭೋಗಾಭಿಲಾಷೆಗಳ ಕಳಂಕದಿಂದ (ಈ ರೀತಿಯಲ್ಲಿ) ಅವರು ನಮ್ಮನ್ನು ರಕ್ಷಿಸಿದರು. ಹೀಗೆ ಮಾಡುವಾಗ, ಆಧ್ಯಾತ್ಮಿಕ ಸಾಧನೆಯ ಸ್ವಚ್ಛಂದ ಗಗನದಲ್ಲಿ ವಿಹರಿಸಲು ತಮ್ಮ ಹಕ್ಕನ್ನು ಸ್ಥಾಪಿಸಲು ಅವರಿಗೆ ಸಾಧ್ಯವಾಗುವಂತೆ ಶ್ರೀಮಂತಿಕೆಯ ಹೊನ್ನ ಪಂಜರದ ಬಾಗಿಲನ್ನು ಸ್ವಲ್ಪ ಮಟ್ಟಿಗೆ ಅವರಿಗೆ ತೆರೆದಿದ್ದಕ್ಕೆ ಅವರಿಗಿಂತ ಉತ್ತಮ ಸ್ಥಿತಿಯಲ್ಲಿದ್ದವರಿಗಿಂತ ಇವರು ಅದೃಷ್ಟವಂತರಾಗಿದ್ದರೆಂಬುದು ಎಲ್ಲರೂ ಒಪ್ಪಿಕೊಳ್ಳುವಷ್ಟು ಸ್ಪಷ್ಟವಾಗಿದೆ. ಇದಕ್ಕೆ ಕಾರಣ ಅವರ ತಂದೆಯ ವಿವೇಕದ ಕ್ರಮ."

ಅವರ ಪರಿಚಯವಾದವರು ಅವರನ್ನು, ಪೂಜ್ಯ ಭಾವನೆಯಿಂದ ಕಾಣುತ್ತಿದುದು ಆಶ್ಚರ್ಯವೇನಲ್ಲ. ಅವರ ಹಲವಾರು ಸದ್ಗುಣಗಳು ಅವರ ಸಮಕಾಲೀನರ ಗಮನವನ್ನು ಸೆಳೆಯದಿರುವುದು ಸಾಧ್ಯವಿರಲಿಲ್ಲ. ಅವರು ದೇವೇಂದ್ರನಾಥರಿಗೆ 'ಮಹರ್ಷಿ' ಎಂಬ ಬಿರುದನ್ನು ಕೊಟ್ಟಿದ್ದು ತೀರ ಉಚಿತವೇ ಆಗಿತ್ತು.

ಬಹು ದೊಡ್ಡ ಸಂಸಾರವಿದ್ದದ್ದು ದೇವೇಂದ್ರನಾಥರ ಭಾಗ್ಯ. ಅವರಿಗೆ ಒಂಬತ್ತು ಮಂದಿ ಗಂಡು ಮಕ್ಕಳು, ಆರು ಮಂದಿ ಹೆಣ್ಣು ಮಕ್ಕಳು. ಅವರಲ್ಲಿ ಒಬ್ಬ ಮಗಳೂ ಇಬ್ಬರು ಗಂಡು ಮಕ್ಕಳೂ ತೀರ ಚಿಕ್ಕ ವಯಸ್ಸಿನಲ್ಲಿ ತೀರಿಕೊಂಡರು. ಆ ಮಗಳೇ ಮೊದಲನೆಯ ಮಗು. ಇಬ್ಬರು ಗಂಡು ಮಕ್ಕಳಲ್ಲಿ ಒಬ್ಬ ಅವರ ಕಡೆಯ ಮಗು. ಆದರೆ ನಿರೂಪಣೆಯ ಸೌಕರ್ಯಕ್ಕಾಗಿ ನಾವು ಅವರ ಎರಡನೆಯ ಮಗಳು ಸೌದಾಮಿನಿ ದೇವಿಯನ್ನು ಮೊದಲ ಮಗಳೆಂದೂ, ದೇವೇಂದ್ರನಾಥರ ಹದಿನಾಲ್ಕನೆಯ ಮಗು ಮತ್ತು ಎಂಟನೆಯ ಮಗನಾದ ರವೀಂದ್ರನಾಥರನ್ನು ಸಂಸಾರದ ಅತಿ ಕಿರಿಯ ಮಗುವೆಂದು ಕರೆಯುತ್ತೇವೆ. ಪ್ರಬುದ್ಧ ವಯಸ್ಸಿನವರೆಗೆ ಉಳಿದ ಇತರರಲ್ಲಿ ಕುಟುಂಬದಲ್ಲಿ ಸಾಂಸ್ಕೃತಿಕ

ವಾತಾವರಣವನ್ನು ನಿರ್ಮಿಸುವ ಕಾರ್ಯದಲ್ಲಿ ಕ್ರಿಯಾಶೀಲ ಪಾತ್ರವನ್ನು ವಹಿಸಿದವರನ್ನು ಮಾತ್ರ ಕುರಿತು ಪ್ರಸ್ತಾಪಿಸುತ್ತೇವೆ.

ದೇವೇಂದ್ರನಾಥರ ಎರಡನೆಯ ತಮ್ಮನ ಸಂಸಾರವೂ ಅದೇ ಆವರಣದಲ್ಲಿ ವಾಸವಾಗಿದ್ದು ಕುಟುಂಬದ ಜಮೀನುಗಳ ಆದಾಯದಲ್ಲಿ ಪಾಲು ಪಡೆಯುತ್ತಿತ್ತು. ಎರಡು ಸಂಸಾರಗಳು ಬೇರೆ ಬೇರೆ ಮನೆಗಳಲ್ಲಿ ವಾಸವಾಗಿದ್ದರೂ ಅವು ಎಷ್ಟು ಆತ್ಮೀಯತೆಯಿಂದ ಬಾಳುತ್ತಿದ್ದರು ಎಂದರೆ ಸೋದರರ ಮಕ್ಕಳು ತಾವು ಒಂದೇ ಸಂಸಾರದ ಸದಸ್ಯರು ಎನ್ನುವಂತೆ ನಡೆದುಕೊಳ್ಳುತ್ತಿದ್ದರು. ಆದುದರಿಂದ ಗಿರೀಂದ್ರನಾಥರ ಇಬ್ಬರು ಮಕ್ಕಳು, ಗಣೇಂದ್ರನಾಥ ಮತ್ತು ಗುಣೇಂದ್ರನಾಥರಿಬ್ಬರೂ ಸಂಸ್ಕೃತಿಯ ವಿಶಿಷ್ಟ ಆವರಣವನ್ನು ಸೃಷ್ಟಿಸಿದ ಗುಂಪಿಗೆ ಸೇರುತ್ತಾರೆ. ಅವರಲ್ಲಿ, ವಯಸ್ಸಿನ ದೃಷ್ಟಿಯಿಂದ ಗಿರೀಂದ್ರನಾಥರ ಹಿರಿಯ ಮಗ ಗಣೇಂದ್ರನಾಥನು ದೇವೇಂದ್ರನಾಥರ ಎರಡನೆಯ ಮಗ ಸತ್ಯೇಂದ್ರನಾಥನಿಗಿಂತ ದೊಡ್ಡವನು. ಆದರೆ ಅವನ ಹಿರಿಯ ಮಗ ದ್ವಿಜೇಂದ್ರನಾಥನಿಗಿಂತ ಚಿಕ್ಕವನು. ಆದುದರಿಂದ ದ್ವಿಜೇಂದ್ರನಾಥರು ವಯಸ್ಸಿನ ಕಾರಣದಿಂದ 'ಬಾರ್ದ' ಅಥವ ಹಿರಿಯಣ್ಣನ ವಿಶೇಷ ಗೌರವದ ಸ್ಥಾನವನ್ನು ಪಡೆದುಕೊಂಡರೆ ಗಣೇಂದ್ರನಾಥ ಎರಡನೆಯ ಅಣ್ಣ ಅಥವಾ 'ಮೇಜ್‌ದಾ'ನ ಸ್ಥಾನವನ್ನು ಪಡೆದುಕೊಂಡ. ಎರಡು ಸಂಸಾರಗಳ ನಡುವಿನ ಆತ್ಮೀಯತೆಗೆ ಇದು ಇನ್ನೊಂದು ಸಾಕ್ಷ್ಯ.

ಅದೃಷ್ಟವಶಾತ್, ಕುಟುಂಬದಲ್ಲಿ ಹಿರಿಯಣ್ಣನ ಪಾತ್ರವನ್ನು ನಿರ್ವಹಿಸಲು ಆಗತ್ಯವಾದ ಎಲ್ಲ ಸದ್ಗುಣಗಳೂ ದ್ವಿಜೇಂದ್ರನಾಥರಿಗಿದ್ದವು (1840-1926). ಐಹಿಕ ಸಂಪತ್ತಿನ ವಿಷಯದಲ್ಲಿ ಉದಾಸೀನತೆ ತಂದೆಯಿಂದ ಅವರಿಗೆ ಬಂದ ಗುಣ. ಅವರು ಬಹು ಸರಳ ಜೀವನವನ್ನು ನಡೆಸಿದರು. ಅವರ ಅತ್ಯಂತ ಪ್ರಬಲ ಆಸಕ್ತಿ ಸಾಹಿತ್ಯ ರಚನೆಯಾದರೂ ಅವರದು ಹೊಸ ಹೊಸ ವಸ್ತುಗಳನ್ನು ಅನ್ವೇಷಿಸಬಲ್ಲ ಬುದ್ಧಿಶಕ್ತಿ. ಇದು ಅವರನ್ನು ಹಲವಾರು ಹವ್ಯಾಸಗಳಿಗೆ ಆಕರ್ಷಿಸಿತು. ಅವರಿಗೂ ಕವಿ ಬಿಹಾರಿಲಾಲ ಚಕ್ರವರ್ತಿಯವರಿಗೂ ಹಲವೂ ಸಮಾನ ಆಸಕ್ತಿಗಳಿದ್ದವು. ಇದರಿಂದ ಅವರು ಆತ್ಮೀಯರಾದರು. ಚಕ್ರವರ್ತಿಯವರು ಆಗಾಗ ಠಾಕೂರ್ ಸಂಸಾರದ ಮನೆಗೆ ಬರುತ್ತಿದ್ದರು. ಇಬ್ಬರೂ ಆ ಕಾಲದ ಪ್ರಮುಖ ಕವಿಗಳೆಂದು ಪ್ರಸಿದ್ಧರಾದರು. ಅವರಿಬ್ಬರಿಂದ ಮನೆಯಲ್ಲಿ ಒಂದು ಸಾಹಿತ್ಯ ವಾತಾವರಣವೇ ಸೃಷ್ಟಿಯಾಯಿತು. ಇದರಿಂದ ಕುಟುಂಬದ ಇತರ ಸದಸ್ಯರಿಗೂ

ಸಾಹಿತ್ಯ ಚಟುವಟಿಕೆಗಳಲ್ಲಿ ಅಸಕ್ತಿಯುಂಟಾಯಿತು. ಪರಿಪಕ್ವಕಾಲದಲ್ಲಿ ರವೀಂದ್ರನಾಥರು ತಮ್ಮ ಕಾವ್ಯ ಪ್ರತಿಭೆಯನ್ನು ಬೆಳೆಸಿಕೊಳ್ಳಲು ಇದರಿಂದ ಅನುಕೂಲವಾಯಿತು.

ತಮ್ಮ ನಾಲ್ಕನೆಯ ತಮ್ಮ ಜ್ಯೋತಿರಿಂದ್ರನಾಥನ ಜೊತೆಗೆ ಅವರು 1877 ರಲ್ಲಿ 'ಭಾರತಿ' ಎಂಬ ಹೆಸರಿನ ಸಾಹಿತ್ಯಕ ಪತ್ರಿಕೆಯೊಂದನ್ನು ಪ್ರಾರಂಭಿಸಿದರು ಮತ್ತು ತಾವೇ ಅದರ ಮೊದಲನೆಯ ಸಂಪಾದಕರಾದರು. ಅದು ಅಂದಿನ ಬಂಗಾಳದ ಪ್ರಮುಖ ಸಾಹಿತ್ಯದ ಪತ್ರಿಕೆಗಳಲ್ಲಿ ಒಂದೆಂದು ಹೆಸರಾಯಿತು ಮತ್ತು 1925 ರಲ್ಲಿ ಅದು ನಿಂತು ಹೋಗುವವರೆಗೆ ತನ್ನ ಸ್ಥಾನವನ್ನು ಉಳಿಸಿಕೊಂಡು ಬಂದಿತು. ತಮ್ಮ ಸಾಹಿತ್ಯ ರಚನೆಗಳನ್ನು ಪ್ರಕಟಿಸುವ ಒಂದು ಪತ್ರಿಕೆ ಅಸ್ತಿತ್ವದಲ್ಲಿದೆ ಎಂಬುದೇ ಉದಯೋನ್ಮುಖ ಲೇಖಕರಿಗೆ ಒಂದು ಪ್ರಬಲವಾದ ಪ್ರೋತ್ಸಾಹವಾಗುತ್ತದೆ. ಈ ಪತ್ರಿಕೆಯು ರವೀಂದ್ರನಾಥರಿಗೆ ಒಂದು ಪ್ರಸಿದ್ಧ ಪತ್ರಿಕೆಗೆ ಲೇಖನವನ್ನು ಬರೆಯುವ ಮೊದಲನೆಯ ಅವಕಾಶವನ್ನು ಒದಗಿಸಿಕೊಟ್ಟಿತು. ಹೀಗೆ 1878 ರಲ್ಲಿ ಮತ್ತು ಅವರ ನಂತರದ ದಶಕಗಳಲ್ಲಿ ಅವರು ಬ್ರಿಟನ್ನಿನಲ್ಲಿ ಕೈಗೊಂಡ ಮೊದಲ ಪ್ರವಾಸದ ಅನುಭವಗಳು ಈ ಪತ್ರಿಕೆಯಲ್ಲಿ "ಯೂರೋಪ್ ಪ್ರವಾಸಿರ್ ಪತ್ರ" ಎಂಬ ಹೆಸರಿನಲ್ಲಿ ಪ್ರಕಟವಾದವು.

ಕುಟುಂಬದಲ್ಲಿನ ಎರಡನೆಯ ಸೋದರ ಗಣೇಂದ್ರನಾಥನನ್ನು (1841–69) ಜೀವನದ ಪ್ರಾಯದಲ್ಲಿ ಸಾವಿನ ನಿರ್ದಯ ಹಸ್ತಗಳು ಸೆಳೆದುಕೊಂಡು ಹೋದವು. ಆದರೆ ಸಂಸಾರದಲ್ಲಿ ಒಂದು ಸಾಂಸ್ಕೃತಿಕ ವಾತಾವರಣವನ್ನು ನಿರ್ಮಿಸುವುದರಲ್ಲಿ ಅವನದು ಗಮನಾರ್ಹವಾದ ಕೊಡುಗೆ. ನಾಟಕಗಳನ್ನಾಡುವುದರಲ್ಲಿ ಅವನಿಗೆ ಅಸಾಧಾರಣ ಆಸಕ್ತಿ. ಇದರ ಪರಿಣಾಮವಾಗಿ ಈ ಆಸಕ್ತಿಯನ್ನು ಬೆಳೆಸುವುದು ಆತನಿಗೆ ಅತಿ ಉತ್ಸಾಹದ ಕೆಲಸ. ಈ ಸಂಸಾರದ ಸದಸ್ಯರಿಗೆ ತಾವೇ ಸೇರಿ ನಾಟಕಗಳನ್ನಾಡುವುದು ಒಂದು ಮುಖ್ಯ ಮನರಂಜನೆಯಾದದ್ದು ಆತನಿಂದಲೇ. ಇದು ನಾಟಕಗಳನ್ನು ರಚಿಸುವುದಕ್ಕೆ ಮಾತ್ರವಲ್ಲದೆ ಹೊಸ ನಾಟಕ ತಂತ್ರಗಳ ಪ್ರಯೋಗಗಳಿಗೂ ಪ್ರೋತ್ಸಾಹ ಕೊಟ್ಟಿತು. ಅನಂತರದ ವರ್ಷಗಳಲ್ಲಿ ಈ ಕ್ಷೇತ್ರದಲ್ಲಿ ರವೀಂದ್ರನಾಥರ ಸಾಮರ್ಥ್ಯ ಬೆಳೆಯುವುದಕ್ಕೂ ಅಗತ್ಯವಾದ ಅವಕಾಶವನ್ನು ಇದು ಒದಗಿಸಿಕೊಟ್ಟಿತು.

ಗಣೇಂದ್ರನಾಥನಲ್ಲಿ ದೇಶಾಭಿಮಾನದ ಭಾವನೆ ತುಂಬಿ ತುಳುಕುತ್ತಿತ್ತು. ಬಂಗಾಳಿಗಳಲ್ಲಿ ರಾಷ್ಟ್ರೀಯ ಭಾವನೆಗಳು ಬೆಳೆಯಲು ಪ್ರೋತ್ಸಾಹ ನೀಡುವ ಕೆಲವು ಹೊಸ ಪ್ರಯತ್ನಗಳನ್ನು ಪ್ರಥಮ ಪ್ರವರ್ತಕನಾಗಿ ಕೈಗೊಳ್ಳಲು ಇದು ಆತನಿಗೆ ಸ್ಫೂರ್ತಿಯನ್ನು ನೀಡಿತು. ತನ್ನ ಸ್ನೇಹಿತ ನವಗೋಪಾಲ ಮಿತ್ರನ ಜೊತೆಗೆ ಆತನು ಹಿಂದೂ ಮೇಳ ಎನ್ನುವ ಜಾತ್ರೆಯನ್ನು ಪ್ರಾರಂಭಿಸಿದ. ಗೀತೆಗಳ ಮೂಲಕ ಮತ್ತು ನಾಟಕಗಳ ಮೂಲಕ ದೇಶಾಭಿಮಾನವನ್ನು ಜಾಗೃತಿಗೊಳಿಸುವುದು ಮತ್ತು ಗ್ರಾಮೀಣ ಕುಶಲ ಕೆಲಸಗಾರರು ಮಾಡಿದ ವಸ್ತುಗಳನ್ನು ಪ್ರದರ್ಶಿಸಿ ಸ್ವದೇಶೀ ವಸ್ತುಗಳನ್ನು ಜನಪ್ರಿಯಗೊಳಿಸುವುದು, ಇವು ಮೇಳದ ಉದ್ದೇಶಗಳು. ಮೊದಲನೆಯ ಮೇಳ ಪ್ರಾರಂಭವಾದದ್ದು 1867 ರ ಏಪ್ರಿಲ್ 12 ರಂದು. ಅಂದು ಚೈತ್ರ ಸಂಕ್ರಾಂತಿ, ಬಂಗಾಳೀ ವರ್ಷದ ಕಡೆಯ ದಿನ. ಒಂದು ದಶಕಕ್ಕಿಂತ ಹೆಚ್ಚು ಕಾಲ ಈ ಜಾತ್ರೆ ಕಲ್ಕತ್ತೆಯ ಸಾಂಸ್ಕೃತಿಕ ಜೀವನದ ವಾರ್ಷಿಕ ವೈಶಿಷ್ಟ್ಯವಾಗಿ ಉಳಿಯಿತು ಮತ್ತು ಅದರ ಉದೇಶವನ್ನು ಸಾರ್ಥಕಗೊಳಿಸಿಕೊಂಡಿತು. ನಾಡಿನ ಜನತೆಗೆ ಸಾಮಾನ್ಯವಾಗಿ ಮತ್ತು ಠಾಕೂರ್ ಮನೆತನದವರಿಗೆ ವಿಶಿಷ್ಟವಾಗಿ ರಾಷ್ಟ್ರೀಯ ಭಾವನೆಗಳನ್ನು ಬೆಳೆಸಿಕೊಳ್ಳಲು ಅದು ಪ್ರೋತ್ಸಾಹ ನೀಡಿತು. ಇದರಲ್ಲಿ ಆಸಕ್ತಿ ವಹಿಸುವಷ್ಟು ರವೀಂದ್ರನಾಥರು ಬೆಳೆದಾಗ ಇದು ಅವರ ಮನಸ್ಸಿನ ಮೇಲೆ ಇಂತಹುದೇ ಪರಿಣಾಮವನ್ನು ಮಾಡಿತು. ಅವರು ಎರಡು ಬಾರಿ ಅದರ ಕಾರ್ಯಕ್ರಮದಲ್ಲಿ ಭಾಗವಹಿಸಿ ತಾವೇ ರಚಿಸಿದ ದೇಶಾಭಿಮಾನೀ ಕವನಗಳನ್ನು ಓದಿದರೆನ್ನುವುದಕ್ಕೆ ಸಾಕ್ಷ್ಯವುಂಟು.

ದೇವೇಂದ್ರನಾಥರ ಎರಡನೆಯ ಮಗ ಸತ್ಯೇಂದ್ರನಾಥರು (1842-1923) ತೀಕ್ಷ್ಣ ಬುದ್ಧಿಯ ವಿದ್ಯಾರ್ಥಿಯೆಂದು ಹೆಸರು ಪಡೆದ. ಕಲ್ಕತ್ತ ವಿಶ್ವವಿದ್ಯಾನಿಲಯವು ಅದು ಸ್ಥಾಪನೆಯಾಗುತ್ತಲೇ 1857 ರಲ್ಲಿ ನಡೆಸಿದ ಪ್ರವೇಶ ಪರೀಕ್ಷೆಗೆ ಕುಳಿತ ವಿದ್ಯಾರ್ಥಿ ತಂಡದಲ್ಲಿ ಆತನಿದ್ದ. ಅವನು ಪ್ರಥಮ ತರಗತಿಯಲ್ಲಿ ಉತ್ತೀರ್ಣನಾಗಿ ಪ್ರೆಸಿಡೆನ್ಸಿ ಕಾಲೇಜನ್ನು ಸೇರಿದ. 1863 ರಲ್ಲಿ ಆತನು ಇಂಡಿಯನ್ ಸಿವಿಲ್ ಸರ್ವೀಸ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಒಂದು ವರ್ಷ ತರಬೇತಿ ಪಡೆದ. ಅನಂತರ ಆತನನ್ನು ಮುಂಬೈ ಪ್ರಾಂತದಲ್ಲಿ ನೇಮಿಸಲಾಯಿತು. ಹೀಗೆ ಆತನು ಇಂಡಿಯನ್ ಸಿವಿಲ್ ಸರ್ವಿಸ್ (ಐಸಿಎಸ್) ಅನ್ನು ಪ್ರವೇಶಿಸಿದ ಮೊಟ್ಟ ಮೊದಲನೆಯ ಭಾರತೀಯನಾಗಿ ಖ್ಯಾತಿ ಪಡೆದಿದ್ದಾನೆ.

ತನ್ನ ಅಧಿಕಾರಾವಧಿಯಲ್ಲಿ ಈತನು ರವೀಂದ್ರನಾಥರ ಮೇಲೆ ವಿಶಿಷ್ಟ ಪ್ರಭಾವವನ್ನು ಬೀರಿದ. ಅವರ ಮುಂದಿನ ಜೀವನವನ್ನು ರೂಪಿಸುವುದರಲ್ಲಿ ಈತನ ಹೊಣೆಯೂ ಇತ್ತು. ರವೀಂದ್ರನಾಥರು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬ್ರಿಟನ್ನಿಗೆ ಹೋಗಲು ಅವರ ತಂದೆ ಒಪ್ಪಿದ್ದರು. 1878 ರಲ್ಲಿ ಇಂಗ್ಲೆಂಡಿಗೆ ಹೋಗುವಾಗ, ಮತ್ತೆ ರಜ ಮುಗಿದು ಹಿಂದಿರುಗುವಾಗ ಆತ ರವೀಂದ್ರನಾಥರನ್ನು ತನ್ನೊಡನೆ ಇರಿಸಿಕೊಂಡಿದ್ದ. ಇದು ಯುರೋಪಿನವರ ಸಮಾಜದೊಂದಿಗೆ ನಿಕಟ ಸಂಪರ್ಕ ಪಡೆಯಲು ರವೀಂದ್ರರಿಗೆ ಅವಕಾಶವನ್ನು ಮಾಡಿಕೊಟ್ಟಿತು ಮತ್ತು ಪಾಶ್ಚಾತ್ಯ ಸಂಗೀತದ ಸಾಮಾನ್ಯ ತತ್ತ್ವಗಳನ್ನು ಅಡಗಿಸಿಕೊಳ್ಳಲೂ ನೆರವಾಯಿತು. ಅವರ ಸಂಗೀತ ಕೃತಿಗಳಿಗೆ ಒಂದು ವಿಶಿಷ್ಟ ಲಕ್ಷಣ ಬರಲು ಸಹಾಯಕವಾದ ಅಂಶಗಳಲ್ಲಿ ಇದೂ ಒಂದು.

ನಲವತ್ತನೆಯ ವರ್ಷದಲ್ಲಿ ತೀರಿಕೊಂಡ ಹೇಮೇಂದ್ರನಾಥ (1844-84) ರನ್ನು ಈ ಸಂದರ್ಭದಲ್ಲಿ ಸ್ಮರಿಸಬೇಕು. ಇವರು ದೇವೇಂದ್ರನಾಥರ ಮೂರನೆಯ ಮಗ. ಸಂಸಾರದಲ್ಲಿ ಸಾಂಸ್ಕೃತಿಕ ವಾತಾವರಣವನ್ನು ನಿರ್ಮಿಸಿ ಅದಕ್ಕೆ ರಾಷ್ಟ್ರೀಯ ಬಲವನ್ನು ನೀಡುವ ಕಾರ್ಯಕ್ಕೆ ಇವರ ಕೊಡುಗೆ ಕಡಮೆಯೇನೂ ಅಲ್ಲ. ಇವರ ಆಸಕ್ತಿಗಳು ಹಲವಾರು. ವೈದ್ಯ ವಿಜ್ಞಾನದಲ್ಲಿ ಆಸಕ್ತಿ ಇದ್ದುದರಿಂದ ಸ್ವಲ್ಪ ಕಾಲ ಕಲ್ಕತ್ತೆಯ ಮೆಡಿಕಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿದರು. ಕುಸ್ತಿಯಲ್ಲೂ ಅವರಿಗೆ ಬಹು ಆಸಕ್ತಿ. ರವೀಂದ್ರನಾಥರೂ ಸೇರಿದಂತೆ ತನ್ನ ತಮ್ಮಂದಿರು ಕುಸ್ತಿ ಯನ್ನು ಅಭ್ಯಾಸ ಮಾಡಲು ಪ್ರೋತ್ಸಾಹ ನೀಡಿದರು.

ಅವರಿಗೆ ಅತ್ಯುತ್ಸಾಹದ ಯೋಜನೆ ಎಂದರೆ ತಮ್ಮ ಕುಟುಂಬದವರಿಗೆ ವಿದ್ಯಾಭ್ಯಾಸ ಕೊಡಿಸುವುದು. ಅವರ ಉಜ್ವಲ ದೇಶಾಭಿಮಾನ ಶಿಕ್ಷಣದ ಮಾಧ್ಯ ಮವು ತಾಯ್ನುಡಿಯಾದ ಬಂಗಾಳಿ ಭಾಷೆಯೇ ಆಗಬೇಕೆಂದು ಹಠ ಹಿಡಿಯು ವಂತೆ ಮಾಡಿತು. ಆ ಕಾಲದಲ್ಲಿ ಹೆಣ್ಣುಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿ ಮದುವೆ ಯಾಗುತ್ತಿತ್ತು. ಆದುದರಿಂದ ಓದು ಬರಹ ಕಲಿಯಲು ಅವರಿಗಿದ್ದ ಅವಕಾಶ ತೀರ ಕಡಿಮೆ. ಈ ಕಾರಣದಿಂದ ಅವರ ಲಕ್ಷ್ಯ ಮೊದಲು ಮನೆಯ ಸೊಸೆಯರಿಗೆ ಓದು ಬರಹ ಕಲಿಸುವ ಕಡೆಗೆ ತಿರುಗಿತು. ಅವರಿಗೆ ಪಾಠ ಹೇಳುವ ಕೆಲಸವನ್ನು ತಾವೇ ನಿರ್ವಹಿಸಿದರು. ತಮ್ಮಂದಿರಿಗೂ ತಂಗಿಯರಿಗೂ ಮೊದಲ ಪಾಠ ಹೇಳುವ ಹೊಣೆಯನ್ನು ಖುಷಿಯಿಂದ ಒಪ್ಪಿಕೊಂಡರು. ತಮಗೆ ಬಂಗಾಳಿ ಭಾಷೆಯಲ್ಲಿ

ಲಭ್ಯವಾದ ಒಳ್ಳೆಯ ಪ್ರಾಥಮಿಕ ಶಿಕ್ಷಣ ಬಹುಮಟ್ಟಿಗೆ ಹೇಮೇಂದ್ರನಾಥರಿಂದ ಎಂದು ರವೀಂದ್ರನಾಥರು ಕೃತಜ್ಞತೆಯಿಂದ ಒಪ್ಪಿಕೊಂಡಿದ್ದಾರೆ.

ರವೀಂದ್ರನಾಥರನ್ನು ಬಿಟ್ಟರೆ ಮಹರ್ಷಿಯವರ ಐದನೆಯ ಮಗ ಜ್ಯೋತಿರಿಂದ್ರ ನಾಥನು (1849–1925) ಅತ್ಯಂತ ಪ್ರತಿಭಾನ್ವಿತ ಎಂದು ಕಾಣುತ್ತದೆ. ಅವರನ್ನು ಮೀರಿಸಿ ಬೆಳಗಿದ ತಮ್ಮನ ಇನ್ನೂ ಹೆಚ್ಚಿನ ಸಾಧನೆಗಳು ಅವನ ಹಿರಿಮೆಯನ್ನು ಕೆಲ ಮಟ್ಟಿಗೆ ಕಿರಿದಾಗಿ ಮಾಡಿವೆ ಎನ್ನಬಹುದು. ಇಷ್ಟಾದರೂ, ಆತ ಸ್ವಯಂ ಯೋಗ್ಯತೆಯಿಂದ ಹಲವು ಕ್ಷೇತ್ರಗಳಲ್ಲಿ ಗಣ್ಯಸ್ಥಾನವನ್ನು ಪಡೆಯಬಲ್ಲ. ಆತ ಪಿಯಾನೊ ವಾದ್ಯವನ್ನು ಸೊಗಸಾಗಿ ನುಡಿಸುತ್ತಿದ್ದ ಮತ್ತು ಹಾಡುಗಳನ್ನು ರಚಿಸುವ ಸಾಮರ್ಥ್ಯ ಪಡೆದಿದ್ದ. ಈ ಹವ್ಯಾಸದಲ್ಲಿ ಆತನ ಸ್ನೇಹಿತ, ಅಶೋಕ ಚೌಧುರಿ ಮತ್ತು ತಮ್ಮ ರವೀಂದ್ರ ಆತನಿಗೆ ನೆರವಾಗುತ್ತಿದ್ದರು. ಆತನು ಬಂಗಾಳಿ ಸಂಗೀತಕ್ಕೆ ಸ್ವರ ಪ್ರಸ್ತಾರ ರೀತಿಯನ್ನು ನಿರೂಪಿಸಿದ. ಇದು ಇಂದಿಗೂ ಬಳಕೆ ಯಲ್ಲಿದೆ. ಸಂಗೀತಕ್ಕಾಗಿಯೆ ಒಂದು ಪತ್ರಿಕೆಯನ್ನು ಆತ ಪ್ರಾರಂಭಿಸಿದ; ಈ ವಿಷಯದಲ್ಲಿ ಅಧಿಕಾರವಾಣಿಯಿಂದ ಮಾತನಾಡಬಲ್ಲವರು ಕೆಲವರು ಬಂಗಾಳಿ ಯಲ್ಲಿ ಇಂತಹ ಪತ್ರಿಕೆ ಇದೇ ಮೊದಲನೆಯದು ಎನ್ನುತ್ತಾರೆ.

ಆದರೆ ಆತನಿಗೆ ಬಹುವಾಗಿ ಆಸಕ್ತಿ ಇದ್ದದ್ದು ನಾಟಕಗಳನ್ನು ಬರೆದು ಪ್ರದರ್ಶಿ ಸುವುದರಲ್ಲಿ. ಈ ವಿಷಯದಲ್ಲಿ ಅವನು ಜ್ಞಾನೇಂದ್ರನಾಥನಿಗೆ ಯೋಗ್ಯ ವಾರಸು ದಾರನಾದ. ಆತ ಚಿಕ್ಕ ವಯಸ್ಸಿನಲ್ಲೇ ಯಶಸ್ವಿಯಾದ ನಾಟಕಕಾರನೂ ನಟನೂ ಆದದ್ದು ಆಶ್ಚರ್ಯವಲ್ಲ. ರಜಪೂತ ಚರಿತ್ರೆಯ ಒಂದು ಶೌರ್ಯದ ಪ್ರಸಂಗವನ್ನು ವಸ್ತುವಾಗಿಟ್ಟುಕೊಂಡು 'ಸರೋಜಿನಿ' ಎನ್ನುವ ನಾಟಕವನ್ನು ಬರೆಯುತ್ತಿದ್ದಾಗ ಬಹು ತೀಕ್ಷ್ಣಬುದ್ಧಿಯ ತನ್ನ ಅತ್ಯಂತ ಕಿರಿಯ ತಮ್ಮ ರವೀಂದ್ರರಲ್ಲಿ ಅವನಿಗೆ ತುಂಬ ಪ್ರೀತಿ ಬೆಳೆಯಿತು. ಇದರ ನಂತರ ಅವರು ಸಾಹಿತ್ಯದ ಚಟುವಟಿಕೆಗಳಲ್ಲಿ ಆತ್ಮೀಯತೆಯಿಂದ ಒಟ್ಟಿಗೆ ಕೆಲಸ ಮಾಡುತ್ತಿದ್ದರು.

ವಾಸ್ತವವಾಗಿ ಜ್ಯೋತಿರಿಂದ್ರನಾಥನ ಬಹುಮುಖ ಪ್ರತಿಭೆಯೇ ಎಳೆಯ ರವೀಂದ್ರನಾಥನ ಪ್ರತಿಭೆಯು ಅರಳುವುದಕ್ಕೆ ಹೆಚ್ಚಾಗಿ ಪ್ರೋತ್ಸಾಹಿಸಿದ್ದು. ಒಂದೇ ಬಗೆಯ ಅಭಿರುಚಿ ಮತ್ತು ಸಹಜ ಸಾಮರ್ಥ್ಯಗಳಿದ್ದದ್ದರಿಂದ ಈ ಅಣ್ಣನ ಬಳಿಗೆ ಆಕರ್ಷಿತನಾದ ರವೀಂದ್ರನಿಗೆ ತನ್ನ ಸುಪ್ತ ಶಕ್ತಿಗಳನ್ನು ಬೆಳೆಸಿಕೊಳ್ಳುವುದರಲ್ಲಿ ಆತನಿಂದ ಮಹತ್ವದ ಮಾರ್ಗದರ್ಶನವೂ ಪ್ರೋತ್ಸಾಹವೂ ದೊರಕಿದವು.

ಈ ವಿಷಯದಲ್ಲಿ ಜ್ಯೋತಿರೀಂದ್ರನಾಥನಿಗೆ ತಕ್ಕ ಹೆಂಡತಿಯಾಗಿದ್ದ ಕಾದಂಬರೀ ದೇವಿಯೂ ಇಷ್ಟೇ ಮುಖ್ಯವಾದ ಪಾತ್ರವನ್ನು ವಹಿಸಿದಳು. ಆಕೆಗೆ ಬಹು ಬುದ್ಧಿವಂತನಾದ ತನ್ನ ಮೈದುನನಲ್ಲಿ ಅತ್ಯಂತ ಮಮತೆ. ಬಹು ದೊಡ್ಡ ಕುಟುಂಬದಲ್ಲಿ ಅಲಕ್ಷ್ಯಕ್ಕೆ ಗುರಿಯಾಗಿ ಬೆಳೆದ ಆ ಮಗುವಿನ ಬಾಲ್ಯದ ವಿಷಣ್ಣ ದಿನಗಳಿಗೆ ಸರಿದೂಗಿಸಲು ಆಕೆ ಮೇರೆಯಿಲ್ಲದ ಮಮತೆಯ ಮಳೆಯನ್ನೇ ಅವನ ಮೇಲೆ ಕರೆದಳು. ಆಕೆಗೆ ಕಾವ್ಯದಲ್ಲಿ ತುಂಬ ಪ್ರೀತಿಯಿದ್ದುದರಿಂದ ಅರಳುವ ಪ್ರತಿಭೆಯ ಈ ಕವಿಯ ಪ್ರಾರಂಭದ ಕವನಗಳನ್ನು ತುಂಬ ಸಹಾನುಭೂತಿಯಿಂದ ಕೇಳಿದಳು. ಆತನ ಕಾವ್ಯ ಶಕ್ತಿಗಳಿಗೆ ಯೋಗ್ಯ ಪೋಷಣೆ ದೊರಕುವಂತೆ ಆಕೆ ವಿಶೇಷ ಎಚ್ಚರಿಕೆ ವಹಿಸಿದಳು. ಆಗಾಗ ಮೆಚ್ಚಿಕೆಯ ಮಾತುಗಳನ್ನಾಡಿ ಆತನ ಕವನಗಳು ಇನ್ನು ಉತ್ತಮಗೊಳ್ಳುವಂತೆ ಹುರಿದುಂಬಿಸುತ್ತಿದ್ದಳು. ಆದರೆ ಹುಡುಗನಿಗೆ ಜಂಭ ಬಂದು ಕವಿಯಾಗಿ ಬೆಳೆಯುವ ಪ್ರಯತ್ನಗಳಲ್ಲಿ ಉದಾಸೀನತೆ ಬಂದೀತೆಂದು ಆಕೆಯು ಅವನಿಗೆ ಆ ಕಾಲದಲ್ಲಿ ತನ್ನ ಸಾಮರ್ಥ್ಯದ ಅರಿವು ಮೂಡದಂತೆ ನೋಡಿಕೊಂಡಳು.

ಅಧ್ಯಾಯ ೩

ಜನನ ಮತ್ತು ಬಾಲ್ಯ

ರವೀಂದ್ರರು ಬಂಗಾಳೀ ಪಂಚಾಂಗದ ಪ್ರಕಾರ 1268 ರ ವೈಶಾಖದ 25 ನೆಯ ದಿನ ಎಂದರೆ ಇಂಗ್ಲೀಷ್ ಕ್ಯಾಲೆಂಡರಿನ ಪ್ರಕಾರ 1861 ರ ಮೇ 7 ರಂದು ಹುಟ್ಟಿದರು. ಕಾಲ ಕಳೆದಂತೆ ಈ ಎರಡು ಪಂಚಾಂಗಗಳ ಗಣತಿಯಲ್ಲಿ ವ್ಯತ್ಯಾಸ ಬಂದು ಸಾಮಾನ್ಯವಾಗಿ ಇಂಗ್ಲೀಷ್ ದಿನಾಂಕದ ಅನಂತರ ಬರುತ್ತದೆ. ಕಟ್ಟು ನಿಟ್ಟಾಗಿ ನೋಡಿದರೆ ಅವರ ಹುಟ್ಟು ದಿನವನ್ನು ಬಂಗಾಳೀ ಪಂಚಾಂಗದ ವೈಶಾಖದ 25 ರಂದು ಆಚರಿಸಬೇಕು.

ಅವರ ತಂದೆ ತಾಯಿಗಳಿಗೆ ರವೀಂದ್ರರ ನಂತರ ಆದದ್ದು ಒಂದೇ ಮಗು. ಆದರೆ ಕಡೆಯ ಮಗು ಶೈಶವದಲ್ಲೇ ಸತ್ತು ಹೋಯಿತು. ಇದರಿಂದ ರವೀಂದ್ರರು ಕುಟುಂಬದ ಕಡೆಯ ಮಗು ಮತ್ತು ಕಡೆಯ ಗಂಡು ಮಗ. ಅವರನ್ನು ಹೀಗೆ ಕರೆಯುತ್ತೇವೆ.

ರವೀಂದ್ರರ ತಾಯಿ ಶಾರದಾ ದೇವಿಗೆ ತಮ್ಮ ಕಡೆಯ ಮಗುವಿನಲ್ಲಿ ಪ್ರೀತಿ ಕಡಿಮೆಯಲ್ಲದಿದ್ದರೂ ಮತ್ತೆ ಮತ್ತೆ ಮಕ್ಕಳನ್ನು ಹೆತ್ತು ಹೆತ್ತು ಅವರ ಆರೋಗ್ಯ ಕೆಟ್ಟಿತ್ತು. ಹುಡುಗ ರವೀಂದ್ರನನ್ನು ತಾವೇ ನೋಡಿಕೊಳ್ಳಲು ಆಗಲಿಲ್ಲ.

ಇದರಿಂದ ಅವರನ್ನು ಎಳೆಯ ವಯಸ್ಸಿನಲ್ಲಿ ದಾದಿಯ ಪಾಲನೆಗೆ ಒಪ್ಪಿಸಿದರು. ಅವರು ಸ್ವಲ್ಪ ದೊಡ್ಡವರಾದಾಗ ಸೇವಕರು ನೋಡಿಕೊಳ್ಳುತ್ತಿದ್ದರೆಂಬುದಕ್ಕೆ ಸ್ಪಷ್ಟವಾದ ಸಾಕ್ಷ್ಯಗಳಿವೆ. ಈ ಸಾಕ್ಷ್ಯವು ಠಾಕೂರರಿಂದಲೇ ಬಂದಿದೆ. ಅದು ಮುಖ್ಯವಾಗಿ ಅವರ ನೆನಪುಗಳನ್ನು ದಾಖಲೆ ಮಾಡಿದ 'ಜೀವನ್ ಸ್ಮೃತಿ *' ಎಂಬ ಆತ್ಮವೃತ್ತದಲ್ಲಿದೆ.

ರವೀಂದ್ರರು ತಮ್ಮ ಜೀವನದ ಮೊದಲ ಭಾಗಕ್ಕೆ 'ಗುಲಾಮರ ಆಳ್ವಿಕೆ' ('ಭೃತ್ಯಕಾ ರಾಜತಂತ್ರ') ಎಂಬ ಹೆಸರನ್ನು ಉಚಿತವಾಗಿಯೇ ಕೊಟ್ಟಿದ್ದಾರೆ. ಹದಿಮೂರನೆಯ ಶತಮಾನದಲ್ಲಿ ದೆಹಲಿಯ ಸುಲ್ತಾನ್ ಆಧಿಪತ್ಯವನ್ನು ಆಳಿದ ಗುಲಾಮೀ ಸಂತತಿಯೊಡನೆ ಹೋಲಿಸುತ್ತಾರೆ. ಗತಕಾಲವನ್ನು ಸ್ಮರಿಸಿಕೊಳ್ಳುವಷ್ಟು ದೊಡ್ಡವರಾದಾಗ ತಮ್ಮನ್ನು ಸೇವಕರ ವಶಕ್ಕೆ ಒಪ್ಪಿಸಿಬಿಟ್ಟಿದ್ದುದನ್ನು ಕಂಡುಕೊಂಡರು. ಹುಡುಗನಿಗೆ ಆಹಾರ ಕೊಡುತ್ತಿದ್ದವರು ಮತ್ತು ಅವನ ಚಲವಲನಗಳನ್ನು ನಿಯಂತ್ರಿಸುತ್ತಿದ್ದವರು ಅವರೇ. ಹುಡುಗ ಹೋಗಬಹುದಾಗಿದ್ದುದು ಅವರ ಬಳಿಗೆ ಮಾತ್ರ. ಅವರು ಬರೆದಿಟ್ಟಿರುವ ಸ್ಮೃತಿಗಳಲ್ಲಿ ತಾನು ಸೇವಕರ ರಾಜ್ಯದ ಪ್ರಜೆಯೆಂದು ತಮಾಷೆಯಾಗಿ ಹೇಳಿರುವುದರಲ್ಲಿ ಆಶ್ಚರ್ಯವಿಲ್ಲ.

ಅವರ ಬಾಲ್ಯದಲ್ಲಿ ಅವರ ಆಸಕ್ತಿಯ ಕೇಂದ್ರವಾದ ಮೊದಲನೆಯ ಸೇವಕನ ಹೆಸರು ಶ್ಯಾಮ. ರವೀಂದ್ರರಿಗೆ ಶ್ಯಾಮನ ರೂಪ ಸ್ಪಷ್ಟವಾಗಿ ನೆನಪಿತ್ತು. ಅವರು ಅದನ್ನು ವರ್ಣಿಸುತ್ತಾರೆ. ಸೇವಕ ಜೆಸ್ಸೋರ್‌ನ ಹುಡುಗ, ಅವನದು ಮಧ್ಯಮ ಎತ್ತರ, ಕಪ್ಪು ಬಣ್ಣ ಮತ್ತು ಉದ್ದವಾದ ಕೂದಲು. ರವೀಂದ್ರನಾಥನನ್ನು ನೋಡಿಕೊಳ್ಳು

* ಈ ಪುಸ್ತಕವು ಅವರ ಜೀವನದ ಸಂಪೂರ್ಣ ಕತೆಯನ್ನು ಹೇಳುವುದಿಲ್ಲ. ಅವರಿಗೆ ನೋಬೆಲ್ ಬಹುಮಾನ ಬಂದ ನಂತರ ಇದನ್ನು ಬರೆದರು. ಆದುದರಿಂದ ಇದು ಅವರ ಜೀವನವನ್ನು ಮಧ್ಯ ವಯಸ್ಸಿನವರೆಗೆ ನಿರೂಪಿಸುತ್ತದೆ. ಅವರ ಬಾಳಿನ ಉತ್ತರ ಭಾಗವನ್ನು ಕುರಿತು ಬರೆಯುವ ಅವಕಾಶ ಒದಗಿಲ್ಲ. ಆದರೆ ನಮ್ಮ ಈಗಿನ ಅಗತ್ಯಕ್ಕೆ ಈ ಪುಸ್ತಕ ಸಾಕು. ಏಕೆಂದರೆ ಇದರಲ್ಲಿ ಅವರ ಜೀವನದ ಮೊದಲ ಭಾಗದ ವಿವರವಾದ ವಿವರಣೆಯಿದೆ, ಆದುದರಿಂದ ಅವರ ವಿಷಯ ಸಾಮಗ್ರಿಗಾಗಿ ಬೇರೆಲ್ಲೂ ಹುಡುಕಬೇಕಾಗಿಲ್ಲ. ಇದರ ಜೊತೆಗೆ ಅವರ ಬಾಲ್ಯಕ್ಕೇ ಸೀಮಿತವಾಗಿ ಅವರ ಬಾಳಿನ ಮೊದಲ ಭಾಗದ ಕೆಲವು ಬಿಡಿ ದೃಶ್ಯಗಳ ನೆನಪುಗಳನ್ನು ಉಳ್ಳ ಪುಸ್ತಕವಿದೆ. ಅಲ್ಲದೆ ಅವರು ಮುಪ್ಪಿನಲ್ಲಿ ಬರೆದ ಹಲವು ಕವನಗಳಲ್ಲೂ ಸಾಮಗ್ರಿಯಿದೆ. ಈ ಬರಹಗಳು ಅವರ ಬಾಳಿನ ಮೊದಲ ಭಾಗವನ್ನು ಕುರಿತು ಅಮೂಲ್ಯವಾದ ಹೊಸ ವಿಷಯಗಳನ್ನು ತಿಳಿಸುವುದು ಮಾತ್ರವಲ್ಲ, ಇವು ಕಾವ್ಯ ರೂಪದಲ್ಲಿರುವುದರಿಂದ ಇವಕ್ಕೆ ಸಾಹಿತ್ಯದ ಸೊಗಸಿದೆ.

ವುದೇ ಸ್ಪಷ್ಟವಾಗಿ ಅವನ ಹೊಣೆಯಾಗಿತ್ತು. ಅವನ ಕರ್ತವ್ಯ ಪ್ರಜ್ಞೆಗೆ ಅವನನ್ನು ಬಿಟ್ಟುಬಿಟ್ಟಿದ್ದರಿಂದ ಈ ಸೇವಕ ತನ್ನ ಕೆಲಸ ಕಾರ್ಯಗಳನ್ನು ಅಲಕ್ಷ್ಯದಿಂದ ಮಾಡುತ್ತಿದ್ದ ಮತ್ತು ತನ್ನ ಹೊಣೆಯಲ್ಲಿದ್ದ ಹುಡುಗನ ಓಡಾಟಗಳನ್ನು ಹತೋಟಿಯಲ್ಲಿಡಲು ಸಂದಿಗ್ಧ ವಿಧಾನಗಳನ್ನು ಅನುಸರಿಸುತ್ತಿದ್ದ ಎಂದು ಕಾಣುತ್ತದೆ. ಕೊಠಡಿಯ ನೆಲದ ಮೇಲೆ ಸೀಮೆ ಸುಣ್ಣದಿಂದ ಒಂದು ವೃತ್ತ ವನ್ನೆಳೆದು ಹುಡುಗನನ್ನು ಅಲ್ಲಿಡುವುದು ಅವನಿಗೆ ಪ್ರಿಯವಾದ ಉಪಾಯ. ಹುಡುಗ ವೃತ್ತದ ರೇಖೆಯನ್ನು ದಾಟಕೂಡದೆಂದು ಎಚ್ಚರಿಕೆ ಹೇಳಿ ತನ್ನ ಅಪ್ಪಣೆ ಯನ್ನು ಮೀರಿದರೆ ಭಯಂಕರ ಪರಿಣಾಮ ಉಂಟಾಗುವುದೆಂದು ಬೆದರಿಸುತ್ತಿದ್ದ. ಹುಡುಗ ಭಯದಿಂದ ಮುದುಡಿಕೊಂಡು ಅವನ ಆಜ್ಞೆಯನ್ನು ತಿರಸ್ಕರಿಸುವ ಶಕ್ತಿ ಯನ್ನು ಕಳೆದುಕೊಳ್ಳುತ್ತಿದ್ದ. ಹೀಗೆ ಎಳೆಯ ರವೀಂದ್ರನಾಥನಿಗೆ ಇಡೀ ದಿನ ವೃತ್ತದಲ್ಲಿ ಸೆರೆಯಾಗಿ ಇರುವುದನ್ನು ಬಿಟ್ಟು ಬೇರೆ ಮಾರ್ಗವೇ ಇರಲಿಲ್ಲ. ಅವನ ಸುದೈವಕ್ಕೆ ದಕ್ಷಿಣ ದಿಕ್ಕಿಗೆ ತೆರೆದುಕೊಳ್ಳುತ್ತಿದ ಕಿಟಕಿಯೊಂದು ಅವನಿಗೆ ಎಟಕು ವಂತಿತ್ತು. ಆ ಕಿಟಕಿಗೆ ಮೂರು ಬಾಗಿಲುಗಳಿದ್ದವು. ಕುಟುಂಬದ ಮನೆಯ ಕಾಂಪೌಂಡಿನ ದಕ್ಷಿಣ ಭಾಗದಲ್ಲಿ ಒಂದಿಷ್ಟು ಬಯಲಿತ್ತು. ಅದರ ದಕ್ಷಿಣದಲ್ಲಿ ಅಂಚಿನಲ್ಲಿ ತೆಂಗಿನ ಮರಗಳಿದ್ದ ಕೊಳವೊಂದಿತ್ತು. ಪೂರ್ವ ದಡದ ಮೇಲೆ ಒಂದು ಹಳೆಯ ಆಲದ ಮರವಿತ್ತು. ಕಿಟಿಕಿಯ ಬಾಗಿಲುಗಳನ್ನು ತೆರೆವರೆ ಇಡೀ ದೃಶ್ಯ ಹುಡುಗನ ಕಣ್ಣಮುಂದಿರುತ್ತಿತ್ತು. ಹೊರ ಜಗತ್ತಿನೊಡನೆ ನೋಟದ ಈ ಸಂಪರ್ಕ ಅವನು ಕಾಲಕಳೆಯಲು ಮನರಂಜನೆಯನ್ನು ಒದಗಿಸುತ್ತಿತ್ತು. ಸ್ನಾನಕ್ಕಾಗಿ ಜನರು ಉಪಯೋಗಿಸುತ್ತಿದ್ದ ಈ ಕೊಳಕ್ಕೆ ದಿನದ ಬೇರೆ ಬೇರೆ ಹೊತ್ತಿನಲ್ಲಿ ಬೇರೆ ಬೇರೆ ಗುಂಪುಗಳು ಬರುತ್ತಿದ್ದವು. ಒಂದೊಂದು ಗುಂಪು ಒಂದೊಂದು ರೀತಿಯಲ್ಲಿ ಬಟ್ಟೆ ಒಗೆಯುತ್ತಿತ್ತು ಮತ್ತು ಸ್ನಾನಮಾಡುತ್ತಿತ್ತು. ಇದರಿಂದ ಹುಡುಗನಿಗೆ ಸದಾ ಬದಲಾಗುತ್ತಿದ್ದ ದೃಶ್ಯಗಳ ಕೊನೆಯಿಲ್ಲದ ನೋಟ ಲಭ್ಯವಾಯಿತು. ಅವನು ಸೆರೆಯನ್ನು ಸ್ವಲ್ಪವಾದರೂ ಸಹಿಸಿಕೊಳ್ಳಲು ಸಾಧ್ಯ ವಾಯಿತು. ಹಗಲು ಸಾಗಿ ಮಧ್ಯಾಹ್ನ ಸಮೀಪಿಸಿದಂತೆ ಕೊಳ ಸಂಪೂರ್ಣವಾಗಿ ನಿರ್ಜನವಾಗುತ್ತಿತ್ತು. ಹಗಲಿನ ಆ ಹೊತ್ತಿನಲ್ಲಿ ಕೊಳದಲ್ಲಿ ಈಜುತ್ತಿದ್ದ ಬಾತುಗಳು ಮತ್ತು ಹಂಸಗಳೇ ಹುಡುಗನ ಸಂಗಾತಿಗಳು.

ಅವರ ಈ ಬೇಸರದ ಬಾಳು ಪೂರ್ವಿಕರ ಮನೆಯ ದಕ್ಷಿಣ ಕಾಂಪೌಂಡಿನ ದೃಶ್ಯದ ರಮಣೀಯತೆಯಿಂದ ಸ್ವಲ್ಪ ಮಟ್ಟಿಗೆ ನಿವಾರಿಸಲ್ಪಟ್ಟಿತು. ಅವರ

ಮನಸ್ಸಿನಲ್ಲಿ ಆಳವಾದ ನೆನಪು ಉಳಿಯಿತು. ಅವರ ಮುಪ್ಪಿನಲ್ಲಿ ಬರೆದ ಕವನ ವೊಂದು ಅವರ ಪದ್ಯಸಂಗ್ರಹ * 'ಪುನಶ್ಚ ಬಾಲಕ್' ನಲ್ಲಿ ಸೇರಿದೆ. ಆ ಕವನಕ್ಕೆ ಈ ಬೇಸರದ ಬಾಳು ವಸ್ತುವಾಗಿದೆ. ಅದರ ಅನುವಾದ ಹೀಗಿದೆ :

ನಮ್ಮ ಹಳೆಯ ಮನೆಯ ಮೂಲೆಯೊಂದರಲ್ಲಿ
ಒಂದು ಕೊಠಡಿಯಲ್ಲಿ ನನ್ನನ್ನು ಕೂಡಿಹಾಕುತ್ತಿದ್ದರು;
ಅಲ್ಲಿಂದಾಚೆ ಕಾಲಿಡಕೂಡದೆಂದು ಕಟ್ಟಪ್ಪಣೆ
ಅಲ್ಲಿ ಸೇವಕನಿಗಿಷ್ಟೇ — ವೀಳೆಯದೆಲೆಗಳನ್ನು
ಮಡಿಸಿ ತಾಂಬೂಲ ಮಾಡುವುದು, ಗೋಡೆಯ ಮೇಲೆ ಕೈ ಉಜ್ಜುವುದು.

ಮೆಲುದನಿಯಲ್ಲಿ ಮಧುರ ಹಾಡನು ಹಾಡುವುದು
ಕೊಠಡಿಗೆ ಹೊಳೆವ ಮೂರು ಬಾಗಿಲ ಕಿಟಕಿ
ಕೆಳಗೊಂದು ಕೊಳ, ಕೊಳಕೆ ಕಲ್ಲು ಕಟ್ಟಡದ ಮೆಟ್ಟಿಲು,
ಸುತ್ತಗೋಡೆಯ ಬಳಿಯ ತೆಂಗು ಮರಗಳ ಸಾಲು.
ಪುರಾತನ ಆಲದ ಮರ, ಅದಕ್ಕೆ ಜಟೆ, ಅದನು ಬಿಗಿಹಿಡಿದಿರುವುದು
ಪೂರ್ವದಂಡೆಗೆ ಬಿಗಿದು ದಪ್ಪ ಬೇರುಗಳು.

ಹೊರಗಿನ ನಿಸರ್ಗದ ಇಣುಕು ನೋಟಗಳಷ್ಟನ್ನು ಲಭ್ಯ ಮಾಡಿಕೊಡುವ ಈ ಕೊಠಡಿಯೊಳಗಿನ ಸೆರೆ ಹುಡುಗನಲ್ಲಿ ನಿಸರ್ಗದೊಡನೆ ನೇರ ಸಂಪರ್ಕ ಪಡೆಯ ಬೇಕೆಂಬ ಹಂಬಲವನ್ನು ಚುರುಕುಗೊಳಿಸಿತು. ನಿಸರ್ಗವು ತನ್ನನ್ನು ಕರೆಯುತ್ತಿದೆ, ತಾನು ಓ ಕೊಡಲಾಗುತ್ತಿಲ್ಲ ಎನ್ನಿಸಿತು ಆತನಿಗೆ. ಸೆರೆಯಿಂದ ಬಿಡಿಸಿಕೊಂಡು ಸ್ವತಂತ್ರನಾಗಿರಬೇಕೆಂಬ ತೀವ್ರ ಬಯಕೆ ಅವನ ಅಪ್ರಬುದ್ಧ ಮನಸ್ಸಿನಲ್ಲಿ ತೀಕ್ಷ್ಣವಾದ ನಿರಾಸೆಯನ್ನು ಉಂಟು ಮಾಡಿತು. ಮುಂದೆ ಆತ ರಚಿಸಿದ ಒಂದು ಕವನಕ್ಕೆ ಇದೇ ವಸ್ತುವಾದದ್ದು ಆಶ್ಚರ್ಯವೇನಲ್ಲ. ** ಒಮ್ಮೆ ಭೇಟಿಯಾದ ಎರಡು ಹಕ್ಕಿಗಳ ವಿಷಯವನ್ನು ಕವನ ಹೇಳುತ್ತದೆ— ಒಂದ ಹಕ್ಕಿ, ಸ್ಪಷ್ಟ ವಾಗಿ ಆತನ ಪ್ರತಿನಿಧಿ, ಪಂಜರದಲ್ಲಿ ಸೆರೆಯಾದದ್ದು, ಮತ್ತೊಂದು ಅವನು ಬಯಸಿದ ಸ್ವಾತಂತ್ರ್ಯದ ಸಂಕೇತವಾದ, ಪಂಜರದ ಹೊರಗೆ ಸಂಪೂರ್ಣ ಸ್ವಾತಂತ್ರ್ಯ ವನ್ನು ಸವಿಯುವ ಹಕ್ಕಿ.

* ಪುನಶ್ಚ ಬಾಲಕ್

** 'ಸೋನಾರ್ ತಾರಿ, ದುಯ್ ಪಾಖಿ'

ನಿಸರ್ಗದಲ್ಲಿ ಗಾಢ ಪ್ರೀತಿಯಿದ್ದ ಅವರು ದೊಡ್ಡವರಾದಂತೆ ನಗರ ಜೀವನವನ್ನು ದ್ವೇಷಿಸಲು ಪ್ರಾರಂಭಿಸಿದರು. ಕಡೆ ಕಡೆಯಲ್ಲಿ ಗ್ರಾಮ ಪ್ರದೇಶದಲ್ಲಿ ವಾಸಿಸುವುದೇ ಅವರಿಗೆ ನೆಮ್ಮದಿಯನ್ನು ಕೊಟ್ಟಿತು. ಬಾಲ್ಯದ ಅನುಭವ ಹೀಗೆ ಅವರ ಕಾವ್ಯದ ಮೇಲೆ ಮಾತ್ರವಲ್ಲದೆ ಜೀವನ ವಿಧಾನದ ಮೇಲೂ ಗಾಢವಾದ ಪ್ರಭಾವವನ್ನು ಬೀರಿತು.

ಸೇವಕರ ರಾಜ್ಯದ ಪ್ರಜೆಯಾಗಿ ಅವರು ಉಪಶಮನವೇ ಇಲ್ಲದ ನೋವಿನಲ್ಲಿ ಮುಳುಗಿರಲಿಲ್ಲ. ಸೇವಕರಲ್ಲಿ ಒಬ್ಬನಾದರೂ ಉದಾತ್ತ ಸ್ವಭಾವದ ಮನಷ್ಯನಿದ್ದ, ಈಶ್ವರ ಎಂಬವನು. ಅವನನ್ನು ಬ್ರಜೇಶ್ವರ್ * ಎಂದು ಕರೆಯುತ್ತಿದ್ದರು. ಆತ ಒಬ್ಬ ವಿಶಿಷ್ಟ ವ್ಯಕ್ತಿ. ಅವನ ಜೀವನದ ಪ್ರಾರಂಭದಲ್ಲಿ ಹಳ್ಳಿಯ ಪ್ರಾಥಮಿಕ ಶಾಲೆಯಲ್ಲಿ ಉಪಾಧ್ಯಾಯನಾಗಿದ್ದ. ಆತ ತನ್ನ ನಡವಳಿಕೆ ಮತ್ತು ಮಾತಿನಿಂದ ತನಗೂ ಇತರ ಸಾಮಾನ್ಯ ಸೇವಕರಿಗೂ ಇದ್ದ ವ್ಯತ್ಯಾಸವನ್ನು ಸ್ಪಷ್ಟವಾಗಿ ತೋರಿಸಿಕೊಡಲು ಪ್ರಯತ್ನಿಸುತ್ತಿದ್ದ. ತಮ್ಮ ಸ್ಮೃತಿಗಳಲ್ಲಿ ಠಾಕೂರರು ಆತನನ್ನು ವಿವರವಾಗಿ ಚಿತ್ರಿಸುತ್ತಾರೆ ಮತ್ತು ಅವನ ಸಾಹಿತ್ಯದ ಗುಣವನ್ನು ಹೆಚ್ಚಿಸಲು ಸಮೃದ್ಧವಾಗಿ ಹಾಸ್ಯವನ್ನು ಬೆರೆಸುತ್ತಾರೆ. ತನ್ನ ಬಳಗದವರಿಂದ ಈ ಸೇವಕ ಸಾಕಷ್ಟು ದೂರವಾಗಿಯೇ ಇರುತ್ತಿದ್ದ ಮತ್ತು ಕುಟುಂಬ ಸದಸ್ಯರೊಡನೆ ಮಾತನಾಡುವಾಗ ಸಾಹಿತ್ಯ ರೂಪವನ್ನೆ ಬಳಸುತ್ತಿದ್ದ.

ಸಂಜೆಯ ಹೊತ್ತು ಕುಟುಂಬದ ಮಕ್ಕಳನ್ನು ಈತ ನೋಡಿಕೊಳ್ಳುತ್ತಿದ್ದ. ಅವರಿಗೆ ಆಹಾರ ವಿತರಣೆಯೂ ಇವನ ಕೈಯಲ್ಲಿತ್ತೆಂದು ಕಾಣುತ್ತದೆ. ಸಂಜೆಯ ಹೊತ್ತು ಮಕ್ಕಳಿಗೆ ಹೊತ್ತು ಹೋಗುವಂತೆ ಮಾಡುವುದರಲ್ಲಿ ಅವನ ಅಕ್ಷರಜ್ಞಾನ ಅವನಿಗೆ ಬಹಳ ನೆರವಾಯಿತು. ಅವನು ಮಕ್ಕಳನ್ನು ತನ್ನ ಸುತ್ತ ಒಂದು ಕೊಠಡಿಯಲ್ಲಿ ಸೇರಿಸಿಕೊಳ್ಳುತ್ತಿದ್ದ. ವಿದ್ಯುಚ್ಛಕ್ತಿ ಇಲ್ಲದ ಆ ಕಾಲದಲ್ಲಿ, ಗೋಡೆಯ ಮೇಲೆ ಲಾಂದ್ರದ ಬೆಳಕು ಮೂಡಿಸಿದ. ದೊಡ್ಡ ನೆರಳುಗಳ ನಡುವೆ, ಬಂಗಾಳಿ ಭಾಷೆಯ "ರಾಮಾಯಣ" ಮತ್ತು 'ಮಹಾಭಾರತ' ಗಳಿಂದ ಭಾಗಗಳನ್ನು ಓದುತ್ತಿದ್ದ. ರವೀಂದ್ರನಾಥನಂತೂ ಆತ ಓದುವುದನ್ನು ಒಂದೇ ಮನಸ್ಸಿನಿಂದ ಆಲಿಸುತ್ತಿದ್ದ. ಬೇಟೆಯನ್ನು ಹುಡುಕಿಕೊಂಡು ಗೋಡೆಗಳ ಮೇಲೆ

---

* ಚೆಲಬೇಲಾ

ಓಡಾಡುತ್ತಿದ್ದ ಹಲ್ಲಿಗಳಾಗಲಿ ವರಾಂಡದಲ್ಲಿ ಸುತ್ತುತ್ತಿದ್ದ ಸಣ್ಣ ಬಾವಲಿಗಳಾಗಲಿ ಅವನ ಏಕಾಗ್ರತೆಗೆ ಭಂಗ ತರುತ್ತಿರಲಿಲ್ಲ. ಲವಕುಶರು ತಮ್ಮ ತಂದೆ ಮತ್ತು ಚಿಕ್ಕಪ್ಪನನ್ನು ಸಂಪೂರ್ಣವಾಗಿ ಸೋಲಿಸಿ ಯಜ್ಞದ ಕುದುರೆಯನ್ನು ವಶಮಾಡಿ ಕೊಳ್ಳುವ ಪ್ರಸಂಗವೆಂದರೆ ಮಕ್ಕಳಿಗೆ ಬಹು ಖುಷಿ.

ಈಶ್ವರನು ಮಕ್ಕಳಿಗೆ ಬಿಟ್ಟಿ ಮನರಂಜನೆಯನ್ನೇನೂ ಒದಗಿಸುತ್ತಿರಲಿಲ್ಲ ಎಂದು ಕಾಣುತ್ತದೆ. ತನ್ನ ವಶದಲ್ಲಿದ್ದ ಮಕ್ಕಳಿಂದ ಅವನು ಆಹಾರದ ಒಳ್ಳೆಯ ಭಾಗವನ್ನೇ ಕಿತ್ತುಕೊಂಡು ಪರೋಕ್ಷವಾಗಿ ಅವರಿಂದ ಪ್ರತಿಫಲ ಪಡೆಯುತ್ತಿದ್ದ. ಅವನಿಗೆ ಅಫೀಮು ತಿನ್ನುವ ಅಭ್ಯಾಸ. ಇದರಿಂದ ಅವನಿಗೆ ಪುಷ್ಟಿಯಾದ ಆಹಾರ ಅಗತ್ಯವಾಗಿತ್ತು. ಆತನು ಅನಿಯೋಗ್ಯವಾದ ರೀತಿಗಳಲ್ಲಿ ಇದನ್ನು ಸಂಪಾದಿಸಿಕೊಳ್ಳುತ್ತಿದ್ದ. ತುಂಬ ಬುದ್ಧಿವಂತನಾಗಿದ್ದ ಎಳೆಯ ರವೀಂದ್ರನಾಥನು ಅವನ ಉದ್ದೇಶವನ್ನು ಊಹಿಸಿ, ಅವನಿಗೇ ಅದರ ಅರಿವಾಗದಂತೆ ಅವನೊಡನೆ ಸಹಕರಿಸುತ್ತಿದ್ದ ಎಂದು ಕಾಣುತ್ತದೆ. ಅವನ ಪಾಲಿನ ಹಾಲನ್ನು ಕೊಟ್ಟಾಗ ಅಷ್ಟನ್ನು ಕುಡಿಯಲು ತನಗೆ ಇಷ್ಟವಿಲ್ಲ ಎನ್ನುತ್ತಿದ್ದ. ಆದ್ದರಿಂದ ಉಳಿದಿದ್ದ ಹಾಲನ್ನು ಈಶ್ವರ ತೆಗೆದುಕೊಳ್ಳುತ್ತಿದ್ದ. ಹೀಗೆ ರವೀಂದ್ರನಾಥನು ತಿಂಡಿಗಾಗಿ ಬೇಯಿಸಿದ ಅವಲಕ್ಕಿಯಂತಹ ಅಗ್ಗದ ತಿಂಡಿಗಳನ್ನು ಕೇಳುತ್ತಿದ್ದ. ಇದರಿಂದ ಹುಡುಗನ ತಿಂಡಿಗಾಗಿ ಸೇವಕರಿಗೆ ಕೊಟ್ಟಿದ್ದ ಹಣದಲ್ಲಿ ಸ್ವಲ್ಪ ಉಳಿಸಿ ತನಗೆ ಬೇಕಾದುದನ್ನು ಕೊಳ್ಳಲು ಸಾಧ್ಯವಾಗುತ್ತಿತ್ತು. ಸೇವಕರು ವಿಧಿಸುತ್ತಿದ್ದ ನಿರ್ಬಂಧಗಳನ್ನು ಕಡೆಗಣಿಸುವಷ್ಟು ರವೀಂದ್ರನಾಥನು ದೊಡ್ಡವನಾದಾಗ ಅವನು ಆ ವಿಶಾಲವಾದ ಮತ್ತು ಹರಡಿಕೊಂಡಿದ್ದ ಪೂರ್ವಿಕರ ಮನೆಯ ಬೇರೆ ಬೇರೆ ಭಾಗಗಳನ್ನು ಭೇಟಿಕೊಡುವುದರಲ್ಲಿ ಕಾಲ ಕಳೆಯುತ್ತಿದ್ದ. ಮನೆಯ ಮೊದಲನೆಯ ಅಂತಸ್ತಿಗೆ ಒಂದು ವಿಶಾಲವಾದ ಛಾವಣಿಯಿತ್ತು. ಹುಡುಗನು ಸುತ್ತಲಿನ ದೃಶ್ಯಗಳನ್ನು ನೋಡಲು ಸಾಧ್ಯವಾಗದ ಎತ್ತರವಾದ ಗೋಡೆಯಿತ್ತು. ನಡು ಮಧ್ಯಾಹ್ನದಲ್ಲಿ ಯಾರೂ ಇಲ್ಲದೆ ಇದ್ದಾಗ ಹುಡುಗನು ಅಲ್ಲಿಗೆ ಹೋಗಿ ಗೋಡೆಯ ಸಂದುಗಳಿಂದ ಇಣಿಕಿ ಹೊರ ಪ್ರಪಂಚವನ್ನು ನೋಡುತ್ತಿದ್ದ. ಮನೆಗೆ ಸೇರಿದ್ದ ಒಂದು ತೋಟವನ್ನು ತೆಂಗಿನ ಮರಗಳ ಸಾಲನ್ನು ನೋಡುವುದು ಅವನಿಗೆ ಸಾಧ್ಯವಾಗುತ್ತಿತ್ತು. ನೆರೆಯಲ್ಲಿದ್ದ ಕೊಳ ಮತ್ತು ಅದರ ಹತಿರವಲ್ಲಿದ್ದ ದನದ ಕೊಟ್ಟಿಗೆಗಳು ಕಾಣುತ್ತಿದ್ದವು. ದೂರದಲ್ಲಿ ಒಂದು ವಿಶಾಲವಾದ ಪ್ರದೇಶದಲ್ಲಿ ದಿಗಂತದವರೆಗೆ ಚಾಚಿಕೊಂಡಿದ್ದ ಮನೆಗಳ ಛಾವಣಿಗಳು ಕಾಣುತ್ತಿದ್ದವು. ಅವುಗಳು

ಒಂದೊಂದು ಬೇರೆ ಬೇರೆ ಎತ್ತರವಾದದ್ದರಿಂದ ಊರಿನ ಗಗನ ರೇಖೆಗೆ ಒಂದು ವಿಶಿಷ್ಟ ವಿನ್ಯಾಸವೇ ಒದಗಿತ್ತು. ತಲೆಯ ಮೇಲೆ ಮಧ್ಯಾಹ್ನದ ಸೂರ್ಯನ ಕಣ್ಣು ಕುಕ್ಕುವ ಪ್ರಕಾಶ. ಅಲ್ಲಲ್ಲಿ ಅತ್ತಿತ್ತ ಚಲಿಸುವ ಚಿಕ್ಕೆಗಳು. ಆ ಚಿಕ್ಕೆಗಳು ಹಾರುತ್ತಿದ್ದ ಹದ್ದುಗಳು, ಅವುಗಳ ಕೀರಲು ಕಿರುಚಾಟ ಆಗಾಗ ನಿದ್ದೆಯ ಮಂಪರಿನಲ್ಲಿದ್ದ ಊರಿನ ಮೌನವನ್ನು ಭಂಗಗೊಳಿಸುತ್ತಿತ್ತು.

ರವೀಂದ್ರನಾಥನ ಬಾಲ್ಯದಲ್ಲಿ ಅವನ ತಂದೆ ಹಿಮಾಲಯದ ಬೆಟ್ಟಗಳಲ್ಲಿ ಕಾಲ ಕಳೆಯುತ್ತಿದ್ದುದರಿಂದ ಮನೆಯಿಂದ ದೂರವೇ ಇರುತ್ತಿದ್ದರು. ಆದ್ದರಿಂದ ಮನೆಯ ಮೂರನೆಯ ಅಂತಸ್ತಿನಲ್ಲಿ ಅವರಿಗಾಗಿ ಕಾದಿರಿಸಿದ್ದ ಕೊಠಡಿಗಳು ಮುಚ್ಚಿಯೇ ಇರುತ್ತಿದ್ದವು. ಸಾಹಸದ ಚೇತನದ ರವೀಂದ್ರನಾಥನು ಮನೆಯ ಆ ಭಾಗಕ್ಕೆ ಸದ್ದಿಲ್ಲದೆ ನಡೆದು ಸದ್ದು ಮಾಡದೆ ಚಿಲಕವನ್ನು ತೆಗೆದು ಒಂದು ಬಾಗಿಲನ್ನು ತೆರೆಯುತ್ತಿದ್ದ. ಹೀಗೆ ಒಳಕ್ಕೆ ಪ್ರವೇಶಿಸಿ ದಕ್ಷಿಣದ ಕೊಠಡಿಯ ಒಂದು ಮೂಲೆಯಲ್ಲಿದ್ದ ಸೋಫಾ ಮೇಲೆ ಕುಳಿತು ಕಾಲ ಕಳೆಯುತ್ತಿದ್ದ. ಈ ಕೊಠಡಿಗಳಿಗೆ ಸೇರಿದಂತಿದ್ದ ಬಚ್ಚಲು ಮನೆಯಲ್ಲಿ ಸ್ವಲ್ಪ ಕಾಲಕ್ಕೆ ಮೊದಲು ಶೋಧಿಸಿದ ನೀರು ಬರುವ ನಲ್ಲಿಯೊಂದನ್ನು ಹಾಕಿದ್ದರು. ಕುತೂಹಲ ತುಂಬಿದ ಅವನ ಮನಸ್ಸಿಗೆ ಚೇಷ್ಟೆ ಮಾಡುವ ಅವಕಾಶದ ಆಕರ್ಷಣೆಯನ್ನು ತಡೆಯಲಾಗುತ್ತಿರಲಿಲ್ಲ. ಆದ್ದರಿಂದ ಆಕರ್ಷಿತನಾಗಿ ಅದರ ಕಡೆಗೆ ಹೋಗುತ್ತಿದ್ದ. ಅವನಿಗೆ ಸ್ನಾನ ಮಾಡುವ ಅಗತ್ಯವಿಲ್ಲದಿದ್ದರೂ ನಲ್ಲಿಯನ್ನುಪಯೋಗಿಸುವ ಖುಷಿಗಾಗಿ ಅದನ್ನು ತಿರುಗಿಸಿ ವೃಷ್ಟಿ ಸ್ನಾನವನ್ನು ಮಾಡುತ್ತಿದ್ದ.

ವಿಶಾಲವಾದ ಕಾಂಪೌಂಡಿನ ಹೊರಗೆ ಬಿದ್ದಿರುತ್ತಿದ್ದ ವಸ್ತುಗಳು ಅವನ ಮನಸ್ಸನ್ನು ಬಲವಾಗಿ ಸೆಳೆಯುತ್ತಿದ್ದವು. ಮನೆಯ ಉತ್ತರಕ್ಕೆ ಒಂದು ಸಣ್ಣ ಮೈದಾನವಿತ್ತು. ಪ್ರಾಯಶ: ಒಂದು ಕಾಲದಲ್ಲಿ ಅಲ್ಲಿ ಧಾನ್ಯವನ್ನು ಸಂಗ್ರಹಿಸಿ ಇಡುತ್ತಿದ್ದದರಿಂದ ಅದಕ್ಕೆ 'ಗೋಲಾಬಾರಿ' ಎಂದು ಹೆಸರು ಬಂದಿತ್ತು. ಅದೀಗ ಬರಡು ಭೂಮಿಯಾಗಿತ್ತು. ಉಪಯೋಗವಿಲ್ಲದೆ ಹಾಳು ಬಿದ್ದಿತ್ತು. ಆದರೆ ಅವನಿಗೆ ಅದು ನಿಗೂಢವಾಗಿ ಕಂಡಿತು. ಸೇವಕರ ಕಾವಲನ್ನು ತಪ್ಪಿಸಿಕೊಂಡು ಎಲ್ಲರಿಂದ ಮರೆಯಾಗಿ ಅಲ್ಲಿಗೆ ಹೋಗಲು ಸಾಧ್ಯವಾದರೆ ಅವನಿಗೆ ಅದೊಂದು ಸಾಧನೆ ಎನ್ನಿಸುತ್ತಿತ್ತು ಮತ್ತು ಆದರಿಂದ ಅವನಿಗೆ ಸಾಕಷ್ಟು ತೃಪ್ತಿಯಾಗುತ್ತಿತ್ತು.

ಅವನ ಬಾಲ್ಯದಲ್ಲಿ ಇಡೀ ಜಗತ್ತೇ ಒಂದು ರಹಸ್ಯದ ಪ್ರಭೆಯಿಂದ ಬೆಳಗುತ್ತ ಅವನ ಕಣ್ಣ ಮುಂದೆ ನಿಂತಂತೆ ಭಾಸವಾಗುತ್ತಿತ್ತು. ನಿಸರ್ಗವು ಅವನ ಸುತ್ತ ಒಗಟುಗಳ ಜಾಲವನ್ನೇ ಹರಡಿ ಅವನ್ನು ಬಿಡಿಸು ಎಂದು ಅವನನ್ನು ಕೇಳುತ್ತ ಅವನೊಡನೆ ಆಡುತ್ತಿದ್ದಂತೆ ತೋರುತ್ತಿತ್ತು. ಇಡೀ ಪ್ರಪಂಚವೇ ಅವನು ಓದಿ ಅರ್ಥಮಾಡಿಕೊಳ್ಳಲೆಂದು ಅವನ ಮುಂದೆ ತೆರದಿಟ್ಟ ಆತ್ಯಾಕರ್ಷಕ ಪುಟವಾಗಿತ್ತು. ಅವನಿಗೆ ವಿಶೇಷವಾಗಿ ಬೆರಗುಗೊಳಿಸಿದ್ದೆಂದರೆ ನಿಸರ್ಗದಲ್ಲಿ ವಸ್ತುಗಳು ಬೆಳೆಯುತ್ತವೆ ಎನ್ನುವ ಸಂಗತಿ. ಉದಾಹರಣೆಗೆ ಒಂದು ಗಿಡ ಒಂದು ಘಟ್ಟದಲ್ಲಿ ಬರಿಯ ಬೀಜವಾಗಿರುತ್ತದೆ. ಅದನ್ನು ಭೂಮಿಯಲ್ಲಿ ಹಾಕಿದರೆ ಸಸಿಯಾಗುತ್ತದೆ ಮತ್ತು ಹಾಗೆಯೇ ಬೆಳೆಯುತ್ತ ಹೋಗುತ್ತದೆ.

ಬೆಳೆವಣಿಗೆಯ ಈ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ನೋಡಲು ಅವನು ಒಂದಿಷ್ಟು ಮಣ್ಣನ್ನು, ಚೂರುಪಾರುಗಳನ್ನು ವರಂಡದ ಒಂದು ಮೂಲೆಯಲ್ಲಿ ಸೇರಿಸಿ ರಾಮಫಲದ ಒಂದು ಬೀಜವನ್ನು ಹಾಕಿ ಅದಕ್ಕೆ ನೀರು ಹಾಕಲು ಪ್ರಾರಂಭಿಸಿದ. ಅದು ಬೆಳೆದು ಹೂವು ಬಿಟ್ಟು ಹಣ್ಣು ಕೊಡುವ ಅತ್ಯಾಕರ್ಷಕ ಅನುಭವವನ್ನು ಪಡೆಯಬಹುದು ಎಂದು ಅವನ ವಿಚಾರ. ಮನೆಯೊಳಗೆ ಒಂದು ಹಿಡಿ ಮಣ್ಣಿನಲ್ಲಿ ಬೀಜವನ್ನು ಹಾಕಿದ್ದರಿಂದ ಈ ಆಸೆ ಫಲಿಸುವಂತಿರಲಿಲ್ಲ. ಇದಕ್ಕೆ ಸಂಬಂಧಿಸಿದ ಕೆಲವು ಪಂಕ್ತಿಗಳ ಅನುವಾದಿಸಿಕೊಡುವುದು ಇಲ್ಲಿ ಉಪಯುಕ್ತ ವಾಗುತ್ತದೆ :

ನಾನೇ ರಾಮಫಲದ ಬೀಜವೊಂದನ್ನು ಹಾಕಿ
ಅದರ ಹಣ್ಣನ್ನು ಬಿಡಿಸಿಕೊಳ್ಳಬೇಕು
ಎಂದು ನನ್ನ ಮನದ ತುಂಬ ಆಸೆ.
ಆಗ ನನಗೆ ಒಂಬತ್ತೇ ವರ್ಷ.
ಒಂದು ವಸ್ತುವಿನೊಳಗಿಂದ ಮತ್ತೊಂದು
ಬೆಳೆಯುವುದು ಹೇಗೆ ಎಂದು
ನನಗೆ ಬೆರಗೋ ಬೆರಗು.
ಮೊದಲ ಅಂತಸ್ತಿನಲ್ಲಿ ಓದುವ ಕೊಠಡಿಯ ಪಕ್ಕ
ದೊಡ್ಡದೊಂದು ವರಾಂಡ
(ಇದಕ್ಕಾಗಿ) ಮೂಲೆಯೊಂದರಲ್ಲಿ
ಸೇರಿಸಿದೆ ಮಣ್ಣುಕಲ್ಲು. *

---

* ಚಾರರ್ ಥಾಬಿ, ಆತರ್‌ಬಿಚಿ

ಆದರೆ ರವೀಂದ್ರನಾಥನ ಮನಸ್ಸನ್ನು ತುಂಬ ಸೆಳೆದದ್ದು ಮನೆಯ ಹೊರಗಿನ ಕಾಂಪೌಂಡಿನಲ್ಲಿ ಸೊಂಪಾಗಿ ಬೆಳೆಯುತ್ತಿದ್ದ ನಿಸರ್ಗದ ಪುಟ್ಟ ರಾಜ್ಯ. ಮುಖ್ಯ ಕಟ್ಟಡದ ಪೂರ್ವಕ್ಕೂ ದಕ್ಷಿಣಕ್ಕೂ ಮೈದಾನವಿತ್ತು. ದಕ್ಷಿಣ ಭಾಗದಲ್ಲಿ ಒಂದು ಕೊಳವಿತ್ತು. ಅದರ ದಕ್ಷಿಣಕ್ಕೆ ತೆಂಗಿನ ಗರಿಗಳ ಅಂಚು, ಅದರ ಪೂರ್ವತೀರದ ಒಂದು ಕೊನೆಯಲ್ಲಿ ಪುರಾತನ ಆಲದ ಮರವೊಂದು ಪಹರೆ ಕಾಯುತ್ತಿತ್ತು. ಅದರ ಪೂರ್ವಕ್ಕೆ ಸೊಗಸಾಗಿ ವಿನ್ಯಾಸಗೊಳಿಸಿದ್ದ ತೋಟ. ಅದರ ಅಂಚಿನಲ್ಲೂ ತೆಂಗಿನ ಗಿಡಗಳ ಸಾಲು.

ಅವನ ಬಾಲ್ಯದ ಮೊದಲ ದಿನಗಳಲ್ಲಿ ಈ ಪುಟ್ಟ ನಿಸರ್ಗ ರಾಜ್ಯ ಅವನು ಬೇಸರವನ್ನು ಕಳೆದುಕೊಳ್ಳಲು ನೆರವಾಗಿತ್ತು. ಅವನು ಸ್ವಲ್ಪ ಬೆಳೆದ ಮೇಲೆ ಇದು ಅತ್ಯಗತ್ಯವಾಗಿದ್ದ ನಿಸರ್ಗ ಸಂಪರ್ಕವನ್ನು ತಂದುಕೊಟ್ಟಿತು. ಇದರಿಂದ ಅವನ ಮನಸ್ಸಿಗೆ ಲವಲವಿಕೆ ಬಂದದ್ದು ಮಾತ್ರವಲ್ಲ ಅವನ ಕಾವ್ಯಶಕ್ತಿ ಬೆಳೆಯುವು ದಕ್ಕೂ ನೆರವಾಯಿತು. ವಿವಿಧ ಮನಃಸ್ಥಿತಿಗಳನ್ನು ತೋರುತ್ತಿದ್ದ ನಿಸರ್ಗ ಅವನ ಸೌಂದರ್ಯ ಪ್ರಜ್ಞೆಯನ್ನು ಸೂಚಿಸಿದ್ದು ಮಾತ್ರವಲ್ಲ, ಅವನ ಕಲ್ಪನಾ ಶಕ್ತಿಯು ಬೆಳೆಯಲು ನೆರವಾಯಿತು.

ನಗರ ಜೀವನದ ಮರುಭೂಮಿಯಲ್ಲಿನ ಈ ಗ್ರಾಮೀಣ ವಾತಾವರಣದ ಪುಟ್ಟ ಓಯಸಿಸ್, ಅವನ ಕಾವ್ಯ ಕಲ್ಪನೆಗೆ ಪುಷ್ಟಿಕೊಡುವುದರಲ್ಲಿ ತುಂಬಾ ನೆರವಾಗಿತ್ತು. ವರ್ಡ್ಸ್‌ವರ್ತ್‌ನಿಗೆ ಬಾಲ್ಯದಲ್ಲಿ ತನ್ನ ಸುತ್ತ ಕಂಡ ನಿಸರ್ಗವು— ಅಲ್ಲಲ್ಲಿ ಸರೋವರಗಳು ಮತ್ತು ಜಲಪಾತಗಳಿಂದೊಡಗೂಡಿದ ಬೆಟ್ಟ ಗುಡ್ಡಗಳು ಮತ್ತು ಕಣಿವೆಗಳು ಕೊಟ್ಟ ಸಂತೋಷವನ್ನೇ ಇದು ರವೀಂದ್ರನಾಥನಿಗೆ ಕೊಟ್ಟಿತು. ಮುಪ್ಪಿನಲ್ಲಿ ರವೀಂದ್ರರು ಬರೆದಿಟ್ಟ ಸ್ಮೃತಿಗಳಲ್ಲಿ ಒಂದರ ಭಾಗ ಈ ದೃಶ್ಯವು ಠಾಕೂರರ ಕಾವ್ಯ ಮನೋಧರ್ಮದ ಮೇಲೆ ಎಂತಹ ಆಳವಾದ ಪ್ರಭಾವವನ್ನು ಬೀರಿತು ಎನ್ನುವುದನ್ನು ತೋರಿಸುತ್ತದೆ. "ಇನ್ನೂ ಕೆಳಕ್ಕೆ ಸುರಿಯದ ಮಳೆಯಿಂದ ಭಾರವಾಗಿ ಕವಿಯುತ್ತಿರುವ ಮೋಡಗಳು, ತೆಂಗಿನ ಮರಗಳ ಸಾಲಿನಲ್ಲಿ ಪ್ರಕ್ಷುಬ್ಧ ಒಡನಾಟವನ್ನು ಉಂಟುಮಾಡುತ್ತಿರುವ ಬಿರುಗಾಳಿ ಗಳ ಅನಿರೀಕ್ಷಿತ ನುಗ್ಗಾಟ. ಬೇಸಿಗೆಯ ನಡುಹಗಲ ಕ್ರೂರ ಒಂಟಿತನ, ಚಳಿಗಾಲದ ಉಷಃಕಾಲದಲ್ಲಿ ಹಿಮದ ಪರದೆಯ ಹಿಂದೆ ನಿಶ್ಶಬ್ದವಾಗಿ ತೋರುವ

ಸೂರ್ಯೋದಯ ಇವೆಲ್ಲದರ ಅಚ್ಚರಿ ಸದಾ ಇರುವ ಒಡನಾಟದ ಆತ್ಮೀಯತೆಯಿಂದ ನನ್ನ ಮನಸ್ಸನ್ನು ತುಂಬಿಬಿಟ್ಟವು." *

ಬೆಳಿಗ್ಗೆ ಏಳುತ್ತಲೇ ತಾನು ಮಾಡಲೇಬೇಕಾದ ಮೊದಲ ಕರ್ತವ್ಯ ನಿಸರ್ಗವನ್ನು ಭೇಟಿಮಾಡಲು ಹೋಗುವುದು ಎಂದು ಅವನಿಗೆ ತೋರಿದ್ದು ಆಶ್ಚರ್ಯವಲ್ಲ. ಪ್ರಾತಃಕಾಲದ ಸೂರ್ಯನನ್ನು ಸ್ವಾಗತಿಸಲು ಅವನು ಸೂರ್ಯೋದಯಕ್ಕೆ ಬಹು ಮೊದಲೇ ಏಳುವಂತೆ ಎಚ್ಚರಿಕೆ ವಹಿಸುತ್ತಿದ್ದ. ಪೂರ್ವದಿಕ್ಕಿನ ತೋಟಕ್ಕೆ ಹೋಗಿ ತೆಂಗಿನ ಗರಿಗಳ ನಡುವೆ ಬೆಳಗುತ್ತಿದ್ದ ಸೌಮ್ಯ ಕಿರಣಗಳ ಸೂರ್ಯೋದಯದ ನೋಟದಿಂದ ಕಣ್ಣಿಗೆ ಹಬ್ಬ ಮಾಡಿಕೊಳ್ಳುತ್ತಿದ್ದ. ಮುಪ್ಪಿನಲ್ಲಿ ಬರೆದ ಒಂದು ಕವನದಲ್ಲಿ ತಮ್ಮ ಸೂಕ್ಷ್ಮವಾದ ದೃಷ್ಟಿಯ ಕಣ್ಣಿಂದ ಇಂತಹ ಒಂದು ಸುಂದರ ದೃಶ್ಯವನ್ನು ರವೀಂದ್ರರು ಸ್ಮರಿಸಿಕೊಳ್ಳುತ್ತಾರೆ. ಅದರಿಂದ ಅನುವಾದಿಸಿದ ಕೆಲವು ಪಂಕ್ತಿಗಳು ಹೀಗಿವೆ :

ಉದಯಿಸುತ್ತಿದ್ದ ಸೂರ್ಯನು ಕಂಪಿಸುತ್ತಿದ್ದ ತೆಂಗು ಗರಿಗಳ ಮೇಲೆ
ವರ್ಷಿಸುವ ಕೃಪೆಯನ್ನು ಕಾಣುವ ಭಾಗ್ಯ
ಎಲ್ಲಿ ತಪ್ಪಿ ಹೋಗುವುದೋ ಎಂದು
ಕಾಗೆಗಳು ಕಾ ಎನ್ನುವ ಬಹು ಮೊದಲೇ
ಹಾಸಿಗೆಯನ್ನು ಬಿಟ್ಟು ತೋಟಕ್ಕೆ ಹೋಗುತ್ತಿದ್ದೆ. *

ಠಾಕೂರರ ತಾಯಿ ಸ್ವತಃ ಮಗನಿಗೆ ಹೆಚ್ಚು ಲಕ್ಷ್ಯ ಕೊಡಲು ಸಾಧ್ಯವಾಗದಿದ್ದರೂ ಆಕೆಗೆ ಅವನಲ್ಲಿ ವಾತ್ಸಲ್ಯವಿತ್ತು ಎಂಬುದರಲ್ಲಿ ಸಂಶಯವಿಲ್ಲ. ಅವರು ಆಕೆಯ ಕಡೆಯ ಮಗು, ಆದ್ದರಿಂದ ಇದು ಸಹಜವೇ. ಮಗನಿಗೂ ತಾಯಿಯಲ್ಲಿ ತುಂಬ ಪ್ರೀತಿ. ತಾನೇ ಪ್ರಯತ್ನಪೂರ್ವಕವಾಗಿ ಅವಳ ಕಣ್ಣಿಗೆ ಬೀಳುವುದಕ್ಕೆ ಅಥವಾ ತನ್ನ ಇಷ್ಟದ್ದನ್ನು ನೆರವೇರಿಸಿಕೊಳ್ಳಲು ಆಕೆಯ ಸಣ್ಣಪುಟ್ಟ ಸಂತೋಷಗಳಿಗೆ ಅಡ್ಡಿ ಬರುವುದಕ್ಕೂ ಅವನು ಹಿಂದೆಗೆಯುತ್ತಿರಲಿಲ್ಲ. ರವೀಂದ್ರರ ಸ್ಮೃತಿಗಳಿಂದ ಆಯ್ದ, ಸ್ವಲ್ಪ ಮಾಹಿತಿಯು ಈ ಮಧುರ ಬಾಂಧವ್ಯದ ಸೊಗಸನ್ನು ತೋರಿಸುವುದು.

---

* "ರಿಲಿಜನ್ ಆಫ್ ಮ್ಯಾನ್," ದಿ ವಿಷನ್

* 'ಶೇಷ್ ಸಪ್ತಕ್', ನಂ. 46

ರವೀಂದ್ರನಾಥನ ಬಾಲ್ಯದಲ್ಲಿ ಆತನಿಗೆ ಪಾಠ ಹೇಳಿಕೊಡಲು ಮನೆಗೆ ಉಪಾಧ್ಯಾಯರು ಬರುತ್ತಿದ್ದರು. ಒಮ್ಮೊಮ್ಮೆ ಅವನಿಗೆ ಪಾಠ ಎಷ್ಟು ಬೇಸರ ತರುತ್ತಿತ್ತೆಂದರೆ ಅದನ್ನು ತಪ್ಪಿಸಲು ಏನಾದರೂ ನೆಪ ಹುಡುಕುತ್ತಿದ್ದ. ಸಾಮಾನ್ಯ ವಾಗಿ ಅವನು ಹೂಡುತ್ತಿದ್ದ ಉಪಾಯವೆಂದರೆ ಹೊಟ್ಟೆ ನೋವು ಎಂದು ನಟಿ ಸುವುದು. ಪಾಠ ಬೇಡ ಎಂದು ತಾಯಿಯನ್ನು ಬೇಡುತ್ತಿದ್ದ. ತಾಯಿಗೂ ಅವನ ಆಟ ಅರ್ಥವಾಗುತ್ತಿತ್ತು. ಆದರೆ ಅವನಲ್ಲಿ ಆಕೆಗೆ ಎಷ್ಟು ಪ್ರೀತಿ ಎಂದರೆ ಪ್ರಾರ್ಥನೆಯನ್ನು ತಳ್ಳಿಹಾಕಲು ಸಾಧ್ಯವಾಗುತ್ತಿರಲಿಲ್ಲ. *

ಇನ್ನೊಂದು ಉಪಾಯವನ್ನು ಹುಡುಗ ರವೀಂದ್ರ ಆಗಾಗ ಬಳಸುತ್ತಿದ್ದ. ಬ್ರಜೇಶ್ವರನು ರಾಮಾಯಣವನ್ನು ಓದಿದ ಮೇಲೆ ಹುಡುಗ ರಾತ್ರಿ ಹೋಗಿ ಮಲಗಿ ಕೊಳ್ಳಬೇಕಾಗಿತ್ತು. ಆದರೆ ಅವನಿಗೆ ಅದ್ಭುತ ಕತೆಗಳನ್ನು ಹೇಳಿದರೆ ಮಾತ್ರ ನಿದ್ರೆ ಬರುತ್ತಿತ್ತು. ಅವರೆಲ್ಲರ ಜೊತೆಗೆ ವಾಸಿಸುತ್ತಿದ್ದ ಅವನ ತಾಯಿಯ ಸೋದರತ್ತೆಯೊಬ್ಬಳು ಬಹು ಚೆನ್ನಾಗಿ ಕತೆಗಳನ್ನು ಹೇಳುತ್ತಿದ್ದಳು. ಆದ್ದರಿಂದ ರವೀಂದ್ರನಾಥನಿಗೆ ಆಕೆಯನ್ನು ಕರೆಯುವ ಆಸೆ. ಆದರೆ ಅವನ ತಾಯಿಗೆ ಸೋದರತ್ತೆಯೊಡನೆ ಇಸ್ಪೀಟ್ ಆಡುವ ಬಯಕೆ. ಆದ್ದರಿಂದ ಇದು ಹುಡುಗನ ಇಷ್ಟಕ್ಕೆ ಅಡ್ಡಿ ಬರುತ್ತಿತ್ತು. ಹಲವೊಮ್ಮೆ ರವೀಂದ್ರನಾಥನು ಮುದುಕಿಯು ತನ್ನ ಬಳಿಯೇ ಇರಬೇಕೆಂದು ಎಷ್ಟೊಂದು ರಂಪ ಮಾಡುತ್ತಿದ್ದ ಎಂದರೆ ಅದ್ಭುತ ಕತೆಗಳನ್ನು ಕೇಳಲಿ ಎಂದು ತಾಯಿಯೇ ಇಸ್ಪೀಟ್ ಆಟವನ್ನು ನಿಲ್ಲಿಸುತ್ತಿದ್ದಳು. **

ರವೀಂದ್ರನಾಥರು ಬಹು ಎಳೆಯವರಾಗಿದ್ದಾಗ ನಡೆದ ಒಂದು ಪ್ರಕರಣ ಹಲವು ರೀತಿಗಳಲ್ಲಿ ಸ್ವಾರಸ್ಯವಾಗಿದೆ. ಮೊದಲನೆಯದಾಗಿ, ಹುಡುಗನಿಗೆ ತಾಯಿಯ ವಿಷಯದಲ್ಲಿ ಇದ್ದ ತೀವ್ರ ಕಾಳಜಿ ಸ್ಪಷ್ಟವಾಗುತ್ತದೆ. ಎರಡನೆಯ ದಾಗಿ, ಇದರಿಂದ ಕುಟುಂಬದ ಈ ಅತ್ಯಂತ ಚಿಕ್ಕ ಹುಡುಗನಿಗೂ ಅದರ ಪ್ರಭುವಿಗೂ ಸುಲಭವಾಗಿ ಸಂಪರ್ಕವುಂಟಾಗಲು ಇದರಿಂದ ಸಾಧ್ಯವಾಯಿತು. ಕಳೆದ ಶತಮಾನದ ಏಳನೆಯ ದಶಕ ಮುಗಿಯುತ್ತಿದ್ದಾಗ ಭಾರತದಲ್ಲಿ ಬ್ರಿಟಿಷರ ಪ್ರದೇಶಕ್ಕೆ ರಷ್ಯ ಧಾಳಿ ಮಾಡುತ್ತದೆ ಎಂದು ಜನರಲ್ಲಿ ಭೀತಿ ಹುಟ್ಟಿತು. ಕಾಲ

---

* "ಚೆಲೆಬೇಲಾ"

** ಅದೇ

4

ಕ್ರಮೇಣ ಈ ವದಂತಿ ರವೀಂದ್ರನ ತಾಯಿಯ ಕಿವಿಯನ್ನು ಮುಟ್ಟಿತು. ಭಾರತದ ವಾಯುವ್ಯದ ಗಡಿಯಲ್ಲಿ ಕಾಲ ಕಳೆಯುತ್ತಿದ್ದ ಗಂಡನ ಕ್ಷೇಮದ ವಿಷಯವಾಗಿ ಆಕೆಗೆ ಆತಂಕವಾಗಿ ಮನೆಗೆ ಹಿಂದಿರುಗುವಂತೆ ಗಂಡನಿಗೆ ಕಾಗದ ಬರೆಯಲು ಆಕೆ ತವಕಗೊಂಡರು.

ಆಕೆಗೆ ಬರೆಯಲು ಬರುತ್ತಿರಲಿಲ್ಲವಾದುದರಿಂದ ಅವರು ತಮಗೆ ಸಹಾಯ ಮಾಡುವಂತೆ ಸಂಸಾರದಲ್ಲಿ ದೊಡ್ಡವರನ್ನು ಕೇಳಿದರು. ಯಾರೂ ನೆರವಾಗಲಿಲ್ಲ. ಪ್ರಾಯಶಃ ಅವರು ಈ ಭೀತಿಯನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಆಕೆ ಎಳೆಯ ರವೀಂದ್ರನಾಥನನ್ನು ಕಾಗದ ಬರೆಯುವಂತೆ ಕೇಳಿದರು. ರವೀಂದ್ರ ನಾಥ ಬಹು ಉತ್ಸಾಹದಿಂದ ಒಪ್ಪಿದ. ಕಾಗದ ಹೇಗೆ ಬರೆಯಬೇಕೆಂದು ತಿಳಿಯದಿದ್ದುದರಿಂದ ಕುಟುಂಬದ ಆಸ್ತಿಯನ್ನು ನಿರ್ವಹಿಸುತ್ತಿದ್ದ ಕಚೇರಿಯ ಮುನ್ಷಿಯ ನೆರವಿನಿಂದ ಕಡೆಗೂ ಕಾಗದವನ್ನು ಕಳುಹಿಸಿಯೇ ಬಿಟ್ಟ. ಕಾಗದ ತಂದೆಯ ಕೈ ಸೇರಿತು. ಅವರೂ ಅದಕ್ಕೆ ಉತ್ತರ ಕೊಡುವ ತೊಂದರೆಯನ್ನು ತೆಗೆದುಕೊಂಡರು. ಉತ್ತರದಲ್ಲಿ ಏನು ಹೇಳಿದ್ದರೆಂಬುದನ್ನು ಠಾಕೂರರ ಮಾತುಗಳಲ್ಲಿ ತಿಳಿಯೋಣ :

> ನನ್ನ ಕಾಗದಕ್ಕೆ ಉತ್ತರ ಬಂದೇ ಬಂತು. ಹೆದರುವುದಕ್ಕೆ ಕಾರಣವೇ ಇಲ್ಲ ಎಂದೂ ಅಗತ್ಯವಾದರೆ ತಾವೇ ರಷ್ಯನರನ್ನು ಓಡಿಸಿಬಿಡುವುದಾಗಿಯೂ ತಂದೆಯವರು ಬರೆದಿದ್ದರು. ಈ ದೃಢ ಭರವಸೆಯಿಂದ ರಷ್ಯನರ ವಿಷಯದಲ್ಲಿ ನನ್ನ ತಾಯಿಗಿದ್ದ ಭಯ ಕಡಿಮೆಯಾದಂತೆ ಕಾಣಲಿಲ್ಲ. ಆದರೆ ತಂದೆಯವರ ಎದುರಿಗೆ ನಿಲ್ಲಲು ನನಗೆ ಎಷ್ಟೋ ಪಾಲು ಧೈರ್ಯ ಬಂದಿತು. *

ಮನೆಯ ಪೂರ್ವಭಾಗದಲ್ಲಿ ಮಾಳಿಗೆಯ ಮೇಲೆ ರವೀಂದ್ರನ ತಾಯಿ ಮಧ್ಯಾಹ್ನದ ಹೊತ್ತು ಸಂಸಾರದ ಇತರ ಹೆಂಗಸರೊಡನೆ ಕಾಲ ಕಳೆಯುತ್ತಿದ್ದರು. ಹೆಂಗಸರೆಲ್ಲ ಸೇರಿ ಹರಟೆಯಲ್ಲಿ ಕಾಲ ಕಳೆಯುತ್ತಿದ್ದರು. ರವೀಂದ್ರನಿಗೆ ಸ್ವಲ್ಪ

* 'ಜೀವನ್ ಸ್ಮೃತಿ', ಪಿತೃದೇವ್

ವಯಸ್ಸಾಗಿ ಶಾಲೆಗೆ ಹೋಗಲು ಪ್ರಾರಂಭಿಸಿದ ಮೇಲೆ ಸಭೆಗಳಿಗೆ ಅವನಿಗೆ ಸುಲಭ ಪ್ರವೇಶವಿತ್ತು. ವಿಜ್ಞಾನದಲ್ಲಿ ಅಥವಾ ಚರಿತ್ರೆಯಲ್ಲಿ ಅವನು ಹೊಸದೇನನ್ನಾದರೂ ಕಲಿತಿದ್ದರೆ ಅವನು ತಪ್ಪದೆ ಅದನ್ನು ಈ ಸಭೆಗೆ ತಿಳಿಸುತ್ತಿದ್ದ. ವಾತ್ಸಲ್ಯಮಯಿಯಾದ ತಾಯಿ ಅವನನ್ನು ಮೆಚ್ಚಿಕೆಯಿಂದ ನೋಡಿ ಬೆನ್ನು ತಟ್ಟದೆ ಇರುತ್ತಿರಲಿಲ್ಲ.

ಹೀಗಿದ್ದರೂ ರವೀಂದ್ರನ ತಾಯಿ ದುರದೃಷ್ಟದಿಂದ ಆತನ ಚಿಕ್ಕ ವಯಸ್ಸಿನಲ್ಲೇ ತೀರಿಕೊಂಡರು. ಆಗ ರವೀಂದ್ರನಿಗೆ ಹದಿನಾಲ್ಕೇ ವರ್ಷ. ಅವನಿಗೆ ಆಕೆಯಿಲ್ಲದ ನೋವು ಅನುಭವವಾಯಿತು. ರವೀಂದ್ರರು ತಮ್ಮ ಜೀವನ ಸ್ಮೃತಿಗಳಲ್ಲಿ ಹೇಳುವಂತೆ ಆಕೆ ತೀರಿಕೊಂಡ ಎಷ್ಟೋ ದಿನಗಳನಂತರವೂ ಕೆನೆ ಹಾಲಿನ ಬಣ್ಣದ ಮೊಗ್ಗಿನಂತಿದ್ದ ಆಕೆಯ ವಾತ್ಸಲ್ಯದ ಬೆರಳುಗಳ ಆಪ್ಯಾಯಮಾನವಾದ ಸ್ಪರ್ಶವನ್ನು ನೆನೆಸಿಕೊಂಡು ಅವರು ಸಮಾಧಾನಪಡುತ್ತಿದ್ದರು.

ಅಧ್ಯಾಯ ೪

ವಿದ್ಯಾಭ್ಯಾಸ

ದೇಹಕ್ಕೂ ಮನಸ್ಸಿಗೂ ಎಲ್ಲ ರೀತಿಯ ಶಿಕ್ಷಣ ಕೊಡಲು ಕುಟುಂಬದಲ್ಲಿ ವಿಶಾಲವಾದ ಅವಕಾಶವಿತ್ತು. ಕಾಲಕ್ರಮದಲ್ಲಿ ರವೀಂದ್ರನು ಅದಕ್ಕೆ ಒಳಗಾಗ ಬೇಕಾಯಿತು. ಅದರ ಮೇಲ್ವಿಚಾರಣೆಯನ್ನು ಅವನ ಮೂರನೆಯ ಅಣ್ಣ ಹೇಮೇಂದ್ರನಾಥ ತಾನೇ ಹೊತ್ತುಕೊಂಡ. ಪಾಠಗಳನ್ನು ಓದುವುದಷ್ಟೇ ಅಲ್ಲದೆ ದೇಹದ ಬೆಳವಣಿಗೆಗಾಗಿ ಕುಸ್ತಿ ಮತ್ತು ಲಲಿತಕಲೆಗಳಲ್ಲಿ ಅಭಿರುಚಿಯನ್ನು ಬೆಳೆಸಲು ಸಂಗೀತ ಇವೂ ಶಿಕ್ಷಣದಲ್ಲಿ ಸೇರಿದ್ದವು. ಠಾಕೂರರು ತಮ್ಮ 'ಚೆಲೆಬೆಲಾ' ಎನ್ನುವ ಪುಸ್ತಕದಲ್ಲಿ ಈ ಏರ್ಪಾಟುಗಳನ್ನು ವಿವರವಾಗಿ ವರ್ಣಿಸಿದ್ದಾರೆ.

ದಿನದಲ್ಲಿ ಮೊದಲ ಶಿಕ್ಷಣ ಕುಸ್ತಿಯದು. ಹೇಮೇಂದ್ರನಾಥನೇ ಸ್ವತಃ ಒಳ್ಳೆಯ ಕುಸ್ತಿಗಾರ. ಅವನ ಮೇಲ್ವಿಚಾರಣೆಯಲ್ಲಿ ಕುಟುಂಬದ ಹುಡುಗರಿಗೆ ಶಿಕ್ಷಣ ಕೊಡಲು ಹೀರಾಸಿಂಗ್ ಎನ್ನುವ ಕುಸ್ತಿಗಾರನನ್ನು ನೇಮಕಮಾಡಿ ಕೊಂಡಿದ್ದರು. ಅವನಿಗೆ 'ಕುರುಡು ಮಲ್ಲ' ಎಂದು ಅಡ್ಡ ಹೆಸರು ಇಟ್ಟಿದ್ದರು. ಈ ಶಿಕ್ಷಣಕ್ಕೆ ಗೊತ್ತಾಗಿದ್ದ ಸ್ಥಳ ಮನೆಯ ಉತ್ತರಕ್ಕಿದ್ದ 'ಗೋಲಾಬಾರಿ' ಎನ್ನುವ ಬಯಲುಪ್ರದೇಶ. ಈ ಪಾಠಗಳಿಗಾಗಿ ರವೀಂದ್ರನಾಥ ಸೂರ್ಯೋದಯಕ್ಕೆ ಬಹು ಮೊದಲೇ ಬೆಳಗ್ಗೆ ಹಾಸಿಗೆಯನ್ನು ಬಿಡಬೇಕಾಗುತ್ತಿತ್ತು. ಈ ಪಾಠಗಳಲ್ಲಿ

ಅವರಿಗೆ ಸಂತೋಷವಿರಲಿಲ್ಲ. ಚಳಿಗಾಲದ ಪ್ರಾತಃಕಾಲಗಳಲ್ಲಂತೂ ಬೇಕಿರಲಿಲ್ಲ ಎನ್ನುವುದು ಸ್ಪಷ್ಟ. ಆದರೆ ಹೇಮೇಂದ್ರನಾಥನು ಬಹು ಕಟುನಿಟ್ಟಾದ ಶಿಸ್ತುಗಾರ. ಆದುದರಿಂದ ಅವುಗಳನ್ನು ತಪ್ಪಿಸಿಕೊಳ್ಳುವುದು ಸಾಧ್ಯವೇ ಇರಲಿಲ್ಲ. ಈ ದೈಹಿಕ ವ್ಯಾಯಾಮಕ್ಕೂ ಈ ವಿಷಯಕ್ಕೂ ಸಂಬಂಧವಿತ್ತೋ ಇಲ್ಲವೋ ಹೇಳುವುದು ಕಷ್ಟ. ಆದರೆ ತೀರ ವೃದ್ಧರಾಗುವವರೆಗೆ ಠಾಕೂರರಿಗೆ ಆರೋಗ್ಯ ಬಹಳ ಚೆನ್ನಾಗಿತ್ತು ಎನ್ನುವುದು ನಿಜ.

ಇನ್ನು ಓದು ಬರಹದ ವಿಷಯ. ಬೆಳಗ್ಗೆ ಏಳು ಗಂಟೆ ಹೊಡೆಯುವ ಹೊತ್ತಿಗೆ ಉಪಾಧ್ಯಾಯ ಬರುತ್ತಿದ್ದ. ಹೇಮೇಂದ್ರನಾಥ ಒತ್ತಾಯಿಸಿ ತೀರ್ಮಾನ ಮಾಡಿದ ಪ್ರಕಾರ ಪಾಠಗಳು, ಬಂಗಾಳೀ ಭಾಷೆಯಲ್ಲಿ ನಡೆಯುತ್ತಿದ್ದವು. ಹೇಳಿ ಕೊಡುತ್ತಿದ್ದುದು ಮೂರು ವಿಷಯಗಳನ್ನು : ಗಣಿತ, ಈಶ್ವರ ಚಂದ್ರ ವಿದ್ಯಾ ಸಾಗರರ 'ಸೀತಾರ್ ವನವಾಸ'ವೂ ಸೇರಿದಂತೆ ಬಂಗಾಳೀ ಭಾಷೆಯ ಶ್ರೇಷ್ಠ ಕೃತಿಗಳು ಮತ್ತು ಪ್ರಾಥಮಿಕ ವಿಜ್ಞಾನ. ಈ ಪಾಠಗಳು ಇಡೀ ಪ್ರಾತಃಕಾಲ ನಡೆಯುತ್ತಿದ್ದವು. ರವೀಂದ್ರನಾಥನಿಗೆ ಇವುಗಳೂ ಬೇಕಿರಲಿಲ್ಲ. ತಾನಾಗಲೀ ಉಪಾಧ್ಯಾಯರಾಗಲೀ ಕಾಯಿಲೆ ಬೀಳಬಾರದೆ ಎಂದು ಹಂಬಲಿಸುತ್ತಿದ್ದ. ಆದರೆ ಈ ಹಂಬಲ ಈಡೇರಲೇ ಇಲ್ಲ.

ಇವಲ್ಲದೆ ಸಂಗೀತ ಪಾಠವೂ ಇತ್ತು. ಸುದೈವದಿಂದ ರವೀಂದ್ರನಾಥನಿಗೆ ಬಾಲ್ಯದಲ್ಲಿ ವಿಷ್ಣು ಎಂಬ ಸಂಗೀತ ಉಪಾಧ್ಯಾಯ ದೊರಕಿದ. ಆತನೇನೂ ಪ್ರಸಿದ್ಧ ಗಾಯಕನಲ್ಲ. ಆದರೆ ಎಲ್ಲ ಹುಡುಗರಂತಲ್ಲದ ಈ ಹುಡುಗನಿಗೆ ಸಂಗೀತ ಪಾಠಗಳ ಆಸಕ್ತಿ ಹುಟ್ಟಿಸುವಂತೆ ಮಾಡುವುದನ್ನು ಆತ ಬಲ್ಲವನು. ತನ್ನ ಶಿಷ್ಯನ ಆಸಕ್ತಿಯನ್ನು ಪ್ರಚೋದಿಸಬೇಕೆಂದು ಆತನಿಗೆ ತಿಳಿದಿತ್ತು. ಇದಕ್ಕಾಗಿ ಆತ ಸಾಂಪ್ರದಾಯಕ ರೀತಿಯನ್ನು ಬಿಟ್ಟು ಸಾಮಾನ್ಯ ಬಂಗಾಳಿ ಶಿಶು ಗೀತೆಗಳನ್ನು ಪಾಠಗಳಲ್ಲಿ ಬಳಸಿದ. ಇದರಿಂದ ಮಗುವಿನ ಮೇಲೆ ಅವನು ಬಯಸಿದ ಪರಿಣಾಮ ವಾಯಿತು. ಚಿಕ್ಕ ವಯಸ್ಸಿನಲ್ಲಿ ಸಂಗೀತದಲ್ಲಿ ಒಳ್ಳೆಯ ಪ್ರಾಥಮಿಕ ಶಿಕ್ಷಣವನ್ನು ಮೈಗೂಡಿಸಿಕೊಳ್ಳಲು ನೆರವಾಯಿತು.

ಇತರ ವಿಷಯಗಳಲ್ಲಿನಂತೆಯೇ ಸಂಗೀತದಲ್ಲಿ ತನ್ನ ಮೇಲೆ ಹೊರಿಸಿದ ಪಾಠಗಳೆಂದರೆ ರವೀಂದ್ರನಾಥನಿಗೆ ಸ್ವಭಾವ ಸಹಜ ಪ್ರತಿರೋಧ ಎಂದು ತೋರುತ್ತದೆ. ಆದರೆ, ಅವನನ್ನು ತನ್ನಷ್ಟಕ್ಕೆ ತಾನೆ ಕಲಿಯಲು ಬಿಟ್ಟರದೆ,

ಶ್ರೇಷ್ಠ ಸಂಗೀತಗಾರರು ಹಾಡುವುದನ್ನು ಕೇಳಿಯೇ ಅವನು ರಾಗಗಳನ್ನು ಕಲಿತು ಕೊಳ್ಳುವ ಆಶ್ಚರ್ಯಕರ ಶಕ್ತಿಯನ್ನು ಪಡೆದಿದ್ದ. ಅವನಿಗೇ ಈ ಗುಣದ ಅರಿವಿತ್ತು. ಈ ಕಾರಣದಿಂದಲೇ, ಅನಂತರದ ದಿನಗಳಲ್ಲಿ, ಆ ಕಾಲದ ಶ್ರೇಷ್ಠ ಸಂಗೀತಗಾರರಲ್ಲಿ ಒಬ್ಬನಾಗಿದ್ದ. ಜಾದು ಭಟ್ಟನು ಪಾಠ ಹೇಳಿಕೊಟ್ಟದ್ದು ಸಂಪೂರ್ಣವಾಗಿ ವ್ಯರ್ಥವಾಯಿತು. *

ರವೀಂದ್ರನಾಥರಲ್ಲಿ ಜನ್ಮಸಿದ್ಧ ಕಾವ್ಯ ಪ್ರೇಮವಿಲ್ಲದೆ ಹೋಗಿದ್ದರೆ, ಅವರ ಓದಿನ ಪಾಠವು ಹೊರಿಸಿದ ಕೆಲಸಗಳ ವಿರುದ್ಧ ಅವರಿಗಿದ್ದ ಸಹಜ ವಿರೋಧದಿಂದ ದಿಕ್ಕುಗೆಡುತ್ತಿತ್ತು ಎಂದು ಕಾಣುತ್ತದೆ. ಅಹಿತವಾದ ಅನುಭವಗಳು ರಸಾನು ಭವಕ್ಕೆ ದಾರಿ ಮಾಡಿಕೊಡುವುದಾದರೆ ಅವನ್ನು ಸಹಿಸುವಂತಹ ಪ್ರಬುದ್ಧ ಕಲಾಭಿರುಚಿ ಅವನಿಗಿತ್ತೆನ್ನುವುದು ಸ್ಪಷ್ಟ. ವರ್ಣ ಮಾಲೆಯ ಮೇಲೆ ಪ್ರಭುತ್ವ ಸಾಧಿಸಲು ಅಗತ್ಯವಾದ ನೀರಸ ಪಾಠಗಳನ್ನು ಸಹಿಸಲು ಅವನಿಗೆ ಸಾಧ್ಯವಾದದ್ದು, ಬರಹ ರೂಪದ ಶಬ್ದಗಳು ಸೌಂದರ್ಯದ ಹಾದಿ ಎಂಬುದನ್ನು ಕಂಡು ಕೊಂಡದ್ದ ರಿಂದಲೇ ಎಂದು ಕಾಣುತ್ತದೆ. ತನ್ನ ಬಾಲಬೋಧೆಯನ್ನು ಸಂಪೂರ್ಣವಾಗಿ ಅಭ್ಯಾಸ ಮಾಡಬೇಕೆಂದು ಪ್ರಯತ್ನ ಪ್ರಾರಂಭಿಸಿದಾಗ ಅದು ತೀರ ನೀರಸವಾಗಿ ಕಂಡಿತೆಂದು ಅವರೇ ಒಪ್ಪಿಕೊಂಡಿದ್ದಾರೆ. ಆದರೆ, ಪಾಠಗಳನ್ನು ಓದಿಕೊಂಡರೆ ಕಾವ್ಯದ ಈ ಗಂಧರ್ವಲೋಕ ತೆರೆದುಕೊಂಡೀತೆಂಬ ಅರಿವಿನಿಂದ ಮೂಲಂಗಿ ಯಾಸೆಗೆ ಭಾರಹೊತ್ತು ನಡೆವ ಪ್ರಾಣಿಯಂತಾದ ಹುಡುಗ. ಅವರು ಹೇಳುತ್ತಾರೆ :

> ಇದ್ದಕ್ಕಿದ್ದಂತೆ ಪ್ರಾಸಬದ್ಧವಾದ ಪದಗುಚ್ಛಕ್ಕೆ ಬಂದೆ. ಅದನ್ನು ಹೀಗೆ ಅನುವಾದಿಸಬಹುದು. 'ಮಳೆ ಬರುತ್ತದೆ, ಎಲೆಗಳು ಕಂಪಿಸುತ್ತವೆ.' ನನ್ನ ಸಂಪೂರ್ಣ ಅರ್ಥವನ್ನು ಆ ಕ್ಷಣದಲ್ಲಿ ನಾನು ಮತ್ತೆ ಕಂಡುಕೊಂಡೆ. ನನ್ನ ಮನಸ್ಸು ಮಾತಿನ ಸೃಜನಲೋಕವನ್ನು ಮುಟ್ಟಿತ್ತು. ಆ ಕ್ಷಣದಲ್ಲಿ ನಾನು, ತರಗತಿಯಲ್ಲಿ ಕುಳಿತು ಕಾಗುಣಿತದ ಪಾಠಗಳಿಂದ ಗೊಂದಲಕ್ಕೊಳಗಾದ ವಿದ್ಯಾರ್ಥಿಯಾಗಿರಲಿಲ್ಲ. **

---

* 'ಚಿಲೆಬೆಲಾ'

** 'ರಿಲಿಜನ್ ಆಫ್ ಮ್ಯಾನ್,' ದಿ ವಿಷನ್

ಮನೆಯಲ್ಲಿ ಶಿಕ್ಷಣ ಮುಗಿದನಂತರ ಹುಡುಗನನ್ನು ಶಾಲೆಗೆ ಸೇರಿಸಿದರು. ಅದೇ ಕುಟುಂಬಕ್ಕೆ ಸೇರಿದ, ಸರಿಸುಮಾರು ಅದೇ ವಯಸ್ಸಿನ ಇಬ್ಬರು ಹುಡುಗರು ಅವನೊಂದಿಗೆ ಬೆಳೆಯುತ್ತಿದ್ದರು. ಮೊದಲನೆಯವನು, ಅವನ ಕಡೆಯ ಅಣ್ಣ ಸೋಮೇಂದ್ರನಾಥ. ಎರಡನೆಯವನು, ಅವನ ಮೊದಲನೆಯ ಅಕ್ಕನ ಮಗ ಸತ್ಯ. ಇಬ್ಬರೂ ಅವನಿಗಿಂತ ಎರಡು ವರ್ಷ ದೊಡ್ಡವರು. ಅವರು ಮನೆಯಲ್ಲಿ ಒಟ್ಟಿಗೆ ಓದುತ್ತಿದ್ದರು. ಒಂದೇ ಕೊಠಡಿಯಲ್ಲಿ ಮಲಗುತ್ತಿದ್ದರು. ಅವರ ಉಪನಯನಗಳೂ ಒಟ್ಟಿಗೆ ನಡೆದವು.

ಅವರು ಮೊದಲು ಸೇರಿದ್ದು ಉತ್ತರ ಕಲ್ಕತ್ತೆಯಲ್ಲಿದ್ದ ಓರಿಯಂಟಲ್ ಸೆಮಿನಾರ್ ಶಾಲೆಯಲ್ಲಿ. ಉಪಾಧ್ಯಾಯನಿಗೆ ವಿದ್ಯಾರ್ಥಿಗಳ ಮೇಲೆ ಸಂಪೂರ್ಣ ಅಧಿಕಾರ. ತನ್ನ ಮನಬಂದಂತೆ ಶಿಕ್ಷೆ ಕೊಡುವುದರಲ್ಲಿ ಅವನಿಗೆ ಖುಷಿ. ಶಾಲೆಯ ಮೊದಲ ಈ ಅನುಭವ ರವೀಂದ್ರನಾಥನ ಮನಸ್ಸಿನ ಮೇಲೆ ಆಳವಾದ ಪರಿಣಾಮ ವನ್ನು ಉಂಟುಮಾಡಿತು. ಇದಾದನಂತರ, ರವೀಂದ್ರನಾಥನಿಗೆ ಬಹು ಖುಷಿ ಕೊಡುತ್ತಿದ್ದ ವಿನೋದವೆಂದರೆ, ತಮ್ಮ ಮನೆಯ ಮೊಗಸಾಲೆಯ ಒಂದು ಮೂಲೆ ಯಲ್ಲಿ ತಾನೇ ಉಪಾಧ್ಯಾಯನ ಪಾತ್ರವನ್ನು ವಹಿಸಿ, ಅದರ ಅಂಚಿನಲ್ಲಿದ್ದ ಕಬ್ಬಿಣದ ಸಲಾಕಿಗಳನ್ನು ವಿದ್ಯಾರ್ಥಿಗಳಂತೆ ದಂಡಿಸುವುದು ಎಂದು ಕಾಣುತ್ತದೆ. *

ಆದರೆ ಪ್ರಾರಂಭದ ಆಕರ್ಷಣೆ ಬೇಗನೆ ಮಾಯವಾಯಿತು. ಸ್ವಲ್ಪ ಕಾಲದ ನಂತರ ಹುಡುಗರನ್ನು ನಾರ್ಮಲ್ ಸ್ಕೂಲಿಗೆ ಕಳುಹಿಸಲಾರಂಭಿಸಿದಾಗ, ಪೂರಾ ದ್ವೇಷದ ಅನುಭವವೇ ಆದಂತೆ ತೋರುತ್ತದೆ. ತರಗತಿಯ ನಾಲ್ಕು ಗೋಡೆಗಳ ನಡುವೆ ಸೆರೆಯಲ್ಲಿರುವುದು ಹುಡುಗನಿಗೆ ಬೇಕಿರಲಿಲ್ಲ. ಉಪಾಧ್ಯಾಯ—ಶಿಷ್ಯರ ನಡುವೆ ಪ್ರೀತಿ ಬೆಳೆಯಲು ಅವಕಾಶವೇ ಇಲ್ಲದಂತೆ ಉಪಾಧ್ಯಾಯರು, ವೈಯಕ್ತಿ ಕತೆಯ ಲೋಪವೇ ಇಲ್ಲದಂತೆ ಪಾಠ ಮಾಡುತ್ತಿದ್ದುದು ಅವನಿಗೆ ಇಷ್ಟವಾಗಲಿಲ್ಲ. ಶಾಲೆ ಜೀವನದ ವೈವಿಧ್ಯರಾಹಿತ್ಯವನ್ನು ನಿವಾರಿಸಲು ಅವನ ಜೊತೆಯ ವಿದ್ಯಾರ್ಥಿ ಗಳಾದರೂ ನೆರವಾಗಬಹುದಾಗಿತ್ತು. ಆದರೆ ಅವರ ಕೀಳು ಅಭಿರುಚಿ ಮತ್ತು ಅಪೇಕ್ಷಣೀಯವಲ್ಲದ ಅಭ್ಯಾಸಗಳಿಂದ ಅವರಲ್ಲಿ ಅವನಿಗೆ ಸ್ನೇಹ ಮೂಡಲಿಲ್ಲ. ಇದರಿಂದ ಅವನು ಪಾಠವಿಲ್ಲದಿದ್ದಾಗ ಮತ್ತು ಊಟ ತಿಂಡಿಗಳ ವೇಳೆಯಲ್ಲಿ ಒಬ್ಬನೇ ಇರಲು ಅಪೇಕ್ಷಿಸುತ್ತಿದ್ದ.

* 'ಜೀವನ್ ಸ್ಮೃತಿ,' ನಾರ್ಮಲ್ ಸ್ಕೂಲ್

ಒಂದು ವರ್ಷ ಶಾಲೆಗೆ ಹೋದ ನಂತರ ರವೀಂದ್ರನಾಥ ಶಾಲೆಯಲ್ಲಿ ನಡೆದ ವಾರ್ಷಿಕ ಪರೀಕ್ಷೆಗೆ ಕುಳಿತ. ಎಲ್ಲರಿಗೂ ಆಶ್ಚರ್ಯವೆನಿಸುವಂತೆ ಅವನು ಬಂಗಾಳಿಯಲ್ಲಿ ಮೊದಲ ಸ್ಥಾನ ಗಳಿಸಿದ. ಶಾಲೆಯ ಜೀವನದಲ್ಲಿ ಅವನು ಗಳಿಸಿದ ಪ್ರಶಸ್ತಿ ಇದೊಂದೇ.

ಕಾವ್ಯರಚನೆಯಲ್ಲಿ ರವೀಂದ್ರನಾಥನಿಗೆ ಮೊಟ್ಟ ಮೊದಲು ಪಾಠವಾದದ್ದು ಈ ಘಟ್ಟದಲ್ಲೇ. ಸುದೈವದಿಂದ ಅವನ ಹತ್ತಿರದ ನಂಟ, ಜ್ಯೋತಿ ಪ್ರಕಾಶನು ಈ ವಿಷಯದಲ್ಲಿ ಅವನಿಗೆ ಪಾಠ ಹೇಳಿಕೊಡಲು ನಿರ್ಧರಿಸಿದ. ರವೀಂದ್ರನಾಥನ ಚಿಕ್ಕಪ್ಪ ಗಿರೀಂದ್ರನಾಥರ ಮಗಳ ಮಗ, ಜ್ಯೋತಿಪ್ರಕಾಶ. ಅವನು ಸೋದರಳಿಯ ರವೀಂದ್ರನಾಥನಿಗಿಂತ ಏಳುವರ್ಷ ದೊಡ್ಡವನು. ಇಪ್ಪತ್ತನೆಯ ವಯಸ್ಸಿನ ಹತ್ತಿರ ಬಂದಿದ್ದವನು ಕಾವ್ಯದಲ್ಲಿ ಒಂದು ಪಂಕ್ತಿಯ ಕಡೆಯ ಶಬ್ದಕ್ಕೂ ಹಿಂದಿನ ಪಂಕ್ತಿಯ ಕಡೆಯ ಶಬ್ದಕ್ಕೂ ಪ್ರಾಸವಿರಬೇಕೆಂಬುದನ್ನು ಜ್ಯೋತಿಪ್ರಕಾಶನು ರವೀಂದ್ರನಾಥನಿಗೆ ತೋರಿಸಿಕೊಟ್ಟ. ಕವನ ರಚನೆಯಲ್ಲಿ ಸಹಜವಾದ ಸಾಮರ್ಥ್ಯವಿದ್ದ ರವೀಂದ್ರನಾಥನು ಕೂಡಲೇ ಈ ಹೊಸ ಹವ್ಯಾಸದಲ್ಲಿ ಮುಳುಗಿದ. ನೀಲಿಬಣ್ಣದ ಕಾಗದದ ಒಂದು ಎಕ್ಸ್‌ರ್‌ಸೈಸ್ ಪುಸ್ತಕವನ್ನು ತೆಗೆದುಕೊಂಡು ತಾನೇ ರಚಿಸಿದ ಕವನಗಳಿಂದ ಅದನ್ನು ತುಂಬಿಸಲು ಪ್ರಾರಂಭಿಸಿದ.

ಎಳೆಯ ಕವಿಗೆ ಇದೊಂದು ಖುಷಿಯೂದ ಅನುಭವವಾಗಿತ್ತು. ಆದರೆ ಈ ಸಾಧನೆಯಿಂದ ತುಂಬಾ ಸಂತೋಷಪಟ್ಟವನೆಂದರೆ ಅವನ ಕಡೆಯ ಅಣ್ಣ, ಸೋಮೇಂದ್ರನಾಥ. ಅವನಿಗೆ ಈ ತಮ್ಮನೆಂದರೆ ಎಷ್ಟು ಹೆಮ್ಮೆ ಎಂದರೆ ಕುಟುಂಬದ ಹಿರಿಯ ಸ್ನೇಹಿತರ ಗಮನ ಸೆಳೆದು ಈ ಕವನಗಳನ್ನು ಅವರ ಮುಂದೆ ಓದುವನು. ಅವರಿಂದ ಪ್ರಶಂಸೆಯ ಒಂದು ಮಾತನ್ನು ಕಸಿಯುವ ಆಸೆ ಅವನಿಗೆ. ಮುಂದೆ ಈ ಅಣ್ಣ ಮಾನಸಿಕ ರೋಗಿಯಾಗಿ, ತನ್ನ ಪ್ರತಿಭಾವಂತ ತಮ್ಮನ ಅನೇಕ ವಿಷಯಗಳನ್ನು ಕಂಡು ಸಂತೋಷಪಡಲು ಸಾಧ್ಯವಿಲ್ಲದೆ ಹೋಯಿತು ಎಂಬುದನ್ನು ನೆನೆದಾಗ ದುಃಖವಾಗುತ್ತದೆ.

ಸ್ವಲ್ಪಕಾಲದಲ್ಲೇ ಕವಿಯಾಗಿ ಅವನ ಕೀರ್ತಿ ಶಾಲೆಗೂ ಹಬ್ಬಿತು. ಅವನ ಉಪಾಧ್ಯಾಯರಲ್ಲೊಬ್ಬರು ಅವನ ಕಾವ್ಯದಲ್ಲಿ ಆಸಕ್ತಿಯನ್ನು ತೋರಿಸಿದರು. ಆದರೆ ಅರಳುವ ಪ್ರತಿಭೆಯ ಈ ಕವಿ ತುಂಬಾ ಭೀತಿಗೊಂಡಿದ್ದ. ಶ್ರೀಕೃಷ್ಣ ಸಿನ್ಹ ಎಂಬ

ಹಿರಿಯರ ಮೆಚ್ಚಿಗೆಗೆ ಪಾತ್ರನಾದ. ಆತ ರಾಯಪುರದ ಒಂದು ಜಮೀನ್ದಾರ್ ಕುಟುಂಬಕ್ಕೆ ಸೇರಿದವನು. ಮುಂದಿನ ವರ್ಷಗಳಲ್ಲಿ ಆ ವಂಶಕ್ಕೆ ಸೇರಿದ ಸತ್ಯೇಂದ್ರ ಪ್ರಸನ್ನ ಸಿನ್ಹ ಎನ್ನುವವರನ್ನೇ ಬ್ರಿಟಿಷ್ ಸರಕಾರ ಒಬ್ಬ (ಜಹಗೀರುದಾರ) 'ಬ್ಯಾರನ್' ಎಂದು ಮಾನ್ಯ ಮಾಡಿದಾಗ ಕುಟುಂಬಕ್ಕೆ ತುಂಬ ಗೌರವ ಬಂದಿತು. ಶ್ರೀಕೃಷ್ಣಸಿನ್ಹರು ಮಹರ್ಷಿಯವರ ಸಂತರಂತಹ ಸ್ವಭಾವ ದಿಂದ ಆಕರ್ಷಿತರಾಗಿ ಅವರ ಮನೆಗೆ ಆಗಾಗ ಬರುತ್ತಿದ್ದರು. ಕುಟುಂಬದ ಎಲ್ಲರ ಪ್ರೀತಿಯನ್ನು ಸಂಪಾದಿಸುವ ಆಶ್ಚರ್ಯಕರ ಶಕ್ತಿ ಅವರಿಗಿತ್ತು. ವಿಕಾಸ ಗೊಳ್ಳುತ್ತಿದ್ದ ಕವಿಯ ಕವನಗಳನ್ನು ಅವರು ಅತ್ಯಂತ ಸಹಾನುಭೂತಿಯಿಂದ ಕೇಳುತ್ತಿದ್ದರು. ಅಲ್ಲದೆ, ರವೀಂದ್ರನಾಥನಿಗೆ ಆಗ ತಾನೇ ಹದಿನಾಲ್ಕು ವರ್ಷ ವಾಗಿದ್ದಾಗ ತೆಗೆದ ಚಿತ್ರವು ನಮಗೆ ಅವರಿಂದಲೇ ದೊರಕಿರುವುದು. ಇದಕ್ಕಾಗಿಯೂ ನಾವು ಅವರಿಗೆ ಕೃತಜ್ಞರಾಗಿರಬೇಕು.

ಅಘೋರಬಾಬು ಎಂಬ ಉಪಾಧ್ಯಾಯರ ಮೇಲ್ವಿಚಾರಣೆಯಲ್ಲಿ ಹುಡುಗರಿಗೆ ಇಂಗ್ಲೀಷಿನಲ್ಲಿ ಪಾಠ ಹೇಳಿಸಲು ಈ ಸಮಯದಲ್ಲಿ ವಿಶೇಷ ಏರ್ಪಾಟನ್ನು ಮಾಡ ಲಾಯಿತು. ಅವರು ಪಾಠ ಹೇಳುತ್ತಿದ್ದುದು ಸಂಜೆಯ ಹೊತ್ತು. ಅವನ ಮೇಲೆ ಹೊರಿಸಿದ ಈ ಪಾಠಗಳೆಂದರೆ ರವೀಂದ್ರನಾಥನಿಗೆ ತೀರ ಬೇಸರ ಎಂದು ಹೇಳ ಬೇಕಾಗಿಯೇ ಇಲ್ಲ. ಪಕ್ಷಿಗಳಿಗೆ ದೀಪ ಹೊತ್ತಿಸುವ ಕಲೆ ತಿಳಿಯದು, ಆದ್ದರಿಂದ ರಾತ್ರಿಯ ಹೊತ್ತು ಪಾಠ ಹೇಳಿಸಿಕೊಳ್ಳುವ ದುರದೃಷ್ಟ ಅವಕ್ಕಿಲ್ಲ, ತನಗಿಂತ ಅವುಗಳ ಅದೃಷ್ಟ ಒಳ್ಳೆಯದು ಎಂದು ಕೊಳ್ಳುತ್ತಿದ್ದ ಹುಡುಗ.

ಕೆಲವು ಕಾಲದ ನಂತರ ಹುಡುಗರನ್ನು ನಾರ್ಮಲ್ ಸ್ಕೂಲ್ ಬಿಡಿಸಿ 'ಬೆಂಗಾಲ್ ಅಕಾಡಮಿ' ಎಂಬ ಹೆಸರಿನ ಆಂಗ್ಲೋ-ಇಂಡಿಯನ್ ಶಾಲೆಯೊಂದಕ್ಕೆ ಸೇರಿಸ ಲಾಯಿತು. ಪಾಠಗಳ ಕಲಿಕೆಗೆ ಇಲ್ಲಿ ಅತಿಪ್ರಾಧಾನ್ಯವಿರಲಿಲ್ಲ. ಹುಡುಗರು ತುಂಟರಾದರೂ ಅವರ ವರ್ತನೆ ಕೆಟ್ಟುದಾಗಿರಲಿಲ್ಲ. ಆದುದರಿಂದ ರವೀಂದ್ರ ನಾಥನಿಗೆ ಮೊದಲಿನಷ್ಟು ತೊಂದರೆ ಇರಲಿಲ್ಲ. ಆದರೂ, ತರಗತಿಯ ನಾಲ್ಕು ಗೋಡೆಗಳ ನಡುವೆ ಕಾಲ ಕಳೆಯಬೇಕಾದ ಸಂಕುಚಿತ ವಾತಾವರಣ ಆತನಿಗೆ ಹಿಡಿಸಲಿಲ್ಲ. ಆದ್ದರಿಂದ ಶಾಲೆಯಿಂದ ಓಡಿಹೋಗಲು ನೆವ ಸಿಕ್ಕಿತೇ ಎಂದು ಹುಡುಕುತ್ತಿರುತ್ತಿದ್ದ. ಪರ್ಷಿಯನ್ ಭಾಷೆ ಹೇಳಿಕೊಡಲು ಅವರ ಅಣ್ಣಂದಿರು ನೇಮಿಸಿದ್ದ ಉಪಾಧ್ಯಾಯ ಇದರಲ್ಲಿ ಅವನಲ್ಲಿ ಸಹಾನುಭೂತಿ ತೋರಿಸಿ ನೆರವಾದ.

ಆತನಿಗೆ ವ್ಯವಹಾರಕ್ಕೆ ಸಾಕಾಗುವಷ್ಟರ ಮಟ್ಟಿಗೆ ಇಂಗ್ಲೀಷ್ ಬರುತ್ತಿತ್ತು. ರವೀಂದ್ರನಾಥನಿಗೆ ರಜೆ ಕೊಡಬೇಕೆಂದು ಶಿಫಾರಸು ಮಾಡಿ ಶಾಲೆಯ ಅಧಿಕಾರಿಗಳಿಗೆ ಕಾಗದಗಳನ್ನು ಬರೆಯಲು ಆತ ಸಿದ್ಧನಾಗಿರುತ್ತಿದ್ದ. ಅವನ ಸುದೈವ, ಶಿಫಾರಸ್ಸುಗಳಿಗೆ ಕೂಡಲೇ ಒಪ್ಪಿಗೆ ದೊರೆಯುತ್ತಿತ್ತು.

1873 ರಲ್ಲಿ ದೇವೇಂದ್ರನಾಥರು ಕೆಲವು ವಾರಗಳ ಮಟ್ಟಿಗೆ ಮನೆಗೆ ಹಿಂದಿರುಗಿದರು. ಈ ಸಮಯದಲ್ಲಿ ಮೂವರು ಬಾಲಕರ ಉಪನಯನವನ್ನು ನೆರವೇರಿಸಲಾಯಿತು. ಇದಾದ ನಂತರ ದೇವೇಂದ್ರನಾಥರು ರವೀಂದ್ರನಾಥನನ್ನು ತಮ್ಮೊಡನೆ ಕೆಲವು ತಿಂಗಳ ಕಾಲ ಇರಲಿ ಎಂದು ಹಿಮಾಲಯಕ್ಕೆ ಕರೆದುಕೊಂಡು ಹೋದರು. ಹಿಮಾಲಯಕ್ಕೆ ನೀಡಿದ ಆ ಭೇಟಿಯಿಂದ ರವೀಂದ್ರನಾಥನು ತಂದೆಗೆ ಬಹು ಸಮೀಪವಾಗಲು ಸಾಧ್ಯವಾಯಿತು. ಇದು ಅವನ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನು ಉಂಟು ಮಾಡಿತು; ಇಷ್ಟೇ ಅಲ್ಲ, ಇದು ಅವನ ಬಾಳಿಗೆ ಹೊಸ ತಿರುವನ್ನೂ ಕೊಟ್ಟಿತು. ಅವನ ತಂದೆಯ ಸಂತಸದೃಶ ಸ್ವಭಾವವೂ ಶಕ್ತಿಯುತವಾದ ವ್ಯಕ್ತಿತ್ವವೂ ಅವನ ಸ್ವಭಾವವನ್ನು ರೂಪಿಸುವುದರಲ್ಲಿ ನೆರವಾದವು. ಅಲ್ಲದೆ ಅವನ ತಂದೆಯೊಂದಿಗೆ ಓದಿದ ಪಾಠಗಳು ಅವನ ಮನೋಭಾವವನ್ನು ವಿಸ್ತರಿಸಿದ್ದಲ್ಲದೆ ಹೊಸ ಅಭಿರುಚಿಗಳನ್ನು ಬೆಳೆಸಿಕೊಳ್ಳಲು ಸಹಾಯ ಮಾಡಿದವು. ಈ ಎಳೆಯ ಬಾಲಕನಲ್ಲಿ ಹಿರಿಮೆಯ ಬೀಜವನ್ನು ಗುರುತಿಸಿ ಅವನ ಮನಸ್ಸಿನ ಮೇಲೆ ಪ್ರಭಾವವನ್ನು ಬೀರುವುದೇ ತಂದೆಯ ಉದ್ದೇಶವಾಗಿತ್ತು ಎಂದು ಭಾವಿಸುವುದು ತಪ್ಪಾಗಲಾರದು. ಇಲ್ಲವಾದರೆ ಆ ಸಂಸಾರದಲ್ಲಿ ಒಟ್ಟಿಗೆ ಬೆಳೆಯುತ್ತಿದ್ದ ಮೂವರ ಗುಂಪಿನಲ್ಲಿ ಅವರು ರವೀಂದ್ರನನ್ನೇ ಏಕೆ ಆರಿಸಿಕೊಳ್ಳಬೇಕಾಗಿತ್ತು ?

ರವೀಂದ್ರನಾಥನು ತಂದೆಯೊಂದಿಗೆ ಮೂರು ತಿಂಗಳನ್ನು ಕಳೆಯುವುದೆಂದು ನಿರ್ಧರವಾಗಿತ್ತು. ಆಗಲೇ ಅವರ ತಂದೆ ತಮ್ಮ ಧ್ಯಾನದ ಸಮಯಕ್ಕಾಗಿ ಶಾಂತಿನಿಕೇತನದಲ್ಲಿನ ತೋಟದಲ್ಲಿ ಒಂದು ಮನೆಯನ್ನು ಕಟ್ಟಿದ್ದರು. ತಂದೆ ಮತ್ತು ಮಗ ಹಿಮಾಲಯಕ್ಕೆ ಹೋಗುವ ದಾರಿಯಲ್ಲಿ ಶಾಂತಿನಿಕೇತನದಲ್ಲಿ ಕೆಲವು ದಿನಗಳನ್ನು ಕಳೆಯಬೇಕೆಂದು ತೀರ್ಮಾನವಾಗಿತ್ತು. ಶಾಂತಿನಿಕೇತನದಲ್ಲಿನ ವಾಸ ಅವನ ಮನಸ್ಸಿನ ಮೇಲೆ ಆಳವಾದ ಪರಿಣಾಮವನ್ನು ಉಂಟು ಮಾಡಿತು ಮತ್ತು, ಎಷ್ಟೋ ಕಾಲದ ನಂತರ ಅವನ ಬಾಳನ್ನು ರೂಪಿಸುವುದರಲ್ಲಿ ಪರಿಣಾಮಕಾರಿಯಾದ ಪಾತ್ರವನ್ನು ವಹಿಸಿತು. ವಾಸ್ತವವಾಗಿ ಬಯಲು ಪ್ರದೇಶದಲ್ಲಿ ತನ್ನ

ಇಚ್ಛೆ ಬಂದಂತೆ ಅಲೆದಾಡುವ ಸ್ವಾತಂತ್ರ್ಯ ಅವನ ಬಾಳಿನಲ್ಲಿ ಮೊಟ್ಟ ಮೊದಲ ಬಾರಿಗೆ ದೊರೆತದ್ದು ಆಗಲೇ. ನಗರದ ಬಂಧನದ ವಾತಾವರಣದಲ್ಲಿ ತನ್ನ ಜೀವನವನ್ನೆಲ್ಲಾ ಕಳೆದಿದ್ದ ಹುಡುಗನಿಗೆ ಇದೊಂದು ಹೊಚ್ಚ ಹೊಸ ಅನುಭವ ವಾಯಿತು.

ಬೋಲ್‌ಪುರದಲ್ಲಿ ಕಳೆದ ಕೆಲವೇ ದಿನಗಳು ಈ ಎಳೆಯ ಹುಡುಗನಿಗೆ ರೋಮಾಂಚಕ ಅನುಭವವಾದದ್ದು ಆಶ್ಚರ್ಯವಲ್ಲ. ಅದು ಒರಟು ಹಳ್ಳಿಗಾಡು ಪ್ರದೇಶ, ವಿಪರೀತ ಭೂಸವೆತಕ್ಕೆ ಒಳಗಾದ ಏರಿಳಿತಗಳ ಬಂಜರು ಪ್ರದೇಶ. ಅಲ್ಲಲ್ಲಿ ತಾಳೆ ಮರಗಳ ಗುಂಪು. ಈ ವಿಶಾಲವಾದ ಬಯಲು ಪ್ರದೇಶದಲ್ಲಿ ಹುಡುಗ ಓಡಾಡುವುದಕ್ಕೆ ತಂದೆಯು ಯಾವುದೇ ನಿರ್ಬಂಧವನ್ನು ವಿಧಿಸಲಿಲ್ಲ. ಇದರಿಂದ ಅವನಿಗೆ ಆಫ್ರಿಕದ ಕಾಡು ಪ್ರದೇಶಗಳನ್ನು ಶೋಧಿಸುತ್ತ ಹೊರಟ ಲಿವಿಂಗ್‌ಸ್ಟನ್‌ನಂತೆ ಅನುಭವವಾಯಿತು. ನೆಲದ ಕೊರೆತಗಳಲ್ಲಿ ಹರಿದ ಮಳೆಯ ನೀರಿನ ಗಮನ ಅವನ ಮನಸ್ಸನ್ನು ಸೆಳೆಯಿತು. ಬೇರೆ ಬೇರೆ ಗಾತ್ರಗಳ ಕಲ್ಲು ಗಳನ್ನು ಶೇಖರಿಸಿ ತಂದೆಗೆ ಉಡುಗೊರೆಯಾಗಿ ಕೊಟ್ಟು ಖುಷಿಪಟ್ಟ. ತಂದೆಯ ಮೆಚ್ಚಿಕೆಯಿಂದ ಅವನ ಶ್ರಮಕ್ಕೆ ಹೊಸ ಬೆಲೆ ಬಂದಿತು. ಈ ಪ್ರದೇಶವನ್ನು ಕುರಿತು ಮುಪ್ಪಿನಲ್ಲಿಯೂ ನೆನೆಸಿಕೊಳ್ಳುವಂತಹ ಬಹು ಸಂತೋಷಕರವಾದ ಭಾವನೆ ಅವನ ಸ್ಮರಣೆಯಲ್ಲಿ ಒಂದು ನಿಧಿಯಾಗಿ ಉಳಿದದ್ದು ಆಶ್ಚರ್ಯವಲ್ಲ. ಬಹು ಕಾಲದ ನಂತರ ಅವನು ಬರೆದ ಒಂದು ಕಾವ್ಯದಲ್ಲಿ ಈ ಸ್ಥಳವನ್ನು ಕುರಿತು ಹೀಗೆ ಹೇಳಿದ್ದಾನೆ :

ಬಾಲಕನಾಗಿದ್ದಾಗ ನಾನಿಲ್ಲಿಗೆ ಬಂದೆ.
ಇಲ್ಲಿನ ಗುಹೆಗಳಲ್ಲಿ, ಬಿಲಗಳಲ್ಲಿ, ಜಳಜಳ ಹರಿಯುವ
ಅದರ ತೊರೆಗಳ ಬಳಿ ನನ್ನ ಕಲ್ಪನೆ ರಹಸ್ಯದ ಕತೆಗಳನ್ನು ನೆಯ್ದಿತು.
ನಿರ್ಜನವಾದ ಮಧ್ಯಾಹ್ನದಲ್ಲಿ ನಾನೊಬ್ಬನೇ ಕಲ್ಲುಗಳನ್ನಿಟ್ಟುಕೊಂಡು ಆಡಿದ್ದೇನೆ*

ಆ ಸ್ಥಳದ ಮೊದಲ ನೋಟಕ್ಕೆ ರವೀಂದ್ರನಾಥನು ಮನಸೋತ. ಅವನ ಬಾಳಿನ ಉತ್ತರ ಭಾಗದಲ್ಲಿ ತನ್ನ ಮಗನಿಗಾಗಿ ಗ್ರಾಮ ಪ್ರದೇಶದಲ್ಲಿ ಒಂದು

---

* 'ಪುನಶ್ಚ', ಬೋವಾಲ್

ಶಾಲೆಯನ್ನು ತೆರೆಯಲು ನಿರ್ಧರಿಸಿದಾಗ ಈ ಪ್ರೀತಿಯ ಗಾಢ ಬಂಧನವೇ ಆತನನ್ನು ಈ ಸ್ಥಳಕ್ಕೆ ಕರೆದುಕೊಂಡು ಬಂದಿರಬಹುದು. ಅನಂತರ ಅವನು ಬದುಕಿದ್ದಷ್ಟು ದಿನವೂ ಇದೇ ಅವನ ವಾಸಸ್ಥಾನವಾಯಿತು.

ಅಲ್ಲಿಂದ ತಂದೆ ಮಗ ಡಾಲ್‌ಹೌಸಿಗೆ ಹೋದರು. ಮನೋಹರವಾದ ಆವರಣವಲ್ಲಿ ಬಾಕ್ರೋಟದಲ್ಲಿ ಒಂದು ಮನೆಯನ್ನು ಮಾಡಿಕೊಂಡರು. ಮನೆಯ ಹಿನ್ನೆಲೆಯಲ್ಲಿ ಹಿಮದಿಂದ ಆಚ್ಛಾದಿತವಾದ ಹಿಮಾಲಯ, ಮುಂದೆ ಬುಡದಲ್ಲಿನ ಬೆಟ್ಟ ಗುಡ್ಡಗಳ ವಿಶಾಲ ಪ್ರದೇಶ. ಮನೆ ಇದ್ದದ್ದು ಪೀತದಾರು ಮರಗಳ ಕಾಡಿನ ಮಧ್ಯೆ. ಇಲ್ಲಿಯೂ ರವೀಂದ್ರನಾಥನು ಸಂಚಾರದಲ್ಲಿ ಸಂಪೂರ್ಣ ಸ್ವಾತಂತ್ರ್ಯ ವನ್ನು ಸವಿದ. ಇದು ಮತ್ತೊಂದು ರೋಮಾಂಚಕಾರಿ ಅನುಭವವಾಯಿತು.

ಆದರೆ ವಿವೇಕಿಯಾಗಿ ತಂದೆಯ ಉದ್ದೇಶ ಮಗನು ನಿಸರ್ಗದ ಚೆಲುವನ್ನು ಸವಿಯುವುದರಲ್ಲೇ ದಿನಗಳನ್ನು ಕಳೆಯಬೇಕು ಎನ್ನುವುದಾಗಿರಲಿಲ್ಲ. ಅವನಿಗೆ ಗಂಭೀರವಾದ ಕೆಲಸವನ್ನು ಕೊಡುವುದು ಅವರ ಉದ್ದೇಶವಾಗಿತ್ತು. ದೇವೇಂದ್ರ ನಾಥರು ಮಗನಿಗೆ ಗಾಢವಾದ ಅಭ್ಯಾಸದ ವಿದ್ಯಾಭ್ಯಾಸದ ಸರಮಾಲೆಯನ್ನೇ ಯೋಚಿಸಿದ್ದಂತೆ ಕಾಣುತ್ತದೆ. ಇದಕ್ಕಾಗಿ ಅವರು ತಂದಿದ್ದ ಪುಸ್ತಕಗಳಲ್ಲಿ ಪೀಟರ್ ಪಾರ್ಲೆಯ 'ಟೇಲ್ಸ್', 'ದ ಲೈಫ್ ಆಫ್ ಬೆಂಜಮಿನ್ ಫ್ರಾಂಕ್ಲಿನ್', ಪ್ರಾಕ್ಟರನ 'ಅಸ್ಟ್ರಾನಮಿ' ಮತ್ತು ಈಶ್ವರಚಂದ್ರ ವಿದ್ಯಾಸಾಗರರು ಸಿದ್ಧಗೊಳಿಸಿದ್ದ ಒಂದು ಸಂಸ್ಕೃತ ಪಠ್ಯಪುಸ್ತಕ 'ರಿಜು ಪಥ'ದ ಎರಡನೆಯ ಸಂಪುಟ ಇವೆಲ್ಲ ಸೇರಿದ್ದವು. ಅವರು ಮುಂಜಾವಿನಲ್ಲಿ, ಮತ್ತೆ ಬೆಳಗಿನ ಉಪಾಹಾರವಾದ ನಂತರ ಬೆಳಗಿನ ಸುತ್ತಾಟಕ್ಕೆ ಮೊದಲು ಮತ್ತು ಮಧ್ಯಾಹ್ನ ಊಟವಾದ ನಂತರ ಹೀಗೆ ದಿನಕ್ಕೆ ಮೂರು ಬಾರಿ ಮಗನಿಗೆ ಪಾಠ ಹೇಳಿ ಕೊಡುತ್ತಿದ್ದರು. ಪಾಠದ ಕ್ರಮ ಸಾಂಪ್ರ ದಾಯಕವಾಗಿರಲೇ ಇಲ್ಲ. ವಿದ್ಯಾರ್ಥಿಯ ಯೋಚನಾಶಕ್ತಿಗೆ ಪ್ರಚೋದನೆ ದೊರೆ ಯುವಂತೆ ಪಾಠದಲ್ಲಿ ಭಾಗವಹಿಸಬೇಕು ಎನ್ನುವುದೇ ಉದ್ದೇಶವಾಗಿತ್ತು. ಉದಾ ಹರಣೆಗೆ, ಸಂಸ್ಕೃತವನ್ನು ಹೇಳಿಕೊಡುವಾಗ ಮಗನು ಆ ಭಾಷೆಯಲ್ಲಿ ವಾಕ್ಯ ಗಳನ್ನು ರಚಿಸಲು ಪ್ರೋತ್ಸಾಹ ಕೊಡುತ್ತಿದ್ದರು. ಅದರಿಂದ ಮುಂದೆ ರವೀಂದ್ರ ನಾಥರಿಗೆ ಸಂಸ್ಕೃತ ಸಾಹಿತ್ಯದಲ್ಲಿ ಶಾಶ್ವತವಾಗಿ ಆಸಕ್ತಿ ಬೆಳೆಯಿತು.

ಹೀಗೆಯೇ ಆಕಾಶ ಕಾಯಗಳ ವಿಷಯವಾಗಿ ಮಾಹಿತಿಯನ್ನು ಕೊಡುವುದ ರೊಂದಿಗೆ ಖಗೋಳ ಶಾಸ್ತ್ರದ ಪಾಠ ಮುಗಿಯುತ್ತಿರಲಿಲ್ಲ. ಅದರ ನಂತರ ಆ

ಜ್ಞಾನದ ಪ್ರಯೋಜನ ಪಾಠವಾಗಿರುತ್ತಿತ್ತು. ಸೂರ್ಯನು ಮುಳುಗಿ ಭೂಮಿಯ ಮೇಲಿನ ಎಲ್ಲ ವಸ್ತುಗಳನ್ನು ರಾತ್ರಿ ಮುಚ್ಚಿಬಿಟ್ಟಾಗ ಬೆಟ್ಟಗಳ ಶುಭ್ರ ವಾತಾವರಣದಲ್ಲಿ ಕಣ್ಣು ಕೊರೈಸುವ ಪ್ರಭೆಯಿಂದ ಮಾಡುತ್ತಿದ್ದ ಲಕ್ಷಾಂತರ ನಕ್ಷತ್ರಗಳಿಂದ ಆಕಾಶ ಜಾಜ್ವಲ್ಯ ಮಾನವಾಗುತ್ತಿತ್ತು. ಆಗ ತಂದೆ ಮಗನನ್ನು ಹೊರಕ್ಕೆ ಕರೆದುಕೊಂಡು ಹೋಗಿ ಮುಖ್ಯವಾದ ಗ್ರಹಗಳನ್ನು ನಕ್ಷತ್ರಗಳನ್ನು ತೋರಿಸುತ್ತಿದ್ದರು. ವಿವಿಧ ನಕ್ಷತ್ರ ಪುಂಜಗಳ ವಿಶಿಷ್ಟ ಆಕಾರದತ್ತ ಅವನ ಗಮನವನ್ನು ಸೆಳೆಯುತ್ತಿದ್ದರು *. ಖಗೋಳ ಶಾಸ್ತ್ರದ ಈ ಪಾಠಗಳು ಅವನ ದಿಗಂತವನ್ನು ವಿಸ್ತರಿಸಿದ್ದು ಮಾತ್ರವಲ್ಲ, ಅವನಲ್ಲಿ ಬೆರಗನ್ನು ಬೆಳೆಸಿದವು. ವಿಶ್ವವಿಖ್ಯಾತನಾಗಬೇಕಾಗಿದ್ದ ಕವಿಗೆ ಇವು ಶ್ರೇಷ್ಠ ಆಸ್ತಿ. ವಿಜ್ಞಾನದಲ್ಲಿ ರವೀಂದ್ರರ ಆಸಕ್ತಿ ಬೆಳೆಯಲೂ ಇದೇ ಕಾರಣ. ಇದರಿಂದ ಅವರ ಕವನಗಳಿಗೆ ಒಂದು ವಿಶೇಷ ಗುಣ ಬಂದಿತು. ಅವರ ಭವ್ಯ ಕಲ್ಪನೆಗಳು ಯಾವಾಗಲೂ ವೈಜ್ಞಾನಿಕ ವಾಸ್ತವಾಂಶಗಳಿಗೆ ಅನುಗುಣವಾಗಿರುತ್ತಿದ್ದವು. ಅವನ ಗಂಭೀರ ಬರಹಗಳಲ್ಲಿ ವಿಜ್ಞಾನದಿಂದ ತೆಗೆದುಕೊಂಡ ಸಾದೃಶ್ಯಗಳ ಪ್ರಸ್ತಾಪವಿರುವುದು ವಿರಳವೇನೂ ಅಲ್ಲ.

ಹಿಮಾಲಯದಿಂದ ಹಿಂದಿರುಗಿದ ಮೇಲೆ ರವೀಂದ್ರನಾಥನ ವ್ಯಕ್ತಿತ್ವ ತನ್ನ ಶಕ್ತಿಯನ್ನು ತೋರಿಸಿಕೊಂಡಿತೆಂಬುದು ಸ್ಪಷ್ಟವಾಗಿದೆ. ಧೈರ್ಯವಾಗಿ ಶಾಲೆಗೆ ಬಹಿಷ್ಕಾರ ಹಾಕಿ ಶಾಲೆಯ ಶಿಕ್ಷಣದ ವಿಷಯದಲ್ಲಿ ತನಗಿದ್ದ ದ್ವೇಷವನ್ನು ತೋರಿಸಿಕೊಳ್ಳಲು ಅವನಿಗೀಗ ಸಾಧ್ಯವಾಯಿತು. ಕುಟುಂಬದ ಯಜಮಾನರು ದೂರವೇ ಇರುತ್ತಿದ್ದರು. ಅಣ್ಣಂದಿರು ಇನ್ನೊಂದು ಪ್ರಯೋಗವನ್ನು ಮಾಡಿ ನೋಡಿದರು. ಹುಡುಗನನ್ನು ಬೆಂಗಾಲ್ ಅಕಾಡೆಮಿಯಿಂದ ಸೇಂಟ್ ಜೇವಿಯರ್ಸ್ ಸ್ಕೂಲಿಗೆ ಸೇರಿಸಿದರು. ಕ್ರೈಸ್ತಮತ ಪ್ರಚಾರಕ ಉಪಾಧ್ಯಾಯರ ಸಾಧು ಸ್ವಭಾವ ಮತ್ತು ಗಂಭೀರ ರೀತಿಯನ್ನು ಅವನು ಬಹುವಾಗಿ ಮೆಚ್ಚಿಕೊಂಡರೂ ಶಾಲೆಯ ಬದಲಾವಣೆಯಿಂದ ಏನೂ ವ್ಯತ್ಯಾಸವಾಗಲಿಲ್ಲ. ಅಣ್ಣಂದಿರ ಗದರಿಕೆಯಿಂದಲೂ ಏನೂ ಪ್ರಯೋಜನವಾಗಲಿಲ್ಲ. ಕಡೆಗೆ ಶಾಲೆಗೆ ಹೋಗುವುದನ್ನು ತಾನಾಗಿಯೇ ಸಂಪೂರ್ಣವಾಗಿ ಬಿಟ್ಟುಬಿಟ್ಟ. ಅವನ ಮೊದಲನೆಯ ಅಕ್ಕ ಸೌದಾಮಿನಿ ದೇವಿಯೂ ತಾನು ತನ್ನ ಪ್ರೀತಿಯ ಕವಿಯ ವಿಷಯದಲ್ಲಿ ಇಟ್ಟು

* ವಿಶ್ವಪರಿಚಯ

ಕೊಂಡಿದ್ದ ದೊಡ್ಡ ಆಸೆಗಳೆಲ್ಲ ಇದರಿಂದ ನುಚ್ಚು ನೂರಾದುವೆಂದು ಪ್ರತಿಭಟಿಸಿದಳು. *

ವಿರೋಧಾಭಾಸವೆಂದು ಕಾಣುವ ಸಂಗತಿಯೆಂದರೆ ಅವನೇ ತನ್ನ ವಿದ್ಯಾಭ್ಯಾಸವನ್ನು ಶ್ರದ್ಧೆಯಿಂದ ಪ್ರಾರಂಭಿಸಿದ. ಅವನಿಗೆ ಶಾಲೆಯ ಜೀವನದ ವಿಷಯದಲ್ಲಿ ದ್ವೇಷ ಎಂದ ಮಾತ್ರಕ್ಕೆ ಅವನಿಗೆ ವಿದ್ಯಾಭ್ಯಾಸ ಬೇಕಿರಲಿಲ್ಲ ಎಂದರ್ಥವಲ್ಲ. ವಿದ್ಯಾಭ್ಯಾಸಕ್ಕಾಗಿ ಅವನು ತುಂಬ ಹಂಬಲಿಸುತ್ತಿದ್ದ. ಶಾಲೆಗಳಲ್ಲಿ ವಿದ್ಯಾಭ್ಯಾಸ ಕೊಡುತ್ತಿದ್ದ ವಿಧಾನವನ್ನು ಮಾತ್ರ ಅವನು ದ್ವೇಷಿಸುತ್ತಿದ್ದ. ಅವನ ಮಟ್ಟಿಗೆ ಅವನನ್ನು ಬಿಟ್ಟುಬಿಟ್ಟಾಗ ಅವನು ನಿರ್ದಿಷ್ಟ ರೀತಿಯನ್ನು ಅನುಸರಿಸಲಿಲ್ಲ. ತನಗೆ ಇಷ್ಟ ಬಂದಂತೆ ಓದುತ್ತ ಹೋದ. ಅವನು ವಿದ್ಯಾಭ್ಯಾಸವನ್ನು ಮುಂದುವರಿಸಿದ ರೀತಿಯೋ ಸ್ವಯಂಶಿಕ್ಷಣದಲ್ಲಿ ಅವನಿಗೆ ಇದ್ದ ಶ್ರದ್ಧೆಯನ್ನು ತೋರಿಸಿಸುತ್ತದೆ.

ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಲಭ್ಯವಾಗದಿರುವ ಪುಸ್ತಕಗಳನ್ನು ಓದುವುದೆಂದರೆ ಅವನಿಗೆ ಸಹಜವಾದ ಆಕರ್ಷಣೆ. ಆದ್ದರಿಂದ ಅವನ್ನು ಪಡೆಯಲು ಅಷ್ಟೇನೂ ಸರಿ ಎನ್ನಿಸದೆ ಹೋಗುವಂತಹ ವಿಧಾನವನ್ನು ಅವನು ಅನುಸರಿಸಿದ. ಉದಾಹರಣೆಗೆ, 'ನೀಲ ದರ್ಪಣ'ದ ಪ್ರಸಿದ್ಧ ಕರ್ತೃ, ದೀನ ಬಂಧು ಮಿತ್ರರ ಒಂದು ಹಾಸ್ಯನಾಟಕವನ್ನು ಎಳೆಯರು ಓದಬಾರದೆಂದು ಬೀಗಹಾಕಿಟ್ಟಿದ್ದರು. ಆದರೆ ಹುಡುಗ ಠಾಕೂರನು ಬೀಗದ ಕೈಯನ್ನು ಇಟ್ಟುಕೊಂಡಿದ್ದ ಮಹಿಳೆಯಿಂದ ಅದನ್ನು ಕದ್ದು ಪುಸ್ತಕವನ್ನು ಪಡೆದೇ ಬಿಟ್ಟ.

ಈ ಹುಡುಗನಿಗೆ ಗಂಭೀರ ವಿಷಯಗಳೆಂದರೆ ಸಹಜವಾದ ಆಕರ್ಷಣೆ. 'ವಿವಿಧಾರ್ಥ ಸಂಗ್ರಹ' ಎನ್ನುವ ಆಡಂಬರದ ಹೆಸರಿನ ಒಂದು ಪತ್ರಿಕೆಯನ್ನೂ ಅವನ ಮೂರನೆಯ ಅಣ್ಣನ ಸ್ವಂತ ಗ್ರಂಥಾಲಯದಲ್ಲಿದ್ದ 'ಅಬೋಧ ಬಂಧು' ಎನ್ನುವ ಮಾಸಪತ್ರಿಕೆಯನ್ನೂ ಓದುತ್ತಿದ್ದ. ಕುಟುಂಬದ ಗ್ರಂಥಾಲಯದಲ್ಲಿ ಕಂಡ ವೈಷ್ಣವ ಕವಿಗಳ ಬಂಗಾಳೀ ಕಾವ್ಯಸಂಗ್ರಹವೊಂದು ಅವನಿಗೆ ಎಷ್ಟು ಪ್ರಿಯವಾಯಿತೆಂದರೆ ತಾನಿನ್ನೂ ಹದಿ ವಯಸ್ಸಿನಲ್ಲಿದ್ದಾಗ ಕಾವ್ಯನಾಮವೊಂದನ್ನು

* 'ಜೀವನ ಸ್ಮೃತಿ', ಪ್ರತ್ಯಾವರ್ತನೆ

ಬಳಸಿ ಅದೇ ಶೈಲಿಯಲ್ಲಿ ಒಂದು ಪುಸ್ತಕವನ್ನು ಬರೆಯಲು ನಿಶ್ಚಯಿಸಿದ. ಇದನ್ನು ಮುಂದೆ ನಾವು ಇನ್ನೂ ವಿವರವಾಗಿ ಪರಿಶೀಲಿಸಬಹುದು.

ರವೀಂದ್ರನಾಥನಿಗೆ ಹದಿನೇಳು ವರ್ಷವಾಗಿದ್ದಾಗ ಅವನ ಎರಡನೆಯ ಅಣ್ಣ ಸತ್ಯೇಂದ್ರನಾಥನು ಅವನು ಇಂಗ್ಲೆಂಡಿಗೆ ಹೋಗಿ ವಕೀಲಿ ವೃತ್ತಿಗೆ ಓದಬೇಕೆಂದು ಸಲಹೆ ಮಾಡಿದ. ಈ ಸಲಹೆಗೆ ತಂದೆಯ ಒಪ್ಪಿಗೆಯನ್ನೂ ಪಡೆದ. ದೀರ್ಘ ಕಾಲದ ರಜೆಯನ್ನು ತೆಗೆದುಕೊಂಡು ಸತ್ಯೇಂದ್ರನಾಥನು ಇಂಗ್ಲೆಂಡಿಗೆ ಹೋಗುವಾಗ ತಮ್ಮನನ್ನು ಕರೆದುಕೊಂಡು ಹೋಗಬೇಕೆಂದು ತೀರ್ಮಾನವಾಯಿತು. ಅವನ ಹೆಂಡತಿ ಮಕ್ಕಳು ಅವನಿಗಿಂತ ಮೊದಲೇ ಹೋಗಿ ಬ್ರೈಟನ್ ಎನ್ನುವ ಸ್ಥಳದಲ್ಲಿ ವಾಸ ಮಾಡುತ್ತಿದ್ದರು. ಸತ್ಯೇಂದ್ರನಾಥನಿಗೆ ಜಿಲ್ಲಾ ನ್ಯಾಯಾಧೀಶನಾಗಿ ಅಹಮದಾ ಬಾದಿಗೆ ವರ್ಗವಾಗಿತ್ತು. ರವೀಂದ್ರನಾಥನು ಇಂಗ್ಲೆಂಡಿನಲ್ಲಿ ತನ್ನ ವಾಸಕ್ಕೆ ಸಿದ್ಧತೆ ಮಾಡಿಕೊಳ್ಳಲು ಮತ್ತು ಇಂಗ್ಲೀಷರ ಶಿಷ್ಟಾಚಾರವನ್ನು ಕಲಿಯಲು ಸತ್ಯೇಂದ್ರ ನಾಥನ ಬಳಿಯೇ ಹೋಗಬೇಕೆಂದು ನಿರ್ಧಾರವಾಯಿತು.

ಆದ್ದರಿಂದ ತರುಣ ಠಾಕೂರ್ ಅಹಮದಾಬಾದಿನ ಸಾಹೀಬಾಗ್‌ಗೆ ಹೋದನು. ಜಿಲ್ಲಾ ನ್ಯಾಯಾಧೀಶನ ನಿವಾಸ ಮೊದಲು ಒಬ್ಬ ಮುಸ್ಲಿಂ ಶ್ರೀಮಂತನ ಮತ್ತು ಅವನ ಜನಾನಾದ ಅರಮನೆಯಾಗಿತ್ತು. ಸಾಬರಮತಿಯ ದಡದಲ್ಲಿದ್ದ ಈ ವಿಶಾಲ ವಾದ ಭವ್ಯ ಕಟ್ಟಡದಲ್ಲಿ ತರುಣ ಠಾಕೂರನಿಗೆ ಒಂಟಿತನದ ಅನುಭವವಾಯಿತು. ಏಕೆಂದರೆ ಹಗಲಿನ ಬಹುಕಾಲ ಅಣ್ಣನು ತನ್ನ ಅಧಿಕಾರದ ಕೆಲಸಗಳಲ್ಲಿ ಮುಳುಗಿ ರುತ್ತಿದ್ದ. ರವೀಂದ್ರನಾಥನಿಗೆ ಜತೆಗೆ ಯಾರೂ ಇರಲಿಲ್ಲ. ಆದರೆ ಮುಂದೆ ಅವನ ಒಂದು ಪ್ರಸಿದ್ಧ ಸಣ್ಣ ಕತೆ, 'ಕ್ಷುದಿತ ಪಾಷಾಣ' ಕ್ಕೆ (ಇದರ ಇಂಗ್ಲೀಷ್ ಅನುವಾದದ ಹೆಸರು 'ಹಂಗ್ರಿ ಸ್ಟೋನ್ಸ್') ವಸ್ತುವನ್ನು ಒದಗಿಸುವಷ್ಟರ ಮಟ್ಟಿಗೆ ಆ ಮನೆಯ ಭೂತಕಾಲದ ಆಗುಹೋಗುಗಳ ಅವನ ಕಲ್ಪನಾಶಕ್ತಿಯನ್ನು ಪ್ರಚೋದಿಸಿದವು. ಅಲ್ಲಿ ಹಿಂದೆ ವಾಸಿಸುತ್ತಿದ್ದ ಶ್ರೀಮಂತರ ಆಸ್ಥಾನ ಮತ್ತು ಜನಾನಾಗಳ ಹಿಂದಿನ ದೃಶ್ಯಗಳನ್ನು ಮತ್ತೆ ಸೃಷ್ಟಿಸುವ ಕಾಲ್ಪನಿಕ ಕೃತಿ ಅಷ್ಟೇ ಈ ಕತೆ. ಸುಯೋಗದಿಂದ ಠಾಕೂರನಿಗಿದ್ದ ಮಿತಿಯಿಲ್ಲದ ವಿರಾಮ ಆತನು ಇಂಗ್ಲೀಷ್ ಭಾಷೆಯ ಮೇಲೆ ಪ್ರಭುತ್ವವನ್ನು ಪಡೆಯುವಂತೆ ಪ್ರಚೋದಿಸಿತು. ಒಂದು ನಿಘಂಟುವಿನ ಸಹಾಯದಿಂದ ಇಂಗ್ಲೀಷ್ ಪುಸ್ತಕಗಳನ್ನು ಓದಲು ಪ್ರಾರಂಭಿಸಿದ.

ತಮ್ಮನಲ್ಲಿ ತುಂಬಾ ಸಹಾನುಭೂತಿಯಿದ್ದ ಅಣ್ಣನ ಕಣ್ಣು, ತಮ್ಮನ ಈ ಬಲಾತ್ಕಾರದ ಒಂಟಿತನವನ್ನು ಕಾಣದೆ ಹೋಗಲಿಲ್ಲ. ಹುಡುಗನನ್ನು ಮುಂಬಯಿಯ ಒಂದು ಪಾರ್ಸೀ ಕುಟುಂಬದಲ್ಲಿ ಬಿಡಲು ತೀರ್ಮಾನಿಸಿದ. ಇದರಿಂದ ಅವನಿಗೆ ಜೊತೆಯೂ ದೊರಕಿ ಸಂಭಾಷಣೆಯ ಮೂಲಕ ಅವನ ಇಂಗ್ಲೀಷ್ ಜ್ಞಾನವೂ ಉತ್ತಮಗೊಂಡು ಎರಡು ಗುರಿಗಳನ್ನು ಸಾಧಿಸಿದಂತಾಗುತ್ತದೆ ಎಂದು ಅವನ ಭಾವನೆ. ಇಂಗ್ಲೆಂಡಿನಲ್ಲಿ ತನ್ನ ವಿದ್ಯಾಭ್ಯಾಸವನ್ನು ಪರಿಷ್ಕರಿಸಿಕೊಂಡಿದ್ದ ಒಬ್ಬ ಚೂಟಿಯಾದ ಲವಲವಿಕೆಯ ಹುಡುಗಿಯನ್ನು ರವೀಂದ್ರನಾಥನು ಕಂಡದ್ದು ಇಲ್ಲಿ. ಅವರಲ್ಲಿ ಆತ್ಮೀಯತೆ ಬೆಳೆದಂತೆ ಕಾಣುತ್ತದೆ. ಇದರಿಂದ ಸಾಹೀಬಾಗ್‌ನ ಒಂಟಿತನದ ದಿನಗಳಿಗೆ ಪರಿಹಾರ ಸಿಕ್ಕಿದಂತಾಯಿತು. ಈ ಬಾಂಧವ್ಯವು ಪ್ರಣಯದ ರಂಗನ್ನು ಪಡೆಯಿತು. ಏಕೆಂದರೆ ಹುಡುಗಿಯ ಆದೇಶದಂತೆ ಅವನು ಅವಳಿಗೆ ಹೊಸದೊಂದು ಹೆಸರನ್ನು ಕೊಟ್ಟು ಅದನ್ನು ಕುರಿತು ಒಂದು ಹಾಡನ್ನು ಬರೆದಂತೆ ಕಾಣುತ್ತದೆ. ಇದರಿಂದ ಅವಳಿಗೆ ಬಹಳ ಸಂತೋಷವಾಯಿತು. ಪ್ರತಿಯಾಗಿ ಅವಳು ಅವನ ರೂಪವನ್ನು ಹೊಗಳಿದಳು. ದುರದೃಷ್ಟವಶಾತ್ ಈ ಮಹಿಳೆ ಚಿಕ್ಕ ವಯಸ್ಸಿನಲ್ಲೇ ತೀರಿಕೊಂಡಳು.

ಅಣ್ಣ ತಮ್ಮಂದಿರು 1878 ರ ಸೆಪ್ಟೆಂಬರಿನಲ್ಲಿ ಇಂಗ್ಲೆಂಡಿಗೆ ಹೊರಟರು. ಅಲ್ಲಿಗೆ ತಲುಪಿದ ನಂತರ ರವೀಂದ್ರನಾಥನು ಕೆಲವು ವಾರಗಳನ್ನು ಬ್ರಿಟನ್‌ನಲ್ಲಿ ತನ್ನ ಅಣ್ಣನ ಕುಟುಂಬದೊಂದಿಗೆ ಕಳೆದ. ಅಲ್ಲೇ ಒಂದು ಶಾಲೆಯನ್ನೂ ಸೇರಿದ. ಅನಂತರ ಕುಟುಂಬದ ಸ್ನೇಹಿತನೂ. ಪ್ರಸಿದ್ಧ ವಕೀಲನೂ, ದಾನಶೀಲನೂ ಆಗಿದ್ದ ತಾರಕನಾಥ ಪಾಲಿತನ ಮಾರ್ಗದರ್ಶನದಲ್ಲಿ ಕ್ರಮವಾಗಿ ಶಿಕ್ಷಣವನ್ನು ಮುಂದುವರಿಸಲು ಲಂಡನ್ನಿಗೆ ಹೋದ.

ಮೊದಲ ದಿನಗಳಲ್ಲಿ ಅವನು ರೀಜೆಂಟ್ ಪಾರ್ಕಿನಲ್ಲಿ ಒಂದು ವಸತಿ ಗೃಹದಲ್ಲಿ ಇಳಿದು ಕೊಂಡ. ಇಲ್ಲಿ ಒಂಟಿಯಾಗಿದ್ದೇನೆ ಎನ್ನಿಸಿತು. ಅನಂತರ ಡಾಕ್ಟರ್ ಸ್ಕಾಟ್ ಎನ್ನುವವರ ಸಂಸಾರವನ್ನು ಸೇರಿಕೊಂಡ. ಶ್ರೀಮತಿ ಸ್ಕಾಟರನ್ನು ಅವಳ ಮೂವರು ಹೆಣ್ಣುಮಕ್ಕಳನ್ನು ರವೀಂದ್ರರು ಕೃತಜ್ಞತೆಯಿಂದ ಸ್ಮರಿಸಿಕೊಂಡಿದ್ದಾರೆ. ತನ್ನ ಹತ್ತಿರದ ನಂಟರೊಂದಿಗೇ ಇದ್ದಿದ್ದರೂ ಇದಕ್ಕಿಂತ ಸಂತೋಷದ ವಾತಾವರಣದಲ್ಲಿ ಇರುತ್ತಿರಲಿಲ್ಲ ಎಂದು ಅವನಿಗನ್ನಿಸಿತು.

ಲಂಡನ್ನಿನಲ್ಲಿ ಠಾಕೂರನು ಯೂನಿವರ್ಸಿಟಿ ಕಾಲೇಜನ್ನು ಸೇರಿದನು. ತಾರಕನಾಥ ಪಾಲಿತರ ಮಗ ಲೋಕೇನ್ ಪಾಲಿತನ ಪರಿಚಯವಾದದ್ದು ಇಲ್ಲಿಯೆ. ಲೋಕೇನ್‌ಗಿಂತ ಠಾಕೂರನು ನಾಲ್ಕು ವರ್ಷ ದೊಡ್ಡವನಾದರೂ ಅವರ ನಡುವೆ ಗಾಢವಾದ ಸ್ನೇಹ ಬೆಳೆಯಿತು. ಸ್ವಭಾವದಲ್ಲಿ ಒಂದೇ ಬಗೆಯವರು ಮತ್ತು ಒಂದೇ ಬಗೆಯ ಆಸಕ್ತಿಗಳನ್ನು ಹೊಂದಿದ್ದ ಅವರು ಕಾವ್ಯ ಮತ್ತು ಸಾಹಿತ್ಯಗಳ ಚರ್ಚೆಯಲ್ಲಿ ವಿರಾಮ ಕಾಲವನ್ನು ಕಳೆಯುತ್ತಿದ್ದರು. ಯುವಕ ಪಾಲಿತನು ಮುಂದೆ ಇಂಡಿಯನ್ ಸಿವಿಲ್ ಸರ್ವಿಸ್ ಸೇರಲು ಅರ್ಹತೆ ಗಳಿಸಿದ. ಅವನನ್ನು ಬಂಗಾಳದಲ್ಲಿ ನೇಮಿಸಲಾಯಿತು. ವಿದ್ಯಾಭ್ಯಾಸದ ದಿನಗಳಲ್ಲಿ ಬೆಳೆದ ಸ್ನೇಹ ಬಾಳಿನುದ್ದಕ್ಕೂ ಉಳಿದು ಬಂದಿತು. ಪತ್ರಗಳ ಮೂಲಕ ಅವರು ಸಾಹಿತ್ಯದ ರಸಾತ್ಮಕತೆಯನ್ನು ಕುರಿತು ಮೌಲ್ಯವುಳ್ಳ ಅಭಿಪ್ರಾಯವನ್ನು ವ್ಯಕ್ತಪಡಿಸಲು ಇದರಿಂದ ಪ್ರಚೋದನೆ ದೊರೆಯಿತು. ಇವು ಸೌಂದರ್ಯಶಾಸ್ತ್ರಕ್ಕೆ ಠಾಕೂರರ ಕೊಡುಗೆಯನ್ನು ಶ್ರೀಮಂತಗೊಳಿಸಿವೆ.

ದುರದೃಷ್ಟದಿಂದ ರವೀಂದ್ರನು ಲಂಡನ್ನಿನಲ್ಲಿ ಪ್ರಾರಂಭಿಸಿದ ಅಭ್ಯಾಸಗಳನ್ನು ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ. ಅವನ ಅಣ್ಣನ ದೀರ್ಘಕಾಲ ರಜೆಯು ಮುಗಿದು ಹಿಂತಿರುಗಿದಾಗ ಅವನ ಜೊತೆಗೆ ರವೀಂದ್ರನು ಹಿಂತಿರುಗಬೇಕೆಂದು ತಂದೆಯು ನಿರ್ದೇಶಿಸಿದ್ದರಿಂದ ಅವನ ಶಿಕ್ಷಣ ಇದ್ದಕ್ಕಿದ್ದಂತೆ ಮುಗಿದು ಹೋಯಿತು. 1880 ರ ಫೆಬ್ರುವರಿಯಲ್ಲಿ ಆತ ಕಲ್ಕತ್ತೆಗೆ ಹಿಂದಿರುಗಿದ.

ಲಂಡನ್ನಿನಲ್ಲಿ ಸ್ವಲ್ಪಕಾಲದ ಈ ವಾಸದಿಂದ ಠಾಕೂರನು ಪಾಶ್ಚಾತ್ಯ ಸಂಗೀತದ ವಿಷಯವನ್ನು ಸಾಕಷ್ಟು ತಿಳಿದುಕೊಳ್ಳಲು ಸಾಧ್ಯವಾಯಿತು. ಒಳ ವಿಷಯ ಮತ್ತು ಶೈಲಿ ಎರಡರಲ್ಲಿಯೂ ಅದು ಭಾರತೀಯ ಸಂಗೀತಕ್ಕಿಂತ ಹೇಗೆ ಭಿನ್ನ ಎಂದು ಅವನು ಗುರುತಿಸಿದ. ಅವನ ಅಭಿಪ್ರಾಯದಂತೆ ಯೂರೋಪಿನ ಸಂಗೀತವು ವಿಶಾಲವಾದ ರಂಗದಿಂದ ವಸ್ತುಗಳನ್ನು ಆರಿಸಿಕೊಳ್ಳುತ್ತದೆ ಮತ್ತು ಮನುಷ್ಯನ ದಿನನಿತ್ಯ ಜೀವನದೊಡನೆ ನಿಕಟವಾದ ಸಂಬಂಧವನ್ನು ಪಡೆದಿರುವಂತೆ ಕಾಣುತ್ತದೆ. ಇದಕ್ಕೆ ವಿರುದ್ಧವಾಗಿ ಭಾರತೀಯ ಸಂಗೀತವು ವಿಷಯಗಳನ್ನು ಸೀಮಿತವಾದ ರಂಗದಿಂದ ಆರಿಸಿಕೊಳ್ಳುತ್ತದೆ. ಈ ರಂಗ ಸಾಮಾನ್ಯ ಜೀವನದ ಸಣ್ಣ ಪುಟ್ಟ ವಿಷಯಗಳಿಂದ ದೂರವಾದದ್ದು. ಪಾಶ್ಚಾತ್ಯ ಸಂಗೀತದಲ್ಲಿ ಅವನ ಮೆಚ್ಚಿಕೆಯನ್ನು ವಿಶೇಷವಾಗಿ ಗೆದ್ದ ಅಂಶವೆಂದರೆ ಅದರ 'ರೊಮ್ಯಾಂಟಿಕ್'

ಸ್ವಭಾವ. ಹೀಗೆಂದರೆ ವೈವಿಧ್ಯ, ಭಾವದ ವೈಪುಲ್ಯ, ಚೈತನ್ಯಮಯತೆ ಮತ್ತು ವೈಶಾಲ್ಯ. ಭಾರತೀಯ ಸಂಗೀತದಲ್ಲಿ ಈ ಗುಣಗಳಿಲ್ಲ ಎಂದಲ್ಲ, ಆದರೆ ಅವು ಇಷ್ಟು ಸಮೃದ್ಧಿಯಾಗಿಲ್ಲ ಎಂದು ಅವನ ಅಭಿಪ್ರಾಯ. * ಇಂಗ್ಲೆಂಡಿನ ವಾಸವನ್ನು ಆತ ಪಾಶ್ಚಾತ್ಯ ಸಂಗೀತದಲ್ಲಿ ಗಟ್ಟಿಯಾದ ಪ್ರಾಥಮಿಕ ಶಿಕ್ಷಣವನ್ನು ಪಡೆಯಲು ಬಳಸಿಕೊಂಡ. ಮುಂದೆ ಅವನು ತನ್ನದೇ ಆದ ಹಾಡುಗಳನ್ನು ರಚಿಸುವ ಕೆಲಸಕ್ಕೆ ಕೈಹಾಕಿದಾಗ ಇದರಿಂದ ಅವನಿಗೆ ಪ್ರಯೋಜನವಾಯಿತು. ರಕ್ತಗತಮಾಡಿಕೊಳ್ಳುವ ಅವನ ಶಕ್ತಿಯಿಂದ ಭಾರತೀಯ ಸಂಗೀತದೊಂದಿಗೆ ಪಾಶ್ಚಾತ್ಯ ಮಟ್ಟುಗಳನ್ನು ಮಿಲನಗೊಳಿಸಿ ತನ್ನ ರಚನೆಗಳಿಗೆ ಒಂದು ವಿಶಿಷ್ಟ ಗುಣವನ್ನು ಕೊಡಲು ಅವನಿಗೆ ಸಾಧ್ಯವಾಯಿತು.

---

* 'ಜೀವನ ಸ್ಮೃತಿ', ವಿಲಾಯತೀ ಸಂಗೀತ್

ಅಧ್ಯಾಯ ೫

ಸಾಹಿತ್ಯ ಶಕ್ತಿಯ ಬೆಳವಣಿಗೆ

ಬಹು ಜನರಿರುವ ಸಂಸಾರದಲ್ಲಿ ಅತ್ಯಂತ ಕಿರಿಯುವನಾಗಿ ಹುಟ್ಟುವುದು ದುರದೃಷ್ಟವೇ ಆಗಿರಬೇಕೆಂದೇನೂ ಇಲ್ಲ. ಅನುಕೂಲಕರವಾದ ಸನ್ನಿವೇಶಗಳಲ್ಲಿ ಇದು ಸುದೈವವೇ ಆಗುತ್ತದೆ. ಇದಕ್ಕೆ ಠಾಕೂರರೇ ನಿದರ್ಶನ. ಅವರು ಬಹು ಎತ್ತರದ ಸಾಹಿತಿಯಾಗುವುದಕ್ಕೆ ಅವರ ಜನ್ಮಸಿದ್ಧ ಪ್ರತಿಭೆಯು ಒಂದು ಮುಖ್ಯ ಕಾರಣವಾದರೆ ಅದನ್ನು ಅರಳಿಸುವಲ್ಲಿ ಕುಟುಂಬದ ಆವರಣವೂ ಅಷ್ಟೇ ಮುಖ್ಯವಾದ ಅಂಶವಾಯಿತು. ಅವರ ಸ್ಮೃತಿಗಳಲ್ಲಿ ಸ್ಪಷ್ಟಪಡಿಸುವಂತೆ ಠಾಕೂರರಿಗೆ ಇದರ ಪೂರ್ಣ ಅರಿವಿತ್ತು. "ನನ್ನ ಚಿಕ್ಕ ವಯಸ್ಸಿನಲ್ಲಿ ನನಗೊಂದು ದೊಡ್ಡ ಅನುಕೂಲವಿತ್ತು. ಸಾಹಿತ್ಯದ ಮತ್ತು ಕಲಾತ್ಮಕ ಚಟುವಟಿಕೆಗಳ ವಾತಾವರಣ ಹಗಲೂ ರಾತ್ರಿ ಮನೆಯನ್ನು ತುಂಬಿತ್ತು. ಸಾಹಿತ್ಯದ ಮತ್ತು ಕಲಾತ್ಮಕ ಚಟುವಟಿಕೆಗಳಲ್ಲಿ (ಮನೆಯವರ) ಉತ್ಸಾಹಕ್ಕೆ ಮೇರೆಯೇ ಇರಲಿಲ್ಲ. ಬಂಗಾಳದಲ್ಲಿ ಆಧುನಿಕ ಯುಗವನ್ನು ಪ್ರಾರಂಭಿಸಲು ಅವರು ಎಲ್ಲ ರೀತಿಗಳಲ್ಲಿ ಶ್ರಮಿಸುತ್ತಿದ್ದಂತೆ, ಉಡಿಗೆ ತೊಡಿಗೆಗಳು, ಕವನಗಳು ಮತ್ತು ಸಂಗೀತ, ಚಿತ್ರಕಲೆ, ನಾಟಕಾಭಿನಯ, ಧಾರ್ಮಿಕ ಉಪನ್ಯಾಸಗಳು, ದೇಶಾಭಿಮಾನದ ಚಟುವಟಿಕೆಗಳು—ಈ

ಎಲ್ಲ ವಿಷಯಗಳಲ್ಲಿ ವ್ಯಾಪಕ ರಾಷ್ಟ್ರೀಯ ಆದರ್ಶವೊಂದು ಅವರ ಮನಸ್ಸಿನಲ್ಲಿ ಪ್ರಭುತ್ವ ನಡೆಸುತ್ತಿತ್ತು."*

ಸಂಸಾರದಲ್ಲಿನ ವಾತಾವರಣದಿಂದ ಉದ್ದೀಪನವಾದ ಠಾಕೂರರ ಗಾಢವಾದ ದೇಶಭಕ್ತಿಯು ಅವರ ಸಾಹಿತ್ಯಕ ಶಕ್ತಿಗಳನ್ನು ಬೆಳೆಸಲು ಪ್ರಚೋದನೆ ನೀಡಿತು. ದೇಶಭಕ್ತಿಯ ವಾತಾವರಣ ಹಲವು ಪೀಳಿಗೆಗಳ ಕಾಲ ಆ ಸಂಸಾರದಲ್ಲಿ ತುಂಬಿತ್ತು. ಇದಕ್ಕೆ ಸಿದ್ಧತೆ ಮಾಡಿದವರು ಠಾಕೂರರ ತಾತ ದ್ವಾರಕನಾಥರು. ಅವರು ಯೂರೋಪಿಯನ್ ಸಮಾಜದ ಸದಸ್ಯರೊಂದಿಗೆ ಆತ್ಮೀಯವಾಗಿ ಬೆರೆತರೂ, ಭಾರತೀಯ ಜೀವನ ಶೈಲಿಯನ್ನು ಎಂದೂ ಬಿಡಲಿಲ್ಲ. ಅವರಿಗೆ ಅದರಲ್ಲಿ ಎಷ್ಟು ಅಭಿಮಾನವೆಂದರೆ ಇಂಗ್ಲೆಂಡಿನಲ್ಲಿದ್ದಾಗಲೂ ಭಾರತೀಯ ಉಡುಪನ್ನು ಧರಿಸುವುದೆಂದರೆ ಮತ್ತು ಹುಕ್ಕಾ ಸೇದುವುದೆಂದರೆ ಸಂತೋಷ. ಈ ಮನೋಧರ್ಮವನ್ನು ಅವರ ಮಕ್ಕಳು ಅವರಿಂದ ಪಡೆದರು. ಅವರ ಕಡೆಯ ಮಗ ನಾಗೇಂದ್ರನಾಥರು ತಂದೆ ಇಂಗ್ಲೆಂಡಿನಲ್ಲಿ ತೀರಿಕೊಂಡ ನಂತರ ಭಾರತಕ್ಕೆ ಹಿಂದಿರುಗಿದಾಗ ಪರಿಪೂರ್ಣ ಭಾರತೀಯ ಉಡುಪನ್ನು ಧರಿಸಿ ಹಡಗಿನಿಂದ ಹೊರಬಂದದ್ದರಿಂದ ಕಲ್ಕತ್ತದ ಸಾಮಾಜಿಕ ವೃತ್ತದಲ್ಲಿ ಕೋಲಾಹಲವೆದ್ದಿತು. ಕುಟುಂಬದ ಸದಸ್ಯರು ಒಬ್ಬರಿಗೊಬ್ಬರು ಪತ್ರ ಬರೆಯುವಾಗ ಬಂಗಾಳೀ ಭಾಷೆಯನ್ನೇ ಬಳಸಬೇಕೆಂದು ದೇವೇಂದ್ರನಾಥರು ಕಟ್ಟಪ್ಪಣೆ ವಿಧಿಸಿದ್ದರು.

ಈ ಪರಂಪರೆ ಮುಂದಿನ ಪೀಳಿಗೆಯಲ್ಲಿ ಉಳಿಯಿತಷ್ಟೇ ಅಲ್ಲ, ಇನ್ನೂ ಗಾಢವಾಯಿತು. ಬಂಗಾಳಿಯಲ್ಲಿ ದೇಶಭಕ್ತಿ ಗೀತೆಗಳನ್ನು ರಚಿಸುವುದೆಂದರೆ ಸತ್ಯೇಂದ್ರನಾಥನಿಗೆ ಸಂತೋಷ. ತನ್ನ ನಂಟ ಗಣೇಂದ್ರನಾಥ ಮತ್ತು ನವಗೋಪಾಲ ಮಿತ್ರರೊಂದಿಗೆ ಸೇರಿ ಅವನು, ತನ್ನ ದೇಶದವರಲ್ಲಿ ದೇಶಪ್ರೇಮವನ್ನು ಬೆಳೆಸುವುದಕ್ಕೂ ಸ್ವದೇಶೀ ವಸ್ತುಗಳ ಮಾರಾಟವನ್ನು ಹೆಚ್ಚಿಸುವುದಕ್ಕೂ ಕಲ್ಕತ್ತದಲ್ಲಿ ಹಿಂದೂ ಮೇಳವನ್ನು ವ್ಯವಸ್ಥೆಗೊಳಿಸಿದ. ಹೇಮೇಂದ್ರನಾಥನು ಕುಟುಂಬದ ಸದಸ್ಯರು ಬಂಗಾಳೀ ಭಾಷೆಯನ್ನು ಅಭ್ಯಾಸ ಮಾಡಿ ಅದರ ಮೇಲೆ ಪ್ರಭುತ್ವವನ್ನು ಗಳಿಸಿಕೊಳ್ಳಬೇಕೆಂದು ಒತ್ತಾಯ ಮಾಡಿದ. ತಮ್ಮ ತಾಯ್ನಾಡನ್ನು ಕುರಿತು ತಮ್ಮ ಭಾವನೆಗಳಿಗೆ ಅಭಿವ್ಯಕ್ತಿ ನೀಡಲು ಠಾಕೂರರಿಗೆ ಹಿಂದೂ

* 'ಜೀವನ ಸ್ಮೃತಿ.' ಬಾರಿರ್ ಅಭವ

ಮೇಳ ಅವಕಾಶವನ್ನು ಕಲ್ಪಿಸಿಕೊಟ್ಟಿತು. ಅವರು ಹಿಂದೂ ಮೇಳದ ಕಾರ್ಯ ಕ್ರಮಗಳಲ್ಲಿ ಎರಡು ಬಾರಿ ಭಾಗವಹಿಸಿ ಭಾರತವನ್ನು ಕುರಿತು ತಮ್ಮ ಕವನ ಗಳನ್ನು ಹಾಡಿದಂತೆ ಕಾಣುತ್ತದೆ. ಮೊದಲ ಬಾರಿ 1875 ರಲ್ಲಿ ಭಾಗವಹಿಸಿದಾಗ ಅವರಿಗಿನ್ನೂ ಹದಿನಾಲ್ಕೇ ವರ್ಷ. ಅದು ಎಷ್ಟು ಮಹತ್ವದ ಸಂಗತಿಯಾಗಿ ತೋರಿ ತೆಂದರೆ ಮರುದಿನ ಪ್ರಮುಖ ದಿನಪತ್ರಿಕೆಯಲ್ಲಿ ಅದರ ವರದಿಯಾಯಿತು.* ಕವನವು ಮಹರ್ಷಿವ್ಯಾಸರು ಹಿಮಾಲಯದ ಮೇಲೆ ಕುರಿತು ಭಾರತದ ಗತಕಾಲದ ವೈಭವವನ್ನು ಸ್ಮರಿಸಿಕೊಂಡು ವರ್ತಮಾನದಲ್ಲಿ ಅದರ ದೀನಸ್ಥಿತಿಯೊಂದಿಗೆ ಹೋಲಿಸಿ ಈ ಪ್ರಶ್ನೆಯನ್ನು ಕೇಳುವಂತೆ ಕಲ್ಪಿಸಿಕೊಳ್ಳುತ್ತದೆ.

> "ಭಾರತದ ಹಿಂದಿನ ವೈಭವದ ಬೂದಿಯಿಂದ
> ಪ್ರಜ್ವಲಿಸುವ ಉರಿಯೊಂದು ಮತ್ತೆ ಹೊಮ್ಮಿ
> ಜಗವೆಲ್ಲ ಬೆಳಗುವುದೇನು ?"

ತಮ್ಮ ಕಾಲದ ಬಂಗಾಳಿಯರು ಎಷ್ಟು ಅಮುಖ್ಯವಾದ ಪಾತ್ರವನ್ನು ತಳೆದಿದ್ದಾರೆ (ಕಡೆಗಣಿಸಿದ್ದಾರೆ) ಎನ್ನುವುದು ಅವರ ಸೂಕ್ಷ್ಮ ಮನಸ್ಸಿಗೆ ಪೂರ್ಣ ವಾಗಿ ಅರಿವಾಗಿತ್ತು. ದೇಶಾಭಿಮಾನದ ವಿಚಾರಗಳಿಂದ ಉತ್ಸಾಹ ತುಂಬಿತುಳು ಕುತ್ತಿದ್ದ ಅವರಿಗೆ ಯಾರಾದರೂ ಈ ಅಪಮಾನವನ್ನು ತೊಡೆದುಹಾಕಲು ಮನಸ್ಸು ಮಾಡಬೇಕೆಂದು ತೀಕ್ಷ್ಣವಾಗಿ ಎನ್ನಿಸಿತು. ಒಂದು ಪ್ರಬಂಧದಲ್ಲಿ ಅವರು ಹೀಗೆ ಹೇಳುತ್ತಾರೆ : "ಬಹುಕಾಲ ಮೌನವಾಗಿದ್ದ ಬಂಗಾಳದ ಹೃದಯ ಈಗ ವಿಚಾರಗಳಿಂದ ತುಂಬಿ ತುಳುಕುತ್ತಿದೆ. ಅದು ತನ್ನ ಭಾವನೆಗಳನ್ನು ತನ್ನ ಭಾಷೆ ಯಲ್ಲಿ ಸ್ಪಷ್ಟವಾಗಿ ಹೇಳಲಿ. ಜಗತ್ತಿನ ಮೇಳದಲ್ಲಿ ಬಂಗಾಳಿಗಳೂ ಸೇರಿದಾಗ ಅದು ಇನ್ನೂ ಮಧುರವಾಗಿ ಕಾಣುತ್ತದೆ".**

ರವೀಂದ್ರನಾಥರಿಗೆ ತಮ್ಮ ದೇಶದ ಪ್ರಾಚೀನ ಕಾಲದ ಬಗ್ಗೆ ಬಹು ಹೆಮ್ಮೆ. ಭಾರತವು ತನ್ನ ವೈಭವದ ಸ್ಥಾನವನ್ನು ಮರಳಿ ಪಡೆಯಬೇಕೆಂಬುದು ಅವರ ಪ್ರಬಲ

---

* 'ಇಂಡಿಯನ್ ಡ್ಯೆಲಿ ನ್ಯೂಸ್', ಫೆಬ್ರುವರಿ 15, 1875

** 'ವಿಚಿತ್ರ ಪ್ರಬಂಧ'

ವಾದ ಆಸೆ. 'ನೈವೇದ್ಯ' ಎನ್ನುವ ಕವನ ಸಂಗ್ರಹದಲ್ಲಿನ ಒಂದು ಸುನೀತದಲ್ಲಿ ಈ ಆಸೆಯನ್ನು ವ್ಯಕ್ತಪಡಿಸಿದ್ದಾರೆ.

ಕುಟುಂಬ ಹಲವು ಸಾಹಿತ್ಯದ ಪತ್ರಿಕೆಗಳನ್ನು ನಡೆಸುತ್ತಿದ್ದುದು ಅವರ ಬರವಣಿಗೆಗೆ ಪ್ರೋತ್ಸಾಹದಾಯಕವಾಗಿ ಪರಿಣಮಿಸಿತು. ಅವರ ಪ್ರಾರಂಭದ ಕವನಗಳಲ್ಲೊಂದಾದ 'ಅಭಿಲಾಷ್' ಎನ್ನುವುದನ್ನು 1874 ರ ಡಿಸೆಂಬರಿನ ಕೊನೆಯ ಭಾಗದಲ್ಲಿ, ಅವರಿಗಿನ್ನು ಹದಿಮೂರು ವರ್ಷವಾಗಿದ್ದಾಗ "ತತ್ತ್ವಬೋಧಿನಿ" ಪತ್ರಿಕೆಯು ಪ್ರಕಟಿಸಿತು.* ಸ್ವಲ್ಪ ಕಾಲದ ನಂತರ ಹದಿವಯಸ್ಸಿನಲ್ಲೇ ಅವರ ಕುಟುಂಬ ನಡೆಸುತ್ತಿದ್ದ 'ಸಾಧನ' ಪತ್ರಿಕೆಯಲ್ಲಿ ಮತ್ತೆ ಮತ್ತೆ ಅವರ ಬರಹಗಳು ಪ್ರಕಟವಾಗುತ್ತಿದ್ದವು.

ಅವರಿಗೆ ಅತ್ಯಂತ ಹೆಚ್ಚಿನ ಪ್ರೋತ್ಸಾಹ ದೊರಕಿದ್ದು ಜ್ಯೋತಿರಿಂದ್ರನಾಥರ ಪತ್ನಿ ಕಾದಂಬರೀದೇವಿಯಿಂದ. ಆಕೆ ಆತನಿಗೆ ಅನುರೂಪಳಾದ ಹೆಂಡತಿ. ಆಕೆ ಕುಟುಂಬಕ್ಕೆ ಬಂದಾಗ ರವೀಂದ್ರನಾಥರಿಗೆ ಏಳೇ ವರ್ಷ. ಪ್ರತಿಭಾವಂತನಾದ ಈ ಮೈದುನನಿಂದ ಆಕರ್ಷಿತರಾದ ಆಕೆ ಅವನ ಮೇಲೆ ಪ್ರೀತಿಯ ಮಳೆಯನ್ನೆ ಕರೆದರು. ಅವನ ಮುಪ್ಪಿನಲ್ಲೂ ಈ ನೆನಪು ಉಳಿದಿತ್ತು. ಇದನ್ನು ಹೀಗೆ ಸ್ಮರಿಸಿಕೊಳ್ಳುತಾರೆ :

ನನ್ನ ಬಾಳಿನಲ್ಲಿ ಮೊಟ್ಟ ಮೊದಲ ಬಾರಿ ಮೊದಲ ಸೊಸೆ
ಹೊರಗಿನಿಂದ ನಮ್ಮ ಮನೆಗೆ ಕಾಲಿಟ್ಟಾಗ,
ರೇವಿನಲ್ಲಿ ನಿಂತ ದೋಣಿಯಾಗಿತ್ತು ನನ್ನ ಮನ,
ಆದರೆ ಅದನ್ನು ಅತ್ತಿತ್ತ ಒಗೆಯುತ್ತ ಬಂತೊಂದು ಅಲೆ
ನನ್ನ ಪಾಲ ಸುಖವನ್ನುಕ್ಕಿಸುತ್ತ ಹೊರಚೆಲ್ಲುತ್ತ
ದೈವ ತಂದಿತೆನಗೆ ಸಮೃದ್ಧಿಯ. **

---

* 'ತತ್ತ್ವ ಬೋಧಿನಿ ', ಅಗ್ರಹಾಯಣ 1796 ಶಕಾಬ್ದ

** 'ಆಕಾಶ ಪ್ರದೀಪ್', ಕಾಂಚ ಆಂ

ರವೀಂದ್ರನ ಬಾಲ್ಯದಲ್ಲೇ ಅವನ ತಾಯಿ ತೀರಿಕೊಂಡಾಗ ಹುಡುಗನ ಅಗತ್ಯಗಳಿಗೆ ಗಮನಕೊಟ್ಟು ಅವನ ದುಃಖವನ್ನು ಕಡಿಮೆ ಮಾಡಲು ಅಗತ್ಯವಾಗಿದ್ದ ಪ್ರೀತಿಯ ಮಳೆಗರೆಯುವ ಕಾರ್ಯವನ್ನು ಈ ಅಕ್ಕಾತಿಯ ಅತ್ತಿಗೆ ವಹಿಸಿಕೊಂಡಳು. ಅದಾದನಂತರ ರವೀಂದ್ರರು ದೂರವಾಗಿ ಗಂಡನೊಂದಿಗೆ ಹೋಗಬೇಕಾದಾಗಲೂ ಅವನನ್ನು ತಮ್ಮೊಡನೆಯೆ ಇರಿಸಿಕೊಳ್ಳುತ್ತಿದ್ದಳು.

ಈ ಅಸಾಧಾರಣ ಮಹಿಳೆಗೆ ಸಾಹಿತ್ಯದಲ್ಲಿ ತುಂಬ ಪ್ರೀತಿ ಮಾತ್ರವಲ್ಲ ಸಾಹಿತ್ಯದಲ್ಲಿ ಅದರಲ್ಲಿಯೂ ಕಾವ್ಯದಲ್ಲಿ ತುಂಬ ಆಸಕ್ತಿ. ಕುಟುಂಬದ ಹಿರಿಯಣ್ಣ ದ್ವಿಜೇಂದ್ರನಾಥನಿಗೆ ಆ ಕಾಲದ ಅತ್ಯಂತ ಪ್ರತಿಭಾವಂತ ಕವಿ ಬಿಹಾರಿಲಾಲ್ ಚಕ್ರವರ್ತಿ ಗೆಳೆಯನಾಗಿದ್ದ. ಆತ ಅವರ ಮನೆಗೆ ಆಗಾಗ ಬರುತ್ತಿದ್ದ. ಅವನ ಕವಿ ಸ್ವಭಾವವನ್ನು ಕಾದಂಬರೀದೇವಿ ಎಷ್ಟು ಮೆಚ್ಚಿಕೊಂಡಿದ್ದಳೆಂದರೆ ತಾನೇ ಅಡುಗೆ ಮಾಡಿ ಅವನಿಗೆ ಬಡಿಸುತ್ತಿದ್ದಳು. ಅವನು ಕುಳಿತುಕೊಳ್ಳಲು ಜಮಖಾನೆಗೆ ತಾನೇ ಕಸೂತಿ ಕೆಲಸ ಮಾಡಿ ಉಡುಗೊರೆಯಾಗಿ ಕೊಟ್ಟಳು. ಅದರಲ್ಲಿ ಅವನ ಪ್ರಸಿದ್ಧ ಕೃತಿ, 'ಶರದ ಮಂಗಳ' ದಿಂದ ಕೆಲವು ಸಾಲುಗಳನ್ನು ಸೇರಿಸಿದ್ದಳು.

ಕಾವ್ಯದಲ್ಲಿ ಇಷ್ಟೊಂದು ಆಸಕ್ತಿಯಿದ್ದ ಆವಳು ಸಹಜವಾಗಿ ತನ್ನ ಮೈದುನನಲ್ಲಿ ಕಂಡ ಕಾವ್ಯಶಕ್ತಿಯಲ್ಲಿ ಆಸಕ್ತಿ ವಹಿಸಿದಳು. ಮತ್ತು ಅವನ ಪ್ರಯತ್ನಗಳಲ್ಲಿ ಅವನನ್ನು ಹುರಿದುಂಬಿಸಿದಳು. ಆದರೆ ಅವನಲ್ಲಿ ಸಲ್ಲದ ಹೆಮ್ಮೆ ಬೆಳೆಯದಂತೆ ಎಚ್ಚರಿಕೆ ವಹಿಸಿದಳು. ಅವನು ತನ್ನ ಶಕ್ತಿಯನ್ನು ಸಾಧ್ಯವಾದಷ್ಟು ಬೆಳೆಸಿಕೊಳ್ಳಬೇಕೆಂಬುದು ಅವಳ ಬಯಕೆ. ಆದ್ದರಿಂದ ಅವನು ಬಹು ಚೆನ್ನಾಗಿ ಪ್ರಗತಿ ಸಾಧಿಸುತ್ತಿದ್ದನೆಂಬುದನ್ನು ಹೇಳುತ್ತಲೇ ಇರಲಿಲ್ಲ. ಅವನಲ್ಲಿರಬಹುದಾದ ಒಣ ಹೆಮ್ಮೆಯ ಭಾವನೆಯನ್ನು ಬೇರುಸಹಿತ ಕಿತ್ತುಹಾಕಲು ಒಮ್ಮೊಮ್ಮೆ ಛೇಡಿಸುತ್ತಿದ್ದುದೂ ಉಂಟು.*

ದುರ್ದೈವದಿಂದ ಈ ಆಕರ್ಷಕ ಮಹಿಳೆ 1884 ರಲ್ಲಿ ಆತ್ಮಹತ್ಯೆ ಮಾಡಿಕೊಂಡಳು. ಏಕೆ ಎನ್ನುವುದು ಯಾರಿಗೂ ತಿಳಿಯದು. ಆ ಸಮಯದಲ್ಲಿ ಅನುಭವಿಸಿದಷ್ಟು ತೀಕ್ಷ್ಣವಾಗಿ ಸಾವಿನ ನೋವನ್ನು ಹಿಂದೆ ಯಾವಾಗಲೂ ತಾವು

---

* 'ಜೀವನ್ ಸ್ಮೃತಿ', ಸಾಹಿತ್ಯೇರ್ ಸಾಂಘಿ

ಅನುಭವಿಸಿರಲಿಲ್ಲವೆಂದು ಠಾಕೂರರು ತಮ್ಮ ಜೀವನ ಸ್ಮೃತಿಗಳಲ್ಲಿ ಹೇಳಿದ್ದಾರೆ. ಗಾಢವಾದ ಕೃತಜ್ಞತೆಯ ಭಾವವು ತುಂಬಿತುಳುಕಿ ಅವರು ಹೃದಯವನ್ನು ಝಲ್ಲೆನ್ನಿಸುವ ಈ ಘಟನೆ ನಡೆದ ನಂತರ ಸ್ವಲ್ಪಕಾಲದಲ್ಲೇ ಪ್ರಕಟಿಸಿದ ಎರಡು ಕೃತಿಗಳನ್ನು ಆಕೆಯು ನೆನಪಿಗೆ ಸಮರ್ಪಿಸಿದರು.

ಇವುಗಳಲ್ಲಿ ಮೊದಲನೆಯದು 'ಶೈಶವ ಸಂಗೀತ್'. ಇನ್ನೂ ಹದಿವಯಸ್ಸಿನಲ್ಲಿ ಅವರು ರಚಿಸಿದ ಕವನಗಳ ಸಂಗ್ರಹ. ಇದಕ್ಕಿಂತ ಪ್ರಬುದ್ಧ ಬರಹಗಳು ಈ ಮೊದಲೇ ಪ್ರಕಟವಾಗಿದ್ದವು. ಈ ಕವನಗಳನ್ನು ಬರೆಯಲು ಸ್ಫೂರ್ತಿ ನೀಡಿದ್ದ ಅತ್ತಿಗೆಯ ಸಾವು, ಅದನ್ನು ತಡವಾಗಿಯಾದರೂ ಪ್ರಕಟಿಸಲು ಪ್ರಚೋದನೆ ನೀಡಿತೆಂದು ತೋರುತ್ತದೆ. ಸಾಹಿತ್ಯಕವಾಗಿ ಮೆಚ್ಚುವಂತಹ ಗುಣವೇನೂ ಅವುಗಳಲ್ಲಿ ಇಲ್ಲ. ಆದರೆ ಅವರ ಪ್ರಾರಂಭದ ಬರಹಗಳ ಮಾದರಿ ಎಂದು ಅವಕ್ಕೆ ಚಾರಿತ್ರಿಕ ಮಹತ್ವ ಉಂಟು. ಸಮರ್ಪಣೆಯಲ್ಲಿ ಅವರು ಬರೆದ ಈ ಮಾತುಗಳನ್ನು ಹೀಗೆ ಅನುವಾದಿಸಬಹುದು :

> ಈ ಕವನಗಳನ್ನು ನಿಮಗೆ ಸಮರ್ಪಿಸುತ್ತೇನೆ. ಬಹು ದಿನಗಳ
> ಹಿಂದೆ ಇವನ್ನು ನಿಮ್ಮ ಮುಂದೆ ಬರೆಯುತ್ತಿದ್ದೆ, ಓದುತ್ತಿದ್ದೆ.
> ನಿಮ್ಮ ಪ್ರೀತಿಯ ನೆನಪು ಅವುಗಳಲ್ಲಿದೆ. ಆದ್ದರಿಂದ ನೀವು
> ಎಲ್ಲಿಯೇ ಇರಲಿ, ಈ ಕವನಗಳು ನಿಮ್ಮ ದೃಷ್ಟಿಗೆ ಬೀಳದೆ
> ಹೋಗುವುದಿಲ್ಲ ಎಂದು ನನಗೆನ್ನಿಸುತ್ತದೆ.

ಎರಡನೆಯ ಪುಸ್ತಕ 'ಭಾನುಸಿಂಹ ಠಾಕುರೇರ್ ಪದಾವಳಿ'. ಇದಕ್ಕೆ ತನ್ನದೇ ಆದ ಕೆಲವು ಸ್ವಾರಸ್ಯವಾದ ಲಕ್ಷಣಗಳಿವೆ. ತನ್ನ ಅತ್ತಿಗೆಯ ಪ್ರೋತ್ಸಾಹದಿಂದ ಠಾಕೂರರು ವೈಷ್ಣವ ಕವಿಗಳ 'ಪದಾವಳಿ' ಗಳನ್ನು ಅನುಕರಿಸಿ ಹಲವು ಕವನಗಳನ್ನು ಬರೆದರು. ಅವರ ಕುಟುಂಬದ ಪತ್ರಿಕೆ 'ಭಾರತಿ' ಯಲ್ಲಿ ಬೇರೆ ಬೇರೆ ಸಂಚಿಕೆಗಳಲ್ಲಿ ಇವು 1877 ರಿಂದ 1881 ರ ವರೆಗೆ ಪ್ರಕಟವಾಗಿದ್ದವು. ಅವು ಎಷ್ಟು ಪರಿಪೂರ್ಣ ಅನುಕರಣೆಗಳಾಗಿದ್ದವು ಎಂದರೆ ಅವು ಸಂಶೋಧನೆ ನಡೆಸುತ್ತಿದ್ದ ವಿದ್ವಾಂಸರಲ್ಲಿ ಕೋಲಾಹಲವನ್ನು ಉಂಟು ಮಾಡಿದವು. ಅವರಲ್ಲೊಬ್ಬಾತ ಈ ಕವನಗಳು ಮಧ್ಯಯುಗದ ಒಬ್ಬ ಕವಿಯದೆಂದು ವಾದಿಸಿ ಒಂದು ವಿದ್ವತ್ಪ್ರಬಂಧವನ್ನೇ ಬರೆಯುವಷ್ಟು ಧೈರ್ಯ ಮಾಡಿದ. ಈ ಕವನಗಳನ್ನು ಪ್ರಕಟಿಸಬೇಕೆಂದು ಅತ್ತಿಗೆ ಕೋರಿದರೂ ತನ್ನದೆಂದು ಹೇಳಿಕೊಳ್ಳಬಹುದಾದ ಸಾಹಿತ್ಯದ ಗುಣಗಳು ಯಾವುವೂ

ಅವುಗಳಲ್ಲಿ ಇಲ್ಲವೆಂದು ಠಾಕೂರರು ಅವುಗಳ ಪ್ರಕಟಣೆಗೆ ಮನಸ್ಸು ಮಾಡಲಿಲ್ಲ. ಈ ಕವನಗಳ ಪ್ರಕಟಣೆಗೂ ಆಕೆಯ ನೆನಪೇ ಪ್ರಚೋದನೆಯಾಯಿತು. ಹೃದಯ ಸ್ಪರ್ಶಿಯಾದ ಸಮರ್ಪಣೆ ಹೀಗಿದೆ :

> ಭಾನುಸಿಂಹ ಎಂಬ ಕಾವ್ಯನಾಮದಿಂದ ಬರದ ಕವನ ಸಂಗ್ರಹವನ್ನು
> ಪ್ರಕಟಿಸಬೇಕೆಂದು ನೀವು ಕೋರಿದ್ದರಿ. ಆಗ ನಾನು ನಿಮ್ಮ
> ಮಾತನ್ನು ನಡೆಸಲಿಲ್ಲ. ಇಂದು ಅದನ್ನು ಪ್ರಕಟಿಸಿದ್ದೇನೆ,
> ಆದರೆ ಅದನ್ನು ನೋಡಲು ಇಲ್ಲಿ ನೀವಿಲ್ಲ.

ಇನ್ನೂ ರೂಪತಾಳುತ್ತಿದ್ದ ಪ್ರಾರಂಭದ ಘಟ್ಟದಿಂದ ಪ್ರಬುದ್ಧತೆಯ ಹಂತದವರೆಗೆ ಠಾಕೂರರ ಕಾವ್ಯದ ಬೆಳವಣಿಗೆಯನ್ನು ಈಗ ಗಮನಿಸುವುದು ಹೆಚ್ಚು ಸೂಕ್ತ. ಬೆಳವಣಿಗೆಯ ಮೂರು ಸ್ಪಷ್ಟ ಹಂತಗಳನ್ನು ಈ ಸಂದರ್ಭದಲ್ಲಿ ಗುರುತಿಸಬಹುದು. ಬಾಲ್ಯದಿಂದಲೇ ಠಾಕೂರರಲ್ಲಿ ಗಾಢವಾದ ನಿಸರ್ಗ ಪ್ರೇಮ ಬೆಳೆಯುತ್ತಿತ್ತೆಂಬುದನ್ನು ಆಗಲೇ ಗಮನಿಸಿದ್ದೇವೆ. ಠಾಕೂರರು ತಮ್ಮ ಕಾವ್ಯದ 'ಕಾಪೀ ಪುಸ್ತಕದ ಘಟ್ಟ' ಎಂದು ಬಹು ಸೂಕ್ತವಾಗಿ ವರ್ಣಿಸಿದ ಪ್ರಾರಂಭದ ಘಟ್ಟದಲ್ಲಿ ಇದೇ ಅವರ ಕವನಗಳಿಗೆ ಸ್ಫೂರ್ತಿ.* ಈ ಹಂತದಲ್ಲಿ ಅವರ ಪ್ರಯತ್ನದ ಗುರಿಯೆಲ್ಲ ಆಗಲೇ ಪ್ರಸಿದ್ಧರಾಗಿದ್ದ ಕವಿಗಳ ಅನುಕರಣೆಯಷ್ಟೇ ಆಗಿತ್ತು. "ಭಾನುಸಿಂಹ ಠಾಕೂರರ ಪದಾವಳಿ" ಯೇ ಇದಕ್ಕೆ ಒಂದು ನಿದರ್ಶನ. ಇನ್ನೊಂದು ನಿದರ್ಶನ 'ಶೈಶವ ಸಂಗೀತ್' ಎಂಬ ಹೆಸರಿನಿಂದ ಪ್ರಕಟವಾದ ಕವನ ಸಂಗ್ರಹ. ಇಲ್ಲಿ ಅವರ ಮೇಲೆ ಅವರ ಕುಟುಂಬದ ಸ್ನೇಹಿತ ಬಿಹಾರಿ ಲಾಲ್ ಚಕ್ರವರ್ತಿಯ ಪ್ರಭಾವವಾಯಿತೆಂಬುದಕ್ಕೆ ಸೂಚನೆಯಿದೆ, ಅವರು ಬಳಸಿದ ಪ್ರಾಸಗಳು ಮತ್ತು ದೃಶ್ಯಗಳ ವರ್ಣನೆಗಳಲ್ಲಿ ಇದು ಕಾಣುತ್ತದೆ. ಆದರೆ ಮುಂದಿನ ಹಿರಿಮೆಯ ಭರವಸೆಯೂ ಇವುಗಳಲ್ಲಿದೆ.

ತಮ್ಮ ಕಾವ್ಯದ ಕಾಪಿ ಪುಸ್ತಕದ ಹಂತದ ಹೊಸ್ತಿಲನ್ನೂ 'ಸಂಧ್ಯಾ ಸಂಗೀತ' ಎನ್ನುವ ಕವನ ಸಂಗ್ರಹದಲ್ಲಿ ದಾಟಿದುದಾಗಿ ಠಾಕೂರರೇ ಹೇಳಿದ್ದಾರೆ. ಈ ಸಂಗ್ರಹದಲ್ಲಿ ಸೇರಿರುವ ಕವನಗಳಲ್ಲಿ ಅವರ ವೈಯಕ್ತಿಕ ಶೈಲಿಯ ಮುದ್ರೆ ಮೊಟ್ಟ

* 'ಸಂಧ್ಯಾ ಸಂಗೀತ್'ದ. ಮುನ್ನುಡಿ

ಮೊದಲ ಬಾರಿಗೆ ಕಾಣಿಸುತ್ತದೆ. ಇದು ನಿಸ್ಸಂದೇಹವಾಗಿ ಪ್ರಬುದ್ಧತೆಯುಕ್ತ ಒಂದು ಹೆಜ್ಜೆ. ಇದನ್ನು ತಿಳಿದು ಅವರು ತುಂಬ ಸಂತೋಷಪಟ್ಟರು.*

ಇದರ ಮಹತ್ವವನ್ನು ಹಲವು ಕಣ್ಣುಗಳು ಕಾಣದೇ ಹೋದವು. ಆದರೆ ಆ ಯುಗದ ಅತ್ಯಂತ ಶ್ರೇಷ್ಠ ಸಾಹಿತಿ ಬಂಕಿಮ ಚಂದ್ರ ಛಟರ್ಜಿಯವರ ಕಣ್ಣುಗಳು ಮಾತ್ರ ಇದನ್ನು ಕಂಡವು. ಈ ಕೃತಿಯಲ್ಲಿ ಮತ್ತೊಬ್ಬ ಸಾಹಿತ್ಯದ ಭೀಮನ ಉದಯದ ಸುದ್ದಿಯನ್ನು ಅವರು ಓದದೇ ತಪ್ಪು ಮಾಡಲಿಲ್ಲ. ಅವರ ಪ್ರಶಂಸೆ ಸೂಚ್ಯವಾಗಿ ಪ್ರಕಟವಾಯಿತು. ಅದನ್ನು ಸಂಗ್ರಹವಾಗಿ ಹೇಳಬೇಕು. ಆ ಕಾಲದ ಮತ್ತೊಬ್ಬ ಪ್ರಸಿದ್ಧ ಸಾಹಿತಿ, ರಮೇಶಚಂದ್ರ ದತ್ತರು ತಮ್ಮ ಮಗಳ ಮದುವೆಗೆ ಬಂಕಿಮ ಚಂದ್ರರನ್ನೂ ರವೀಂದ್ರನಾಥರನ್ನೂ ಆಹ್ವಾನಿಸಿದ್ದರು. ಆಕಸ್ಮಿಕವಾಗಿ ಇಬ್ಬರೂ ಒಟ್ಟಿಗೆ ಬಂದರು. ಬಂಕಿಮ ಚಂದ್ರರು ರವೀಂದ್ರರಿಗಿಂತ ಒಂದೇ ಹೆಜ್ಜೆ ಮುಂದಿದ್ದರು. ರವೀಂದ್ರನಾಥರು ನೋಡುತ್ತಿದ್ದಂತೆಯೇ ರಮೇಶಚಂದ್ರರು ಮಹಾ ಸಾಹಿತಿಗೆ ಹಾರ ಹಾಕಿ ಸ್ವಾಗತಿಸಿದರು. ಬಂಕಿಮ ಚಂದ್ರರು ಹಾರವನ್ನು ತೆಗೆದು ರವೀಂದ್ರನಾಥರ ಕೊರಳಿಗೆ ಹಾಕುತ್ತಲೇ, "ಈ ಹಾರ ಈತನಿಗೆ (ರವೀಂದ್ರನಾಥ) ಸೇರಬೇಕು. ರಮೇಶ್, ಅವನ 'ಸಂಧ್ಯಾ ಸಂಗೀತ' ಓದಿದ್ದೀಯೇನು ?" ಎಂಬ ಅರ್ಥವತ್ತಾದ ಮಾತುಗಳನ್ನು ಹೇಳಿದರು.**

ರವೀಂದ್ರನಾಥರ ಕವನಗಳು ಸಾಮಾನ್ಯವಾಗಿ ನೆಮ್ಮದಿಯ ಭಾವನೆ ಮತ್ತು ಆಶಾ ಭಾವನೆಗಳಿಂದ ತುಂಬಿ ತುಳಕಾಡುತ್ತವೆ. ದುರದೃಷ್ಟದಿಂದ ಈ ಸಂಗ್ರಹ ದಲ್ಲಿನ ಕವನಗಳು ಅವರಿಗೆ ಸಹಜವಾದ ಈ ಮನೋಧರ್ಮವನ್ನು ಪ್ರತಿಬಿಂಬಿಸ ಲಿಲ್ಲ. ಇದಕ್ಕೆ ಪ್ರತಿಯಾಗಿ ದುಃಖ, ವಿಷಣ್ಣತೆಗಳ ಮನೋಭಾವನೆ ಅದನ್ನು ತುಂಬಿತ್ತು. ಇದರ ಮುಖ್ಯಧ್ವನಿ ಸೋಲು, ಮತ್ತು ಒಂಟಿತನಗಳದ್ದು. ಇದರಿಂದಲೇ ಇರಬಹುದು ಪುಸ್ತಕಕ್ಕೆ 'ಸಂಧ್ಯಾ ಸಂಗೀತ' ಎಂದು ಹೆಸರಿಟ್ಟದ್ದು.

ಠಾಕೂರರಿಗೇ ಇದರ ಅರಿವಿತ್ತು. ಇದರ ಕಾರಣವನ್ನು ಕಂಡು ಹಿಡಿಯಲು ಅವರು ಶಕ್ತರಾದರು. ಈ ಹಂತದಲ್ಲಿ ಅವರು ಕಾವ್ಯರಚನೆಯ ತಂತ್ರವನ್ನು

* 'ಸಂಧ್ಯಾ ಸಂಗೀತ್'ದ ಮುನ್ನುಡಿ

** 'ಜೀವನ ಸ್ಮೃತಿ', ಪ್ರಭಾತ್ ಸಂಗೀತ್

ಕೈವಶಮಾಡಿಕೊಂಡಿದ್ದರು. ಆದರೆ ಏಕೋ ಹೇಗೋ ನಿಸರ್ಗದೊಡನೆ ಸಂಪರ್ಕವನ್ನು ಕಳೆದುಕೊಂಡಿದ್ದರು. ಅವರ ಮನಸ್ಸು ತನ್ನೊಳಗೇ ಸೇರಿಕೊಳ್ಳಬೇಕಾಯಿತು. ಇದರಿಂದ ಅವರಿಗೆ ಒಂಟಿತನ, ಎಲ್ಲರೂ ಕೈಬಿಟ್ಟರೆಂಬ ಭಾವನೆ ಬಂದವು.

ನಿಸರ್ಗದೊಡನೆ ಮತ್ತೆ ಬಾಂಧವ್ಯ ಬೆಸೆದಿದ್ದೂ ತುಂಬ ನಾಟಕೀಯ ಸನ್ನಿವೇಶದಲ್ಲಿ. ಸುದ್ದರ್ ಬೀದಿಯಲ್ಲಿ ಅವರ ಅಣ್ಣ ಜ್ಯೋತಿರಿಂದ್ರನಾಥರು ಬಾಡಿಗೆಗೆ ತೆಗೆದುಕೊಂಡಿದ್ದ ಮನೆಯಲ್ಲಿ ತರುಣ ರವೀಂದ್ರನಾಥರು ಆಗವಾಸ ಮಾಡುತ್ತಿದ್ದರು. ಅಲ್ಲಿಂದ ಕೆಳಗೆ ಕಲ್ಕತ್ತೆಯ ಫ್ರೀಸ್ಕೂಲ್ ರಸ್ತೆಯ ಅಂಚಿನಲ್ಲಿದ್ದ ಎತ್ತರವಾದ ಮರಗಳು ಕಾಣುತ್ತಿದ್ದವು. ಒಂದು ಬೆಳಿಗ್ಗೆ ಅವರು ಬಿಸಿಲು ಮಚ್ಚಿಗೆ ಬಂದಾಗ, ಸೂರ್ಯನು ಬೆಳಗಿನ ಮಂಜಿನ ಮುಸಕನ್ನು ಹಿಂದಕ್ಕೆ ಸರಿಸುತ್ತ ಗಿಡಗಳ ಪರದೆಯ ಹಿಂದೆ ಮೇಲೇರುತ್ತಿದ್ದುದನ್ನು ಕಂಡರು. ಆ ದೃಶ್ಯದ ಪರಿಣಾಮವು ಒಂಟಿತನದ ಮೋಡಿಯನ್ನು ಮುರಿಯಿತು. ಗವಿಯೊಂದರಲ್ಲಿ ಬಂಧನದಲ್ಲಿದ್ದು ಬಿಡುಗಡೆಯಾದ ಮನುಷ್ಯನ ಅಪರಿಮಿತ ಉತ್ಸಾಹವನ್ನು ಅವರು ಅನುಭವಿಸಿದರು. ಅವರ ಮುಂದಿನ ಕವನ ಸಂಗ್ರಹದಲ್ಲಿ ಪ್ರಕಟವಾದ ಪ್ರಸಿದ್ಧ ಕವನ 'ನಿರ್ಝರೇರ್ ಸ್ವಪ್ನ ಭಂಗ' (ಜಲಪಾತದ ಮೋಡಿಯ ಭಂಗ)ಕ್ಕೆ ಸ್ಫೂರ್ತಿ ದೊರಕಿದ್ದು ಇದರಿಂದಲೇ.

ಈ ಅನುಭವದ ಮೌಲ್ಯ ನಿರ್ಣಯವನ್ನು ಅವರೇ ಮಾಡಿದರು. ಅದರ ಅನುವಾದ ಹೀಗಿದೆ :

> ಕಟ್ಟಕಡೆಗೆ ಒಂದು ದಿನ, ಹೇಗಾಯಿತೋ ನಾನರಿಯೆ, ಅಗುಳಿ ಹಾಕಿದ್ದ ಬಾಗಿಲು ಒಡೆದು ತೆರೆದುಕೊಂಡಿತು. ನಾನು ಕಳೆದುಕೊಂಡಿದ್ದದ್ದು ಮತ್ತೆ ನನ್ನದಾಯಿತು. ಅದನ್ನು ನಾನು ಮರಳಿ ಪಡೆದುದಷ್ಟೇ ಅಲ್ಲ, ಪ್ರತ್ಯೇಕಿಸಿದ್ದ ಅಡಚಣೆಯಿಂದ ನನಗೆ ಇನ್ನು ಚೆನ್ನಾಗಿ ಅದನ್ನು ಅರಿಯುವುದು ಸಾಧ್ಯವಾಯಿತು. ಅದರಿಂದಲೇ 'ಪ್ರಭಾತ ಸಂಗೀತ' ದಲ್ಲಿ ನನಗೆ ನನ್ನ ಶೈಶವದ ಜಗತ್ತು ಮರಳಿ ದೊರಕಿದಾಗ ಇನ್ನೂ ಹೆಚ್ಚಾದುದನ್ನು ನಾನು ಪಡೆದೆ. ದೂರವಾಗಿ, ಮತ್ತೆ ಒಂದುಗೂಡಿ, ಸುಲಭವಾಗಿ ನಿಸರ್ಗದ ಬಳಿಗೆ ಹೋಗುವುದು ಸಾಧ್ಯವಾದದ್ದು ನನ್ನ ಬಾಳಿನ ಪ್ರಥಮ ಅಧ್ಯಾಯದ ಒಂದು ಪ್ರಸಂಗವನ್ನು ಮುಕ್ತಾಯಗೊಳಿಸಿತು.*

* 'ಪ್ರಭಾತ್ ಸಂಗೀತ್',ದ ಮುನ್ನುಡಿ

ಹೀಗೆ 'ಪ್ರಭಾತ್ ಸಂಗೀತ್'ವು ರವೀಂದ್ರರ ಕಾವ್ಯಜೀವನ ರೂಪ ತಾಳುತ್ತಿದ್ದ ಕಾಲದಲ್ಲಿ ಎರಡನೆಯ ಹಂತದ ಮುಕ್ತಾಯವನ್ನು ಸೂಚಿಸುತ್ತದೆ. ಈ ಹೊಸ ಸಂಗ್ರಹದ ಕವನಗಳಲ್ಲಿ ಉಲ್ಲಾಸದ ಧ್ವನಿಯನ್ನು ಕೇಳುತ್ತೇವೆ. ಠಾಕೂರರ ಪ್ರತಿಭೆಯ ಮುದ್ರೆ ಪಡೆದ ಕವನಗಳನ್ನು–ಅವು ಪರಿಪಕ್ವತೆಯನ್ನು ಪಡೆದಿರಲಿಲ್ಲವಾದರೂ ಈ ಸಂಗ್ರಹದಲ್ಲಿ ಮೊಟ್ಟ ಮೊದಲ ಬಾರಿಗೆ ಕಾಣುತ್ತೇವೆ. ಈ ಪುಸ್ತಕದಲ್ಲಿ ಅವರ ಕಾವ್ಯರಚನೆಯ ಪ್ರಯತ್ನಗಳ ಪ್ರಥಮ ಫಲಗಳು ಓದುಗರಿಗೆ ದೊರಕುತ್ತವೆ.*

ಇದಾದನಂತರ ಠಾಕೂರರ ಕಾವ್ಯ ವೇಗವಾಗಿ ಪಕ್ವತೆಯತ್ತ ಸಾಗಿತ್ತು. 1886 ರಲ್ಲಿ ಪ್ರಕಟವಾದ 'ಕೋರಿ–ಓ–ಕವುಲ್' ನಲ್ಲಿ ಪರಿಪಕ್ವತೆಯ ಮುದ್ರೆಯನ್ನು ಕಾಣಬಹುದು. ಆಶಾಭಾವನೆಯ ಶಕ್ತಿಯುತ ಧ್ವನಿ, ನಿಸರ್ಗದ ವಿವಿಧ ಭಾಗಗಳಿಗೆ ಮತ್ತು ಚಲನರಹಿತ ವಸ್ತುಗಳಿಗೆ ಸಹ–ಮಾನವರ ಗುಣಗಳನ್ನು ಆರೋಪಿಸುವ ಶೈಲಿ ಹೀಗೆ ಅವರ ಕಾವ್ಯಕ್ಕೆ ಸಹಜವಾದ ಲಕ್ಷಣಗಳನ್ನು ಇಲ್ಲಿ ಕಾಣುತ್ತೇವೆ. ಅವರ ದೃಷ್ಟಿಯಲ್ಲಿ ನಿಸರ್ಗ ನಿರ್ಜೀವವಲ್ಲ, ಚೈತನ್ಯಮಯ ಜೀವದೊಂದಿಗೆ ಸ್ಪಂದಿಸುತ್ತದೆ. ಋತುಗಳೆಂದರೆ ನರ್ತಿಸುವ ಕನ್ಯೆಯರು, ಹಿಮದ ಹನಿಯಲ್ಲಿ ಪ್ರತಿಬಿಂಬಿತವಾಗುವ ಸೂರ್ಯ ಪೃಥೆ ಸೂರ್ಯ ಕಳುಹಿಸಿದ ಪ್ರೇಮ ಸಂದೇಶ. ರಾತ್ರಿಯ ಆಗಸವನ್ನು ಬೆಳಗುವ ತಾರೆಗಳು ಕಣ್ಣಿಗೆ ಕಾಣದ ಗೋಪಾಲನೊಬ್ಬ ಹುಲ್ಲು ಮೇಯಿಸುತ್ತಿರುವ ದನಕರುಗಳು. ಅಮೂರ್ತ ವಿಚಾರಗಳು ಸಹ ಜೀವಂತ ವಸ್ತುಗಳಾಗಿ ಮೂರ್ತ ರೂಪವನ್ನು ತಾಳುತ್ತವೆ. ಈ ಹೊಸ ಲಕ್ಷಣಗಳು ಮೊಟ್ಟ ಮೊದಲ ಬಾರಿಗೆ ಕಾಣಿಸುವುದು 'ಕೋರಿ–ಓ–ಕವುಲ್' ನಲ್ಲಿ.

ಠಾಕೂರರ ಸಾಹಿತ್ಯ ರಚನೆ ಮೊದಲಿನಿಂದ ವೈವಿಧ್ಯಮಯವಾಗಿತ್ತು. ಕಾವ್ಯವಲ್ಲದೆ ಇತರ ಕ್ಷೇತ್ರಗಳಲ್ಲೂ ಅವರು ವೇಗವಾದ ಪ್ರಗತಿಯನ್ನು ಸಾಧಿಸಿದರು. ಶತಮಾನ ಮುಗಿಯುವ ಹೊತ್ತಿಗೆ ಹಲವು ರಂಗಗಳಲ್ಲಿ ಮಹತ್ವದ ಬರಹಗಾರರೆಂದು ಅವರನ್ನು ಗುರುತಿಸಿದ್ದುದನ್ನು ಕಾಣುತ್ತೇವೆ.

ಅವರ ನಾಟಕಗಳ ಮೊದಲ ಪುಸ್ತಕ, 'ರುದ್ರ ಚಂಡ', ಅವರಿಗಿನ್ನೂ ಆಗಷ್ಟೇ ಇಪ್ಪತ್ತು ವರ್ಷಗಳಾಗಿದ್ದಾಗ, 1881 ರಲ್ಲಿ ಪ್ರಕಟವಾಯಿತು. ಅದೇ

* ಜೀವನ ಸ್ಮೃತಿ, 'ವಾಲ್ಮೀಕಿ ಪ್ರತಿಭಾ'

ವರ್ಷ, 'ವಾಲ್ಮೀಕಿ ಪ್ರತಿಭಾ' ಬರೆದರು. ಅದರಲ್ಲಿ ದರೋಡೆಕಾರರ ನಾಯಕ, ರತ್ನಾಕರ, ಸರಸ್ವತಿಯ ಅನುಗ್ರಹದಿಂದ ಮಹಾಕವಿಯಾದ ಕಥೆಯನ್ನು ಬಳಸಿ ಕೊಂಡರು.

ಜೊರಸಾಂಕೊದಲ್ಲಿ ಅವರ ಪೂರ್ವಿಕರ ಮನೆಯಲ್ಲಿ ಈ ನಾಟಕದ ಪ್ರದರ್ಶನ ವಾಯಿತು. ಕುಟುಂಬದ ಸದಸ್ಯರೇ ನಟರಾಗಿ ಭಾಗವಹಿಸಿದರು. ವಾಲ್ಮೀಕಿಯ ಪಾತ್ರದಲ್ಲಿ ಠಾಕೂರರೇ ಕಾಣಿಸಿಕೊಂಡರು. ಬಂಕಿಮ ಚಂದ್ರರು, ಪ್ರಸಿದ್ಧ ನ್ಯಾಯಶಾಸ್ತ್ರಜ್ಞ ಗುರುದಾಸ ಬ್ಯಾನರ್ಜಿ ಇವರೂ ಸೇರಿದಂತೆ ಕಲ್ಕತ್ತದ ಪ್ರತಿಷ್ಠಿತರನ್ನು ಪ್ರದರ್ಶನಕ್ಕೆ ಆಹ್ವಾನಿಸಲಾಗಿತ್ತು. ಪ್ರದರ್ಶನದಿಂದ ತುಂಬಾ ಪ್ರಭಾವಿತರಾದ ಬ್ಯಾನರ್ಜಿಯವರು ಠಾಕೂರರನ್ನು ನವವಾಲ್ಮೀಕಿ ಎಂದು ಹೊಗಳಿ ಕವನವನ್ನು ರಚಿಸಿ ತಮ್ಮ ಪ್ರಶಂಸೆಯನ್ನು ಬರೆದಿಟ್ಟರು.

'ವಾಲ್ಮೀಕಿ ಪ್ರತಿಭಾ' ದಲ್ಲಿ ಹೊಸ ವಿಚಾರವೊಂದರ ಪ್ರಯೋಗವನ್ನು ಠಾಕೂರರು ಯಶಸ್ವಿಯಾಗಿ ನಡೆಸಿದರು. ನಾಟಕವನ್ನು 'ಆಪೆರಾ' ದ ಹಾಡುಗಳ ಮಾದರಿಯಲ್ಲಿ ಬರೆಯಲಾಗಿದೆ. ಆದರೆ 'ಅಪೆರಾ' ದಿಂದ ಸ್ವಲ್ಪ ಭಿನ್ನ. ಅಪೆರಾ ದಲ್ಲಿ ನಾಟಕಕ್ಕಿಂತ ಸಂಗೀತಕ್ಕೆ ಹೆಚ್ಚು ಗಮನ. ಇಲ್ಲಿ ನಾಟಕದ ಬೆಳವಣಿಗೆಯೇ ಗುರಿ, ಹಾಡುಗಳೇನಿದ್ದರೂ ನಟನ ಮಾತುಗಳಿಗೆ ಅಲಂಕಾರ ನೀಡುವ ಸಾಧನವಾಗಿ ಅಮುಖ್ಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತದೆ ಎಂದು ಠಾಕೂರರೇ ವ್ಯತ್ಯಾಸವನ್ನು ವಿವರಿಸಿದ್ದಾರೆ.* ಅಪೆರಾದಿಂದ ಅದು ಭಿನ್ನ ಎಂದು ಗುರುತಿಸಲು ಅವರು ಅದನ್ನು 'ಗೀತಿನಾಟ್ಯ' ಎಂದು ಕರೆಯುತ್ತಾರೆ. ನಾಟಕಕ್ಕೆ ಇನ್ನೊಂದು ಮುಖ್ಯ ಲಕ್ಷಣವೂ ಉಂಟು. ಇಲ್ಲಿ ಅವರು ಹಾಡುಗಳಿಗೆ ಹೊಸ ರಾಗಗಳ ಪ್ರಯೋಗ ವನ್ನು ಮಾಡಿದರು. ಅವರದು ಸಾರ ಸಂಗ್ರಹದ ರೀತಿ. ಅವರು ಭಾರತೀಯ ಶಾಸ್ತ್ರೀಯ ಸಂಗೀತದ ಹಲವು ಮಟ್ಟುಗಳನ್ನು ಬಳಸಿದುದಲ್ಲದೆ ತಮ್ಮ ಅಣ್ಣ ಜ್ಯೋತಿರಿಂದ್ರರು ರಚಿಸಿದ ಮಟ್ಟಗಳನ್ನು ಧಾರಾಳವಾಗಿ ಬಳಸಿಕೊಂಡರು. ಮುಯರ್ ರಚಿಸಿದ ಐರಿಷ್ ಗಾನಗಳಿಗೆ ಅವರು ವಿಶೇಷವಾಗಿ ಮನಸೋತಿದ್ದರು. ಈ ನಾಟಕದ ಒಂದು ಹಾಡಿಗೆ ಆ ಹಾಡುಗಳಲ್ಲಿ ಒಂದರ ಮಟ್ಟನ್ನು ಬಳಸಿ ಕೊಳ್ಳಲು ಹಿಂದೆಗೆಯಲಿಲ್ಲ.**

* 'ಜೀವನ ಸ್ಮೃತಿ', ವಾಲ್ಮೀಕಿ ಪ್ರತಿಭಾ

** ಅದೇ

ಇದರ ನಂತರ ಠಾಕೂರರು ರಚಿಸಿದ ನಾಟಕ 'ವಿಸರ್ಜನ್'. ಇದು ಸರಳ ರಗಳೆ ಯಲ್ಲಿತ್ತು. ಅದರ ವಸ್ತು ಕನಸಿನಲ್ಲಾದ ಒಂದು ಅನುಭವ. ಇದು ಬಂಗಾಳಿ ಸಾಹಿತ್ಯದ ಶ್ರೇಷ್ಠ ನಾಟಕಗಳಲ್ಲಿ ಒಂದು.

1883ರಲ್ಲಿ ಪ್ರಕಟವಾದ ಠಾಕೂರರ ಮೊದಲ ಕಾದಂಬರಿ 'ಬಹುಠಾಕೂರಾಣಿರ್ ಹಾತ್' ಸ್ಪಷ್ಟವಾಗಿ ಅಪಕ್ವ. ಅದರ ನಂತರದ ಕಾದಂಬರಿ 'ರಾಜರ್ಷಿ'ಯ ವಸ್ತು 'ವಿಸರ್ಜನ್' ನಾಟಕದ ವಸ್ತುವೇ. ಮುಂದೆ ಬರಲಿರುವ ಹಿರಿಮೆಯ ಸೂಚನೆ ಯಷ್ಟೆ ಇದರಲ್ಲಿ ಕಾಣುವುದು. ಇದು 1887 ರಲ್ಲಿ ಪ್ರಕಟವಾಯಿತು. ಆದರೆ 1903 ರಲ್ಲಿ ಪ್ರಕಟವಾದ 'ಚೋಖೇರ್ ಬಾಲಿ' ಯಲ್ಲಿನ ಮುನ್ನಡೆ ಅಚ್ಚರಿಗೊಳಿಸುವಂತಹದು. ಈ ಕ್ಷೇತ್ರದಲ್ಲಿ ಠಾಕೂರರು ಗಳಿಸಿದ ಪರಿಪಕ್ವತೆಯ ಸೂಚನೆಯನ್ನೆಲ್ಲ ನೀಡುವ ಸೊಗಸಾದ ಕಾದಂಬರಿ ಅದು.

'ರಾಜರ್ಷಿ' ಮತ್ತು 'ಚೋಖೇರ್ ಬಾಲಿ' ಗಳ ಪ್ರಕಟಣೆಯ ನಡುವಣ ದೀರ್ಘ ಕಾಲದಲ್ಲಿ ಠಾಕೂರರು ಸಣ್ಣ ಕಥೆಗಳಲ್ಲಿ ಪ್ರಯೋಗಗಳನ್ನು ನಡೆಸಿದರು. ಕಳೆದ ಶತಮಾನದ ಕಡೆಯ ದಶಕದಲ್ಲಿ ಅವರು ಮುಖ್ಯವಾಗಿ ಗಮನ ಕೊಟ್ಟದ್ದು ಸಣ್ಣ ಕಥೆಗೆ. ಅವರ 'ಗಲ್ಪಗುಚ್ಛ' ದಲ್ಲಿ ಸೇರಿರುವ ಹತ್ತಾರು ಕಥೆಗಳನ್ನು ರಚಿಸಿ ದರು. ಶ್ರೇಷ್ಠ ಸಣ್ಣ ಕಥೆಗಳ ಬರಹಗಾರನೆಂದು ಈ ಕಥೆಗಳು ಅವರ ಕೀರ್ತಿ ಯನ್ನು ಖಚಿತಗೊಳಿಸಿದವು.

ಹೀಗೆ, ಕಳೆದ ಶತಮಾನ ಮುಗಿಯುವ ಹೊತ್ತಿಗೆ ಠಾಕೂರರು ಕಾವ್ಯ, ನಾಟಕ, ಕಾದಂಬರಿ ಮತ್ತು ಸಣ್ಣ ಕಥೆ ಎಲ್ಲ ಮಾಧ್ಯಮಗಳಲ್ಲಿ ಸುಗಮವಾಗಿ ಸಾಹಿತ್ಯ ರಚನೆ ಮಾಡುವುದನ್ನು ಕಾಣುತ್ತೇವೆ. ಈ ಘಟ್ಟದಲ್ಲಿ ಅವರು ಬರೆಯು ವುದನ್ನು ನಿಲ್ಲಿಸಿದ್ದರೆ, ಪ್ರಪಂಚಕ್ಕೆ ನಷ್ಟವಾಗುತ್ತಿತ್ತಾದರೂ ಬಂಗಾಳೀ ಸಾಹಿತ್ಯ ಚರಿತ್ರೆಯಲ್ಲಿ ಅತ್ಯಂತ ಬಹುಮುಖ ಪ್ರತಿಭೆಯ ವ್ಯಕ್ತಿಯಾಗಿರುತ್ತಿದ್ದರು ಎಂದು ಹೇಳಿದರೆ ಸತ್ಯದಿಂದ ಬಹು ದೂರದ ಮಾತಾಗಲಾರದು.

ಹೀಗೆ, ಠಾಕೂರರು ಇಂತಹ ಅದ್ವಿತೀಯ ಗೌರವದ ಸ್ಥಾನವನ್ನು ವಿರೋಧ ವಿಲ್ಲದೆ ಏರಲಿಲ್ಲ. ಸಂಪ್ರದಾಯಪರರಾದ ಸಮಕಾಲೀನ ಬರಹಗಾರರು ಟೀಕೆಯ ಪ್ರವಾಹವನ್ನು ಹರಿಸಿದರು. ಇದು ಒಮ್ಮೊಮ್ಮೆ ಕ್ರೂರವಾಗಿಯೂ ತೀರ ನಿರ್ದಯ ವಾಗಿಯೂ ಇರುತ್ತಿತ್ತು. ಈ ಸಮರದಲ್ಲಿ ಮುಖ್ಯ ಭಾಗವಹಿಸಿದವರೆಂದರೆ ಕವಿ

ಕಾಳೀ ಪ್ರಸನ್ನ ಕಾವ್ಯ ವಿಶಾರದರು ಮತ್ತು, ತಮ್ಮ ಯೋಗ್ಯತೆಯಿಂದಲೇ ಬಂಗಾಳಿ ಸಾಹಿತ್ಯದಲ್ಲಿ ಹಿರಿಯ ಸ್ಥಾನ ಪಡೆದುಕೊಳ್ಳಬಲ್ಲ ಕವಿ ನಾಟಕಕಾರ ದ್ವಿಜೇಂದ್ರಲಾಲ್ ರಾಯ್ ಅವರು.

ಕಾಳೀ ಪ್ರಸನ್ನರು 'ಮಿಟ್ಟಿ ಕರೊ' ಎಂಬ ಪುಸ್ತಕವನ್ನು ಪ್ರಕಟಿಸಿದರು. ಅದರಲ್ಲಿ ಠಾಕೂರರ 'ಕೋರಿ–ಓ–ಕೊಮಲ್' ಸಂಗ್ರಹದ ಕವನಗಳ ಶೈಲಿಯನ್ನು ಅನುಸರಿಸಿ ಗೇಲಿ ಮಾಡಲು ಪ್ರಯತ್ನಿಸಿದರು. ದ್ವಿಜೇಂದ್ರಲಾಲರು ಒಮ್ಮೊಮ್ಮೆ ಠಾಕೂರರ ಕವನಗಳನ್ನು ಅಣಕಿಸಿ, ಒಮ್ಮೊಮ್ಮೆ ಪ್ರಬಂಧಗಳನ್ನೇ ಬರೆದು ದಾಳಿ ಮಾಡಿದರು. ಠಾಕೂರರ ಬರಹದಲ್ಲಿನ ಶಕ್ತಿಯನ್ನು ಅವರು ಗುರುತಿಸಲಿಲ್ಲ ಎಂದಲ್ಲ. ಆದರೆ ಶಕ್ತಿವಂತ ಬರಹಗಾರರು ಕಳಪೆ ಬರಹಗಾರರಿಗಿಂತ ಹೆಚ್ಚು ಕೆಡಕು ಮಾಡಬಲ್ಲರಾದುದರಿಂದ ಠಾಕೂರರು ಶಕ್ತಿವಂತ ಬರಹಗಾರರೆಂದೇ ನಿಸ್ಸಂಕೋಚ ವಾಗಿ ಅವರ ಮೇಲೆ ದಾಳಿ ಮಾಡಬೇಕೆಂದು ಅವರು ವಾದಿಸಿದರು. * ಠಾಕೂರರು ನೈತಿಕ ತತ್ವಗಳನ್ನು ನಿರ್ಲಕ್ಷಿಸುತ್ತಾರೆ, ಆದ್ದರಿಂದ ಅವರ ಬರಹ ಸಮಾಜವನ್ನು ಸುಲಭವಾಗಿ ಭ್ರಷ್ಟಾಚಾರಕ್ಕೆಳೆಯಬಹುದು ಎಂದು ಅವರ ಭಾವನೆ. ಠಾಕೂರರು ಬಂಗಾಳಿ ಭಾಷೆಯಲ್ಲಿ 'ಗೀತಾಂಜಲಿ' ಯನ್ನು ಪ್ರಕಟಿಸಿದ ಕಾಲದಲ್ಲಿ ಅವರು ತಮ್ಮ ಶಕ್ತಿಗಳ ಶಿಖರವನ್ನು ಮುಟ್ಟಿದಾಗ ದಾಳಿಯ ಕಾವು ಅತ್ಯಂತ ತೀಕ್ಷ್ಣ ವಾಯಿತು. ಇದು 'ಆನಂದ ಬಿದಯ್' ಎಂಬ ನಾಟಕದ ರೂಪತಾಳಿತು. ದ್ವಿಜೇಂದ್ರ ಲಾಲರು ಠಾಕೂರರು ಹೇಗಿದ್ದರು ಎಂದು ಭಾವಿಸಿದ್ದರೋ ಅದೇ ಅಚ್ಚಿನಲ್ಲಿ ಸಿದ್ಧವಾದವನು ಈ ನಾಟಕದ ನಾಯಕ. ಇದರ ಮುಖ್ಯ ಉದ್ದೇಶ ಠಾಕೂರ ರನ್ನು ಎಷ್ಟು ಸಾಧ್ಯವೋ ಅಷ್ಟು ಲೇವಡಿ ಮಾಡುವುದು. ತಾನು ಹೀಗೆ ಗೇಲಿ ಮಾಡಿದ ಮನುಷ್ಯನಿಗೆ ಸಾಹಿತ್ಯಕ್ಕಾಗಿ ನೊಬೆಲ್ ಬಹುಮಾನ ಬಂದದ್ದನ್ನು ನೋಡಲು ರಾಯ್ ಇನ್ನೆರಡು ವರ್ಷ ಬದುಕಿರಬೇಕಾಗಿತ್ತು ಎನ್ನಿಸುತ್ತದೆ. ದುರ ದೃಷ್ಟದಿಂದ ಈ ಬಹುಮಾನದ ಘೋಷಣೆಗೆ ಸ್ವಲ್ಪ ಮೊದಲು ರಾಯ್ ತೀರಿ ಕೊಂಡರು.

ಶ್ರೇಷ್ಠ ಬರಹಗಾರರು ತೀಕ್ಷ್ಣವಾದ ಟೀಕೆಯನ್ನು ಎದುರಿಸುವುದು ವಿರಳ ವೇನೂ ಅಲ್ಲ. ಈ ಎಲ್ಲ ಟೀಕೆಯನ್ನೂ ಠಾಕೂರರು ವಿಚಲಿತವಾಗದ ಧೈರ್ಯ ಮತ್ತು ಸಮಾಧಾನದಿಂದ ಸಹಿಸಿದರು. ಆದರೆ ನೋವನ್ನು ಅವರ ಸೂಕ್ಷ್ಮ

* ಅವರ 'ಕಾವ್ಯನೀತಿ ', ಪ್ರಬಂಧ ನೋಡಿ.

ಮನಸ್ಸು ಅನುಭವಿಸಿತು ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ವಿರೋಧ ವಾದ ಪ್ರತಿಕ್ರಿಯೆ ಏನನ್ನೂ ಅವರು ತೋರಿಸಲಿಲ್ಲ. ತನ್ನನ್ನು ಟೀಕಿಸುವವರಿಗೆ ತನ್ನ ಬರಹವನ್ನು ಅರ್ಥಮಾಡಿಕೊಂಡು ಮೆಚ್ಚುವ ಸಾಮರ್ಥ್ಯವಿಲ್ಲ ಎಂದು ತೆಗಳಲೂ ಇಲ್ಲ. ನಿರ್ಲಕ್ಷ್ಯದ ಕವಚನ್ನು ಧರಿಸಿಕೊಳ್ಳಲು ಪ್ರಯತ್ನಿಸಲೂ ಇಲ್ಲ. ಅವರ ಮೇಲೆ ಪ್ರತಿದಾಳಿಯನ್ನೂ ಮಾಡಲಿಲ್ಲ. ಅವರನ್ನು ಸಮಾಧಾನದಿಂದ ಎದುರಿಸಿದ್ದು ಮಾತ್ರವಲ್ಲ. ಅವರಿಗೆ ಶುಭವಾಗಲಿ ಎಂದು ಹಾರೈಸಿದರು. ಟೀಕೆಗೆ ಬರಹದಲ್ಲಿ ಪ್ರತಿಕ್ರಿಯೆಯನ್ನು ಅವರು ವ್ಯಕ್ತಪಡಿಸಿದ್ದು ಒಂದೇ ಬಾರಿ ಎನ್ನುವು ದಕ್ಕೆ ಸಾಕ್ಷ್ಯಾಧಾರವಿದೆ.*

ತಮ್ಮ ಕವನಗಳಲ್ಲಿ ಸತ್ಯವಿಲ್ಲವಾದರೆ ಕಾಲಕ್ರಮೇಣ ಅವನ್ನು ಜನ ಮರೆತು ಬಿಡುತ್ತಾರೆ, ಆದುದರಿಂದ ಇಂತಹ ಕಟುಟೀಕೆಗೆ ಅರ್ಥವಿಲ್ಲ ಎಂದು ಅವರು ಪದ್ಯ ದಲ್ಲಿ ವಾದಿಸಿದರು. ಕವನವು ಶುಭಾಶಯದಿಂದ ಮುಗಿಯುತ್ತದೆ.

ನಿಮ್ಮ ಕೀರ್ತಿ ವಿಸ್ತರಿಸಲಿ,
ನಿಮ್ಮ ಲೇಖನಿಗೆ ಹಿರಿಮೆ ಬರಲಿ,
ನಿಮ್ಮ ಸಾಮರ್ಥ್ಯದ ಪ್ರಭೆಯನ್ನು
ಜಗವೆಲ್ಲ ಮೆಚ್ಚಲಿ.

ಜಗತ್ತಿನ ಚರಿತ್ರೆಯಲ್ಲಿ ಇಂತಹ ಪ್ರಸಂಗ ಮತ್ತೆ ಮತ್ತೆ ಜರುಗುವುದೇಕೆ ಎನ್ನುವುದು ಪ್ರಶ್ನೆ. ಪ್ರಾಯಶಃ ಇದಕ್ಕೆ ಅತ್ಯುತ್ತಮ ಉತ್ತರ ಕೊಟ್ಟವನು ವರ್ಡ್ಸ್‌ವರ್ತ್. ಆತನೂ ಪ್ರಾರಂಭದಲ್ಲಿ ಕಹಿಯಾದ ಟೀಕೆಯನ್ನು ಎದುರಿಸಿದ ವನೇ. ಈ ವಿಷಯವನ್ನು ಚೆನ್ನಾಗಿ ಪರ್ಯಾಲೋಚಿಸಿ, ಇದು ಸಾಹಿತ್ಯ ಕ್ಷೇತ್ರ ದಲ್ಲಿ ಸಹಜವಾದ ಘಟನೆ ಎನ್ನುವ ತೀರ್ಮಾನಕ್ಕೆ ಬಂದ. ಶಕ್ತಿವಂತ ಕವಿ ಅನಿವಾರ್ಯವಾಗಿ ತನ್ನ ಕಾಲದಲ್ಲಿ ಪ್ರಚಲಿತವಾಗಲಿರುವ ಶೈಲಿಯಿಂದ ವಿಭಿನ್ನ ವಾದ ರೀತಿಯನ್ನು ಅನುಸರಿಸುತ್ತಾನೆ. ಇದು ಅಪರಿಚಿತವಾದದ್ದರಿಂದ ಓದುಗನಿಗೆ ಇದನ್ನು ಮೆಚ್ಚುವುದು ಸಾಧ್ಯವಾಗುವುದಿಲ್ಲ. ಪೂರ್ವಗ್ರಹವನ್ನು ಬೆಳೆಸಿ, ಓದುಗ ನನ್ನು ವಿರೋಧಿ ವಿಮರ್ಶಕನನ್ನಾಗಿ ತಿರುಗಿಸಿಬಿಡುವುದು ಈ ಹೊಸತನವೇ! ಆತ ಲೇಡಿ ಬೂಮಾಂಟ್‌ಳಿಗೆ ಬರೆದ ಕಾಗದದಲ್ಲಿ ಹೀಗೆನ್ನುತ್ತಾನೆ : "ಒಂದು

* ಮನಾಷಿ, 'ನಿಂದುಕೇರ್ ಪ್ರತಿ'

ಮಾತನ್ನು ಮರೆಯಬೇಡಿ, ಅದನ್ನು ಕೋಲ್‌ರಿಜ್ ನಿಮಗೆ ಹೇಳಿದ ಎಂದು ನನ್ನ ನಂಬಿಕೆ, ಪ್ರತಿಯೊಬ್ಬ ಶ್ರೇಷ್ಠ ಮತ್ತು ಸೋಪಜ್ಞ ಬರಹಗಾರನೂ ತನ್ನನ್ನು ಮೆಚ್ಚಬಲ್ಲ ಅಭಿರುಚಿಯನ್ನೂ ತಾನೇ ಸೃಷ್ಟಿಸಬೇಕು". ಆತನ "ಲಿರಿಕಲ್ ಬ್ಯಾಲಡ್ಸ್"ನ 'ಎಸ್ಸೆ ಸಪ್ಲಿಮೆಂಟರಿ ಟು ದಿ ಪ್ರಿಫೆಸ್ ಟು ಸೆಕೆಂಡ್ ಎಡಿಷನ್' ನಲ್ಲೂ ಇದೇ ಅಭಿಪ್ರಾಯವನ್ನು ಬರೆದಿಟ್ಟಿದ್ದಾನೆ. ಕೋಲ್‌ರಿಜ್‌ನೂ ಈ ಅಭಿಪ್ರಾಯವನ್ನು ಒಪ್ಪಿದ್ದನೆಂದು ಮೇಲೆ ಹೇಳಿದ ಮಾತು ಸೂಚಿಸುತ್ತದೆ.

ಅವನಿಗಿಂತ ಮೊದಲು ಬರೆಯುತ್ತಿದ್ದ ಡ್ರೈಡನ್ ಮತ್ತು ಪೋಪ್‌ರ ಶೈಲಿಯ ಕೃತಕತೆ ಮತ್ತು ಆಡಂಬರಕ್ಕೆ ಹೊಂದಿಕೊಂಡ ಓದುಗರು ವರ್ಡ್ಸ್‌ವರ್ತನನ್ನು ಸಹಾನುಭೂತಿಯಿಂದ ಸ್ವಾಗತಿಸಲು ಸಿದ್ಧವಿರಲಿಲ್ಲ. ಆತ ಸಹಜವಾಗಿ ಟೀಕೆಯನ್ನು ಎದುರಿಸಬೇಕಾಯಿತು. ಅವನ ಶೈಲಿಗೆ ಅವರು ಹೊಂದಿಕೊಂಡ ನಂತರವೇ ಅವನ ಸಹಜತೆ ಮತ್ತು ಭಾಷೆಯ ಸರಳತೆಗಳನ್ನು ಸ್ವಾಗತಾರ್ಹವಾದ ಬದಲಾವಣೆ ಎಂದು ಅವರು ಮೆಚ್ಚಿಕೊಂಡದ್ದು ಮತ್ತು 'ಚಮತ್ಕಾರದ ಬರಹ'ದ ಪ್ರಚಲಿತ ದಬ್ಬಾಳಿಕೆ ಎಂದು ಸರಿಯಾಗಿಯೇ ವರ್ಣಿಸಿರುವ ಹಿಂದಿನ ಸಂಪ್ರದಾಯದಿಂದ ವರ್ಡ್ಸ್‌ವರ್ತ ಇಂಗ್ಲೀಷ್ ಕಾವ್ಯವನ್ನು ಮುಕ್ತಗೊಳಿಸಿದನೆಂದು ಗುರುತಿಸಿದ್ದು.

ಈ ಅಭಿಪ್ರಾಯ ಠಾಕೂರರ ಅನುಭವಕ್ಕೂ ಇಷ್ಟೇ ಚೆನ್ನಾಗಿ ಅನ್ವಯಿಸುತ್ತದೆ. ಈ ವಿಷಯವನ್ನು ಕೆಲವೇ ನಿದರ್ಶನಗಳಿಂದ ಸ್ಪಷ್ಟಪಡಿಸಬಹುದು. ಅವರ ಪ್ರಮುಖ ಟೀಕೆಕಾರರಿಬ್ಬರ ವಿರೋಧಕ್ಕೆ ಬೇರೆ ಬೇರೆ ಕಾರಣಗಳಿದ್ದವು ಎಂದು ಕಾಣುತ್ತದೆ. ಕಾಳೀ ಪ್ರಸನ್ನ ಕಾವ್ಯವಿಶಾರದರು ಅವರ ಶೈಲಿಯನ್ನು ಟೀಕಿಸಿದರು. ದ್ವಿಜೇಂದ್ರಲಾಲರ ಅಭಿಪ್ರಾಯದಲ್ಲಿ ಠಾಕೂರರ ಬರಹಗಳು ನೈತಿಕ ಸಂಪ್ರದಾಯಗಳಿಗೆ ಅನುಗುಣವಾಗಿರಲಿಲ್ಲ. ಆದುದರಿಂದ ಅವರು ಅವುಗಳ ವಸ್ತುವನ್ನು ಟೀಕೆ ಮಾಡಿದರು. ಇಬ್ಬರ ವಿರೋಧಕ್ಕೂ ಮೂಲ ಕಾರಣ ಠಾಕೂರರ ಮನೋಧರ್ಮ ತೀರ ಹೊಸದಾಗಿತ್ತು ಎನ್ನುವುದೇ.

ಆಗಲೇ ಹೇಳಿರುವಂತೆ ಠಾಕೂರರ ಶೈಲಿಯು ಹಿಂದಿನ ಸಂಪ್ರದಾಯದಿಂದ ದೂರ ಸರಿಯಿತು, ವೈಷ್ಣವ ಕವಿಗಳ ರಚನೆಗಳಲ್ಲಿ ಬಂಗಾಳೀ ಕಾವ್ಯವು ಉನ್ನತ ಮಟ್ಟಕ್ಕೆ ಏರಿದರೂ ಕ್ರಮೇಣ ಅವನತಿ ಪ್ರಾರಂಭವಾಯಿತು. ವೈಭವದ ಮೊದಲ

ಅಧ್ಯಾಯ ಮುಗಿದನಂತರ ಬಂಗಾಳೀ ಕವಿಗಳು ಭಕ್ತಿ ಮಹಾಕಾವ್ಯಗಳನ್ನು ಬರೆಯುವುದರಲ್ಲೇ ನೈಪುಣ್ಯ ಗಳಿಸಲು ಪ್ರಾರಂಭಿಸಿದರು ಮತ್ತು ಔಪಚಾರಿಕವೂ ಗಡುಸೂ ಆದ ಶೈಲಿಯನ್ನು ಬಳಸಿದರು. ಹತ್ತೊಂಬತ್ತನೆಯ ಶತಮಾನದಲ್ಲಿ ಈಶ್ವರ ಚಂದ್ರಗುಪ್ತರು ಭಾವಗೀತೆಗಳಿಗೆ ಹೊಸ ಚೈತನ್ಯವನ್ನು ನೀಡಿದರೆಂಬುದು ನಿಜ. ಪಾಶ್ಚಾತ್ಯ ಪ್ರಭಾವದಿಂದ ಸಂಪೂರ್ಣವಾಗಿ ಮುಕ್ತರಾಗಿದ್ದ ಕಟ್ಟಕಡೆಯ ಬಂಗಾಳೀ ಕವಿ ಅವರು. ಆದರೆ ತಮ್ಮ ಕಾಲದ ಸಂಪ್ರದಾಯವನ್ನನುಸರಿಸಿ ಅವರು ಹಿಂದಿನ ಶೈಲಿಯನ್ನೇ ಬಳಸಿದರು. ಅದರ ದೋಷಗಳನ್ನು ಇನ್ನೂ ಹೆಚ್ಚಿಸಿದರು. ವಸ್ತು ಅಮುಖ್ಯವಾಗಿತ್ತೆನ್ನುವುದು ಪ್ರಧಾನವಲ್ಲ. ಆದರೆ ಶ್ಲೇಷೆ ಮತ್ತು ಆದ್ಯಕ್ಷರ ಪ್ರಾಸಗಳು ಮುಖ್ಯ ಉಪಾಯಗಳಾಗಿದ್ದ ಕೀರ ಕೃತಕ ಶೈಲಿಯತ್ತ ಅವರು ಒಲಿದದ್ದು ವಿಷಾದಕರ. ಇಂಗ್ಲೀಷ್ ಕಾವ್ಯದಲ್ಲಿ ಚಮತ್ಕಾರದ ಬರಹ ಎಂದು ಕರೆಯುವ ಮಾದರಿಯ ಸಾಹಿತ್ಯಕ್ಕೆ ಇದನ್ನು ಹೋಲಿಸಬಹುದು.

ಮೈಕೆಲ್ ಮಧುಸೂಧನದತ್ತರ ಪ್ರತಿಭೆಯು ಪಶ್ಚಿಮದಿಂದ ಎರವಲು ತಂದ ಕೆಲವು ಅಂಶಗಳನ್ನು ಬಂಗಾಳೀ ಕಾವ್ಯಕ್ಕೆ ಸೇರಿಸಿತು. ಹಿಂದಿನ ಮಹಾಕಾವ್ಯಗಳಿಂದ ಆಯ್ದ ವಸ್ತುಗಳಲ್ಲಿ ಅವರಿಗಿರುವ ಪಕ್ಷಪಾತ ಅವರು ಮಾದರಿಯಾಗಿ ಸ್ವೀಕರಿಸಿದ ಮಿಲ್ಟನಿನಲ್ಲಿ ಅವರ ಒಲವನ್ನು ತೋರಿಸುತ್ತದೆ. ಬಂಗಾಳೀ ಸಾಹಿತ್ಯದಲ್ಲಿ ಅವರು ಸುನೀತವನ್ನು ಪ್ರಾರಂಭಿಸಿದರು. ಪಶ್ಚಿಮದಿಂದ ಪಡೆದುಕೊಂಡ ಸರಳ ರಗಳೆಯಲ್ಲಿ ಬಂಗಾಳೀ ಸಾಹಿತ್ಯಕ್ಕೆ ಹೊಸ ಗಾಂಭೀರ್ಯವನ್ನು ತಂದುಕೊಡುವಂತಹ ಶೈಲಿಯನ್ನು ಅವರ ಶಕ್ತಿವಂತ ಲೇಖನಿ ರೂಪಿಸಿತು. ಇದೆಲ್ಲ ಅಪೇಕ್ಷಣೀಯವಾಗಿತ್ತು ಎನ್ನುವುದರಲ್ಲಿಸಂಶಯವಿಲ್ಲ. ಆದರೆ ಇದು ಮನರಂಜನೆಯಷ್ಟೇ ಆಗಿತ್ತು. ಪ್ರಾರಂಭದಲ್ಲಿ ಅದರ ನಾವೀನ್ಯದಿಂದ ಓದುಗನಿಗೆ ಖುಷಿಯಾದರೂ ಕ್ರಮೇಣ ಆ ಆಕರ್ಷಣೆ ಮಾಯವಾಯಿತು. ವೈಷ್ಣವ ಕವಿಗಳ ಹಳೆಯ ಭಾವಗೀತೆಗಳ ಸರಳತೆ ಮತ್ತು ಸೊಗಸು ಸಂಪೂರ್ಣವಾಗಿ ಮಾಯವಾಗಿದ್ದವು.

ಠಾಕೂರರು ಕಾಣಿಸಿಕೊಂಡಿದ್ದು ಈ ಹಿನ್ನೆಲೆಯಲ್ಲಿ. ಅವರ ಶೈಲಿಯ ಸರಳತೆ ಹಿಂದಿನ ರೂಢಿಗಿಂತ ಭಿನ್ನವಾಗಿತ್ತು. ಆದರೆ ಹೊಚ್ಚ ಹೊಸದಾಗಿ ಕಂಡದ್ದು ಚೇತನರಹಿತ ವಸ್ತುಗಳಿಗೆ ಮತ್ತು ಅಮೂರ್ತ ವಿಚಾರಗಳಿಗೆ ಸಹ ಮಾನವೀಯ ಗುಣಗಳನ್ನು ಆರೋಪಿಸುವ ಅವರ ರೀತಿ. ಕಾಳೀ ಪ್ರಸನ್ನ ಕಾವ್ಯ ವಿಶಾರದರಿಗೆ ಸಹಿಸಲು ಸಾಧ್ಯವಾಗದ ಅಂಶ ಇದೇ. ಒಂದು ಉದಾಹರಣೆಯು ನಮ್ಮ ಮಾತನ್ನು ಸಮರ್ಥಿಸುವುದು

ಠಾಕೂರರ 'ಕೋರಿ–ಓ–ಕೋಮಲ್' ಪುಸ್ತಕದಲ್ಲಿರುವ 'ಜೋಗಿಯು' ಕವನದ ವಸ್ತು ಕವಿಯು ಹೊಂಬಿಸಿಲಿದ್ದ ಒಂದು ಬೆಳಗಿನಲ್ಲಿ ಅನುಭವಿಸಿದ ರೋಮಾಂಚನ. ಈ ಭಾವಕ್ಕೆ ಅಭಿವ್ಯಕ್ತಿ ಕೊಡುವಾಗ ಅವರು ರೋಮಾಂಚನವು ಮರದಿಂದ ಮರಕ್ಕೆ ನರ್ತಿಸಿತು ಎಂದು ಹೇಳಿದರು. ಅವರ ಅರ್ಥ ಸ್ಪಷ್ಟವಾಗಿದೆ. ತಮ್ಮ ಹೃದಯದಲ್ಲಿ ಅನುಭವಿಸಿದ ರೋಮಾಂಚನವು ಗಿಡಗಳ ಎಲೆಗಳ ಮೇಲೆ ಆಡುತ್ತಿದ್ದ ಸೂರ್ಯನ ಕಿರಣಗಳ ಚೆಲುವಿನಲ್ಲಿ ಮೂರ್ತರೂಪ ಪಡೆಯಿತು ಎಂದು ಅದರ ಅರ್ಥ. ಈ ಕಲ್ಪನೆಯೇ ಕಾವ್ಯ ವಿಶಾರದರಿಗೆ ತೀರ ಅಪರಿಚಿತವಾಗಿತ್ತು ಮತ್ತು ಅವರು ಅದು ಅನುಬದ್ಧವೆಂದು ಹಾಸ್ಯ ಮಾಡಿದರು.

ದ್ವಿಜೇಂದ್ರಲಾಲ್ ರಾಯರ ಅಭಿಪ್ರಾಯದಲ್ಲಿ ಠಾಕೂರರ ಪದ್ಯಗಳಲ್ಲಿ ಇಂದ್ರಿಯಾಕರ್ಷಣೆ ಇದೆ ಮತ್ತು ಅನೀತಿಯುತ ಪ್ರಣಯಕ್ಕೆ ಪ್ರಚೋದನೆ ನೀಡುತ್ತದೆ.

ಉದಾಹರಣೆಗೆ, 1892 ರಲ್ಲಿ ಪ್ರಕಟವಾದ ಠಾಕೂರರ ಸರಳರ ಗಳೆಯ ನಾಟಕ 'ಚಿತ್ರಾಂಗದ' ಅವರ ಕಟುಟೀಕೆಗೆ ತುತ್ತಾಯಿತು. ಈ ನಾಟಕಕ್ಕೆ ಆಧಾರ ಮಹಾಭಾರತದ ವೀರ ಅರ್ಜುನ ಮತ್ತು ಮಣಿಪುರದ ರಾಜಕುಮಾರಿ ಚಿತ್ರಾಂಗದ ಇವರ ಪ್ರಣಯದ ಕತೆ. ಇದು ಒಂದು ಹೊಸ ವಿಚಾರವನ್ನು ತುಂಬ ನಾಟಕೀಯ ವಾದ ರೀತಿಯಲ್ಲಿ ರೂಪಿಸುತ್ತದೆ. ಚಿತ್ರಾಂಗದೆ ನೋಡಲು ಚೆಲುವಿಲ್ಲದ ರಾಜಕುಮಾರಿ. ಅವಳ ಪೌರುಷದಿಂದ ಪ್ರಜೆಗಳಿಗೆ ರಕ್ಷಣೆ ದೊರತಿದೆ. ತಾಯಿ ಯಂತೆ ತನ್ನ ಪ್ರೀತಿಯಿಂದ ಅವರನ್ನು ಆವರಿಸಿಬಿಟ್ಟಿದ್ದಾಳೆ. ಆಕೆಯೆಂದರೆ ಪ್ರಜೆಗಳಿಗೆ ತುಂಬ ಪ್ರೀತಿ. ಆದರೆ ಅರ್ಜುನನ್ನು ಅವಳನ್ನು ನಿರಾಕರಿಸಿದ.

ಇದು ತನ್ನ ಸ್ತ್ರೀತ್ವಕ್ಕೆ ಅಪಮಾನ ಎಂದು ಭಾವಿಸಿದ ಚಿತ್ರಾಂಗದ ಪ್ರೇಮದ ದೇವತೆ,ಮದನನಿಂದ ಲಾವಣ್ಯವನ್ನು ಎರವಲುಪಡೆದು ಮತ್ತೆ ಅರ್ಜುನನ ಮುಂದೆ ಕಾಣಿಸಿಕೊಂಡಳು. ಈ ಬಾರಿ ಅವನು ಸುಲಭವಾಗಿ ಅವಳ ಆಕರ್ಷಣೆಯ ಬಲೆಗೆ ಸಿಕ್ಕುಬಿದ್ದ. ಆದರೆ ಸ್ವಲ್ಪಕಾಲದಲ್ಲೆ ತಣಿದು ಬೇಸರಪಟ್ಟ. ಅಸಾಧಾರಣ ದೈಹಿಕ ಲಾವಣ್ಯ ಪಡೆದ ಚಿತ್ರಾಂಗದ, ನೋಡಲು ರೂಪಸಿಯಲ್ಲದಿದ್ದರೂ ಅಸಾಧಾರಣ ನೈತಿಕ ಗುಣಗಳನ್ನು ಪಡೆದ ಚಿತ್ರಾಂಗದ, ಇವರಿಬ್ಬರಲ್ಲಿ ಎರಡ ನೆಯವಳೇ ತನಗಿರಲೆಂದು ಕಡೆಗೆ ನಿರ್ಧರಿಸಿದ.

ಠಾಕೂರರು ಮನದಟ್ಟು ಮಾಡಲು ಬಯಸಿದ ಅಂಶ, ದೇಹದ ಸೌಂದರ್ಯ ದಿಂದ ಮೂಡಿದ ಪ್ರೇಮ ಬೇಗನೆ ಸವೆಯುತ್ತದೆ, ನೈತಿಕ ಗುಣಗಳಿಂದ ಮೂಡಿದುದು ಉಳಿಯುತ್ತದೆ ಎಂದು ಇದಕ್ಕೆ ಆಕ್ಷೇಪಿಸುವುದೇ ಸಾಧ್ಯವಿಲ್ಲ ಎಂದು ಕಾಣುತ್ತದೆ. ಆದರೆ ಕಥೆಯ ಪೊರಪ್ಯೆಯ ನೈತಿಕ ಸ್ವರೂಪವೇ ದ್ವಿಜೇಂದ್ರಲಾಲರ ಮನಸ್ಸನ್ನು ತುಂಬಿಬಿಟ್ಟಿದುದ್ದರಿಂದ ಕಥೆಯ ಈ ಮುಖ ಅವರ ಕಣ್ಣಿಗೆ ಕಾಣಲೇ ಇಲ್ಲ. ಅರ್ಜುನ ಚಿತ್ರಾಂಗದ ಇವರ ಪ್ರಣಯಕ್ಕೆ ಸಮಾಜದ ನೈತಿಕ ಒಪ್ಪಿಗೆ ಇಲ್ಲ. ಆದುದರಿಂದ ಅದು ಅಸಹ್ಯ ಎಂದು ಅದನ್ನು ಗ್ರಹಿಸಲಿಲ್ಲ. ಆದರೆ ಈ ಕಾರಣ ದಿಂದ ಅವರನೈತಿಕ ಆಗ್ರಹ ಎಷ್ಟು ತೀವ್ರವಾಗಿತ್ತೆಂದರೆ ಪುಸ್ತಕವನ್ನು ಸುಟ್ಟುಹಾಕ ಬೇಕು ಎಂದು ಅವರು ಸಲಹೆ ಮಾಡಿದರು.*

ಸಾಹಿತ್ಯ ಕೃತಿ ಏನೇ ಆಗಲಿ ಅದು ಕಲೆಯ ಕೃತಿ. ಆದರೆ ಇಂತಹ ವಿಮರ್ಶಕರು ಅದನ್ನು ಸಂಕುಚಿತ ದೃಷ್ಟಿಯಿಂದ ಕಾಣುವುದರಿಂದಲೇ ಇಷ್ಟೆಲ್ಲ ತೊಂದರೆ. ಒಂದು ಕಲಾಕೃತಿಗೆ ವ್ಯಾಪಕ ದೃಷ್ಟಿಯಿಂದ ಬೆಲೆಕಟ್ಟಬೇಕು ಎನ್ನುವುದನ್ನು ಅವರು ಮರೆಯುತ್ತಾರೆ. ಪುಸ್ತಕವು ಓದುಗನ ಸೌಂದರ್ಯಭಾವಕ್ಕೆ ಸುಂದರ ಸೃಷ್ಟಿ ಎಂದು ಕಾಣುತ್ತದೆಯೇ ಹಾಗಾದರೆ, ಸಾಂಪ್ರದಾಯಿಕ ನೈತಿಕ ನಿಯಮಗಳನ್ನು ಸಣ್ಣ ಪುಟ್ಟ ರೀತಿಗಳಲ್ಲಿ ಉಲ್ಲಂಘಿಸಿದ್ದರೂ ಅದರ ಒಟ್ಟು ಪರಿಣಾಮ ಒಳ್ಳೆಯದೇ ಆಗುತ್ತದೆ. ಏಕೆಂದರೆ ಸುಂದರವಾದದು ಒಳ್ಳೆಯದರ ಹಿತವನ್ನೇ ಪುರಸ್ಕರಿ ಸುತ್ತದೆ.

---

* '1316 ಬಂಗ್ಲಾ ಸಂವತ್ಸರ' ಸಾಹಿತ್ಯ'ದ ಸಂಚಿಕೆಯಲ್ಲಿ ಪ್ರಕಟವಾದ ವಿಮರ್ಶೆ

ಅಧ್ಯಾಯ ೬

ಮದುವೆ ಮತ್ತು ಕುಟುಂಬ ಜೀವನ

ಠಾಕೂರರು ಭವತಾರಿಣೀ ದೇವಿಯನ್ನು 1883 ರ ಡಿಸೆಂಬರ್ 9 ರಂದು ಮದುವೆಯಾದರು. ಈ ತುಂಬಾ ಸುಸಂಸ್ಕೃತ ಕುಟುಂಬದ ಅಭಿರುಚಿಗೆ ಒಪ್ಪುವಂತೆ ಆಕೆಗೆ ಮೃಣಾಲಿನಿದೇವಿ ಎಂಬ ಹೊಸ ಹೆಸರನ್ನು ಕೊಡಲಾಯಿತು. ಮದುವೆಯಾದ ಸ್ವಲ್ಪ ಕಾಲದಲ್ಲೇ ನವವಧೂವರರಲ್ಲಿ ಗಾಢವಾದ ದಾಂಪತ್ಯ ಪ್ರೇಮ ಬೆಳೆಯಿತೆನ್ನುವುದಕ್ಕೆ ನೆಚ್ಚಬಹುದಾದ ಸಾಕ್ಷ್ಯವಿದೆ.

1890 ರ ಕಡೆಯ ಭಾಗದಲ್ಲಿ ರವೀಂದ್ರನಾಥರು ಇಂಗ್ಲೆಂಡಿಗೆ ಎರಡನೆಯ ಬಾರಿ ಹೋದರು. ಅವರ ಗೆಳೆಯ ಲೋಕೇಂದ್ರನಾಥರು, ಅಣ್ಣ ಸತ್ಯೇಂದ್ರನಾಥರು ಇಂಗ್ಲೆಂಡಿಗೆ ಭೇಟಿಕೊಡಲು ದೀರ್ಘಕಾಲದ ರಜೆಯನ್ನು ತೆಗೆದುಕೊಂಡದ್ದು ರವೀಂದ್ರರ ಭೇಟಿಗೆ ಪ್ರೋತ್ಸಾಹ ನೀಡಿತು, ಮೂವರು ಒಟ್ಟಿಗೆ ಹೋದರು ಮತ್ತು ಲಂಡನ್ನಿನಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಒಟ್ಟಿಗೆ ಇದ್ದರು. ಮೃಣಾಲಿನಿದೇವಿ ಗಂಡನೊಡನೆ ಹೋಗಲಿಲ್ಲ. ಆಗಲೇ ಇಬ್ಬರು ಮಕ್ಕಳಾಗಿದ್ದು ಆಕೆ ಮೂರನೆಯದರ ಗರ್ಭಿಣಿಯಾಗಿದ್ದದ್ದು ಇದಕ್ಕೆ ಕಾರಣವಿರಬಹುದು.

ಆದ್ದರಿಂದ ಇದು ಸಂಸಾರವನ್ನು ಹಿಂದೆ ಬಿಟ್ಟ ಪ್ರವಾಸವಾಯಿತು. ಕವಿಯು

ಹೆಂಡತಿಯನ್ನು ಸಾಕಷ್ಟು ದೀರ್ಘಕಾಲ ಅಗಲಿರಬೇಕಾಯಿತು. ಸಹಜವಾಗಿ ಈ ಪ್ರವಾಸದ ಕಾಲದಲ್ಲಿ ತಮ್ಮ ಪ್ರೀತಿಯ ಹೆಂಡತಿಗೆ ಕಾಗದಗಳನ್ನು ಬರೆದರು. ಪತ್ನಿಯ ನಿರ್ಧಾರಕ್ಕೆ ಅನುಗಣವಾಗಿಯೇ ಇರಬೇಕು, ಈ ಕಾಗದಗಳನ್ನು ಸುರಕ್ಷಿತ ವಾಗಿ ಇಡಲಾಗಿದೆ. ಆಕೆಸಕಾರಣವಾಗಿಯೇ ಇವು ಒಂದು ನಿಧಿ ಎಂದು ಭಾವಿಸಿದ್ದರು. ಯಾವುದೇ ಸೂಕ್ಷ್ಮ ಮನಸ್ಸಿನ ಓದುಗನ ಹೃದಯವನ್ನು ಮೆಚ್ಚುವಂತಹ ರೀತಿಯ ಧಾಟಿಯಲ್ಲಿ ಕಾಗದಗಳನ್ನು ಬರೆದಿದ್ದಾರೆ. ಮೃಣಾಲಿನಿ ದೇವಿಯನ್ನು ಸಂಬೋಧಿ ಸುವ ರೀತಿಯೇ ಅವರಿಬ್ಬರ ಪ್ರೀತಿಗೆ ಸಮರ್ಥ ಸಾಕ್ಷ್ಯವಾಗುತ್ತದೆ. ಆದ್ದರಿಂದ ಕಾಗದಗಳಲ್ಲಿ ಏನು ಬರೆದಿದ್ದಾರೆ ಎಂಬುದನ್ನು ನಾವು ಪರಿಗಣಿಸಬೇಕಾಗಿಲ್ಲ.

ಮೃಣಾಲಿನಿದೇವಿಯು ಸಂಸಾರದಲ್ಲಿ ಕಡೆಯ ಮಗನ ಹೆಂಡತಿಯಾದದ್ದ ರಿಂದ ಸಂಪ್ರದಾಯಕ್ಕನುಗುಣವಾಗಿ ಆಕೆಯನ್ನು ಛೋಟೊಬಹು (ಕಿರಿಯ ಸೊಸೆ) ಎಂದು ಎಲ್ಲರೂ ಕರೆಯುತ್ತಿದ್ದರು. ಠಾಕೂರರು ತಮ್ಮ ಪತ್ರಗಳಲ್ಲಿ ಆಕೆಯನ್ನು ಹೀಗೆಯೇ ಸಂಬೋಧಿಸುತ್ತಿದ್ದರು. ಈ ಶಬ್ದದ ಹಿಂದೆ ಭಾಯ್ ಎಂಬ ಶಬ್ದವನ್ನು ಸೇರಿಸುತ್ತಿದ್ದರು. ಆದ್ದರಿಂದ ಸಮಾನ್ಯವಾಗಿ "ಭಾಯ್ ಛೋಟೋಬಹು" ಎಂದೇ ಕರೆಯುತ್ತಿದ್ದರು. ಯಾರಾದರೂ ತುಂಬ ಪ್ರೀತಿಪಾತ್ರರಾದರೆ ಭಾಯ್ ಎಂದು ಕರೆಯುವುದು ಬಂಗಾಳಿಯಲ್ಲಿ ವಾಡಿಕೆ. ಅನಂತರ ಕವಿಯ ಪ್ರೇಮಪೂರಿತ ಮನಸ್ಸು ಸಣ್ಣ ಮಾರ್ಪಡನ್ನು ಮಾಡಿತು. "ಛೋಟೋಬಹು" ಎನ್ನುವುದನ್ನು 'ಛುಟಿ' ಎಂದು ಹ್ರಸ್ವಗೊಳಿಸಿದರು, 'ಛುಟಿ' ಎಂದರೆ ರಜೆ. ಇದರಿಂದ 'ಭಾಯ್ ಛುಟಿ' ಎನ್ನುವುದು ಆಕೆಯ ಗಂಡನಿಗೆ ರಜೆಯ ಸಾಕಾರಮೂರ್ತಿ, ನಿತ್ಯ ಜೀವನದ ಎಲ್ಲ ಕೋಟಲೆಗಳಿಂದ ಬಿಡುಗಡೆ ಎನ್ನುವುದನ್ನು ಸೂಚಿಸುತ್ತದೆ.

ಇಂಗ್ಲೆಂಡಿಗೆ ಎರಡನೆಯ ಭೇಟಿಯು ಯಾವ ರೀತಿಯಲ್ಲೂ ಸಮಾಧಾನ ಕೊಡಲಿಲ್ಲ. ಅವರ ಸಂಗಾತಿಗಳಿಗೆ ರಜವಿದ್ದಷ್ಟು ಕಾಲವೂ ಅಲ್ಲಿ ಉಳಿಯಬೇಕೆಂಬ ಕಾರ್ಯಕ್ರಮವಿದ್ದರೂ ಠಾಕೂರರಿಗೆ ಅಷ್ಟನ್ನೂ ಸಹಿಸುವ ತಾಳ್ಮೆ ಇರಲಿಲ್ಲ. ಉದ್ದೇಶಪೂರ್ವಕವಾಗಿ ಅದನ್ನು ಮೊಟಕುಗೊಳಿಸಿ ತಾವೊಬ್ಬರೇ ಇಂಗ್ಲೆಂಡಿನಿಂದ ಹೊರಟರು. ಅವರು ಬರೆಯುತ್ತಿದ್ದ ದಿನಚರಿಯಿಂದ ಭಾರತವನ್ನು ಆಗಸ್ಟ್ ತಿಂಗಳಿನಲ್ಲಿ ಬಿಟ್ಟು ಪ್ಯಾರಿಸ್ ಮೂಲಕ ಪ್ರಯಾಣಮಾಡಿ ಲಂಡನ್ ಅನ್ನು 1890 ರ ಸೆಪ್ಟೆಂಬರ್ 10 ರಂದು ತಲುಪಿದಂತೆ ಕಾಣುತ್ತದೆ. ತಮ್ಮ ಒಂಟಿ ಪ್ರಯಾಣಕ್ಕಾಗಿ 1890 ರ ಅಕ್ಟೋಬರ್ 9 ರಂದು ಟಿಲ್‌ಬರಿ ರೇವಿನಲ್ಲಿ ಹಡಗನ್ನು ಹತ್ತಿದರು.

ತಾವು ಉದ್ದೇಶಿಸಿದ್ದಕ್ಕಿಂತ ಮೊದಲೇ ಹಿಂತಿರುಗುವ ನಿರ್ಧಾರಕ್ಕೆ ಅವರು ಕೊಟ್ಟ ಕಾರಣ ಲಂಡನ್ನಿನ ಜೀವನ ತಮಗೆ ಬೇಸರವಾಯಿತೆಂದು. ಶಿಷ್ಟಾಚಾರಗಳ ವಿನಿಮಯ, ಪ್ರಸಿದ್ಧ ಸ್ಥಳಗಳನ್ನು ನೋಡಲು ಹೋಗುವುದು, ಸಾಮಾನನ್ನು ಕೊಳ್ಳುವುದು ಮತ್ತು ನಾಟಕ ಪ್ರದರ್ಶನಗಳನ್ನು ನೋಡುವುದು ಇಂತಹ ಮಾಮೂಲು ಕಾರ್ಯಕ್ರಮಗಳಿಂದ ಅವರಿಗೆ ತೃಪ್ತಿಯಾಗಲಿಲ್ಲ.* ಇನ್ನೊಂದು ಕಾರಣವೂ ಇದ್ದಿತು ಎನ್ನುವುದು ಸ್ಪಷ್ಟ. ತಮ್ಮ ಹೆಂಡತಿ ಮಕ್ಕಳಿಂದ ದೂರ ವಾದದ್ದು ಅವರ ಹೃದಯವನ್ನು ಕಾಡುವ ನೋವಾಯಿತು. ಇಂಗ್ಲೆಂಡಿಗೆ ಹೋಗುವ ದಾರಿಯಲ್ಲಿ ಏಡನ್‌ನಲ್ಲಿ ತಮ್ಮ ಹೆಂಡತಿಗೆ ಬರೆದ ಕಾಗದದಲ್ಲಿ ತಾವು ಕಂಡ ಒಂದು ಕನಸನ್ನು ವರ್ಣಿಸಿದ್ದಾರೆ. ತಮ್ಮ ಹೆಂಡತಿ ಮತ್ತು ಮಕ್ಕಳು ಮಲಗಿದ್ದ ಹಾಸಿಗೆಯು ತಮ್ಮನ್ನು ಕೊಂಡೊಯ್ದಂತೆ ಕನಸು ಕಂಡರು. ಈ ಕನಸನ್ನು ವರ್ಣಿಸು ವಾಗ ಅವರು ತಮ್ಮ ಬಳಿ ಇಲ್ಲದಿರುವುದರಿಂದ ತೀಕ್ಷ್ಣವಾಗಿ ನೋವಾಗುತ್ತದೆ ಮತ್ತು ಅವರ ಬಳಿಗೆ ಹಿಂದಿರುಗುವ ಹಂಬಲ ತಮ್ಮ ಮನಸ್ಸನ್ನು ಅಸ್ವಸ್ಥಗೊಳಿಸಿದೆ ಎಂದು ಒಪ್ಪಿಕೊಳ್ಳುತ್ತಾರೆ.

ತಮ್ಮ ಪೂರ್ವಿಕರ ಮನೆಯಲ್ಲಿ ಎರಡನೆಯ ಅಂತಸ್ತಿನಲ್ಲಿ ದೊಡ್ಡ ಅಂಗಳದ ಪಶ್ಚಿಮ ಭಾಗದಲ್ಲಿ ಒಂದಕ್ಕೊಂದು ಹೊಂದಿಕೊಂಡಿದ್ದ ಕೊಠಡಿಗಳ ಘಟಕ ವೆಂದರೆ ಠಾಕೂರರಿಗೆ ತುಂಬ ಇಷ್ಟ. ಅದರ ಪೂರ್ವ ಮತ್ತು ಪಶ್ಚಿಮ ಎರಡು ಬದಿಗಳಲ್ಲೂ ಖಾಲಿ ಸ್ಥಳವಿದ್ದು ದಕ್ಷಿಣದಲ್ಲಿ ವಿಶಾಲವಾದ ಛಾವಣಿಯಿತ್ತು. ಆ ಮನೆಯಲ್ಲಿದ್ದ ಅಂತಹ ಘಟಕಗಳಲ್ಲೆಲ್ಲಾ ಅದೇ ಅತ್ಯುತ್ತಮವಾದದ್ದು. ಮಹರ್ಷಿ ಗಳಿಗೆ ಆ ಘಟಕಗಳ ಒಲವು. ಮಹರ್ಷಿಗಳು ತಮ್ಮ ಪೂರ್ವಿಕರ ಮನೆಯಲ್ಲಿ ವಾಸಿಸುವುದನ್ನು ಸಂಪೂರ್ಣವಾಗಿ ಬಿಟ್ಟಮೇಲೆ ಅವರ ಮಗ ಜ್ಯೋತಿರೀಂದ್ರನು ತನ್ನ ಪ್ರತಿಭಾವಂತ ಹೆಂಡತಿ ಕಾದಂಬರೀದೇವಿಯೊಂದಿಗೆ ಅಲ್ಲಿ ವಾಸಿಸಲು ಪ್ರಾರಂಭಿಸಿದ. ಅಲ್ಲಿ ಆಕೆ ಹೊಸ ಪೀಠೋಪಕರಣಗಳನ್ನು ಜೋಡಿಸಿ ಅದರ ಸೊಗಸನ್ನು ಹೆಚ್ಚಿಸಲು ಅಲ್ಲಿಯೇ ಒಂದು ಉಪವನವನ್ನು ಮಾಡಿದಳು. ಕತ್ತಲಾದ ನಂತರ ಮನೆಯವರೆಲ್ಲ ಮಾತನಾಡುತ್ತ. ಹಾಡುತ್ತ, ಸಾಹಿತ್ಯದ ವಿಷಯ ಚರ್ಚೆ ಮಾಡುತ್ತ ಕಾಲ ಕಳೆಯಲು ಆ ಉಪವನದಲ್ಲಿ ಸೇರುತ್ತಿದ್ದರು. ಕಾದಂಬರೀ ದೇವಿ ಅವರಿಗೆ ಬೇಕಾದುದನ್ನು ನೋಡಿಕೊಳ್ಳುತ್ತ ತಿಂಡಿ ಮತ್ತು ಪಾನೀಯ

* "ಯೂರೋಪ್ ಜಾತ್ರಿರ್ ಡೈರಿ", ದಿನಾಂಕ ಅಕ್ಟೋಬರ್ 6, 1890

ಗಳನ್ನು ಒದಗಿಸುತ್ತಿದ್ದಳು. 1884 ರಲ್ಲಿ ಆಕೆ ಇದ್ದಕ್ಕಿದ್ದಂತೆ ನಿಧನಳಾದ ನಂತರ ಈ ಸಂತೋಷ ಸಲ್ಲಾಪದ ಸಮಯ ಮುಗಿಯಿತು, ಜ್ಯೋತಿರಿಂದ್ರನಾಥ ಮನೆಯ ಬೇರೆ ಭಾಗಕ್ಕೆ ಹೊರಟುಹೋದ.

ಆಗ ಠಾಕೂರರು ಈ ಘಟಕವನ್ನು ತಮ್ಮ ವಶಕ್ಕೆ ತೆಗೆದುಕೊಂಡು ತಮ್ಮ ಸಂಸಾರದೊಂದಿಗೆ ವಾಸಮಾಡಲು ಪ್ರಾರಂಭಿಸಿದರು. ಅವರ ಐದು ಜನ ಮಕ್ಕಳು ಹುಟ್ಟಿದ್ದೂ ಅಲ್ಲಿಯೇ.* ಮೃಣಾಲಿನಿದೇವಿಯ ಹಾರೈಕೆಯಿಂದ ಉಪವನ ಮತ್ತೆ ಚೆನ್ನಾಗಿ ಆಯಿತು. ಮಹಡಿಯ ಮೇಲೆ ಎಲ್ಲರೂ ಸೇರುವ ಅಭ್ಯಾಸ ಮತ್ತೆ ಪ್ರಾರಂಭವಾಯಿತು ಮತ್ತು ಅತಿಥಿಗಳನ್ನು ನೋಡಿಕೊಳ್ಳುವ ಹೊಣೆ ಆಕೆಯದಾಯಿತು. ತಾನೇ ತಿಂಡಿಗಳನ್ನೆಲ್ಲ ಸಿದ್ಧಮಾಡಿ ಅತಿಥಿಗಳಿಗೆ ಬಡಿಸುವು ದೆಂದರೆ ಆವಳಿಗೆ ತುಂಬ ಸಂತೋಷ.**

ಪ್ರಶಾಂತವಾದ, ಸಂತುಷ್ಟವಾದ ಈ ಗೃಹಸ್ಥ ಜೀವನವು ಪ್ರಾಯಶ: 1889 ರಲ್ಲಿ ಕುಟುಂಬದ ಯಜಮಾನರು ತೆಗೆದುಕೊಂಡ ಒಂದು ನಿರ್ಣಯವಾದ ಮಾರ್ಪಾಟಾಯಿತು.

ದೇವೇಂದ್ರನಾಥ ಮತ್ತು ತೀರಿಕೊಂಡ ಅವರ ಸೋದರ ಗಿರೀಂದ್ರನಾಥರ ಸಂಸಾರಗಳ ವರಮಾನಕ್ಕೆ ಮುಖ್ಯ ಆಧಾರ ಉತ್ತರ ಬಂಗಾಳದಲ್ಲಿದ್ದ ಕುಟುಂಬದ ತೋಟಗಳು. ದೇವೇಂದ್ರನಾಥರು ಸಂಸಾರದಿಂದ ದೂರವಾಗಿದ್ದು ಧಾರ್ಮಿಕ ಜೀವನ ನಡೆಸುತ್ತಿದ್ದುದರಿಂದ ತೋಟಗಳ ನಿರ್ವಹಣೆಗೆ ಒಬ್ಬ ದಕ್ಷ ವ್ಯಕ್ತಿಯ ನೆರವು ಆಗತ್ಯವಾಗಿತ್ತು. ದೇವೇಂದ್ರನಾಥರ ಮೊದಲನೆಯ ಅಳಿಯ ಶಾರದಾಪ್ರಸಾದ ಗಂಗೂಲಿಯವರು ಒಳ್ಳೆಯ ಆಡಳಿತಗಾರರಾಗಿದ್ದರು. ಆದರೆ ಅವರು 1883 ರಲ್ಲಿ ನಿಧನರಾದರು. ಅವರಿಗೊಬ್ಬ ಯೋಗ್ಯ ಉತ್ತಾರಾಧಿಕಾರಿಯನ್ನು ಹುಡುಕ ಬೇಕಾಯಿತು. ಈ ತೋಟಗಳ ನಿರ್ವಹಣೆಯನ್ನು ತಮ್ಮ ಕಡೆಯ ಮಗ ರವೀಂದ್ರ ನಾಥನಿಗೆ ಒಪ್ಪಿಸುವುದೆಂದು ದೇವೇಂದ್ರನಾಥರು ತೀರ್ಮಾನ ಮಾಡಿದರು. ಕುಟುಂಬದ ತೋಟಗಳ ನಿರ್ವಹಣೆಯ ಹೊಣೆಯನ್ನು ಠಾಕೂರರು ಖಚಿತವಾಗಿ

---

* ರತೀಂದ್ರನಾಥ ಠಾಕೂರ್, 'ಆನ್ ದಿ ಎಡ್ಜಸ್ ಆಫ್ ಟೈಂ', ಡಿಸ್‌ಕನೆಕ್ಟೆಡ್ ಮೆಮೊರೀಸ್.

** ಸರಳಾದೇವಿ ಚೌಧುರಿ, 'ಜೀವನರ್ ರಘಾರಾ ಪಥ'

ಯಾವಾಗ ವಹಿಸಿಕೊಂಡರು ಎನ್ನುವುದಕ್ಕೆ ಸಾಕ್ಷ್ಯವಿಲ್ಲ. ತೋಟಗಳ ಒಂದು ಭಾಗವಾದ ಷಹಜಾದ್‌ಪುರ್‌ನ ಸ್ಥಳೀಯ ಶಾಲೆಯ ತನಿಖೆಯ ಪುಸ್ತಕದಲ್ಲಿ 1890 ರ ಜನವರಿ 20 ರಂದು ಠಾಕೂರರ ಬರಹದಲ್ಲೇ ಇರುವ ತನಿಖೆಯ ಟಿಪ್ಪಣಿಯಿದೆ. ಇದರಿಂದ ಅವರು ಹಿಂದಿನ ವರ್ಷವಾದರೂ ಕೆಲಸ ವಹಿಸಿಕೊಂಡಿರಬೇಕೆಂದು ಸುಲಭವಾಗಿ ಊಹಿಸಬಹುದು. 1889 ರಲ್ಲಿ ಷಹಜಾದ್‌ಪುರ್‌ನಲ್ಲಿ ವಾಸಿಸುತ್ತಿದ್ದಾಗ, 'ವಿಸರ್ಜನ್' ನಾಟಕವನ್ನು ಅವರು ಬರೆದದ್ದು ಇದಕ್ಕೆ ಸಮರ್ಥನೆಯನ್ನು ನೀಡುತ್ತದೆ.

ಕುಟುಂಬದ ಆಸ್ತಿಯಾಗಿದ್ದ ನಾಲ್ಕು ಜಮೀನ್‌ದಾರಿ ತೋಟಗಳಲ್ಲಿ ಒಂದು ಕಟಕ್‌ನಲ್ಲಿತ್ತು. ಉಳಿದವು ಉತ್ತರ ಬಂಗಾಳದಲ್ಲಿದ್ದವು. ಈ ಮೂರು : (1) ಷಹಜಾದ್‌ಪುರ ಪ್ರಧಾನ ಕೇಂದ್ರವಾಗುಳ್ಳ ಪಾಬ್ನ ಕಲೆಕ್ಟರೇಟ್‌ನಲ್ಲಿದ್ದ ಷಹಜಾದ್‌ಪುರ ತಹಶೀಲು, (2) ಷೆಲಿದಾ ಪ್ರಧಾನ ಕೇಂದ್ರವಾಗಿದ್ದ ನಾದಿಯಾ ಕಲೆಕ್ಟರೇಟ್‌ನಲ್ಲಿದ್ದ ಬಿರಾಹಿಂಪುರ ತಹಶೀಲು ಮತ್ತು (3) ಪ್ರಾತಿಸಾರ್ ಪ್ರಧಾನ ಕೇಂದ್ರವಾಗುಳ್ಳ ರಾಜಶಾಹಿ ಕಲೆಕ್ಟರೇಟ್‌ನಲ್ಲಿದ್ದ ಕಾಳಿಗ್ರಾಮ ತಹಶೀಲು.

ಉತ್ತರ ಬಂಗಾಳದಲ್ಲಿರುವ ಈ ಮೂರು ತೋಟಗಳ ಕೇಂದ್ರ ಕಚೇರಿ ಷೆಲಿದಾದಲ್ಲಿತ್ತು. ಅದು ಗಂಗಾನದಿಯ ದಕ್ಷಿಣ ತೀರದಲ್ಲಿ ಪಾಬ್ನಾವನ್ನು ಎದುರಿಸಿ ಕಾಣುವ ಒಂದು ಬಿಂದುವಿನಲ್ಲಿದೆ. ಕುಷ್ಟಿಯಾ ಸಬ್‌ಡಿವಿಷನಿನ ಮುಖ್ಯ ನಗರಕ್ಕೆ ಹತ್ತಿರವೇ ಇದೆ. ಇವೆರಡರ ನಡುವೆ ಇರುವುದು ಉತ್ತ ಹೊಲಗಳು ಮತ್ತು ಗೋರಾಯ್ ನದಿ. ಷಹಜಾದ್‌ಪುರದಲ್ಲಿ ತಹಶೀಲಿನ ಕಚೇರಿಯು ಅತ್ರೈ ನದಿಯೊಡನೆ ಸೇರಿಕೊಳ್ಳುವ ಕಾಲುವೆಯ ದಡದಲ್ಲಿದೆ. ಜಮುನಾ ನದಿಯ ಒಂದು ಉಪನದಿಯಾದ ಅತ್ರೈ ಗಂಗಾ ನದಿಯನ್ನು ಕೆಳಭಾಗದ ಹರಹಿನಲ್ಲಿ ಸೇರಿಕೊಳ್ಳುತ್ತದೆ. ಪಾತಿಸಾರ್ ಕಾಳಿಗ್ರಾಮ ತಹಶೀಲಿನ ಕೇಂದ್ರ; ಇದು ಅತ್ರೈ ನದಿಯ ಉಪನದಿಯಾದ ನಾಗರ ಎನ್ನುವ ಸಣ್ಣ ನದಿಯ ದಡದ ಮೇಲಿದೆ. ಪಾತಿಸಾರ್ ಮತ್ತು ಷಹಜಾದ್‌ಪುರದ ಕೇಂದ್ರಗಳೆರಡರಲ್ಲಿಯೂ ತನಿಖೆಗೆ ಬರುವ ಅಧಿಕಾರಿಗಳಿಗಾಗಿ ದೊಡ್ಡ ಕಟ್ಟಡವಿತ್ತು. ತೋಟಗಳ ಆಡಳಿತದ ಮುಖ್ಯಸ್ಥನ ಖಾಯಂ ವಾಸಕ್ಕೆಂದು ಷೆಲಿದಾದ ಮುಖ್ಯ ಕಚೇರಿಯ ಜೊತೆಗೇ ಎರಡು ಅಂತಸ್ತಿನ ವಿಶಾಲವಾದ ಬಂಗಲೆಯನ್ನು ಕಟ್ಟಲಾಗಿತ್ತು.

ಈ ತೋಟಗಳ ನಿರ್ವಹಣೆಯನ್ನು ವಹಿಸಿಕೊಂಡಾಗ ಠಾಕೂರರು ಷೆಲಿದಾದಲ್ಲಿ ಎರಡಂತಸ್ತಿನ ಮನೆಯಲ್ಲಿ ವಾಸಮಾಡಲು ಪ್ರಾರಂಭಿಸಿದರು. ಅಗತ್ಯವಾದಾಗ ಅವರು ಷಹಜಾದ್‌ಪುರ ಮತ್ತು ಪಾತಿಸಾರದ ಶಾಖೆಗಳಿಗೆ ಭೇಟಿಕೊಡುತ್ತಿದ್ದರು. ದೊಡ್ಡ ನದಿಗಳಾದ ಪದ್ಮ—ನಾಡಿನ ಈ ಭಾಗದಲ್ಲಿ ಗಂಗಾ ನದಿಗೆ ಇದೇ ಹೆಸರು—ಮತ್ತು ಜಮುನಾಗಳು ಸಂಚಾರಕ್ಕೆ ಹೆದ್ದಾರಿಗಳಾಗಿದ್ದವು. ಉಪನದಿಗಳ ಮೂಲಕ ಶಾಖೆಗಳ ಕಚೇರಿಗಳಿಗೆ ಹೋಗಬಹುದಾಗಿತ್ತು. ಸಂಚಾರಕ್ಕೆ ಸ್ಪಷ್ಟವಾದ ಆಯ್ಕೆ ಎಂದರೆ ಮನೆದೋಣಿಯಲ್ಲಿ. ಠಾಕೂರರಿಗೇ ಸ್ವಂತ ಮನೆ ದೋಣಿಯಿತ್ತು. ಅದಕ್ಕೆ ಅವರು 'ಪದ್ಮಾ' ಎಂದು ಹೆಸರಿಟ್ಟಿದ್ದರು.

ಈ ಕಾಲದಲ್ಲಿ ಅವರ ಜೀವನಕ್ಕೆ ಹೊಸ ವಿನ್ಯಾಸ ಬಂದಿತು. ಅವರ ವೇಳೆಯಲ್ಲಿ ಬಹು ಪಾಲು ತೋಟದಲ್ಲಿ ವ್ಯವಹಾರದಲ್ಲಿಯೇ ಕಳೆಯುತ್ತಿತ್ತು. ನಿರ್ದಿಷ್ಟ ಅವಧಿಗೊಮ್ಮೆ ಜೊರಸಾಂಕೊದಲ್ಲಿ ತಮ್ಮ ಮನೆಗೆ ಬಂದು ಹೋಗುತ್ತಿದ್ದರು. ಮನೆಯಿಂದ ದೂರವಿದ್ದಾಗ ಅವರ ಲೇಖನಿ ಬಿಡುವಿಲ್ಲದೆ ಕೆಲಸ ಮಾಡುತ್ತಿತ್ತು. ಗ್ರಾಮೀಣ ಆವರಣ ಈ ಕೆಲಸಕ್ಕೆ ಹಿತವಾಗಿತ್ತು. ಅಷ್ಟೇ ಅಲ್ಲದೆ ಒಂಟಿತನವೂ ಸ್ಫೂರ್ತಿ ನೀಡುತ್ತಿತ್ತು. ಕಲ್ಕತ್ತೆಯಲ್ಲಿದ್ದಾಗ ಠಾಕೂರರು ಬಿಡುವನ್ನು ಸವಿಯುತ್ತಿದ್ದರು. ಅಲ್ಲದೆ ತಮ್ಮ ಭೇಟಿಯನ್ನು ತಮ್ಮ ಕೃತಿಗಳ ಪ್ರಕಟಣೆಗೆ ವ್ಯವಸ್ಥೆ ಮಾಡಲು ಬಳಸಿಕೊಳ್ಳುತ್ತಿದ್ದರು,

ಸರಿಸುಮಾರು ಈ ದಿನಗಳಲ್ಲಿ ಕುಟುಂಬದ ಮನೆಯಲ್ಲಿ ಅವರ ಸೋದರಳಿಯಂದಿರ ಅಪೇಕ್ಷೆಯಂತೆ ಒಂದು ಹೊಸ ಸಂಸ್ಕೃತಿ ಸಂಘದ ಸ್ಥಾಪನೆಯಾಯಿತು. ಈ ಪ್ರಯತ್ನಕ್ಕೆ ಬಾಲೇಂದ್ರನಾಥ ಮತ್ತು ಸುಧೀಂದ್ರನಾಥರೇ ನಾಯಕರು. ಒಂದು ವಿಚಿತ್ರ ಸ್ಫೂರ್ತಿಯಿಂದ ಸಂಘಕ್ಕೆ 'ಖಾಮ್ ಖೆಯಾಲಿ ಸಭಾ' ಎಂದು ಹೆಸರು ಕೊಟ್ಟರು. ಇದನ್ನು ಅನುವಾದಿಸುವುದು ಕಷ್ಟವೇ. 'ಖಯಾಲಿಯೇ ಆಳುವ ಸಭೆ' ಎನ್ನಬಹುದು. ಎಲ್ಲರ ಇಚ್ಛೆಯಂತೆ ಈ ಸಾಂಸ್ಕೃತಿಕ ಸಂಘಕ್ಕೆ ರವೀಂದ್ರನಾಥರು ಪೋಷಕರಾದರು. ಅವರು ಕಲ್ಕತ್ತೆಗೆ ಕೆಲವೇ ದಿನಗಳಾದರೂ ಭೇಟಿಕೊಟ್ಟಾಗ ಅದಕ್ಕೆ ಜೀವ ಬರುತ್ತಿತ್ತು. ಸಾಹಿತ್ಯ ಗೋಷ್ಠಿಗಳು, ಸಂಗೀತದ ಸಂಧ್ಯಾಗೋಷ್ಠಿಗಳು. ನಾಟಕ ಪ್ರದರ್ಶನಗಳು ಸಹ ನಡೆಯುತ್ತಿದ್ದವು. ಅವರು ತೋಟಗಳಲ್ಲಿದ್ದಾಗ ಸಂಘ ತನ್ನ ಜಡತ್ವಕ್ಕೆ ಉರುಳುತ್ತಿತ್ತು.

ಸಾಹಿತ್ಯ ಗೋಷ್ಠಿಗಳಲ್ಲಿ ಅನೇಕ ಬಾರಿ ಠಾಕೂರರು ತಮ್ಮ ಇತ್ತೀಚಿನ

ಬರಹಗಳ ಮೊದಲ ವಾಚನ ಮಾಡಿದರು. ಒಮ್ಮೆ ಸದಸ್ಯರು ಒಂದು ನಾಟಕ ಪ್ರದರ್ಶನ ಮಾಡಬೇಕೆಂದು ನಿರ್ಧರಿಸಿದರು. ಆದರೆ ಯೋಗ್ಯವಾದ ನಾಟಕವನ್ನು ಆರಿಸುವದರಲ್ಲಿ ವಿಫಲರಾದರು. ಠಾಕೂರರು ಅವರ ನೆರವಿಗೆ ಬಂದರು. ತಾವೇ ಒಂದು ನಾಟಕವನ್ನು ಬರೆದು ಮತ್ತೆ ಬಂದಾಗ ತರುವುದಾಗಿ ಮಾತುಕೊಟ್ಟರು. ಅವರ ಕಾದಂಬರಿ 'ರಾಜರ್ಷಿ'ಯನ್ನು ಆಧರಿಸಿದ 'ವಿಸರ್ಜನ್' ನಾಟಕದ ರಚನೆ ಯಾದದ್ದು ಹೀಗೆ. ಈ ಸಂಘದ ಸಾಹಿತ್ಯಗೋಷ್ಠಿಗಳು ಕಲ್ಕತ್ತೆಯ ಪ್ರಮುಖ ನಾಗರಿಕರನ್ನು ಆಕರ್ಷಿಸಿದವು. ವಿಜ್ಞಾನಿ ಜಗದೀಶಚಂದ್ರ ಬೋಸರು, ರಾಜಕೀಯ ನಾಯಕರು ಚಿತ್ತರಂಜನ್ ದಾಸ್, ಪ್ರಮಥ ಚೌಧುರಿ, ಸಂಗೀತ ರಚನಕಾರ ಅತುಳ್ ಪ್ರಸಾದ ಸೇನ್ ಈ ಎತ್ತರದ ಜನ ಬರುತ್ತಿದ್ದರು. ಸಾಂಸ್ಕೃತಿಕ ಗೋಷ್ಠಿಯ ಮೊದಲು ಪುಷ್ಕಳವಾಗಿ ಉಪಾಹಾರವನ್ನು ಸಿದ್ಧಮಾಡುವ ಕೆಲಸ ಸಹಜವಾಗಿ ಮೃಣಾಲಿನಿದೇವಿಯ ಪಾಲಿಗೆ ಬರುತ್ತಿತ್ತು. ಆಕೆ ಪ್ರತಿ ಬಾರಿಗೂ ಹೊಸ ಬಗೆಯ ತಿಂಡಿ ತಿನಸುಗಳನ್ನು ಮಾಡುತ್ತಿದ್ದರು.*

ಕುತೂಹಲಕಾರಿ ಸಂಘದ ಚಟುವಟಿಕೆಗಳು 1897 ರ ವರೆಗೆ ಚೆನ್ನಾಗಿ ನಡೆದು ಬಂದವು. ಆನಂತರ ಅದು ಬಾಡಿ ಹೋಯಿತು. ಇದಕ್ಕೆ ಕಾರಣಗಳನ್ನು ಹುಡುಕಲು ದೂರ ಹೋಗಬೇಕಾಗಿಲ್ಲ. ಆ ವರ್ಷ ಠಾಕೂರರು ತಮ್ಮ ಸಂಸಾರ ವನ್ನು ಷೆಲಿದಾಕ್ಕೆ ಕರೆದೊಯ್ದರು, ಕಲ್ಕತ್ತೆಗೆ ಮತ್ತೆ ಮತ್ತೆ ಅವರು ಬರುವುದು ತಪ್ಪಿ ಹೋಯಿತು. ಸಂಘವು ಬಹು ಮಟ್ಟಿಗೆ ಅವರಿಂದಲೇ ಶಕ್ತಿಯನ್ನು ಪಡೆಯುತ್ತಿದ್ದುದರಿಂದ, ಈಗ ಜೀವದಾಯಕ ಸತ್ಯರಸವೇ ಬತ್ತಿಹೋದಂತಾಗಿ ಅದರ ಅಂತ್ಯ ಅನಿವಾರ್ಯವಾಯಿತು.

ಉತ್ತರ ಬಂಗಾಳದಲ್ಲಿ ದೀರ್ಘಕಾಲ ನಿಂತದ್ದು, ಅನೇಕ ರೀತಿಗಳಲ್ಲಿ ಮಹತ್ವ ಪೂರ್ಣವಾಯಿತು. ಒಂದು ಸಂಗತಿಯೆಂದರೆ ಬದಲಾದ ಪರಿಸರ ಅವರ ಮನಸ್ಸಿನ ಮೇಲೆ ಮಾಡಿದ ಪ್ರಬಲ ಪ್ರಭಾವದಿಂದ ಅವರ ಸಾಹಿತ್ಯದ ಚಟುವಟಿಕೆಗಳಿಗೆ ಚೈತನ್ಯ ಬಂದಿತು. ಎರಡನೆಯದಾಗಿ, ಅವರ ಸಾಹಿತ್ಯದ ಚಟುವಟಿಕೆಗಳನ್ನು ಹೊಸ ಮಾರ್ಗದಲ್ಲಿ ನಡೆಸಿ ಅದು ಹೊಸ ತಿರುವನ್ನು ನೀಡಿತು. ಕಡೆಯದಾಗಿ, ಗ್ರಾಮೀಣ ಪ್ರದೇಶದಲ್ಲಿ ಆರ್ಥಿಕ ನೆಮ್ಮದಿ ಇಲ್ಲದವರೊಡನೆ ಅವರಿಗೆ ಸಂಪರ್ಕ

---

* ರತೀಂದ್ರನಾಥ ಠಾಕೂರ್. 'ಆನ್ ದಿ ಎಡ್ಜಸ್ ಆಫ್ ದಿ ಟೈಮ್, ಖಾಮ್ ಖೆಯಾಲಿ ಸಭಾ'

ಬಂದಿತು. ಇದು ಅವರ ಮನಸ್ಸನ್ನು ಜನತಾ ಕಲ್ಯಾಣಕ್ಕೆ ನೆರವಾಗುವ ಕೆಲಸ ಕಾರ್ಯಗಳಲ್ಲಿ ತೊಡಗಿಸಿತುತು. ಮುಂದಿನ ವರ್ಷಗಳಲ್ಲಿ ಅವರು ಗ್ರಾಮೀಣ ಪುನರ್ರಚನೆಗೆ ನೆರವಾಗುವ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸುವಂತೆ ಮಾಡಿತು.

ದೋಣಿಗಳಲ್ಲಿ ನದಿಗಳ ಮೇಲೆ ಸಂಚಾರ ಮಾಡಿದ್ದು ಅವರಿಗೆ ನಿಸರ್ಗದ ಎಲ್ಲ ಸ್ವರೂಪಗಳನ್ನೂ ಕಾಣಿಸಿತು. ದಡದ ಮೇಲೆ ಸದಾ ಬಿಡಲಾಗುತ್ತಿರುವ ದೃಶ್ಯವು ಅವರ ಕಣ್ಣಿಗೆ ಹಬ್ಬ ಮಾಡಿ ಆಸಕ್ತಿಯು ಕುಂದದಂತೆ ಮಾಡುತ್ತಿತ್ತು. ಅದೇ ಕಾಲದಲ್ಲಿ ತೀರದ ಮೇಲೆ ಚಿಕ್ಕೆಯಿಟ್ಟಂತೆ ಕಾಣುತ್ತಿದ್ದ ಗುಡಿಸಲುಗಳು, ತಮ್ಮ ಮನೆಗೆಲಸಗಳಲ್ಲಿ ನಿರತರಾದ ಹಳ್ಳಿಯ ಸರಳ ಜನ ಅವರ ಹೃದಯವನ್ನು ಸೂರೆ ಗೊಳ್ಳುತ್ತಿತ್ತು. ಅಲ್ಲಲ್ಲಿ ಅವರು ತಂಗುತ್ತಿದ್ದುದರಿಂದ ಹಳ್ಳಿಯ ರೈತರು, ಕುಶಲ ಕೆಲಸಗಾರರೊಂದಿಗೂ, ಪೋಸ್ಟ್ ಮಾಸ್ಟರು, ದೂರದ ಠಾಣೆಯ ಕೇಂದ್ರಕ್ಕೆ ವರ್ಗವಾಗಿ ಬಂದ ಮುನಿಸೀಫರು, ಜಮೀನ್ದಾರರ ನಾಯಿಬ್‌ನ ನಿಕಟವಾದ ಸಂಪರ್ಕವೂ ಬಂದಿತು.

ಋತುಗಳ ಲೀಲೆಯಿಂದ ಹಳ್ಳಿಯ ದೃಶ್ಯಗಳಿಗೆ ವೈವಿಧ್ಯತೆ ಬಂದು ಅವರ ಸಂತೋಷವು ಹೆಚ್ಚಿತು. ಅವರ "ಜೀವನ ಸ್ಮೃತಿ" ಗಳಿಂದ ಅನುವಾದಿಸಿದ ಈ ಭಾಗವು, ನಿಸರ್ಗದ ವಿವಿಧ ಮನಃಸ್ಥಿತಿಗಳಿಂದ ಅವರು ಎಷ್ಟೊಂದು ಆಕರ್ಷಿತ ರಾದರು ಎಂಬುದನ್ನು ತೋರಿಸುತ್ತದೆ :

"ಚಳಿಗಾಲ, ಬೇಸಗೆಗಾಲ ಅಥವಾ ಮಳೆಗಾಲ ಎಂಬುದರಿಂದ ನನಗೆ ಯಾವ ವ್ಯತ್ಯಾಸವೂ ಆಗುತ್ತಿರಲಿಲ್ಲ. ಬೇಸಗೆಯ ಸುಡುವ ಸೂರ್ಯನನ್ನೋ ಮಳೆಗಾಲ ದಲ್ಲಿ ಧೋ ಎಂದು ಸುರಿಯುವ ಮಳೆಯನ್ನೋ ನಿರ್ಲಕ್ಷಿಸಿ ನಾನು ಎಷ್ಟೋ ಬಾರಿ ಪದ್ಮಾ ನದಿಯ ಮೇಲೆ ಹೋದದುಂಟು. ದೂರದ ತೀರದ ಮೇಲೆ ಹಸಿರು ಎಲೆಗಳಿಂದ ಅಲಂಕೃತವಾದ ತಂಪಾದ ಹಳ್ಳಿಗಳು ಕಾಣುತ್ತಿದ್ದವು. ಹತ್ತಿರದ ತೀರದ ಮೇಲೆ ಹರಡಿ ಕೊಂಡ ನಿರ್ಜನ ಪೇಲವ ಮರಳಿನ ವಿಶಾಲ ಹರಹು. ನಡುವೆ ಹರಿಯುತ್ತಿದ್ದ ಪದ್ಮಾ ನದಿಯ ನೀರಿನ ಮೇಲೆ ಸ್ವರ್ಗದ ಚಿತ್ರಕಾರನು ಬೆಳಕು ನೆಳಲುಗಳ ಕುಂಚದಿಂದ ವೈವಿಧ್ಯಮಯವಾದ, ಸದಾ ಬದಲಾಗುತ್ತಿರುವ ಚಿತ್ರಗಳನ್ನು ರಚಿಸುತ್ತಿದ್ದ."*

* 'ಸೋನಾರ್ ತಾರಿ'ಗೆ, ಮುನ್ನುಡಿ

ಪ್ರಕೃತಿಯೊಡನೆ ಮತ್ತು ಹಳ್ಳಿಯ ಸರಳ ಜನರೊಂದಿಗೆ ಏಕಕಾಲದಲ್ಲಿ ಲಭ್ಯವಾದ ಈ ಸಂಪರ್ಕ, ಠಾಕೂರರ ಕಲ್ಪನಾಶಕ್ತಿಯನ್ನು ಚೈತನ್ಯಗೊಳಿಸಿದ್ದು ಮಾತ್ರವಲ್ಲ, ಅವರ ಬರಹಗಳಿಗೆ ಹೊಸ ತಿರುವನ್ನು ನೀಡಿತು. ತನ್ನ ಪ್ರಥಮ ಪ್ರೇಮವೆಂದು ಅವರು ಭಾವಿಸಿದ್ದ ಕಾವ್ಯದ ಹಿಡಿತ ಇದರಿಂದ ಸಡಿಲವಾಗಿ ಹೊಸ ದಾಗಿ ಬಂದ ಸಣ್ಣ ಕಥೆಗಳಿಗೆ ಜಾಗ ಮಾಡಿಕೊಟ್ಟಂತೆ ತೋರುತ್ತದೆ. ಅವರು ಕವನಗಳನ್ನು ಬರೆಯುವುದನ್ನು ನಿಲ್ಲಿಸಿಯೇ ಬಿಟ್ಟರು ಎಂದಲ್ಲ, ಆದರೆ ಅವರ ಹೊಸ ಪ್ರೇಮವಾದ ಸಣ್ಣ ಕಥೆಗೆ ಸಂದಷ್ಟು ಗಮನ ಕಾವ್ಯಕ್ಕೆ ಸಲ್ಲಲಿಲ್ಲ ಎಂಬು ದನ್ನು ನೋಡುತ್ತೇವೆ. ಹನ್ನೆರಡು ವರ್ಷಗಳ ಈ ಅವಧಿಯಲ್ಲಿ ಅವರ ಲೇಖನಿಯಿಂದ ಬಂದದ್ದು ಐದೇ ಕವನ ಸಂಗ್ರಹಗಳು. ಅವುಗಳಲ್ಲಿ 'ಸೋನಾರ್ ತಾರಿ' ಮತ್ತು 'ಚಿತ್ರಾ' ಸೇರಿದ್ದವು. ಅವರ 'ಗಲ್ಪಗುಚ್ಛ' ದಲ್ಲಿ ಪ್ರಕಟವಾದ ತೊಂಬತ್ತು ಕಥೆಗಳಲ್ಲಿ ಐವತ್ತುರಷ್ಟನ್ನು ಇದೇ ಅವಧಿಯಲ್ಲಿ ಬರೆದರು. 'ಪೋಸ್ಟ್ ಮಾಸ್ಟರ್,' ಕಾಬೂಲಿವಾಲಾ', 'ಕ್ಷುಧಿತ ಪಾಷಾಣ' ಮತ್ತು 'ಅತಿಥಿ' ಯಂತಹ ರತ್ನಗಳು ಇವುಗಳಲ್ಲಿ ಸೇರಿದ್ದವು.

ಕುಟುಂಬವು ನಡೆಸುತ್ತಿದ್ದ ಪತ್ರಿಕೆಗಳಿಗೆ ಸಣ್ಣ ಕಥೆಗಳನ್ನು ಒದಗಿಸುವುದು ಅವರಿಗೆ ಕಷ್ಟವಾಗಲಿಲ್ಲ, 1877 ರಲ್ಲಿ ಪ್ರಾರಂಭವಾದ ಸಾಹಿತ್ಯದ ಪತ್ರಿಕೆ 'ಭಾರತೀ' ತನ್ನ ಪಾಲನ್ನು ಪಡೆದುಕೊಂಡಿತು. ಅವರ ಸೋದರಳಿಯ ಸುಧೀಂದ್ರ ನಾಥನು 1891 ರಲ್ಲಿ ಪ್ರಾರಂಭಿಸಿದ 'ಸಾಧನಾ' ಎನ್ನುವ ಪತ್ರಿಕೆಗೂ ಧಾರಾಳ ವಾಗಿ ಕೊಡುಗೆ ದೊರೆಯಿತು.

ಅವರಿಗೆ ದೊರೆತ ಹೊಸ ಅನುಭವವೇ ಅವರ ಕಥೆಗಳಿಗೆ ಸಾಮಗ್ರಿಯನ್ನು ಒದಗಿಸಿತೆನ್ನುವುದನ್ನು ಅವರ "ಜೀವನ ಸ್ಮೃತಿ"ಗಳಿಂದ ಒಂದು ಭಾಗದ ಅನುವಾದ ಖಚಿತಗೊಳಿಸುತ್ತದೆ :

"ನಾನು ನನ್ನ ದೋಣಿಯನ್ನು ಪದ್ಮಾ ನದಿಯಿಂದ, ಪಾಬ್ನ ಎಂಬ ಊರಿಗೆ ಅಂಚುಕಟ್ಟುವ ಇಚ್ಛಾಮತಿ ನದಿಗೆ ದಾಟಿಸಿ, ಅಲ್ಲಿಂದ ಬರಾಲ್, ಹುರೋಸಾಗರ್ ಮತ್ತು ಚಲನಿನ ಜೌಗುಪ್ರದೇಶಕ್ಕೆ ಹೋಗಿ, ಮುಂದೆ ಅತ್ರೈ, ನಾಗರ ಮತ್ತು ಯಮುನಾಗಳಲ್ಲಿ ಅನಂತರ ಷಹಜಾದ್‌ಪುರಕ್ಕೆ ಕೊಂಡೊಯ್ಯುವ ಕಾಲುವೆಯಲ್ಲಿ ಓಡಾಡಿಸುತ್ತಿದ್ದೆ. ಎರಡು ಕಡೆಗಳಲ್ಲೂ ಉಬ್ಬು ತಗ್ಗುಗಳ ಕಬ್ಬಿಣದ ತಗಡನ್ನು

ಹೊದಿಸಿದ ಮನೆಗಳ ಜಗಲಿಗಳು, ಹತ್ತಿರದ ಬಜಾರಿನಲ್ಲಿ ತುಂಬಿದ ದೋಣಿಗಳು ಅಲ್ಲೊಂದು ಕಡೆ ಇಲ್ಲೊಂದು ಕಡೆ ಮಣ್ಣು ಕೊಚ್ಚಿಕೊಂಡು ಹೋಗುತ್ತಿರುವ ದಡ ಮತ್ತು ಪ್ರವರ್ಧಮಾನಕ್ಕೆ ಬರುತ್ತಿರುವ ಹಳ್ಳಿಗಳು, ಬ್ರಾಹ್ಮಣರ ಹುಡುಗನೊಬ್ಬ ನಾಯಕನಾದ ಮಕ್ಕಳ ಗುಂಪುಗಳು, ಹಳ್ಳಿಯ ಹುಲ್ಲುಗಾವಲುಗಳಲ್ಲಿ ದನಕಾಯುವ ಹುಡುಗರು, ಸೊಂಪಾಗಿ ಬೆಳೆದ ಸರ್ವೆಮರಗಳು ತುಂಬಿದ ಪದ್ಮಾ ನದಿಯ ಎತ್ತರವಾದ ದಡಗಳಲ್ಲಿ ತೂತುಗಳಲ್ಲಿ ಪಕ್ಷಿಗಳ ಗುಂಪುಗಳು ಇವೆಲ್ಲ ಕಂಡು ಬರುತ್ತಿದ್ದವು. ಹಳ್ಳಿಗಳಲ್ಲಿ ಅಲೆದಾಡುವಾಗ ಲಭ್ಯವಾದ ವಿಶಿಷ್ಟ ಅನುಭವದಿಂದ ನನ್ನ ಕಥೆಗಳ ಬೆಳೆಯನ್ನು ನಾನು ಪಡೆದುಕೊಂಡೆ."*

ಗ್ರಾಮೀಣ ಬಂಗಾಳದ ದೃಶ್ಯದ ಚೆಲುವು ಅವರ ಕಾವ್ಯದ ಮೇಲೂ ಪ್ರಭಾವವನ್ನು ಬೀರಿತು. ಅವರ ಕವಿತೆಗಳಲ್ಲಿ ನಿರೂಪಿಸಲು ಹೊಸ ವಸ್ತುವಾಯಿತು. 'ಸೋನಾರ್ ತಾರಿ' ಯ ವಿಶಿಷ್ಟ ಸೊಗಸು ಈ ಮೂಲದಿಂದ ಬಂದದ್ದು ಎನ್ನುವುದು ಸ್ಪಷ್ಟ.** ಈ ಸಂಗ್ರಹದ ಕಡೆಯ ಕವನದಲ್ಲಿ ಕಾಣಿಸಿಕೊಳ್ಳುವ ಪ್ರತಿಮೆಯೂ ಒಂದು ನಿಗೂಢ ವ್ಯಕ್ತಿ ನಡೆಸುವ ದೋಣಿಯ ಪ್ರತಿಮೆ—ಪದ್ಮಾ ನದಿಯ ಮೇಲಿನ ದೀರ್ಘ ಸಂಚಾರದಿಂದ ಪ್ರೇರಿತವಾದದ್ದು. 'ಚೈತಾಳಿ' ಎಂಬ ಹೆಸರಿನ ಒಂದು ಇಡೀ ಕವನ ಸಂಗ್ರಹವೂ ಈ ಚೆಲುವು ನಾಡಿನ ವರ ಎಂದು ಕಾಣುತ್ತದೆ. ಇದರಲ್ಲಿ ದೃಶ್ಯದ ಚೆಲುವು ಮತ್ತು ಹಳ್ಳಿಯ ಸಣ್ಣ ಪುಟ್ಟ ಘಟನೆಗಳ ವಿವರಗಳನ್ನು ಎಷ್ಟೊಂದು ಎಚ್ಚರಿಕೆಯಿಂದ ನಿರೂಪಿಸಲಾಗಿದೆ ಎಂದರೆ ಇವೆಲ್ಲ ಓದುಗನ ಕಣ್ಣ ಮುಂದೆ ರೂಪತಾಳುವಂತೆ ಭಾಸವಾಗುತ್ತದೆ. ವರ್ಣನೆಯ ಕಾವ್ಯದ ಅತ್ಯಂತ ಸೊಗಸಾದ ರೂಪವನ್ನು ಇಲ್ಲಿ ಕಾಣಬಹುದು. ಅವನ ಕವನಗಳ ಒಳ ವಿಷಯಕ್ಕೂ ಸಹ ಗಹನತೆ ಬಂದು ಅವರ ಮನಸ್ಸು ಗಂಭೀರ ವಿಷಯಗಳತ್ತ ಹರಿಯಿತು.

* 'ಪ್ರಬಾಸಿ', ಬೈಶಾಖ, 1344 ಸಂಚಿಕೆ

** ತಮ್ಮ ವಾಸಸ್ಥಾನವನ್ನು ಶಾಂತಿನಿಕೇತನಕ್ಕೆ ಬದಲಾಯಿಸಲು ಅವರು ನಿರ್ಧರಿಸಿದ್ದರಿಂದ ಉತ್ತರ ಬಂಗಾಳದೊಂದಿಗೆ ಅವರ ಸಂಪರ್ಕ ಕಡಿದು ಹೋದಾಗ ಅವರ ಲೇಖನಿಯಿಂದ ಸಮೃದ್ಧವಾಗಿ ಕಥೆಗಳು ಹರಿದು ಬರುವುದು ನಿಂತು ಹೋಯಿತು. ಠಾಕೂರರು ಈ ಹೇಳಿಕೆಯನ್ನು ಸಮರ್ಥಿಸುತ್ತಾರೆ. – 'ಸೋನಾರ್ ತಾರಿ'ಗೆ ಮುನ್ನುಡಿ

ಗ್ರಾಮೀಣ ಬಂಗಾಳದಲ್ಲಿದ್ದಾಗ ರವೀಂದ್ರರು ಎರಡು ಭಿನ್ನ ಭಿನ್ನವಾದ ಸೆಳೆತಗಳನ್ನು ಅನುಭವಿಸಿದರು. ಒಂದು ಅವರನ್ನು ಏಕಾಂತ ಜೀವನಕ್ಕೆ, ದೇವರೊಂದಿಗೆ ಆಧ್ಯಾತ್ಮಿಕವಾಗಿ ಲೀನವಾಗುವುದಕ್ಕೆ ಆಕರ್ಷಿಸಿತು, ಕಾಲ ಪರಿಪಕ್ವವಾದಾಗ ಈ ಆಕರ್ಷಣೆಯೇ ಅವರ 'ಜೀವನ ದೇವತಾ' ಪರಿಕಲ್ಪನೆಗೆ ಜನ್ಮವಿತ್ತಿತ್ತು. ಮತ್ತೊಂದು, ದಲಿತರ ಕಲ್ಯಾಣಕ್ಕಾಗಿ ಕಾರ್ಯಕ್ರಮಗಳನ್ನು ಬಲಗೊಳಿಸಲು ಅವರ ಮನಸ್ಸಿನಲ್ಲಿ ಬಯಕೆಯನ್ನು ಮೂಡಿಸಿತು. ಮುಂದಿನದೊಂದು ಘಟ್ಟದಲ್ಲಿ ಇದು ಅವರು ಶೈಕ್ಷಣಿಕ ಮತ್ತು ಗ್ರಾಮಕಲ್ಯಾಣದ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸುವಂತೆ ಪ್ರೇರೇಪಿಸಿತು.

ಗ್ರಾಮೀಣ ಪರಿಸರದ ಹೊರಗಿನ ಸೊಗಸು ಮಾಸಿದಂತೆ ಪರಸ್ಪರ ವಿರುದ್ಧವಾದ ಈ ಎರಡು ಹಂಬಲಗಳು ಅವರ ಬಾಳನ್ನು ಆಕ್ರಮಿಸಿದವು. ಅವರು ಅವನ್ನು ತಮ್ಮ ಚಿತ್ರಾಕಾಶದ ನಕ್ಷತ್ರದ್ವಯಗಳಿಗೆ ಹೋಲಿಸುತ್ತಾರೆ.*

1896 ರಲ್ಲಿ ಬರೆದ 'ಚಿತ್ರಾ' ಸಂಗ್ರಹದ ಕವನಗಳಲ್ಲಿ ಪರಸ್ಪರ ವಿರುದ್ಧವಾದ ಈ ಮನಃಸ್ಥಿತಿಗಳು ಸ್ಪಷ್ಟವಾಗಿ ಕಾಣುತ್ತವೆ. ಗ್ರಾಮೀಣ ಕಾರ್ಮಿಕರ ಗೋಳಿನ ಜೀವನವನ್ನು ಕಂಡು ಆದ ಅಸಮಾಧಾನವನ್ನು 'ಚಿತ್ರಾ' ಸಂಗ್ರಹದಲ್ಲಿರುವ 'ಎಬರ್ ಫಿರಾಓಮೋರೆ' ಎಂಬ ಮನಸ್ಸನ್ನು ಕಲಕುವ ಕವನದಲ್ಲಿ ತೋಡಿಕೊಂಡರು. ಅದರ ಒಂದು ಭಾಗದ ಅನುವಾದ ಇದು :

ಹಾಗಿದ್ದಲ್ಲಿ ಬಂದು ಬಿಡು ಕವಿ, ಇತ್ತ ಒಯ್ದು
ಚೈತನ್ಯವನ್ನು ನಿನ್ನಲ್ಲಿ ಇದ್ದರೆ, ಹಂಚು ಅದನ್ನು,
ಇಷ್ಟೊಂದು ದುಃಖವಿದೆ ಇಷ್ಟೊಂದು ನೋವಿದೆ,
ಯಾತನೆಯ ಜಗತ್ತೆ ನಿನ್ನೆದುರಿಗಿದೆ.
ಇಷ್ಟೊಂದು ದಾರಿದ್ರ್ಯ. ಶೂನ್ಯ ಕರುಣಾಜನಕ ದಾರಿದ್ರ್ಯ
ಬಂಧಿತವಾಗಿದೆ, ಕತ್ತಲು,
ಅವರಿಗೆ ಬೇಕು ಆಹಾರ, ಬೆಳಕು, ಬಾಳು ನಿರ್ಬಂಧವಿಲ್ಲದ ಗಾಳಿ,
ಶಕ್ತಿ, ಆರೋಗ್ಯ, ಹರ್ಷ ಬೆಳಗುವ ದೀರ್ಘ ಬಾಳು;
ಅಲ್ಲದೆ ಧೀರ ಹೃದಯ. ಈ ದಾರಿದ್ರ್ಯದ ನಡುವೆ.

---

* 'ಚಿತ್ರಾ'ಕ್ಕೆ ಮುನ್ನುಡಿ

ಓ ಕವಿ,
ಮೇಲಿರುವ ಸ್ವರ್ಗದಿಂದ ಈಗಲಾದರೂ ತಾ
ಸ್ವಾವಲಂಬನೆಯ ಭಾವವನ್ನು.

ಆಗಲೇ ಪ್ರಸ್ತಾಪಿಸಿದಂತೆ. ತಮ್ಮ ಮಕ್ಕಳ ಶಿಕ್ಷಣದ ಸಮಸ್ಯೆಯಿಂದಾಗಿ ರವೀಂದ್ರನಾಥರು ತಮ್ಮ ಸಂಸಾರವನ್ನು 1897 ರಲ್ಲಿ ಷೆಲಿದಾಗೆ ವರ್ಗಾಯಿಸಿದರು. ಜೊರಸಂಕೊದಲ್ಲಿ ಬಹು ಜನ ತುಂಬಿದ ಮನೆಯ ಬದಲು ಸಂಸಾರಕ್ಕೆ ವಿಶಾಲವಾದ ಬಂಗಲೆ ವಾಸಕ್ಕೆ ದೊರಕಿತು. ಹೊರಗಿನವರೊಂದಿಗೆ ಸಂಪರ್ಕಕ್ಕೆ ಅವಕಾಶವಿಲ್ಲದ್ದರಿಂದ ಕುಟುಂಬದ ಸದಸ್ಯರು ಪರಸ್ಪರ ಸಮೀಪವಾದರು. ವಾಸ್ತವವಾಗಿ, ತಮ್ಮ ಸಂಸಾರದವರೊಂದಿಗೆ ಬಹು ಆತ್ಮೀಯವಾಗಿ ಬಾಳಲು ಠಾಕೂರರಿಗೆ ಮೊಟ್ಟ ಮೊದಲ ಬಾರಿಗೆ ಅವಕಾಶ ದೊರೆತದ್ದು ಈಗಲೇ.

ಷೆಲಿದಾದಲ್ಲಿ ಶಾಲೆಗಳಿರಲಿಲ್ಲವಾದದರಿಂದ ತಮ್ಮ ಮಕ್ಕಳಿಗೆ ಮನೆಯಲ್ಲೇ ಶಿಕ್ಷಣ ಕೊಡಿಸಲು ಠಾಕೂರರು ವ್ಯವಸ್ಥೆ ಮಾಡಿದರು. ಶಾಲೆಯ ಶಿಕ್ಷಣದ ಬಗೆಗೆ ಅವರಿಗೆ ಕಹಿ ನೆನಪುಗಳು ಇದ್ದವು. ಲಾರೆನ್ಸ್ ಎನ್ನುವ ಇಂಗ್ಲೀಷನನ್ನು ಇಂಗ್ಲೀಷ್ ಕಲಿಸಲು ನೇಮಿಸಿ ತಮ್ಮ ಬಂಗಲೆಗೆ ಸೇರಿದ ಸಣ್ಣ ಮನೆಗಳಲ್ಲಿ ಒಂದನ್ನು ಅವನ ವಾಸಕ್ಕೆ ಕೊಟ್ಟರು. ಜಗದಾನಂದ ರಾಯ್ ಎನ್ನುವಾತ ಬರೆದ ವೈಜ್ಞಾನಿಕ ಪ್ರಬಂಧಗಳು ಠಾಕೂರರ ಗಮನವನ್ನು ಸೆಳೆದಿದ್ದದರಿಂದ ಆತನನ್ನು ತೋಟದ ಸಿಬ್ಬಂದಿಗೆ ನೇಮಿಸಿಕೊಂಡಿದ್ದರು. ಮಕ್ಕಳಿಗೆ ಗಣಿತವನ್ನು ಹೇಳಿಕೊಡಲು ಆತನನ್ನು ಆರಿಸಿದರು. ಸಂಸ್ಕೃತವನ್ನು ಹೇಳಿಕೊಡಲು ಶಿವದಾನ ವಿದ್ಯಾರ್ಣವನನ್ನು ಆರಿಸಿದರು. ಬಂಗಾಳಿ ಹೇಳಿಕೊಡುವ ಕೆಲಸವನ್ನು ತಾವೇ ಆರಿಸಿಕೊಂಡರು.*

ಭಾರತದ ಎರಡು ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳನ್ನು ಮಕ್ಕಳಿಗೆ ಪರಿಚಯ ಮಾಡಿಕೊಡುವುದರಲ್ಲಿ ಠಾಕೂರರು ವಿಶಿಷ್ಟ ಆಸಕ್ತಿ ವಹಿಸಿದರು. ನಮ್ಮ ಪರಂಪರೆಯಲ್ಲಿ ಶ್ರೇಷ್ಠವಾದುದನ್ನೆಲ್ಲ ಎಳೆಯ ಮನಸ್ಸುಗಳಿಗೆ ತಂದುಕೊಡಲು ಇವು ಅತಿ ಉತ್ತಮ ಮಾಧ್ಯಮ ಎಂದು ಅವರ ಅಭಿಪ್ರಾಯ. ಗಂಗಾ ನದಿಯ ಬಯಲಿನ ಲಕ್ಷಾಂತರ ಮಂದಿಗೆ ಆಹಾರ ಒದಗಿಸುವ

* 'ಪ್ರಭಾತ್ ಕುಮಾರ್ ಮುಖೋಪಾಧ್ಯಾಯ', "ರಬೀಂದ್ರ ಜೀವನಿ"

ಗಂಗಾ ಮತ್ತು ಯಮುನಾ ಬಯಲು ನದಿಗಳಿಗೆ ಇವನ್ನು ಹೋಲಿಸುತ್ತಿದ್ದರು. ಗಂಗೆ ಯಮುನೆಯರಂತೆ ಈ ಎರಡು ಮಹಾಕಾವ್ಯಗಳು ಭಾರತದ ಮಕ್ಕಳಿಗೆ ಆಧ್ಯಾತ್ಮಿಕ ಆಹಾರವನ್ನು ಒದಗಿಸುತ್ತವೆ ಎಂದು ಅವರ ಭಾವನೆ. ಕೃತ್ತಿವಾಸರ 'ರಾಮಾಯಣ' ಮತ್ತು ಕಾಶೀರಾಮ ದಾಸರ 'ಮಹಾಭಾರತ' ಇವು ಈ ಮಹಾ ಕಾವ್ಯಗಳ ಒಳ್ಳೆಯ ಬಂಗಾಳಿ ಅನುವಾದಗಳು. ಮಕ್ಕಳಿಗೆ ಅವು ತೀರ ದೊಡ್ಡವು. ಆದುದರಿಂದ ಮೂಲ ಮಹಾಕಾವ್ಯಗಳ ಸಂಗ್ರಹ ರೂಪಗಳು ದೊರೆಯುವಂತಿರ ಬೇಕೆಂದು ಅವರಿಗೆ ತುಂಬಾ ಅಭಿಲಾಷೆ ಇತ್ತು.

ಆದುದರಿಂದ ಅವರು ಸಂಕ್ಷೇಪಿಸಿದ ಮಹಾಭಾರತದ ಬಂಗಾಳಿ ರೂಪಾಂತರ ವನ್ನು ಬರೆಯುವಂತೆ ತಮ್ಮ ಸೋದರಳಿಯ ಸುರೇಂದ್ರನಾಥ ಠಾಕೂರರನ್ನು ಪ್ರೋತ್ಸಾಹಿಸಿದರು. ರಾಮಾಯಣದ ಸಂಗ್ರಹಾನುವಾದ ಮಾಡುವ ಕಾರ್ಯ ವನ್ನು ತಮ್ಮ ಹೆಂಡತಿ ಮೃಣಾಲಿನಿದೇವಿಗೆ ವಹಿಸಿದರು. ಆದರೆ ಆಕೆ ಅದನ್ನು ಮುಗಿಸುವ ಮೊದಲೇ ಸಾವಿನ ಕ್ರೂರ ಕೈ ಅವರನ್ನು ಸೆಳೆದುಕೊಂಡಿತು.*

ಮೃಣಾಲಿನಿದೇವಿ ತಾನಾಗಿಯೇ ಕೆಲವು ಕ್ರಮಗಳನ್ನು ಕೈಗೊಂಡರು. ಅವು ರೂಢಿಗೆ ವಿರುದ್ಧವಾಗಿ, ಹೊಸತಾಗಿ ಕಾಣುತ್ತವೆ. ಕುಟುಂಬದ ಸೇವಕರಿಗೆ ಭಾನುವಾರ ರಜೆ ನೀಡಲು ನಿರ್ಧರಿಸಿದರು. ಅವರ ಕೆಲಸವನ್ನು ತಮ್ಮ ಮಕ್ಕಳಿಗೆ ಒಪ್ಪಿಸಿದರು. ಸೇವಕರು ರಜೆಯನ್ನು ಸವಿಯುವಂತಾಯಿತು. ವಿವಿಧ ಮನೆಗೆಲಸ ಗಳನ್ನು ಕಲಿಯಲು ಮಕ್ಕಳಿಗೆ ಅವಕಾಶ ದೊರೆಯಿತು.

ಹೆಚ್ಚು ಜನರಿಲ್ಲದ ಷೆಲಿದಾಕ್ಕೆ ತಾವೇ ಹೊರಟು ಹೋದುದರಿಂದ ಠಾಕೂರರು ತಾವೇ ವಿಧಿಸಿಕೊಂಡ ಒಂಟಿತನವನ್ನು ಉಳಿಸಿಕೊಳ್ಳುವುದು ಸಾಧ್ಯ ವಾಗಲಿಲ್ಲ. ಅವರ ವೈಯಕ್ತಿಕ ಆಕರ್ಷಣೆ ಮತ್ತು ಕಲಾ ನೈಪುಣ್ಯ ಹೊರಗಿನಿಂದ ಜನರನ್ನು ಆಕರ್ಷಿಸುವುದು ಪ್ರಾರಂಭವಾಯಿತು. ವಿಜ್ಞಾನಿ ಜಗದೀಶ್ ಚಂದ್ರ ಬೋಸರು ಕಲ್ಕತ್ತೆಯಿಂದ ಬರುತ್ತಿದ್ದರು. ಇತಿಹಾಸಕಾರ ಅಕ್ಷಯಕುಮಾರ ಮೈತ್ರೇಯ ರಾಜಷಾಹಿಯಿಂದ ಬರುತ್ತಿದ್ದರು. ಕುಷ್ಟಿಯಾದಲ್ಲಿ ಸಬ್

* ರತೀಂದ್ರನಾಥ ಠಾಕೂರ್, "ಆನ್ ದಿ ಎಡ್ಜಸ್ ಆಫ್ ಟೈಂ", ಎಟ್ ಷೆಲಿದಾ

ಡಿವಿಷನಲ್ ಅಧಿಕಾರಿಯಾಗಿ ನೇಮಿತರಾಗಿದ್ದ ದ್ವಿಜೇಂದ್ರಲಾಲ್ ರಾಯರೂ ಅವರ ಆತಿಥ್ಯವನ್ನು ಸ್ವೀಕರಿಸಲು ಹಿಂದೆಗೆಯುತ್ತಿರಲಿಲ್ಲ. ಅವರ ಅತಿಥಿಗಳ ಪೈಕಿ ಅವರ ಬಾಲ್ಯದ ಗೆಳೆಯ ಲೋಕೇನ್ ಪಾಲಿತ್ ಮತ್ತು ನತೋರಿನ ಜಮೀನ್ದಾರ ಜಗದೀಂದ್ರನಾಥ ರೇ ಇದ್ದರು. ಅವರ ಭೇಟಿಗಳು ಷೆಲಿದಾದಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅವಕಾಶ ಕಲ್ಪಿಸಿಕೊಡುತ್ತಿದ್ದವು. ಚಿತ್ತರಂಜನ ದಾಸರ ಸೋದರಿ ಅಮಲದಾಸರು ಹಾಡುಗಳ ಸಮೃದ್ಧ ಹಬ್ಬವನ್ನೇ ಒದಗಿಸುತ್ತಿದ್ದುದರಿಂದ ಅವರ ಭೇಟಿಯಿಂದ ಇಂತಹ ಕಾರ್ಯಕ್ರಮಗಳ ಆಕರ್ಷಣೆ ಹೆಚ್ಚಾಗುತ್ತಿದ್ದವು.*

ಆಹ್ಲಾದಕಾರವಾದ ಗ್ರಾಮೀಣ ಪರಿಸರದಲ್ಲಿ ಒಟ್ಟಿಗೆ ವಾಸಿಸುವ ಭಾಗ್ಯದ ಸಂತೋಷವನ್ನು ಹೀಗೆ ಸಂಸಾರದ ಸದಸ್ಯರು ಸವಿಯುತ್ತಿದ್ದಂತೆ ನಾಲ್ಕು ವರ್ಷಗಳು ಜಾರಿ ಹೋದವು. ಎರಡು ಅಂಶಗಳು ಸಂತೋಷಕ್ಕೆ ಅಡ್ಡಿ ತಂದವು. ಮೊದಲನೆಯದಾಗಿ, ಠಾಕೂರರ ಮೊದಲನೆಯ ಮಗ ರತೀಂದ್ರನಾಥನಿಗೆ, ಸಹ ವಿದ್ಯಾರ್ಥಿಗಳೊಡನೆ ಕ್ರಮಬದ್ಧವಾಗಿ ವಿದ್ಯಾಭ್ಯಾಸ ಪಡೆಯಬೇಕಾದ ವಯಸ್ಸು ಹತ್ತಿರವಾಗುತ್ತಿತ್ತು. ಎರಡನೆಯದಾಗಿ, ಪ್ರತಿಫಲದ ಅಪೇಕ್ಷೆ ಇಲ್ಲದೆ ಸೇವೆಯ ಮೂಲಕ ಅಭಿವ್ಯಕ್ತಿ ಸಾಧಿಸುವ ಹಂಬಲ ಅವರ ಮನಸ್ಸಿನಲ್ಲಿ ತೀವ್ರವಾಗಿ, ಸಮಾಜಕ್ಕೆ ಸೇವೆ ಮಾಡುವ ರೂಪವನ್ನು ತಾಳಿತು.** ಇವೆರಡೂ ಸೇರಿ, ರಾಷ್ಟ್ರೀಯ ಆದರ್ಶಗಳಿಗೆ ಅನುಗುಣವಾದ ಶಿಕ್ಷಣವನ್ನು ಮಕ್ಕಳಿಗೆ ನೀಡಲು ಒಂದು ಸಂಸ್ಥೆಯನ್ನು ಪ್ರಾರಂಭಿಸುವ ವಿಚಾರವು ಮೂಡಿತು. ಠಾಕೂರರ ತಂದೆಯವರು ಒಂದು ಸಣ್ಣ ಪಾಳೆಯವನ್ನು ಶಾಂತಿನಿಕೇತನದಲ್ಲಿ ನಿರ್ಮಿಸಿದರು. ಅಲ್ಲಿ ವಿದ್ಯಾರ್ಥಿಗಳು ಅಲ್ಲಿಯೇ ವಾಸಿಸುವಂತಹ ಶಾಲೆಯನ್ನು ಸ್ಥಾಪಿಸುವ ಮಹತ್ವದ ನಿರ್ಣಯವನ್ನು ಠಾಕೂರರು ಕೈಗೊಂಡರು.

1901 ರ ಡಿಸೆಂಬರ್‌ನಲ್ಲಿ ಕುಟುಂಬವು ಶಾಂತಿನಿಕೇತನಕ್ಕೆ ಹೋಯಿತು. ರವೀಂದ್ರನಾಥರೂ ಸೇರಿದಂತೆ ಐವರು ಬಾಲಕರ ಬ್ರಹ್ಮಚರ್ಯಾಶ್ರಮವನ್ನು ತೆರೆಯಲಾಯಿತು. ಆದರೆ ಸ್ವಲ್ಪ ಕಾಲದಲ್ಲೇ ಠಾಕೂರರು ಶಾಲೆಗೆ ಹಣವನ್ನು

---

* ರತೀಂದ್ರನಾಥ ಠಾಕೂರ್, "ಆನ್ ದಿ ಎಡ್ಜಸ್ ಆಫ್ ಟೈಂ," ಎಟ್ ಷೆಲಿದಾ

** "ದಿ ರಿಲಿಜನ್ ಆಫ್ ಮ್ಯಾನ್", ದಿ ಟೀಚರ್

ಒದಗಿಸುವ ಸಮಸ್ಯೆಯನ್ನು ಎದುರಿಸಬೇಕಾಯಿತು. ಖಚಿತವಾಗಿ ಬಾಡಿಗೆ ಹಣ ತರುವ ಭೂಮಿಯ ಆಸ್ತಿಯಿಂದ ಶಾಂತಿನಿಕೇತನಕ್ಕೆ ವರ್ಷಕ್ಕೆ 1,800 ರೂಪಾಯಿಗಳ ವರಮಾನ ಬರುತ್ತಿತ್ತು. ಏರುತ್ತಿದ್ದ ವೈಯಕ್ತಿಕ ಸಂಭಾವನೆಯಲ್ಲಿ ಒಂದು ಭಾಗವನ್ನು ಶಾಲೆಯ ಖರ್ಚನ್ನು ಪೂರೈಸಲು ಬಳಸಬೇಕಾಯಿತು. ಇದೂ ಸಾಲಲಿಲ್ಲ. ಆದುದರಿಂದ ಠಾಕೂರರು ತಮ್ಮ ಸ್ವಂತ ಆದಾಯದಿಂದ ಪೂರಿಯಲ್ಲಿ ಗಳಿಸಿಕೊಂಡಿದ್ದ ಮನೆಯನ್ನು ಮಾರುವುದು ಅನಿವಾರ್ಯವಾಯಿತು. ಸಂಪನ್ಮೂಲಗಳನ್ನು ಹೆಚ್ಚಿಸಲು ಮೃಣಾಲಿನಿ ದೇವಿಯವರೂ ತಮ್ಮ ಕೆಲವು ಆಭರಣಗಳನ್ನು ಮಾರಬೇಕಾಗಿ ಬಂದಂತೆ ಕಾಣುತ್ತದೆ.

ಆದರೆ ಶಾಂತಿನಿಕೇತನದಲ್ಲಿ ಗೃಹ ಜೀವನವು ಹೆಚ್ಚು ಕಾಲ ಸಾಗಲಿಲ್ಲ. ಮಳೆಗಾಲದಲ್ಲಿ ಶಾಂತಿನಿಕೇತನದಲ್ಲಿ ಮೃಣಾಲಿನಿದೇವಿ ಕಾಯಿಲೆ ಬಿದ್ದರು. ಸ್ಥಳೀಯ ವೈದ್ಯರಿಂದ ಅವರ ಕಾಯಿಲೆಯನ್ನು ಗುಣಪಡಿಸುವುದು ಸಾಧ್ಯವಾಗಲಿಲ್ಲ. ಇನ್ನೂ ಉತ್ತಮ ವೈದ್ಯಕೀಯ ನೆರವಿಗಾಗಿ ಅವರನ್ನು ಜರಸಾಂಕೊದಲ್ಲಿದ್ದ ಕುಟುಂಬದ ಮನೆಗೆ ಕರೆದೊಯ್ಯಲಾಯಿತು. ಅವರು ತಮ್ಮ ದೀರ್ಘಕಾಲದ ಕಾಯಿಲೆಯನ್ನು ತಾಳ್ಮೆಯಿಂದ ಸಹಿಸಿಕೊಂಡರು. ಬಂಗಾಳಿ ಪಂಚಾಂಗದ 1309 ರ ಆಗ್ರಹಾಯಣದ ಏಳನೆ ದಿನಕ್ಕೆ ಹೊಂದುವ 1902 ರ ನವೆಂಬರ್ 23 ರಂದು ಮೃಣಾಲಿನಿ ದೇವಿ ನಿಧನ ಹೊಂದಿದರು.

ಅವರು ತೀರಿಕೊಂಡ ದಿನ ಠಾಕೂರರು ಇಡೀ ರಾತ್ರಿಯನ್ನು ಒಬ್ಬರೇ ಮನೆಯ ಮಾಳಿಗೆಯ ಮೇಲೆ ಶತಪಥ ಸುತ್ತುತ್ತ ಕಳೆದರೆಂದು ಹೇಳುತ್ತಾರೆ. ಹೆಂಡತಿಯ ಸಾವಿನಿಂದ ಅವರಿಗೆ ಅಂತಹ ಆಘಾತವಾಗಿತ್ತು. ಆದರೆ ಇದಷ್ಟನ್ನು ಬಿಟ್ಟರೆ ದುಃಖದ ಹೊಸ ಸೂಚನೆ ಏನೂ ಇರಲಿಲ್ಲ. ದುಃಖದ ಯಾತನೆ ಅವರನ್ನು ಕಾಡಲಿಲ್ಲ ಎಂದಲ್ಲ. ಆದರೆ ತಮ್ಮ ವೈಯಕ್ತಿಕ ದುಃಖವನ್ನು ಇತರರಿಂದ ಹೇಗೆ ಬಚ್ಚಿಡಬೇಕೆಂಬುದು ಅವರಿಗೆ ತಿಳಿದಿತ್ತು. ಸಂಪೂರ್ಣವಾಗಿ ತಮಗೆ ಸೇರಿದ ದುಃಖವನ್ನು ಇತರರ ಮೇಲೆ ಹೊರಿಸುವುದು ಉಚಿತವಲ್ಲ ಎಂಬ ಅರಿವಿನಿಂದ ಹೀಗೆ ಮಾಡುತ್ತಿದ್ದರು. ಈ ವಿಷಯದಲ್ಲಿ ಅವರ ಅನಿಸಿಕೆಯನ್ನು ಅವರ ಒಂದು ಕವನದ ಈ ಕೆಳಗಿನ ಪಂಕ್ತಿಗಳ ಅನುವಾದವು ಸ್ಪಷ್ಟವಾಗಿ ನಿರೂಪಿಸುತ್ತದೆ.

ದುಃಖದ ದಿನದಲ್ಲಿ ನಾನು ನನ್ನ ಲೇಖನಿಯನ್ನು ಬೇಡುತ್ತೇನೆ
ನನ್ನನ್ನು ಅಪಮಾನಕ್ಕೀಡುಮಾಡಬೇಡ ಎಂದು,
ಬೇರಾರನ್ನೂ ಮುಟ್ಟದೆ ನನ್ನದೆ ಆದುದನ್ನು
ಇತರರ ಕಣ್ಣ ಮುಂದಿಡಬೇಡ ಎಂದು.
ಕತ್ತಲಲ್ಲಿ ನಿನ್ನ ಮುಖವನ್ನು ಮರೆಸಬೇಡ,
ಬಾಗಿಲಿಗೆ ಅಗುಳಿ ಹಾಕಬೇಡ.*

ಆದರೆ ಈ ಸಮಯದಲ್ಲಿ ಅವರ ಹೃದಯಕ್ಕೆ ಪ್ರವಾಹವಾಗಿ ಬಂದ ಶೋಕವು, ಅವರ ಪತ್ನಿ ತೀರಿಕೊಂಡ ಎರಡು ತಿಂಗಳೊಳಗೆ ಯಾರಿಗೂ ತಿಳಿಯದೆ ಅವರು ಬರೆದ ಪದ್ಯಗಳ ಮಾಲೆಯಲ್ಲಿ ಅಭಿವ್ಯಕ್ತಿ ಪಡೆಯಿತು. ಸ್ವಲ್ಪ ಕಾಲದ ನಂತರ ಅವು 'ಸ್ಮರಣ' ಎಂಬ ಹೆಸರಿನ ಪುಸ್ತಕವಾಗಿ ಪ್ರಕಟವಾದವು. ಪುಸ್ತಕವನ್ನು ನೇರವಾಗಿ ಮೃಣಾಲಿನಿದೇವಿಯವರಿಗೆ ಅರ್ಪಿಸಿಲ್ಲ, ಆದರೆ ಸಮರ್ಪಣೆಯ ಪುಟದಲ್ಲಿ ಅವರ ನಿಧನದ ದಿನಾಂಕವಷ್ಟೆ ಇದೆ.

ಈ ಪುಸ್ತಕವು, ಪ್ರಿಯತಮೆಯ ಸಾವಿನ ದುರಂತವನ್ನು ವಸ್ತುವಾಗುಳ್ಳ ಕವನಗಳ ಶ್ರೇಷ್ಠ ಸಂಗ್ರಹಗಳಲ್ಲಿ ಒಂದಾಗಿ ಬಂಗಾಳೀ ಸಾಹಿತ್ಯಕ್ಕೆಸೇರಿತು. ಜಗತ್ತಿನ ಸಾಹಿತ್ಯದಲ್ಲೇ ಇರುವ ಇಂತಹ ಇತರ ಕೃತಿಗಳೊಡನೆ ಹೋಲಿಕೆಗೆ ಅರ್ಹವಾಯಿತು. ಕವಿಯೇ ಇದರ ಕವನಗಳಲ್ಲಿ ಒಂದನ್ನು ಇಂಗ್ಲೀಷ್‌ಗೆ ಭಾಷಾಂತರಿಸಿ 'ಗೀತಾಂಜಲಿ' ಯ ಇಂಗ್ಲೀಷ್ ಆವೃತ್ತಿಯಲ್ಲಿ ಸೇರಿಸಿದರು. ಆಕೆಯನ್ನು ಮನೆಯಲ್ಲಿ ಕಾಣದೆ ಹೋದಾಗ ಅವರ ಹೃದಯದ ಯಾತನೆ ಮತ್ತು ಅನಂತತೆಯ ಸಾಗರದಲ್ಲಿ ತಮ್ಮ ಶೂನ್ಯವಾದ ಜೀವನವನ್ನು ಅದ್ದಿ ಸಮಾಧಾನ ಪಡೆಯುವ ಅವರ ಯತ್ನ ಎರಡನ್ನೂ ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ.**

---

* 'ಪುನಶ್ಚ', ವಿಶ್ವಶೋಕ್

** 'ಗೀತಾಂಜಲಿ'. 87, "ಹತಾಶ ಆಸೆಯಿಂದ ಹೋಗಿ ನಾನು ಹುಡುಕುತ್ತೇನೆ"

ಅಧ್ಯಾಯ ೭

ಶಿಕ್ಷಣದಲ್ಲಿ ಪ್ರಯೋಗ

ಧರ್ಮನಿಷ್ಠ ತಂದೆಯು ತನ್ನ ಮನೆಯಲ್ಲಿ ಬೆಳೆಸಿದ, ಗಾಢವಾದ ಧರ್ಮಶ್ರದ್ಧೆಯ ವಾತಾವರಣದಲ್ಲಿ ಹುಟ್ಟಿದ ಠಾಕೂರರಿಗೆ ಚಿಕ್ಕ ವಯಸ್ಸಿನಲ್ಲಿ ವಿಧಿಪೂರ್ವಕವಾಗಿ ಧಾರ್ಮಿಕ ಜೀವನಕ್ಕೆ ಪ್ರವೇಶವಾಯಿತು. ಅವರೂ ಧಾರ್ಮಿಕ ಸ್ವಭಾವದವರೇ ಆಗಿದ್ದುದರಿಂದ ಅದಕ್ಕೆ ಹೊಂದಿಕೊಳ್ಳಲು ಅವರ ಮನೋಧರ್ಮವೂ ನೆರವಾಯಿತು. ಹೀಗೆ ಎರಡು ಆಸಕ್ತಿಗಳು ಅವರ ಜೀವನವನ್ನು ತುಂಬಿದವು—ಸಾಹಿತ್ಯದ ಚಟುವಟಿಕೆ ಮತ್ತು ಧಾರ್ಮಿಕ ಚಟುವಟಿಕೆ. ಷೆಲಿದಾದಲ್ಲಿ ಅವರ ವಾಸದ ಉತ್ತರಾರ್ಧದಲ್ಲಿ ಇನ್ನೂ ಗಹನವಾದ ಪ್ರಶ್ನೆಗಳು ಅವರ ಮನಸ್ಸನ್ನು ಕಲಕಿದವು. ಧರ್ಮವನ್ನು ಕುರಿತು ತಮ್ಮದೇ ಆದ ವಿಚಾರ ಅವರ ಮನಸ್ಸಿನಲ್ಲಿ ಪ್ರಬಲವಾಗುತ್ತ ಹೋಯಿತು. ಅವರಿನ್ನೂ ತಮ್ಮದೇ ಆದ ಧರ್ಮವನ್ನು ಗುರುತಿಸಿಕೊಂಡಿರಲಿಲ್ಲ. ಆದರೆ ತಮ್ಮ ಧರ್ಮದಲ್ಲಿ ಮಾನವನಿಗೊಂದು ಸಾಧನವನ್ನು ಕೊಡುವ ಅಗತ್ಯವು ಅಸ್ಪಷ್ಟವಾಗಿ ಅವರ ಮನಸ್ಸನ್ನು ಮುಟ್ಟಿತು. ಎಂದರೆ, ಮಾನುಷ್ಯ ದಾರ್ಶನಿಕ ವಿಚಾರಗಳು ಅವರ ಮನಸ್ಸಿನಲ್ಲಿ ಮೊಳಕೆಯಾಗುತ್ತಿದ್ದವು. ಒಂದು ಕಡೆ ತಮ್ಮ ಸಾಹಿತ್ಯದ ಚಟುವಟಿಕೆಗಳಿಂದ, ಮತ್ತೊಂದು ಕಡೆ ತಮ್ಮ ಧರ್ಮನಿಷ್ಠೆಯ ಜೀವನದಿಂದ ತಮ್ಮ ಸುತ್ತ ನಿರ್ಮಿತವಾದ ಏಕಾಂತತೆಯನ್ನು ಮುರಿಯುವ ತವಕವು

ಇದರಿಂದ ಅವರಲ್ಲಿ ಉಂಟಾಯಿತು. ಇತರರ ಕಲ್ಯಾಣಕಾಗಿ ಕೆಲಸಕಾರ್ಯಗಳನ್ನು ಕೈಗೊಳ್ಳುವ ಅಗತ್ಯದ ಅರಿವು ಅವರಿಗಾಯಿತು.

ಅವರು ಹೇಳುತ್ತಾರೆ, "ಅನಂತದ ಧ್ಯಾನದಿಂದ ಏಕಾಂತದಲ್ಲಿ ಪಡೆಯುವ ಸಂತೋಷ ನನಗೆ ತೃಪ್ತಿಕೊಡಲಾರದೆ ಹೋಯಿತು, ನನ್ನ ಮೌನಧ್ಯಾನಕ್ಕಾಗಿ ಬಳಸಿದ ಧಾರ್ಮಿಕ ವಚನಗಳು ನನ್ನ ಅರಿವೇ ಇಲ್ಲದೆ ತಮ್ಮ ಸ್ಫೂರ್ತಿಯನ್ನು ಕಳೆದು ಕೊಂಡವು.* ತಮ್ಮ ಸಾಹಿತ್ಯದ ಜೀವನದ ಏಕಾಂತತೆಯಿಂದ ಹೊರ ಬೀಳುವ ಪ್ರಬಲ ಬಯಕೆಯೂ ಉಂಟಾಯಿತೆಂದು ಹೇಳಿದ್ದಾರೆ.

ಅವರ ಬಾಳಿನಲ್ಲಿ ಹೊಸ ತಿರುವು ಬರಲು ಹೀಗೆ ಸಿದ್ಧತೆಯಾಗಿತ್ತು. ತಮ್ಮ ನಿರ್ಣಯವನ್ನು ಕೈಗೊಳ್ಳಲು ಠಾಕೂರರಿಗೆ ಪ್ರಚೋದನೆಯೊಂದು ಅಗತ್ಯ ವಾಗಿತ್ತು. ಅವರ ಮೊದಲನೆಯ ಮಗ ರತೀಂದ್ರನಾಥನ ವಿದ್ಯಾಭ್ಯಾಸದ ಸಮಸ್ಯೆಯ ರೂಪದಲ್ಲಿ ಈ ಅವಕಾಶ ಕಾಣಿಸಿಕೊಂಡಿತು. ಹುಡುಗನಿಗೆ ಆಗಲೇ ಹದಿಮೂರು ವರ್ಷವಾಗಿತ್ತು. ಮನೆಯಲ್ಲಿ ಪಾಠ ಹೇಳುವ ಅಧ್ಯಾಪಕರ ಮೇಲ್ವಿ ಚಾರಣೆಯಲ್ಲಿ ನಡೆಯುತ್ತಿದ್ದ ಶಿಕ್ಷಣವು ಅವನ ಅಗತ್ಯಗಳನ್ನು ಪೂರೈಸುತ್ತಿರಲಿಲ್ಲ. ಇತರ ವಿದ್ಯಾರ್ಥಿಗಳೊಂದಿಗೆ ವಿದ್ಯಾಭ್ಯಾಸವನ್ನು ಮುಂದುವರಿಸಲು ಅವನನ್ನು ಯಾವುದಾದರೊಂದು ಶಾಲೆಗೆ ಸೇರಿಸಲು ಸಮಯವಾಗಿತ್ತು.

ಸಾಮಾನ್ಯ ಸಂದರ್ಭದಲ್ಲಿ, ಅವನನ್ನು ಕಲ್ಕತ್ತೆಗೆ ಕಳುಹಿಸಿ ಸಮಸ್ಯೆಯನ್ನು ಬಗೆಹರಿಸಬಹುದಾಗಿತ್ತು. ಅಲ್ಲಿ ಅವನ ಚಿಕ್ಕಪ್ಪಂದಿರಿದ್ದರು. ಅವರು ಅವನನ್ನು ಅಲ್ಲಿ ನೋಡಿಕೊಳ್ಳುತ್ತಿದ್ದರು. ಅವನು ಒಳ್ಳೆಯ ಶಾಲೆಯೊಂದನ್ನು ಸೇರಬಹು ದಾಗಿತ್ತು. ಆದರೆ ಇಂತಹ ಶಾಲಾ ಶಿಕ್ಷಣದ ಬಗ್ಗೆ ರವೀಂದ್ರರಿಗೆ ತೀವ್ರ ಅಸಮಾ ಧಾನವಿತ್ತು. ಅವರ ಮಾತಿನ ಈ ಅನುವಾದ ಅವರ ವಿಚಾರವನ್ನು ಸೂಚಿ ಸುತ್ತದೆ.

"ಬಾಲ್ಯದಲ್ಲಿ ನಾನು ಶಾಲಾ ಶಿಕ್ಷಣದ ವ್ಯವಸ್ಥೆಗೆ ಸಿಕ್ಕು ತುಂಬ ನೋವನ್ನ ನುಭವಿಸಿದೆ. ವ್ಯವಸ್ಥೆ ನನಗೆ ಎಷ್ಟೊಂದು ನೋವನ್ನುಂಟುಮಾಡಿ ಘಾಸಿ

---

* 'ರಿಲಿಜನ್ ಆಫ್ ಮ್ಯಾನ್'. ದ ಟೀಚರ್

ಮಾಡಿತೆಂದರೆ ನಾನು ದೊಡ್ಡವನಾದ ಮೇಲೂ ಅದರ ನೆನಪು ನನ್ನೊಡನೆ ಉಳಿಯಿತು. ಏಕೆಂದರೆ, ಈ ವ್ಯವಸ್ಥೆಯಲ್ಲಿ ಮಗುವನ್ನು ನಿಸರ್ಗದ ಮಡಿಲಿಂದ ಮತ್ತು ಸಮಾಜದಿಂದ ದೂರ ಮಾಡಿ, ಶಾಲೆ ಎನ್ನಿಸಿಕೊಳ್ಳುವ ಕಾರ್ಖಾನೆಯಲ್ಲಿ ಇಡಲಾಗುತ್ತದೆ. ಅದರ ಅಸಹಜ ಪರಿಸರದ ಕಿರಿಕಿರಿ ಮಗುವಿನ ಮನಸ್ಸಿಗೆ ನಿತ್ಯವೂ ಚಿತ್ರಹಿಂಸೆಯನ್ನು ಉಂಟು ಮಾಡುತ್ತದೆ."*

ತನ್ನ ಮಗನ ಮೇಲೆ ಈ ಅನುಭವವನ್ನು ಹೊರಿಸಲು ಅವರಿಗೆ ಇಷ್ಟವಿಲ್ಲದ್ದು ಸಹಜವೇ. ಇದರಿಂದಲೇ ಅವರು ತಮ್ಮ ವಿಚಾರಸರಣಿಗೆ ಅನುಗುಣವಾಗಿ ರೂಪಿಸುವ ಶಾಲೆಯನ್ನು ಬೆಳೆಸಿ, ಅದನ್ನು ಶಿಕ್ಷಣದ ಇನ್ನೂ ಪರಿಣಾಮಕಾರಿಯಾದ ಸಾಧನವನ್ನಾಗಿ ಮಾಡಿ, ಶಿಕ್ಷಣವನ್ನು ಸಂತೋಷ ಕೊಡುವ ಅನುಭವವನ್ನಾಗಿ ಮಾರ್ಪಡಿಸಲು ನಿರ್ಧರಿಸಿದ್ದು. ಕಾವ್ಯದ ದಂತಗೋಪುರದಿಂದ ಕೆಳಕ್ಕಿಳಿದು ಅವರು ಶಿಕ್ಷಕನ ಪಾತ್ರ ವಹಿಸುವಂತೆ ಆದದ್ದು ಈ ರೀತಿಯಲ್ಲಿ.

ಈ ಸಂಸ್ಥೆಗೆ ಶಾಂತಿನಿಕೇತನವನ್ನೇ ನಿವೇಶನವನ್ನಾಗಿ ಆರಿಸಬೇಕೆಂಬುದು ಸ್ಪಷ್ಟವಾಗಿತ್ತು. ಅವರ ತಂದೆ ಆಗಲೆ ಅಲ್ಲಿ ಒಂದು ಪಾಳೆಯವನ್ನು ನಿರ್ಮಿಸಿದ್ದರು. 1887 ರಲ್ಲಿ ಮಹರ್ಷಿಯವರು ಮಾಡಿದ್ದ ನ್ಯಾಸಪತ್ರವು ಈ ಸ್ಥಳದ ಅಭಿವೃದ್ಧಿ ಯೋಜನೆಯೊಂದನ್ನು ರೂಪಿಸಿತ್ತು. ಅದರಲ್ಲಿ ಒಂದು ಗ್ರಂಥಾಲಯ ಮತ್ತು ಒಂದು ಶಾಲೆಗಳ ಸ್ಥಾಪನೆಯೂ ಸೇರಿತ್ತು. ಮಹರ್ಷಿಗಳು ಬ್ರಾಹ್ಮೊ ಪಂಥವನ್ನು ವಿಧಿಪೂರ್ವಕವಾಗಿ ಸೇರಿದ ದಿನದ ನೆನಪಿಗಾಗಿ ಒಂದು ವಾರ್ಷಿಕ ಜಾತ್ರೆಯನ್ನು ವ್ಯವಸ್ಥೆಮಾಡಬೇಕೆಂದೂ ಅದು ವಿಧಿಸಿತ್ತು. ಈ ವಿಚಾರಗಳಿಗೆ ರೂಪ ಕೊಡಲು ಆವರೆಗೆ ಯಾವ ಪ್ರಯತ್ನವನ್ನೂ ಮಾಡಿರಲಿಲ್ಲ. ಠಾಕೂರರ ಸಲಹೆಯನ್ನು ಅವರ ತಂದೆಗೆ ಹೇಳಿದಾಗ ಅದಕ್ಕೆ ಅವರ ಹರಕೆ ದೊರೆಯಿತು.

ಈ ಸ್ಥಳಕ್ಕೆ ಠಾಕೂರರು ಬಾಲ್ಯದಲ್ಲಿ ತಮ್ಮ ತಂದೆಯವರೊಡನೆ ನೀಡಿದ ಮೊದಲ ಭೇಟಿಯ ಸಂತೋಷಕರ ನೆನಪುಗಳೂ ಅವರ ನಿರ್ಧಾರದ ಮೇಲೆ ಪ್ರಭಾವ ಬೀರಿರಬೇಕೆಂದು ಇಲ್ಲಿ ಸೂಚಿಸುವುದು ಅಪ್ರಸ್ತುತವಾಗಲಾರದು. ನಿಸರ್ಗದೊಡನೆ ನಿಜವಾದ ಸಂಪರ್ಕದಿಂದ ಬರುವ ಪುಟಪಟಿಸುವ ಉಲ್ಲಾಸದ ಅನುಭವವು ಅವರಿಗೆ

---

* ವಿಶ್ವಭಾರತಿ

ಆಗ ಆಯಿತು. ಅಲ್ಲಲ್ಲಿ ತಾಳೆ ಮರಗಳ ಗುಂಪುಗಳಿಂದ ಕೂಡಿದ ಈ ಬಂಜರು ಭೂಮಿಯ ಒರಟು ಚೆಲುವಿನಲ್ಲಿ ಅವರಿಗೆ ಕಂಡ ಆಕರ್ಷಣೆ ಆದುವರೆಗೆ ಬೇರೆ ಯಾವುದರಲ್ಲಿಯೂ ಕಂಡಿರಲಿಲ್ಲ.

ತಪೋವನಗಳೆಂದು ಕರೆಯುತ್ತಿದ್ದ ಭಾರತದ ಪ್ರಾಚೀನ ಅರಣ್ಯ ಪಾಳೆಯ ಗಳಲ್ಲಿಯೂ ಠಾಕೂರರಿಗೆ ಗಾಢವಾದ ಗೌರವವಿತ್ತು. ಸಂಸ್ಕೃತದ ಸಾಹಿತ್ಯ ಕೃತಿ ಗಳಲ್ಲಿ ಪಾಳೆಯಗಳ ವರ್ಣನೆಗಳು ಕಣ್ಣಿಗೆ ಕಟ್ಟುವಂತಿವೆ. ಇವುಗಳಲ್ಲಿ ರಾಮಾಯಣ, ಬಾಣನ 'ಕಾದಂಬರಿ' ಮತ್ತು ಕಾಳಿದಾಸನ ಕೃತಿಗಳಲ್ಲಿನ ವರ್ಣನೆಗಳು ಅವರು ಗಮನವನ್ನು ವಿಶೇಷವಾಗಿ ಸೆಳೆದವು. ಕಾಳಿದಾಸನ 'ರಘುವಂಶ'ವು ವಶಿಷ್ಠರ ತಪೋವನದ ಸುಂದರ ವರ್ಣನೆಯಿಂದಲೇ ಪ್ರಾರಂಭವಾಗುತ್ತದೆ. ಅವನ 'ಅಭಿಜ್ಞಾನ ಶಾಕುಂತಲ'ದ ಎರಡು ಅಂಶಗಳ ಕ್ರಿಯೆ ನಡೆಯುವುದು ನಾಯಕಿಯ ಸಾಕು ತಂದೆ ಕಣ್ವರ ತಪೋವನದಲ್ಲಿ.* ಈ ತಪೋವನಗಳ ದೃಶ್ಯಗಳ ನಿರೂಪಣೆ ಯಲ್ಲಿ ಕಾಳಿದಾಸನಿಗೆ ಇರುವ ತೀವ್ರ ಆಸಕ್ತಿಯು, ಅನಂತರ ಸನ್ನಿಧಿಯಿಂದ ಪೋಷಕನಾದ ಪ್ರಭುವಿನ ಆಸ್ಥಾನಕ್ಕೆ ಗಡೀಪಾರಾದುದರಿಂದ ಅವನ ಹೃದಯದಲ್ಲಿ ಮೂಡಿದ ಹಂಬಲವನ್ನು ತೋರಿಸುತ್ತದೆ ಎಂದು ಠಾಕೂರರಿಗೆ ಎನ್ನಿಸಿತು.

ಪ್ರಾಚೀನ ಭಾರತದಲ್ಲಿನ ಪಿತೃ ಪ್ರಧಾನವಾದ ಸಮುದಾಯದ ಈ ಅರಣ್ಯ ಪಾಳೆಯಗಳು ಆದಿಕಾಲದ ಸಂಸ್ಕೃತಿ ಮತ್ತು ಮನಸ್ಸುಗಳನ್ನು ಪಡೆದಿದ್ದ ಜನರ ವಸಾಹತು ಅಷ್ಟೇ ಅಲ್ಲ ಎಂದು ಅವರು ಸರಿಯಾಗಿಯೇ ಅರ್ಥಮಾಡಿಕೊಂಡರು. ಈ ತಪೋವನಗಳ ನಿಜವಾದ ಸ್ವರೂಪದ ಬಗೆಗೆ ಅವರ ಮೆಚ್ಚಿಕೆ ಅವರ ಸುಂದರ ಈ ಮಾತುಗಳಲ್ಲಿ ವ್ಯಕ್ತವಾಗಿದೆ. ಅವರು ಸತ್ಯದ ಅನ್ವೇಷಣೆಯಲ್ಲಿ ತೊಡಗಿದ್ದ ವರು. ಇದಕ್ಕಾಗಿ ಅವರು ಪರಿಶುದ್ಧವಾದ ಆದರೆ ಮಡಿವಂತಿಕೆ ಇಲ್ಲದ, ಸರಳವಾದ ಆದರೆ ದೇಹ ದಂಡನೆ ಇಲ್ಲದ ವಾತಾವರಣದಲ್ಲಿ ಬಾಳಿದರು.** ಅವರಿಗೆ ತುಂಬ ಮೆಚ್ಚಿಕೆಯಾದ ಸಂಗತಿ ಎಂದರೆ, ಅನುಸರಿಸಿದ ಜನರು "ನಿಷೇಧಾತ್ಮಕವಾದ ಸಂನ್ಯಾಸದ ವಿಚಾರ ರೀತಿಯನ್ನಲ್ಲ, ಎಲ್ಲವನ್ನೂ ಒಳಗೊಳ್ಳುವ ಗ್ರಹಿಕೆಯನ್ನು" ಎನ್ನುವುದು.***

---

* ಅವರ ಲೇಖನ, "ತಪೋವನ"

** "ರಿಲಿಜನ್ ಆಫ್ ಮ್ಯಾನ್", ದಿ ಟೀಚರ್

*** ಅದೇ

ಕಾಳಿದಾಸನಂತೆ ಮಾನಸಿಕ ದೂರೀಕರಣದ ಯಾತನೆಯನ್ನು ಅನುಭವಿಸಿದ್ದ ಠಾಕೂರರು ತಮ್ಮ ವಾಸಕ್ಕಾಗಿ ಪ್ರಾಚೀನ ತಪೋವನಗಳ ಮಾದರಿಯ ಪಾಳೆಯ ವೊಂದನ್ನು ನಿರ್ಮಿಸಿಕೊಳ್ಳಲು ಬಯಸಿದರು. ನಗರ ಜೀವನವೆಂದರೆ ಅವರಿಗೆ ಅಸಹ್ಯವಾಗಿತ್ತು ಎನ್ನುವುದು ಸ್ಪಷ್ಟ.

ಹೊಸ ಸಂಸ್ಥೆಗೆ ನಿವೇಶನದ ಆಯ್ಕೆಯಾದ ನಂತರ ಅದರ ಸ್ವರೂಪ ಹೇಗಿರ ಬೇಕು ಎಂಬ ಪ್ರಶ್ನೆ ಎದ್ದಿತು. ಅದಕ್ಕೆ ಒಂದು ವೈಶಿಷ್ಟ್ಯವಿರಬೇಕೆಂದು ಠಾಕೂರರು ನಿರೀಕ್ಷಿಸಿದರು. ಶಿಕ್ಷಣದ ವ್ಯಾಪ್ತಿಯನ್ನು ವಿಸ್ತರಿಸಬೇಕೆಂದು ಅವರು ಬಯ ಸಿದರು. ಶಿಕ್ಷಣದ ರೀತಿಯಲ್ಲೂ ಮಾರ್ಪಾಟನ್ನು ಬಯಸಿದರು. ಉದಾಹರಣೆಗೆ, ಮಿಷಿನರಿ ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣಕ್ಕೆ ಸ್ವಲ್ಪ ಮಟ್ಟಿನ ವ್ಯವಸ್ಥೆ ಇದ್ದರೂ ವಿದ್ಯಾರ್ಥಿಗಳಲ್ಲಿ ನೀತಿಯನ್ನು ಬೆಳೆಸಲು ಶಾಲೆಗಳಲ್ಲಿ ಯಾವುದೇ ವ್ಯವಸ್ಥೆ ಇರಲಿಲ್ಲ ಎಂಬುದನ್ನು ಅವರು ತೀವ್ರವಾಗಿ ಗಮನಿಸಿದ್ದರು. ಬೋಧನೆಯು ವಿದ್ಯಾರ್ಥಿಗೆ ಸಂತೋಷವನ್ನು ಆಸಕ್ತಿಯನ್ನು ಉಂಟುಮಾಡುವ ಅನುಭವವಾಗು ವಂತೆ ಬೋಧನ ಕ್ರಮವನ್ನು ರೂಪಿಸಬೇಕೆಂದು ಅವರು ಬಯಸಿದರು. ಈ ವಿಷಯವಾಗಿ ಅವರು ತುಂಬ ಶ್ರದ್ಧೆಯಿಂದ ಯೋಚನೆ ಮಾಡಿದರು. ಶಿಕ್ಷಣಕ್ಕೆ ಈ ಕೆಳಗಿನ ಲಕ್ಷಣಗಳಿರಬೇಕೆಂದು ಅವರಿಗೆ ಎನ್ನಿಸಿತು :

ಉಪಾಧ್ಯಾಯ ಮತ್ತು ವಿದ್ಯಾರ್ಥಿಯ ನಡುವೆ ನಿಕಟ ಸಂಪರ್ಕವಿರಬೇಕು. ಇದರಿಂದ ಅವರ ನಡುವೆ ವೈಯಕ್ತಿಕ ಬಾಂಧವ್ಯ ಬೆಳೆಯಲು ಸಹಾಯವಾಗುತ್ತದೆ. ಆದ್ದರಿಂದ ಶಿಕ್ಷಣ ಸಂಸ್ಥೆಯ ಆವರಣದಲ್ಲಿಯೇ ವಿದ್ಯಾರ್ಥಿಗಳು ಅಧ್ಯಾಪಕರು ವಾಸ ಮಾಡುವಂತಿರಬೇಕು ಎಂದು ಅವರು ಅಪೇಕ್ಷಿಸಿದರು. ಪ್ರಾಚೀನ ಭಾರತದಲ್ಲಿ ವಿದ್ಯಾರ್ಥಿಯು ತನ್ನ ತಂದೆತಾಯಿಗಳ ಮನೆಯನ್ನು ಬಿಟ್ಟು ಗುರುವಿನ ಕುಟುಂಬದ ರಕ್ಷಣೆಯಲ್ಲಿ ಇರುತ್ತಿದ್ದ. ಈ ಶಿಕ್ಷಣ ಪದ್ಧತಿಯನ್ನು ಮತ್ತೆ ರೂಢಿಗೆ ತರುವುದನ್ನು ಅವರು ಸಮರ್ಥಿಸಿದರು. ಈ ಕಾರಣದಿಂದ ಉಪಾಧ್ಯಾಯನು ಶಾಲೆಯ ಆವರಣ ದಲ್ಲಿ ತಾನೊಬ್ಬನೇ ವಾಸ ಮಾಡಬಾರದು. ಅವನು ಸಂಸಾರದೊಡನೆ ವಾಸಿಸ ಬೇಕು ಎಂದು ಅವರು ಒತ್ತಿ ಹೇಳಿದರು. ವಿದ್ಯಾರ್ಥಿಗಳು ಉಪಾಧ್ಯಾಯರ ಜೊತೆಗೇ ವಾಸ ಮಾಡುವುದಕ್ಕೆ ರೂಢಿಯಲ್ಲಿ ಅಡ್ಡಿಗಳಿರುತ್ತವೆ. ಆದ್ದರಿಂದ ಅವರು ವಿದ್ಯಾರ್ಥಿನಿಲಯಗಳಲ್ಲಿ ವಾಸ ಮಾಡುವರು.*

* "ಶಿಕ್ಷಾ ಸಮಸ್ಯೆ"

ಪ್ರಾಚೀನ ಪದ್ಧತಿಯು ವಿದ್ಯಾರ್ಥಿಯು ತನ್ನ ಶಿಕ್ಷಣದ ಕಾಲದಲ್ಲಿ ಬ್ರಹ್ಮ ಚರ್ಯವನ್ನು ಆಚರಿಸಬೇಕೆಂದು ವಿಧಿಸಿತ್ತು. ಹೀಗೆಂದರೆ ಆ ಸಂದರ್ಭದಲ್ಲಿ ಶಿಸ್ತಿನ ಜೀವನ ಎಂದರ್ಥ. ತಮ್ಮ ಶಾಲೆಯಲ್ಲೂ ಈ ಪದ್ಧತಿಯನ್ನು ಮತ್ತೆ ಆಚರಣೆಗೆ ತರಬೇಕೆಂದು ಠಾಕೂರರು ನಿರ್ಧರಿಸಿದರು. ಈ ವ್ಯವಸ್ಥೆಯನ್ನು ಮೆಚ್ಚಿ ಅವರು ಹೀಗೆನ್ನುತ್ತಾರೆ : "ಈ ಕಾರ್ಯಕ್ರಮದ ಗುರಿಯನ್ನು ಗಮನ ದಲ್ಲಿಟ್ಟುಕೊಂಡ ನಮ್ಮ ಗುರುಗಳು ಶಿಕ್ಷಣದ ಮೊದಲ ಹಂತದಲ್ಲಿ ಪುಸ್ತಕಗಳನ್ನು ವಿಷಯಗಳನ್ನು ಅಭ್ಯಾಸ ಮಾಡುವದಷ್ಟನ್ನು ವಿಧಿಸಲಿಲ್ಲ. ಬ್ರಹ್ಮಚರ್ಯವನ್ನು ಎಂದರೆ ಶಿಸ್ತಿನ ಜೀವನವನ್ನು ವಿಧಿಸಿದರು. ಇದರಿಂದ ಶಕ್ತಿಯನ್ನು ಪಡೆದು ಕೊಂಡ ಸ್ವಭಾವಕ್ಕೆ ಸುಖಾನುಭವದಷ್ಟೆ ಸಂನ್ಯಾಸವೂ ಸುಲಭವಾಗುತ್ತದೆ.*

ಠಾಕೂರರು ಈ ಕ್ರಮವನ್ನು ವಿಧಿಸಿದ್ದು ವೈರಾಗ್ಯ ಜೀವನದಲ್ಲಿನ ಅಭಿಮಾನ ದಿಂದಲ್ಲ ಎನ್ನುವುದನ್ನು ಮೇಲಿನ ಮಾತುಗಳು ತೋರಿಸುತ್ತವೆ. ವೈರಾಗ್ಯ ಜೀವನದ ಕಾಠಿಣ್ಯಕ್ಕಾಗಿಯೇ ಅದನ್ನು ಅವರು ಮೆಚ್ಚಿಕೊಳ್ಳಲಿಲ್ಲ. ಏಕೆಂದರೆ ಇದು ಸಂಪೂರ್ಣವಾಗಿ ಋಣಾತ್ಮಕ ಮನೋಧರ್ಮ ಎಂದು ಅವರ ಭಾವನೆಯಾಗಿತ್ತು. ಕೃಷಿಗಾರ ತನ್ನಭೂಮಿಯನ್ನು ಉಳುವುದು ಅದನ್ನು ಬಂಜರನ್ನಾಗಿ ಬಿಡುವುದಕ್ಕಲ್ಲ. ಆದರೆ ಬೆಳೆಯನ್ನು ಬೆಳೆಯುವುದಕ್ಕೆ ಎಂದು. ಅವರ ಬ್ರಹ್ಮಚರ್ಯವನ್ನು ಬಾಳಿನ ಮೊದಲ ಹಂತವನ್ನಾಗಿ ರೂಪಿಸಿದ್ದು ವಿದ್ಯಾರ್ಥಿಯಲ್ಲಿ ಶಿಸ್ತಿನ ಪ್ರಜ್ಞೆ ಬೆಳೆದು ನಿಜವಾದ ಶಿಕ್ಷಣದ ಸಿದ್ಧತೆಯಾಗಲಿ ಎನ್ನುವುದಕ್ಕಾಗಿ ಎಂದು ಅವರ ಮತ.

ಶಿಸ್ತು ಮತ್ತು ಶಾಲೆಯ ಆವರಣದಲ್ಲೇ ವಾಸಿಸುವ ವ್ಯವಸ್ಥೆ ಒಂದಕ್ಕೊಂದು ಪೂರಕ. ಆದ್ದರಿಂದ ಎರಡನ್ನೂ ಒಟ್ಟಿಗೆ ಆಚರಣೆಗೆ ತರಬೇಕು ಎಂದು ಅವರ ಅಭಿಪ್ರಾಯ. ತರಗತಿಗಳಲ್ಲಿ ಉಪನ್ಯಾಸ ಮಾಡುವುದರಿಂದ ಅಥವಾ ವಿದ್ಯಾರ್ಥಿಗೆ ಉಪದೇಶವನ್ನು ಮುಟ್ಟಿಸುವುದರಿಂದ ನೈತಿಕ ಶಿಕ್ಷಣವನ್ನು ಪರಿಸರದಿಂದ ಹೀರಿ ಕೊಳ್ಳುವಂತಾಗಬೇಕು. ವಿದ್ಯಾರ್ಥಿಯ ಸ್ವಭಾವವನ್ನು ಪರಿಣಾಮಕಾರಿಯಾಗಿ ರೂಪಿಸುವುದು ಉಪಾಧ್ಯಾಯನ ನಡತೆ ಮತ್ತು ಅವನ ಕೆಲಸಕಾರ್ಯಗಳ ನೈತಿಕ ಗುಣ.

ವಿದ್ಯಾರ್ಥಿಯು ರೂಪುಗೊಳ್ಳುತ್ತಿರುವ ಈ ಹಂತದಲ್ಲಿ ಅವನು ಸಾಮಾನ್ಯ

* 'ರಿಲಿಜನ್ ಆಫ್ ಮ್ಯಾನ್', ದಿ ಫೋರ್ ಸ್ಟೇಜಸ್ ಆಫ್ ಲೈಫ್

ಜೀವನದ ಹೊಡೆತಗಳಿಗೆ ಸಿಕ್ಕಿಕೊಳ್ಳಬಾರದೆಂದು ಅವರಿಗೆ ಎನ್ನಿಸಿತ್ತು. ಕೀಳು ಮಟ್ಟದ ಸ್ವಭಾವದ ಜನರ ನಡತೆಯು ಎಳೆಯ ಮನಸ್ಸುಗಳ ಮೇಲೆ ಕೆಟ್ಟ ಪರಿಣಾಮವನ್ನುಂಟು ಮಾಡುವ ಮತ್ತು ಅದರಲ್ಲಿ ಅಕಾಲದಲ್ಲಿ ಅಯೋಗ್ಯ ಬಯಕೆಗಳನ್ನು ಪ್ರಚೋದಿಸುವ ಸಾಧ್ಯತೆಯಿದೆ.* ಮೇಯುವ ಪ್ರಾಣಿಗಳು ಮಾಡುವ ಹಾನಿಯಿಂದ ಸೂಕ್ಷ್ಮವಾದ ಗಿಡಕ್ಕೆ ರಕ್ಷಣೆಯು ಅಗತ್ಯವಿರುವಂತೆಯೇ ಎಳೆಯ ಮನಸ್ಸುಗಳನ್ನು ಇಂತಹ ಜನರಿಂದ ದೂರಕ್ಕಿಡುವುದೂ ಅಗತ್ಯ. ಅಲ್ಲದೆ ಶಿಸ್ತಿನ ಜೀವನವು ಅವರಲ್ಲಿ ಆತ್ಮಸಂಯಮದ ವ್ಯವಸ್ಥೆಯನ್ನು ಬೆಳೆಸುತ್ತದೆ. ಇದರಿಂದ ಅನಂತರದ ಜೀವನದಲ್ಲಿ ಇತರರ ಅಯೋಗ್ಯ ಕಾರ್ಯಗಳ ಸಾಮೀಪ್ಯ ವನ್ನು ಎದುರಿಸಲು ಅವರಿಗೆ ಸಾಧ್ಯವಾಗುತ್ತದೆ.

ಇದೂ ಸಹ ನಮ್ಮ ದೇಶದ ಪ್ರಾಚೀನ ಶಿಕ್ಷಣ ವ್ಯವಸ್ಥೆಯು ಸ್ವೀಕರಿಸಿದ್ದ ಆದರ್ಶಗಳಿಗೆ ಅನುಗುಣವಾಗಿಯೇ ಇದೆ. 'ತೈತ್ತಿರೀಯ ಉಪನಿಷತ್ತು' ಗುರುವು ವಿದ್ಯಾರ್ಥಿಗೆ ಸನ್ನಡತೆಯನ್ನು ಕುರಿತು ಬೋಧಿಸುವುದು ಮಾತ್ರವಲ್ಲ, ತನ್ನ ಕಾರ್ಯಗಳಿಂದ ಮೇಲ್ಪಂಕ್ತಿಯನ್ನು ಹಾಕಿಕೊಡಬೇಕು ಎಂದು ವಿಧಿಸುತ್ತದೆ. ಗುರುವಿನ ನಡತೆಯಲ್ಲಿ ಯೋಗ್ಯವಾದದ್ದನ್ನು ಮಾತ್ರ ಶಿಷ್ಯನು ಅನುಕರಿಸ ಬೇಕೆಂದೂ ಹೇಳುತ್ತದೆ. ಗುರುವಿಗೆ ಕೊಟ್ಟಿರುವ 'ಆಚಾರ್ಯ' ಎಂಬ ಅಭಿದಾ ನಕ್ಕೆ ಪರಿಶುದ್ಧ ಆಚರಣೆಯ ಮನುಷ್ಯ ಎಂದು ಅರ್ಥ.

ಪ್ರಾಚೀನ ಗುರುಕುಲಗಳಂತೆ ವಿದ್ಯಾಸಂಸ್ಥೆಗೆ ಗ್ರಾಮೀಣ ಪರಿಸರವಿರಬೇ ಕೆಂದು ತಾವು ಒತ್ತಾಯ ಮಾಡುವುದನ್ನು ಆಧುನಿಕ ವಿಚಾರ ರೀತಿಯ ಶಿಕ್ಷಣ ತಜ್ಞರು ತಾತ್ಸಾರದಿಂದ ಕಾಣುತ್ತಾರೆ ಎನ್ನುವ ಸಂಗತಿ ಠಾಕೂರರಿಗೆ ತಿಳಿದಿತ್ತು. ಅದನ್ನು ಆ ತಜ್ಞರು ಅನುಭವ ಎಂದು ಕರೆಯುತ್ತಿದ್ದರು. ಅದರ ಮೂಲ ಭಾವತಿರೇಕದಷ್ಟೇ ವಿವೇಚನೆಯಲ್ಲ ಎಂದು ಭಾವಿಸುತ್ತಿದ್ದರು.** ಆದರೆ ಠಾಕೂರರು ತಮ್ಮ ಅಭಿಪ್ರಾಯಕ್ಕೆ ಗಟ್ಟಿಯಾದ ವಿವೇಚನೆಯ ತಳಹದಿ ಇತ್ತು ಎಂದು ಪ್ರಾಮಾಣಿಕವಾಗಿ ನಂಬಿದ್ದರು. ನಿಸರ್ಗದ ಮಡಿಲಲ್ಲಿ, ಹಬ್ಬಿದ ಆಗಸದ ಅಡಿಯಲ್ಲಿ ಬಾಳುವುದು ಬೆಳೆಯುವ ಮಗುವಿನ ದೇಹಕ್ಕೂ ಮನಸ್ಸಿಗೂ ಒಳ್ಳೆಯದು

---

* "ಶಿಕ್ಷಾ ಸಮಸ್ಯ"

** ಅದೇ

ಎಂದು ಅವರು ವಾದಿಸಿದರು. ಅವರ ಅಭಿಪ್ರಾಯಕ್ಕೆ ಇಷ್ಟೇ ಸಮರ್ಥನೆಯಲ್ಲ. ಇನ್ನೂ ಇದೆ. ನಗರ ಜೀವನ ಮಾನವನ ಚರಿತ್ರೆಯಲ್ಲಿ ಹೊಸ ಬೆಳವಣಿಗೆ. ಆತನ ಕಾರ್ಯರೂಪ ಜೀವನದ ಅಗತ್ಯಗಳನ್ನು ಪೂರೈಸಲು ಅದು ಬೆಳೆದು ಬಂದಿತು. ಆರ್ಥಿಕ ಮೌಲ್ಯಗಳ ವಿನಾ ಬೇರೆಲ್ಲ ಮೌಲ್ಯಗಳ ವಿಷಯದಲ್ಲಿ ಅದರ ದಿವ್ಯ ನಿರ್ಲಕ್ಷ್ಯವು ನಗರ ಜೀವನದಲ್ಲಿ ಎಂತಹ ಕೃತಕ ವಾತಾವರಣವನ್ನು ನಿರ್ಮಿಸುತ್ತದೆ ಎಂದರೆ ಅಲ್ಲಿ ಬದುಕುವವರು ನಿಸರ್ಗಕ್ಕೆ ಅಪರಿಚಿತರಾಗುತ್ತಾರೆ, ಅದರ ಆಪ್ಯಾಯಮಾನ ಸ್ಪರ್ಶದಿಂದ ವಂಚಿತರಾಗುತ್ತಾರೆ. ಠಾಕೂರರ ಅಭಿಪ್ರಾಯದಲ್ಲಿ, ಬೆಳೆಯುತ್ತಿರುವ ಮಗುವಿನ ಮಟ್ಟಿಗಾದರೂ ಆ ವಾತಾವರಣವು ಅಹಿತಕಾರಿಯಾದದ್ದು. ಅದರ ಚೇತನದ ಬೆಳವಣಿಗೆಗೆ ಅಡ್ಡಿ ಮಾಡುವಂತಹದು. ಆದ್ದರಿಂದ ಬೆಂಚುಗಳು, ಕರಿ ಹಲಗೆಗಳಂತಹ ಸಾಧನಗಳಿಗಿಂತ ಮುಖ್ಯವಾದದ್ದು ಗ್ರಾಮೀಣ ಆವರಣ.*

ಆಶ್ರಮದಲ್ಲಿ ವಾಸಿಸುವ ವಿದ್ಯಾರ್ಥಿಗಳಿಗೆ ಸಂಸ್ಥೆಯ ನಿರ್ವಹಣೆಯಲ್ಲಿ ಭಾಗವಹಿಸಲು ಪ್ರೋತ್ಸಾಹ ನೀಡಬೇಕೆಂಬುದನ್ನು ಒಂದು ಮಾರ್ಗದರ್ಶಕ ಸೂತ್ರವನ್ನಾಗಿ ಅವರು ಸ್ವೀಕರಿಸಿದರು. ಉದಾಹರಣೆಗೆ, ಶಾಲೆಯ ಆವರಣವನ್ನು ಸ್ವಚ್ಛವಾಗಿಡುವುದು, ತೋಟವನ್ನು ರೂಪಿಸುವುದು, ಅಲ್ಲದೆ ವಿದ್ಯಾರ್ಥಿನಿಲಯದ ನಿರ್ವಹಣೆಯಲ್ಲಿ ದಿನನಿತ್ಯದ ಕೆಲಸಗಳು–ಇವನ್ನು ಅವರಿಗೆ ವಹಿಸಬಹುದು. ಇದರಿಂದ ಅವರ ಹೆಚ್ಚಿನ ಚೈತನ್ಯದ ಬಳಕೆಗೆ ದಾರಿಯಾಗುವುದು ಮಾತ್ರವಲ್ಲ, ಅವರ ಶೀಲವನ್ನು ಹಲವು ರೀತಿಗಳಲ್ಲಿ ರೂಪಿಸುತ್ತದೆ. ಶಾಲೆಯ ಪ್ರದೇಶವಲ್ಲಿ ಆರೋಗ್ಯಕರವಾದ ಸೊಗಸಾದ ವಾತಾವರಣವನ್ನು ನಿರ್ಮಿಸುವ ಪ್ರಯತ್ನದಲ್ಲಿ ಅವರಿಗೆ ಸೃಜನಶೀಲ ಪ್ರಯತ್ನದಲ್ಲಿ ಭಾಗವಹಿಸಿದ ಸಂತೋಷ ಉಂಟಾಗುತ್ತದೆ. ಅದರೊಂದೇ ಅವರ ಸೌಂದರ್ಯ ಪ್ರಜ್ಞೆಯೂ ಬೆಳೆಯುತ್ತದೆ. ವಿದ್ಯಾರ್ಥಿನಿಲಯವನ್ನು ನಡೆಸುವಾಗ ಅವರೂ ಭಾಗವಹಿಸಿ ಕೆಲಸ ಮಾಡುತ್ತಾರೆ. ಅದು ತಮ್ಮದು ತಾವು ಅದಕ್ಕೆ ಸೇರಿದವರು ಎಂಬ ಭಾವನೆಯನ್ನು ಮೂಡಿಸುತ್ತದೆ. ಜವಾಬ್ದಾರಿಯ ಅರಿವು ಮಾತ್ರವಲ್ಲ, ಸಂಸ್ಥೆಯ ಸೇವೆಯಲ್ಲಿ ಸಹಕಾರದಿಂದ ಶ್ರಮಿಸುವುದರಲ್ಲಿ ಆಸಕ್ತಿ ಬೆಳೆಯುತ್ತದೆ.

* 'ಶಿಕ್ಷಾ ಸಮಸ್ಯ'

ಈ ಅಭಿಪ್ರಾಯಗಳಲ್ಲಿ ಠಾಕೂರರು ಪ್ರಾಚೀನ ಅರಣ್ಯ ಪಾಳೆಯಂಗಳ ಮೇಲ್ಪಂಕ್ತಿಯಿಂದ ಪ್ರಭಾವಿತರಾದಂತೆ ಕಾಣುತ್ತದೆ. ಸಂಸ್ಕೃತ ಭಾಷೆಯಲ್ಲಿನ ಗದ್ಯ ರಮ್ಯ ಕಥೆಯಾದ, 'ಕಾದಂಬರಿ' ಯಲ್ಲಿನ ಒಂದು ತಪೋವನದ ವರ್ಣನೆಯನ್ನು ಪ್ರಸ್ತಾಪಿಸಿ ಅವರು, "ಕಂದು ಬಣ್ಣದ ಹಸುಗಳು ಗೋಶಾಲೆಗೆ ಹಿಂದಿರುಗುವಂತೆ, ಸಂಜೆಯು ಆಶ್ರಮದ ಮೇಲೆ ಇಳಿಯುತ್ತಾ ಇದೆ. ಇದು ನನಗೆ ನೆನಪು ಕೊಡುತ್ತಿದೆ ಹಸುಗಳನ್ನು ಮೇಯಿಸುವುದು, ಹಾಲು ಕರೆಯುವುದು, ಹೋಮಕ್ಕಾಗಿ ಸೌದೆಯನ್ನು ಸಂಗ್ರಹಿಸುವುದು, ಅತಿಥಿಗಳ ಉಪಚಾರ, ಹೋಮ ವೇದಿಕೆಯ ರಚನೆ ಇವೆಲ್ಲ ಆಶ್ರಮದ ಹುಡುಗ ಹುಡುಗಿಯರ ನಿತ್ಯದ ಕೆಲಸಗಳ ಒಂದು ಭಾಗ. ಇಂತಹ ಚಟುವಟಿಕೆಗಳಿಂದ ಅವರ ಜೀವನವು ಆಶ್ರಮದ ಸಮಗ್ರ ಜೀವನದಲ್ಲಿ ಗಾಢವಾಗಿ ಸೇರಿಕೊಳ್ಳುತ್ತದೆ. ಹೀಗೆ ಆಶ್ರಮ ನಿವಾಸಿಗಳು ಒಟ್ಟಿಗೆ ಮಾಡುವ ಕೆಲಸಕಾರ್ಯಗಳಿಂದ ಸದಾ ಆಶ್ರಮವನ್ನಾವರಿಸಿರುವ ಸ್ನೇಹದ ವಾತಾವರಣವನ್ನು ತಮ್ಮ ಕೈಗಳಿಂದಲೇ ನಿರ್ಮಿಸುತ್ತಾರೆ. ಇಂತಹ ಸದಾ ಚೈತನ್ಯಮಯವಾದ ಸಹಕಾರೀ ಚಟುವಟಿಕೆಗಳು ನಮ್ಮ ಆಶ್ರಮದಲ್ಲಿ ಪುನರ್ಜನ್ಮ ತಾಳಬೇಕೆಂದು ನನ್ನ ಬಯಕೆ."*

ತರಗತಿಗಳು ಬಯಲಿನಲ್ಲಿ ನಡೆಯಬೇಕೆಂದೂ ಠಾಕೂರರು ಬಯಸಿದರು. ಈ ವಿಷಯದಲ್ಲಿ ಅವರಿಗೆ ಹಠಮಾರಿತನವೂ ಇರಲಿಲ್ಲ, ಮತ್ತು ವಿದ್ಯಾರ್ಥಿಗಳು ಬೆಂಚಿನ ಮೇಲೆ ಯಾವಾಗಲೂ ಕುಳಿತುಕೊಳ್ಳಲೇಬಾರದು ಎನ್ನುವ ಭಾವನೆಯೂ ಇರಲಿಲ್ಲ. ಮಿತಿಯಲ್ಲಿ ಈ ಪದ್ಧತಿಯನ್ನು ಅವರು ಸಮರ್ಥಿಸಿದ್ದು ಎರಡು ಕಾರಣಗಳಿಗಾಗಿ. ಮೊದಲನೆಯದಾಗಿ, ಇಂತಹ ಬಯಲು ತರಗತಿಗಳಿಂದ ನಿಸರ್ಗದೊಡನೆ ಇನ್ನೂ ನಿಕಟವಾದ ಸಂಪರ್ಕ ಬೆಳೆಯುತ್ತದೆ. ಇದರಿಂದ ಶಿಕ್ಷಣಕ್ಕೆ ಅನೌಪಚಾರಿಕ ಸ್ವರೂಪವು ಬಂದು ಸಂತೋಷಕರವಾಗುತ್ತದೆ. ಅನುಕೂಲಕರವಾದ ಋತುಗಳಲ್ಲಿ ನೆರಳು ನೀಡುವ ಮರಗಳ ಕೆಳಗೆ ತರಗತಿಗಳನ್ನು ನಡೆಸಬೇಕೆಂದು ಅವರು ಶಿಫಾರಸು ಮಾಡಿದರು. ವಿದ್ಯಾರ್ಥಿಗಳೊಡನೆ ಮರಗಳ ಕೆಳಗೆ ಓಡಾಡುತ್ತ ಸಹ ಉಪಾಧ್ಯಾಯರು ಪಾಠವನ್ನು ನಡೆಸಬಹುದು. ಸಂಗೀತದ ಪಾಠ ಮತ್ತು ಪುರಾಣದ ಕಥೆಗಳನ್ನು ಹೇಳುವುದು ಸಂಜೆಯ ಹೊತ್ತು. ಆಕಾಶದ ಮೇಲ್ಛಾವಣಿಯ ಅಡಿಯಲ್ಲಿ ನಡೆಯಬಹುದು. ಖಗೋಳ ವಿಜ್ಞಾನವನ್ನು ರಾತ್ರಿಯ

---

* ಆಶ್ರಮ ಶಿಕ್ಷಾ

ಹೊತ್ತು, ಮೇಲೆ ವಿಶಾಲವಾಗಿ ಕಣ್ಣ ಮುಂದೆ ಹಬ್ಬಿರುವ ಆಗಸದಲ್ಲಿ ನಕ್ಷತ್ರಗಳೂ ನಕ್ಷತ್ರಪುಂಜಗಳೂ ಹರಡಿಕೊಂಡಿರುವಾಗ. ಸೊಗಸಾಗಿ ಅಧ್ಯಯನ ಮಾಡಬಹುದು. ಈ ವಿಷಯದಲ್ಲಿ ಅವರಿಗೆ. ತಾವು ಹಿಮಾಲಯದ ಪ್ರದೇಶದಲ್ಲಿ ತಂದೆಯವರೊಡನೆ ಇದ್ದಾಗ ಪಡೆದ ಇಂತಹ ಪಾಠಗಳ ಅನುಭವವೇ ಮಾರ್ಗದರ್ಶನ ಮಾಡಿತೆಂಬುದು ಸ್ಪಷ್ಟವಾಗಿದೆ.

ಬಯಲಿನಲ್ಲಿ ತರಗತಿಗಳು ನಡೆಯಬೇಕೆಂಬ ಅಭಿಪ್ರಾಯವನ್ನು ಸಮರ್ಥಿಸುವಲ್ಲಿ ಅವರ ಮನಸ್ಸಿನಲ್ಲಿ ಮತ್ತೊಂದು ಯೋಚನೆಯೂ ಇದ್ದಂತೆ ಕಾಣುತ್ತದೆ. ಹೀಗೆ ಮಾಡುವುದರಿಂದ ಶಿಕ್ಷಣವು ದುಬಾರಿಯಾಗುವುದಿಲ್ಲ. ಕುರ್ಚಿ ಮೇಜು, ಬೆಂಚುಗಳಂತಹ ಸಾಮಗ್ರಿಗಳು ಬೇಕೆಂಬ ಬೇಡಿಕೆಗೆ ಅವುಗಳು ನಿಜವಾಗಿ ಅಗತ್ಯ ಎನ್ನುವುದಕ್ಕಿಂತ ಪಾಶ್ಚಾತ್ಯ ಜೀವನ ರೀತಿಯ ಅನುಕರಣೆಯ ಹುಚ್ಚೇ ಇದಕ್ಕೆ ಕಾರಣ ಎಂದು ಅವರು ಪ್ರತಿಪಾದಿಸಿದರು.* ನಮ್ಮದು ಬಡದೇಶ, ಇಂತಹ ಖರ್ಚನ್ನು ನಾವು ಹೊರಲಾರೆವು. ನಮ್ಮದು ಯಾವ ರೀತಿಯಲ್ಲೂ ಅತಿಯಲ್ಲದ ಹವಾಗುಣ. ಆದ್ದರಿಂದ ನಾವು ನೆಲದ ಮೇಲೆ ಕುಳಿತುಕೊಳ್ಳಬಹುದು. ಬೇಸಿಗೆಯಲ್ಲಂತೂ ಕೊಠಡಿಯೊಳಗೆ ನಡೆಯುವ ತರಗತಿಗಳಿಗಿಂತ ಬಯಲು ತರಗತಿಗಳಿಂದಲೇ ಹೆಚ್ಚಿನ ಸಂತೋಷ,

ಬ್ರಹ್ಮಚರ್ಯ ಆಶ್ರಮವು 1901 ರ ಡಿಸೆಂಬರ್ 22 ರಂದು ಶಾಂತಿನಿಕೇತನದಲ್ಲಿ ಪ್ರಾರಂಭವಾಯಿತು. ಕವಿಯ ಮಗ ರತೀಂದ್ರನಾಥನೂ ಸೇರಿದಂತೆ ಐವರು ವಿದ್ಯಾರ್ಥಿಗಳು. ಈ ಸಂಸ್ಥೆಯನ್ನು ಮೊದಲು ಸೇರಿದ ಉಪಾಧ್ಯಾಯರೆಂದರೆ, ಸಿಂಧೀ ವಿದ್ವಾಂಸ ರೇವಾಚಂದ್ ಮತ್ತು ಷೆಲಿದಾದಲ್ಲಿ ಖಾಸಗಿ ಉಪಾಧ್ಯಾಯನಾಗಿ ರತೀಂದ್ರನಾಥನಿಗೆ ಸಂಸ್ಕೃತಹೇಳಿಕೊಡುತ್ತಿದ್ದ ಶಿವದಾನ ವಿದ್ಯಾರ್ಣವ. ಆದರೆ ಸಂಸ್ಥೆಗೆ ಮುಖ್ಯ ಆಧಾರವಾದವನೆಂದರೆ ವರ್ಣರಂಜಿತ ವ್ಯಕ್ತಿಯೊಬ್ಬ. ಆತ ಬ್ರಹ್ಮಬಾಂಧವ ಉಪಾಧ್ಯಾಯ ಎಂಬ ಹೆಸರಿನ್ನಿಟ್ಟುಕೊಂಡಿದ್ದ. ಮೊದಲು ಅವನ ಹೆಸರು ಭವಾನೀಚರಣ ಬ್ಯಾನರ್ಜಿ. ಯೌವನದ ಪ್ರಾರಂಭದಲ್ಲಿ ಆತ ಕೇಶವಚಂದ್ರ ಸೇನರಿಂದ ಆಕರ್ಷಿತನಾದ. ಅನಂತರ ರೋಮನ್ ಕ್ಯಾಥಲಿಕ್ ಕ್ರೈಸ್ತನಾದ. ಆತನದು ಬಹು ಲವಲವಿಕೆಯ ಸ್ವಭಾವ. ಅಲ್ಲದೆ ಉನ್ನತ

* ಶಿಕ್ಷಾ ಸಮಸ್ಯ

ದೇಶಾಭಿಮಾನದ ಭಾವನೆಗಳಿದ್ದವು. ಪ್ರಾಚೀನ ಪರಂಪರೆಯನ್ನು ಕುರಿತು ಆತನಿಗೆ ತುಂಬಾ ಗೌರವ. ಆತ ಸಂಸ್ಥೆಯನ್ನು ನಿರ್ವಹಿಸಲು ಮುಂದೆ ಬಂದ. ತಾವು ಆತನಿಗೆ ತುಂಬಾ ಕೃತಜ್ಞರಾಗಿರಬೇಕೆಂದು ಠಾಕೂರರಿಗೆ ಅನ್ನಿಸಿದುದರಲ್ಲಿ ಆಶ್ಚರ್ಯ ವೇನಿಲ್ಲ.*

ಹೊಸ ಸಂಸ್ಥೆಯ ಸ್ಥಾಪನೆಗೆ ಬಹು ಸ್ವಲ್ಪ ಕಾಲ ಮೊದಲು ಪ್ರಕಟವಾದ ಠಾಕೂರರ ಕವನ ಸಂಗ್ರಹ 'ನೈವೇದ್ಯ' ಉಪಾಧ್ಯಾಯನನ್ನು ಠಾಕೂರರತ್ತ ಆಕರ್ಷಿಸಿತು. ಈ ಸಂಗ್ರಹ ಅವರ ಕಾವ್ಯಕ್ಕೆ ಹೊಸ ಲಕ್ಷಣಗಳನ್ನು ಜೋಡಿಸಿತು. ಬಹು ಮಟ್ಟಿಗೆ ಸುನಿತಗಳ ರೂಪದಲ್ಲಿ ಇರುವ ಈ ಕವನಗಳು ಗಂಭೀರ ವಿಷಯ ಗಳನ್ನು ಕುರಿತವು. ಈ ಪೈಕಿ ಮುಖ್ಯವಾಗಿ ಆಸಕ್ತಿಯನ್ನುಂಟು ಮಾಡುವುದೆಂದರೆ ದೇವರು, ಭಾರತವನ್ನು ಕುರಿತ ಭಕ್ತಿಯ ಭಾವನೆಗಳು ಮತ್ತು ಭಾರತದ ಪ್ರಾಚೀನ ಸಂಸ್ಥೆಗಳನ್ನು ಮತ್ತು ಸಂಸ್ಕೃತಿಯನ್ನು ಕುರಿತ ಗಾಢ ಮೆಚ್ಚುಗೆ, ಶಂಕರರ ಅದ್ವೈತ ವೇದಾಂತದ ವಿರುದ್ಧ ವಾದಗಳು ಸೇರಿದಂತೆ ತತ್ತ್ವಶಾಸ್ತ್ರಕ್ಕೆ ಸಂಬಂಧಿಸಿದ ವಿಷಯ ಗಳೂ ಇಲ್ಲಿದ್ದವು. ಈ ಕವನಗಳ ಹೊಸ ಮನೋಧರ್ಮವೇ ಉಪಾಧ್ಯಾಯನ ಗಮನವನ್ನು ಸೆಳೆದುದ್ದು. ತಾನೇ ಸಂಪಾದಕನಾಗಿದ್ದ 'ಟ್ವೆಂಟಿಯತ್ ಸೆಂಚುರಿ' ಎಂಬ ಪತ್ರಿಕೆಯಲ್ಲಿ ಅದನ್ನು ಮೆಚ್ಚಿಕೊಂಡು ಒಂದು ಪುಸ್ತಕ ವಿಮರ್ಶೆಯನ್ನು ಸಹ ಪ್ರಕಟಿಸಿದ.

ಕೆಲಕಾಲ ಉಪಾಧ್ಯಾಯನು ಬ್ರಹ್ಮಚರ್ಯಾಶ್ರಮವನ್ನು ಉತ್ಸಾಹದಿಂದಲೂ ದಕ್ಷತೆಯಿಂದಲೂ ನೋಡಿಕೊಂಡ. ಠಾಕೂರರನ್ನು ಗುರುದೇವ** ಎಂದು ಕರೆಯುವ ಅಭ್ಯಾಸವನ್ನು ಪ್ರಾರಂಭಿಸಿದವನು ಅವನೇ. ಈ ಹೆಸರು ಎಷ್ಟರ ಮಟ್ಟಿಗೆ ರೂಢಿಗೆ ಬಂದು ಬಿಟ್ಟಿತೆಂದರೆ ಆಗಿನಿಂದ ಶಾಂತಿನಿಕೇತನದ ವಿದ್ಯಾರ್ಥಿಗಳಿಗೆ ಅವರು ಗುರುದೇವ ಎಂದೇ ಪರಿಚಿತರು. ಮಹಾತ್ಮ ಗಾಂಧಿಯವರೂ ಠಾಕೂರ ರನ್ನು ಹೀಗೆಯೇ ಕರೆಯಲು ಇಷ್ಟ ಪಟ್ಟರು.

ಆದರೆ ಉಪಾಧ್ಯಾಯನು ಶಾಂತಿನಿಕೇತನದಲ್ಲಿ ಹೆಚ್ಚುಕಾಲ ನಿಲ್ಲಲಿಲ್ಲ. ಕ್ರಿಯಾ

---

* ಆಶ್ರಮೇರ್ ರೂಪ್ ಓ ವಿಕಾಸ್, 3

** 'ಅಜಿತ್ ಕುಮಾರ ಚಕ್ರವರ್ತಿ', 'ಬ್ರಹ್ಮಾ ವಿದ್ಯಾಲಯ',

ಶೀಲ ರಾಜಕೀಯದಲ್ಲಿ ತೊಡಗುವ ಬಯಕೆ ಆತನಲ್ಲಿ ಎಷ್ಟು ಬಲವತ್ತರವಾಯಿ ತೆಂದರೆ ಶಾಂತಿನಿಕೇತನದಲ್ಲಿನ ತನ್ನ ಕೆಲಸವನ್ನೇ ಬಿಡಬೇಕಾಯಿತು.

ಸ್ವಲ್ಪ ಕಾಲದಲ್ಲಿ ಸಂಸ್ಥೆ ಇನ್ನೂ ಕೆಲವರು ಬುದ್ಧಿವಂತ ಮತ್ತು ಆದರ್ಶ ಪ್ರಿಯ ತರುಣರನ್ನು ಆಕರ್ಷಿಸಿತು. ಇವರು ವೈಯಕ್ತಿಕವಾಗಿ ಸಾಕಷ್ಟು ತ್ಯಾಗ ಮಾಡಿಯೇ ಸೇವೆ ಸಲ್ಲಿಸಲು ಮುಂದಾದರು. ಅವರಲ್ಲಿ ಒಬ್ಬರು ಅಜಿತ ಕುಮಾರ ಚಕ್ರವರ್ತಿ. ಆತ ಇಂಗ್ಲೀಷ್ ಸಾಹಿತ್ಯವನ್ನೂ ತತ್ತ್ವ ಶಾಸ್ತ್ರವನ್ನೂ ಚೆನ್ನಾಗಿ ಅಭ್ಯಾಸ ಮಾಡಿದ್ದನು. ಆತ ಯಶಸ್ವೀ ಅಧ್ಯಾಪಕನಾದದ್ದು ಮಾತ್ರವಲ್ಲ, ಠಾಕೂರರ ಬರಹವನ್ನು ಕುರಿತು ನೆಚ್ಚಬಲ್ಲ ವ್ಯಾಖ್ಯಾನಕಾರನೂ ಆದನು. ಹೀಗೆ ಅವನು ಈ ಸಂಸ್ಥೆಗೆ ಒಂದು ಆಸ್ತಿಯೇ ಆದನು.

ಅಜಿತ ಕುಮಾರ ಚಕ್ರವರ್ತಿಯ ಮೂಲಕ ಠಾಕೂರರಿಗೆ ಸತೀಶ ಚಂದ್ರ ರಾಯ್ ಎಂಬ ಮತ್ತೊಬ್ಬ ಬುದ್ಧಿವಂತ ತರುಣನ ಪರಿಚಯವಾಯಿತು. ಆತ ಬಡ ಕುಟುಂಬದಿಂದ ಬಂದವನು. ಬಿ.ಎ. ಪರೀಕ್ಷೆಗೆ ಕುಳಿತುಕೊಳ್ಳಲಿದ್ದ. ಆತ ಪರೀಕ್ಷೆಯಲ್ಲಿ ಉತ್ತೀರ್ಣನಾಗುತ್ತಾನೆ, ಒಂದು ನೌಕರಿ ಪಡೆದು ಕುಟುಂಬಕ್ಕೆ ಹಣಕಾಸಿನ ನೆರವು ನೀಡುತ್ತಾನೆ ಎಂದು ಮನೆಯವರ ನಿರೀಕ್ಷೆ. ಅವನ ಪೂರ್ವ ಕಥೆಯನ್ನು ಕೇಳಿದ ಠಾಕೂರರಿಗೆ ಆತ ಸಂಸ್ಥೆಯನ್ನು ಸೇರಲು ಮುಂದೆ ಬಂದರೂ ಒಪ್ಪಿಕೊಳ್ಳಲು ಮೊದಲು ಮನಸ್ಸಾಗಲಿಲ್ಲ. ಆದರೆ ಸಂಸ್ಥೆಗೆ ಸೇವೆ ಸಲ್ಲಿಸಬೇಕೆಂಬ ಬಯಕೆಯಿಂದ ತುಂಬಿ ತುಳುಕಾಡುತ್ತಿದ್ದ ಸತೀಶ ಚಂದ್ರ ರಾಯ್, ಅವರು ಒಪ್ಪಲೇಬೇಕೆಂದು ಒತ್ತಾಯ ಮಾಡಿದ. ಠಾಕೂರರು ಸಮ್ಮತಿಸಿದರು. ಇಂಗ್ಲೀಷ್ ಸಾಹಿತ್ಯದಲ್ಲಿ ಆಳವಾದ ಪರಿಶ್ರಮವಿದ್ದ ಆತನೂ ಸಂಸ್ಥೆಗೆ ಆಸ್ತಿಯಾದ. ದುರದೃಷ್ಟದಿಂದ ಆತ ಮೂರೇ ವರ್ಷಗಳಲ್ಲಿ ಸಿಡುಬಿಗೆ ಬಲಿಯಾದ.*

ಸಂಸ್ಥೆಯ ನಿರ್ವಹಣೆಯನ್ನು ಒಪ್ಪಿಕೊಳ್ಳಬೇಕೆಂದು ಕವಿ ತಮ್ಮ ಸ್ನೇಹಿತ ಮೋಹಿತಚಂದ್ರ ಸೇನರನ್ನು ಪ್ರಾರ್ಥಿಸಿದರು. ಅವರು ಒಪ್ಪಿಕೊಂಡರು. ಠಾಕೂರರಲ್ಲಿ ಆತನಿಗೆ ಎಷ್ಟು ಪ್ರೀತಿಗೌರವಗಳೆಂದರೆ ಆತ ಉನ್ನತ ಶಿಕ್ಷಣದಲ್ಲಿ ಒಳ್ಳೆಯ ಸಂಬಳವನ್ನು ತರುತ್ತಿದ್ದ ಗೌರವದ ಸ್ಥಾನವನ್ನು ಬಿಟ್ಟು ಕೊಟ್ಟು ಶಾಂತಿ

* ಅದೇ

ನಿಕೇತನದಲ್ಲಿದ್ದ ಶಾಲೆಯನ್ನು ಸೇರಲು ಹಿಂದೆ ಮುಂದೆ ನೋಡಲಿಲ್ಲ. ಆತನ ಪೋಷಣೆಯಿಂದ ಸಂಸ್ಥೆ ಅಭಿವೃದ್ಧಿ ಹೊಂದಿತು. ಬರುವ ಹುಡುಗರ ಸಂಖ್ಯೆಯೂ ಹೆಚ್ಚಿತು. ದುರದೃಷ್ಟವಶಾತ್ ಆತ ಕಾಯಿಲೆ ಬಿದ್ದ. ಗುಣವಾದ ನಂತರ ಸಂಸ್ಥೆಯನ್ನು ಬಿಡಲು ತೀರ್ಮಾನಿಸಿದ. ಆದರೆ ಹೋಗುವ ಮುನ್ನ ಪರೀಕ್ಷಕ ನಾಗಿ ತಾನು ಸಂಪಾದಿಸಿದ್ದ ಇಡೀ ಮೊತ್ತವಾದ ಒಂದು ಸಾವಿರ ರೂಪಾಯಿಗಳನ್ನು ಶಾಲೆಗೆ ದಾನವಾಗಿ ಕೊಟ್ಟುಬಿಟ್ಟ.*

ಹೊಸ ಸಂಸ್ಥೆಗೆ ಗಮನಾರ್ಹವಾದ ಇವರ ಆಸ್ತಿಗಳೆನ್ನಬಹುದಾದವರಲ್ಲಿ ಒಬ್ಬ ಜಗದಾನಂದ ರಾಯ್. ಠಾಕೂರ್ ಕುಟುಂಬದ ಪತ್ರಿಕೆ 'ಸಾಧನ' ದಲ್ಲಿ ಆತ ವೈಜ್ಞಾನಿಕ ವಿಷಯಗಳನ್ನು ಕುರಿತು ಬರೆದ ತಿಳಿಯಾದ ಅರ್ಥದ ಪ್ರಬಂಧಗಳು ಠಾಕೂರರ ಗಮನವನ್ನು ಸೆಳೆದವು. ಷೆಲಿದಾದಲ್ಲಿ ತಮ್ಮ ತೋಟದ ಆಸ್ತಿಯ ಮುಖ್ಯ ಕಚೇರಿಯಲ್ಲಿ ಠಾಕೂರರು ಆತನಿಗೆ ಒಂದು ನೌಕರಿಯನ್ನು ಕೊಟ್ಟಿದ್ದರು. ಕೆಲಕಾಲದ ನಂತರ ಆತನನ್ನು ಶಾಂತಿನಿಕೇತನಕ್ಕೆ ವರ್ಗ ಮಾಡಿದರು. ಆತ ಉಪಾಧ್ಯಾಯನಾಗಿ ಮತ್ತು ಜನಪ್ರಿಯ ವೈಜ್ಞಾನಿಕ ಪುಸ್ತಕಗಳ ಬರಹಗಾರನಾಗಿ ಕೀರ್ತಿವಂತನಾದ.

---

* ಆಶ್ರಮೇರ್ ರೂಪ್ ಓ ವಿಕಾಸ್, 2

ಅಧ್ಯಾಯ ೮

ನೋವು ಮರೆಯಲು ಪ್ರಯತ್ನಗಳು

ಕಷ್ಟ ಒಂಟಿಯಾಗಿ ಬರುವುದಿಲ್ಲ ಎನ್ನುತ್ತಾರೆ. ಠಾಕೂರರಿಗೆ ಮೊದಲು ಬಂದ ಕಷ್ಟ ಅವರ ಪ್ರೀತಿಯ ಹೆಂಡತಿಯ ಸಾವು. ಅದನ್ನನುಸರಿಸಿ ಇತರ ಸಮಸ್ಯೆಗಳು ಬಂದವು. ಮೃಣಾಲಿನಿದೇವಿ ಐದು ಜನ ಮಕ್ಕಳನ್ನು ಬಿಟ್ಟು ತೀರಿಕೊಂಡರು. ಅವರಲ್ಲಿ ಇಬ್ಬರು ಗಂಡು ಮಕ್ಕಳು, ಮೂರು ಹೆಣ್ಣು ಮಕ್ಕಳು. ಮಧುರಲತ, ಮೊದಲನೆ ಮಗು. ಶಾಂತಿನಿಕೇತನಕ್ಕೆ ಅವರೆಲ್ಲ ಬರುವುದಕ್ಕೆ ಸ್ವಲ್ಪ ಮೊದಲು ಮೃಣಾಲಿನಿದೇವಿಯವರ ಒತ್ತಾಯದಿಂದ ಆಕೆಗೆ ಮದುವೆಯಾಗಿತ್ತು. ಎರಡನೆಯ ಮಗ, ರತೀಂದ್ರನಾಥ. ಮೂರನೆಯದು, ಹೆಣ್ಣುಮಗು, ರೇಣುಕ. ತಾಯಿ ಸತ್ತಾಗ, ಆ ಹುಡುಗಿಗೆ ಹನ್ನೆರಡು ವರ್ಷ. ಶಾಂತಿನಿಕೇತನದಲ್ಲಿ ಕುಟುಂಬ ನೆಲಸುವ ಮೊದಲು ಆಕೆಯ ಮದುವೆಯೂ ಆಗಿತ್ತು. ಅವಳ ಗಂಡ ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಅಮೇರಿಕಕ್ಕೆ ಹೋಗಿದ್ದುದರಿಂದ ಹುಡುಗಿ ತಂದೆ ತಾಯಿಯ ಜೊತೆಯಲ್ಲಿ ಇದ್ದಳು. ನಾಲ್ಕನೆಯ ಮಗು—ಅವಳೇ ಕಡೆಯ ಮಗಳು, ಮೀರಾಗೆ ಹತ್ತು ವರ್ಷ. ಕಡೆಯ ಹುಡುಗ, ಸೋಮೇಂದ್ರ, ಅವಳಿಗಿಂತ ಎರಡು ವರ್ಷ ಚಿಕ್ಕವನು. ಈ ಮೂವರು ಚಿಕ್ಕ ಮಕ್ಕಳನ್ನು ನೋಡಿ ಕೊಳ್ಳುವ ಹೊಸ ಕರ್ತವ್ಯ ರವೀಂದ್ರರ ಪಾಲಿಗೆ ಬಂದಿತು.

ಇದಾದ ಸ್ವಲ್ಪ ಕಾಲದಲ್ಲಿ ದೇಶವು ತೀವ್ರ ರಾಜಕೀಯ ಏರುಪೇರುಗಳಿಗೆ ಈಡಾಯಿತು, ಇದರ ನಂತರ ಪ್ರಾರಂಭವಾದ ರಾಜಕೀಯ ಚಳವಳಿಯಲ್ಲಿ ಮುಂದಾಳಾಗಿ ಧುಮುಕದಿರಲು ಅವರಿಗೆ ಸಾಧ್ಯವಾಗಲಿಲ್ಲ. ಅವರ ಜೀವನದ ಈ ಭಾಗದಲ್ಲಿ ಅವರು ಸಾಕಷ್ಟು ಕಾಲರಾಜಕೀಯ ಕೆಲಸದ ಸಕ್ರಿಯ ಪಾತ್ರವಹಿಸಿದರು. ಆದರೆ, ಚಳವಳಿಯ ನಾಲ್ಕಾರು ಮುಂದಾಳುಗಳ ಅಭಿಪ್ರಾಯಗಳು ತಮ್ಮ ಅಭಿಪ್ರಾಯಗಳಿಗಿಂತ ತೀರ ಭಿನ್ನವಾಗಿದ್ದವು. ಅವರು ಚಳವಳಿಯನ್ನು ಠಾಕೂರರಿಗೆ ತಪ್ಪೆಂದು ಕಂಡ ಮಾರ್ಗದಲ್ಲಿ ಕರೆದೊಯ್ಯಲು ಅಪೇಕ್ಷಿಸುತ್ತಿದ್ದರು. ಇದನ್ನು ಕಂಡು ಅವರಿಗೆ ತೀರ ನಿರಾಸೆಯಾಯಿತು. ಕಡೆಗೆ ಠಾಕೂರರು ಅವರಿಂದ ದೂರವಾದರು ಮತ್ತು ನಿರಾಸೆಯಿಂದ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮತ್ತೆ ಮನಸ್ಸಮಾಧಾನವನ್ನು ಅರಸಿದರು.

ಅವರ ಎರಡನೆಯ ಮಗಳು ರೇಣುಕೆಗೆ ಕ್ಷಯ ರೋಗ ತಗಲಿತು. ಅವರು ತಮ್ಮ ಸಮಯ ಮತ್ತು ಗಮನವನ್ನೆಲ್ಲ ಆಕೆಗೆ ಕೊಡಬೇಕಾಯಿತು. ಜೀವನಾಶಕಗಳಿಲ್ಲದ (ಆಂಟಿಬಯೊಟಿಕ್ಸ್) ಆ ಕಾಲದಲ್ಲಿ ಸೂಚಿಸುತ್ತಿದ್ದ ಒಂದೇ ಚಿಕಿತ್ಸೆ ಎಂದರೆ ಆರೋಗ್ಯಕರ ಸ್ಥಳದಲ್ಲಿ ವಾಸ. ಇದರಂತೆ ಠಾಕೂರರು ಆಕೆಯನ್ನು ಹಜಾರಿಬಾಗಿಗೆ ಕರೆದೊಯ್ಯಲು ನಿಶ್ಚಯಿಸಿದರು. ಅದಕ್ಕೆ ಮೊದಲು ತಮ್ಮ ಕಡೆಯ ಇಬ್ಬರು ಮಕ್ಕಳನ್ನು ತಮ್ಮ ಎರಡನೆಯ ಅತ್ತಿಗೆ ಜ್ಞಾನದಾನಂದಿನೀ ದೇವಿಯ ಬಳಿ ಬಿಟ್ಟರು. ಹಜಾರಿಬಾಗಿನ ವಾಸವು ರೇಣುಕೆಯಲ್ಲಿ ಸುಧಾರಣೆ ಏನನ್ನೂ ಉಂಟು ಮಾಡಿದಂತೆ ಕಾಣಲಿಲ್ಲ. ಆದ್ದರಿಂದ, ಮಧ್ಯ ಹಿಮಾಲಯದಲ್ಲಿನ ಆಲ್ಮೋರಾ ಇನ್ನೂ ಎತ್ತರದಲ್ಲಿದ್ದುದರಿಂದ ಅಲ್ಲಿ ಇನ್ನೂ ಉತ್ತಮ ಪರಿಣಾಮವಾದೀತೆಂದು ಅವಳ ತಂದೆ ಅವಳನ್ನು ಅಲ್ಲಿಗೆ ಕರೆದೊಯಲು ನಿರ್ಧರಿಸಿದರು.

ಇಲ್ಲಿ ಬಲಾತ್ಕಾರವಾಗಿ ಠಾಕೂರರು ಎಲ್ಲರಿಂದ ದೂರವಿರಬೇಕಾಯಿತು. ಅಲ್ಲದೆ ಕಾಯಿಲೆ ಇದ್ದ ಹುಡುಗಿಗೆ ಯೋಗ್ಯ ಮನರಂಜನೆಯೂ ಅಗತ್ಯವಾಗಿತ್ತು. ಇದರಿಂದ ಅವರು ಹೊಸದೊಂದು ಕಾವ್ಯಕ್ಷೇತ್ರದಲ್ಲಿ–ಶಿಶು ಕಾವ್ಯದಲ್ಲಿ–ರಚನೆಯ ಪ್ರಯತ್ನ ಮಾಡಲು ಉತ್ತೇಜನ ದೊರೆಯಿತು. ಅವರ ಚಿಕ್ಕ ವಯಸ್ಸಿನಲ್ಲಿ ಕುಟುಂಬವು ಪ್ರಾರಂಭಿಸಿದ ಮಕ್ಕಳ ಪತ್ರಿಕೆಗಾಗಿ ಅವರು ಕೆಲವು ಮಕ್ಕಳ ಕವನಗಳನ್ನು ಬರೆದಿದ್ದರು. ಈಗ ಮತ್ತೆ ಮಕ್ಕಳ ಪದ್ಯಗಳು .ಸಮೃದ್ಧವಾಗಿ ಹೊರ ಬಂದವು. ಇವುಗಳ ಕೇಂದ್ರ ವ್ಯಕ್ತಿ ಒಬ್ಬ ಹುಡುಗ. ಅವನ ತಂದೆ ತಾಯಿ,

ಸೋದರಿ ಮತ್ತು ಸೋದರ ಇಷ್ಟೇ ಮಂದಿ ಇರುವ ಅವನ ಪುಟ್ಟ ಆದರೆ ಸ್ವಾರಸ್ಯವಾದ ಜಗತ್ತನ್ನು ಅವನ ಕಣ್ಣುಗಳ ಮೂಲಕ ನೋಡಲು ಠಾಕೂರರು ಪ್ರಯತ್ನಿಸಿದರು. ಈ ಅವಧಿಯಲ್ಲಿ ಬರೆದ ಕವನಗಳನ್ನು ಅನಂತರ ಸಂಗ್ರಹಿಸಿ, 'ಶಿಶು' ಎನ್ನುವ ಹೆಸರಿಟ್ಟು ಪ್ರಕಟಿಸಿದರು, 'ಶಿಶು' ಕಾವ್ಯದ ಶ್ರೇಷ್ಠ ಸಂಕಲನ ಗಳಲ್ಲೊಂದೆನಿಸಿ ಇದು ಬಂಗಾಳೀ ಸಾಹಿತ್ಯವನ್ನು ಶ್ರೀಮಂತಗೊಳಿಸಿದೆ.

ಸುಮಾರು ಮೂರು ತಿಂಗಳ ಕಾಲ ಅಲ್ಲಿ ವಾಸಿಸಿದ ನಂತರ ರೇಣುಕೆಯ ಸ್ಥಿತಿ ಸ್ವಲ್ಪ ಉತ್ತಮ ಗೊಂಡಿತು. ಆದ್ದರಿಂದ ಅವಳನ್ನು ಜೋರಸಾಂಕೊದಲ್ಲಿನ ಕುಟುಂಬದ ಮನೆಗೆ ಕರೆ ತಂದರು. ದುರದೃಷ್ಟದಿಂದ ಸ್ವಲ್ಪ ಕಾಲದಲ್ಲಿ ಅವಳ ಸ್ಥಿತಿ ಇದ್ದಕ್ಕಿದ್ದಂತೆ ಕೆಟ್ಟು 1903 ರ ಸೆಪ್ಟೆಂಬರಿನಲ್ಲಿ ಹುಡುಗಿ ತೀರಿಕೊಂಡಳು.

ಹೆಂಡತಿ ಸತ್ತ ಹತ್ತು ತಿಂಗಳಲ್ಲಿ ಈ ಎರಡನೆಯ ಅಗಲಿಕೆಯನ್ನು ಠಾಕೂರರು ಅನುಭವಿಸಿದ ಹೊಸತರಲ್ಲಿ 1904 ರ ಕಡೆಯಲ್ಲಿ ಠಾಕೂರರ ಎಂಬತ್ತೇಳು ವರ್ಷದ ತಂದೆ ತೀವ್ರವಾಗಿ ಕಾಯಿಲೆಯಾದರು. ಅವರು ಕೆಲವು ಕಾಲ ಕಾಯಿಲೆ ಇದ್ದವರು 1905 ರ ಜನವರಿಯಲ್ಲಿ ಮೃತರಾದರು. ಅವರ ತಂದೆಯ ಸಾವಿನಿಂದ ಮಾನಸಿಕ ಯಾತನೆಯಾದದ್ದಷ್ಟೇ ಅಲ್ಲ, ಕುಟುಂಬದ ಯಜಮಾನ ತೀರಿ ಕೊಂಡಾಗ ಉದ್ಭವಿಸುವ ಹಲವು ಸಮಸ್ಯೆಗಳಿಗೆ ಸಂಸಾರ ಒಳಗಾಯಿತು.

ಮಹರ್ಷಿಯವರು ಒಂದು ಉಯಿಲನ್ನು ಮಾಡಿದ್ದರು. ಅದರ ಪ್ರಕಾರ ಜೋರಸಾಂಕೊದ ಮನೆಯನ್ನು ದ್ವಿಜೇಂದ್ರನಾಥರು, ರವೀಂದ್ರನಾಥರು ಮತ್ತು ಆಗಲೆ ತೀರಿಕೊಂಡಿದ್ದ ಹೇಮೇಂದ್ರನಾಥನ ಗಂಡು ಮಕ್ಕಳು ಪಾಲು ಮಾಡಿಕೊಳ್ಳ ಬೇಕಾಗಿತ್ತು. ಕುಟುಂಬದ ಇತರ ಸದಸ್ಯರು ತಮ್ಮ ಜೀವಮಾನ ಕಾಲದಲ್ಲಿ ಅಲ್ಲಿ ವಾಸಿಸಬಹುದಾಗಿತ್ತು. ಬಾಡಿಗೆ ತರುತ್ತಿದ್ದ ಆಸ್ತಿಯಲ್ಲಿ ಉತ್ತರ ಬಂಗಾಳದಲ್ಲಿದ್ದ ಆಸ್ತಿಯನ್ನು ದ್ವಿಜೇಂದ್ರನಾಥ, ಸತ್ಯೇಂದ್ರನಾಥ ಮತ್ತು ರವೀಂದ್ರನಾಥರಿಗೆ ಹಂಚಿದರು. ಒರಿಸ್ಸದ ಕಟಕ್ ಜಿಲ್ಲೆಯಲ್ಲಿನ ಆಸ್ತಿ ಹೇಮೇಂದ್ರನಾಥರ ಮೂವರು ಗಂಡು ಮಕ್ಕಳ ವಶಕ್ಕೆ ಹೋಯಿತು. ಉಯಿಲಿನ ಪ್ರಕಾರ ಠಾಕೂರರ ಪಾಲಿಗೆ ಬಂದ ಹಣ ಗಳಿಸುತ್ತಿದ್ದ ಆಸ್ತಿಯಿಂದ ವರ್ಷಕ್ಕೆ ಸುಮಾರು 36,000 ರೂಪಾಯಿಗಳ ಆದಾಯವಿತ್ತು. ಇದಲ್ಲದೆ ಉಯಿಲು ಕುಟುಂಬದ ಇತರ ಆಶ್ರಿತ ಸದಸ್ಯರ ಪೋಷಣೆ ಮತ್ತು ಶಾಂತಿನಿಕೇತನದಲ್ಲಿನ ಆಸ್ತಿಯ ಮತ್ತು

ಜೋರಸಾಂಕೊದ ಪೂರ್ವಿಕರ ಗೃಹದಲ್ಲಿನ ಪ್ರಾರ್ಥನಾಮಂದಿರ ಇವುಗಳ ಸಂರಕ್ಷಣೆ ಇವುಗಳಿಗೂ ವ್ಯವಸ್ಥೆ ಮಾಡಿದ್ದಿತು.*

ಉಯಿಲನ್ನು ಕಾರ್ಯಗತ ಮಾಡುವುದು, ಇದಕ್ಕೆ ಹೊಂದಿಕೊಂಡಂತೆ ಮಾಡಿಕೊಳ್ಳಬೇಕಾದ ಮಾರ್ಪಾಡುಗಳು ಇವುಗಳಲ್ಲಿ ಕುಟುಂಬದ ಸದಸ್ಯರಿಗೆ ಸಾಕಷ್ಟು ಕಾಲ ಕಳೆಯಿತು. ಉಯಿಲಿನ ನಿಷ್ಠ ನಿರ್ವಾಹಕರಲ್ಲಿ ಒಬ್ಬರಾಗಿ ಮತ್ತು ಕುಟುಂಬದ ಜವಾಬ್ದಾರಿಯುರಿತ ಒಬ್ಬ ಸದಸ್ಯರಾಗಿ ಠಾಕೂರರು ತಮ್ಮ ಸೋದರಳಿಯಂದಿರಾದ ದೀಪೇಂದ್ರ ನಾಥ ಮತ್ತು ಸುರೇಂದ್ರನಾಥರ ಕೆಲಸವನ್ನು ಸುಗಮಗೊಳಿಸಲು ಬಹಳ ಕಷ್ಟಪಡಬೇಕಾಯಿತು.

ಸಾವಿನ ಕೈಯ ಇನ್ನೂ ಕ್ರೂರ ಹೊಡೆತಕ್ಕೆ ಠಾಕೂರರು ಸಿಕ್ಕಬೇಕೆಂದು ವಿಧಿ ನಿಯಮವಿತ್ತೆಂದು ತೋರುತ್ತದೆ. ಶಾಂತಿನಿಕೇತನದ ಆಶ್ರಮಕ್ಕೆ ಸೇರಿದ್ದ ಶಾಲೆಯಲ್ಲಿ ಓದುತ್ತಿದ್ದ ಅವರ ಕಡೆಯ ಮಗ ಸೋಮೇಂದ್ರನು 1907 ರ ಪೂಜಾ ರಜೆಯ ದಿನಗಳನ್ನು ತನ್ನ ಸಹಪಾಠಿ ಸರೋಜೇಂದ್ರನೊಡನೆ ಕಳೆಯಲು ಮಾಂಘೈರ್‌ನಲ್ಲಿದ್ದ ಅವನ ಚಿಕ್ಕಪ್ಪನ ಮನೆಗೆ ಹೋಗಿದ್ದ. ಅಲ್ಲಿ ಇದ್ದ ಕೆಲವೇ ದಿನಗಳಲ್ಲಿ ಅವನಿಗೆ ಕಾಲರಾ ಬಂದಿತು. ಕಾಯಿಲೆ ತೀವ್ರ ಸ್ಥಿತಿಗೆ ತಿರುಗಿದ್ದರಿಂದ ಠಾಕೂರರಿಗೆ ತಂತಿ ಸಮಾಚಾರ ಕಳುಹಿಸಿ ಕರೆಸಿಕೊಂಡರು. ದೌರ್ಭಾಗ್ಯದಿಂದ ವೈದ್ಯ ಚಿಕಿತ್ಸೆ ಹುಡುಗನ ಪ್ರಾಣವನ್ನು ಉಳಿಸಲಾರದೆ ಹೋಯಿತು. 1907ರ ನವೆಂಬರ್‌ನಲ್ಲಿ ಠಾಕೂರರು ಅವನನ್ನು ಕಳೆದುಕೊಂಡರು.

ಹೀಗೆ ಐದೇ ವರ್ಷಗಳಲ್ಲಿ ಠಾಕೂರರು ನಾಲ್ಕು ಬಾರಿ ಸಾವಿನಿಂದ ಅಗಲಿಕೆಯನ್ನು ಸಹಿಸಬೇಕಾಯಿತು. ಒಬ್ಬರ ನಂತರ ಮತ್ತೊಬ್ಬರಾಗಿ ಅವರಿಗೆ ಅತ್ಯಂತ ಪ್ರೀತಿ ಪಾತ್ರರಾದವರನ್ನು ಕಳೆದುಕೊಂಡರು. ವಿಧಿಯ ಕೈಯ ಈ ಹೊಡೆತಗಳಿಗೆ ಸಾಮಾನ್ಯ ಮನುಷ್ಯರು ಕುಸಿದಿರುತ್ತಿದ್ದರು. ಆದರೆ ಅವರಿಗೆ ಒಳಗಿನ ಶಕ್ತಿ ಇದ್ದುದರಿಂದ ಈ ಕಠಿಣ ಸಂಕಟವನ್ನು ಸ್ಥೈರ್ಯದಿಂದ ತಡೆದುಕೊಳ್ಳಲು ಸಾಧ್ಯವಾಯಿತು. ಬಾಳು ಕೊಟ್ಟದನ್ನು ಸ್ವೀಕರಿಸುವ ಅವರ ಮನೋಧರ್ಮಕ್ಕೆ, ದೈವಚಿತ್ತದಲ್ಲಿ ಅವರಿಗಿದ್ದ ವಿಶ್ವಾಸ ಪುಷ್ಟಿ ಕೊಡುತ್ತಿತ್ತು. ಇದರಿಂದ ತಮ್ಮ

* ದೇವೇಂದ್ರನಾಥ ಠಾಕೂರರ ಉಯಿಲು, ದಿನಾಂಕ ಸೆಪ್ಟೆಂಬರ್ 8, 1899

ದುಃಖವನ್ನು ಸಮಚಿತ್ತದಿಂದ ಸಹಿಸಲು ಅವರಿಗೆ ಸಾಧ್ಯವಾಯಿತು. ಈ ಪಂಕ್ತಿಗಳಿಂದ ಪ್ರಾರಂಭವಾಗುವ ಅವರ ಒಂದು ಗೀತೆ ಈ ಮನಃಸ್ಥಿತಿಯನ್ನು ಚೆನ್ನಾಗಿ ಪ್ರತಿಬಿಂಬಿಸುತ್ತದೆ.

> ದುಃಖದ ಕಾರಿರುಳು ನಿನ್ನ ಕೃಪಾಜ್ಯೋತಿ ಬೆಳಗುವಂತೆ ಮಾಡುವುದಾದರೆ ಅಂತೆಯೇ ಆಗಲಿ.
>
> ನಾವು ನಿನ್ನ ಆನಂದದ ರಾಜ್ಯವನ್ನು ಸಮೀಪಕ್ಕೆ ತರುವುದಾದರೆ ಅಂತೆಯೇ ಆಗಲಿ.*

ವಿಧಿಯ ಕ್ರೂರ ಪ್ರಹಾರಗಳನ್ನು ಅವರು ಸ್ಥೈರ್ಯದಿಂದ ಸಹಿಸಿಕೊಂಡರು. ಅವರು ನಡೆದುಕೊಳ್ಳುತ್ತಿದ್ದ ರೀತಿಯಲ್ಲಿ ಆ ಪ್ರಹಾರಗಳ ಸೂಚನೆಯೇ ಕಾಣುತ್ತಿರಲಿಲ್ಲ. ಆದರೂ ಅವರ ಕಡೆಯ ಮಗನ ಸಾವಿನಿಂದ ಅವರು ಮೃದು ಹೃದಯಕ್ಕೆ ತೀಕ್ಷ್ಣ ನೋವಾಯಿತು. ಅದನ್ನು ಗೆಲ್ಲಲು ಅವರ ತುಂಬಾ ಕಷ್ಟ ಪಡಬೇಕಾಯಿತು. ಸಾವಿನ ನಂತರ ಅವರು ಶಾಂತಿನಿಕೇತನದ ತಾತ್ಕಾಲಿಕ ನಿರ್ವಹಣೆಗೆ ವ್ಯವಸ್ಥೆ ಮಾಡಲು ಅಲ್ಲಿಗೆ ಹೋದರು. ಅಲ್ಲಿಂದ ಷೆಲಿದಾಕ್ಕೆ ಹೋಗಿ ಅಲ್ಲಿ ದೀರ್ಘಕಾಲ ಇದ್ದರು. ಈ ಅವಧಿಯಲ್ಲಿ ಅವರು ಶಾಂತಿನಿಕೇತನದಲ್ಲಿ ಪೌಷ ಮೇಳಕ್ಕೂ ಹೋಗಲಿಲ್ಲ. ಐದು ತಿಂಗಳ ಕಾಲ ಷೆಲಿದಾಲ್ಲಿದ್ದ ಮೇಲೆ ಅವರಿಗೆ ಶಾಂತಿನಿಕೇತನದಲ್ಲಿ ಎಂದಿನ ಜೀವನವನ್ನು ಮತ್ತೆ ಮುಂದುವರಿಸಲು ಮನಸ್ಸಿನ ಶಕ್ತಿ ಒದಗಿತು.

ಸಿಪಾಯಿಗಳ ದಂಗೆ ಎಂದು ಹೆಸರಿಟ್ಟ ಆಂದೋಳನದ ನಂತರ ಭಾರತದಲ್ಲಿ ಬ್ರಿಟಿಷ್ ಸರ್ಕಾರವೇ ಅಧಿಕಾರವನ್ನು ವಹಿಸಿಕೊಂಡ ಮೇಲೆ ಯಾವಾಗಲೂ ಹದಗೆಟ್ಟಿರದಷ್ಟರ ಮಟ್ಟಿಗೆ ರಾಜಕೀಯ ಪರಿಸ್ಥಿತಿ ಹದಗೆಟ್ಟಿತು, ಠಾಕೂರರ ಬಾಳಿನ ಈ ಯಾತನೆಯ ದಿನಗಳ ತೊಡಕನ್ನು ಅದು ಇನ್ನೂ ಹೆಚ್ಚು ಮಾಡಿತು. ಆಗ ಭಾರತದ ಗವರ್ನರ್ ಜನರಲ್ ಮತ್ತು ವೈಸರಾಯ್ ಆಗಿದ್ದ ಲಾರ್ಡ್ ಕರ್ಜನ್ ಲೆಕ್ಕ ಹಾಕಿ ಕೈಗೊಂಡ ಕೆಲವು ಕ್ರಮಗಳಿಂದ ಈ ಕ್ಷೋಭೆಯುಂಟಾಯಿತು. ವಾಸ್ತವಾಂಶಗಳ ಒಸ್ನೆಲೆ ಇದು.

---

* ಗೀತಾ ವಿತಾನ್, ನಂ. 313

ಬ್ರಿಟಿಷ್ ಸರ್ಕಾರವು ಕಲ್ಕತ್ತೆಯನ್ನು ಕೇಂದ್ರ ಆಡಳಿತ ಸ್ಥಾನವನ್ನಾಗಿ ಮಾಡಿಕೊಂಡು ಭಾರತದಲ್ಲಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿತು. ಈ ಚಾರಿತ್ರಿಕ ಆಕಸ್ಮಿಕದಿಂದ ಬಂಗಾಳಿಗಳಿಗೆ ಪಾಶ್ಚಾತ್ಯ ಸಂಸ್ಕೃತಿಯ ಅಪ್ಪಳಿಕೆಯ ಅನುಭವ ವಾಯಿತು. ನಮ್ಮ ಪ್ರಾಚೀನ, ಚೈತನ್ಯರಹಿತ, ಮೃತಪ್ರಾಯ ಸಂಸ್ಕೃತಿಯನ್ನು ಎಚ್ಚರಗೊಳಿಸಲು ಅಗತ್ಯವಾಗಿದ್ದ ಆಘಾತ ಚಿಕಿತ್ಸೆ ಇದರಿಂದ ದೊರೆತಂತಾಯಿತು. ಇದು ಸಂಕ್ರಮಣ ಪ್ರಕ್ರಿಯೆಯನ್ನು ಪ್ರಾರಂಭಿಸಿತು, ಈ ಪ್ರಕ್ರಿಯೆಯು ಎರಡು ಸಂಸ್ಕೃತಿಗಳ ಸಂಗಮದಿಂದ ಕಾಲಕ್ರಮದಲ್ಲಿ ಆಧುನಿಕ ಭಾರತದ ನವಸಂಸ್ಕೃತಿಗೆ ಜನ್ಮವಿತ್ತಿತ್ತು. ಇಂತಹ ಸಂಗಮದಲ್ಲಿ ಪ್ರಾಚೀನ ಸಂಸ್ಕೃತಿಯಲ್ಲಿ ಒಳಿತಾದುದೆಲ್ಲ ಉಳಿದುಕೊಂಡಿತು. ಮನುಷ್ಯ ತನ್ನ ಪ್ರಯತ್ನಗಳಿಂದಲೇ ತನ್ನ ಸ್ಥಿತಿಯನ್ನು ಉತ್ತಮಗೊಳಿಸಕೊಳ್ಳಬಹುದೆಂಬ ವಿಶ್ವಾಸವನ್ನು ಮೂಡಿಸುವ ತಂತ್ರಜ್ಞಾನವನ್ನೂ ವೈಜ್ಞಾನಿಕ ದೃಷ್ಟಿಯನ್ನೂ ಹೊರಗಿನಿಂದ ತಂದುಕೊಳ್ಳಲಾಯಿತು.

ಈ ಸಂಕ್ರಮಣ ಕಾಲದಲ್ಲಿ ಪ್ರಸಿದ್ಧ ಬಂಗಾಳಿಗಳ ತೇಜಃಪುಂಜವೇ ವಿವಿಧ ಕ್ಷೇತ್ರದಲ್ಲಿ ಪ್ರಗತಿಶೀಲ ಚಳವಳಿಗಳ ಮೊದಲ ಪಂಕ್ತಿಯಲ್ಲಿತ್ತು. ಮೊದಲ ಹಿಂದಿನ ಸಂಸ್ಕೃತಿಯ ಅವನತಿಯ ಭಗ್ನಾವಶೇಷಗಳನ್ನು ತೆಗೆದುಹಾಕಿ ಅನಂತರ ಅದನ್ನು ಪ್ರಗತಿ ಮತ್ತು ಪುನಶ್ಚೇತನದ ದಾರಿಗೆ ಕೊಂಡೊಯ್ಯುವುದೇ ಉದ್ದೇಶವಾಗಿತ್ತು. ಹಲವು ರಂಗಗಳಲ್ಲಿ ಆದ್ಯಪ್ರವರ್ತಕರಾದ ರಾಜಾರಾಮಮೋಹನರಾಯ್ ಅವರು ಸಾಮಾಜಿಕ ಸುಧಾರಣೆ ಮತ್ತು ನವಧಾರ್ಮಿಕ ಚಳವಳಿಯಲ್ಲಿ ವಿಶೇಷವಾದ ಆಸಕ್ತಿಯನ್ನು ವಹಿಸಿದರು. ಈ ಚಳವಳಿಯಿಂದ ಅಧ್ವೈತವನ್ನು ಆಧರಿಸಿದ ಹೊಸ ಧಾರ್ಮಿಕ ಆಚರಣೆಯು ಮೂಡಿತು. ಆ ಕಾಲದ ವಿದ್ಯಾವಂತ ಯುವಕರಿಗೆ ಸಾಂಪ್ರದಾಯಿಕ ಸ್ವರೂಪದಲ್ಲಿನ ತಮ್ಮ ಧರ್ಮಕ್ಕಿಂತ ಇದು ಹೆಚ್ಚು ಒಪ್ಪಿಗೆಯಾಯಿತು.

ರಾಜಾರಾಮ ಮೋಹನ ರಾಯರಿಗೆ ಯೋಗ್ಯ ಉತ್ತರಾಧಿಕಾರಿಯಾಗಿ ಈಶ್ವರ ಚಂದ್ರ ವಿದ್ಯಾಸಾಗರರು ಭಾರತೀಯ ನಾರಿಯ ಸ್ಥಿತಿಯ ಸುಧಾರಣೆಯ ಕಾರ್ಯವನ್ನು ಕೈಗೊಂಡರು. ಸತಿ ಆಚರಣೆಯನ್ನು ನಿರ್ಮೂಲ ಮಾಡುವಂತೆ ಲಾರ್ಡ್ ಬೆಂಟಿಂಕನ ಮನ ಒಲಿಸಲು ರಾಮಮೋಹನರು ಕಾರಣವಾಗಿದ್ದರೆ ಇವರು ಹಿಂದೂ ವಿಧವೆಯ ಪುನರ್‌ವಿವಾಹವನ್ನು ಕಾನೂನು ಬದ್ಧಗೊಳಿಸುವಂತೆ ಶಾಸನವನ್ನು ಮಾಡಿಸಿದರು. ಹೆಂಗಸರಲ್ಲಿ ವಿದ್ಯಾಭ್ಯಾಸವು ಹರಡುವಂತೆ ಚೈತನ್ಯಮಯ ಕ್ರಮ

ಗಳನ್ನು ಕೈಗೊಂಡರು. ಸಾಹಿತ್ಯಕ್ಕೂ ಅವರ ಕೊಡುಗೆ ಇಷ್ಟೇ ಮಹತ್ವದ್ದು. ಚೈತನ್ಯ ತುಂಬಿದ ಮತ್ತು ಲಲಿತವಾದ ಗದ್ಯ ಶೈಲಿಯನ್ನು ಬಂಗಾಳಿಯಲ್ಲಿ ಅವರು ರೂಪಿಸಿದರು.

ಅವರ ಹೆಜ್ಜೆಯನ್ನೇ ಅನುಸರಿಸಿದ ಬಂಕಿಮ್ ಚಂದ್ರ ಚಟರ್ಜಿಯವರು ಬಂಗಾಳಿ ಸಾಹಿತ್ಯದ ಬೆಳವಣಿಗೆಯ ಕಾರ್ಯವನ್ನು ಗಂಭೀರವಾಗಿ ಸ್ವೀಕರಿಸಿ ಅದರಲ್ಲಿ ಮಗ್ನರಾದರು. ಅದರ ಕೊಡುಗೆಯಿಂದ ಆ ಸಾಹಿತ್ಯಕ್ಕೆ ಒಂದು ಗಾಂಭೀರ್ಯ ಬಂದಿತು. ಶೋಷಣೆಯ ಯುಗದ ಅಂತ್ಯದ ಅಭಿವೃದ್ಧಿ ಹೊಂದುತ್ತಿರುವ ನವಭಾರತದ ಉದಯವನ್ನು ಚಿತ್ರಿಸಿಕೊಂಡ ಅವರ ರಾಷ್ಟ್ರ ಪ್ರೇಮ ತುಂಬಿದ ಕಾದಂಬರಿ 'ಆನಂದಮಠ'ವು ಅಸಂಖ್ಯಾತ ಓದುಗರನ್ನು ಪುಳಕಿತಗೊಳಿಸಿತು. ಭಾರತದ ನೆಲದಲ್ಲಿ ದೇಶಾಭಿಮಾನದ ಬೀಜಗಳನ್ನು ಬಿತ್ತಲು ಭೂಮಿಯನ್ನು ಅದು ಸಿದ್ಧಗೊಳಿಸಿತು. ಇದಾದ ಸ್ವಲ್ಪ ಕಾಲದಲ್ಲಿಯೇ ತಮ್ಮ ಹಿಂಬಾಲಕರು ಧರ್ಮಾಚರಣೆಯ ಅಂಗವಾಗಿ ಅನುಕಂಪದ ಕೆಲಸಕಾರ್ಯಗಳಲ್ಲಿ ತೊಡಗಬೇಕೆಂದು ವಿವೇಕಾನಂದರು ಕರೆಕೊಟ್ಟರು. ಅಜ್ಞಾನ, ಜಾತೀಯ ಮತ್ತು ದಾರಿದ್ರ್ಯಗಳ ವಿರುದ್ಧ ಸಮರ ಸಾರಿ, ಸಾಕಷ್ಟು ಸೌಲಭ್ಯಗಳಿಲ್ಲದ ವರ್ಗದವರ ಸ್ಥಿತಿಯನ್ನು ಉತ್ತಮಗೊಳಿಸಬೇಕೆಂಬ ಕಳಕಳಿಯ ಬೋಧನೆಯ ಸಿದ್ಧತೆಯ ಈ ಪ್ರಕ್ರಿಯೆಯನ್ನು ತೀವ್ರಗೊಳಿಸಿತು.

ಭೂಮಿಕೆಯು ಹೀಗೆ ಸಿದ್ಧವಾದಾಗ ಸುರೇಂದ್ರನಾಥ ಬ್ಯಾನರ್ಜಿ ಒಂದು ಸತ್ವಯುತವಾದ ರಾಜಕೀಯ ಆಂದೋಳನವನ್ನು ಪ್ರಾರಂಭಿಸಿದರು. ಅದರ ದೀರ್ಘಾವಧಿಯ ಗುರಿ ರಾಜಕೀಯ ಸ್ವಾತಂತ್ರ್ಯ. 1886 ರಲ್ಲಿ ಜನ್ಮ ತಾಳಿದ ಭಾರತ ರಾಷ್ಟ್ರೀಯ ಕಾಂಗ್ರೆಸ್ಸನ್ನು ಬಲಗೊಳಿಸುವಲ್ಲಿ ಅವರು ಚಟುವಟಿಕೆಯ ಪಾತ್ರ ವಹಿಸಿದರು. ತಮ್ಮ ಇಂಗ್ಲೀಷ್ ದೈನಂದಿನ ಪತ್ರಿಕೆ 'ಬಂಗಾಳಿ'ಯ ಮೂಲಕ ಅವರು ಸ್ವಾತಂತ್ರ್ಯದ ಚಳವಳಿಯನ್ನು ತೀವ್ರಗೊಳಿಸಲು ಅವಿರತವಾಗಿ ಪ್ರಚಾರ ನಡೆಸಿದರು.

ಈ ಎಲ್ಲ ಪ್ರಗತಿಪರ ಚಳವಳಿಗಳಿಗೆ ಕಲ್ಕತ್ತೆ ಕೇಂದ್ರವಾಗಿತ್ತು. ಈ ಚಳವಳಿಗಳಲ್ಲಿ ಪ್ರಮುಖ ಭಾಗವಹಿಸಿದವರು ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಳ್ಳುತ್ತಿದ್ದ ಬಂಗಾಳಿಗಳು. ಈ ಬೆಳವಣಿಗೆಗಳು ತಮ್ಮ ಸಾಮ್ರಾಜ್ಯಶಾಹಿ ಹಿತಗಳಿಗೆ

ವಿರುದ್ಧವಾಗಿ ಕೆಲಸ ಮಾಡುತ್ತವೆ ಎಂದುವಿದೇಶೀ ಸರ್ಕಾರಕ್ಕೆ ತಲೆನೋವಾಯಿತು. ಆದ್ದರಿಂದ ಲಾರ್ಡ್ ಕರ್ಜನ್‌ನ ಸಲಹೆಯಂತೆ ಸರ್ಕಾರವು ಬಂಗಾಳವನ್ನು ಇಬ್ಭಾಗ ಮಾಡಲು ತೀರ್ಮಾನಿಸಿತು. ಬಂಗಾಳದ ಜನತೆಯನ್ನು ಒಡೆದು ಅವರು ಮುನ್ನಡೆಸುತ್ತಿದ್ದ ರಾಜಕೀಯ ಆಂದೋಳನಕ್ಕೆ ಬಲವಾದ ಪೆಟ್ಟನ್ನು ಕೊಡುವ ಆಲೋಚನೆ ಇತ್ತೆಂಬುದು ಸ್ಪಷ್ಟ. ಆಗ ಬಂಗಾಳವು ಬಿಹಾರ, ಒರಿಸ್ಸ ಮತ್ತು ವಾಸ್ತವವಾದ ಬಂಗಾಳ ಇದಿಷ್ಟು ಸೇರಿ ದೊಡ್ಡ ಪ್ರಾಂತ್ಯವಾಗಿತ್ತು. ವಿಭಜನೆಯ ನಂತರ ಪಶ್ಚಿಮ ಬಂಗಾಳ, ಬಿಹಾರ ಮತ್ತು ಒರಿಸ್ಸ ಒಂದು ಪ್ರಾಂತ್ಯವಾದವು. ಉತ್ತರಬಂಗಾಳ, ಪೂರ್ವ ಬಂಗಾಳ ಮತ್ತು ಅಸ್ಸಾಂ ಇನ್ನೊಂದು ಪ್ರಾಂತ್ಯವಾದವು. ಇದರ ಪರಿಣಾಮವೆಂದರೆ ಬಂಗಾಳಿಗಳು, ಹಿಂದೂಗಳೇ ಬಹು ಸಂಖ್ಯಾತರಾದ ಒಂದು ಗುಂಪು, ಮುಸ್ಲಿಮರೇ ಬಹು ಸಂಖ್ಯಾತರಾದ ಪೂರ್ವ ಭಾಗದಲ್ಲಿನ ಮತ್ತೊಂದು ಗುಂಪು, ಹೀಗೆ ಎರಡು ಗುಂಪುಗಳಲ್ಲಿ ಹಂಚಿಹೋದರು. ಎರಡು ಗುಂಪುಗಳು, ಬೇರೆ ಬೇರೆ ಆಡಳಿತಕ್ಕೆ ಒಳಪಟ್ಟವು. ಎರಡು ಬಂಗಾಳೀ ಸಮುದಾಯಗಳಲ್ಲಿ ಪ್ರತ್ಯೇಕತಾ ಮನೋಭಾವನೆಯನ್ನು ಬೆಳೆಸುವ ಉದ್ದೇಶವೇ ಇದರ ಹಿಂದೆ ಇದ್ದಿತೆಂದು ತೀರ್ಮಾನಿಸುವುದು ತಪ್ಪಾಗಲಾರದು.

ಸುರೇಂದ್ರನಾಥ ಬ್ಯಾನರ್ಜಿ, ಬಿಪಿನ ಚಂದ್ರ ಪಾಲ್ ಮತ್ತಿತರರ ನಾಯಕತ್ವದಲ್ಲಿದ್ದ ರಾಜಕೀಯ ವಿಚಾರವಂತರಿಗೆ ಬಂಗಾಳ ವಿಭಜನೆಯ ಹಿಂದಿದ್ದ ಉದ್ದೇಶವನ್ನು ಊಹಿಸಲು ಕಷ್ಟವಾಗಲಿಲ್ಲ. ಎರಡು ಬಂಗಾಳಗಳನ್ನು ಮತ್ತೆ ಒಂದುಗೂಡಿಸುವ ಪರಮೋದ್ದೇಶದಿಂದ ಅವರು ವಿಭಜನೆಯ ವಿರುದ್ಧ ಸಾಧ್ಯವಾದ ಎಲ್ಲ ರೀತಿಗಳಲ್ಲಿ ಹೋರಾಡಲು ನಿರ್ಧರಿಸಿದರು. 1905 ರ ಅಕ್ಟೋಬರ್ 16 ರಂದು ಬಂಗಾಳದ ವಿಭಜನೆಯು ಕಾರ್ಯಗತವಾಗುವುದಿತ್ತು. ಅಂದೇ ವಿಭಜನೆಯ ವಿರುದ್ಧದ ಚಳವಳಿಯನ್ನು ಪ್ರಾರಂಭಿಸಲು ಅವರು ತೀರ್ಮಾನಿಸಿದರು. ಚಳವಳಿಗೆ ಎರಡು ಮುಖಗಳು. ಸಭೆಗಳು, ಮೆರವಣಿಗೆಗಳು ಮತ್ತು ಬ್ರಿಟಿಷ್ ವಸ್ತುಗಳ ಬಹಿಷ್ಕಾರದ ಮೂಲಕ ಹೋರಾಟ ಕಾರ್ಯಕ್ರಮವನ್ನು ಕಾರ್ಯಗತ ಮಾಡುವುದು ಮೊದಲನೆಯದು, ಎರಡನೆಯದು ಬಂಗಾಳಿಗಳ ಭಾವೈಕ್ಯಕ್ಕೆ ಸಂಬಂಧಿಸಿದ ಕೆಲಸ ಕಾರ್ಯ.

ಸೂಕ್ಷ್ಮ ಹೃದಯದವರೂ ಪ್ರಬುದ್ಧ ದೇಶಾಭಿಮಾನ ಉಳ್ಳವರೂ ಆಗಿದ್ದ ಠಾಕೂರರಿಗೆ ಆಂದೋಳನದಲ್ಲಿ ಧುಮುಕದೆ ಇರಲು ಸಾಧ್ಯವಾಗಲಿಲ್ಲ. ಅವರ

ಕೌಟುಂಬಿಕ ಚಿಂತೆಗಳೂ ಸಾವಿನಿಂದಾದ ಅಗಲಿಕೆಗಳೂ ಸಹ ಅಡ್ಡಿಬಾರಲು ಶಕ್ತವಾಗ ಲಿಲ್ಲ. ಆಂದೋಳನದ ಎರಡನೆಯ ಭಾಗದಲ್ಲಿ–ಬಂಗಾಳಿಗಳ ಭಾವೈಕ್ಯವನ್ನು ಬೆಳೆಸುವುದರಲ್ಲಿ–ಠಾಕೂರರು ಆಸಕ್ತಿ ವಹಿಸಿದರು. ಈ ವಸ್ತುವಿನಲ್ಲಿ ಅವರ ಕವಿ ಹೃದಯ ಹೊಸದೊಂದು ಸ್ಫೂರ್ತಿಯ ನೆಲೆಯನ್ನು ಕಂಡಿತು. ಬಂಗಾಳಿಗಳ ಹೃದಯಗಳ ಸಂಗಮಕ್ಕಾಗಿ ಬೇಡುತ್ತ ರಾಷ್ಟ್ರಾಭಿಮಾನಿ ಭಾವನೆಗಳನ್ನುಕ್ಕಿಸುವ ಸೊಗಸಾದ ಗೀತೆಗಳು ಅವರ ದಿವ್ಯ ಲೇಖನಿಯಿಂದ ಚಿಮ್ಮಿದವು. ಈ ವಸ್ತುವನ್ನು ಕುರಿತು ಅವರು ಬರೆದ ಹಲವು ಗೀತೆಗಳು ಬಂಗಾಳಿಯಲ್ಲಿನ ದೇಶಭಕ್ತಿ ಗೀತೆಗಳ ಅತ್ಯುತ್ತಮ ಸಂಗ್ರಹವೆನಿಸಿದವು. ಅನಂತರದ ದಿನಗಳಲ್ಲಿ ಅವುಗಳಲ್ಲಿ ಕೆಲವು ಮಹಾತ್ಮ ಗಾಂಧಿಯವರಿಗೆ ಪ್ರಿಯವಾದವು, ಸಾಮಾನ್ಯವಾಗಿ ತಮ್ಮ ಪ್ರಾರ್ಥನಾ ಸಭೆಗಳಲ್ಲಿ ಅವರು ಅವನ್ನು ಹಾಡುತ್ತಿದ್ದರು.

ವಿಭಜನೆಗಾಗಿ ಆರಿಸಿದ್ದ ದಿನಕ್ಕೆ ಠಾಕೂರರು ಒಂದು ಕಾರ್ಯಕ್ರಮವನ್ನು ಸಿದ್ಧಗೊಳಿಸಿದರು. ಇದು ಜನತೆಯ ಹೃದಯಕ್ಕೆ ಎಷ್ಟರ ಮಟ್ಟಿಗೆ ಮುಟ್ಟಿ ತೆಂದರೆ ಅದು ವಾರ್ಷಿಕ ಧಾರ್ಮಿಕ ಕ್ರಿಯೆಯಾಗಿ ಹೋಯಿತು. ಇಂದಿಗೂ ಸ್ವಲ್ಪ ಮಟ್ಟಿಗೆ ಉಳಿದು ಬಂದಿದೆ. ವಿಭಜನೆಯ ದಿನವನ್ನು ಬಂಗಾಳಿಗಳು ಶೋಕ ದಿನವನ್ನಾಗಿ ಆಚರಿಸಬೇಕು. ಆದ್ದರಿಂದ ಅಂದು ಬಂಗಾಳಿಗಳ ಮನೆಗಳಲ್ಲಿ ಅಡುಗೆಯನ್ನು ಮಾಡಬಾರದು ಎಂದು ಕಾರ್ಯಕ್ರಮ ಸಲಹೆ ಮಾಡಿತು. ದೇಶಾಭಿಮಾನಿಯಾದ ಪ್ರತಿಯೊಬ್ಬ ಬಂಗಾಳಿಯೂ ಬೆಳಗ್ಗೆ ಬೇಗನೆ ಭಾಗೀರಥಿ ನದಿಯಲ್ಲಿ ಸ್ನಾನಮಾಡಿ ಅನಂತರ ಸಹ ಬಂಗಾಳಿಗಳಿಗೆ 'ರಾಖಿ'ಯನ್ನು ಕಟ್ಟಬೇಕು ಎಂದು ವಿಧಿಸಿತು. ದೈವೇಚ್ಛೆಯಂತೆ ಸೋದರ ಸೋದರಿಯರಾಗಿ ಹುಟ್ಟಿದವ ರನ್ನು ವಿದೇಶೀ ಅಧಿಕಾರದ ಅಹಿತವಾದ ಕ್ರಿಯೆಯಿಂದ ಬೇರ್ಪಡಿಸುವುದು ಸಾಧ್ಯ ವಿಲ್ಲ ಎಂಬುದನ್ನು ಸ್ಪಷ್ಟಪಡಿಸುವುದು ಇದರ ಉದ್ದೇಶ. 'ಓ ಪರಮಾತ್ಮ, ಎಲ್ಲ ಬಂಗಾಳೀ ಮನೆಗಳ ಸೋದರ ಸೋದರಿಯರ ಹೃದಯಗಳು ಒಂದಾಗಲಿ' ಎಂಬ ಪಲ್ಲವಿಯ ಹಾಡೊಂದನ್ನು ಠಾಕೂರರು ಈ ಕಾರ್ಯಕ್ರಮಕ್ಕಾಗಿಯೇ ರಚಿಸಿದರು.

ಠಾಕೂರರು, ಅವರ ನಾಯಕತ್ವದಲ್ಲಿನ ತಂಡವೂ ಕಾರ್ಯಕ್ರಮವನ್ನು ನಡೆಸಿದ ರೀತಿಯ ಒಂದು ಸ್ವಾರಸ್ಯವಾದ ವರ್ಣನೆ ಇದೆ. ಅವರ ಪ್ರತಿಭಾವಂತ ಸೋದರಳಿಯ, ಪ್ರಸಿದ್ಧ ಚಿತ್ರಕಾರರ ಅಬನೀಂದ್ರನಾಥರು ದಾಖಲೆ ಮಾಡಿಟ್ಟ

ವರದಿ ಅದು. ಠಾಕೂರರ ಸ್ವಭಾವದಲ್ಲಿ ಕಣ್ಣಿಗೆ ಬೀಳದ ಕೆಲವು ಅಂಶಗಳ ಮೇಲೆ ಇದು ಬೆಳಕನ್ನು ಚೆಲ್ಲುತ್ತದೆ.

ಠಾಕೂರರು ತಮ್ಮ ತಂಡವನ್ನು ತಮ್ಮ ಪೂರ್ವಿಕರ ಮನೆಯಿಂದ ಹತ್ತಿರದ ನದಿಗೆ ಕರೆದೊಯ್ದರು. ಸ್ನಾನವನ್ನು ಮುಗಿಸಿ ಅವರು ಆ ಸಂದರ್ಭಕ್ಕಾಗಿ ಠಾಕೂರರು ರಚಿಸಿದ್ದ ಹಾಡನ್ನು ಹಾಡುತ್ತ, ದಾರಿಯಲ್ಲಿ ಕಂಡ ಪ್ರತಿ ಬಂಗಾಳಿಯ ಮಣಿಕಟ್ಟಿಗೆ ರಾಖಿಯನ್ನು ಕಟ್ಟುತ್ತ ಮೆರವಣಿಗೆಯಲ್ಲಿ ನಡೆದರು. ಮೆರವಣಿಗೆ ಸಾಗಿದ ಪ್ರತಿ ರಸ್ತೆಯ ಎರಡು ಪಾರ್ಶ್ವಗಳಲ್ಲೂ ಹಲವು ಸಾಲುಗಳಲ್ಲಿ ನಿಂತ ಜನರ ಗುಂಪು ತುಂಬಿತ್ತು. ರಸ್ತೆಯ ಬದಿಯ ಮನೆಗಳ ಮೇಲಿನಿಂದ ಮತ್ತು ವರಾಂಡ ಗಳಿಂದ ಹೆಂಗಸರು ಶಂಖಗಳನ್ನು ಊದಿದರು. ಮರವಣಿಗೆಯಲ್ಲಿ ಹೋಗುತ್ತಿದ್ದ ವರ ಮೇಲೆ ಅಕ್ಷತೆ ಚೆಲ್ಲಿದರು. ಹೀಗೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು.

ಜನರಿಗೆ ರಕ್ಷಾ ಬಂಧನ ಮಾಡುವುದರಲ್ಲಿ ಠಾಕೂರರಿಗೆ ಎಷ್ಟೊಂದು ಉತ್ಸಾಹ ಉಕ್ಕಿತೆಂದರೆ ಇದನ್ನು ಮಿತಿ ಮೀರಿ ಕೊಂಡೊಯ್ಯುವುದಕ್ಕೂ ಅವರು ನಿರ್ಧರಿಸಿದರು. ಅವರು ಮನೆಗೆ ಹೋಗುವ ಮುಖ್ಯ ರಸ್ತೆಯಲ್ಲಿ ದಕ್ಷಿಣ ದಿಕ್ಕಿನಲ್ಲಿ ಸ್ವಲ್ಪ ದೂರದಲ್ಲಿ ಒಂದು ಮಸೀದಿ ಇದ್ದಿತು. ಮೆರವಣಿಗೆಯನ್ನು ಅಲ್ಲಿಗೆ ಕೊಂಡೊಯ್ದು ಅಲ್ಲಿರುವ ಮೌಲ್ವಿಗಳಿಗೆ ರಾಖಿ ಕಟ್ಟಲು ಅವರು ನಿರ್ಧರಿ ಸಿದರು. ಮೆರವಣಿಗೆಯಲ್ಲಿ ಅವರೊಡನೆ ಅವರ ಸೋದರಳಿಯಂದಿರು ಅಬನೀಂದ್ರ ನಾಥ ಮತ್ತು ಸತ್ಯೇಂದ್ರನಾಥರ ಮಗ ಸುರೇಂದ್ರನಾಥ ಇದ್ದರು. ಠಾಕೂರರ ಈ ಸಾಂಕೇತಿಕ ಕ್ರಿಯೆಯನ್ನು ಸರಿಯಾಗಿ ಗ್ರಹಿಸದೆ ಹೋಗಬಹುದು, ಅವರಿಗೆ ಅಸಮಾಧಾನವಾಗಿ ಜಗಳವನ್ನುಪ್ರಾರಂಭಿಸಿಯಾರು ಎಂದು ಅಬನೀಂದ್ರರ ಆತಂಕ. ಧೈರ್ಯದ ಮುಖ್ಯ ಅಂಶ ಪಲಾಯನವೇ ಎಂದುಕೊಂಡು ಆತ ಮೆರವಣಿಗೆಯಿಂದ ದೂರಸರಿದ. ಆದರೆ ಠಾಕೂರರು ಮಸೀದಿಗೆ ಹೋಗಿಯೇ ಹೋದರು. ಅಲ್ಲಿದ್ದವರ ಕೈಗೆ ರಾಖಿ ಕಟ್ಟಿಯೇ ಕಟ್ಟಿದರು. ಯಾರೂ ಇದರಿಂದ ಅಸಂತೋಷ ಗೊಳ್ಳಲಿಲ್ಲ. ಮೆರವಣಿಗೆ ಶಾಂತಿಯಿಂದ ಮುಗಿಯಿತು.*

ಚಳವಳಿಯು ಪ್ರಾರಂಭವಾದಾಗ ಸರ್ಕಾರವು ಅದನ್ನು ಸಾಧ್ಯವಾದಷ್ಟು

---

* ಅಬನೀಂದ್ರನಾಥ—'ಘಾರ್ವ'

ಮಿತಿಯಲ್ಲಿಡಬೇಕೆಂದು ಸಂಕಲ್ಪ ಮಾಡಿತ್ತು. ಇದಕ್ಕಾಗಿ ಸರ್ಕಾರ ಎಲ್ಲ ವಿದ್ಯಾಸಂಸ್ಥೆಗಳಿಗೂ ಒಂದು ಸುತ್ತೋಲೆಯನ್ನು ಕಳುಹಿಸಿ ವಿದ್ಯಾರ್ಥಿಗಳ ಚಳವಳಿಯಲ್ಲಿ ಭಾಗವಹಿಸಬಾರದೆಂದು ಅಜ್ಞೆ ಮಾಡಿತು. ಚಳವಳಿಯ ಮುಖಂಡರು ಸರ್ಕಾರದ ಈ ಆಜ್ಞೆಯ ವಿರುದ್ಧ ಪ್ರತಿಭಟನೆಯನ್ನು ವ್ಯಕ್ತಪಡಿಸಲು ಒಂದು ಬಹಿರಂಗ ಸಭೆಯ ವ್ಯವಸ್ಥೆ ಮಾಡಿದರು. ವಿದ್ಯಾಸಂಸ್ಥೆಗಳನ್ನು ಸರ್ಕಾರದ ಮುಷ್ಟಿಯಿಂದ ದೂರವಿಡಲು ಕ್ರಮಕೈಗೊಳ್ಳಬೇಕೆಂದೂ ಅವರು ನಿರ್ಧರಿಸಿದರು. ಈ ನಿರ್ಧಾರವನ್ನು ಕಾರ್ಯಗತ ಮಾಡುವ ಪ್ರಯತ್ನದಿಂದ ಮಹತ್ವದ ಬೆಳವಣಿಗೆಗಳಾದವು. ಮೊದಲ ಹೆಜ್ಜೆಯಾಗಿ ರಾಷ್ಟ್ರೀಯ ಶಿಕ್ಷಣ ಮಂಡಳಿ (ನ್ಯಾಷನಲ್ ಕೌನ್ಸಿಲ್ ಆಫ್ ಎಜ್ಯುಕೇಷನ್) ಯನ್ನು ಸ್ಥಾಪಿಸಬೇಕೆಂದು ತೀರ್ಮಾನವಾಯಿತು. ಸಾಕಷ್ಟು ಹಣ ಸಹಾಯ ಬಂದಿದ್ದರಿಂದ 1906 ರ ಆಗಸ್ಟ್ 15 ರಂದು ಮಂಡಳಿಯನ್ನು ಪ್ರಾರಂಭಿಸಲು ಸಾಧ್ಯವಾಯಿತು. ಶ್ರೀ ಅರವಿಂದರು ಹೊಸ ಸಂಸ್ಥೆಯ ಮೊಟ್ಟ ಮೊದಲು ಪ್ರಿನ್ಸಿಪಾಲರಾಗಲು ಬರೋಡದಲ್ಲಿ ತಮಗಿದ್ದ ನೌಕರಿಯನ್ನು ತ್ಯಜಿಸಿದರು. ಇದೇ ಸಂಸ್ಥೆ ಮುಂದೆ ಜಾಧವ್‌ಪುರ ವಿಶ್ವವಿದ್ಯಾನಿಲಯವಾಯಿತು. ಇದು ಸ್ವಾತಂತ್ರ್ಯ ಬಂದನಂತರ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನಕ್ಕೆ ಮುಡಿಪಾಗಿದೆ.

ಆಂದೋಳನದ ಪ್ರಥಮ ಪಂಕ್ತಿಯಲ್ಲಿದ್ದ ಠಾಕೂರರೂ ಈ ಸಂಸ್ಥೆಯೊಂದಿಗೆ ಬಾಂಧವ್ಯ ಬೆಳೆಸಿಕೊಂಡರು. ಅದರ ಶೈಕ್ಷಣಿಕ ಧೋರಣೆಯನ್ನು ರೂಪಿಸುವುದರಲ್ಲಿ ಮತ್ತು ಅದರ ಶಿಕ್ಷಣ ವಿಷಯಗಳ ಕ್ರಮವನ್ನು ನಿರ್ಧರಿಸುವುದರಲ್ಲಿ ಅವರ ಪಾತ್ರವಿತ್ತು. ಸಂಸ್ಥೆಯ ಬಂಗಾಳೀ ಭಾಷೆ ಮತ್ತು ಸಾಹಿತ್ಯಗಳ ವಿಭಾಗವನ್ನು ನಿರ್ವಹಿಸುವ ಹೊಣೆಯನ್ನು ಅವರಿಗೆ ವಹಿಸಿಕೊಡಲಾಯಿತು.*

ಆದರೆ ವಿಭಜನೆಯ ವಿರುದ್ಧದ ಚಳವಳಿಯಲ್ಲಿ ಠಾಕೂರರು ಬಹು ಕಾಲ ನಿಲ್ಲಲಿಲ್ಲ. ತಮ್ಮ ಸಹಕಾರ್ಯಕರ್ತರನ್ನು ಬಿಟ್ಟು ಬೇರೆ ಹಾದಿ ಹಿಡಿಯಬೇಕೆಂದೂ ಸ್ವಲ್ಪ ಕಾಲದಲ್ಲಿ ಅವರಿಗೆನ್ನಿಸಿತು. ಚಳವಳಿ ಶಾಲೆಗಳ ಬಹಿಷ್ಕಾರಕ್ಕೆ ಕರೆಕೊಟ್ಟಿತು. ಇದು ನೇತ್ಯಾತ್ಮಕ ತ್ಯಾಗ, ವಿದ್ಯಾರಾಹಿತ್ಯಕ್ಕೆ ದಾರಿ ಎನ್ನಿಸಿತು ಠಾಕೂರರಿಗೆ. ಜೊತೆಗೆ ಬ್ರಿಟಿಷ್ ವಸ್ತುಗಳ ಬಹಿಷ್ಕಾರವೂ ಅವರಿಗೆ ನೇತ್ಯಾತ್ಮಕ

---

* ಪ್ರಭಾತ್ ಕುಮಾರ್ ಮುಖ್ಯೋಪಾಧ್ಯಾಯ, 'ರಬೀಂದ್ರ ಜೀವನೀ'

ಎನ್ನಿಸಿತು. ಸ್ವದೇಶೀ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ಕಾರ್ಯಕ್ರಮವಾಗಿದ್ದರೆ ಇನ್ನೂ ಕ್ರಿಯಾಶೀಲವಾಗಿರುತ್ತಿತ್ತು. ಕಡೆಗೆ ಅವರು ಶಿಕ್ಷಣ ತಜ್ಞರಾಗಿ ತಮ್ಮ ಕೆಲಸವನ್ನು ಶಾಂತಿನಿಕೇತನದ ಪ್ರಶಾಂತ ವಾತಾವರಣದಲ್ಲಿ ಮುಂದುವರೆಸಲು ಚಳವಳಿಯಿಂದ ದೂರವಾಗಬೇಕಾಯಿತು.

ವಿದೇಶೀ ಪ್ರಭುಗಳು ಕಣ್ಣಿಗೆ ಹೊಡೆಯುವಂತಹ ಅನ್ಯಾಯದ ಕಾರ್ಯವನ್ನು ಮಾಡಿದಾಗ ಮತ್ತು ಅದಕ್ಕೆ ಪ್ರತಿಭಟನೆಯನ್ನು ವ್ಯಕ್ತಿಪಡಿಸಿದಾಗ ಮಾಡುವ ಪ್ರತಿಕ್ರಿಯೆಯನ್ನು ಕುರಿತು ತಮ್ಮ ಭಾವನೆಯನ್ನು ಠಾಕೂರರೇ ಹೇಳಿದ್ದಾರೆ. ತಮ್ಮ ಗೆಳೆಯ ಸಿ.ಎಫ್. ಆಂಡ್ರ್ಯೂಸ್‌ರಿಗೆ 1920 ರಲ್ಲಿ ಬರೆದ ಕಾಗದದಲ್ಲಿ ಹೀಗೆ ಹೇಳಿದ್ದಾರೆ :

"ಸ್ವದೇಶೀ, ಸ್ವರಾಜ್ಯ ಇವು ಸಾಮಾನ್ಯವಾಗಿ ನನ್ನ ದೇಶಬಾಂಧವರಲ್ಲಿ ತೀವ್ರ ಉದ್ರೇಕವನ್ನು ಉಂಟು ಮಾಡುತ್ತವೆ. ಏಕೆಂದರೆ ಅವರ ರೋಷ ಬಹಿಷ್ಕಾರ ನೀತಿಯಿಂದ ಹುಟ್ಟಿದ ರಾಗಗಳ ಕಾವು ಅವುಗಳಲ್ಲಿ ಸೇರಿದೆ. ಈ ಕಾವು, ಚಳವಳಿಗಳು ನನ್ನ ಮೇಲೆ ಪ್ರಭಾವ ಬೀರುವುದೇ ಇಲ್ಲ ಎಂದು ನಾನು ಹೇಳಲಾರೆ. ಆದರೆ ಏಕೋ ಕವಿಯಾಗಿ ನಾನು ಈ ಗುರಿಗಳೇ ಅಂತಿಮ ಗುರಿಗಳು ಎಂದು ಒಪ್ಪಲಾರೆ. ಇವಕ್ಕೆ ನ್ಯಾಯವಾಗಿ ಸಲ್ಲಬೇಕಾದುದಕ್ಕಿಂತ ಹೆಚ್ಚನ್ನು ಇವು ಬಯಸುತ್ತವೆ. ಒಂದು ಬಿಂದುವನ್ನು ಮುಟ್ಟಿದ ನಂತರ, ನಾನು ಯಾರೊಂದಿಗೆ ಕೆಲಸ ಮಾಡುತ್ತಿದ್ದೆನೋ ಅವರಿಂದ ದೂರವಾಗುವುದು ಅನಿವಾರ್ಯ ಎನ್ನಿಸುತ್ತದೆ."*

ಈ ಆತ್ಮಶೋಧದ ಮಾತುಗಳು ಅವರು ಮುಂದೆ ತಮ್ಮ ಜೀವನದಲ್ಲಿ ನಡೆದುಕೊಂಡ ರೀತಿಯನ್ನು ಅರ್ಥಮಾಡಿಕೊಳ್ಳುವುದಕ್ಕೂ ದಾರಿಯಾಗುತ್ತದೆ. ಶತಮಾನದ ಮೊದಲ ದಶಕದ ಕಡೆಯ ಭಾಗದಲ್ಲಿ ಅವರು ರಾಜಕೀಯ ಚಳವಳಿಗಳಿಂದ ದೂರವಾದ ಮೇಲೆ ಠಾಕೂರರ ಕಾಲ ಎರಡು ಆಸಕ್ತಿಗಳಿಗೆ–ಸಾಹಿತ್ಯದ ಚಟುವಟಿಕೆಗಳು ಮತ್ತು ಶಾಂತಿನಿಕೇತನದಲ್ಲಿದ್ದ ಶಿಕ್ಷಣ ಸಂಸ್ಥೆ ಇವುಗಳಿಗೆ–ವಿನಿಯೋಗವಾಯಿತು. ರಾಜಕೀಯ ಪ್ರವಾಹ ಅವರನ್ನು ಮುಟ್ಟಲಿಲ್ಲವೆಂದೇ ಹೇಳಬಹುದು. ಆದರೆ, ಜಾಲಿಯನ್‌ವಾಲಾಬಾಗ್ ಕಗ್ಗೊಲೆ ಮತ್ತು ಅನಂತರ

---

* ರತೀಂದ್ರನಾಥ ಠಾಕೂರ್, 'ಆನ್‌ದಿ ಎಡ್ಜಸ್ ಅಫ್ ಟೈಂ', ಸ್ವದೇಶಿ ಚಳವಳಿ

ನಡೆದ ಘಟನೆಗಳಿಂದ ದಿಗ್ಭ್ರಮೆಗೊಂಡ ಅವರು ತಮ್ಮ ಮೌನವನ್ನು ಮುರಿದರು. ತಮ್ಮ ಪ್ರತಿಭಟನೆಯನ್ನು ದಾಖಲೆ ಮಾಡಿಡಲು ತೀರ್ಮಾನಿಸಿದರು.

ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ ಬ್ರಿಟಿಷ್ ಸರ್ಕಾರವು ಭಾರತಕ್ಕೆ ಹಂತ ಹಂತಗಳಲ್ಲಿ ರಾಜಕೀಯ ಸ್ವಾತಂತ್ರ್ಯವನ್ನು ಮರಳಿ ನೀಡುವುದಾಗಿ ಘೋಷಿಸಿತ್ತು. ಯುದ್ಧ ಮುಗಿದ ನಂತರವೂ ಈ ಘೋಷಣೆಯನ್ನು ಕಾರ್ಯರೂಪಕ್ಕೆ ತರುವ ಮೂರ್ತ ಕ್ರಿಯೆಯ ಸೂಚನೆ ಏನೂ ಕಾಣದೆ ಹೋದಾಗ ಜನ ಸಮಾಧಾನವನ್ನು ಕಳೆದುಕೊಂಡರು. ಚಳವಳಿಯೊಂದನ್ನು ಪ್ರಾರಂಭಿಸಲು ಸನ್ನದ್ಧರಾದರು. ತೊಂದರೆ ಬಂದೀತೆಂದು ನಿರೀಕ್ಷಿಸಿ ಸಾಮ್ರಾಜ್ಯಶಾಹಿ ಸರ್ಕಾರವು ಕೇಂದ್ರ ಶಾಸನ ಸಭೆ (ಸೆಂಟ್ರಲ್ ಕೌನ್ಸಿಲ್) ಯಲ್ಲಿ ಒಂದು ಮಸೂದೆಯನ್ನು ಮಂಡಿಸಿತು. ಈ ಮಸೂದೆಯು ಯಾರನ್ನಾದರೂ ವಿಚಾರಣೆ ಇಲ್ಲದೆ ಬಂಧನದಲ್ಲಿಡಲು ಸರ್ಕಾರಕ್ಕೆ ಅಧಿಕಾರ ನೀಡುತ್ತಿತ್ತು. ಇದು "ರೌಲಟ್ ಬಿಲ್" ಎಂದು ಕುಪ್ರಸಿದ್ಧವಾಯಿತು. ಈ ಹೊತ್ತಿಗೆ ಮಹಾತ್ಮ ಗಾಂಧಿಯವರು ಭಾರತದ ರಾಜಕೀಯವನ್ನು ಪ್ರವೇಶಿಸಿದ್ದರು. ಈ ಶಾಸನದ ವಿರುದ್ಧ ಅವರ ನಾಯಕತ್ವದಲ್ಲಿ ಪ್ರಬಲವಾದ ಚಳವಳಿಯನ್ನು ಹೂಡಕಲಾಯಿತು. ಈ ಶಾಸನಕ್ಕೆ ಪ್ರತಿಭಟನೆ ವ್ಯಕ್ತಪಡಿಸಲು 1919 ರ ಮಾರ್ಚ್ 30 ರಂದು (ಅನಂತರ ಇದನ್ನು ಏಪ್ರಿಲ್ 6 ಕ್ಕೆ ಬದಲಾಯಿಸಲಾಯಿತು) ದೇಶಾದ್ಯಂತ ಹರತಾಳ ನಡೆಯಬೇಕೆಂದು ಗಾಂಧೀಜಿ ನಿರ್ಧರಿಸಿದ್ದರು. ಅಧಿಕಾರಿಗಳು ಅನುಸರಿಸಿದ ದಬ್ಬಾಳಿಕೆಯ ಕ್ರಮಗಳಿಂದಾಗಿ ಈ ಚಳವಳಿ ಪಂಜಾಬಿನಲ್ಲಿ ತೀವ್ರ ಸ್ವರೂಪವನ್ನು ಪಡೆಯಿತು. ಅಮೃತಸರದಲ್ಲೂ ಪಂಜಾಬಿನ ಇತರ ಸ್ಥಳಗಳಲ್ಲೂ ನಡೆದ ಹತ್ಯೆ ಮತ್ತು ಕ್ರೌರ್ಯದ ವಿರುದ್ಧ ಪ್ರತಿಭಟಿಸಲು ಅಮೃತಸರದಲ್ಲಿ 1919 ರ ಏಪ್ರಿಲ್ 13 ರಂದು ಒಂದು ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಯಿತು. ನಿರಾಯುಧರಾದ ಸಾವಿರಾರು ಮಂದಿ ಸಭೆಗಾಗಿ ಜಾಲಿಯನ್‌ವಾಲಾಬಾಗಿನಲ್ಲಿ ಸೇರಿದರು. ಅಲ್ಲಿದ್ದ ಮೈದಾನ ಪ್ರದೇಶದ ಸುತ್ತು ಎತ್ತರವಾದ ಗೋಡೆಗಳಿದ್ದವು. ಆದರ ಪ್ರವೇಶ ದ್ವಾರವಿದ್ದದ್ದೂ ಒಂದು ಸಣ್ಣ ಓಣಿಯಲ್ಲಿ. ಒಂದು ಭೀಭತ್ಸ ಸ್ಫೂರ್ತಿಯಿಂದ ಡೈಯರ್ ಎನ್ನುವ ಬ್ರಿಟಿಷ್ ಸೈನ್ಯಾಧಿಕಾರಿಯು ಪ್ರವೇಶ ದ್ವಾರದ ಸುತ್ತ ಸೈನಿಕರನ್ನು ನಿಲ್ಲಿಸಿ, ಆಲ್ಲಿ ಸೇರಿದ್ದ ಜನರ ಮೇಲೆ ಗುಂಡು ಹಾರಿಸಲು ಪ್ರಾರಂಭಿಸಿದ. ತಪ್ಪಿಸಿಕೊಳ್ಳಲು ದಾರಿಯೇ ಇಲ್ಲದ ಜನ ಗುಂಡಿಗೆ ಆಹುತಿಯಾಗಿ ಉರುಳಿದರು. ಸತ್ತವರೇ 379 ಮಂದಿ; ಗಾಯಗೊಂಡರು ಇದಕ್ಕೆ ಎಷ್ಟೋ ಪಟ್ಟು.

ನಿರಪರಾಧಿ ಜನರ ಈ ಕಗ್ಗೊಲೆಯ ಸುದ್ದಿ ಶಾಂತಿನಿಕೇತನಕ್ಕೆ ತಲುಪಿದಾಗ ಠಾಕೂರರ ಹೃದಯ ಕರಗಿತು. ಕಾರ್ಯೋನ್ಮುಖರಾಗುವುದು ಅಗತ್ಯ ಎಂದು ಭಾವಿಸಿ ಅವರು ಕಲ್ಕತ್ತೆಗೆ ಬಂದರು. ಬ್ರಿಟಿಷ್ ಚಕ್ರವರ್ತಿ ಅವರಿಗೆ 1916 ರಲ್ಲಿ ನೈಟ್‌ಹುಡ್ ಪ್ರಶಸ್ತಿಯನ್ನು ನೀಡಿದ್ದ. ತಮ್ಮ ವೈಯಕ್ತಿಕ ಪ್ರತಿಭಟನೆಯನ್ನು ಸ್ಪಷ್ಟಪಡಿಸಲು ಅವರು ಈ ಪ್ರಶಸ್ತಿಯನ್ನು ಬಿಟ್ಟುಕೊಡಲು ನಿರ್ಧರಿಸಿದರು. ತಮ್ಮ ನಿರ್ಧಾರವನ್ನು ತಿಳಿಸಲು ಅವರು 1919 ರ ಮೇ 29 ರಂದು ವೈಸ ರಾಯರಿಗೆ ಒಂದು ಪತ್ರವನ್ನು ಬರೆದರು. ಬ್ರಿಟಿಷ್ ಸಾಮ್ರಾಜ್ಯಶಾಹಿಯು ಅತ್ಯಂತ ಕೀಳ್ಮಟ್ಟದಲ್ಲಿ ಪ್ರೋತ್ಸಾಹಿಸಿ, ಪರೋಕ್ಷವಾಗಿ ಸಮರ್ಥಿಸಿದ ದೌರ್ಜನ್ಯ ವನ್ನು ಖಂಡಿಸಿ, ಆ ಮೂಲಕ ಅದರ ವಿಕೃತ ಲಕ್ಷಣಗಳತ್ತ ಜಗತ್ತಿನ ಕಣ್ಣನ್ನು ಸೆಳೆಯುವಲ್ಲಿ ಅದು ರೂಪಿಸಿದ ಉನ್ನತ ನೈತಿಕ ಧಾಟಿಯಿಂದಾಗಿ ಈ ಪತ್ರಕ್ಕೆ ವಿಶಿಷ್ಟ ಮಹತ್ವ ಬಂದಿತು. ತಮ್ಮ ಕಾಗದದಲ್ಲಿ ಠಾಕೂರರು ಹೀಗೆ ಹೇಳಿದರು. "ಒಂದಿಷ್ಟು ಸ್ಥಳೀಯ ಗಲಭೆಗಳನ್ನು ಹತ್ತಿಕ್ಕಲು ಪಂಜಾಬ್ ಸರ್ಕಾರ ಕೈಗೊಂಡ ಕ್ರಮಗಳ ಮಹತ್ತಾದ ಪ್ರಮಾಣವು ನಮಗೆ ಹಠಾತ್ತಾದ ಆಘಾತವನ್ನುಂಟು ಮಾಡಿ, ಭಾರತದಲ್ಲಿ ಬ್ರಿಟಿಷ್ ಪ್ರಜೆಗಳಾಗಿ ನಮ್ಮ ನಿಸ್ಸಹಾಯಕ ಸ್ಥಿತಿಯನ್ನು ತೋರಿಸಿಕೊಟ್ಟಿದೆ. ದುರದೃಷ್ಟಶಾಲಿಗಳಾದ ಜನತೆ ಮೇಲೆ ವಿಧಿಸಿದ ಶಿಕ್ಷೆಗಳ ಪ್ರಮಾಣರಹಿತ ಕ್ರೌರ್ಯ ಮತ್ತು ಅವನ್ನು ಕಾರ್ಯಗತ ಮಾಡಿದ ವಿಧಾನಗಳಿಗೆ, ನಾಗರಿಕ ಸರ್ಕಾರಗಳ ಹಿಂದಿನ ಅಥವಾ ಈಚಿಗಿನ ಇತಿಹಾಸದಲ್ಲೆ, ಕೆಲವೇ ಸ್ಪಷ್ಟ ನಿದರ್ಶನಗಳ ಹೊರತಾಗಿ, ಸಾದೃಶ್ಯವೇ ಇಲ್ಲ ಎಂದು ನಮಗೆ ಮನದಟ್ಟಾಗಿದೆ. ಮನುಷ್ಯ ಜೀವನಗಳನ್ನು ಒರೆಸಿ ಹಾಕಲು ಅತ್ಯಂತ ಸಮರ್ಥ ವ್ಯವಸ್ಥೆಯನ್ನು ಹೊಂದಿರುವ ಶಕ್ತಿಯು ನಿರಾಯುಧರೂ ಸಾಧನರಹಿತರೂ ಆದ ಜನತೆಯನ್ನು ಈ ರೀತಿಯಲ್ಲಿ ನಡೆಸಿಕೊಳ್ಳುತ್ತಿದೆ ಎಂಬುದನ್ನು ಯೋಚಿಸಿದಾಗ, ಅದು ರಾಜಕೀಯ ಅನುಕೂಲದ ಕಾರಣವನ್ನು ಕೊಡುವಂತಿಲ್ಲ. ನೈತಿಕ ಸಮರ್ಥನೆ ಯಂತೂ ಇಲ್ಲವೇ ಇಲ್ಲ ಎಂಬುದನ್ನು ನಾವು ಪ್ರಬಲವಾಗಿ ಘೋಷಿಸಬೇಕಾಗಿದೆ."

'ನೈಟ್‌ಹುಡ್'ನ ಪ್ರಶಸ್ತಿಯನ್ನು ತಮ್ಮಿಂದ ತೆಗೆದುಕೊಂಡು ಬಿಡಬೇಕೆಂದು ವೈಸರಾಯರಿಗೆ ತಿಳಿಸುತ್ತ ಅವರೆಂದರು : "ತೇಜೋವಧೆಯ ಅಸಂಗತ ಸಂದರ್ಭ ದಲ್ಲಿ ಮನ್ನಣೆಯ ಸಂಕೇತಗಳು ನಮ್ಮ ಅಸಮಾನ ಕಣ್ಣಿಗೆ ರಾಚುವಂತೆ ಮಾಡುವ ಕಾಲ ಬಂದಿದೆ. ನನ್ನ ಮಟ್ಟಿಗೆ ಹೇಳುವುದಾದರೆ, ಎಲ್ಲ ವಿಶೇಷ ಗೌರವಗಳನ್ನು ಕಳೆದುಕೊಂಡು ನಾನು, ಯಃಕಶ್ಚಿತ್ ಜನರೆನ್ನಿಸಿಕೊಂಡುದಕ್ಕಾಗಿ ಮನುಷ್ಯ

ಮಾತ್ರರಿಗೆ ಅನುಭವವಾಗಬಾರದ ಹೀನಾಯಕ್ಕೆ ಗುರಿಯಾಗುವ ನನ್ನ ದೇಶಬಾಂಧವರ ಪಕ್ಕದಲ್ಲಿ ನಿಲ್ಲಬಯಸುತ್ತೇನೆ."

ರಾಜಕೀಯ ಚಟುವಟಿಕೆಗಳಿಂದ ಠಾಕೂರರು ಹಿಂದಕ್ಕೆ ಸಂದ ವಿಷಯಕ್ಕೆ ಮರಳೋಣ. ಅವರ ಹೆಜ್ಜೆಗೆ ಕಾರಣವನ್ನು ಪ್ರಾಯಶಃ ಸ್ವಾತಂತ್ರ್ಯದ ವಿಷಯದಲ್ಲಿ ಅವರ ವೈಯಕ್ತಿಕ ಅಭಿಪ್ರಾಯಗಳಲ್ಲಿ ಗುರುತಿಸಬಹುದು. 1904 ರಷ್ಟು ಮೊದಲೇ ಠಾಕೂರರು ತಮ್ಮ ಅಭಿಪ್ರಾಯಗಳನ್ನು 'ಸ್ವದೇಶೀ ಸಮಾಜ' ಎನ್ನುವ ಕೃತಿಯಲ್ಲಿ ವ್ಯಕ್ತಪಡಿಸಿದರು.

ದೇಶದ ಇತಿಹಾಸವನ್ನು ಅಧ್ಯಯನ ಮಾಡಿ ಅವರು, ರಾಜಕೀಯ ವ್ಯವಸ್ಥೆಯಲ್ಲಿ ಮಾರ್ಪಾಟುಗಳು ಅಥವಾ ಹೊರಗಿನ ಶಕ್ತಿಯೊಂದರ ಆಕ್ರಮಣ ಇವುಗಳಿಂದ ಭಾರತದ ಸಂಸ್ಕೃತಿ ಮತ್ತು ಜನತೆಯ ಪ್ರಾಪಂಚಿಕ ಕಲ್ಯಾಣ ಇವುಗಳಲ್ಲಿ ಯಾವುದೇ ವ್ಯತ್ಯಾಸವಾಗಲಿಲ್ಲ ಎಂಬುದನ್ನು ಗಮನಿಸಿದರು. ಅವರ ಅಭಿಪ್ರಾಯದಲ್ಲಿ, ಇದಕ್ಕೆ ಕಾರಣ ಅಧಿಕಾರ ಚಲಾಯಿಸುವವರಿಗೆ ತಮ್ಮ ಸ್ವಂತ ನೆಮ್ಮದಿಯಲ್ಲಷ್ಟೇ ಆಸಕ್ತಿ ಇತ್ತು. ಆದ್ದರಿಂದ ಅವರು ಪ್ರಜೆಗಳ ಕಲ್ಯಾಣದತ್ತ ಗಮನವನ್ನು ಹರಿಸಲೂ, ಅವರ ಸಂಸ್ಕೃತಿಯಲ್ಲಿ ಕೈಹಾಕಲೂ ಇಲ್ಲ ಎನ್ನುವುದು. ಇದರ ಪರಿಣಾಮವಾಗಿ, ಜನತೆಯ ಕಲ್ಯಾಣದ ಹೊಣೆ ಸಮಾಜದ್ದಾಯಿತು. ಈ ಪ್ರಕ್ರಿಯೆಯಲ್ಲಿ ಸಮಾಜವು ಎರಡನೆಯ ಅಧಿಕಾರ ಕೇಂದ್ರವಾಯಿತು. ಹೀಗೆ ಕೆಲಸ ಕಾರ್ಯಗಳನ್ನು ಹಂಚಿಕೊಂಡಿದ್ದರಿಂದಲೇ ಭಾರತವು, ಹಲವಾರು ರಾಜಕೀಯ ವ್ಯತ್ಯಾಸಗಳಾದರೂ ಸಾಮಾಜಿಕ ಕಲ್ಯಾಣದ ಚಟುವಟಿಕೆಗಳ ವ್ಯವಸ್ಥೆಯನ್ನೂ ತನ್ನ ಸಂಸ್ಕೃತಿಯನ್ನೂ ಅವಿಚ್ಛಿನ್ನವಾಗಿ ಉಳಿಸಿಕೊಂಡು ಬರಲು ಶಕ್ಯವಾಯಿತು.

ಇದಕ್ಕೆ ಪ್ರತಿಯಾಗಿ, ರಾಜಕೀಯ ಕರ್ತವ್ಯಗಳನ್ನಲ್ಲದೆ ಸಮಾಜ ಕಲ್ಯಾಣದ ಚಟುವಟಿಕೆಗಳನ್ನೂ ವಹಿಸಿಕೊಂಡ ವ್ಯವಸ್ಥೆಯನ್ನು ಪಶ್ಚಿಮ ಜಗತ್ತು ಪೋಷಿಸಿತು. ಈ ಹೊಸ ವ್ಯವಸ್ಥೆಯನ್ನು ಪಶ್ಚಿಮದಿಂದ ಎರವಲು ತಂದು ನಮ್ಮ ನೆಲದಲ್ಲಿ ನೆಡುವುದು ಅವರಿಗೆ ಒಪ್ಪಿಗೆಯಾಗಲಿಲ್ಲ. ಪರಕೀಯ ಪ್ರಭುತ್ವ ಈ ನಾಡನ್ನಾಳುತ್ತಿದ್ದರೂ ನಮ್ಮ ಹಿಂದಿನ ವ್ಯವಸ್ಥೆಯ ಮೂಲಕವೇ ನಮ್ಮ ಕಲ್ಯಾಣವನ್ನು ಸಾಧಿಸಬಹುದೆಂದು ಅವರ ನಂಬಿಕೆ.*

* 'ಆತ್ಮಶಕ್ತಿ ಓ ಸಮೂಬಯ್'

ತಮ್ಮ ಈ ಸಿದ್ಧಾಂತದ ಬಗೆಗೆ ಉತ್ಸಾಹ ತಾಳಿ ಠಾಕೂರರು ಅದಕ್ಕೆ ಸಾರ್ವಜನಿಕ ಸಭೆಗಳಲ್ಲಿ ಪ್ರಚಾರ ನೀಡಲು ಕಾರ್ಯಕ್ರಮಗಳನ್ನು ಕೈಗೊಂಡರು. ಒಂದು ಮೂರ್ತ ಯೋಜನೆಯನ್ನೇ ಸಿದ್ಧಗೊಳಿಸಿದರು. ಅದರ ನಾಯಕನು ಚುನಾಯಿತನಾಗಬೇಕು, ಆತ 'ಸಮಾಜಪತಿ', ಅವನ ಮಾರ್ಗದರ್ಶನದಲ್ಲಿ ಈ ಸಂಸ್ಥೆಯು ವಿದ್ಯಾಭ್ಯಾಸ, ಕೃಷಿ, ನ್ಯಾಯಪದ್ಧತಿ ಮತ್ತು ಸಾರ್ವಜನಿಕ ಆರೋಗ್ಯಗಳಲ್ಲದೆ ಸ್ವದೇಶೀ ಕೈಗಾರಿಕೆಗಳಂತಹ ಕೆಲಸಕಾರ್ಯಗಳನ್ನು ವಹಿಸಿಕೊಳ್ಳಬೇಕು. ಹಿಂದಿನ ಗ್ರಾಮ ಪಂಚಾಯತಿಗಳನ್ನು ಪುನಶ್ಚೇತನಗೊಳಿಸುವುದರ ಮೂಲಕ ನಿರ್ಮಿಸುವ ಸ್ಥಳೀಯ ಸಂಸ್ಥೆಗಳು ಈ ಯೋಜನೆಗಳನ್ನು ಕಾರ್ಯಗತ ಮಾಡುವುವು.*

ಠಾಕೂರರು ಸಿದ್ಧಗೊಳಿಸಿ ಅಭಿಪ್ರಾಯಕ್ಕಾಗಿ ಕಳುಹಿಸಿಕೊಟ್ಟ ಕಾರ್ಯಕ್ರಮವು ವಿದ್ಯಾಭ್ಯಾಸ, ಆರೋಗ್ಯ, ಕುಶಲಕಲೆಗಳು, ವಾಣಿಜ್ಯ, ನ್ಯಾಯವ್ಯವಸ್ಥೆ, ಯೋಗ್ಯ ಸಾಮಾಜಿಕ ನಡತೆಯನ್ನು ಖಚಿತಗೊಳಿಸುವುದು ಇಂತಹ ಅಂಶಗಳನ್ನು ಒಳಗೊಂಡಿತ್ತು. ಕುತೂಹಲಕರವಾದ ಸಂಗತಿ ಎಂದರೆ, 'ಪಾಶ್ಚಾತ್ಯ ಉಡುಪು ಮತ್ತು ಜೀವನ ರೀತಿಗಳನ್ನು ಅನುಸರಿಸಬಾರದು ಮತ್ತು ಪಶ್ಚಿಮದಲ್ಲಿ ಸೃಷ್ಟಿಯಾದ ವಸ್ತುಗಳನ್ನು ಕೊಳ್ಳಬಾರದು ಎಂದು ಅದು ವಿಧಿಸಿತು. ಈ ಕಾರ್ಯಕ್ರಮಕ್ಕೆ ಹಣವನ್ನು ಕಲ್ಯಾಣ ಕಾರ್ಯಗಳಿಗಾಗಿ ಶುಲ್ಕವನ್ನು ವಿಧಿಸುವುದರಿಂದ ಮತ್ತು ದಾನಧರ್ಮಗಳಿಂದ ಸಂಗ್ರಹಿಸಬೇಕಾಗಿತ್ತು. ಹೀಗೆ ಶುಲ್ಕ ವಿಧಿಸುವ ಪದ್ಧತಿ ಬಂಗಾಳದ ಗ್ರಾಮೀಣ ಪ್ರದೇಶದಲ್ಲಿ ಆಚರಣೆಯಲ್ಲಿದೆ. ಇದಕ್ಕೆ 'ಈಶ್ವರ ವೃತ್ತಿ' ಎಂದು ಹೆಸರು.

ಎರಡು ಸಾರ್ವಜನಿಕ ಸಭೆಗಳಲ್ಲಿ ಈ ಕಾರ್ಯಕ್ರಮದ ಚರ್ಚೆ ಆಯಿತು. ಮೊದಲನೆಯ ಸಭೆಯು ಬಂಗಾಳಿ ಸಂವತ್ಸರ 1311 ರ ಶ್ರಾವಣ 7 ರಂದು, ಎಂದರೆ 1906 ರ ಜುಲೈ ತಿಂಗಳಲ್ಲಿ ನಡೆಯಿತು. ಇದಕ್ಕೆ ರಮೇಶಚಂದ್ರ ದತ್ತರು ಅಧ್ಯಕ್ಷತೆ ವಹಿಸಿದ್ದರು. ಸಭೆಗೆ ಬಂದಿದ್ದವರಲ್ಲಿ ಖ್ಯಾತ ನ್ಯಾಯಶಾಸ್ತ್ರಜ್ಞ, ಗುರುದಾಸ ಬ್ಯಾನರ್ಜಿಯವರು ಇದ್ದರು. ಏಳು ದಿನಗಳ ಅನಂತರ ಸೇರಿದ ಎರಡನೆಯ ಸಭೆಗೆ ಪ್ರಸಿದ್ಧ ತತ್ತ್ವಶಾಸ್ತ್ರಜ್ಞ, ಹಿರೇಂದ್ರನಾಥ ದತ್ತರು

* 'ಆತ್ಮಶಕ್ತಿ ಓ ಸಮಾಜಯ್', ಅವಸ್ಥಾ ಓ ವ್ಯವಸ್ಥಾ'

ಅಧ್ಯಕ್ಷರು. ಸಭೆಗೆ ಬಂದಿದ್ದವರಲ್ಲಿ ಬಿಪಿನಚಂದ್ರ ಪಾಲರೂ ಇದ್ದರು. ಕಲ್ಕತ್ತದ ಈ ಪ್ರಮುಖ ನಾಗರಿಕರು ತಾವು ಅದಕ್ಕೆ ಬದ್ಧರಾಗದೆ ಠಾಕೂರರ ವಿಚಾರ ರೀತಿಯನ್ನು ಸ್ವಾಗತಿಸಿದರು.*

ಆದರೆ ನಾಯಕರ ಪ್ರಬಲ ವಿಭಾಗಕ್ಕೆ ಮೂಲಭೂತವಾದ ಭಿನ್ನರೀತಿಯ ಅಭಿಪ್ರಾಯಗಳಿದ್ದವು. ರಾಜಕೀಯ ಅಧಿಕಾರವನ್ನು ವಿದೇಶೀ ಪ್ರಭುಗಳಿಂದ ಕಿತ್ತುಕೊಂಡಲ್ಲದೆ ದೇಶದ ಕಲ್ಯಾಣಕ್ಕೆ ಪರಿಣಾಮಕಾರಿಯಾಗಿ ಗಮನ ನೀಡುವುದು ಸಾಧ್ಯವಿಲ್ಲ ಎಂದು ಅವರು ನಂಬಿದ್ದರು. ರಾಜಕೀಯ ಸ್ವಾತಂತ್ರ್ಯವಿಲ್ಲದೆಯೇ ವಾಸ್ತವವಾದ ಸಾಮಾಜಿಕ ಮತ್ತು ಸಾಂಪತ್ತಿಕ ಸ್ವಾತಂತ್ರ್ಯವು ಸಾಧ್ಯ ಎಂದು ಠಾಕೂರರ ಅಭಿಪ್ರಾಯ. ಅವರದು ಅವಾಸ್ತವಿಕ ಆದರ್ಶವಾಗಿದ್ದಿರಬಹುದು. ಇಲ್ಲವೇ ಹಿಂದೆ ಸಾಧ್ಯವಾಗಿದ್ದದು ವರ್ತಮಾನ ಕಾಲದಲ್ಲಿಯೂ ಸಾಧ್ಯವಾದೀತೆಂದು ಒಂದು ಹಂಬಲದ ಅಂಶವಿದ್ದರಬಹುದು. ಅದೇನೇ ಇರಲಿ, ಅವರೇ ಪ್ರತ್ಯೇಕವಾಗಿ ಉಳಿದರು.

ಈ ಅಧ್ಯಾಯವನ್ನು ಮುಗಿಸುವ ಮುನ್ನ ಅವರ ಕೌಟುಂಬಿಕ ವಿಷಯಗಳಲ್ಲಿ ಅವರು ಕೈಗೊಂಡ ಕೆಲವು ಮುಖ್ಯ ಕ್ರಮಗಳನ್ನು ಗಮನಿಸುವುದು ಉಪಯುಕ್ತ. ಅವರ ಮೊದಲ ಮಗ ರತೀಂದ್ರನಾಥನು ಎಂಟ್ರೆನ್ಸ್ ಪರೀಕ್ಷೆಯಲ್ಲಿ ಉತ್ತೀರ್ಣನಾದ. ಹೆಚ್ಚಿನ ಶಿಕ್ಷಣಕ್ಕಾಗಿ ಅವನನ್ನು ಬೇರೆಡೆಗೆ ಕಳುಹಿಸಲು ತೀರ್ಮಾನವಾಯಿತು. ಮುಂದುವರಿದ ಮಾರ್ಗಗಳನ್ನನುಸರಿಸಿ ನಮ್ಮ ದೇಶದಲ್ಲಿ ಕೃಷಿಯನ್ನು ಅಭಿವೃದ್ಧಿಗೊಳಿಸಲು ಠಾಕೂರರು ಈ ಹೊತ್ತಿಗೆ ಒಂದು ಕಾರ್ಯಕ್ರಮವನ್ನು ಕುರಿತು ಯೋಚಿಸುತ್ತಿದ್ದರು. ಕೃಷಿ ಅಧ್ಯಯನದಲ್ಲಿ ಬಿ.ಎಸ್.ಸಿ. ಪದವಿಗೆ ಓದಲು ರತೀಂದ್ರನಾಥನನ್ನು ಇಲ್ಲಿನಾಯ್ಸ್ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಲು ಠಾಕೂರರು ನಿರ್ಧರಿಸಿದರು. ಆತ 1906 ರ ಏಪ್ರಿಲ್ ತಿಂಗಳಲ್ಲಿ ಅಮೆರಿಕಕ್ಕೆ ಹೊರಟ. 1909 ರಲ್ಲಿ ಪದವೀಧರನಾಗಿ ಆತ ಹಿಂದಿರುಗಿದಾಗ ಶೆಲಿದಾದಲ್ಲಿ ತೋಟ ಒಂದರಲ್ಲಿ ಅವನ ವಾಸಕ್ಕೆ ವ್ಯವಸ್ಥೆ ಮಾಡಿದರು. ಮರುವರ್ಷ ಪ್ರತಿಮಾ ದೇವಿ ಎನ್ನುವ ಹುಡುಗಿಯೊಂದಿಗೆ ಆತನ ಮದುವೆ ಮಾಡಿದರು. ಅವಳು ಠಾಕೂರ ಮನೆತನದಲ್ಲಿ ದ್ವಾರಕನಾಥನ ಎರಡನೆಯ ಮಗ ಗಿರೀಂದ್ರನಾಥ

* "ಆತ್ಮಶಕ್ತಿ ಓ ಸಮೂವಯ್", ಟ್ಯಾಗೋರ್ಸ್ ವರ್ಕ್ಸ್, ಸೆಂಟೆನರಿ ಎಡಿಷನ್, ಸಂಪುಟ-2

ರಿಂದ ಪ್ರಾರಂಭವಾದ ಶಾಖೆಗೆ ಸೇರಿದಳು. ಇದಕ್ಕೆ ಮೊದಲು 1907 ರಲ್ಲಿ ಠಾಕೂರರು ತಮ್ಮ ಕಡೆಯ ಮಗಳು ಮೀರಳನ್ನು ನಾಗೇಂದ್ರನಾಥ ಗಂಗೂಲಿ ಎಂಬ ಬುದ್ಧಿವಂತ ಹುಡುಗನಿಗೆ ಕೊಟ್ಟು ಮದುವೆ ಮಾಡಿದ್ದರು. ಆತನನ್ನು ಕೃಷಿ ಅರ್ಥ ಶಾಸ್ತ್ರದ ಅಧ್ಯಯನಕ್ಕಾಗಿ ಅಮೆರಿಕಕ್ಕೆ ಕಳುಹಿಸಿಕೊಟ್ಟಿದ್ದರು.

ಅಧ್ಯಾಯ ೯

ಆಧ್ಯಾತ್ಮಿಕ ಆತ್ಮಸಾಕ್ಷಾತ್ಕಾರ

ಠಾಕೂರರ ಕುಟುಂಬದ ಆವರಣದಲ್ಲಿ ಧಾರ್ಮಿಕ ಮನೋಭಾವ ತುಂಬಿ ಹೋಗಿದ್ದುದರಿಂದ ಠಾಕೂರರು ಬಾಲ್ಯದಲ್ಲೇ ತಮ್ಮ ತಂದೆ ಮತ್ತು ಅಣ್ಣಂದಿರಿಂದ ಧರ್ಮ ಶ್ರದ್ಧೆಯನ್ನು ಪಡೆದುಕೊಂಡರು. ಅದ್ವೈತದ ಚೌಕಟ್ಟಿನಲ್ಲಿ ಹೊಸ ದೊಂದು ಧರ್ಮದ ಸಂಸ್ಥಾಪಕರಾದ ಮಹರ್ಷಿ ದೇವೇಂದ್ರನಾಥರು ತಮ್ಮ ಮಕ್ಕಳು ಹೊಸ ಧರ್ಮದ ಸತ್ವದ ದೀಕ್ಷೆ ಪಡೆಯುವಂತೆ ವೈಯಕ್ತಿಕ ಆಸಕ್ತಿಯಿಂದ ನೋಡಿಕೊಂಡರು. ಅವರು ಮನೆಯಲ್ಲೇ ಇದ್ದಾಗ ಕುಟುಂಬದ ಸದಸ್ಯರನ್ನೆಲ್ಲ ಪ್ರಾರ್ಥನಾ ಮಂದಿರದಲ್ಲಿ ಸೇರಿಸಿ ತಾವೇ ಪ್ರಾರ್ಥನೆಯ ಮಾರ್ಗದರ್ಶನ ಮಾಡುತ್ತಿದ್ದರು. ಸೂಕ್ತ ಉಪದೇಶದಿಂದ ಅದನ್ನು ಮುಕ್ತಾಯಗೊಳಿಸುತ್ತಿದ್ದರು.

ಕಾಲಕ್ರಮೇಣ ಠಾಕೂರರು ತಮ್ಮ ತಂದೆಯವರು ಸ್ಥಾಪಿಸಿದ ಧರ್ಮದಲ್ಲಿ ಅಭಿಮಾನವನ್ನು ಬೆಳೆಸಿಕೊಂಡರು. ಪ್ರಾರ್ಥನಾ ಸಮಯದಲ್ಲಿ ಹಾಡುವುದಕ್ಕೆ ಅವರು ಭಕ್ತಿ ಗೀತೆಗಳನ್ನು ರಚಿಸುತ್ತಿದ್ದರು. ಅವರ ಧರ್ಮದವರು ಪ್ರಕಟಿಸಿದ ಭಕ್ತಿ ಗೀತೆಗಳ ಸಂಕಲನದಲ್ಲಿ ಠಾಕೂರರ ರಚನೆಗಳಿಗೆ ಗೌರವದ ಸ್ಥಾನ ದೊರಕಿದೆ. ಒಮ್ಮೆ ಅವರ ತಂದೆ ಅವರ ಒಂದು ಭಕ್ತಿ ಗೀತೆಯನ್ನು ತುಂಬ ಮೆಚ್ಚಿಕೊಂಡು

ಸಾಕಷ್ಟು ಹಣವನ್ನು ಬಹುಮಾನವಾಗಿ ಕೊಟ್ಟು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು.

ಆದರೆ ಧರ್ಮದ ವಿಷಯದಲ್ಲಿ ಠಾಕೂರರದು ಅನಂಗೀಕಾರಿ ಮನೋಧರ್ಮ. ಆದ್ದರಿಂದ ಸ್ವಲ್ಪ ಕಾಲದಲ್ಲೇ ಅವರಿಗೆ ವ್ಯವಸ್ಥಿತ ಧರ್ಮದಲ್ಲಿ ಆಸಕ್ತಿ ಕಡಿಮೆಯಾಗುತ್ತ ಹೋಯಿತು. ಇಂತಹ ಸ್ವರೂಪವಿರುವ ಧರ್ಮವು ವಿಧಿಸುವ ಆಚರಣೆಗಳು ಮತ್ತು ಬೋಧಿಸುವ ವಿಚಾರಗಳೆಲ್ಲ ಸಾಮಾನ್ಯ ಜನಕ್ಕೆ ಸರಿ ಹೋಗುವಂತೆ ಸಿದ್ಧವಾದವು. ಆದ್ದರಿಂದ ಸತ್ಯ ಎಷ್ಟು ಜಡವಾಗಿರಲು ಸಾಧ್ಯವೋ ಅಷ್ಟರ ಮಿತಿಗೆ ಇಳಿಸುತ್ತವೆ ಎಂದು ಅವರ ಭಾವನೆ. ಸ್ವತಂತ್ರ ಅನ್ವೇಷಣೆಯ ಮೂಲಕ ತನ್ನ ಧರ್ಮ ಶ್ರದ್ಧೆಯನ್ನು ತೃಪ್ತಿಪಡಿಸಿ ತಿಳಿಸುವ ಅಸಾಧಾರಣ ವ್ಯಕ್ತಿಗಳ ಈ ಆಚರಣೆಗಳು, ವಿಚಾರಗಳು ಸರಿಹೊಂದುವುದಿಲ್ಲ. ಅವರು ಅನುಸರಿಸುತ್ತಿದ್ದ ಧರ್ಮ ವ್ಯವಸ್ಥೆಯು ಆತ್ಮಸಾಕ್ಷಾತ್ಕಾರಕ್ಕೆ ಅಡ್ಡಿಯಾಗುತ್ತಿತ್ತು ಮತ್ತು 'ಸತ್ಯದ ಜೀವಂತ ಮುಖ' ವನ್ನು ಸಮೀಪಿಸುತ್ತಿರುವುದು ಇದರಿಂದ ಆಗುತ್ತಿರಲಿಲ್ಲ. ಆದ್ದರಿಂದ ಅವರು ಆ ಬಾಂಧವ್ಯವನ್ನು ಬಿಟ್ಟು ಬಿಟ್ಟರು.*

ತಮ್ಮ ಮನ ಒಪ್ಪುವ ಧರ್ಮದ ಅನ್ವೇಷಣೆಗಾಗಿ ಸ್ವತಂತ್ರ ಹಾದಿಯನ್ನು ಹಿಡಿದ ಠಾಕೂರರು ತಮ್ಮ ಸ್ವಭಾವ ಮತ್ತು ಮನಸ್ಸಿನ ಸ್ವರೂಪವನ್ನೇ ಮುಖ್ಯವಾಗಿ ಅನುಸರಿಸಿದರು. ತಮ್ಮ ಗುರಿಯನ್ನು ಮುಟ್ಟಲು ಅವರು ಬುದ್ಧಿಶಕ್ತಿಗಿಂತ ಹೆಚ್ಚಾಗಿ ಭಾವವನ್ನೇ ನೆಚ್ಚಿದರು. ಅವರು ಹೇಳುತ್ತಾರೆ :

"ಧ್ಯಾನಮಗ್ನನಾಗಿ ಏಕಾಂತದಲ್ಲಿ ಅನಂತವನ್ನು ಸವಿಯುವುದು ನನಗೆ ತೃಪ್ತಿಯನ್ನು ಕೊಡಲಾರದೆ ಹೋಯಿತು. ನನ್ನ ಮೌನ ಆರಾಧನೆಗೆ ನಾನು ಬಳಸುತ್ತಿದ್ದ ಧರ್ಮಗ್ರಂಥಗಳ ಸ್ಫೂರ್ತಿ ನನಗೇ ಅರಿವಿಲ್ಲದಂತೆ ಬತ್ತಿ ಹೋಯಿತು. ನನಗೇ ಆತ್ಮಸಾಕ್ಷಾತ್ಕಾರದ ಅಗತ್ಯವಿದೆ ಎಂದು ಅಸ್ಪಷ್ಟವಾಗಿ ನನಗೆನ್ನಿಸುತ್ತಿತ್ತು ಎಂಬುದು ನನಗೆ ಖಚಿತವಾಗಿದೆ."**

* 'ರಿಲಿಜನ್ ಆಫ್ ಮ್ಯಾನ್', ದಿ ಮ್ಯಾನ್ ಆಫ್ ಮೈ ಹಾರ್ಟ್

** 'ರಿಲಿಜನ್ ಆಫ್ ಮ್ಯಾನ್', 'ದ ಟೀಚರ್'

ಧರ್ಮಕ್ಕೆ ಸಂಬಂಧಿಸಿದಂತೆ ಠಾಕೂರರ ಅನುಭವ ಮತ್ತು ಪ್ರಾರಂಭದ ವರ್ಷಗಳಿಂದ ಧಾರ್ಮಿಕ ಅಭಿವ್ಯಕ್ತಿಗೆ ಸೂಕ್ತವಾದ ಸ್ವರೂಪದ ಬಗೆಗಿನ ಅನ್ವೇಷಣೆ ಇವುಗಳ ದೀರ್ಘ ಇತಿಹಾಸದ ಅಧ್ಯಯನ ಕುತೂಹಲಕಾರಿಯಾದದ್ದು. ಅವರ ಸ್ವಂತ ಧರ್ಮವು ವಿವಿಧ ಅನುಭವಗಳಿಂದ ಅವರ ಮನಸ್ಸಿನಲ್ಲಿ ವಿಕಾಸಗೊಂಡಿತು. ಕಾವ್ಯ, ಪ್ರಬಂಧಗಳನ್ನೊಳಗೊಂಡಿರುವ ಅವರ ಎಲ್ಲ ಬರಹಗಳಲ್ಲಿ ಮತ್ತು ಭಾಷಣಗಳಲ್ಲಿ ಈ ಅನುಭವಗಳು ಪ್ರತಿಬಿಂಬಿತವಾಗಿವೆ. ಠಾಕೂರರ ಧಾರ್ಮಿಕ ಅನುಭವಗಳ ಬೆಳವಣಿಗೆ, ಪರಿಪಕ್ವತೆ ಮುಟ್ಟುವವರೆಗಿನ ಹಲವು ಘಟ್ಟಗಳನ್ನು ಈ ಅಭಿವ್ಯಕ್ತಿ ಗುರುತಿಸುತ್ತದೆ.* ಈ ಲಕ್ಷಣವಿರುವುದರಿಂದ ಅವರ ಕೃತಿಗಳು ಸ್ಫೂರ್ತಿಯ ಐಕ್ಯತೆಯಿಂದ ಚಿಮ್ಮುತ್ತವೆ. ಸೃಷ್ಟಿಯನ್ನೆಲ್ಲ ತುಂಬಿರುವ ಅನಂತ ಚೇತನದೊಂದಿಗೆ ಒಂದಾಗುವ ರೀತಿಯ ಅನ್ವೇಷಣೆಯಿಂದಲೇ ಈ ಐಕ್ಯತೆ ಬರುತ್ತದೆ. ಅವರ ದೃಷ್ಟಿಯಲ್ಲಿ ಮಿತ ಸ್ವರೂಪದ ಮನುಷ್ಯನ ಮನಸ್ಸಿನಲ್ಲಿ ಇರುವ ಅನಂತವನ್ನು ಮುಟ್ಟುವುದೇ ಈ ಅನ್ವೇಷಣೆಯ ಗುರಿ.

ಅನ್ವೇಷಣೆಯ ಕಂಡುಕೊಳ್ಳಲು ಅಥವಾ ಅನ್ವೇಷಣೆಯು ಶೋಧಿಸುತ್ತಿರುವುದು ಒಬ್ಬ ಕವಿಯ ಧರ್ಮವನ್ನೇ ಹೊರತು ಧರ್ಮನಿಷ್ಠವಾದ ಮತ್ತು ಆಚಾರವಂತನಾದ ಮನುಷ್ಯನ ಧರ್ಮವನ್ನು ಅಲ್ಲ, ಧರ್ಮಶಾಸ್ತ್ರಜ್ಞನ ಧರ್ಮವನ್ನು ಅಲ್ಲ ಎಂದು ಠಾಕೂರರು** ಹೇಳಿದ್ದಾರೆ. ಅವರ ಆಧ್ಯಾತ್ಮಿಕ ಆತ್ಮಸಾಕ್ಷಾತ್ಕಾರದ ಸ್ಫೂರ್ತಿಯೇ ಅವರ ಕಾವ್ಯದ ಸ್ಫೂರ್ತಿ. ಆದದ್ದರಿಂದ ಅವರ ಬಾಳಿನುದ್ದಕ್ಕೂ ಸಾಗಿ ಬಂದ ಅನ್ವೇಷಣೆಯಿಂದ ಅವರು ಕಡೆಗೆ ಪಡೆದುಕೊಂಡದ್ದು ಕವಿಯ ಮನೋಧರ್ಮವನ್ನೇ. ಠಾಕೂರರ ಒಳಗಿದ್ದ ಸಾಹಿತ್ಯದ ಕಲಾವಿದನೂ, ಧರ್ಮನಿಷ್ಠ ವ್ಯಕ್ತಿಯೂ ಒಂದೇ ಅನ್ವೇಷಣೆಯನ್ನು ಕೈಗೊಂಡ ಅದ್ವಿತೀಯ ನಿದರ್ಶನ ಇಲ್ಲಿ ಕಾಣುತ್ತದೆ. ಆಧ್ಯಾತ್ಮಿಕ ಸಾಕ್ಷಾತ್ಕಾರದ ಅನ್ವೇಷಣೆಯನ್ನು ಅವರ ಮನಸ್ಸಿಗೆ ಬಂದ ಭಾವನೆಗೇ ಅವರೊಳಗಿನ ಕಲಾವಿದ ಕಾವ್ಯದ ಮೂಲಕ ರೂಪ ಕೊಟ್ಟ. ಅವರ ಎರಡು ಜೀವನಗಳ ನಿಕಟ ಸಹಕಾರವನ್ನು ಸಾಮರಸ್ಯ ಮತ್ತು

---

* 'ಪ್ರಿಫೇಸ್'

** 'ದ ವಿಷನ್'

ಒಮ್ಮತಗಳಿಂದ ಇಬ್ಬರು ಬಾಳುವ ದಾಂಪತ್ಯ ಜೀವನ ಎಂದು ಠಾಕೂರರೇ ವರ್ಣಿಸಿದ್ದಾರೆ. ತಮ್ಮ ಬಾಳಿನ ಈ ಎರಡು ಭಾಗಗಳು ಸಮಾನಾಂತರವಾಗಿ ಮುಂದುವರಿಯುತ್ತವೆ ಎಂಬುದನ್ನು ಬಹು ಕಾಲ ಠಾಕೂರರೇ ಗುರುತಿಸಿರಲಿಲ್ಲ. ಈ ಅವಧಿಯನ್ನು ಅವರೇ ಕಾವ್ಯಮಯವಾಗಿ 'ನಿಶ್ಚಿತಾರ್ಥದ ನಂತರದ ಕಾಲ' ಎಂದು ಬಣ್ಣಿಸಿದ್ದರೆ ಅವರು ಬರೆಯುತ್ತಾರೆ :

"ಅದರ (ಅವರ ಧರ್ಮದ) ಸ್ಪರ್ಶವು ನನಗೆ ನನ್ನ ಹಾಡುಗಳ ಸ್ಫೂರ್ತಿಯಯಂತೆಯೇ ಅದೇ ಅದೃಶ್ಯವಾದ, ಗುರುತು ಕಾಣಲೊಲ್ಲದ ವಾಹಕರಿಂದಲೇ ಬರುತ್ತದೆ. ನನ್ನ ಕಾವ್ಯ ಜೀವನದ ಬೆಳವಣಿಗೆಯ ಗೂಢರೇಖೆಯನ್ನೇ ನನ್ನ ಧಾರ್ಮಿಕ ಜೀವನವೂ ಅನುಸರಿಸಿದೆ. ಹೇಗೋ ಎಂತೋ ಅವು ಲಗ್ನವಾಗಿವೆ, ಅವುಗಳ ನಿಶ್ಚಿತಾರ್ಥ ದೀರ್ಘಕಾಲದ ಸಮಾರಂಭವೇ ಆದರೂ ಅದು ನನ್ನಿಂದ ರಹಸ್ಯವಾಗಿಯೇ ಉಳಿದಿತ್ತು."*

ಅವರ ಧರ್ಮ ಮತ್ತು ಕಾವ್ಯ ಎರಡಕ್ಕೂ ಒಂದೇ ವಸ್ತು ಸ್ಫೂರ್ತಿ ನೀಡಿತೆಂಬುದರಿಂದ ಅವರ ಕಾವ್ಯ ಎರಡು ವಿರಳ ಗುಣಗಳನ್ನು ಪಡೆದುಕೊಂಡಿತು. ಮೊದಲನೆಯದಾಗಿ, ಅವರ ಕಾವ್ಯಕ್ಕೆ ಚೈತನ್ಯವಿದೆ, ಅದಕ್ಕೆ ಚರಿತ್ರೆ ಇದೆ ಮತ್ತು ಬೇರೆ ಬೇರೆ ಘಟ್ಟಗಳ ಮೂಲಕ ಪರಿಪಕ್ವತೆಯಿತ್ತು ಸಾಗಿದೆ. ತನ್ನ ಬಾಳಿನ ಮಾರ್ಗದಲ್ಲಿ ಸುತ್ತ ಚೆಲ್ಲಿದ ಚೆಲುವಿಗೆ ಮನಸೋತು ತನ್ನ ಭಾವಗಳಿಗೆ ಅಭಿವ್ಯಕ್ತಿ ನೀಡುವ ಕವಿಯ ಕವನಗಳ ವರ್ಗಕ್ಕೆ ಠಾಕೂರರ ಕವನಗಳು ಸೇರಿಲ್ಲ. ಹೀಗಾದಾಗ ಕವಿಯ ಬೇರೆಬೇರೆ ಕೃತಿಗಳ ನಡುವೆ ಯಾವುದೇ ತರ್ಕಬದ್ಧ ಸಂಬಂಧವನ್ನೂ ಸ್ಥಾಪಿಸಲು ಸಾಧ್ಯವಾಗುವುದಿಲ್ಲ. ಆದರೆ ಠಾಕೂರರ ಕವನಗಳಲ್ಲಿ ಪ್ರಾರಂಭದ ಬರಹಗಳಿಂದ ಒಂದು ಅವಿಭಿನ್ನವಾದ ಬೆಳವಣಿಗೆಯನ್ನು ಗುರುತಿಸಬಹುದು. ಯಾವುದೊಂದು ನಿರ್ದಿಷ್ಟ ಘಟ್ಟದಲ್ಲಿಯೂ ಒಂದು ಪ್ರಬಲ ವಿಚಾರವು ಅವರ ಮನಸ್ಸನ್ನು ಆವರಿಸುತ್ತದೆ. ಅವರ ಲೇಖನಿಯ ಮೂಲಕ ಅಭಿವ್ಯಕ್ತಿಯನ್ನು ಬಯಸುತ್ತದೆ. ಈ ವಿಚಾರವು ಬೆಳವಣಿಗೆಯ ಒಂದು ಹಂತವನ್ನು ದಾಟುತ್ತದೆ, ಅನಂತರ ಅದರ ಸ್ವರೂಪವು ನಿಧಾನವಾಗಿ ಮಾರ್ಪಾಡು ಹೊಂದುತ್ತದೆ. ಹಿಂದಿನ ಮನಃಸ್ಥಿತಿಯೊಡನೆ ಸಂಪರ್ಕವನ್ನು ಕಳೆದುಕೊಳ್ಳದೆ ಬೆಳವಣಿಗೆಯ ಮುಂದಿನ

* ಅದೇ

ಹಂತಕ್ಕೆ ಭೂಮಿಕೆಯನ್ನು ಸಿದ್ಧಗೊಳಿಸುತ್ತದೆ. ಹೀಗೆ ಇದೊಂದು ವಿಕಸನದ ಪ್ರಕ್ರಿಯೆ. ವಿಚಾರವು ಪರಿಪಕ್ವತೆಯನ್ನು ಸಮೀಪಿಸುತ್ತಿದ್ದಂತೆ ಹೆಚ್ಚು ಸಂಕೀರ್ಣ ವಾಗುತ್ತದೆ. ಹೀಗೆ ಅವರ ಕಾವ್ಯದ ಪ್ರಬಲ ವಸ್ತುವು, ಅವರ ವಿವಿಧ ಕವನಗಳ ವಿಷಯುವಾಗಿರುವ ಸಣ್ಣ ಪುಟ್ಟ ವಸ್ತುಗಳೊಡನೆ ಸಾವಯುತವಾಗಿ ಸೇರಿ ಕೊಳ್ಳುತ್ತದೆ. ಎಲ್ಲ ಸೇರಿ ಒಂದು ಸಾಮರಸ್ಯವಿರುವ ವಿನ್ಯಾಸವನ್ನು ನೇಯುತ್ತವೆ. ಹೀಗೆ, ಅವರ ಬಾಳಿನ ಬೇರೆ ಬೇರೆ ಘಟ್ಟಗಳಲ್ಲಿ ಅವರು ರಚಿಸಿದ ಎಲ್ಲ ಕವನಗಳನ್ನೂ 'ಸ್ಫೂರ್ತಿಯ ಐಕ್ಯತೆ' ಒಟ್ಟಿಗೆ ಪೋಣಿಸುತ್ತದೆ. ಅವರ ಬಾಳಿನ ಕಡೆಯ ದಿನಗಳವರೆಗೆ ಬಾಚಿದ್ದ ಅವರ ದೀರ್ಘ ಸೃಜನಶೀಲ ಜೀವನ ವಿದುದ್ದಕ್ಕೂ ಅವರ ಕವನಗಳ ಆಕರ್ಷಣೆ ಉಳಿದು ಬಂದುದಕ್ಕೆ ಇದು ಕಾರಣ ವಾಗಿರಬಹುದು.

ಅವರ ಧಾರ್ಮಿಕ ಅನುಭವ ಮತ್ತು ಕಾವ್ಯಗಳ ಸಮಾನ ವಸ್ತುವಿನ, ಇನ್ನೊಂದು ಪ್ರಭಾವವೆಂದರೆ ಅವರ ಕಾವ್ಯವು ಅವರ ಧಾರ್ಮಿಕ ಅನುಭವದ ಬರಹ ರೂಪದ ದಾಖಲೆಯಾಗುತ್ತದೆ. ಆದ್ದರಿಂದ ಅದರ ಪರಿಪಕ್ವ ಸ್ವರೂಪ ದಲ್ಲಿ ಅದು ಧರ್ಮವು ಹೇಗಿರಬೇಕು ಎಂಬುದನ್ನು ಕುರಿತು ಅವರದೇ ಆದ ವೈಚಾರಿಕ ಚಿತ್ರವಾಗುತ್ತದೆ. ಕಡೆಗೆ ಇಲ್ಲಿ ಒಂದು ವಿಶಿಷ್ಟ ರೀತಿಯ ಮಾನವತಾ ವಾದವು ರೂಪುಗೊಳ್ಳುತ್ತದೆ. ಇದಕ್ಕೆ ಅವರ ಧರ್ಮ ಶ್ರದ್ಧೆಯೇ ಸ್ಫೂರ್ತಿ. ಅವರ ಕಾವ್ಯದ ಅಧ್ಯಯನವು ಅವರ ಮನಸ್ಸಿನ ಆಧ್ಯಾತ್ಮಿಕ ರಚನೆಯನ್ನು ಅರ್ಥ ಮಾಡಿಕೊಳ್ಳಲು ಬೀಗದ ಕೈ. ಆದ್ದರಿಂದ ಈ ಅಧ್ಯಾಯವು ಅವರ ಕಾವ್ಯದ ಮೂಲಕ ಅವರನ್ನು ಅರ್ಥಮಾಡಿಕೊಳ್ಳಲು ಒಂದು ಪ್ರಯತ್ನ.

ಮೊದಲು ಅವರನ್ನು ಆಕರ್ಷಿಸಿದ ನಿಸರ್ಗದಿಂದಲೇ ಧರ್ಮದ ಅವರ ಅನ್ವೇ ಷಣೆ ಪ್ರಾರಂಭವಾಯಿತು. ಆಗಲೇ ಹೇಳಿರುವಂತೆ ಬಾಲ್ಯದ ಪ್ರಾರಂಭದ ವರ್ಷಗಳಿಂದಲೇ ಅವರ ಸೂಕ್ಷ್ಮ ಮನಸ್ಸು ಚೈತನ್ಯಮಯವಾಗಿ ನಿಸರ್ಗದತ್ತ ಬಾಗಿತ್ತು. ಠಾಕೂರರ ಆಧ್ಯಾತ್ಮಿಕ ಆತ್ಮಸಾಕ್ಷಾತ್ಕಾರವು ನಿಸರ್ಗದ ಹಸ್ತದಿಂದ ಬಂದದ್ದು ಆಶ್ಚರ್ಯವಲ್ಲ. ಆದರೆ ಇದನ್ನು ಸಾಧಿಸಿದ್ದು ಜ್ಞಾನದ ವಸ್ತುವಾಗಿ ನಿಸರ್ಗವಲ್ಲ. ರೂಪಗಳು, ಬಣ್ಣಗಳು, ಶಬ್ದಗಳು ಮತ್ತು ಚಲನವಲನಗಳ ಸಾಮರಸ್ಯದಿಂದ ಕಲ್ಪನೆಯನ್ನು ಪ್ರಚೋದಿಸುವ ನಿಸರ್ಗದ ಆ ಮುಖದಿಂದಲೇ ಸಾಧನೆಯಾಗಿದ್ದು. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಅವರು

ತಮ್ಮ ಪಯಣವನ್ನು ನಿಸರ್ಗದ ಕವಿಯಾಗಿ ಪ್ರಾರಂಭಿಸಿದರು. ಅವರೇ "ನನ್ನ ಅರಿವಿನ ಮೊದಲ ಹಂತ, ನಿಸರ್ಗದೊಡನೆ ಅನ್ಯೋನ್ಯತೆಯ ಭಾವದಿಂದ ಬಂದಿತು," ಎಂದಿದ್ದಾರೆ.*

ನಿಸರ್ಗದ ಹಲವು ಮನಃಸ್ಥಿತಿಗಳ ಸಂಪರ್ಕದಿಂದ ಠಾಕೂರರು ಅನುಭವಿಸಿದ ರೋಮಾಂಚನದಿಂದ, ಅವರ ನಿಸರ್ಗ ಕವನಗಳೆಲ್ಲ ಮಿಡಿಯುತ್ತವೆ. ಆದರೆ ಆ ಕವನಗಳು ನಿಸರ್ಗದಲ್ಲಿ ಕಣ್ಸೆಳೆಯುವಂತಹುದು ಮತ್ತು ಸುಂದರವಾದದ್ದು. ಪ್ರಚೋದಿಸುವ ಭಾವಗಳ ಮನಕಟ್ಟುವ ವರ್ಣನೆಗಳಷ್ಟೇ ಆಗಿಲ್ಲ, ಅವು ಇದರ ಆಚೆ ಅಡಗಿಕೊಂಡಿರುವ ಚೈತನ್ಯವನ್ನು ಕುರಿತು ಪ್ರಶ್ನೆಗಳನ್ನು ಕೇಳುತ್ತವೆ, ಅನಂತರದ ಹಂತಗಳಲ್ಲಿ ಅದನ್ನು ಸ್ಪರ್ಶಿಸಬೇಕೆಂಬ ಪ್ರಬಲವಾದ ಹಂಬಲವನ್ನೂ ತೋರ್ಪಡಿಸುತ್ತವೆ.

ಉದಾಹರಣೆಗೆ, ಮಳೆಗಾಲದಲ್ಲಿ ಮೋಡಗಳು ನೀಲಿ ಆಕಾಶದಲ್ಲಿ ತೇಲುತ್ತ ಸಾಗುತ್ತವೆ, ಕೆಳಗಿನ ಬತ್ತದ ಗದ್ದೆಗಳ ಮೇಲೆ ನೆರಳನ್ನು ಚಾಚುತ್ತವೆ. ಒಂದು ಕವನದಲ್ಲಿ ಈ ದೃಶ್ಯದ ಚೆಲುವನ್ನು ವರ್ಣಿಸುವಾಗ, ಅವರಿಗೆ ಈ ಪ್ರದರ್ಶನದ ಹಿಂದೆ ಆಡುವ ಕುಶಲ ಹಸ್ತದ ನೆನಪಾಗುತ್ತದೆ. ಅವರೆನ್ನುತ್ತಾರೆ :

"ಬತ್ತದ ಹೊಲಗಳ ಮೇಲೆ ಸಾಗುವ ಬಿಸಿಲು ಮತ್ತು ನೆರಳು
ಇವುಗಳ ನಡುವೆ ಇದು ಕಣ್ಣು ಮುಚ್ಚಾಲೆಯಾಟ ನಡೆದಿದೆ.
ನೀಲಿ ಆಗಸದಲ್ಲಿ ಬಿಳಿಯ ಮೋಡಗಳ ತೆಪ್ಪಗಳನ್ನು
ತೇಲಿ ಬಿಟ್ಟಿರುವವನು ಯಾರವನು ?"**

ಅನಂತರದ ಹಂತದಲ್ಲಿ ಈ ಅದೃಶ್ಯ ಹಸ್ತವನ್ನು ಕುರಿತು ಕುತೂಹಲ ಪಡುವುದಷ್ಟೇ ಠಾಕೂರರಿಗೆ ಸಮಾಧಾನವನ್ನು ಕೊಡಲಿಲ್ಲ ಎನ್ನುವುದನ್ನು ಕಾಣುತ್ತೇವೆ. ಈ ಆದೃಶ್ಯ ಶಕ್ತಿ ಕಾಣುವುದಕ್ಕಿಂತ ಹೆಚ್ಚಾಗಿ ಅನುಭವಕ್ಕೆ ಬರುತ್ತದೆ. ಇದರೊಡನೆ ಸಂಪರ್ಕ ಸಾಧಿಸಬೇಕೆಂಬ ತೀವ್ರ ಹಂಬಲ ಬೆಳೆ ಯುತ್ತದೆ. ಇಗೋ, ಇದೊಂದು ಉದಾಹರಣೆ :

* 'ರಿಲಿಜನ್ ಆಫ್ ಮ್ಯಾನ್', 'ಮ್ಯಾನ್ಸ್ ಯೂನಿವರ್ಸ್'

** 'ಶರದೋತ್ಸವ್'

ಮಳೆಗಾಲದಲ್ಲಿ ಒಟ್ಟುಗೂಡುತ್ತಿರುವ ಮಳೆ ತರುವ ಮೋಡಗಳ ಬಣ್ಣದಿಂದ ರೋಮಾಂಚನಗೊಂಡು ಅವರು ಅದನ್ನು ನವಿಲಿನ ಹರಡಿದ ಗರಿಗಳ ಬಹು ಬಣ್ಣಗಳ ವೈ ವೈಭವಕ್ಕೆ ಹೋಲಿಸುತ್ತಾರೆ. ಮಳೆಯು ಮುಗಿಲಿನ ಚೆಲುವಿನಿಂದ ಉಂಟಾದ ಸಂತೋಷ ಮತ್ತು ಮೇಲಿರುವ ಆಕಾಶದಲ್ಲಿನ ಅದೃಶ್ಯ ಶಕ್ತಿಯೊಡನೆ ಸಂಪರ್ಕ ಬೆಳೆಸುವ ತೀವ್ರ ಬಯಕೆಯಿಂದ ಉಂಟಾದ ಯಾತನೆ–ಇವೆರಡೂ ಮನಃಸ್ಥಿತಿಯನ್ನು ಕವನ ಚಿತ್ರಿಸುತ್ತದೆ. ಈ ಕವನದ ಮೊದಲನೆಯ ಪದ್ಯವನ್ನು ಹೀಗೆ ಅನುವಾದಿಸಬಹುದು :

ಮಯೂರದಂತೆ ನರ್ತಿಸುತ್ತದೆ ಇಂದು
ನನ್ನ ಮನ.
ನೂರು ವರ್ಣಗಳಿಂದ ರಂಜಿತವಾದ
ಉತ್ಸರ್ಗವಾದ ಭಾವವು
ಮಯೂರದ ಕಂಗಳಂತೆ ಹರಡಿ ಕೊಳ್ಳುತದೆ.
ಉಲ್ಲಾಸದಿಂದ ತನ್ನ ದೃಷ್ಟಿಯನ್ನು
ಆಗಸದತ್ತ ಹರಿಸಿ
ಹಂಬಲಿಸುವ ಹೃದಯದಿಂದ ಯಾರನ್ನೋ ಹುಡುಕುತ್ತದೆ.*

ಅನುಭವಗಳ ಮಾಲೆಯಿಂದ, ನಿಧಾನವಾಗಿ, ನಿಸರ್ಗದ ವಿವಿಧ ಮುಖಗಳ ಹಿಂದಿನ ಅದೃಶ್ಯ ಶಕ್ತಿಯ ನಿಜವಾದ ಸ್ವರೂಪ ಅವರಿಗೆ ಸ್ಪಷ್ಟವಾಯಿತು. ಅವರೇ ಹೇಳುವಂತೆ. ವೇದದ ಕಾಲದ ಅವರ ಪೂರ್ವಿಕರಂತೆ ಅವರೂ ನಿಸರ್ಗದ ಹಲವು ಪಾರ್ಶ್ವಗಳ ಹಿಂದೆ ಸರ್ವಾಂತರ್ಯಾಮಿಯಾದ ಒಂದು ತತ್ತ್ವ ಕೆಲವು ಮಾಡುತ್ತಿದೆ ಎನ್ನುವುದನ್ನು ಅರಿತುಕೊಂಡರು. ಹೀಗೆ ನಿಸರ್ಗದ ವಿವಿಧ ಮುಖಗಳಲ್ಲಿ ಅವರು ಒಳಗಿನ ಒಂದೇ ಚೈತನ್ಯವನ್ನು ಗುರುತಿಸಿದರು. ಅವರ ಮಾತುಗಳಲ್ಲೇ ಹೇಳುವುದಾದರೆ, "ಇನ್ನೂ ಕೆಳಕ್ಕೆ ಚೆಲ್ಲಿದ ಮಳೆಯಿಂದ ಭಾರವಾದ ಮೋಡಗಳು ಕೂಡಿ ಕೊಳ್ಳುವುದು, ತೆಂಗಿನ ಮರಗಳ ಸಾಲಿನಲ್ಲಿ ತೀವ್ರವಾದ ಕೊನೆದಾಟವನ್ನು ಎಬ್ಬಿಸುವ ಬಿರುಗಾಳಿಯ ಅನಿರೀಕ್ಷಿತ ನುಗ್ಗಾಟ, ಸುಡುತ್ತಿರುವ, ಬೇಸಗೆಯ ನಡುಹಗಲಿನ ತೀಕ್ಷ್ಣತೆ, ಏಕಾಕಿತನ, ಮಳೆಗಾಲದ ಬೆಳಗಿನ ಮಂಜಿನ ಪರದೆಯ

* 'ಕ್ಷಣಿಕ'

ಹಿಂದಿನ ನೀರದ ಸೂರ್ಯೋದಯ, ಇವುಗಳ ಬೆರಗು ಸರ್ವಾಂತರ್ಯಾಮಿಯಾದ ಗೆಳೆತನದ ಆಪ್ತತೆಯನ್ನು ನನ್ನ ಮನಸ್ಸಿನಲ್ಲಿ ತುಂಬಿತು.*

ನಿಸರ್ಗದ ಹಿಂದೆ ಕೆಲಸ ಮಾಡುವ ಅದೃಶ್ಯ ತತ್ತ್ವವು ಭೂಮಿಯ ಮೇಲಿನ ಜೀವನವನ್ನು ನಡೆಸುವುದಷ್ಟೇ ಅಲ್ಲ, ಆಕಾಶಕಾಯಗಳ ಚಲನೆಯನ್ನೂ ನಿಯಂತ್ರಿಸುತ್ತದೆ ಎಂಬುದನ್ನು ಠಾಕೂರರು ಗುರುತಿಸಿದರು. ಅದರ ಇರವು ಕಣ್ಣಿಗೆ ಕಾಣುವುದಕ್ಕಿಂತ ಹೆಚ್ಚಾಗಿ ಮನಸ್ಸಿಗೆ ಅನುಭವವಾಗಿತ್ತದೆ ಎನ್ನುವುದನ್ನು ಗ್ರಾಮೀಣ ಭಾರತದ ಜೀವನದ ಒಂದು ಸಾದೃಶ್ಯದಿಂದ ಸುಂದರವಾಗಿ ನಿರೂಪಿಸಲಾಗಿದೆ. ಗೋಪಾಲಕನು ಅವುಗಳ ನಡುವೆ ಇಲ್ಲದಿದ್ದರೂ ಹಳ್ಳಿಯ ದನಕರುಗಳು ವ್ಯವಸ್ಥಿತ ರೀತಿಯಲ್ಲಿ ಹುಲ್ಲು ಮೇಯುತ್ತಿರುವುದು ಸಾಮಾನ್ಯ ದೃಶ್ಯ. ಆದರೆ ನೆರಳಿರುವ ಒಂದು ತಾಣದಿಂದ ಕೊಳಲು ನುಡಿಸಿ ಆತ ತನ್ನ ಇರವನ್ನು ಅನುಭವಕ್ಕೆ ತಂದು ಕೊಡುತ್ತಾನೆ. ಆಕಾಶಕಾಯಗಳನ್ನು ದನಕರುಗಳಿಗೂ ಅದೃಶ್ಯ ತತ್ತ್ವವನ್ನು ಗೋಪಾಲಕನಿಗೂ ಹೋಲಿಸಿ ಠಾಕೂರರು ಹೇಳುತ್ತಾರೆ :

ರವಿ ತಾರೆಗಳ ಈ ಗುಂಪುಗಳು
ಇವು ನಿನ್ನ ಜ್ಯೋತಿರ್ಮಯ ಗೋವುಗಳು;
ಯಾವ ಅದೃಶ್ಯ ತಾಣದಿಂದ ನೀನು
ನಿನ್ನ ಮುರಳಿಯನ್ನು ನುಡಿಸುವೆ,
ಅವನ್ನು ದಿವ್ಯ ನಭೋಮಂಡಲದಡಿಯಲ್ಲಿ ಮೇಯಿಸುವೆ**

ಮುಂದೆ ಠಾಕೂರರ ವಿಚಾರ ರೀತಿಯು ವಿಶ್ವದೇವೈಕ್ಯವಾದದ(ಪ್ಯಾನ್‌ಥೀಯಸಮ್) ರೂಪ ಪಡೆಯಿತು. ಈ ದೃಷ್ಟಿಯ ಪ್ರಕಾರ. ಸೃಷ್ಟಿಕರ್ತನು ಸೃಷ್ಟಿಯಲ್ಲಿ ಅಂತರ್ಗತನಾಗಿ ಕಾರ್ಯನಿರತನಾಗಿದ್ದಾನೆ. ನಿಸರ್ಗದಲ್ಲೆಲ್ಲ ಒಂದೇ ತತ್ತ್ವ ಕೆಲಸ ಮಾಡುತ್ತಿದೆ ಎಂದು ಅವರಿಗೆ ಎನ್ನಿಸಿತು. ವಿಭಿನ್ನ ಶಕ್ತಿಗಳ ಪರಸ್ಪರ ವಿರುದ್ಧ ಸೆಳೆತಗಳಿದ್ದಂತೆ ಕಂಡರೂ, ಈ ತತ್ತ್ವವು ಅದಕ್ಕೆ ಸಾಮರಸ್ಯವನ್ನೂ ಐಕ್ಯತೆಯನ್ನೂ ನೀಡುತ್ತಿದೆ. ಇದರಲ್ಲಿ ಜಡವಾದದ್ದು, ನಿಶ್ಚಲವಾದದ್ದು ಏನೂ ಇಲ್ಲ.

* 'ರಿಲಿಜನ್ ಆಫ್ ಮ್ಯಾನ್' 'ದಿ ವಿಷನ್'

** 'ಗೀತಾಳಿ'

ಹುಟ್ಟು ಮತ್ತು ಸಾವು, ವಿನಾಶ ಮತ್ತು ಸೃಷ್ಟಿ ಇವು ಅಚಲವಾದ ಮತ್ತು ನಿರಂತರ ವಾದ ನೃತ್ಯ ಮುನ್ನಡೆಯ ಲಯವನ್ನು ಸೂಚಿಸುತ್ತವೆ. ಹೀಗೆ ಅವರು ನಿಸರ್ಗ ದಲ್ಲಿ ಸದಾ ನಿರ್ಲಿಪ್ತವಾಗಿ ಕಾರ್ಯನಿರತನಾದ ವಿಶ್ವೈಕ್ಯನಾದ ಒಬ್ಬ ದೇವರನ್ನು ಗುರುತಿಸಿದರು. ಈತನನ್ನು ಒಮ್ಮೊಮ್ಮೆ ಅವರು ಹರಿಯುವ ನದಿಗೆ ಹೋಲಿಸು ತ್ತಾರೆ, ಮತ್ತೊಮ್ಮೆ ಸೃಷ್ಟಿ-ಲಯಗಳ ವಿಶ್ವ ನೃತ್ಯದಲ್ಲಿ ನಿರತನಾದ ಪೌರಾಣಿಕ ವಾದ ದೇವ ನಟರಾಜನಿಗೆ ಹೋಲಿಸುತ್ತಾರೆ. ಅವರ ನಿರ್ಣಯಗಳು ಈ ಕೆಳಗಿನ ಮಾತುಗಳಲ್ಲಿ ಸೊಗಸಾಗಿ ನಿರೂಪಿತವಾಗಿವೆ :

"ದೇವರು ನಮ್ಮಿಂದ ದೂರದಲ್ಲಿಲ್ಲ, ಪೂಜಾ ಸ್ಥಳಗಳಲ್ಲಿಲ್ಲ. ಆತ ನಮ್ಮೊಳಗೇ ಇದ್ದಾನೆ. ಅದೃಶ್ಯನಾಗಿ ಆತ ಬದುಕು ಸಾವುಗಳನ್ನು, ನಲಿವು ನೋವುಗಳನ್ನು, ಪಾಪ ಧರ್ಮ ಶ್ರದ್ಧೆಗಳನ್ನು, ಮಿಲನ ವಿರಹಗಳನ್ನು ತುಂಬಿದ್ದಾನೆ. ಈ ಭೂಮಿಯೇ ಆತನ ಸನಾತನ ದೇವಾಲಯ. ಈ ಜೀವಂತ ಪ್ರಜ್ಞಾವಂತ ಬೃಹತ್ ದೇವಾಲಯ ನಿರಂತರವಾಗಿ ವಿವಿಧ ನವ ರೂಪಗಳಲ್ಲಿ ಪುನರ್‌ಸೃಷ್ಟಿ ಯಾಗುತ್ತಿದೆ. ಇದರಲ್ಲಿ ಹೊಸದೇನೂ ಇಲ್ಲ. ಇದರಲ್ಲಿರುವುದೆಲ್ಲ ನಿರಂತರವಾಗಿ ಏರಿಳಿತಕ್ಕೆ ಒಳಗಾಗಿದೆ. ಆದರೂ ಅದರ ಗಾಢವಾದ ಐಕ್ಯತೆ, ಅದರ ವಾಸ್ತವಿಕತೆ ಮತ್ತು ಅದರ ಚಿರಂತನ ಸ್ವರೂಪ ನಷ್ಟವಾಗುವುದೇ ಇಲ್ಲ. ಏಕೆಂದರೆ ಈ ಕ್ಷಣ ಕ್ಷಣ ಬದಲಾಗುವ ವೈವಿಧ್ಯದಲ್ಲಿ ನಿರಂತರ ಸತ್ಯವೊಂದು ಪ್ರಕಟವಾಗುತ್ತಿದೆ."*

ಆದರೆ ಈ ವಿಶ್ವದೇವೈಕ್ಯವಾದದ ಕಲ್ಪನೆಯಿಂದ ಅವರ ಮನಸ್ಸಿಗೆ ತೃಪ್ತಿ ಯಾಗಲಿಲ್ಲ. ಇದರಿಂದ ಅವರ ಬುದ್ಧಿಶಕ್ತಿಗೆ ಒಂದಿಷ್ಟು ಸಮಾಧಾನ ದೊರೆತಿರ ಬಹುದಾದರೂ ಸರ್ವಾಂತರ್ಯಾಮಿಯಾದ ಶಕ್ತಿಯೊಡನೆ ಭಾವಾತ್ಮಕವಾಗಿ ನಿಕಟ ಸಂಪರ್ಕಕ್ಕಾಗಿ ಅವರು ಹಂಬಲಿಸಿದರು.

ಇದು ನಮಗೆ ಅರ್ಥವಾಗುವ ಸಂಗತಿಯೇ. ಏಕೆಂದರೆ ಬಹು ಪ್ರಬುದ್ಧವಾದ ಭಾವಶಕ್ತಿಯನ್ನು ಪಡೆದಿದ್ದ ಠಾಕೂರರಿಗೆ ಪರಮಾತ್ಮನೊಡನೆ ವೈಯಕ್ತಿಕ ಸಂಬಂಧಕ್ಕೆ ಅವಕಾಶವನ್ನು ನೀಡದಿರುವ ಕಲ್ಪನೆಯಿಂದ ಸಮಾಧಾನ ಪಡೆಯುವುದು ಸಾಧ್ಯವಿಲ್ಲ ದಾಯಿತು. ಪರಮಾತ್ಮನಿಗೆ ಪ್ರೀತಿಯನ್ನು ಸಮರ್ಪಿಸಿ ಆತನ ಪ್ರೀತಿಯನ್ನು

* "ಟ್ಯಾಗೋರ್ಸ್ ವರ್ಕ್ಸ್", ವಿಶ್ವಭಾರತಿ ಆವೃತ್ತಿ, ಸಂಪುಟ 4

ಪಡೆಯಲು ಬಯಸಿದರು ಅವರು. ಆದರೆ ವಿಶ್ವದೇವೈಕ್ಯವಾದವು ನಿಸರ್ಗದಲ್ಲಿ ಕಂಡ ಪರಮಾತ್ಮನು ವ್ಯಕ್ತಿತ್ವರಹಿತ ತತ್ತ್ವವಾದದ್ದರಿಂದ ಇದು ಸಾಧ್ಯವಿಲ್ಲದೆ ಹೋಯಿತು. ಎಲ್ಲ ಕಾಲದೇಶಗಳಲ್ಲೂ ಎಲ್ಲ ವಸ್ತುಗಳಲ್ಲೂ ವ್ಯಾಪಿಸಿರುವ ಆತನು ಒಂದು ವ್ಯಕ್ತಿತ್ವದ ಬಿಗಿ ಕವಚದಲ್ಲಿ ಸೆರೆಯಾಗಲಾರ. ಅಷ್ಟು ಬೃಹದಾಕಾರದವನು, ಅಷ್ಟು ಸೂಕ್ಷ್ಮದವನು ಅವನು.

ಇದಕ್ಕೆ ಪ್ರತಿಯಾಗಿ, ಪರಮಾತ್ಮನಿಗೆ ವ್ಯಕ್ತಿತ್ವ ನೀಡುವುದು ಠಾಕೂರರ ಭಾವನಾತ್ಮಕ ಅಗತ್ಯಗಳಿಗೆ ಬೇಕಾಗಿದ್ದಿತು. ಇಲ್ಲವಾದರೆ ಬೃಹದಾಕಾರದ, ಸರ್ವಾಂತರ್ಯಾಮಿಯಾದ ತತ್ತ್ವವು ಮನುಷ್ಯರಂತಹ ಹುಲು ಜೀವಿಗಳಿಗೆ ಪ್ರೀತಿಯನ್ನು ನೀಡಬಲ್ಲದೆಂದು ಕಲ್ಪಿಸಿಕೊಳ್ಳುವುದು ಹೇಗೆ ? ಈ ಸಮಸ್ಯೆಯನ್ನು ಕುರಿತು ಗಾಢವಾಗಿ ಚಿಂತಿಸಿ ಅವರು ಒಂದು ಪರಿಹಾರವನ್ನು ಕಂಡುಕೊಂಡರು. ಪ್ರಾಯಶಃ ಅವರು ನಿಸರ್ಗದಿಂದ ಒಂದು ಸೂಚನೆಯನ್ನು ಗ್ರಹಿಸಿದರು. ಅವರು ತಮ್ಮ ಸಮಸ್ಯೆಯನ್ನು ಬಿಡಿಸಿದ ರೀತಿಯನ್ನು ಒಂದು ಕವನವು ಕಣ್ಣಿಗೆ ಎದ್ದು ಕಾಣುವಂತೆ ತೋರಿಸುತ್ತದೆ.

ಪರಿಹಾರ ಬರುವುದು ನಿಸರ್ಗದಲ್ಲಿನ ತೀರ ಸಾಮಾನ್ಯವಾದ ಒಂದು ಸಂಗತಿಯಿಂದ. ಸೂರ್ಯ ಅಮಿತವಾದ ಶಕ್ತಿಯ ಆಗರ. ಬರಿದಾದ ಆಕಾಶದಲ್ಲಿ ಕೋಟ್ಯಂತರ ಕಿರಣಗಳನ್ನು ಆತ ಪಸರಿಸುತ್ತಾನೆ. ಅದಕ್ಕೆ ಬೃಹದಾಕಾಶ ಒಂದೇ ಯೋಗ್ಯ ತಾಣ ಎನ್ನಿಸುತ್ತದೆ. ಒಂದು ಹುಲ್ಲಿನ ಎಸಳ ಮೇಲೆ ಈಗಲೋ ಆಗಲೋ ಬಿದ್ದು ಹೋಗುವಂತೆ ಅಪ್ಪಿಕೊಂಡಿರುವ ಹಿಮಮಣಿಯು ಸಾಮಾನ್ಯವಾಗಿ ಸೂರ್ಯನ ಗಮನವನ್ನು ಸೆಳೆಯಲಾರದಷ್ಟು ಅಲ್ಪ ವಸ್ತು ಎಂದು ತೋರುತ್ತದೆ. ಆದರೆ, ಹಿಮಮಣಿಯೂ ಸೂರ್ಯನನ್ನು ತನ್ನ ಎದೆಯಲ್ಲಿ ಪ್ರತಿಬಿಂಬಿಸುವುದಿಲ್ಲವೆ? ಆದ್ದರಿಂದ ಬೃಹದಾಕಾರದ ಸೂರ್ಯನೂ ಎರಡು ಪಾತ್ರಗಳನ್ನು ವಹಿಸಬಲ್ಲದು ಎಂಬುದು ಸ್ಪಷ್ಟ. ವ್ಯಕ್ತಿತ್ವರಹಿತವಾಗಿ ಅದು ಅಮಿತವಾದ ಆಕಾಶದಲ್ಲೆಲ್ಲ ಪಸರಿಸುತ್ತದೆ. ಅದೇ ಸಮಯದಲ್ಲಿ ಅದು ಪುಟ್ಟ ಹಿಮಮಣಿಯನ್ನೂ ಗಮನಿಸಬಲ್ಲದು. ಕವನ ಹೀಗೆ ಸಾಗುತ್ತದೆ.

ಆಗಸವಲ್ಲದೆ ಬೇರೇನು ನಿನ್ನ ತಾಣವಾಗಬಲ್ಲದು
ಓ ಸೂರ್ಯ ? ನಾ ನಿನ್ನ ಕನಸ ಕಂಡೇನು,
ಆದರೆ ಸೇವೆ ಮಾಡಲಾರೆ,
ಅಳುತ್ತ ನುಡಿಯಿತು ಹಿಮ ಬಿಂದು."

"ತಡೆಬಡೆ ಕಾಣದ ನನ್ನ ಕಿರಣಗಳಿಂದ
ಜಗತ್ತನ್ನು ಬೆಳಗುತ್ತೇನೆ ನಾನು, ನಿಜ,
ಆದರೂ ಪುಟ್ಟ ಹಿಮಮಣಿ ನನ್ನನ್ನು ಹಿಡಿದಿರಲು
ಅವಕಾಶ ಕೊಡಬಲ್ಲೆ, ಅದನ್ನು ಪ್ರೀತಿಸಬಲ್ಲೆ,
ಸೂರ್ಯ ಹೇಳಿದ ಮುಗಳು ನಗೆಯಲಿ
ಇಳಿದು ಹಿಮಮಣಿಯ ಎದೆಯತ್ತ ಬರುತ.*

ಭಗವಂತನ ಸರ್ವಾಂತರ್ಯಾಮಿತ್ವವನ್ನು ಬಿಟ್ಟುಕೊಡದೆ ಆತನಿಗೂ ವ್ಯಕ್ತಿತ್ವ ವಿದೆ ಎನ್ನುವಂತೆ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲವೆ? ನಿಸರ್ಗದಿಂದ ಪಾಠ ಕಲಿತ ಠಾಕೂರರು ಪರಮ ತತ್ತ್ವವು ಎರಡು ಪಾತಳಿಗಳಲ್ಲಿ ಕೆಲಸ ಮಾಡಬಲ್ಲುದೆಂದು ಭಾವಿಸಿದರು. ವಿಶ್ವವನ್ನು ಪರಿಪಾಲಿಸುವ ಕರ್ತವ್ಯದ ಹೊರೆಯನ್ನು ಹೊತ್ತು ಅದು ವ್ಯಕ್ತಿತ್ವರಹಿತ ಸತ್ಯವಾಗಿ ಕ್ರಿಯಾತ್ಮಕ ಪಾತಳಿಯಲ್ಲಿ ಕೆಲಸ ಮಾಡುತ್ತದೆ. ಇಲ್ಲಿಯೇ ಪರಮಾತ್ಮನು ವ್ಯಕ್ತಿತ್ವರಹಿತ ಶಕ್ತಿಯಾಗುವುದು. ಆದರೆ ಆನಂದ ವನ್ನು ಆತ ಬಯಸುವ ಇನ್ನೊಂದು ಪಾತಳಿಯಲ್ಲಿ ಆತನು ವ್ಯಕ್ತಿತ್ವವನ್ನು ಧರಿಸಿ ಮಾನವರೊಡನೆ ಪ್ರೇಮಬಂಧನವನ್ನು ಬೆಳೆಸಬಲ್ಲ. ಠಾಕೂರರು ಇದನ್ನು ಆನಂದದ ಪಾತಳಿ ಎಂದು ಕರೆಯುತ್ತಾರೆ.**

ವ್ಯಕ್ತಿತ್ವ ಧರಿಸಿದ ಭಗವಂತನು ತನ್ನ ಆತ್ಮಸಾಕ್ಷಾತ್ಕಾರಕ್ಕಾಗಿ ಬಿಡಿ ವ್ಯಕ್ತಿಗಳಾಗಿ ಮಾನವರ ಪ್ರೇಮವನ್ನು ಪಡೆಯ ಬಯಸುತ್ತಾನೆ ಎಂದು ಠಾಕೂರರು ಕಾವ್ಯಾತ್ಮಕವಾಗಿ ಕಲ್ಪಿಸಿಕೊಳ್ಳುತ್ತಾರೆ. ನಿಸರ್ಗದ ಚೆಲುವಿನ ಸಮೃದ್ಧಿಯಿಂದ ಕಾರ್ಯ ರೂಪಕ್ಕೆ ಬರುವ ಉಪಯೋಗವೇನೂ ಇಲ್ಲ. ಇದಕ್ಕೆ ಪ್ರೇರಣೆ ಆನಂದದ ಬಯಕೆ ಮತ್ತು ಇಂತಹ ಆನಂದವನ್ನು ಮನುಷ್ಯನ ಹೃದಯಕ್ಕೆ ಹರಿಸುವ ಬಯಕೆ. ಅವರ ದೃಷ್ಟಿಯಲ್ಲಿ ನಿಸರ್ಗದಲ್ಲಿ ಪ್ರಕಟವಾಗುವ ಚೆಲುವು ಪರಮಾತ್ಮನ ಪ್ರೇಮ ದೋಲೆಯಂತೆ. ಹೂವುಗಳ ಸೌಂದರ್ಯ, ರಾತ್ರಿ ನಕ್ಷತ್ರ ಚೆಲ್ಲಿದ ಆಕಾಶ, ಸಂಜೆಯ ಆಗಸದಲ್ಲಿ ರಂಗಿನ ಪ್ರದರ್ಶನ ಎಲ್ಲ ಮನುಷ್ಯನ ಹೃದಯದಲ್ಲಿ ಆನಂದ ವನ್ನು ಉಕ್ಕಿಸುವುದಕ್ಕಾಗಿಯೇ ಇರುವುವು. ಭಗವಂತನೊಡನೆ ಪ್ರೇಮದ ಬಾಂಧ

* 'ಉತ್ಸರ್ಗ'

** "ಶಾಂತಿನಿಕೇತನ, ಸೌಂದರ್ಯ"

ವ್ಯವನ್ನು ಬೆಳೆಸಲು ಇವೆಲ್ಲ ಆಹ್ವಾನ ಪತ್ರಗಳು. ನಿಸರ್ಗದಲ್ಲಿ ಪ್ರಕಟವಾಗುವ ಚೆಲುವಿನಿಂದ ನಾವು ಅನುಭವಿಸುವ ಆನಂದವನ್ನು ಇಂತಹ ಸಿದ್ಧಾಂತ ಮಾತ್ರವೇ ವಿವರಿಸಬಲ್ಲದು ಎಂದು ಅವರು ವಾದಿಸುತ್ತಾರೆ. ಅವರೆನ್ನುತ್ತಾರೆ :

"ಸಂಗೀತದ ಪರಮಾರ್ಥವು ಗ್ರಾಮಾಫೋನಿನ ತಟ್ಟೆಯಲ್ಲಿ ಹೇಗೆ ಇರಲಾರದೋ ಹಾಗೆಯೇ ಗುಲಾಬಿಯಿಂದ ನಾವು ಪಡೆಯುವ ಆನಂದದ ಪರಮಾರ್ಥವು ಅದರ ದಳಗಳ ವರ್ತುಲಾಕಾರದಲ್ಲಿ ಇರಲು ಸಾಧ್ಯವಿಲ್ಲ. ಹೇಗೋ ಎಂತೋ ಅಂತೂ ಗುಲಾಬಿಯ ಮೂಲಕ ಪ್ರೇಮದ ಭಾಷೆ ನಮ್ಮ ಹೃದಯವನ್ನು ಮುಟ್ಟಿತು ಎಂದು ನವ ಗೆ ಭಾಸವಾಗುತ್ತದೆ."*

ಪರಮ ಸತ್ಯದ ಈ ದ್ವಿಪಾತ್ರದಲ್ಲಿ ಅವರ ನಂಬಿಕೆಯು ಒಂದು ಕಾಣ್ಕೆ (ವಿಷನ್) ಯಿಂದ ಅವರು ಪಡೆದ ಅನುಭವವೊಂದರಿಂದ ಅವರ ಮನಸ್ಸಿನಲ್ಲಿ ದೃಢ ಪಟ್ಟಂತೆ ಕಾಣುತ್ತದೆ. ಇದನ್ನು ಅನೇಕ ಬಾರಿ ಅವರು ವಿವರವಾಗಿ ನಿರೂಪಿಸಿದ್ದಾರೆ. ಈ ಅನುಭವವಾದದ್ದು ಉತ್ತರ ಬಂಗಾಳದಲ್ಲಿ ಷಹಜಾದ್‌ಪುರಕ್ಕೆ ಅವರು ಒಮ್ಮೆ ಹೋಗಿದ್ದಾಗ. ಅಲ್ಲಿ ಕುಟುಂಬಕ್ಕೆ ಸೇರಿದ ತೋಟದ ಕಚೇರಿಯಿತ್ತು, ಕಚೇರಿಗೆ ಸೇರಿದಂತೆ ವಿಶ್ರಾಂತಿ ಗೃಹವಿತ್ತು. ಒಂದು ದಿನ ಮಧ್ಯಾಹ್ನ ಸ್ನಾನ ಮಾಡಲು ಹೋಗುವ ಮುನ್ನ ಯಾವ ಉದ್ದೇಶವೂ ಇಲ್ಲದೆ ಕಿಟಕಿಯಲ್ಲಿ ನೋಡುತ್ತಿದ್ದಾಗ ಈ ಕಾಣ್ಕೆ ಅವರಿಗೆ ಲಭ್ಯವಾಯಿತು. ಅವರು ಹೇಳುತ್ತಾರೆ, "ಇದ್ದಕ್ಕಿದಂತೆ, ನನ್ನೊಳಗಿನ ಚೇತನ ಚುರುಕಾದದ್ದು ನನಗೆ ಅರಿವಾಯಿತು. ನನ್ನ ಅನುಭವ ಜಗತ್ತು ಕ್ಷಣದಲ್ಲಿ ಬೆಳಗತೊಡಗಿದಂತೆ ಕಂಡಿತು. ಪ್ರತ್ಯೇಕವಾಗಿ ಉಳಿದು ಅಸ್ಪಷ್ಟವಾಗಿದ್ದ ವಾಸ್ತವಾಂಶಗಳಿಗೆ ಇನ್ನೂ ಹೆಚ್ಚಿನ ಅರ್ಥದ ಐಕ್ಯತೆ ದೊರಕಿತು."**

ಸಾರಾಂಶದಲ್ಲಿ, ವಿಶ್ವದ ಸಂರಕ್ಷಣೆಯ ಪಾತಳಿಯಲ್ಲಿ ಅನಂತನೂ ವ್ಯಕ್ತಿತ್ವ ರಹಿತನೂ ಅದ ಪರಮಾತ್ಮನು ವ್ಯಕ್ತಿತ್ವವನ್ನು ಧರಿಸಿ ನಿಜವಾದ ಭಕ್ತನ ಹೃದಯದಲ್ಲಿ ಪೀಠಸ್ಥನಾಗುತ್ತಾನೆ ಎಂದು ಅವರಿಗೆ ಎನ್ನಿಸಿತು. ಈ ರೀತಿಯಲ್ಲಿ

---

* "ರಿಲಿಜನ್ ಆಫ್ ಮ್ಯಾನ್", ದ ವಿಷನ್

** ಅದೇ.

ಪರಮಾತ್ಮನು ಮಾನವ ಕುಲದಲ್ಲಿ ಸ್ಫುಟವಾಗುತ್ತಾನೆ. ಸಾರ್ಥಕ್ಯದ ಪಥದಲ್ಲಿ ತಾನು ಕೊಂಡೊಯ್ಯಲು ಬಯಸುವ ಬಿಡಿ ವ್ಯಕ್ತಿಯ ಸಹಕಾರ ಮತ್ತು ಪ್ರೀತಿಗಳನ್ನು ಅಪೇಕ್ಷಿಸುತ್ತಾನೆ. ಈ ದೃಷ್ಟಿಯಂತೆ, ಒಬ್ಬ ವ್ಯಕ್ತಿಯಲ್ಲಿ ಎರಡು ಪ್ರತ್ಯೇಕ ಅಂಶಗಳು ಅಸ್ತಿತ್ವದಲ್ಲಿದ್ದು ಕೆಲಸ ಮಾಡಬಹುದು. ಮೊದಲನೆಯದು, ವ್ಯಕ್ತಿಯ ಆತ್ಮ. ಇದು ದಿನನಿತ್ಯದ ಜೀವನದೊಂದಿಗೆ ನಿಕಟವಾದ ಸಂಬಂಧ ಹೊಂದಿರುವುದು. ಈ ವೈಯಕ್ತಿಕ ಆತ್ಮ ಪ್ರೀತಿಗೆ ಮರುಪ್ರೀತಿಯನ್ನಿತ್ತು ಸಹಕರಿಸಿದರೆ ಸಾಕು. ಅದು ಅಪೇಕ್ಷಿಸುವ ರೀತಿಯಲ್ಲಿ ಅದನ್ನು ರೂಪಿಸುವಂತೆ ವ್ಯಕ್ತಿಯ ಚಟುವಟಿಕೆಗಳಿಗೆ ಮಾರ್ಗದರ್ಶನ ಮಾಡಿ ನಿಯಂತ್ರಿಸುವುದು. ಇನ್ನೊಂದು ಅಂಶ ಎನ್ನುತ್ತದೆ ತಾನು ಅರಿಸಿದ ಭಕ್ತನ ಚಟುವಟಿಕೆಗಳು ಮೂಲಕ ಅಭಿವ್ಯಕ್ತಿಯ ಬಯಕೆಯನ್ನು ಪೂರೈಸುವುದಕ್ಕಾಗಿ, ವ್ಯಕ್ತಿತ್ವ ಧಾರಣೆ ಮಾಡಿದ ಪರಮಾತ್ಮನಿಗೆ ಈ ಸಹಪ್ರಯತ್ನದಲ್ಲಿ ಆಸಕ್ತಿ ಇರುವಂತೆ ಕಾಣುತ್ತದೆ. ವ್ಯಕ್ತಿಯ ಬಾಳಿಗೆ ಪರಿಪೂರ್ಣತೆಯನ್ನು ನೀಡುವುದು ಒಂದು ಕಲಾಕೃತಿಯಂತೆ, ಕಲೆಗಾರನು ತನ್ನ ನಾಟಕವನ್ನು ನಿರ್ದೇಶಿಸುವುದರ ಮೂಲಕ ಅತ್ಯುತ್ತಮ ಅಭಿವ್ಯಕ್ತಿಯನ್ನು ಅರಸುವಂತೆ ವ್ಯಕ್ತಿತ್ವವನ್ನು ಧರಿಸಿದ ಪರಮಾತ್ಮನು ತನ್ನ ಭಕ್ತನ ಹೃದಯದ ಗರ್ಭಗೃಹದಲ್ಲಿ ನೆಲೆಸಿ ತನ್ನ ಅತ್ಯುತ್ತಮ ಅಭಿವ್ಯಕ್ತಿಯನ್ನು ಅರಸುತ್ತನೆ. ತನ್ನ ವಾದವನ್ನು ಸ್ಪಷ್ಟಗೊಳಿಸಲು ಠಾಕೂರರು ಪರಮಾತ್ಮನನ್ನು ಒಂದು ನಾಟಕ ನಿರ್ದೇಶಕನಿಗೆ ಹೋಲಿಸುತ್ತಾರೆ. ನಾಟಕದಲ್ಲಿ ಒಬ್ಬ ನಟ ಯಶಸ್ವಿಯಾಗ ಬೇಕೆಂದು ಬಯಸಿ ನಿರ್ದೇಶಕ ಅವನನ್ನು ತನಗೆ ಒಪ್ಪಿಗೆಯಾಗುವಂತೆ ರೂಪಿಸಲು ಅವನ ಸಹಕಾರವನ್ನು ಕೋರುತ್ತಾನೆ. ಠಾಕೂರರು ಕಂಡುಕೊಂಡ ವೈಯಕ್ತಿಕ ಪರಮಾತ್ಮನಿಗೆ ಅವರು 'ಜೀವನ ದೇವತಾ' ಎಂದು ಹೆಸರು ಕೊಡುತ್ತಾರೆ. ಕವಿಯ ಜೀವನವನ್ನು ನಿರ್ದೇಶಿಸಿ, ರೂಪಿಸಿ, ಅದಕ್ಕೆ ಐಕ್ಯತೆಯನ್ನೂ ಮಾರ್ಗ ದರ್ಶನವನ್ನೂ ನೀಡುವ ಅಂತಃಶಕ್ತಿ ಇದೇ.

ತತ್ತ್ವಶಾಸ್ತ್ರ ಅಥವಾ ಧರ್ಮದ ಕ್ಷೇತ್ರದಲ್ಲಿ ಹೋಲಿಕೆ ಇಲ್ಲದ ಅಸದೃಶ ಕಲ್ಪನೆ ಇದು. ಇದರ ಆಧಾರ ತತ್ತ್ವಶಾಸ್ತ್ರದ ತರ್ಕಕ್ಕಿಂತ ಮುಖ್ಯವಾಗಿ ವೈಯ ಕ್ತಿಕ ಕಾಣ್ಕೆ. ಆದ್ದರಿಂದ ಇದಕ್ಕೆ ತರ್ಕಬದ್ಧ ಬುನಾದಿ ಇಲ್ಲವೆಂದು ಅಪೇಕ್ಷಿಸುವುದು ನ್ಯಾಯವಲ್ಲ. ಅದು ರೂಪಿತವಾದದ್ದು ಅಷ್ಟಾಗಿ ಬೌದ್ಧಿಕ ಊಹಾಪೋಹದಿಂದಲ್ಲ, ಭಾವುಕ ಅಗತ್ಯಗಳಿಂದ. ಈ ದೌರ್ಬಲ್ಯವನ್ನು ಅವರೇ ಒಪ್ಪಿಕೊಳ್ಳುತ್ತಾರೆ. ಇದನ್ನು ಕೆಳಗಿನ ಮಾತುಗಳಲ್ಲಿ ಕಾಣಬಹುದು :

"ದೇವರನ್ನು ಕುರಿತ ಈ ವಿಚಾರವು ನನ್ನ ಮನಸ್ಸಿನಲ್ಲಿ ಯಾವುದೇ ವೇದಾಂತ ಜಿಜ್ಞಾಸೆಯಿಂದ ಬೆಳೆದುದಲ್ಲ. ಪ್ರತಿಯಾಗಿ ಅದು ನನ್ನ ಬಾಲ್ಯದಿಂದ ನನ್ನ ಸ್ವಭಾವದ ರೀತಿಯನ್ನೇ ಅನುಸರಿಸಿಕೊಂಡು ಬಂದಿತು, ಇದ್ದಕ್ಕಿದ್ದಂತೆ ನೇರ ಕಾಣ್ಕೆಯಿಂದ ನನ್ನ ಪ್ರಜ್ಞೆಯಲ್ಲಿ ಪ್ರಜ್ವಲಿಸಿತು".*

ಪರಮಾತ್ಮನು ಮಾನವನಂತಾಗುವ 'ಜೀವನ ದೇವತೆಯ ವಿಚಾರವು ಅವರ ಬಾಳಿನಲ್ಲಿ ಕೃಷ್ಟು ಮೊದಲ ವರ್ಷಗಳಲ್ಲೆ ಸಂಪೂರ್ಣವಾಗಿ ರೂಪಗೊಂಡಂತೆ ಕಾಣುತ್ತದೆ. ಇದೇ ಹೆಸರನ್ನು ಪಡೆದ, ಇದೇ ವಸ್ತುವಿನಿಂದ ಪ್ರೇರಿತವಾದ ಕವನವೊಂದು, ಅವರು ಉತ್ತರ ಬಂಗಾಳದಲ್ಲಿದ್ದಾಗ 1897 ರಲ್ಲಿ ಪ್ರಕಟವಾದ 'ಚಿತ್ರಾ' ಎಂಬ ಕವನ ಸಂಗ್ರಹದಲ್ಲಿ ಸೇರಿದೆ. ಇದಕ್ಕೆ ಸ್ವಲ್ಪ ಮೊದಲು ಅವರು ತಮ್ಮ ತೋಟಗಳಲ್ಲಿ ಮೇಲ್ವಿಚಾರಣೆಗಾಗಿ ಪ್ರವಾಸ ಮಾಡಿದಾಗ ಇದಕ್ಕೆ ಪ್ರೇರಣೆ ಬಂದಿರಬೇಕು. ಇದರ ನಂತರ ಅವರ ಬಾಳಿನಲ್ಲಿ ಈ ವಸ್ತು ಪೂರ್ಣ ಪ್ರಭಾವ ಬೀರಿದಂತೆ ಕಾಣುತ್ತದೆ. ಬಂಗಾಳೀ 'ಗೀತಾಂಜಲಿ' ಯಲ್ಲಿ ಅಳವಡಿಸಿದ ಕವನಗಳಲ್ಲೆ 'ಜೀವನ ದೇವತೆ' ಯ ಕಲ್ಪನೆಯು ಕೇಂದ್ರ ವಿಚಾರವಾಗಿ ಮೂಡಿತು. ಈ ಪುಸ್ತಕ ಪ್ರಕಟವಾದದ್ದು 1910 ರಲ್ಲಿ. ಆದರೆ ಈ ಸಂಗ್ರಹದಲ್ಲಿ ಅತ್ಯಂತ ಮೊದಲು ರಚಿಸಿದ ಪದ್ಯಗಳು 1906ನೆ ವರ್ಷದವು. ಆದ್ದರಿಂದ ಈ ವಿಚಾರವು ಒಂದು ದಶಕದಷ್ಟು ಕಾಲ ಸುಪ್ತವಾಗಿದ್ದಿತೆಂಬುದು ಸ್ಪಷ್ಟ. ಈ ನಡುವಿನ ಅವಧಿಯಲ್ಲಿ ಸಣ್ಣ ಕಥೆಗಳು, ಗಂಭೀರ ಕವನಗಳು, ರಾಷ್ಟ್ರ ಗೀತೆಗಳು ಅಲ್ಲದೆ ಒಂದು ಕಾದಂಬರಿ ಸಹ ರಚಿತವಾದವು. ಬಹು ಪಾಲು, ವಿಚಾರ ರೀತಿ ರೂಪಿತವಾಗಿತ್ತು, ಆದರೆ ಕವಿಯ ಮನಸ್ಸು ಅದಕ್ಕೆ ಪ್ರತಿಕ್ರಿಯೆ ತೋರಲು ಇನ್ನೂ ಸಿದ್ಧವಾಗಿರಲಿಲ್ಲ. ಈ ಅವಧಿಯಲ್ಲಿ ಅವರಿಗೆ ಪ್ರಿಯರಾದವರು ಹಲವರನ್ನು ಸಾವು ಕರೆದೊಯ್ದಿತ್ತು. ಇದೂ ಇನ್ನಿತರ ದುಃಖ, ದುರದೃಷ್ಟಗಳೂ ಈ ಪ್ರತಿಕ್ರಿಯೆಯನ್ನು ಚುರುಕುಗೊಳಿಸಿರಬಹುದು. ಈ ಭವ್ಯ ಕಲ್ಪನೆಯನ್ನು ಸೂಚಿಸಲು ತಮ್ಮ ಮನಸ್ಸಿನೊಳಕ್ಕೆ ತಮ್ಮನ್ನೆಳೆದುಕೊಳ್ಳಲು ಅವರಿಗೆ ಸಾಧ್ಯವಾಗಿರಬಹುದು. ಪ್ರಾಯಶಃ ಆಗಲೇ ಉದ್ಧರಿಸಿದ ಈ ಕೆಳಗಿನ ಪಂಕ್ತಿಗಳು–ಅವರ ಒಂದು ಕವನದಿಂದ ಆರಿಸಿದವು–ಈ ಅಭಿಪ್ರಾಯಕ್ಕೆ ಪುಷ್ಟಿ ಕೊಡುತ್ತದೆ :

* "ರಿಲಿಜನ್ ಆಫ್ ಮ್ಯಾನ್", ಮ್ಯಾನ್ಸ್ ಯೂನಿವರ್ಸ್

ದುಃಖದ ಕಾರಿರುಳು ನಿನ್ನ ಕೃಪಾಜ್ಯೋತಿ ಬೆಳಗುವಂತೆ
ಮಾಡುವುದಾದರೆ ಅಂತೆಯೇ ಆಗಲಿ.

ಈ ವಸ್ತು ಅವರ ಮನಸ್ಸನ್ನು ಆವರಿಸುತ್ತಿದ್ದಂತೆಯೇ ಅದು ಸಾಹಿತ್ಯ ಚರಿತ್ರೆಯನ್ನು ನಿರ್ಮಿಸಿತು. ಅವರ ಬಾಳಿನ ಈ ಘಟ್ಟದಲ್ಲಿ ಅವರಿಗೆ ಕಾವ್ಯದ ಸಮೃದ್ಧ ಸುಗ್ಗಿಯೇ ಲಭ್ಯವಾಯಿತು. ನಾಲ್ಕೇ ವರ್ಷಗಳ ಅವಧಿಯಲ್ಲಿ ಪ್ರಕಟವಾದ ಮೂರು ಪುಸ್ತಕಗಳನ್ನು ತುಂಬಿದ ಕವನಗಳಿಗೆಲ್ಲ 'ಜೀವನ ದೇವತೆ'ದ ಕೇಂದ್ರ ವಸ್ತುವೇ ಪ್ರೇರಣೆಯಾಯಿತು. ಈ ಮೂರು ಪುಸ್ತಕಗಳು, 'ಗೀತಾಂಜಲಿ' 'ಗೀತಿಮಾಲ್ಯ' ಮತ್ತು 'ಗೀತಾಲಿ'. ಕಡೆಯ ಎರಡು 1913ರಲ್ಲಿ ಪ್ರಕಟವಾದವು. ಅವುಗಳ ಶೈಲಿಯ ಸರಳ ಲಾಲಿತ್ಯ ಮತ್ತು ಅವು ನಿರೂಪಿಸುವ ಭಾವನೆಯ ಗಹನತೆ-ಇವುಗಳಿಂದಾಗಿ ಈ ಕವನಗಳು ಉನ್ನತವಾದ ಕಾವ್ಯ ಸೊಬಗನ್ನು ಪಡೆದಿವೆ.

ಈ ವಸ್ತು ಅವರಿಗೆ ಎಷ್ಟು ಆಕರ್ಷಕವಾಯಿತೆಂದರೆ, 'ಗೀತಾಂಜಲಿ' ಪ್ರಕಟವಾದ ವರ್ಷವೇ ಹೊರಬಿದ್ದ 'ರಾಜ' ಎನ್ನುವ ಸಾಂಕೇತಿಕ ನಾಟಕಕ್ಕೂ ಅದೇ ವಸ್ತುವಾಯಿತು. ಹತ್ತು ವರ್ಷಗಳ ನಂತರ ಈ ನಾಟಕದ ಇನ್ನೂ ಅಡಕವಾದ ರೂಪವನ್ನು ಪ್ರಕಟಿಸಿ ಅದಕ್ಕೆ 'ಅರೂಪ ರತನ್' ಎಂದು ಹೆಸರಿಟ್ಟರು. ಆತ್ಮನನ್ನು 'ರಾಣಿ ಸುದರ್ಶನ' ಎಂದು ನಿರೂಪಿಸಿದ್ದಾರೆ. ವೈಯಕ್ತಿಕ ಸ್ವರೂಪದ ಭಗವಂತ ಅವಳ ಹೃದಯದ ಕತ್ತಲು ಕೋಣೆಯಲ್ಲಿ ಅವಳನ್ನು ಸೇರುತ್ತಾನೆ.

ಮೇಲೆ ಹೇಳಿದ ಮೂರು ಕೃತಿಗಳು ಠಾಕೂರರ ಕಾವ್ಯ ಜೀವನದ ಎರಡನೆಯ ಘಟ್ಟವನ್ನೂ ಆತ್ಮ ಸಾಕ್ಷಾತ್ಕಾರದತ್ತ ಅವರ ಮುನ್ನಡೆಯನ್ನೂ ಅವರ ಮನಸ್ಸಿನಲ್ಲಿ ಮೂಡಿದ ವಿಚಾರಗಳನ್ನೂ ಪಡೆದ ಸ್ಥಿತಿಗಳನ್ನೂ ಪ್ರತಿಬಿಂಬಿಸುತ್ತವೆ. ಒಬ್ಬ ವ್ಯಕ್ತಿಯ ಸ್ವರೂಪದ ಭಗವಂತನೊಡನೆ ಸಂಬಂಧ ಸಾಧಿಸಬೇಕೆಂಬ ಅವರ ಹಂಬಲ ಮಿಲನ ತಡವಾಯಿತೆಂದು ಅವರ ನಿರಾಸೆ, ಸಂಕಟವೆನ್ನಬಹುದಾದ ಸೋಲಿನ ಭಾವನೆ ಕಡೆಗೂ ಲಭ್ಯವಾಗಿ ತಡೆಯಲಾರದ ಹಿಗ್ಗನ್ನು ತಂದ ಮಿಲನ ಇವೆಲ್ಲ ಈ ಕವನಗಳಲ್ಲಿ ಸುಂದರವಾದ ಭಾಷೆಯಲ್ಲಿ ವರ್ಣಿತವಾಗಿವೆ.

ಆದರೆ ಈ ಮಹಾ ವಸ್ತುವಿನಲ್ಲೇ ನಿರಾಸೆಯ ಬೀಜ ಅಡಗಿತ್ತು. ಸೂಕ್ಷ್ಮ

ಕಾಲ ಒದಗಿದಾಗ ಅದು ಮೊಳಕೆಯಾಗಿ, ಆತ್ಮಸಾಕ್ಷಾತ್ಕಾರದ ಪಯಣದಲ್ಲಿ ಠಾಕೂರರನ್ನು ಕಡೆಯ ಘಟ್ಟಕ್ಕೊಯ್ಯುವ ತಿರುವಿಗೆ ಅವರನ್ನು ಸಿದ್ಧಗೊಳಿಸಿತು. ಈ ಮಹಾ ವಸ್ತುವಿನಿಂದ ಉಂಟಾದ ಮತ್ತು ಇಳಿಯುತ್ತಿದ್ದಂತೆ, ಈ ಕಲ್ಪನೆ ನೀಡಿದ ಧಾರ್ಮಿಕ ಅನುಭವ ಸಂಪೂರ್ಣವಾಗಿ ಸಂತೃಪ್ತಿ ನೀಡಲಾರದು ಎಂದು ಠಾಕೂರರಿಗೆ ಅರ್ಥವಾಯಿತು. ಮತ್ತೊಬ್ಬ ವಿಶಿಷ್ಟ ವ್ಯಕ್ತಿಯ ಬಗೆಗೆ ಗಾಢವಾದ ಪ್ರೀತಿ ಗೌರವಗಳನ್ನು ತಳೆದಿರುವವರಿಗೆ ಆ ವ್ಯಕ್ತಿಗೆ ಸೇವೆಯನ್ನು ಸಮರ್ಪಿಸಬೇಕೆಂಬ ಉತ್ಕಟ ಭಾವವಿರುತ್ತದೆ. ಪೂಜ್ಯಭಾವವು ಹೃದಯದಲ್ಲಿ ಭಾವನಾತ್ಮಕವಾಗಿ ನೆಲೆಗೊಳ್ಳುವುದಷ್ಟೇ ಅಲ್ಲ, ವೈಯಕ್ತಿಕ ಸೇವೆಯ ವಿವಿಧ ಕಾರ್ಯಗಳಲ್ಲಿ ಅಭಿವ್ಯಕ್ತಿ ಪಡೆಯಬೇಕು. ಆದರೆ ಠಾಕೂರರು ಕಲ್ಪಿಸಿಕೊಂಡ 'ಜೀವನ ದೇವತೆ'ಯು ಕತ್ತಲೆ ಕೋಣೆಯ ರಾಜನಾಗಿ ಮತ್ತು 'ಅರೂಪ ರತ್ನ' ವಾಗಿ ಉಳಿದುದರಿಂದ ಆ ದೇವತೆಯು ವೈಯಕ್ತಿಕ ಸೇವೆಯನ್ನು ಸ್ವೀಕರಿಸಲು ಅಸಮರ್ಥನಾಗಿದ್ದ.

ಅವರ ಹೃದಯ ಒಲಿಯುವಂತಹ ಧರ್ಮವನ್ನು ಕಟ್ಟಕಡೆಗೆ ಗುರುತಿಸಿಕೊಳ್ಳುವ ಪ್ರಕ್ರಿಯೆ ಪ್ರಾರಂಭವಾದದ್ದು ಸೇವೆಯನ್ನು ಅರ್ಪಿಸುವ ಅಗತ್ಯದಿಂದ ಈ ಧರ್ಮ ನಿಜವಾಗಿ ದೇವರನ್ನು ಮಾನವೀಯಗೊಳಿಸಿತು, ಅವರ ಧರ್ಮಕ್ಕೆ ರೂಪ ಕೊಡುವುದರಲ್ಲಿ ಮನುಷ್ಯನ ಮೂರು ಮುಖ್ಯ ಶಕ್ತಿಗಳು ಗಣನೀಯ ಪ್ರಭಾವವನ್ನು ಬೀರಿದವು. ಇವು ಬುದ್ಧಿಶಕ್ತಿ, ಭಾವನಾಶಕ್ತಿ ಮತ್ತು ಸಂಕಲ್ಪ ಶಕ್ತಿ. ಇವು ಜ್ಞಾನ, ಭಕ್ತಿ ಮತ್ತು ಕರ್ಮ—ಈ ಮೂರು ಭಾರತೀಯ ಕಲ್ಪನೆಗಳಿಗೆ ಸರಿಸಮಾನವಾದವು. ಈ ಮೂರು ಶಕ್ತಿಗಳಲ್ಲಿ ಯಾವುದು ಪ್ರಬಲವಾಗುತ್ತದೆ ಎಂಬುದನ್ನು ಅವಲಂಬಿಸಿ, ಮನುಷ್ಯನ ಧರ್ಮವನ್ನು ರೂಪಿಸಲು ಮೂರು ಒಲವುಗಳಿರಬಹುದು. ಇಂತಹ ಪ್ರತ್ಯೇಕ ಒಲವುಗಳಿಂದ ಅಸಂತೃಪ್ತಿಯಾಗುವಂತಹ ಪರಿಣಾಮಗಳು ಆಗುತ್ತವೆ ಎಂದು ಠಾಕೂರರು ತಮ್ಮ ಸ್ವಂತ ಅನುಭವದಿಂದ ತಂದುಕೊಂಡರು.

ನಿಸರ್ಗದ ಮೂಲಕದ ಬುದ್ಧಿಶಕ್ತಿಯ ಮೂಲಕ ಸಾಗುವ ದಾರಿ ಅವರದು. ಈ ದಾರಿಯಿಂದ ಭಗವಂತನನ್ನು ಕಂಡುಕೊಳ್ಳುವ ಅವರ ಪ್ರಯತ್ನವು ವಿಶ್ವದೇವೈಕ್ಯ ಕಲ್ಪನೆಗೆ ಒಯ್ದಿತು. ಈ ಕಲ್ಪನೆಯ ಪ್ರಕಾರ, ಭಗವಂತನು ಸರ್ವಾಂತರ್ಯಾಮಿಯಾದ ವ್ಯಕ್ತಿತ್ವರಹಿತ ಶಕ್ತಿಯಾಗಿ ಕೆಲಸ ಮಾಡುತ್ತಾನೆ. ಅವನ

ಅಸ್ತಿತ್ವವನ್ನು ಅನುಮಾನಿಸಬಹುದು, ಆದರೆ ಇಂದ್ರಿಯಗಳ ಮೂಲಕ ನೇರವಾಗಿ ಗ್ರಹಿಸಲು ಸಾಧ್ಯವಿಲ್ಲ. ಠಾಕೂರರು ಹೇಳುತ್ತಾರೆ :

"ವಿಶ್ವದಲ್ಲಿ ಪ್ರಕಟವಾಗುವ ಬ್ರಹ್ಮನನ್ನು ಕುರಿತ ಜ್ಞಾನವನ್ನು ನಾನು ಅನುಮಾನ ಲಭ್ಯ ಜ್ಞಾನದ ಮೂಲಕ ಸಾಧಾರಣವಾಗಿ (general term) ಮಾತ್ರ ತಿಳಿದುಕೊಳ್ಳಲು ಸಾಧ್ಯ."*

ಭಾವನಾಶಕ್ತಿಯ ಮೂಲಕ ಅವರು ಹೊರಟಾಗ ಅವರ 'ಜೀವನ ದೇವತೆ' ಯನ್ನು ಕಂಡುಕೊಂಡರು. ಇದು ಭಾವನಾಶಕ್ತಿಗೆ ಬಹುವಾಗಿ ಸಂತೃಪ್ತಿಯನ್ನು ಕೊಟ್ಟಿತು. ಆದರೆ ಅದಕ್ಕೆ ಮಿತಿಗಳೇ ಇದ್ದವು. ಅವರು ಕಲ್ಪಿಸಿಕೊಂಡ ವ್ಯಕ್ತಿತ್ವವನ್ನು ಧರಿಸಿದ ಪರಮಾತ್ಮನಿಗೆ ಭೌತಿಕ ಅವತಾರವಿಲ್ಲದಿದ್ದುದರಿಂದ ಭಗವಂತನ ಸೇವೆ ಮಾಡಬೇಕೆಂಬ ತುಡಿತಕ್ಕೆ ತೃಪ್ತಿ ದೊರೆಯುವುದು ಸಾಧ್ಯವಿಲ್ಲವಾಯಿತು. ಇಲ್ಲಿ ನಿರಾಸೆಯಾದರೆ, ಜಡಜಗತ್ತಿನಲ್ಲಿ ಪ್ರಕಟವಾದ ಪರಮಾತ್ಮನ ಭೌತಿಕ ರೂಪದತ್ತ ತಿರುಗಬಹುದಾಗಿತ್ತು. ನಿಜ. ಆದರೆ ಇದಕ್ಕೆ ವ್ಯಕ್ತಿತ್ವವಿಲ್ಲ, ಇದಕ್ಕೂ ವೈಯಕ್ತಿಕ ಸೇವೆಯ ಅಗತ್ಯವಿಲ್ಲ, ಆದುದರಿಂದ ಇದರಿಂದಲೂ ಪ್ರಯೋಜನವಿಲ್ಲ. ಅವರು ಹೇಳುತ್ತಾರೆ: 'ನೀರು, ಭೂಮಿ, ಆಕಾಶ, ಗ್ರಹಗಳು, ತಾರೆಗಳು–ಇವುಗಳಿಗೆ ಪ್ರೀತಿ ಕೊಟ್ಟು ಪ್ರೀತಿ ಪಡೆಯುವುದು ಸಾಧ್ಯವಿಲ್ಲ–ನಮ್ಮ ಕಲ್ಯಾಣದ ಚಟುವಟಿಕೆಗಳಿಗೂ ಅವುಗಳಿಗೂ ಸಂಬಂಧವೇ ಇಲ್ಲ."**

ಹೀಗೆ ಒಂದೊಂದನ್ನಾಗಿ ಬಿಡುತ್ತ ಬಂದು ಕಡೆಗೆ ಅವರು, ಮೂರು ಶಕ್ತಿಗಳ ಮೂಲಕ ಭಗವಂತನಲ್ಲಿ ಸಂಪೂರ್ಣ ಐಕ್ಯತೆಯನ್ನು ಸಾಧಿಸುವ ಅತ್ಯುತ್ತಮ ಮಾರ್ಗ, ಮನುಷ್ಯನ ಮೂಲಕ ಇಂತಹ ಸಂಪರ್ಕವನ್ನು ಅರಸುವುದೇ ಸರಿ ಎಂಬ ನಿರ್ಣಯಕ್ಕೆ ಬಂದರು. ತನಗೆ ಅತ್ಯಂತ ನಿಕಟವಾದ ಭಗವದವತಾರವೆಂದರೆ ಮನುಷ್ಯನೇ ಎಂಬ ಅರಿವನ್ನು ಪಡೆದಾತ ಬುದ್ಧಿಶಕ್ತಿಯ ಮೂಲಕ ಒಂದು ಕೊಂಡಿಯನ್ನು ಬೆಸೆಯಬಲ್ಲ, ತನ್ನ ಸಹಮಾನವರನ್ನು ಪ್ರತಿನಿಧಿಸುವುದರ ಮೂಲಕ ಭಾವನಾತ್ಮಕ ಕೊಂಡಿಯನ್ನು ಬೆಸೆಯಬಲ್ಲ. ಮಾನವಕೋಟಿಯ ಸೇವೆಯ ಮೂಲಕ ಅವತಾರ ಸ್ವರೂಪಿಯಾದ ಭಗವಂತನಿಗೆ ಸೇವೆಯನ್ನು ಸಲ್ಲಿಸಬಲ್ಲ.

---

* 'ಟ್ಯಾಗೋರ್ಸ್ ವರ್ಕ್ಸ್' (ವಿಶ್ವಭಾರತಿ ಆವೃತ್ತಿ) ಸಂಪುಟ 13

* ಅದೇ.

ಆದುದರಿಂದ ಅವರು ಹೇಳುತ್ತಾರೆ : "ನಮ್ಮ ಜ್ಞಾನ, ಪ್ರೇಮ ಮತ್ತು ಕ್ರಿಯಾಶಕ್ತಿಗಳು ನಮ್ಮ ಎಲ್ಲ ಸುಪ್ತ ಸಾಮರ್ಥ್ಯಗಳಿಗೆ ಆದಷ್ಟು ಸಂಪೂರ್ಣವಾದ ಅಭಿವ್ಯಕ್ತಿಯನ್ನು ನೀಡುವುದು ಸಾಧ್ಯವಾದಾಗ ಮಾತ್ರವೇ ನಮ್ಮ ಹಕ್ಕುಗಳು ಸಾಧಿತವಾದಂತೆ. ಆದ್ದರಿಂದಲೇ ಜ್ಞಾನ, ಪ್ರೇಮ ಮತ್ತು ಮಾನವ ಕುಲದ ಸೇವೆ ಇವುಗಳ ಮೂಲಕವಲ್ಲದೆ ಬೇರಾವ ರೀತಿಯಿಂದಲೂ ಪರಮಾತ್ಮನೊಡನೆ ಸಂಬಂಧ ಬೆಳೆಸಲು ನಮಗಿರುವ ಹಕ್ಕನ್ನು ಚಲಾಯಿಸಲು ಸಾಧ್ಯವಿಲ್ಲ.*

ಹೀಗೆ ಠಾಕೂರರು ತಮ್ಮ ಅನ್ವೇಷಣೆಯ ಅಂತ್ಯಕ್ಕೆ ಬಂದದ್ದು ಮಾನವನಲ್ಲಿ ಪರಮಾತ್ಮನನ್ನು ಕಂಡಾಗ. ಮಾನವನ ಮೂಲಕ ಮಾತ್ರವೇ ನಾವು ಭಗವಂತನನ್ನು ಪರಿಪೂರ್ಣ ಸ್ವರೂಪದಲ್ಲಿ ಸಾಕ್ಷಾತ್ಕಾರ ಮಾಡಿಕೊಳ್ಳಲು ಸಾಧ್ಯ ಎಂಬ ದೃಢ ನಿಶ್ಚಯಕ್ಕೆ ಅವರು ಬಂದರು. ಬುದ್ಧಿಶಕ್ತಿಯಿಂದ ಮನುಷ್ಯನನ್ನು ನೇರವಾಗಿ ಅರಿಯಲು ಸಾಧ್ಯ. ವ್ಯಕ್ತಿತ್ವವಿರುವ ಆತನು ಪ್ರೇಮಕ್ಕೆ ಪ್ರತಿಯಾಗಿ ಪ್ರೇಮವನ್ನು ನೀಡಬಲ್ಲ. ಸೇವೆಯನ್ನು ಆತನು ಸ್ವೀಕರಿಸಬಲ್ಲನಾದುದರಿಂದ ಅವನ ಮೂಲಕವೂ ದೇವರನ್ನು ಸೇವಿಸಬಹುದು. ಹೀಗೆ ಅವನ ಮೂಲಕ ನಾವು ಜ್ಞಾನ, ಭಕ್ತಿ ಮತ್ತು ಕರ್ಮ ಮಾರ್ಗಗಳು ಮೂರರಿಂದಲೂ ಭಗವಂತನ ಬಳಿಸಾರಬಹುದು. ಹೀಗೆ ಠಾಕೂರರು ಅನ್ವೇಷಣೆ ಒಂದು ವಿಶಿಷ್ಟ ಸ್ವರೂಪದ ಮಾನವತಾವಾದದಲ್ಲಿ ಮುಕ್ತಾಯವಾಯಿತು, ಇಲ್ಲಿ ಮನುಷ್ಯನು ಪರಮಾತ್ಮನ ಅತ್ಯಂತ ಪರಿಣಾಮ ಕಾರಿಯಾದ ಸ್ವರೂಪವಾಗಿ ಆಸಕ್ತಿಯ ಕೇಂದ್ರವಾಗುತ್ತಾನೆ.

ಒಂದು ಸಾದೃಶ್ಯವನ್ನು ನೀಡಿ ಠಾಕೂರರು ತಮ್ಮ ನಿಲುವನ್ನು ಸಮರ್ಥಿಸುತ್ತಾರೆ. ಭಗವಂತನು ಹಲವು ಚೈತನ್ಯ ರೂಪಗಳಲ್ಲಿಯೂ ಜಡ ರೂಪಗಳಲ್ಲಿಯೂ ಕಾಣಿಸಿಕೊಳುತ್ತಾನೆ ಎಂದು ವಾದಿಸುತ್ತಾರೆ. ಈ ರೂಪಗಳಲ್ಲಿ ಯಾವುದರ ಮೂಲಕವೇ ಆದರೂ ನಾವು ಅವನೊಡನೆ ಸಂಪರ್ಕ ಬೆಳೆಸಬಹುದು. ಆದರೆ ಇದು ಗೊತ್ತುಗುರಿಯಿಲ್ಲದ ಆಯ್ಕೆ ಆಗಬಾರದು. ಮನುಷ್ಯನಿಗೆ ಅತ್ಯಂತ ಸಮೀಪವಾದ ರೂಪವೇ ವಿವೇಚನೆಯಿಂದ ಕೂಡಿದ ಆಯ್ಕೆ. ಮಾನವನ ಮೂಲಕವೇ ಭಗವಂತನು ಮಾನವನಿಗೆ ಅತ್ಯಂತ ಸಮೀಪನಾಗುವುದು. ಆದುದರಿಂದ ಮನುಷ್ಯನನ್ನೇ ಅರಿಸಿಕೊಳ್ಳುವುದು. ಇದನ್ನು ಸ್ಪಷ್ಟಪಡಿಸಲು ಒಬ್ಬ

* ಅದೇ.

ಹೆಂಗಸಿನ ನಿದರ್ಶನವನ್ನು ತೆಗೆದುಕೊಳ್ಳುತ್ತಾರೆ. ಅವರು ಹೇಳುತ್ತಾರೆ, ಆಕೆಗೆ ವಿವಿಧ ವ್ಯಕ್ತಿಗಳೊಡನೆ ವಿವಿಧ ರೀತಿಯ ಬಾಂಧವ್ಯ. ಒಬ್ಬರಿಗೆ ಅವಳು ಮಗಳು, ಮತ್ತೊಬ್ಬರಿಗೆ ಸೋದರಿ, ಮೂರನೆಯವರಿಗೆ ಗೆಳತಿ, ಆದರೆ ಅವಳ ಮಗು ಅವಳನ್ನು ಅತ್ಯಂತ ಆಪ್ತವಾಗಿ ತಿಳಿಯುವುದು ತಾಯಿಯಾಗಿ. ಹಾಗೆಯೇ ಭಗವಂತನು ಪಲವು ರೂಪಗಳಲ್ಲಿ ಪ್ರಕಟವಾಗಬಹುದು, ಆದರೆ ಅವನು ಮನುಷ್ಯನಿಗೆ ಅತ್ಯಂತ ಸಮೀಪವಾಗುವುದು ಮನುಷ್ಯನಾಗಿ. ಠಾಕೂರರ ಮಾತು ಗಳಲ್ಲಿ ಹೇಳುವುದಾದರೆ,

"ತಾಯಿಗೆ ಜಗತ್ತಿನೊಡನೆ ಇರುವ ಹಲವಾರು ಬಾಂಧವ್ಯಗಳು ಮಗುವಿಗೆ ತಿಳಿಯವು. ಅವುಗಳಿಂದ ಮಗುವಿಗೆ ಪ್ರಯೋಜನವೂ ಇಲ್ಲ. ತಾಯಿ ಮಗುವಿ ನೊಡನೆ ಅತ್ಯಂತ ಆಪ್ತವಾದ ಮತ್ತು ನೇರವಾದ ಸಂಪರ್ಕ ಸಾಧಿಸುವುದು ತಾಯಿಯಾಗಿ. ಹಾಗೆಯೇ ಭಗವಂತನು ಮನುಷ್ಯನಿಗೆ ಅತ್ಯಂತ ನಿಜವಾದ ಮತ್ತು ನಿಕಟವಾದ ರೀತಿಯಲ್ಲಿ ಪ್ರತ್ಯಕ್ಷವಾಗುವುದು ಮಾನವ ಕುಲದಲ್ಲಿ. ಈ ಬಾಂಧವ್ಯ ದಿಂದಲೆ ನಾವು ಆತನನ್ನು ಅರಿಯುತ್ತೇವೆ, ಪ್ರೀತಿಸುತ್ತೇವೆ, ಸೇವಿಸುತ್ತೇವೆ."*

ಈ ವಿಚಾರಧಾರೆಯು ಅವರ ಕಾವ್ಯ ವಿಚಾರವನ್ನು ಅದರ ಪರಿಪಕ್ವ ರೂಪದಲ್ಲಿ ತೋರಿಸುತ್ತದೆ. ಆದುದರಿಂದ ಅವರ ಬಾಳಿನ ಘಟ್ಟದಲ್ಲಿ ಅವರು ರಚಿಸಿದ ಕವನಗಳಲ್ಲಿ ಹಲವು ಈ 'ಮಾನವನಲ್ಲಿ ದೇವ' ಭಾವನೆಯಿಂದ ಸ್ಫೂರ್ತಿ ಪಡೆದಿರುವುದನ್ನು ಕಾಣುತ್ತೇವೆ. ಅವರ ಉಪದೇಶ ಭಾಷಣಗಳಿಗೂ ಗಂಭೀರ ಪ್ರಬಂಧಗಳಿಗೂ ಇದೇ ವಸ್ತುವಾಯಿತು. 1930 ರಲ್ಲಿ ಆಕ್ಸ್‌ಫರ್ಡ್ ವಿಶ್ವ ವಿದ್ಯಾನಿಲಯವು ಹಿಬ್ಬರ್ಟ್ ಉಪನ್ಯಾಸಗಳನ್ನು ನೀಡುವಂತೆ ಆಹ್ವಾನಿಸಿದಾಗಲೂ ಇದೇ ಅವರ ವಸ್ತುವಾಯಿತು. ಆದ್ದರಿಂದಲೇ ಅವರು ಈ ಉಪನ್ಯಾಸಗಳನ್ನು ಅಳವಡಿಸಿದ ಪುಸ್ತಕಕ್ಕೆ 'ದ ರಿಲಿಜನ್ ಆಫ್ ಮ್ಯಾನ್' (ಮಾನವಧರ್ಮ) ಎಂದೇ ಹೆಸರಿತ್ತರು.

ಈ ಘಟ್ಟದಲ್ಲಿ ಅವರ ಹೃದಯದ ಕತ್ತಲ ಮನೆಯಲ್ಲಿ ಪೀಠಸ್ಥನಾದ ವೈಯಕ್ತಿಕ ಪರಮಾತ್ಮನಲ್ಲಿ ಅವರ ಮನಸ್ಸು ಆನಂದವನ್ನು ಕಾಣದಾಯಿತು. ಜನ ಸಾಮಾನ್ಯರ ಮೂಲಕ ಭಗವಂತನೊಡನೆ ಸಂಪರ್ಕ ಬೆಳೆಸಲು ಅದು ಬಯಸಿತು.

* ಅದೇ.

ಅವರ ದೃಷ್ಟಿಯಲ್ಲಿ ಸಾಮಾನ್ಯ ಮನುಷ್ಯರು ಯಃಕಶ್ಚಿತ್ ಜಂಗುಳಿಯ ಸದಸ್ಯರಾಗಿರಲಿಲ್ಲ. ಪರಮಾತ್ಮ ಸ್ವರೂಪಗಳಾಗಿದ್ದರು. ಈ ಭಾವನೆ ಅವರ ಒಂದು ಕವನಕ್ಕೆ ಸ್ಫೂರ್ತಿಯಾಗಿದೆ. ಅದರ ಮೊದಲನೆಯ ಪದ್ಯ ಇದು :

ಎಲ್ಲಿ ನೀನು ಜನ ಸಮೂಹದೊಂದಿಗೆ ಒಂದಾಗಿರುವೆಯೋ
ಅಲ್ಲಿ ನಿನ್ನೊಡನೆ ಸಮಾಗಮವನ್ನು ಅರಸುತ್ತೇನೆ.
ಕಾಡಿನಲ್ಲಿ ಅಲ್ಲ, ಏಕಾಂತದಲಲ್ಲ
ನನ್ನ ಮನದೊಳಗೆ ಕೂಡ ಇಲ್ಲ.
ಆದರೆ ಎಲ್ಲಿ ನೀನು ಎಲ್ಲರ ಹೃದಯದ ಮಣಿಯೋ
ಅಲ್ಲೆ ನೀನು ನನ್ನ ಹೃದಯದ ಮಣಿ.*

ದೈವಭಕ್ತರಿಗೆ, ಭಗವಂತನನ್ನು ದೇವಾಲಯಗಳಲ್ಲಿ ಅರಸಿ ಅಲ್ಲಿ ಪುಷ್ಪಗಳನ್ನು ಅರ್ಪಿಸಿ ಧೂಪ ಹೊತ್ತಿಸುವುದರಿಂದ ಫಲವಿಲ್ಲ, ಭಗವಂತನನ್ನು ಜನಸಾಮಾನ್ಯರಲ್ಲಿ ಕಾಣಬೇಕು ಎಂದು ಅವರು ತಿಳಿಯಹೇಳುವುದೂ ಇದೇ ಪ್ರೇರಣೆಯಿಂದ. ಅವರು ಹೇಳುತ್ತಾರ :

"ನಿನ್ನ ಧ್ಯಾನ ನಿಲ್ಲಿಸಿ ಹೊರಕ್ಕೆ ಬಾ, ಈ ಹೂವು ಧೂಪ ಬಿಡು. ನಿನ್ನ ಬಟ್ಟೆಗಳು ಹರಿದು ಹೋದರೆ, ಮಲಿನವಾದರೆ ನಷ್ಟವೇನು. ಅವನನ್ನು ಕಂಡು, ಶ್ರಮದಲ್ಲಿ. ಬೆವರು ಸುರಿಸುತ್ತ ಅವನೊಡನೆ ನಿಲ್ಲು."**

ಭಕ್ತನು ಭಗವಂತನನ್ನು ಶ್ರಮದಲ್ಲಿ ಬೆವರು ಸುರಿಸುತ್ತ ಕಾಣಬೇಕೆಂಬುದಕ್ಕೆ ವಿಶೇಷ ಮಹತ್ವವಿದ್ದಂತೆ ಕಾಣುತ್ತದೆ. ಠಾಕೂರರ ಮಾನವತಾದವಾದವನ್ನು ವಿವರಿಸುತ್ತ ನಾವು, ಈ ಕಲ್ಪನೆಗಳಿಗನುಗುಣವಾಗಿ, ನಮಗೆ ಅತ್ಯಂತ ಸಮೀಪವಾದ ಪರಮಾತ್ಮ ಸ್ವರೂಪನು ಮಾನವನಾದುದರಿಂದ ಒಟ್ಟು ಮನುಕುಲ ಪ್ರೀತಿ, ಸೇವೆಗಳಿಗೆ ಪಾತ್ರವಾಗಬೇಕೆಂದು ಹೇಳಿದೆವು. ಇತರರಷ್ಟು ಸುಖಸೌಲಭ್ಯಗಳನ್ನು ಕಾಣದವರಲ್ಲಿ ಭಗವಂತನು ವಿಶೇಷವಾಗಿ ಪ್ರಕಟವಾಗುತ್ತಾನೆ ಎಂಬ ಅಭಿಪ್ರಾಯ ತಾಳುವಂತೆ ಈ ವಿಚಾರಧಾರೆ ಸ್ವಲ್ಪ ಮಟ್ಟಿಗೆ ಮಾರ್ಪಾಟಾದಂತೆ ಕಾಣುತ್ತದೆ.

---

* 'ಗೀತಾಂಜಲಿ'

** ಅದೇ (ಇಂಗ್ಲೀಷ್ ಆವೃತ್ತಿ)

ರಸ್ತೆ ಮಾಡುವುದರಲ್ಲಿ ನಿರತನಾದ ಕಾರ್ಮಿಕ, ಬೆಳೆಯನ್ನು ಬೆಳೆಯುವ ರೈತ, ಒಟ್ಟಿನಲ್ಲಿ ತಮ್ಮ ಬೆವರನ್ನು ಸುರಿಸಿ ಜೀವನ ನಿರ್ವಹಿಸುವ ಮತ್ತು ಸಮಾಜದ ಅತ್ಯಂತ ಕೆಳಗಿನ ಸ್ತರಕ್ಕೆ ಸೇರಿದ ಜನ ಹೆಚ್ಚು ಮಹತ್ವಪೂರ್ಣವಾದ ರೀತಿಯಲ್ಲಿ ಭಗವಂತನ ಪ್ರತಿನಿಧಿಗಳಾಗುತ್ತಾರೆ. ಪ್ರಾಯಶಃ ಯೇಸು ಕ್ರಿಸ್ತ ಹೇಳಿದನೆನ್ನುವ ಮಾತುಗಳನ್ನು ಇದು ಪ್ರತಿನಿಧಿಸುತ್ತದೆ : "ಬಡವರು ಧನ್ಯರು, ಏಕೆಂದರೆ ಬರಲಿರುವ ರಾಜ್ಯವು ಅವರದು." ಈ ವಿಚಾರ ಪ್ರೇರಿತವಾಗಿರುವುದು. ಇಂತಹ ಜನಕ್ಕೆ ನಮ್ಮ ಪ್ರೀತಿ, ಲಕ್ಷ್ಯಗಳ ಅಗತ್ಯವಿದೆ, ಅವರ ಸೇವೆಯಿಂದಾಗಿ ಅತ್ಯುತ್ತಮ ಪ್ರತಿಫಲ ದೊರಕುವುದು ಎಂಬ ಅರಿವಿನಿಂದ.

ಈ ವಿಚಾರದ ಮಾದರಿ ನಿದರ್ಶನವಾಗಿ ಮತ್ತೊಂದು ಕವನವನ್ನು ನೋಡಬಹುದು. ಅದೃಷ್ಟ ಒಲಿದಿರುವ ವರ್ಷಗಳಲ್ಲಿ ಪರಮಾತ್ಮನನ್ನು ಅರಸಬಾರದು, ಬಡಬಗ್ಗರ ನಡುವೆ ಹುಡುಕಬೇಕು ಎನ್ನುತ್ತಾರೆ :

ಅವನಿರುವುದು ಗಟ್ಟಿಯಾದ ನೆಲವನ್ನು ಬೇಸಾಯಗಾರ ಉಳುತ್ತಿರುವೆಡೆ
ರಸ್ತೆ ಮಾಡುವವನು ಕಲ್ಲನ್ನೊಡೆಯುತ್ತಿರುವಲ್ಲಿ
ಅವನು ಅವರೊಡನೆ ಬಿಸಿಲಲ್ಲಿ ಮಳೆಯಲ್ಲಿ ಇರುವನು
ಅವನ ಉಡುಪು ಧೂಳಿನಿಂದ ತುಂಬಿ ಹೋಗಿದೆ.
ನಿನ್ನ ಮಡಿಯನ್ನು ತೆಗೆದಿಟ್ಟು, ಅವನಂತೆ ನೀನೂ
ಧೂಳು ತುಂಬಿದ ಈ ತಾಣಕ್ಕೆ ಬಾ.*

ಈ ದೃಷ್ಟಿಯಲ್ಲಿ, ಒಟ್ಟಿನಲ್ಲಿ ಮನುಕುಲದ, ವಿಶೇಷವಾಗಿ ಬಡಬಗ್ಗರ ಕಲ್ಯಾಣವನ್ನು ಸಾಧಿಸುವ ನಿರಪೇಕ್ಷ ಕರ್ಮದ ಧಾರ್ಮಿಕ ಹಂಬಲವನ್ನು ತೃಪ್ತಿಗೊಳಿಸುವ ಅತ್ಯುತ್ತಮ ಮಾರ್ಗವಾಗುತ್ತವೆ. ವಿಧಿವತ್ತಾದ ಆಚರಣೆಗಳು ಮತ್ತು ಪ್ರಾರ್ಥನೆಯ ಸ್ಥಾನವನ್ನು ಕಲ್ಯಾಣಕಾರಕ ಕೆಲಸಕಾರ್ಯಗಳು ಪಡೆಯುತ್ತವೆ. ಇಂತಹ ಕೆಲಸವನ್ನು ಅರಸಲು, ಠಾಕೂರರು ಸರಳವಾದ, ಬಳಸಲು ಸಾಧ್ಯವಾದ ಓರೆಗಲ್ಲನ್ನು ರೂಪಿಸುತ್ತಾರೆ. ಮನು ಕುಲದ ಕಲ್ಯಾಣವನ್ನು ಯಾವುದು ಸಾಧಿಸಬಹುದೋ ಅದು ಈ ಉದ್ದೇಶಕ್ಕೆ ಯೋಗ್ಯವಾದದ್ದು. ಸಣ್ಣ ಪರಿಣಾಮವನ್ನಷ್ಟೆ ಮಾಡಲಿಲ್ಲ.

---

* 'ಗೀತಾಂಜಲಿ' (ಇಂಗ್ಲೀಷ್ ಆವೃತ್ತಿ)

ಪುಟ್ಟ ಕೆಲಸವೇ ಆಗಿರಬಹುದು. ಲೋಕ ಹಿತಕ್ಕೆ ಅದು ಪೋಷಕವಾಗಿರಬೇಕೆಂಬುದಷ್ಟೇ ಒರೆಗಲ್ಲು. ಆದುದರಿಂದ ಭಗವಂತನ ಭಕ್ತನು ಲೋಕಹಿತ ಸೇವಕನಾಗಬೇಕು. ಈ ಶಬ್ದವನ್ನು ಅವರೇ ಹೀಗೆ ವಿವರಿಸಿದ್ದಾರೆ :

"ಅವನೊಡನೆ (ಪರಮಾತ್ಮನೊಡನೆ) ಒಂದಾಗಬೇಕಾದರೆ ನಾವು ಕರ್ಮವನ್ನು ಸ್ವಾರ್ಥದಿಂದ ಬೇರ್ಪಡಿಸಬೇಕು. ಎಂದರೆ, ಅಸಂಖ್ಯಾತ ವ್ಯಕ್ತಿಗಳಿಗಾಗಿ ಎಂದು ಅರ್ಥವಲ್ಲ. ಎಲ್ಲ ಕೆಲಸವೂ, ಪ್ರಮಾಣದಲ್ಲಿ ಎಷ್ಟೇ ಸಣ್ಣದಾಗಿರಲಿ, ಸರ್ವಜನ ವ್ಯಾಪ್ತಿಯಾಗಿರಬೇಕು. ಇಂತಹ ಕೆಲಸದಿಂದಲೇ ಎಲ್ಲರಿಗಾಗಿ ಶ್ರಮಿಸುವ ವಿಶ್ವ ಕರ್ಮನಾಗಬಹುದು."*

ಧಾರ್ಮಿಕ ಅನುಭವದ ಸೂಕ್ತ ಅಭಿವ್ಯಕ್ತಿಗಾಗಿ ಒಂದೇ ಸಮನೆ ಅರಸಿದ ಠಾಕೂರರಿಗೆ ಹೀಗೆ ಅವರದೇ ವಿಶಿಷ್ಟ ಸ್ವರೂಪದ ಮಾನವತಾವಾದವು ಪ್ರತಿಫಲವಾಗಿ ದಕ್ಕಿತು. ಈ ಮಾನವತಾವಾದದಲ್ಲಿ, ಮನುಷ್ಯನು ಪ್ರೀತಿ, ಸೇವೆಗಳನ್ನು ಪಡೆಯುವುದು ಅವು ಮನುಷ್ಯನೆಂದೇ ಅವನಿಗೇ ಸಲ್ಲಬೇಕಾದವು ಎಂದಲ್ಲ, ಮಾನವನಿಗೆ ಅತ್ಯಂತ ಆಪ್ತನಾಗಿ ಭಗವಂತ ತಳೆಯುವ ಸ್ವರೂಪ ಅವನು ಎಂದು. ಇದು ಭಾರತೀಯ ಪರಂಪರೆಗೆ ಅನುಗುಣವಾಗಿಯೇ ಇದೆ. ಪ್ರಾಚೀನ ಕಾಲದಲ್ಲಿ ಭಕ್ತಿಗೆ ನೇರವಾಗಿ ಸಂಬಂಧಿಸಿದ ಪರಿಕಲ್ಪನೆಯಾಗಿ ಮಾನವತಾವಾದವು ಬೆಳೆಯದಿದ್ದರೂ ಅದನ್ನು ಬೀಜ ರೂಪದಲ್ಲಿ ಪ್ರಾಚೀನ ಸಾಹಿತ್ಯದಲ್ಲೂ ಆಚರಣೆಯಲ್ಲೂ ಕಾಣಬಹುದು. ಉದಾಹರಣೆಗಾಗಿ ನಾವು 'ಯಜುರ್‌ವೇದ ಸಂಹಿತ'ದ 'ಈಶಾವಾಸೋಪನಿಷತ್ತಿ'ನ ಮೊದಲನೆಯ ಶ್ಲೋಕವನ್ನು ಗಮನಿಸಬಹುದು. ವಿಶ್ವದಲ್ಲಿ ನಾವು ಕಾಣುವುದೆಲ್ಲ ಈಶ್ವರನಿಂದ ಆವೃತವಾಗಿದೆ. ಆದ್ದರಿಂದ ನಾವು ಜೀವನವನ್ನು ನಿರಾತಂಕವಾಗಿ ಸವಿಯಬೇಕು ಎಂದು ಅದು ಹೇಳುತ್ತದೆ. ಎಂದರೆ, ನಾವು ಇತರ ಮಾನವರ ಹಿತಕ್ಕೆ ಧಕ್ಕೆಯುಂಟಾಗದಂತೆ ನಮ್ಮ ನಡತೆಯನ್ನು ನಿಯಂತ್ರಿಸಬೇಕು ಎಂದು ಅರ್ಥ. ಎಲ್ಲ ಜೀವಿಗಳೂ ಸರ್ವಾಂತರ್ಯಾಮಿಯಾದ ಒಂದು ಚೇತನದ ಅಂಶಗಳು ಎಂಬ ಕಾರಣದಿಂದ ಅದು ಪರಹಿತ ಕಾರ್ಯಗಳನ್ನು ಪ್ರೋತ್ಸಾಹಿಸುತ್ತದೆ. ಮನುಷ್ಯರು ದೈವತ್ವದ ಪ್ರತಿಬಿಂಬ ಎನ್ನುವ ಸತ್ಯವನ್ನು ಗುರುತಿಸುವುದೇ ಈ ಆಚರಣೆಗೆ ಪ್ರೇರಣೆ.

---

* "ರಿಲಿಜನ್ ಆಫ್ ಮ್ಯಾನ್", ಸ್ಪಿರಿಚುಯಲ್ ಯೂನಿಯನ್.

ಈ ವಿಚಾರಧಾರೆ ಮುಂದಿನ ಭಾರತೀಯ ಸಾಹಿತ್ಯದಲ್ಲೂ ಹರಿದು ಬರುವುದ ರಲ್ಲಿ ಗುರುತಿಸಬಹುದು. ಉದಾಹರಣೆಗೆ, 'ಮನು ಸಂಹಿತ'ವು ಗೃಹಸ್ಥನಿಗೆ ನಾಲ್ಕು ಬಗೆಯ ಯಜ್ಞಗಳನ್ನು ವಿಧಿಸುತ್ತದೆ. ಅವುಗಳಲ್ಲಿ ಒಂದು 'ನೃಯಜ್ಞ', ಎಂದರೆ ಮಾನವಸೇವೆ. ಮಧ್ಯಯುಗದ ಜನಪ್ರಿಯ ಸಾಹಿತ್ಯದಲ್ಲಿಯೂ ಇದೇ ರೀತಿಯ ಭಾವನೆಗಳನ್ನು ಗುರುತಿಸಬಹುದು. ಉದಾಹರಣೆಗೆ, ನಾರಾಯಣ ಪಂಡಿತನ 'ಹಿತೋಪದೇಶ'ದ ಒಂದು ದ್ವಿಪದಿ ಹೀಗಿದೆ :

"ಓ ಕುಂತೀಪುತ್ರ, ಬಡವರ ಸೇವೆ ಮಾಡು,
ದೇವರಿಗೆ ಧನ ಅರ್ಪಿಸಬೇಡ.
ಔಷಧ ಕೊಡುವುದು ರೋಗಿಗೆ.
ಆರೋಗ್ಯವಂತನಿಗೆ ಅದರಿಂದ ಫಲವೇನು ?

ಧಾರ್ಮಿಕ ಗ್ರಂಥಗಳ ಪರಿಚಯವಿಲ್ಲದ ಜನಸಾಮಾನ್ಯರಲ್ಲಿಯೂ ಮಾನವತಾ ವಾದದ ಉಸಿರಿರುವ ವಿಚಾರಗಳು ಪ್ರಚಲಿತವಾಗಿರುತ್ತವೆ. 'ನರ ನಾರಾಯಣ', 'ದರಿದ್ರ ನಾರಾಯಣ' ಇಂತಹ ಮಾತುಗಳು ಜನರಿಗೆ ಪರಿಚಿತವಾದವು.

ಪರಮಾತ್ಮನ ಸೇವೆಗೆ ಅತ್ಯುತ್ತಮ ಮಾರ್ಗ, ಮಾನವಸೇವೆ. ಅದರಲ್ಲಿಯೂ ಸಾಕಷ್ಟು ಸೌಲಭ್ಯಗಳಿಲ್ಲದವರ ಸೇವೆ ಎಂಬ ಭಾವನೆಯೇ ಈ ವಿಚಾರಗಳಿಗೆ ಪ್ರೇರಣೆ. ಇಲ್ಲಿ ಮಾನವತಾವಾದ ಧರ್ಮದ ಆಧಾರದ ಮೇಲೆ ನಿಂತಿದೆ.

ಇದರೆ, ಪಾಶ್ಚಾತ್ಯ ಮಾನವತಾವಾದವು ಧರ್ಮದೊಡನೆ ಯಾವ ಸಂಬಂಧ ವನ್ನೂ ಉಳಿಸಿಕೊಂಡಿಲ್ಲ. ಸ್ಪಷ್ಟವಾಗಿ ಅದು ಧರ್ಮ ಮತ್ತು ತತ್ವಜ್ಞಾನಗಳ ಮೇಲೆ ವಿಜ್ಞಾನ ಬೀರಿದ ಪ್ರಭಾವದಿಂದ ಹುಟ್ಟಿದ್ದು. ಇದರ ಮಾದರಿ ನಿದರ್ಶನ ಎಂದರೆ ಕಾಂಟ್‌ನ ಲೋಕಸಿದ್ಧವಾದ (Positivism). ಪರಮವಾಸ್ತವಿಕತೆ (ultimate reality) ಯ ಸ್ವರೂಪದ ಬಗೆಗೆ ಧರ್ಮದಿಂದಲೂ ತಾತ್ವಿಕ ಚಿಂತನದಿಂದಲಾಗಲಿ ಏನಾದರೂ ತಿಳಿವಳಿಕೆ ಲಭ್ಯವಾಗಬಹುದೆಂಬ ನಿರೀಕ್ಷಣೆಯನ್ನು ಕಳೆದುಕೊಂಡು ಆತ, ವಿಜ್ಞಾನದ ಮೂಲಕ ಜಗತ್ತಿನ ಘಟನೆಗಳಿಗೆ (Phenomena) ನಿಸರ್ಗದ ನಿಯಮಗಳೊಂದಿಗೆ ಸಂಬಂಧ ಕಲ್ಪಿಸಿ, ಜ್ಞಾನಾ ನ್ವೇಷಣೆಯನ್ನು ಆ ಘಟನೆಗಳ ವಿವರಣೆಗೊಳಿಸಲು ಉದ್ದೇಶಿಸಿದ. ಆದ್ದರಿಂದ ಆತನ ಧರ್ಮದ ಸ್ಥಾನದಲ್ಲಿ ಹೊಸದೊಂದು ಸಾಮಾಜಿಕ – ಧಾರ್ಮಿಕ ದೃಷ್ಟಿ

ಯನ್ನು ಬೆಳೆಸಿದ. ಈ ದೃಷ್ಟಿಗನುಗುಣವಾಗಿ, ಪೂಜೆ ಸಲ್ಲಬೇಕಾದದ್ದು ಭಗವಂತನಿಗಲ್ಲ. ಒಟ್ಟು ಮಾನವನಿಗೆ, ಅದರಲ್ಲಿಯೂ ಮಹಾಪುರುಷರಿಗೆ. ಜೊತೆಗೆ, ಮಾನವನ ಕಲ್ಯಾಣವನ್ನು ಸಾಧಿಸುವ ಪರಹಿತ ಕಾರ್ಯಗಳನ್ನು ಮಾಡಬೇಕೆಂದು ವಿಧಿಸಿದ.

ಹೀಗೆ ಕಾಂಟ್‌ನ ಮಾನವತಾವಾದ ಹುಟ್ಟಿದ್ದು, ಧರ್ಮ ಮತ್ತು ತತ್ತ್ವಜ್ಞಾನ ಎರಡರಲ್ಲಿಯೂ ನಂಬಿಕೆ ಕಳೆದುಕೊಂಡ ಅಪನಂಬಿಕೆಯ ಮನಃಸ್ಥಿತಿಯಿಂದ. ಮನುಷ್ಯನೊಬ್ಬನೇ ಮೂರ್ತವಾದ ವಾಸ್ತವಿಕತೆ ಎಂದು ಆತನಿಗೆ ಕಂಡಿದ್ದರಿಂದ ಆತ ದೇವರ ಆರಾಧನೆಯ ಬದಲು ಮಾನವಪೂಜೆಯನ್ನು ಪ್ರತಿಪಾದಿಸಿದ. ಇದೇ ರೀತಿಯಲ್ಲಿ, ದೇವರ ಸೇವೆಯ ಬದಲು ಮಾನವ ಸೇವೆಯನ್ನು ಪ್ರತಿಪಾದಿಸಿದ. ಇದು ಧರ್ಮದಿಂದ ದೂರವಾಗಿಯೇ ಪ್ರಗತಿ ಹೊಂದಿತು.

ಇದಕ್ಕೆ ಪ್ರತಿಯಾಗಿ ಮಾನವತಾವಾದವನ್ನು ಕುರಿತು ಭಾರತದಲ್ಲಿ ವಿಚಾರ ಧಾರೆಯನ್ನು ಬೇರೊಂದು ದಿಕ್ಕಿನಲ್ಲಿ ಹರಿಸಿದರು. ಮೊದಲನೆಯದಾಗಿ, ಅದು ಅಪನಂಬಿಕೆಯಿಂದ ಉದ್ಭವವಾದದ್ದಲ್ಲ. ಪರಮವಾಸ್ತವಿಕತೆಯಲ್ಲಿನ ವಿಶ್ವಾಸವನ್ನು - ಅದು ನಿಸರ್ಗ ಐಕ್ಯತಾವಾದಕ್ಕನುಗುಣವಾದದ್ದೇ ಆಗಲಿ ದೈವತ್ವವಾದಕ್ಕನುಗುಣವಾದದ್ದೇ ಆಗಲಿ – ತಿರಿಸ್ಕರಿಸಲು ಅದಕ್ಕೆ ಕಾರಣ ಕಾಣಿಸಲಿಲ್ಲ. ಅದು ತನ್ನ ಮಾನವತಾವಾದಕ್ಕೆ ದೇವರಲ್ಲಿನ ಸಂಬಿಕೆಯನ್ನೇ ಆಧಾರ ಮಾಡುತ್ತದೆ, ಮತ್ತು ಭಗವಂತನಿಗೆ ಮನುಷ್ಯನೊಂದಿಗೆ ಏಕತ್ವವನ್ನು ಕಲ್ಪಿಸಿ ಮಾನವ ಸೇವೆಯನ್ನು ಸಮರ್ಥಿಸುತ್ತದೆ. ಅದರ ಆಧಾರ ಧರ್ಮವೇ. ಧರ್ಮದೊಡನೆ ಅದಕ್ಕೆ ನೇರ ಸಂಬಂಧ.

ಠಾಕೂರರ ಮಾನವತಾವಾದವು ಈ ಪರಂಪರೆಯನ್ನು ಉಳಿಸಿಕೊಳ್ಳುತ್ತದೆ. ಅದು ಭಗವಂತನಲ್ಲಿ ಜೀವಂತ ಭಕ್ತಿಯಿಂದ ಮೂಡಿದ್ದು ಮತ್ತು ಧರ್ಮದಿಂದ ಸ್ಫೂರ್ತಿ ಪಡೆಯುತ್ತದೆ. ಈ ಅಂಶದಿಂದಾಗಿ ಅವರ ಮಾನವತಾವಾದವು ಪಾಶ್ಚಾತ್ಯ ರೀತಿಯ ಮಾನವತಾವಾದಕ್ಕಿಂತ ಪರಿಣಾಮಕಾರಿಯಾಗುತ್ತದೆ. ಭಗವಂತನನ್ನು ಸೇವಿಸಬೇಕೆಂಬ ಹಂಬಲ ಪ್ರಬಲವಾದದ್ದು, ಸರ್ವಜನ ವ್ಯಾಪಿಯಾದದ್ದು. ಆದ್ದರಿಂದ, ಭಕ್ತಿಯನ್ನು ಮಾನವತಾವಾದದೊಂದಿಗೆ ಬೆಸೆಯುವುದರ ಮೂಲಕ ಅದು ಪಾಶ್ಚಾತ್ಯ ಮಾನವತಾವಾದಕ್ಕಿಂತ ಪ್ರಬಲವಾದ ಸ್ಫೂರ್ತಿಯನ್ನು ನೀಡುತ್ತದೆ. ಅದು ಭಕ್ತಿಯನ್ನು ತನ್ನ ಉದ್ದೇಶಕ್ಕೆ ಹೂಡುತ್ತದೆ.

ಅಧ್ಯಾಯ ೧೦

ವಿಶ್ವಮಾನ್ಯ ವ್ಯಕ್ತಿ

ಚಿಕ್ಕಂದಿನಲ್ಲಿ ಠಾಕೂರರು ಭಾರತದ ಧ್ವನಿ ಹೊರ ಜಗತ್ತಿಗೆ ಕೇಳಿಸುತ್ತಲೇ ಇಲ್ಲ ಎಂದು ವಿಷಾದಪಡುತ್ತಿದ್ದರು. ಇದಕ್ಕೆ ತೀರ ವ್ಯತಿರಿಕ್ತವಾಗಿ, ಭಾರತದ ವೈಭವದ ಪ್ರಾಚೀನ ದಿನಗಳಲ್ಲಿ ಈ ದೇಶದ ಮಕ್ಕಳು ತಾವು ಪರಮ ಸತ್ಯದ ಜ್ಞಾನವನ್ನು ಸಾಧಿಸಿದ್ದೇವೆಂದು ಘೋಷಿಸಲು ಹೆಮ್ಮೆಪಡುತ್ತಿದ್ದರು. ಜಗತ್ತಿನ ಸಾಂಸ್ಕೃತಿಕ ಭೂಪಠದಲ್ಲಿ ಭಾರತಕ್ಕೆ ಸ್ಥಾನವೇ ಇರಲಿಲ್ಲ. ಇದನ್ನು ಸಾಧಿಸುವ ಬೇರೆ ಮಾರ್ಗವನ್ನು ಕಾಣದೆ ಈ ಪಾತ್ರಕ್ಕೆ ಸಿದ್ಧರಾಗುವ ಕಾರ್ಯವನ್ನು ವಹಿಸಿ ಕೊಂಡರು. ಭಾರತದ ಸಾಂಸ್ಕೃತಿಕ ರಾಯಭಾರಿಯಾಗಲು ಅದೃಷ್ಟ ತಮ್ಮನ್ನು ಆರಿಸಿದೆ ಎಂದು ಪ್ರಾಯಶಃ ಅವರು ಅರ್ಥಮಾಡಿಕೊಂಡರು.

ಉದ್ದಕ್ಕೂ ಅವರು ಭಾರತದ ಒಂದು ಮೂಲೆಯಲ್ಲಿ ತಮ್ಮ ಸಹಜ ಸಾಮರ್ಥ್ಯಗಳನ್ನು ಪೋಷಿಸಿಕೊಂಡು ಬಂದಿದ್ದರು ಮತ್ತು ತಮ್ಮ ರಾಷ್ಟ್ರಪ್ರೇಮದ ಚೇತನದಿಂದ ಸ್ಫೂರ್ತಿ ಪಡೆದು, ಮಾತೃಭಾಷೆಯಾದ ಬಂಗಾಳಿಯಲ್ಲಿ ತಮ್ಮ ವಿಚಾರಗಳಿಗೆ ಅಭಿವ್ಯಕ್ತಿ ನೀಡಿದ್ದರು. ಪೂರ್ವ ಭಾರತದಲ್ಲಿ ಸಾಕಷ್ಟು ದೊಡ್ಡ ದಾದ ಜನ ಸಮುದಾಯ ಈ ಭಾಷೆಯನ್ನು ಬಳಸುತ್ತಿದ್ದರೂ ಅದು ಇನ್ನೂ ಸಾಕಷ್ಟು ತನ್ನ ಸಾಹಿತ್ಯವನ್ನು ಬೆಳೆಸಿಕೊಂಡಿರಲಿಲ್ಲ. ಈಶ್ವರಚಂದ್ರ ವಿದ್ಯಾಸಾಗರ

ಮತ್ತು ಬಂಕಿಮಚಂದ್ರ ಚಟರ್ಜಿಯವರಂತಹ ಹಿರಿಯರು ಆಗತಾನೆ ಅದಕ್ಕೆ ಮಾರ್ಗಸೂಚನೆ ಮಾಡಿದ್ದರು. ಹೀಗೆ ಮಾಡುವಾಗಲೇ ಅವರು ಅಮಿತವಾಗಿ ಬಂಗಾಳಿ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದರು. ಇಷ್ಟಾದರೂ ಇದು ಭಾರತದ ಒಂದು ಮೂಲೆಯ ಭಾಷೆಯಷ್ಟೇ ಆಗಿತ್ತು. ಭಾರತದ ಹೊರಗಿನ ಜನರ ಕಣ್ಣನ್ನು ಸೆಳೆಯಲು ಶಕ್ತವಾಗಿರಲಿಲ್ಲ. ಬಂಗಾಳದೊಳಗೆ ಠಾಕೂರರು ಅಸಮಾನ ಸಾಹಿತಿ ಎಂದು ಖ್ಯಾತಿ ಗಳಿಸಿದ್ದುದು ನಿಜ. ಆದರೂ ಹೊರ ಜಗತ್ತಿನ ಜನಕ್ಕೆ ಅವರ ವಿಷಯ ತಿಳಿದಿರಲಿಲ್ಲ.

ವಾಸ್ತವವಾಗಿ, 1910 ರಲ್ಲಿ 'ಗೀತಾಂಜಲಿ' ಯು ಪ್ರಕಟವಾಗುವವರೆಗೆ, ಠಾಕೂರರ ಪೂರ್ವಿಕರ ಮನೆಯ ಕಾಂಪೌಂಡಿನಲ್ಲೆ ವಾಸವಾಗಿದ್ದ ರವೀಂದ್ರರ ಸೋದರಳಿಯ ಅವನೀಂದ್ರನಾಥರು ಅವರಿಗಿಂತ ಹೆಚ್ಚಾಗಿ ಹೊರಗಿನ ಜಗತ್ತಿಗೆ ಪರಿಚಿತರಾಗಿದ್ದರು. ಕಲೆಯಲ್ಲಿ ಹೊಸದೊಂದು ಪಂಥವನ್ನು ಪ್ರಾರಂಭಿಸಿದವ ರೆಂದು ಈ ಸೋದರಳಿಯ ಖ್ಯಾತಿಗಳಿಸಿದ್ದರು. ಹೊರಗಿನ ಪ್ರಪಂಚಕ್ಕೆ ಅವರ ಕೀರ್ತಿ ಹಬ್ಬಿದಂತೆ ಪ್ರಸಿದ್ಧ ಕಲಾವಿದರು ಕಲೆಯನ್ನು ಕುರಿತು ಚರ್ಚಿಸಲು ಅವರ ಮನೆಗೆ ಬರುತ್ತಿದ್ದರು. ಅವರಲ್ಲಿ ಜಪಾನೀ ಚಿತ್ರಕಾರರಾದ ಟೈಕ್ಕನ್ ಮತ್ತು ಒಕಾಕುರ ಇದ್ದರು. ವಿಖ್ಯಾತ ಕಲಾವಿದ, ಹ್ಯಾವೆಲ್ ಅವರು ಇವರ ಕಟ್ಟಾ ಅಭಿ ಮಾನಿಗಳಲ್ಲಿ ಒಬ್ಬರು. ಅವನೀಂದ್ರನಾಥರಿಗೆ ಪ್ರಸಿದ್ಧ ಬ್ರಿಟಿಷ್ ಚಿತ್ರಕಾರ ರಾತೆನ್ ಸ್ಟೀನರೊಡನೆ ಗೆಳೆತನವಾದದ್ದು ಅವರ ಕಲೆಯ ಮೂಲಕ. ಸೋದರಳಿಯನೊಂದಿಗೆ ಈ ಕಲಾವಿದರಿಗೆ ಇಷ್ಟು ನಿಕಟ ಸಂಪರ್ಕವಿದ್ದರೂ ಅವರಿಗೆ ಠಾಕೂರರ ವಿಷಯ ತಿಳಿದೇ ಇರಲಿಲ್ಲ ಎನ್ನಬೇಕು. ಹೀಗೆ ಜಗತ್ತಿನ ಕಣ್ಣುಗಳಿಗೆ ಬೀಳದೆ ಠಾಕೂರರು ದೀರ್ಘಕಾಲದ ಮತ್ತು ಶ್ರಮ ಕಾರ್ಯಸಿದ್ಧತೆಯ ಅವಧಿಯನ್ನು ಕಳೆದು ತಮ್ಮ ಸಾಮರ್ಥ್ಯದ ಶಿಖರವನ್ನು ಮುಟ್ಟಿದರು. ಅದೃಷ್ಟವು ಅವರಿಗಾಗಿ ನಿರ್ಧರಿಸಿದ್ದ ಪಾತ್ರವನ್ನು ವಹಿಸಲು ಈಗ ಎಲ್ಲ ರೀತಿಗಳಲ್ಲಿ ಅವರ ಸಿದ್ಧತೆ ಮುಗಿದಿತ್ತು. ಆದರೆ ಇದಕ್ಕೆ ಮುನ್ನ ಅವರು ಹೊರ ಜಗತ್ತಿನ ಜನತೆಗೆ ಪರಿಚಿತ ರಾಗುವುದು ಅಗತ್ಯವಾಗಿತ್ತು. ಅದೃಶ್ಯ ಶಕ್ತಿಯೊಂದು ಅವುಗಳ ಮೂಲಕ ತನ್ನ ಗುರಿಯನ್ನು ಸಾಧಿಸುತ್ತಿತ್ತೊ ಎನ್ನುವಂತೆ ಸನ್ನಿವೇಶಗಳು ವಿಚಿತ್ರ ರೀತಿಯಲ್ಲಿ ಹೆಣೆದುಕೊಂಡು ಅವರು ಜಗತ್ತಿಗೆ ಪರಿಚಿತರಾದರು.

ಅವರ ಪ್ರೀತಿಯ ಪತ್ನಿ ಮೃಣಾಲಿನಿ ದೇವಿಯವರು 1902 ರಲ್ಲಿ ತೀರಿ

ಕೊಂಡನಂತರ ಠಾಕೂರರಿಗೆ ಗೃಹ ಜೀವನದ ಸುಖ ಸೌಲಭ್ಯಗಳು ದೊರೆತದ್ದು ಬಹು ಸ್ವಲ್ಪ. ಅವಕ್ಕೆ ಪ್ರತಿಯಾಗಿ ಕುಟುಂಬದಲ್ಲಿ ಹಲವಾರು ಸಾವುಗಳೂ ದೇಶದಲ್ಲಿ ವ್ಯಾಪಕವಾದ ರಾಜಕೀಯ ಪ್ರಕ್ಷುಬ್ಧತೆಯೂ ಸೇರಿ ಅವರ ದೇಹಕ್ಕೆ ಬಹು ಮಟ್ಟಿನ ಆಯಾಸವಾಗಿತ್ತು. ಅವರನ್ನು ಸರಿಯಾಗಿ ನೋಡಿಕೊಳ್ಳುವವರೂ ಇಲ್ಲದೆ ಅವರ ಆರೋಗ್ಯವು ಕ್ರಮೇಣ ಎಷ್ಟರ ಮಟ್ಟಿಗೆ ಕೆಟ್ಟಿತೆಂದರೆ 1912 ರಲ್ಲಿ ದೇಹಸ್ಥಿತಿ ಕುಸಿದೇ ಬಿಡುತ್ತದೆ ಎನ್ನುವ ಘಟ್ಟವನ್ನು ಮುಟ್ಟಿತು. ಒಟ್ಟಿನಲ್ಲಿ ಅವರ ಆರೋಗ್ಯ ಸ್ಥಿತಿ ಕ್ಷೀಣಿಸಿದ್ದು ಮಾತ್ರವಲ್ಲದೆ, ಒಂದು ವ್ಯಾಧಿಗೂ ತುತ್ತಾದರು ಅವರ ವೈದ್ಯರು ಶಸ್ತ್ರ ಚಿಕಿತ್ಸೆಯಾಗಬೇಕೆಂದು ಸಲಹೆ ಕೊಡುವಂತಹ ವ್ಯಾಧಿ ಅದು. ಅವರ ಸಲಹೆಗೆ ಅನುಗುಣವಾಗಿ ಠಾಕೂರರು ಚಿಕಿತ್ಸೆಗಾಗಿ ಲಂಡನ್ನಿಗೆ ಹೋಗ ಬೇಕೆಂದು ತೀರ್ಮಾನವಾಯಿತು.

1912 ರ ಆದಿ ಭಾಗದಲ್ಲಿ ಅವರು ಕಲ್ಕತ್ತೆಯಿಂದ ನೇರವಾಗಿ ಲಂಡನ್ನಿಗೆ ಹೊರಡಬೇಕೆಂದು ತೀರ್ಮಾನವಾಯಿತು. ಅವರ ಮಗ ರತೀಂದ್ರನಾಥ ಮತ್ತು ಸೊಸೆ ಪ್ರತಿಮಾದೇವಿ ಅವರೊಂದಿಗೆ ಹೋಗಬೇಕೆಂದು ನಿರ್ಧಾರವಾಯಿತು. ಪ್ರಯಾಣಕ್ಕೆ ಟಿಕೆಟ್ ಕೊಂಡಾಯಿತು, ಹಡಗಿನಲ್ಲಿ ಕೋಣೆಗಳನ್ನು ಕಾದಿರಿಸಿದ್ದಾಯಿತು. ಹಡಗು ಚಂದ್ರಪಾಲ ಘಾಟಿಗೆ ಬಂದು ನಿಂತಿತು. ಪ್ರಯಾಣದ ಹಿಂದಿನ ದಿನ ಅವರ ಸಾಮಾನುಗಳನ್ನು ಹಡಗಿಗೆ ಕಳುಹಿಸಿದ್ದೂ ಆಯಿತು.

ಕಲ್ಕತ್ತ ಉಚ್ಚ ನ್ಯಾಯಾಲಯದ ಖ್ಯಾತ ನ್ಯಾಯಾಧೀಶ ಅಶುತೋಷ ಚೌಧುರಿಯವರು ಠಾಕೂರರ ಸೋದರ ಸೊಸೆಯನ್ನು ಮದುವೆಯಾಗಿದ್ದರು. ಠಾಕೂರರ ಪ್ರಯಾಣದ ಹಿಂದಿನ ದಿನ ಅವರನ್ನು ಬೀಳ್ಕೊಡಲು ಚೌಧುರಿಯವರ ಮನೆಯಲ್ಲಿ ಒಂದು ಸಮಾರಂಭ ಏರ್ಪಟ್ಟಿತ್ತು. ಸಮಾಜದ ಅತ್ಯಂತ ಪ್ರತಿಷ್ಠಿತರು ಅವರನ್ನು ಬಹು ವಿಶ್ವಾಸದಿಂದ ಬೀಳ್ಕೊಟ್ಟರು. ಸತ್ಕಾರ ಕೂಟ ಮುಗಿದು ಠಾಕೂರರು ಮನೆಗೆ ಬಂದಾಗ ರಾತ್ರಿ ಬಹಳ ವೇಳೆಯಾಗಿತ್ತು. ದುರದೃಷ್ಟದಿಂದ ಮರುದಿನ ಅವರು ತೀರ ಅಸ್ವಸ್ಥರಾದರು. ಆದುದರಿಂದ ಪ್ರಯಾಣವನ್ನು ರದ್ದು ಮಾಡಬೇಕಾಯಿತು, ಸಾಮಾನುಗಳನ್ನು ಹಿಂದಕ್ಕೆ ತರಬೇಕಾಯಿತು.

ಕೆಲವು ದಿನಗಳಲ್ಲಿ ಅವರಿಗೆ ಗುಣವಾಯಿತು. ಮತ್ತೆ ಹಡಗಿನಲ್ಲಿ ಸ್ಥಾನ ಕಾದಿಡುವುದು ಸಾಧ್ಯವಾಯಿತು. ಆದರೆ ಅದಕ್ಕೆ ಕಾಲಾವಕಾಶ ಅಗತ್ಯವಾಗಿತ್ತು. ಅಲ್ಲಿಯವರೆಗೆ ಅವರು ಇರುವುದೆಲ್ಲಿ ಎಂಬುದೇ ಪ್ರಶ್ನೆಯಾಯಿತು. ಶಾಂತಿ

ನಿಕೇತನಕ್ಕೆ ಹೋದರೆ ಅಲ್ಲಿನ ಶಾಲೆಯ ದಿನ ನಿತ್ಯದ ನಿರ್ವಹಣೆಯಲ್ಲಿ ಮತ್ತೆ ಅವರು ತೊಡಗುವರೆಂದು ಅವರು ಅಲ್ಲಿಗೆ ಹಿಂದಿರುಗುವ ಯೋಜನೆಯೇ ಕೂಡದೆಂದು ವೈದ್ಯರು ತೀರ್ಮಾನಿಸಿದರು. ಕಲ್ಕತ್ತದಲ್ಲಿ ಅವರ ಪೂರ್ವಿಕರ ಮನೆಯಲ್ಲಿ ಅಷ್ಟು ದೀರ್ಘಕಾಲ ಇರುವುದೂ ಅವರ ಸ್ವಭಾವಕ್ಕೆ ಸರಿಹೊಂದುತ್ತಿರಲಿಲ್ಲ. ಆದುದರಿಂದ, ಅವರ ಕೌಟುಂಬಿಕ ಜೀವನದ ಅತ್ಯಂತ ಸುಖಕರವಾದ ಕಾಲವನ್ನು ಕಳೆದಿದ್ದ ಷೆಲಿದಾದಲ್ಲಿ ಗ್ರಾಮೀಣ ಮನೆಯ ಪ್ರಶಾಂತ ಪರಿಸರದಲ್ಲಿ ಅವರು ಈ ದಿನಗಳನ್ನು ಕಳೆಯಬೇಕೆಂದು ನಿರ್ಧಾರವಾಯಿತು. ಅದು ಮನಸ್ಸಿಗೆ ಹಿತಕರವಾದ ಮತ್ತು ಆರೋಗ್ಯಕರವಾದ ಸ್ಥಳ ಎಂಬುದಷ್ಟೇ ಅಲ್ಲದೆ, ಠಾಕೂರರಿಗೆ ಒಂಟಿತನದಿಂದ ಸಂಪೂರ್ಣ ವಿಶ್ರಾಂತಿ ದೊರೆತೇ ದೊರೆಯುವುದೆಂಬ ಕಾರಣದಿಂದ ವೈದ್ಯರ ದೃಷ್ಟಿಯಿಂದಲೂ ಅದೇ ಆದರ್ಶ ಸ್ಥಳವಾಗಿತ್ತು.

ಹೀಗೆ ವಿರಾಮವಾಗಿರಲು ಠಾಕೂರರು ಷೆಲಿದಾಗೆ ಹೋದರು. ಅವರು ಸಾಹಿತ್ಯ ರಚನೆಯನ್ನು ಪ್ರಾರಂಭಿಸಿದರೆ ಆ ಶ್ರಮವನ್ನೂ ಅವರ ದೇಹಸ್ಥಿತಿ ತಡೆಯಲಾರದು, ಆದ್ದರಿಂದ ಆ ಪ್ರಯತ್ನವೂ ಬೇಡ ಎಂದು ವೈದ್ಯರು ಹೇಳಿದ್ದರು. ಈ ಸನ್ನಿವೇಶದಲ್ಲಿ ಗಂಭೀರವಾದ ಯಾವ ಕೆಲಸವನ್ನೂ ಮಾಡಲು ಅವರಿಗೆ ಅವಕಾಶವಿಲ್ಲದುದರಿಂದ ಕಾಲವನ್ನು ಕಳೆಯುವುದು ಹೇಗೆ ಎನ್ನುವುದು ಅವರ ಸಮಸ್ಯೆಯಾಯಿತು. ಸುದೈವದಿಂದ ಅವರಿಗೆ ತಮ್ಮ ಕವನಗಳನ್ನು ಇಂಗ್ಲೀಷ್‌ಗೆ ಅನುವಾದಿಸುವ ಯೋಚನೆ ಹೊಳೆಯಿತು. ಈ ಮೊದಲು 'ಮಾಡರ್ನ್ ರೆವ್ಯೂ' ಪತ್ರಿಕೆಯಲ್ಲಿ ಪ್ರಕಟವಾದ ಇಂತಹ ಅನುವಾದಗಳನ್ನು ಕುರಿತು ಜಗದೀಶಚಂದ್ರ ಬೋಸರೂ ಆನಂದ ಕುಮಾರಸ್ವಾಮಿಯವರೂ ಮೆಚ್ಚಿಗೆಯ ಮಾತುಗಳನ್ನು ಆಡಿದುದರಿಂದ ಅವರಿಗೆ ಉತ್ಸಾಹ ಬಂದಿತು.

ಹೀಗೆ ಆಕಸ್ಮಿಕವಾಗಿ ಸನ್ನಿವೇಶಗಳು ಬಂದುಗೂಡಿದುದರಿಂದ ಠಾಕೂರರು ತಮ್ಮ ಕೆಲವು ಕವನಗಳನ್ನು ಇಂಗ್ಲೀಷಿಗೆ ಅನುವಾದಿಸುವ ಕಾರ್ಯದಲ್ಲಿ ಮನಸ್ಸನ್ನು ತೊಡಗಿಸಿದರು. ಇದರಿಂದ ಸಾಹಿತ್ಯ ಪ್ರಪಂಚದಲ್ಲಿ ಬಹುವ್ಯಾಪಕವಾದ ಪರಿಣಾಮಗಳು ಉಂಟಾಗುವುವು ಎಂದಾಗಲಿ ಘಟನೆಗಳಿಂದ ತುಂಬಿದ್ದ ತಮ್ಮ ಸಾಹಿತ್ಯ ಪಯಣದಲ್ಲಿ ಒಂದು ತಿರುವು ಉಂಟಾಗುತ್ತದೆ ಎಂದಾಗಲಿ ಅವರು ನಿರೀಕ್ಷಿಸಿರಲಿಲ್ಲ. ಷೆಲಿದಾದ ಬಂಗಲೆಯ ಏಕಾಂತತೆಯಲ್ಲಿ ತಮ್ಮ ವಿವಿಧ ಕವನ ಸಂಗ್ರಹಗಳಿಂದ ಆಯ್ದ ಕೃತಿಗಳನ್ನು ಅವರು ಅನುವಾದಿಸಿದರು. ಅವುಗಳಲ್ಲಿ

103 ಕವನಗಳ ಅನುವಾದಗಳನ್ನು ಸೇರಿಸಿ ಸಂಗ್ರಹಕ್ಕೆ 'ಗೀತಾಂಜಲಿ' ಎಂದು ಹೆಸರು ಕೊಟ್ಟರು. ಇಂಗ್ಲೀಷಿನಲ್ಲಿ ಹೆಸರು 'ಸಾಂಗ್ ಆಫರಿಂಗ್ಸ್'.

ಈ ಹೆಸರನ್ನು ಆರಿಸಲು ಎರಡು ಅಂಶಗಳನ್ನು ಪರಿಗಣಿಸಿರಬಹುದು. ಮೊದಲನೆಯದಾಗಿ, 103 ಕವನಗಳಲ್ಲಿ 55 ಅವರ ಬಂಗಾಳಿ 'ಗೀತಾಂಜಲಿ' ಯಿಂದಲೂ ಉಳಿದವು ಬೇರೆ ಎಂಟು ಸಂಗ್ರಹಗಳಿಂದಲೂ ಆಯ್ದವು. ಅವುಗಳಲ್ಲಿ ಅತಿ ಹೆಚ್ಚಿನ ಕೊಡುಗೆ ನೀಡಿದ ಸಂಗ್ರಹ 'ಗೀತಿಮಾಲ್ಯ'. 16 ಕೃತಿಗಳು ಅದರಿಂದ ಆಯ್ದುವು. ಎರಡು ಪುಸ್ತಕಗಳ ಪ್ರೇರಣೆ ವಸ್ತುವೂ ಒಂದೇ. 'ಜೀವನ ದೇವತೆ' ಎಂದು ಕರೆದ ವೈಯಕ್ತಿಕ ಪರಮಾತ್ಮನೊಡನೆ ಕವಿಯ ಸಂಬಂಧ. ಎಲ್ಲವನ್ನು ಮೀರಿಸಿ ಕೇಳುವ ಧ್ವನಿ ಅವರ ದೈವದಲ್ಲಿನ ಪ್ರೀತಿಯದು. ಈ ಅರ್ಥದಲ್ಲಿ ಇವು ಪರಮಾತ್ಮನಿಗೆ ಗೀತ ನೈವೇದ್ಯ. ಬಂಗಾಳಿ 'ಗೀತಾಂಜಲಿ' ಯನ್ನು ಪ್ರೇರೇಪಿಸಿದ ವಸ್ತು ಇದೊಂದೇ. ಇಂಗ್ಲೀಷ್ ಸಂಗ್ರಹದಲ್ಲಿ ಇದು ಉಳಿದೆಲ್ಲವುಗಳಿಗಿಂತ ಮುಖ್ಯವಾದದ್ದು.

ಸಕಾಲದಲ್ಲಿ ಇಂಗ್ಲೆಂಡಿಗೆ ಭೇಟಿಕೊಡಲು ಏರ್ಪಾಟಾಯಿತು. ಮೊದಲು ಪ್ರಯಾಣ ಮಾಡಬೇಕಾಗಿದ್ದ ತಂಡವೇ 1912 ರ ಮೇ 27 ರಂದು ಪಿ. ಮತ್ತು ಒ ಹಡಗಿನಲ್ಲಿ ಮುಂಬಯಿಯಿಂದ ಪ್ರಯಾಣ ಹೊರಟು ಬೇಸಗೆಯಲ್ಲೊಂದು ದಿನ ಸಂಜೆ ಲಂಡನ್ನನ್ನು ತಲುಪಿತು. ಅವರ ಪ್ರಯಾಣವನ್ನು ವ್ಯವಸ್ಥೆಗೊಳಿಸಿದ ಥಾಮಸ್ ಕುಕ್ ಅಂಡ್ ಸನ್ಸ್ ಸಂಸ್ಥೆ ಅವರಿಗೆ ಬ್ಲೂಮ್ಸ್‌ಬರಿಯ ಒಂದು ಹೋಟಲಿನಲ್ಲಿ ಇಳಿದುಕೊಳ್ಳಲು ವ್ಯವಸ್ಥೆ ಮಾಡಿತ್ತು. ಚೇರಿಂಗ್ ಕ್ರಾಸ್ ಟ್ಯೂಬ್ ಸ್ಟೇಷನಿನಿಂದ ಅವರು ಹೋಟಲನ್ನು ತಲಪಿದರು.

ಠಾಕೂರರು ಕಲಾವಿದ, ವಿಲಿಯಂ ರಾತೆನ್‌ಸ್ಟೀನರನ್ನು ಭೇಟಿ ಮಾಡಲು ಹೋಗುವುದೆಂದು ಮೊದಲೇ ಗೊತ್ತು ಮಾಡಲಾಗಿತ್ತು. ಲಂಡನ್ನಿಗೆ ಪ್ರಯಾಣ ಮಾಡುವಾಗ, ಒಂದು ಕೈ ಪೆಟ್ಟಿಗೆಯಲ್ಲಿಟ್ಟಿದ್ದ 'ಗೀತಾಂಜಲಿ' ಯ ಹಸ್ತ ಪ್ರತಿಯನ್ನು ರತೀಂದ್ರನಾಥರ ವಶಕ್ಕೆ ಕೊಡಲಾಗಿತ್ತು. ರಾತೆನ್‌ಸ್ಟೀನರನ್ನು ನೋಡಲು ಹೋಗುವ ಮೊದಲು ಠಾಕೂರರು ಹಸ್ತಪ್ರತಿಯನ್ನು ಕೊಡುವಂತೆ ರತೀಂದ್ರನಾಥರನ್ನು ಕೇಳಿದರು. ಆಗ ಗಾಬರಿಯಿಂದ ಮೂಲೆ ಮೂಲೆಯಲ್ಲಿ ಹುಡುಕಾಟ ಪ್ರಾರಂಭವಾಯಿತು. ಕಡೆಗೆ ಅದನ್ನು ಬಿಟ್ಟು ಹೋದ ವಸ್ತುಗಳ

ಕಚೇರಿಯಲ್ಲಿ ಕಂಡು ಹಿಡಿದಿದ್ದಾಯಿತು. ತಮ್ಮ ಜೀವನ ನೆನಪುಗಳಲ್ಲಿ ರತೀಂದ್ರನಾಥರು ಹೇಳುತ್ತಾರೆ : "ಕಳೆದು ಹೋದ ಆಸ್ತಿ ಅಲ್ಲಿ ದೊರೆತಾಗ ನನ್ನ ಮನಸ್ಸು ಎಷ್ಟು ಹಗುರವಾಯಿತು ಎಂದು ಊಹಿಸಿಕೊಳ್ಳಬಹುದು. ಆದಾದ ಮೇಲೆ ಎಷ್ಟೋ ಬಾರಿ ನಾನು, ನನ್ನ ಅಲಕ್ಷ್ಯದಿಂದ 'ಗೀತಾಂಜಲಿ'ಯ ಹಸ್ತಪ್ರತಿ ಕಳೆದು ಹೋಗಿದ್ದರೆ ಮುಂದೇನಾಗಬಹುದಾಗಿತ್ತು ಎಂದು ಅಚ್ಚರಿ ಪಟ್ಟಿದ್ದೇನೆ."*

ಇಲ್ಲಿ ಕೇಳಿರುವ ಪ್ರಶ್ನೆ ಯೋಚಿಸಬೇಕಾದದ್ದೆ. ಪಾಶ್ಚಾತ್ಯ ಪ್ರಪಂಚಕ್ಕೆ ಠಾಕೂರರ ಪರಿಚಯು ಆಗದೆಯೇ ಹೋಗಬಹುದಾಗಿತ್ತು, ಕೊನೆಯ ಪಕ್ಷ ಅದು ಬಹು ವಿಳಂಬವಾಗುತ್ತಿತ್ತು. ಎರಡರಲ್ಲಿ ಯಾವುದೇ ಆಗಿದ್ದರೂ ಜಗತ್ತಿನ ಸಂಸ್ಕೃತಿಯು ದೌರ್ಭಾಗ್ಯವೇ ಆಗುತ್ತಿತ್ತು. 'ಗೀತಾಂಜಲಿ' (ಸಾಂಗ್ ಆಫರಿಂಗ್ಸ್) ಠಾಕೂರರ ಸಾಹಿತ್ಯ ಪಯಣದಲ್ಲಿ ಒಂದು ತಿರುವಾಗಿ ಉಂಟು ಮಾಡಿದ ಮಹತ್ತರ ಪರಿಣಾಮ ಇಲ್ಲವಾಗುತ್ತಿತ್ತು.

ಠಾಕೂರರನ್ನು ಹೊರ ಜಗತ್ತಿಗೆ ಪರಿಚಯು ಮಾಡಿಕೊಟ್ಟ ಸಾಧನ 'ಗೀತಾಂಜಲಿ' ಯಾದರೆ ಅದಕ್ಕೆ ಪೂರ್ವಭಾವಿಯಾದ ಘಟನೆಗಳನ್ನು ಪ್ರಾರಂಭಿಸಿದವರು ರಾತೆನ್‌ಸ್ಟೀನರು. ವಾಸ್ತವವಾಗಿ, ಠಾಕೂರರ ಸೂಚನೆಯಂತೆ ಅವರು ತುಂಬು ಮನಸ್ಸಿನಿಂದ, ಶ್ರದ್ಧೆಯಿಂದ ನಿರ್ವಹಿಸಿದ್ದ ಪಾತ್ರಕ್ಕೆ ಎಲ್ಲ ರೀತಿಯಲ್ಲಿ ಅರ್ಹರಾಗಿದ್ದರು. ವೃತ್ತಿಯಿಂದ ಶ್ರೇಷ್ಠ ಕಲಾವಿದರಾಗಿದ್ದ ಅವರು, ತಮ್ಮ ಕ್ಷೇತ್ರದಲ್ಲಿನ ಅಪಾರ ಸಾಧನೆಯಿಂದ ಸಮಾಜದಲ್ಲಿ ಗಣ್ಯರಾಗಿದ್ದರು. ಇದಲ್ಲದೆ ಅವರ ಹಲವಾರು ಆಸಕ್ತಿಗಳಿಂದ ಅವರಿಗೆ ಕಲೆ, ರಾಜಕೀಯ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಪ್ರಮುಖರಾಗಿದ್ದ ಅನೇಕ ಮಂದಿ ಮಿತ್ರರಿದ್ದರು. ಲವಲವಿಕೆಯ ಸಂಭಾಷಣೆಗಾರರಾಗಿದ್ದ ಅವರು ಆದರ್ಶ ಆತಿಥೇಯರಾಗಿದ್ದರು. ಬ್ರಿಟನ್ನಿನಲ್ಲಿ ಯಾವುದೇ ಪ್ರಮುಖ ಸಾಹಿತಿಯೊಂದಿಗಾದರೂ ಠಾಕೂರರಿಗೆ ಸಂಪರ್ಕ ಕಲ್ಪಿಸಿ ಕೊಡಲು ಅವರಿಗೆ ಸಾಧ್ಯವಿತ್ತು.

---

* ರತೀಂದ್ರನಾಥ ಠಾಕೂರ್, 'ಆನ್ ದ ಎಡ್ಜಸ್ ಆಫ್ ಟೈಮ್', ವಿತ್ ಫಾದರ್ ಇನ್ ಲಂಡನ್.

1912 ರ ಜುಲೈ 7 ರಂದು ರಾತೆನ್‌ಸ್ಟೀನಸರು ತಮ್ಮ ಮನೆಯಲ್ಲಿ ಕೆಲವರು ಸಾಹಿತಿ ಮಿತ್ರರನ್ನು ಆಹ್ವಾನಿಸುವುದೆಂದೂ ಆ ಕೂಟದಲ್ಲಿ ಡಬ್ಲ್ಯು. ಬಿ. ಯೇಟ್ಸರು 'ಗೀತಾಂಜಲಿ' ಯಿಂದ ಕವನಗಳನ್ನು ಓದುವುದೆಂದೂ ಏರ್ಪಾಟಾಗಿತ್ತು. ಕೂಟಕ್ಕೆ ಹೆನ್ರಿ ನೆವಿನ್‌ಸನ್, ಅಮೆರಿಕದ ಕವಿ ಎಜ್ರಾ ಪೌಂಡ್, ಮೇ ಸಿಂಕ್ಲೇರ್ ಮತ್ತು ಸಿ.ಎಫ್. ಆಂಡ್ರ್ಯೂಸರು ಬಂದಿದ್ದರು. ಕಾರ್ಯಕ್ರಮ ಸಂಪೂರ್ಣವಾಗಿ ಯಶಸ್ವಿಯಾಯಿತು. ಆಯ್ದು ಆಹ್ವಾನಿಸಿದ್ದ ಶ್ರೋತ್ರವೃಂದ ಕವನಗಳನ್ನು ಸಂಪೂರ್ಣ ಲಕ್ಷ್ಯವಿಟ್ಟು ಕೇಳಿತು. ಅವುಗಳ ಉತ್ಕೃಷ್ಟತೆ ಕೇಳಿದವರ ಮನಸ್ಸನ್ನು ಸೆಳೆಯಿತು. ಅವರು ಮೆಚ್ಚಿಕೆಯಿಂದ ಠಾಕೂರರನ್ನು ಆ ಯುಗದ ಅತಿ ಶ್ರೇಷ್ಠ ಕವಿಗಳಲ್ಲಿ ಒಬ್ಬರೆಂದು ಒಪ್ಪಿದಂತಾಯಿತು.

ಮೆಚ್ಚಿಕೆಯ ಪತ್ರಗಳು ಮರುದಿನ ಒಂದಾದ ಮೇಲೊಂದು ಬಂದವು. ಸಿ.ಎಫ್. ಆಂಡ್ರ್ಯೂ ಸರು ಬರೆದ ಪತ್ರದಲ್ಲಿ "ನನ್ನ ಬಾಲ್ಯದ ಸುಂದರ ಶಬ್ದಗಳ ಅಷ್ಟು ಸರಳವಾದ ಇಂಗ್ಲೀಷನ ಸದಾ ನಿನದಿಸುತ್ತಿರುವ ಮಾಧುರ್ಯವೇ ಸಂಪೂರ್ಣವಾಗಿ ನನ್ನನ್ನು ಪರವಶನನ್ನಾಗಿ ಮಾಡಿದ್ದು"* ಎಂದು ಹೇಳಿದರು. "ರವೀಂದ್ರನಾಥರ ಕಾವ್ಯದ ನವಮಾಧುರಿಕೆ ಮತ್ತರನ್ನಾಗಿ ಮಾಡಿ" ತೆಂದೂ ಅವರೂ ಹೇಳಿದರು.

ಭಾರತದಲ್ಲಿ 'ದೀನಬಂಧು' ಎಂದು ಪರಿಚಿತರಾಗಿರುವ ಆಂಡ್ರ್ಯೂಸರು ಪಂಜಾಬಿನಲ್ಲಿ ಕರ್ತವ್ಯ ನಿರತರಾಗಿದ್ದ ಪಾದ್ರಿ. ಇಂಗ್ಲೀಷಿಗೆ ಅನುವಾದವಾಗಿದ್ದ, ಠಾಕೂರರ ಕೆಲವು ಕೃತಿಗಳನ್ನು ಓದಿ ಠಾಕೂರರತ್ತ ಆಕರ್ಷಿತರಾದವರು. ರಾತೆನ್‌ಸ್ಟೀನರ ಮನೆಯಲ್ಲಿನ ಕೂಟವು ಇವರಿಬ್ಬರ ನಿಕಟ ಸಂಪರ್ಕ ಪಡೆದು ಒಬ್ಬರನ್ನೊಬ್ಬರು ಆಪ್ತರಾಗಿ ಅರಿತುಕೊಳ್ಳಲು ಅವಕಾಶವನ್ನು ಕಲ್ಪಿಸಿತು. ಇದರ ಪರಿಣಾಮ ಪರಸ್ಪರರಲ್ಲಿ ಗಾಢವಾದ ಗೌರವ ಮತ್ತು ಪ್ರೀತಿಗಳು ಮೂಡಿ, ಅವರಿಬ್ಬರ ಬಾಳಿನುದ್ದಕ್ಕೂ ಉಳಿದು ಬಂದ ಸ್ನೇಹ ಬೆಳೆದು ಬಂದದ್ದು. ಆಂಡ್ರ್ಯೂಸರಲ್ಲಿ ತಮಗಿದ್ದ ಗಾಢವಾದ ಗೌರವದ ಕುರುಹಾಗಿ ಠಾಕೂರರು ತಮ್ಮ ಇಂಗ್ಲೀಷ್ ಪುಸ್ತಕ, 'ಸಾಧನ' ವನ್ನು ಅವರಿಗೆ ಅರ್ಪಿಸಿದರು. ಈ ಪುಸ್ತಕದ ಉಪಶೀರ್ಷಿಕೆ 'ರಿಯಲೈಸೇಷನ್ ಆಫ್' ಲೈಫ್" (ಜೀವನ ಸಾಕ್ಷಾತ್ಕಾರ), ಇದು

* ಅದೇ

ಇಂಗ್ಲೆಂಡಿನಲ್ಲಿ ನಡೆದ ಘಟನೆಯ ನಂತರ ಸ್ವಲ್ಪ ಕಾಲದಲ್ಲಿ 1913 ರಲ್ಲಿ ಪ್ರಕಟವಾಯಿತು.

ಠಾಕೂರರೇ ಇಂಗ್ಲೀಷಿಗೆ ಅನುವಾದಿಸಿದ ಅವರ ಕವನಗಳು ಅವನ್ನು ಕೇಳಿದ ಖ್ಯಾತ ಶ್ರೋತೃಗಳ ಮನಸ್ಸಿನ ಮೇಲೆ ಇಂತಹ ಗಾಢ ಪರಿಣಾಮ ಮಾಡಿದುದು ವನ್ನು ಏಕೆ ಎಂದು ಯೋಜಿಸುವುದು ಉಪಯುಕ್ತವಾದದು. ಪ್ರಾಯಶಃ ನಾವು ನೆಚ್ಚಬಹುದಾದ ಉತ್ತರ ಸಿಕ್ಕುವುದು ಈ ಐತಿಹಾಸಿಕ ಸಮಾವೇಶದಲ್ಲಿ ಭಾಗವಹಿಸಿದರು ಬರೆದಿಟ್ಟು ಪ್ರತಿಕ್ರಿಯೆಗಳಿಂದ.

ಮರುದಿನವೆ ಬರೆದ ಮೆಚ್ಚಿಕೆಯ ಪತ್ರದಲ್ಲಿ ಮೇ ಸಿಂಕ್ಲೇರ್, "ಅವುಗಳಿಗೆ ಪರಿಪೂರ್ಣ ಸೌಂದರ್ಯವಿದೆ, ಕಾವ್ಯವಾಗಿ ಪರಿಪೂರ್ಣತೆ ಇದೆ ಎಂದಷ್ಟೇ ಅಲ್ಲ, ನನಗೆ ಈಗೊಮ್ಮೆ ಆಗೊಮ್ಮೆ ಯಾವುದೋ ಹೊಳಪಿನಲ್ಲಿ ಮಾತ್ರ ಯಾತನಾಮಯ ಅನಿಶ್ಚಯಿತೆಯಿಂದಷ್ಟೆ ನಾನು ಕಾಣಲಿಲ್ಲ, ದೈವಿಕ ವಸ್ತು ಸದಾ ನನಗೆ ಕಾಣುವಂತೆ ಮಾಡಿವೆ."

ಆಕೆ ಮುಂದುವರಿದು ಹೇಳಿದರು : 'ಇಂಗ್ಲೀಷ್ ಭಾಷೆಯಲ್ಲಾಗಲಿ ಯಾವುದೇ ಪಾಶ್ಚಾತ್ಯ ಭಾಷೆಯಲ್ಲಾಗಲಿ ಇವು ಎಂದೂ ವ್ಯಕ್ತವಾಗುವುದೇ ಇಲ್ಲ ಎಂದು ನಾವು ಕೆಲವು ವಿಷಯುಗಳ ಬಗ್ಗೆ ತೀವ್ರ ನಿರಾಸೆಯಿಂದಿದ್ದೆವು. ಠಾಕೂರರು ಅವನ್ನು ಇಂಗ್ಲೀಷಿನಲ್ಲಿ ಹೇಳಿದರು.'

ಡಬ್ಲ್ಯು.ಬಿ. ಯೇಟ್ಸ್‌ರು ಈ ಪುಸ್ತಕಕ್ಕೆ ಬರೆದ ಮುನ್ನುಡಿಯಿಂದ ಅವರ ಹೃದಯವನ್ನು ಬಹುವಾಗಿ ಸ್ಪರ್ಶಿಸಿದ್ದು ಒಂದು ಹೊರ ತೋರಿಕೆಯ ವಿರೋಧಾಭಾಸ ಎಂದು ಕಾಣುತ್ತದೆ. ಒಂದು ರೀತಿಯಲ್ಲಿ ಠಾಕೂರರು ಸಂತನಂತಹ ಮನುಷ್ಯ. ಆದರೆ ನವೋದಯುದ ನಂತರದ ಯೂರೋಪಿನಲ್ಲಿನ ಬರಹಗಳು ಸುಸಂಸ್ಕೃತ ಜನರ ಮನಸ್ಸಿಗೆ ಹಿಡಿಸಲಾರದೆ ಹೋದವು. ಅವರ ಉಗ್ರ ವೈರಾಗ್ಯವು ಸುಂದರ ವಸ್ತುಗಳಿಂದ ಪೂರ್ಣವಾಗಿ ವಿಮುಖವಾಗಿತ್ತು. ಆದರೆ ಇಲ್ಲೊಂದು ವಿರೋಧಾಭಾಸವಿತ್ತು. ಠಾಕೂರರು ಹೃದಯಾಂತರಾಳದಲ್ಲೂ ಸಂತರೇ ಆಗಿದ್ದರೂ ಅವರಿಗೆ ಬಾಳಿನಲ್ಲಿ ಒಲವು, ನಿಸರ್ಗದ ಚೆಲುವಿನಲ್ಲಿ ಒಲವು. ಇದಕ್ಕಿಂತ ಮುಖ್ಯವಾದ ಸಂಗತಿ ಎಂದರೆ ಈ ಬರಹಗಳು ಅವರ ಸಂಕೀರ್ಣ (Sophisticated) ಮನಸ್ಸುಗಳಿಗೆ ದೇವರಲ್ಲಿ ಪ್ರೀತಿಯನ್ನು ವಾಸ್ತವಿಕಗೊಳಿ

ಸಿದ್ದು ಮಾತ್ರವಲ್ಲ. ದೈವಭಕ್ತಿಯ ಭಾವನೆಗಳನ್ನು "ಧೂಳು, ಬಿಸಿಲುಗಳನ್ನು ಚಿತ್ರಿಸುವ ಚಿತ್ರಕಾರನ ಮನಃಸ್ಥಿತಿಯ ತೀವ್ರತರ ಕೇಂದ್ರೀಕರಣದ ಮಟ್ಟಕ್ಕೆ" ಕೊಂಡೊಯ್ದನು. ಇದು ದೈವಭಕ್ತಿ ಮತ್ತು ಕಲೆ ಕೈ ಕೈ ಹಿಡಿಯುವಂತೆ ಮಾಡಿ. ಪಾಶ್ಚಾತ್ಯ ಸಂಸ್ಕೃತಿಯ ಸಂಕೀರ್ಣ ವಾತಾವರಣದಲ್ಲಿ ಬೆಳೆದ ಯೇಟ್ಸ್‌ನಂತಹ ಜನರಿಗೆ, ತಮಗರಿವಿಲ್ಲದೆಯೇ ತಾವು ಆಗಾಗ ಮನಸ್ಸಿಗೆ ಬೆಳಕು ಚಿಮ್ಮಿದಾಗ ದೇವರನ್ನು ಪ್ರೀತಿಸಿದ್ದೇವೆಂದು ಭಾವಿಸುವಂತೆ ಮಾಡಿತು. ಅವರದೇ ಮಾತುಗಳಿವು:

"ನಾವು ದೇವರನ್ನು ಪ್ರೀತಿಸುತ್ತಿದ್ದೇವೆಂಬುದರ ಅರಿವು ನಮಗಿರಲಿಲ್ಲ, ಅವನಲ್ಲಿ ನಮಗೆ ನಂಬಿಕೆ ಇತ್ತು ಎನ್ನುವುದು ತಿಳಿದೂ ತಿಳಿಯದಂತಾಗಿತ್ತು. ಆದರೆ ನಮ್ಮ ಬಾಳನ್ನು ಹಿಂದಿರುಗಿ ನೋಡಿದಾಗ, ಜನಗಳ ಕಾಲ್ದಾರಿಗಳ ನಮ್ಮ ಶೋಧನೆಯಲ್ಲಿ ಗುಡ್ಡಗಾಡುಗಳಲ್ಲಿನ ಏಕಾಂತ ಪ್ರದೇಶಗಳಲ್ಲಿ ನಾವು ಅನುಭವಿಸಿದ ಆನಂದದಲ್ಲಿ ನಿಷ್ಫಲವಾಗಿ ನಾವು ಪ್ರೀತಿಸಿದ ಹೆಣ್ಣಿನಲ್ಲಿ ಮಾಡಿದ ಗೂಢ ಬೇಡಿಕೆಯಲ್ಲಿ ಈ ವಾಂಛೆಯ ಮಾಧುರ್ಯವನ್ನು ಸೃಷ್ಟಿಸಿದ ಭಾವವನ್ನು ಕಂಡುಕೊಳ್ಳುತ್ತೇವೆ."

ಅನುವಾದಗಳಿದ್ದದ್ದು ಗದ್ಯದಲ್ಲಿ, ಆದ್ದರಿಂದ ಮೂಲದ ಲಯ ಮತ್ತು ಛಂದಸ್ಸುಗಳ ಸೊಗಸನ್ನು ಅವು ಮೂಡಿಸಿದಿರಲಾರವು. ಅದರ ನಾದ ಸೌಂದರ್ಯ ಅವರಿಗೆ ಕಾಣಬರಲೇ ಇಲ್ಲ. ಎಷ್ಟೇ ಅಂದರೂ ಇವು ಅಮುಖ್ಯ ಭಾಗಗಳು. ಅಲ್ಲದೆ ಮೂಲದ ವಿಚಾರಧಾರೆಯ ಸೂಕ್ಷ್ಮ ಧ್ವನಿಗಳು ಮತ್ತು ಸೂಕ್ಷ್ಮ ವ್ಯತ್ಯಾಸಗಳ ಎಲ್ಲವನ್ನೂ ಗದ್ಯ ಅನುವಾದದಲ್ಲಿ ಇನ್ನೂ ಪರಿಣಾಮಕಾರಿಯಾಗಿ ಹಿಡಿದಿರಬಹುದು. ನಿಸ್ಸಂಕೋಚವಾಗಿ ಗದ್ಯಾನುವಾದವನ್ನು ಓದುಗರು ಮೆಚ್ಚಿಕೊಂಡರೆಂಬುದು, ಅನುವಾದ ಇವನ್ನು ಯಶಸ್ವಿಯಾಗಿ ಓದುಗರಿಗೆ ಮುಟ್ಟಿಸಿತೆಂಬುದನ್ನು ತೋರಿಸುತ್ತದೆ.

ಓದುಗರ ಮನಸ್ಸಿನ ಮೇಲೆ ಈ ಪ್ರಬಲವಾದ ಪರಿಣಾಮವನ್ನುಂಟು ಮಾಡಿದ್ದು ಮೊಟ್ಟ ಮೊದಲನೆಯದಾಗಿ ಈ ಕವನಗಳಲ್ಲಿ ಅಂತರ್ಗತವಾದ ಸಾಹಿತ್ಯಕ ಗುಣ ಎನ್ನುವುದು ಸ್ಪಷ್ಟ. ಎರಡನೆಯದಾಗಿ, ಮೇ ಸಿಂಕ್ಲೇರಳು ಹೇಳಿದಂತೆ, ಉಣಬಡಿಸಿದ ಈ ಆಹಾರವು ಪಾಶ್ಚಾತ್ಯ ಸಾಹಿತ್ಯದಲ್ಲಿ ಹೊಚ್ಚ ಹೊಸತು. ನವ್ಯತೆ ಆಕರ್ಷಣೆಯ ರಂಗೇರಿಸಿತು. ಮೂರನೆಯದಾಗಿ, ಬಹು ಮುಖ್ಯವಾದ ಅಂಶ, ದೈವಭಕ್ತಿಯ ಭಾವನೆಯಿಂದ ಪಾಶ್ಚಾತ್ಯದ ಜೀವನ ವಿಧಾನಗಳು ಬಹು

ದೂರ ಸರಿದಿದ್ದಾಗ ಈ ಅನುವಾದಗಳು ಅವರ ಹೃದಯದಲ್ಲಿ ನಿರ್ಜೀವವಾಗಿ ಉಳಿದಿದ್ದ ಒಂದು ತಂತಿಯನ್ನು ಮಿಡಿದವು. ಠಾಕೂರರಂತಹ ಪ್ರತಿಭಾವಂತ ಸಾಹಿತಿಯು ದೈವಭಕ್ತಿಯಿಂದ ಪ್ರೇರಿತವಾದ ಭಾವನೆಗಳಿಗೆ ಕೌಶಲದಿಂದ ರೂಪ ಕೊಟ್ಟಾಗ ಅವು ಕಲಾಕೃತಿಗಳಂತೆಯೇ ತಮ್ಮ ಮನಸ್ಸುಗಳನ್ನು ತಟ್ಟಬಲ್ಲವು. ಒಂದಿಗೇ ಭಗವಂತನ ಜೀವಂತ ಮಿಡಿಯುವ ಸನ್ನಿಧಾನಕ್ಕೆ ತಮ್ಮನ್ನು ಕರೆದೊಯ್ಯ ಬಲ್ಲವು ಎಂದು ಈ ಕವನಗಳ ಮೂಲಕ ಅವರು ಕಂಡುಕೊಂಡರು.

ಇದಾದನಂತರ ಒಂದಾದ ಮೇಲೊಂದು ಹಲವು ಸಂಗತಿಗಳು ನಡೆದವು. ಠಾಕೂರರ ಹೊಸ ಸ್ನೇಹಿತರು ಅವರಿಗೊಂದು ಸ್ವಾಗತಕೂಟವನ್ನು ಏರ್ಪಡಿಸಲು ನಿರ್ಧರಿಸಿದರು. ಮೂರೇ ದಿನಗಳ ನಂತರ 1912ರ ಜುಲೈ 10 ರಂದು ಅವರು ಟ್ರೊಕಾಡಿರೊ ರೆಸ್ಟೋರಾದಲ್ಲಿ ಸೇರಿದರು. ಇಲ್ಲಿ ಯೇಟ್ಸ್ ಅವರನ್ನು ಪ್ರಖ್ಯಾತ ಸಾಹಿತಿಗಳು ಅನೇಕರಿಗೆ ಪರಿಚಯ ಮಾಡಿಸಿದರು. ಅಲ್ಲದೆ ಠಾಕೂರರ ಅನುವಾದ ಗಳಲ್ಲಿ ಕೆಲವನ್ನು ವಾಚನ ಮಾಡಿ, ಮುಕ್ತಾಯದಲ್ಲಿ ಅವುಗಳ ಲಕ್ಷಣಗಳನ್ನು ವಿವರಿಸುತ್ತಾ, "ಇವರ ಎಲ್ಲ ಕವನಗಳ ವಸ್ತು ಒಂದೇ; ಭಗವಂತನ ಪ್ರೇಮ... ಠಾಕೂರರಿಗೆ ನಿಸರ್ಗದಲ್ಲಿ ಪ್ರೀತಿ, ಇವರ ಸೂಕ್ಷ್ಮ ವೀಕ್ಷಣೆ, ಗಾಢವಾದ ಪ್ರೀತಿ ಇವನ್ನು ತೋರಿಸುವ ಬಹು ಸೊಗಸಾದ ಸೂಕ್ಷ್ಮ ಕಲಾಸ್ಪರ್ಶ ಇವರ ಕವನಗಳನ್ನು ತುಂಬಿದೆ. ಇವರು ಜಪಮಾಲೆ ಎಣಿಸುವುದಿಲ್ಲ, ಹೂಗಳನ್ನೆಣಿಸುತ್ತಾರೆ. ಈ ಪುಸ್ತಕದಲ್ಲಿ ಎಲ್ಲೆಯರಿಯದ ಸೌಂದರ್ಯ ಸಮೃದ್ಧಿ ಇದೆ" ಎಂದರು

ತಮ್ಮ ಉತ್ತರದಲ್ಲಿ ಠಾಕೂರರು ವಿಶೇಷ ಮಹತ್ವವುಳ್ಳ ಒಂದು ಮಾತನ್ನು ಹೇಳಿದರು : "ಪೂರ್ವ ಪೂರ್ವವೇ, ಪಶ್ಚಿಮವು ಪಶ್ಚಿಮವೇ" ಇದು ಪಲ್ಲಟವಾಗ ದಂತೆ ದೇವರು ನೋಡಿಕೊಳ್ಳಲಿ. ಆದರೆ ವಿಶ್ವಾಸದಲ್ಲಿ, ಶಾಂತಿಯಲ್ಲಿ ಪರಸ್ಪರರ ಅರಿವಿನಲ್ಲಿ ಇವು ಸೇರಲೇಬೇಕು. ಅವುಗಳ ನಡುವಣ ವ್ಯತ್ಯಾಸದಿಂದ ಅವು ಒಂದಾಗವುದೇ ಇನ್ನೂ ಫಲಪ್ರದವಾಗುತ್ತದೆ. ಮಾನವ ಕುಲದ ಪವಿತ್ರ ಪೂಜಾ ವೇದಿಕೆಯ ಮುಂದೆ ಪವಿತ್ರ ವಿವಾಹಕ್ಕೆ ಇವೆರಡನ್ನೂ ನಡೆಸಬೇಕು."

ಮಾನವ ಕುಲ ಹಿತದ ದೃಷ್ಟಿಯಿಂದ ಈ ಎರಡು ಸಂಸ್ಕೃತಿಗಳು ಸಂಧಿಸ ಬೇಕೆಂದು ಅವರು ತಮ್ಮ ಜೀವನದ ಈ ಘಟ್ಟದಲ್ಲಿ ಅರ್ಥಮಾಡಿಕೊಂಡಂತೆ ಕಾಣುತ್ತದೆ. ಇವುಗಳಲ್ಲಿ ಒಂದು ಸಂಸ್ಕೃತಿಯು ವಿಜ್ಞಾನ ಮತ್ತು ತಂತ್ರಜ್ಞಾನ

ಗಳಲ್ಲಿ ನೈಪುಣ್ಯವನ್ನು ಸಾಧಿಸಿ ಮನುಷ್ಯನಿಗೆ ಪ್ರಾಪಂಚಿಕ ಸಂಪತ್ತನ್ನು ಗಳಿಸಿ ಕೊಟ್ಟಿತು. ಇನ್ನೊಂದು ಆಧ್ಯಾತ್ಮಿಕ ಅನ್ವೇಷಣಗಳನ್ನೇ ಮುಖ್ಯವಾಗಿ ಗಳಿಸಿ, ಮನುಷ್ಯನ ಹೃದಯಕ್ಕೆ ಅಪ್ಯಾಯಮಾನವಾದ ಸ್ಪರ್ಶವನ್ನು ನೀಡಬಲ್ಲ ಮೌಲ್ಯಗಳ ಒಳಸಾರಿತ್ತು. ಬಾಳಿನ ಸಮತೋಲನದ ದೃಷ್ಟಿಯನ್ನು ಸಾಧಿಸಲು ಅವು ಒಂದಾಗಿ ಪರಸ್ಪರ ಪೂರಕವಾದ ಪಾತ್ರಗಳನ್ನು ವಹಿಸಬೇಕು. ಈ ಅರಿವು ಅವರ ಮುಂದಿನ ಬಾಳಿನಲ್ಲಿ ಎಷ್ಟು ತೀವ್ರವಾಗಿ ಬೆಳೆಯಿತೆಂದರೆ ಈ ಸಂದೇಶವನ್ನು ಜಗತ್ತಿನ ದೂರದ ಮೂಲೆಗಳಿಗೆ ಕೊಂಡೊಯ್ಯುವ ಕಾರ್ಯವನ್ನು ಶ್ರದ್ಧೆಯಿಂದ ತಮ್ಮ ಮುಂದಿರಿಸಿಕೊಂಡರು. ಮುಂದಿನ ಅಧ್ಯಾಯದಲ್ಲಿ ಈ ವಿಷಯವನ್ನು ವಿವರವಾಗಿ ಪರಿಶೀಲಿಸುವುದು ಅಗತ್ಯವಾಗುತ್ತದೆ.

ಟ್ರೊಕಾಡಿರೊ ರೆಸ್ಟೊರಾದ ಸಭೆಯ ನಂತರ ಠಾಕೂರರ ಸ್ನೇಹಿತರು ಪುಸ್ತಕವನ್ನು ತಾವೇ ಪ್ರಕಟಿಸಲು ನಿರ್ಧರಿಸಿದರು. ಅವರ ಉದ್ದೇಶವನ್ನು ಇಂಡಿಯಾ ಸೊಸೈಟಿ ಬೆಂಬಲಿಸಿತು. ಖಾಸಗಿ ಪ್ರಸಾರಕ್ಕಾಗಿ ಮಿತಸಂಖ್ಯೆಯ ಪ್ರತಿಗಳನ್ನು ಅಚ್ಚು ಮಾಡುವುದೆಂದು ತೀರ್ಮಾನಿಸಲಾಯಿತು. ಮುನ್ನುಡಿ ಬರೆಯುವ ಕಾರ್ಯ ಯೇಟ್ಸರ ಪಾಲಿಗೆ ಬಂತು. ತಮ್ಮ ಉತ್ಸಾಹದ ಮೆಚ್ಚಿಕೆಯನ್ನು ಅವರು ಅದರಲ್ಲಿ ಬರೆದಿಟ್ಟರು.

ಈ ಮಧ್ಯೆ ಒಂದು ಸಣ್ಣ ಪ್ರವಾಸಕ್ಕೆಂದು ಠಾಕೂರರು ತಮ್ಮ ಮಗ ಮತ್ತು ಸೊಸೆಯ ಜೊತೆಗೆ ಅಮೇರಿಕದ ಸಂಯುಕ್ತ ಸಂಸ್ಥಾನಗಳಿಗೆ ಹೊರಟರು. ಅವರು ಭೇಟಿ ಕೊಡಬೇಕಾಗಿದ್ದ ಸ್ಥಳಗಳಲ್ಲಿ ನ್ಯೂಯಾರ್ಕ್, ಶಿಕಾಗೊ, ರಾಚೆಸ್ಟರ್, ಬಾಸ್ಟನ್ ಮತ್ತು ಉರ್ಬಾನಾ ಸೇರಿದ್ದವು. ಅವರಿಗಿಂತ ಮುನ್ನವೇ ಅವರ ಕೀರ್ತಿ ಅಮೇರಿಕವನ್ನು ಮುಟ್ಟಿದ್ದಂತೆ ಕಾಣುತ್ತದೆ. ಹಲವಾರು ವಿದ್ಯಾಸಂಸ್ಥೆಗಳು ಉಪನ್ಯಾಸ ನೀಡಬೇಕೆಂದು ಅವರನ್ನು ಆಹ್ವಾನಿಸಿದವು. ರಾಚೆಸ್ಟರಿನಲ್ಲಿ ಫೆಡರೇಷನ್ ಆಫ್ ರಿಲಿಜಿಯಸ್ ಲಿಬರಲ್ಸ್ ಸಂಸ್ಥೆ ಏರ್ಪಡಿಸಿದ್ದ ಕಾಂಗ್ರೆಸಿನಲ್ಲಿ ಅವರು ಉಪನ್ಯಾಸ ಮಾಬೇಕೆಂದು ಕೇಳಲಾಯಿತು. ಅನಂತರ ಹಾರ್ವರ್ಡ್ ಮತ್ತು ನ್ಯೂಯಾರ್ಕಿನಿಂದಲೂ ಇದೇ ಬಗೆಯ ಆಹ್ವಾನಗಳು ಬಂದವು. ಅವರ ಮಗ ಪದವೀಧರನಾದದ್ದು ಉರ್ಬಾನಾದಲ್ಲಿರುವ ಇಲ್ಲಿನಾಯ್ಸ್ ವಿಶ್ವವಿದ್ಯಾನಿಲಯದಿಂದ ಆದುದರಿಂದ ಠಾಕೂರರು ಉಪನ್ಯಾಸ ಕೊಡಬೇಕೆಂದು ಕೇಳಲು ಉರ್ಬಾನಾದವರಿಗೆ ವಿಶೇಷ ಹಕ್ಕಿತ್ತು. ಚಳಿಗಾಲದ ಬಹುಭಾಗವನ್ನು ಅವರು ಅಲ್ಲಿ ಕಳೆದರು.

ಅಮೇರಿಕದಲ್ಲಿ ಪ್ರವಾಸ ಕಾರ್ಯಕ್ರಮವನ್ನು ಮುಗಿಸಿ ಠಾಕೂರರು 1913ರ ಏಪ್ರಿಲ್ ತಿಂಗಳಲ್ಲಿ ಲಂಡನ್ನಿಗೆ ಹಿಂದಿರುಗಿದರು. ಚಿಕಿತ್ಸೆಗಾಗಿ ಅವರನ್ನು ಜೂನ್ ತಿಂಗಳಲ್ಲಿ ಆಸ್ಪತ್ರೆಗೆ ಸೇರಿಸಲಾಯಿತು, ಅಲ್ಲಿಂದ ಹೊರಬಂದ ನಂತರ 1913 ರ ಸೆಪ್ಟೆಂಬರ್ 4 ರಂದು ಭಾರತಕ್ಕೆ ಹೊರಟರು.

ಇಂಗ್ಲೀಷ್ ಭಾಷೆಯಲ್ಲಿ 'ಗೀತಾಂಜಲಿ' 1912 ರ ಅಂತ್ಯದಲ್ಲಿ ಪ್ರಕಟವಾಯಿತು.* ಇದರಿಂದ ಅವರು ಪಾಶ್ಚಾತ್ಯ ಜನತೆಗೆ ಪರಿಚಿತರಾದರು. ರಾತೆನ್ ಸ್ಟೀನರ ಮನೆಯಲ್ಲಿ ಸೇರಿದ್ದ ಸ್ನೇಹಿತರ ಸಣ್ಣ ಗುಂಪಿನಿಂದ ಹಿಂದೆ ಪ್ರೀತಿಪೂರ್ವಕ ಮೆಚ್ಚಿಕೆ ಪಡೆದಂತೆಯೇ ಇದೂ ಪ್ರೀತಿಪೂರ್ವಕ ಮೆಚ್ಚಿಕೆಯನ್ನು ಗಳಿಸಿತು. ಮನ್ನಣೆಯೂ ಬಹು ಬೇಗ ದೊರಕಿತು. 1913 ರ ನವೆಂಬರಿನಲ್ಲಿ ಅವರಿಗೆ ಸಾಹಿತ್ಯ ಕ್ಷೇತ್ರದಲ್ಲಿನ ಮಹತ್ಸಾಧನೆಗಾಗಿ ನೊಬೆಲ್ ಬಹುಮಾನವನ್ನು ನೀಡಲಾಯಿತು.

ಜಗತ್ತಿನ ಅತಿ ಶ್ರೇಷ್ಠ ಸಾಹಿತಿಗಳಲ್ಲಿ ಒಬ್ಬರೆಂದು ಗುರುತಿಸುವಂತಹ, ಹಲವರ ತೀವ್ರ ಹಂಬಲದ ವಸ್ತುವಾದ ಬಹುಮಾನ ಅವರಿಗೆ ದೊರೆತಿದ್ದು ಅವರ ದೇಶಬಾಂಧವರನ್ನು ತೀರ ಅಚ್ಚರಿಗೊಳಿಸಿತು. ಸದಾ ವಿರೋಧಿ ಟೀಕಾಕಾರರಾದ್ದುದರಿಂದ ಠಾಕೂರರ ಜನರೇ ಮುಕ್ತ ಮನಸ್ಸಿನಿಂದ ಅವರಿಗೆ ಮನ್ನಣೆ ಕೊಟ್ಟೇ ಇರಲಿಲ್ಲ. ಆ ಕಾಲದ ಮಟ್ಟಿಗಾದರೂ ಅವರ ವಿರೋಧ ತೆಪ್ಪಗಾದಂತೆ ಕಂಡಿತು. ಜನಸಾಮಾನ್ಯರಿಗೆ ತುಂಬಾ ಹರ್ಷವೆನಿಸಿತು. ಠಾಕೂರರ ಸಾಧನೆಯ ಬಗ್ಗೆ ಅವರಿಗೆ ಹೆಮ್ಮೆಯಾಯಿತು, ಆ ಸಾಧನೆಯಿಂದ ತಮ್ಮ ರಾಷ್ಟ್ರೀಯ ಅಭಿಮಾನಕ್ಕೂ ತಕ್ಕ ಮಟ್ಟಿಗೆ ಸಮರ್ಥನೆ ದೊರೆಯಿತೆನ್ನಿಸಿತು ಅವರಿಗೆ.

ಆದುದರಿಂದ ಗಾಢವಾದ ಕೃತಜ್ಞತಾಭಾವವು ಬಂಗಾಳದ ಜನತೆಯ ಮನಸ್ಸನ್ನು ತುಂಬಿ ಕೊಟ್ಟಿತು. ಠಾಕೂರರು ಆಗ ಶಾಂತಿನಿಕೇತನದಲ್ಲಿದ್ದುದರಿಂದ 1913 ರ ನವೆಂಬರ್ 23 ರಂದು ಅವರಿಗೆ ಅಲ್ಲಿ ಸಾರ್ವಜನಿಕ ಸನ್ಮಾನ

---

* ಇದನ್ನು ವಿಲಿಯಂ ರಾತೆನ್‌ಸ್ಟೀನರಿಗೆ ಅರ್ಪಿಸಲಾಗಿತ್ತು. ಕೃತಿಯನ್ನು ಇಂಗ್ಲೀಷ್ ಸಾಹಿತಿಗಳಿಗೆ ಪರಿಚಯ ಮಾಡಿಕೊಡುವಲ್ಲಿ ಅವರು ವಹಿಸಿದ ಪಾತ್ರಕ್ಕಾಗಿ ಈ ಗೌರವ ಎಂದು ಭಾವಿಸಬಹುದು.

ಸಮಾರಂಭವನ್ನು ಏರ್ಪಡಿಸಬೇಕೆಂದು ಜನರ ಪ್ರತಿನಿಧಿಗಳು ನಿರ್ಧರಿಸಿದರು. ಕಲ್ಕತ್ತದ ಸಮಾಜದ ಅತ್ಯಂತ ಗಣ್ಯರು ತಮ್ಮ ಗೌರವವನ್ನು ಸೂಚಿಸಲು ಅಲ್ಲಿ ಹಾಜರಿದ್ದರು. ಶಾಂತಿನಿಕೇತನದ ಮಾವಿನ ತೋಪಿನಲ್ಲಿ ಸಭೆ ನೆರೆಯಿತು.

ಆದರೆ ಸಮಾರಂಭ ವಿಷಾದಕರ ರೀತಿಯಲ್ಲಿ ಮುಕ್ತಾಯವಾಯಿತು. ಬಿನ್ನವತ್ತಳೆಯನ್ನು ಓದಿದ ನಂತರ ಠಾಕೂರರು ಉತ್ತರ ನೀಡಲು ಎದ್ದು ನಿಂತರು. ಆದರೆ ಎಲ್ಲರಿಗೂ ಆಶ್ಚರ್ಯವಾಗುವಂತೆ ಅವರು ಅಪಸ್ವರ ಎತ್ತಿದರು. ಯಾರಿಗೂ ತಿಳಿಯದ ಯಾವುದೋ ರಹಸ್ಯ ಕಾರಣದಿಂದ ಅವರ ಸಂಯಮ ಸಡಿಲುಗೊಂಡಂತೆ ಕಂಡಿತು. ಅವರಿಗೆ ಸಹಜವಾಗಿದ್ದ ಸೌಜನ್ಯ ಅವರಿಂದ ದೂರವಾದಂತೆ ತೋರಿತು. ತಮ್ಮ ಸಾಮಾನ್ಯ ರೀತಿಯಿಂದ ತೀರ ಬೇರೆಯಾಗಿ ನಡೆದುಕೊಂಡು ಅವರು ತಮಗೆ ಗೌರವ ಸೂಚಿಸಲು ಬಂದಿದ್ದ ಅಭಿಮಾನಿಗಳ ವಿಷಯದಲ್ಲಿ ಕೆಲವು ಕಠಿಣ ಮಾತುಗಳನ್ನಾಡಿದರು. ತಾವಾಗಿಯೇ ಅವರು ಠಾಕೂರರ ಸಾಹಿತ್ಯದ ಯೋಗ್ಯತೆಯನ್ನು ಮೆಚ್ಚಿಕೊಳ್ಳಲಿಲ್ಲ, ಇತರರ ಕಣ್ಣಿನಿಂದ ನೋಡಿ ಅದನ್ನು ಅವರೇ ಗುರುತಿಸಬೇಕಾಯಿತು ಎಂಬ ಅರಿವು ಠಾಕೂರರಿಗಿತ್ತು. ಇದರಿಂದ ತಮ್ಮ ದೇಶಬಾಂಧವರ ವಿಷಯದಲ್ಲಿ ಉಂಟಾದ ಅಸಮಾಧಾನದ ಭಾವನೆಯಿಂದ ಅವರು ಪ್ರೇರಿತರಾದಂತೆ ಕಾಣುತ್ತದೆ. ಪ್ರಾಯಶಃ ತಮ್ಮ ದೇಶದ ಮೂಲಕ ಕಠಿಣ ವಿಮರ್ಶೆಯ ಹಿಂದಿನ ಕಹಿಯನ್ನು ಅವರಿಗೆ ನೆನಪು ಮಾಡಿಕೊಟ್ಟಿರಬೇಕು,

ಅವರ ಉತ್ತರದಿಂದ ಎತ್ತಿಕೊಂಡ ಈ ಕೆಳಗಿನ ಮಾತುಗಳು ಈ ಊಹೆಯನ್ನು ಸಮರ್ಥಿಸುತ್ತವೆ.

"ನನ್ನ ನಾಡಿನಿಂದಲೇ ನಾನು ಅನುಭವಿಸಬೇಕಾಗಿ ಬಂದ ಅಪಮಾನ ಮತ್ತು ಅಪಕೀರ್ತಿಗಳ ಪ್ರಮಾಣ ಕಡಮೆಯೇನಲ್ಲ, ಈವರೆಗೆ ನಾನು ಅವನ್ನು ತಾಳ್ಮೆಯಿಂದ ಸಹಿಸಿಕೊಂಡಿದ್ದೆ. ಈ ಸನ್ನಿವೇಶದಲ್ಲಿ ಹೊರಗಡೆಯಿಂದ ನನಗೆ ಗೌರವ ಹೇಗೆ ಸಂದಿತು ಎನ್ನುವದನ್ನು ಅರ್ಥಮಾಡಿಕೊಳ್ಳಲಾರೆ. ಪೂರ್ವದಡದಲ್ಲಿ ಕುಳಿತು ನಾನು ದೇವರನ್ನು ಪೂಜಿಸಿದರೆ ಭಗವಂತನ ಕೃಪೆಯ ಆಶೀರ್ವಾದವೇ ನನಗೆ ಬಂದಿರುವ ನಿಜವಾದ ಭಾಗ್ಯ.

"ಇದು ಹೇಗೆ ಇರಲಿ, ಕಾರಣಗಳೇನೇ ಆಗಲಿ, ಯೂರೋಪ್ ನನಗೆ

ಗೌರವದ ಮಾಲೆಯನ್ನು ಹಾಕಿದೆ. ಅದಕ್ಕೇನಾದರೂ ಬೆಲೆ ಇರುವುದಾದರೆ, ಆ ಬೆಲೆ ಇರುವುದು ಆ ದೇಶದ ಸುಸಂಸ್ಕೃತರ ಅಭಿರುಚಿಯಲ್ಲಿ. ಅದಕ್ಕೆ ನಮ್ಮ ನಾಡಿನೊಡನೆ ಯಾವುದೇ ನಿಕಟ ಸಂಬಂಧವಿಲ್ಲ. ನೊಬೆಲ್ ಬಹುಮಾನ ಬಂದಿತೆಂಬ ಕಾರಣದಿಂದಲೇ ನನ್ನ ಯಾವುದೇ ರಚನೆಯ ರಸ ಮೌಲ್ಯ ಹೆಚ್ಚುವುದಿಲ್ಲ.*

* ಪ್ರಭಾತ್ ಕುಮಾರ ಮುಖ್ಯೋಪಾಧ್ಯಾಯ, 'ರಬೀಂದ್ರ ಜೀವನಿ' ಎರಡನೆಯ ಸಂಪುಟ.

ಅಧ್ಯಾಯ ೧೧

ಭಾರತದ ಆಧ್ಯಾತ್ಮಿಕ ರಾಯಭಾರಿ

ಆಗಲೇ ಹೇಳಿದಂತೆ, 'ಗೀ ತಾಂ ಜ ಲಿ' ಯ ಇಂಗ್ಲೀಷ್ ಆವೃತ್ತಿಯ ಪ್ರಕಟಣೆಯು ಠಾಕೂರರ ಜೀವನದಲ್ಲಿ ಒಂದು ಮುಖ್ಯವಾದ ತಿರುವು ಬಿಂದು ಆಯಿತು. ಸನ್ನಿವೇಶ ಆಕಸ್ಮಿಕವಾಗಿ ಪಡೆದ ಸ್ವರೂಪವು ಅವರಲ್ಲಿ ತಮ್ಮ ಕೆಲವು ಕವನಗಳನ್ನು ಇಂಗ್ಲೀಷಿಗೆ ಅನುವಾದಿಸ ಬೇಕೆಂಬ ಶುಭಕರ ವಿಚಾರವನ್ನು ಪ್ರೇರೇಪಿಸಿತು. ಅವರ ಕುಟುಂಬದ ಗೆಳೆಯ ವಿಲಿಯಂ ರಾತೆನ್‌ಸ್ಟೀನರ ನೆರವಿನಿಂದ ಆ ಅನುವಾದಗಳನ್ನು ಇಂಗ್ಲೀಷ್ ಸಾಹಿತಿಗಳ ಗೋಷ್ಠಿಯಲ್ಲಿ ಓದಲು ಸಾಧ್ಯವಾಯಿತು. ಇವುಗಳ ಉತ್ಕೃಷ್ಟತೆ ಎಷ್ಟರಮಟ್ಟಿಗೆ ಅವರ ಅಂತಃಕರಣವನ್ನು ಮುಟ್ಟಿತೆಂದರೆ, ಠಾಕೂರರನ್ನು ಪಾಶ್ಚಾತ್ಯರಿಗೆ ಪರಿಚಯ ಮಾಡಿಕೊಡಲು ಸಾಧ್ಯವಾಗುವಂತೆ ತಾವೇ ಅವರ ಹಸ್ತಪ್ರತಿಯನ್ನು ಪ್ರಕಟಿಸುವ ಹೊಣೆ ಹೊತ್ತರು. ಪ್ರಕಟಣೆಯು ಸಾಹಿತ್ಯದ ಜಗತ್ತಿನಲ್ಲಿ ಒಂದು ಕೋಲಾಹಲವನ್ನೆ ಎಬ್ಬಿಸಿತು. ಮರು ವರ್ಷವೇ ಸಾಹಿತ್ಯಕ್ಕಾಗಿ ನೀಡುವ ನೊಬಲ್ ಬಹುಮಾನಕ್ಕೆ ಆಯ್ಕೆಯಾಯಿತು. ಅವರ ದೇಶದಲ್ಲೆ ಮನ್ನಣೆ ಅಷ್ಟೇ ಶೀಘ್ರವಾಗಿ ದೊರೆಯಿತು. ಅವರ ಸಾಧನೆಯ ಮನ್ನಣೆ ಎಂದು ಕಲ್ಕತ್ತ ವಿಶ್ವವಿದ್ಯಾನಿಲಯವು ಡಾಕ್ಟರ್ ಆಫ್ ಲಿಟರೇಚರ್ ಗೌರವ ಪ್ರಶಸ್ತಿಯನ್ನು ನೀಡಿತು. ಸ್ವಲ್ಪಕಾಲದ ನಂತರ ಬ್ರಿಟಿಷ್ ಸರ್ಕಾರವೂ

ಇದೇ ಹಾದಿಯಲ್ಲಿ ಹೆಜ್ಜೆ ಇಟ್ಟು ಚಕ್ರವರ್ತಿಯ ಹುಟ್ಟು ಹಬ್ಬದ ಸಂದರ್ಭದಲ್ಲಿ ಅವರಿಗೆ ನೈಟ್‌ಹುಡ್ ಪ್ರಶಸ್ತಿಯನ್ನು ನೀಡಿತು.

ಬಂಗಾಳಿ ಭಾಷೆ ಭಾರತದ ಒಂದು ಪ್ರಾದೇಶಿಕ ಭಾಷೆ. ಠಾಕೂರರು ಆ ಭಾಷೆಯಲ್ಲೆ ಸಾಹಿತ್ಯ ರಚನೆ ಮಾಡಿದ್ದರು, ಇದರಿಂದ ಸಾಗರದಾಚೆ ಕೀರ್ತಿ ಹಬ್ಬದೆ ಸಾಹಿತಿಯಾಗಿಯೇ ಉಳಿದಿದ್ದರು. ಅವರು ಹೊರ ಜಗತ್ತಿನ ಕಣ್ಣಿಗೆ ಬೀಳದಂತೆ ಭಾಷೆಯ ಅಡ್ಡಿ ಪರಿಣಾಮಕಾರಿಯಾದ ಗೋಡೆಯಾಗಿ ನಿಂತಿತ್ತು. ಇಂಗ್ಲೀಷ್ ಭಾಷೆಯಲ್ಲಿ 'ಗೀತಾಂಜಲಿ' ಪ್ರಕಟವಾದದ್ದು ಈ ಅಡ್ಡಿಯನ್ನು ಕಿತ್ತುಹಾಕಿ ಅವರನ್ನು ಜಗತ್ತಿನ ಕಣ್ಣುಗಳಿಗೆ ತೋರಿಸಿಕೊಟ್ಟಿತು. ಅವರು ಜಗತ್ತಿನ ಅತಿ ಶ್ರೇಷ್ಠ ಸಾಹಿತಿಗಳಲ್ಲಿ ಒಬ್ಬರೆಂಬುದನ್ನು ಪಾಶ್ಚಾತ್ಯ ಜಗತ್ತು ಕಂಡುಕೊಂಡಿತು. ಸಾಹಿತ್ಯಕ್ಕಾಗಿ ನೀಡುವ ನೊಬೆಲ್ ಪಾರಿತೋಷಿಕ ಅವರಿಗೆ ದೊರೆತಿದ್ದರಿಂದ, ಸಾಹಿತ್ಯ ಕೃತಿಗಳ ಸತ್ವವನ್ನು ನಿರ್ಧರಿಸುವ ಜಗತ್ತಿನ ಅತ್ಯುನ್ನತ ಸಂಸ್ಥೆಯ ಒಪ್ಪಿಗೆಯ ಮುದ್ರೆ ಅವರ ನಿರ್ಣಯಕ್ಕೆ ದೊರೆತಂತಾಯಿತು.

ತಮ್ಮ ಜೀವನದ ಮೊದಲ ಭಾಗದಲ್ಲಿ ಠಾಕೂರರಿಗೆ ತಮ್ಮ ಸಂಸ್ಕೃತಿ ಪರಂಪರೆಯಲ್ಲಿ ವಿಶೇಷ ಅಭಿಮಾನವಿತ್ತು. ಬಂಗಾಳಿಯಾಗಿದ್ದ ಅವರು ಜಗತ್ತಿನ ಸಂಗೀತ ಗೋಷ್ಠಿಗೆ ಇನ್ನೂ ಮಧುರವಾದ ದನಿಯನ್ನು ಸೇರಿಸಲು ಬಂಗಾಳಿ ಗೋಷ್ಠಿಯನ್ನು ಸೇರಬೇಕೆಂಬ ತೀವ್ರ ಇಚ್ಛೆಯನ್ನು ವ್ಯಕ್ತಪಡಿಸಿದ್ದರು. ಭಾರತೀಯರಾಗಿದ್ದ ಅವರು, ಭಾರತದ ದನಿ ಹಿಂದಿನ ಕಾಲದಲ್ಲಿ ದೇಶದ ಗಡಿಯಾಚೆ ಕೇಳಿದಂತೆ ಮತ್ತೆ ಕೇಳುವಂತಾಗಬೇಕೆಂದು ಹಂಬಲಿಸುತ್ತಿದ್ದರು. ತಮ್ಮ ಶಕ್ತಿಗಳನ್ನು ಬೆಳೆಸಿಕೊಂಡು, ತಮ್ಮ ಸಾಹಿತ್ಯವನ್ನು ಶ್ರಿಮಂತಗೊಳಿಸಿದ ಠಾಕೂರರು ಈ ಎರಡೂ ಆಸೆಗಳನ್ನು ಪೂರೈಸಲು ಅರ್ಹತೆಯನ್ನು ಸಾಧಿಸಿದ್ದರಲ್ಲವೆ ?

ಠಾಕೂರರು ಜಗತ್ತಿನ ಮಹಾವ್ಯಕ್ತಿಗಳ ಪಂಕ್ತಿಗೆ ಏರಿದ್ದುದು ಮತ್ತು ಸಾಹಿತ್ಯದಲ್ಲಿ ಅವರ ಸಾಧನೆ--ಇವುಗಳಿಂದ ಭಾರತದ ಆಧ್ಯಾತ್ಮಿಕ ರಾಯಭಾರಿಯ ಪಾತ್ರವನ್ನು ಅವರು ಯೋಗ್ಯವಾಗಿ ಸ್ವೀಕರಿಸಬಹುದೆಂಬ ವಿಚಾರವು ಆ ಯುಗದ ಭಾರತದ ಹಿರಿಯ ರಾಜಕೀಯ ನಾಯಕರಲ್ಲಿ ಒಬ್ಬರ ಮನಸ್ಸನ್ನಾದರೂಸೆಳೆಯಿತು. ಮಹಾತ್ಮ ಗಾಂಧಿಯವರು ಇನ್ನೂ ಭಾರತದ ರಾಜಕೀಯದ ಕ್ಷೇತ್ರದಲ್ಲಿ ಕಾಣಿಸಿಕೊಂಡಿರಲಿಲ್ಲ. ಆ ಕಾಲದಲ್ಲಿ, ಅವರ ತ್ಯಾಗ, ವಿದ್ವತ್ತು, ಪ್ರಜ್ವಲಿಸುವ

ರಾಷ್ಟ್ರಪ್ರೇಮ ಇವುಗಳಿಂದ ಭಾರತದಲ್ಲಿ ಎಲ್ಲೆಲ್ಲೂ ಅತ್ಯಂತ ಗೌರವದಿಂದ ಜನ ಕಾಣುತ್ತಿದ್ದ ಅತ್ಯಂತ ಹಿರಿಯ ರಾಜಕೀಯ ನಾಯಕರು ಮಹಾರಾಷ್ಟ್ರದ ಬಾಲ ಗಂಗಾಧರ ತಿಲಕರು. ಪ್ರಾಯಶಃ ಈ ಪಾತ್ರವನ್ನು ವಹಿಸಿಕೊಳ್ಳಲು ಠಾಕೂರರಿಗೇ ಅಂತರ್ವಾಣಿಯ ಪ್ರೇರಣೆ ಇದ್ದಿರಬಹುದು. ತಿಲಕರಂತಹ ಹಿರಿಯರಿಗೇ ಸ್ವತಂತ್ರ ವಾಗಿ ಇಂತಹದೇ ವಿಚಾರಗಳಿದ್ದವೆಂಬುದು ಅವರಿಗೆ ತುಂಬ ಸಮಾಧಾನವನ್ನು ತಂದು ಕೊಟ್ಟಿರಬೇಕು. ರಾಜಕೀಯ ಲೇಪವಿದ್ದ ಭಾಷಣಗಳನ್ನು ನೀಡಲು ತಾವು ವಿದೇಶಯಾತ್ರೆಯನ್ನು ಕೈಗೊಳ್ಳಬೇಕೆಂದು ತಿಲಕರ ಅಪೇಕ್ಷೆಯಾಗಿರಬಹುದೇ ಎಂದು ಠಾಕೂರರಿಗೆ ಸ್ವಲ್ಪ ಸಂದೇಹವಿತ್ತು. ಆದರೆ ತಿಲಕರೇ ಈ ವಿಷಯವನ್ನು ಸ್ಪಷ್ಟ ಗೊಳಿಸಿದಾಗ ಈ ಭಾವನೆ ಅವರ ಮನಸ್ಸಿನಿಂದ ಅಳಿಸಿ ಹೋಯಿತು. ತಮ್ಮ ವಿಚಾರವನ್ನು ತಿಲಕರು ಆಶೀರ್ವದಿಸಿದ ಬಗೆಯನ್ನು ಠಾಕೂರರು ಹೀಗೆ ನಿರೂಪಿಸಿದ್ದಾರೆ :

"ಆಗ ಲೋಕಮಾನ್ಯ ತಿಲಕರು ಬದುಕಿದ್ದರು. ಒಬ್ಬ ದೂತನ ಮೂಲಕ ಅವರು ನನಗೆ ಐವತ್ತು ಸಹಸ್ರ ರೂಪಾಯಿಗಳನ್ನು ಕಳುಹಿಸಿಕೊಟ್ಟು, ನಾನು ಯೂರೋಪಿಗೆ ಭೇಟಿ ನೀಡಬೇಕೆಂಬ ಅಪೇಕ್ಷೆಯನ್ನು ತಿಳಿಸಿದರು. ಅಸಹಕಾರ ಚಳುವಳಿ ಇನ್ನೂ ಪ್ರಾರಂಭವಾಗಿರಲಿಲ್ಲ. ಆದರೆ ರಾಜಕೀಯ ಆಂದೋಳನ ಒಂದು ಚಂಡಮಾರುತದಂತೆ ಪ್ರಬಲವಾಗಿತ್ತು. ನಾನು ರಾಜಕೀಯ ಆಗು ಹೋಗುಗಳಲ್ಲಿ ತೊಡಗಬೇಕೆಂದು ತಮ್ಮ ಅಪೇಕ್ಷೆಯಲ್ಲ ಎಂದು ಅವರು ತಿಳಿಸಿದರು. ಭಾರತದ ಪರವಾಗಿ ನಾನು ಕೊಂಡೊಯ್ಯಬಹುದಾದ ಸಂದೇಶವೇ ನನಗೆ ಯೋಗ್ಯ ಕೆಲಸ, ಅಂತಹ ಕೆಲಸದಿಂದಲೇ ನಾನು ಭಾರತಕ್ಕೆ ನಿಜವಾಗಿ ಸೇವೆ ಸಲ್ಲಿಸಲು ಸಾಧ್ಯ ಎಂದು ತಿಳಿಸಿದರು."*

ರಾಜಕೀಯದ ಲೇಪವಿಲ್ಲದಿದ್ದರೆ ಠಾಕೂರರು ಆಗ ಭಾರತದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಆಂದೋಳನದ ಯಶಸ್ಸಿಗೆ ಸಹಕಾರಿಯಾಗುವ ವಾದವನ್ನು ಮುಂದಿಡಲು ಇನ್ನೂ ಪ್ರಭಾವಶಾಲಿಯಾದ ನೈತಿಕ ಶಕ್ತಿಯಾಗಬಲ್ಲದು ಎಂಬು ದನ್ನು ಗುರುತಿಸುವ ಸೂಕ್ಷ್ಮ ಪರಿಗ್ರಹಣಶಕ್ತಿ ಲೋಕಮಾನ್ಯ ತಿಲಕರಿಗಿತ್ತು. ಭಾರತದ ಆಧ್ಯಾತ್ಮಿಕ ರಾಯಭಾರಿಯಾಗಿ ಅವರು ಭಾರತದ ವಾಣಿ ಜಗತ್ತಿನಲ್ಲೆಲ್ಲ

* "ಪಶ್ಚಿಮ್ ಜಾತ್ರಿರ್ ಡೈರಿ"

ಕೇಳಿ ಬರುವಂತೆ ಮಾಡಬಲ್ಲವರಾಗಿದ್ದರು. ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಇತರ ದೇಶಗಳವರಿಗೆ ತಿಳಿಸಿಕೊಟ್ಟು ಅವರು ಭಾರತಕ್ಕೆ ಅದ್ಭುತವಾದ ಸದ್ಭಾವನೆಯನ್ನು ಗಳಿಸಿಕೊಡಬಲ್ಲವರಾಗಿದ್ದರು. ಈ ಪಾತ್ರಕ್ಕಾಗಿಯೇ ರೂಪುಗೊಂಡಿದ್ದರು ಅವರು. ಅವರ ಸೂಕ್ಷ್ಮ ಹೃದಯವೂ ಶಕ್ತಿಶಾಲಿ ಧೀಮಂತಿಕೆಯೂ ಭಾರತದ ಸಂಸ್ಕೃತಿಯಲ್ಲಿ ಒಳ್ಳೆಯದಾದುದನ್ನೆಲ್ಲ ಹೀರಿಕೊಂಡಿದ್ದವು. ರಾಷ್ಟ್ರದ ಸಂಸ್ಕೃತಿಯನ್ನು ಅಡಗಿಸಿಕೊಂಡು ಅದನ್ನು ತಮ್ಮ ಜೀವಂತ ಭಾಗವಾಗಿ ಮಾಡಿಕೊಂಡು, ಅದಕ್ಕೆ ತಮ್ಮದೇ ಆದ ಕೊಡುಗೆಯಾಗುವಂತೆ ಹೊಸ ರೂಪ ಕೊಡುವ ಶಕ್ತಿ ಅವರ ಸ್ವತಂತ್ರ ವಿಚಾರ ರೀತಿಯಾಗಿತ್ತು. ಹೀಗೆ ಠಾಕೂರರು ಭಾರತದ ಸಂಸ್ಕೃತಿಯ ಜೀವಂತ ಪ್ರತೀಕವಾಗಿ ಶ್ರಮಿಸಲಿಲ್ಲ, ಅತ್ಯುನ್ನತ ವ್ಯಕ್ತಿಯಾಗಿ ಕಣ್ಸೆಳೆಯುವಂತಿದ್ದರು.

ಸುದೈವದಿಂದ ಠಾಕೂರರಿಗೆ ಪ್ರವಾಸವೆಂದರೆ ಪ್ರೀತಿ. ಈ ಗುಣ ಅವರಿಗೆ ಅವರ ತಂದೆಯಿಂದ ಬಂದಿದ್ದಿರಬೇಕು. ನಮಗೆ ತಿಳಿದಂತೆ ಮಹರ್ಷಿಯವರಿಗೆ ಪ್ರವಾಸ ಮಾಡುವುದೆಂದರೆ ಇಷ್ಟ. ಅವರು ಭಾರತದಲ್ಲಿ ದೂರ ದೂರದ ಸ್ಥಳಗಳಿಗೆ ಭೇಟಿ ನೀಡಿದ್ದರು. ಒಮ್ಮೆ ಹಡಗಿನಲ್ಲಿ ಕೊಲಂಬೊಗೆ ಸಹ ಹೋಗಿ ಬಂದರು. ಕಲ್ಕತ್ತೆಯಲ್ಲಿ ತಮ್ಮ ಪೂರ್ವಿಕರ ಮನೆಯಲ್ಲಿ ವಾಸವಾಗಿದ್ದಾಗ ಮಳೆಗಾಲ ಕಳೆಯಲು ಅವರು ಊರು ಬಿಟ್ಟು ಹೋಗುತ್ತಿದ್ದರು. ಚಟುವಟಿಕೆಯ ಜೀವನದಿಂದ ವಿಶ್ರಾಂತಿ ಪಡೆದಾಗ ಅವರು ಬಹು ಕಾಲವನ್ನು ಹಿಮಾಲಯದ ತಪ್ಪಲಲ್ಲಿ ಕಳೆಯುತ್ತಿದ್ದರು. ತಮ್ಮ ಜೀವನದ ಪ್ರಾರಂಭದಲ್ಲಿ ಮನೆಯಲ್ಲಿ ಬಂಧನದಲ್ಲಿದ್ದಂತೆ ಇರುವ ಶಿಕ್ಷೆ ಅನುಭವಿಸಿದ ಠಾಕೂರರಿಗೆ ಪ್ರವಾಸದಲ್ಲಿ ಬಹು ಪ್ರೀತಿ ಬೆಳೆದು ಬಂದಿತು. ಅವರ ಕುಟುಂಬದ ಆಸ್ತಿಯ ನಿರ್ವಹಣೆಯನ್ನು ಅವರು ವಹಿಸಿಕೊಂಡಿದ್ದಕ್ಕೂ ಇದೇ ಕಾರಣವಿರಬಹುದು. ಈ ನಿರ್ವಹಣೆಗಾಗಿ ಅವರು ಉತ್ತರ ಬಂಗಾಳದ ಗ್ರಾಮಾಂತರ ಪ್ರದೇಶದಲ್ಲಿ ಮಾತ್ರವಲ್ಲ, ಒರಿಸ್ಸದಲ್ಲೂ ಮತ್ತೆ ಮತ್ತೆ ಪ್ರಯಾಣ ಮಾಡಬೇಕಾಗುತ್ತಿತ್ತು. ಭಾರತದ ಪ್ರತಿನಿಧಿಯಾಗಲು ತಾವೇ ನಿಶ್ಚಯಿಸಿಕೊಂಡು ದೇಶದಾಚೆ ಅವರು ಮತ್ತೆ ಮತ್ತೆ ಕೈಗೊಂಡ ಪ್ರವಾಸಗಳು ಬೇಸರ ಮತ್ತು ದೈಹಿಕ ಬಳಲಿಕೆಗಳನ್ನು ಕಡಿಮೆ ಮಾಡುವುದರಲ್ಲಿ ಅವರ ಪ್ರವಾಸ ಮೋಹ ತುಂಬಾ ನೆರವಾಗಿರಬೇಕು.

ಉಪನ್ಯಾಸ ಪ್ರವಾಸಗಳನ್ನು ಕೈಗೊಳ್ಳಲು ಬಂದ ಆಹ್ವಾನಗಳನ್ನು ಒಪ್ಪಿ

ಜಗತ್ತಿನ ಬೇರೆ ಬೇರೆ ಭಾಗಗಳಿಗೆ ಹೋದಾಗ ಠಾಕೂರರು ತಮ್ಮದೇ ರೀತಿಯನ್ನು ಅನುಸರಿಸಿದರು. ತಮ್ಮ ತರುಣ ಸ್ನೇಹಿತರ ಮತ್ತು ಅಭಿಮಾನಿಗಳ ಒಂದು ತಂಡವನ್ನು ತಪ್ಪದೆ ಅವರು ಜೊತೆಗೆ ಕರೆದುಕೊಂಡು ಹೋಗುತ್ತಿದ್ದರು. ತಮ್ಮ ದಿನಚರಿಯಲ್ಲಾಗಲಿ ಪತ್ರಗಳಲ್ಲಾಗಲಿ ತಮ್ಮ ಅನುಭವಗಳ ದಾಖಲೆಯನ್ನು ಇಡುತ್ತಿದ್ದರು. ಹೊರದೇಶಗಳ ಪ್ರವಾಸಗಳಲ್ಲಿ ತುಂಬಿ ತುಳುಕುತ್ತಿದ್ದ ಶ್ರೀಮಂತ ಅನುಭವವು ಈ ರೀತಿಯಲ್ಲಿ ಅವರ ತರುಣ ಮಿತ್ರರಿಗೆ ಲಭ್ಯವಾಗುತ್ತಿತ್ತು. ಅವರ ಎರಡನೆಯ ಅಭ್ಯಾಸದಿಂದ ಅವರು ಬೇರೆ ದೇಶಗಳಲ್ಲಿ ಕಂಡ ಜನರು ಮತ್ತು ಸಂಸ್ಕೃತಿಗಳಿಗೆ ಪ್ರತಿಕ್ರಿಯೆಯ ನೆಚ್ಚಬಹುದಾದ ಸಾಕ್ಷ್ಯಾಧಾರ ನಮಗೆ ದೊರೆತಿದೆ.

ಇಂಗ್ಲೀಷ್ 'ಗೀತಾಂಜಲಿ'ಯ ಪ್ರಕಟಣೆ ಮತ್ತು ಸಾಹಿತ್ಯಕ್ಕೆ ನೀಡುವ ನೋಬೆಲ್ ಬಹುಮಾನಕ್ಕೆ ಅದರ ಆಯ್ಕೆ ಇವುಗಳಿಂದುಂಟಾದ ಅದ್ಭುತ ಪ್ರಚಾರದ ದೆಸೆಯಿಂದಾಗಿ ಆಹ್ವಾನಗಳ ಆಗಮನಕ್ಕೆ ತಡವೇನೂ ಆಗಲಿಲ್ಲ. 1914ರ ಆಗಸ್ಟ್ ತಿಂಗಳಿನಲ್ಲಿ ಪ್ರಾರಂಭವಾಗಿ ಇಡೀ ಜಗತ್ತನ್ನೇ ಆವರಿಸಿದ ಮೊದಲನೆಯ ಮಹಾ ಯುದ್ಧದಿಂದಲೂ ಇದಕ್ಕೆ ಸಂಪೂರ್ಣ ಅಡ್ಡಿ ಆಗಲಿಲ್ಲ. ಜಪಾನ್ ಮತ್ತು ಅಮೆರಿಕದ ಸಂಯುಕ್ತ ಸಂಸ್ಥಾನಗಳೆರಡೂ ಈ ಯುದ್ಧದಲ್ಲಿ ಸಿಕ್ಕಿಕೊಂಡರೂ ವಾಸ್ತವವಾಗಿ ಯುದ್ಧ ನಡೆಯುತ್ತಿದ್ದ ಸ್ಥಳ ಭೌಗೋಳಿಕವಾಗಿ ಬಹು ದೂರ ಇದ್ದುದರಿಂದ ಇವೆರಡೂ ಸೀಮಿತ ಪ್ರಮಾಣದಲ್ಲಿಯಾದರೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಗಮನ ಕೊಡುವುದು ಸಾಧ್ಯವಿತ್ತು. ಈ ಎರಡು ದೇಶಗಳಿಂದಲೂ 1916ರ ಪ್ರಾರಂಭದಲ್ಲಿ ಆಹ್ವಾನಗಳು ಬಂದವು.

ಜಪಾನಿನ ಕವಿ, ಕವಾಗುಚಿ ಜಪಾನಿನಿಂದ ಆಹ್ವಾನವನ್ನು ಕಳುಹಿಸಿದರು. ಆದರೆ ಅಮೆರಿಕದಲ್ಲಿ ಠಾಕೂರರು ಅಪರಿಚಿತರೇನೂ ಆಗಿರಲಿಲ್ಲ. 'ಗೀತಾಂಜಲಿ' ಪ್ರಕಟವಾಗುವ ಮೊದಲೇ 1912 ರಲ್ಲಿ ಅವರು ಆ ದೇಶಕ್ಕೆ ಭೇಟಿ ನೀಡಿದ್ದರು. ಅವರ ಕೀರ್ತಿ ಅವರಿಗಿಂತ ಮೊದಲೇ ತಲುಪಿ, ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಉಪನ್ಯಾಸಗಳನ್ನು ಮಾಡಬೇಕೆಂದು ಅವರಿಗೆ ಆಹ್ವಾನಗಳು ಬಂದವು. ಇದರಿಂದ ಬೆಳೆದ ಅವರ ಕೀರ್ತಿಯೇ, ಮೇಜರ್ ಪಾಂಡ್ ಅವರಿಗೆ ಹಲವು ಕಾರ್ಯಕ್ರಮಗಳನ್ನೊಳಗೊಂಡ ಉಪನ್ಯಾಸ ಪ್ರವಾಸ ಒಂದು ಲಾಭಕರ ವಿಚಾರವೆಂದು ಅವರ ಮುಂದಿಡಲು ಪ್ರೇರಕವಾಗಿರಬೇಕು. ಪಾಶ್ಚಾತ್ಯ ಸಂಸ್ಕೃತಿಯ ಹೊಸ ಬೀಡಿಗೆ

ತಮ್ಮ ದೇಶವನ್ನು ಕುರಿತು ಮಾತನಾಡಲು ಅವಕಾಶದೊರಕುವುದೆಂದು ಠಾಕೂರರು ಸಹಜವಾಗಿ ಇದನ್ನು ಒಪ್ಪಿಕೊಂಡರು.

ಯುರೋಪಿನ ಮೂಲಕ ಅಮೆರಿಕಕ್ಕೆ ಹೋಗುವುದನ್ನು ಆ ದಿನಗಳಲ್ಲಿ ಯೋಚನೆ ಮಾಡುವಂತೆಯೂ ಇರಲಿಲ್ಲ. ಜಗತ್ತಿನ ಆ ಭಾಗದಲ್ಲಿ ಸಮುದ್ರ ಪ್ರಯಾಣದ ಮಾರ್ಗವು ಜರ್ಮನ್ ಸಬ್‌ಮೆರೀನುಗಳು ಮತ್ತು ಬ್ರಿಟಿಷ್ ಹಡುಗುಗಳ ನಡುವಿನ ನಿರ್ದಯ ಕಾಳಗದ ಬೀಡಾಗಿತ್ತು. ಆದ್ದರಿಂದ ಶಾಂತಿ ಸಾಗರವನ್ನು ದಾಟಿ ಹೋಗಿ, ಅದೇ ಮಾರ್ಗವಾಗಿ ಹಿಂದಿರುಗಲು ವ್ಯವಸ್ಥೆ ಯಾಯಿತು. ಅಮೆರಿಕಕ್ಕೆ ದಾಟುವ ಮುನ್ನ ಜಪಾನಿಗೆ ಭೇಟಿಕೊಡಲು ನಿರ್ಧಾರ ವಾಯಿತು. ಅವರೊಡನೆ ಸಿ. ಎಫ್. ಆಂಡ್ರ್ಯೂಸ್, ಠಾಕೂರರ ಮತ್ತೊಬ್ಬ ಆಂಗ್ಲೇಯ ಸ್ನೇಹಿತ, ವಿಲ್ಲೀ ಪಿಯರ್‌ಸನ್ ಮತ್ತು ಆ ಕಾಲದಲ್ಲಿ ತುಂಬ ಭರವಸೆ ಮೂಡಿಸಿದ್ದ ಕಲಾವಿದ, ಮುಕುಲ್ ಡೇ ಇಷ್ಟು ಜನ ಹೊರಟರು.

ಜಪಾನಿನಲ್ಲಿ ಠಾಕೂರರು ಕೋಬ್‌ನಲ್ಲಿ ದಡ ಮುಟ್ಟಿದರು. ಅಲ್ಲಿಂದ ಒಸಾಕಾಕ್ಕೆ ಹೋದರು. ಈ ಎರಡು ಸ್ಥಳಗಳಲ್ಲಿ ಸ್ವಲ್ಪಕಾಲವಿದ್ದು ಟೋಕಿಯೋಕ್ಕೆ ಹೋದರು. ಅಲ್ಲಿ ಅವರ ಕುಟುಂಬದ ಗೆಳಯ ಮತ್ತು ಪ್ರಸಿದ್ಧ ಜಪಾನೀ ಕಲಾವಿದ, ಟೈಕ್ಕನರ ಅತಿಥಿಯಾಗಿದ್ದರು. ಆ ನಗರದಲ್ಲಿ ಸ್ವಾಗತ ಸಮಾರಂಭಗಳೂ ಉಪನ್ಯಾಸಗಳೂ ಮುಗಿದ ನಂತರ ಜಪಾನೀ ನೆಲದ ಸಂಸ್ಕೃತಿಯ ನಿಕಟ ಪರಿಚಯ ಅವರಿಗೆ ದೊರೆಯಲು ಸಾಧ್ಯವಾಗುವಂತೆ ಗ್ರಾಮಾಂತರ ಪ್ರದೇಶದ ಏಕಾಂತದಲ್ಲಿ ಅವರು ಇರಲು ವ್ಯವಸ್ಥೆಯಾಯಿತು.

ಜಪಾನಿನಲ್ಲಿ ಮೂರು ತಿಂಗಳ ಕಾಲವಿದ್ದು ಠಾಕೂರರು ಅಮೆರಿಕಕ್ಕೆ ಹೊರಟರು. ಆಂಡ್ರ್ಯೂಸರು ಅವರನ್ನು ಬೀಳ್ಕೊಂಡು ಭಾರತಕ್ಕೆ ಹಿಂದಿರುಗಿದರು. ಆದುದರಿಂದ ಪ್ರಯಾಣದ ಉಳಿದ ಭಾಗದಲ್ಲಿ ಪಿಯರ್‌ಸನ್ ಮತ್ತು ಮುಕುಲ್ ಡೇ ಮಾತ್ರ ಅವರೊಡನಿದ್ದರು.

ಮೇಜರ್ ಪಾಂಡ್ ಮಾಡಿದ್ದ ವ್ಯವಸ್ಥೆಯಂತೆ, ಅಮೆರಿಕದಲ್ಲಿ ಅವರಿಗೆ ದೀರ್ಘವಾದ ಮತ್ತು ಶ್ರಮದಾಯಕವಾದ ಉಪನ್ಯಾಸ ಕಾರ್ಯಕ್ರಮ ಏರ್ಪಟ್ಟಿತ್ತು. ಇಡೀ ದೇಶದಲ್ಲಿ ಒಂದು ತೀರದಿಂದ ಮತ್ತೊಂದು ತೀರದವರಗೆ ಸುತ್ತಾಡಬೇಕಿತ್ತು. ದೂರದೂರದ ಸ್ಥಳಗಳಿಗೆ ರೈಲಿನಲ್ಲಿ ಪ್ರಯಾಣ, ಮಧೆ

ಸ್ವಲ್ಪಕಾಲ ಮಾತ್ರ ಒಂದೆಡೆ ನಿಲ್ಲುವುದು. ಸಾಕಷ್ಟು ಕಾಲ ಅವರು ಈ ಕಾರ್ಯಕ್ರಮಕ್ಕೆ ಅಂಟಿಕೊಂಡರು. ಆದರೆ ಆದರಿಂದ ತೀರ ದೈಹಿಕ ಶ್ರಮವಾಗಿ ಉಳಿದ ಭಾಗವನ್ನು ರದ್ದು ಮಾಡಿದರು. ಈ ಹೊತ್ತಿಗಾಗಲೆ ಅವರು ಸಾನ್ ಫ್ರಾನ್ಸಿಸ್ಕೋ, ಲಾಸ್ ಆ್ಯಂಜಲೀಸ್, ಶಿಕಾಗೊ ಮತ್ತು ಬಾಸ್ಟನ್‌ನಂತಹ ಹಲವಾರು ಸ್ಥಳಗಳಿಗೆ ಹೋಗಿದ್ದರು. ಶಾಂತಿಸಾಗರವನ್ನು ದಾಟಿ ಹಿಂದಿರುಗುವಾಗ ಅವರು ಸ್ವಲ್ಪ ಕಾಲ ಜಪಾನಿನಲ್ಲಿ ಉಳಿದರು. ಅವರ ಪ್ರವಾಸ 1916ರ ಮೇ ತಿಂಗಳಿನಲ್ಲಿ ಪ್ರಾರಂಭವಾಗಿ 1917ರ ಮಾರ್ಚ್ ತಿಂಗಳಲ್ಲಿ ಮುಕ್ತಾಯವಾಯಿತು.

ಅವರ ಪ್ರಥಮ ಭೇಟಿಯಾದ ಮೇಲೆ ಠಾಕೂರರಿಗೆ ಜಪಾನಿನ ವಿಷಯವಾಗಿ ಸಂತೋಷದ ಭಾವನೆ ಮೂಡಿದಂತೆ ಕಾಣುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಜನರೊಡನೆ ನಿಕಟ ಸಂಪರ್ಕ ಪಡೆಯುವ ಅವಕಾಶ ದೊರೆತಿದ್ದರಿಂದ ಅವರ ವಿಶಿಷ್ಟ ಸ್ವಭಾವದ ಪರಿಚಯ ಅವರಿಗೆ ಸಾಧ್ಯವಾಯಿತು. ಅವರ ತೀಕ್ಷ್ಣ ಸೌಂದರ್ಯ ಪ್ರಜ್ಞೆಯನ್ನು ಠಾಕೂರರು ಮೆಚ್ಚಿಕೊಂಡರು. ಜಪಾನ್ ಪರ್ವತ ಶ್ರೇಣಿಗಳ ಮತ್ತು ವೇಗವಾಹಿನಿಗಳಾದ ನದಿಗಳ ನಾಡು. ಸಮುದ್ರದ ತೆರೆಗಳು ಅದರ ವಿಶಾಲ ತೀರಗಳಿಗೆ ಅಪ್ಪಳಿಸುತ್ತವೆ. ಹಿಮಮುಕುಟಧಾರಿ, ಫ್ಯೂಜಿಯಾಮ ಅವುಗಳ ರಕ್ಷಕನಾಗಿ ನಿಂತಿದೆ. ಆದುದರಿಂದ ಸಹಜವಾಗಿ ಜನರ ಸೌಂದರ್ಯ ಪ್ರಜ್ಞೆ ವಿಶಿಷ್ಟವಾಗಿ ಬೆಳೆದಿತ್ತು. ಇದು ಅರ್ಥವಾಗುವಂತಹುದೇ. ಆದರೆ ಈ ಸೌಂದರ್ಯ ಪ್ರಜ್ಞೆ ಯಾವ ತುದಿಗೆ ಮುಟ್ಟಿತ್ತು ಎಂಬುದು ಠಾಕೂರರಿಗೆ ತಿಳಿದಿರಲಿಲ್ಲ. ಈ ಜನ ತಮ್ಮ ಸೌಂದರ್ಯ ಪ್ರಜ್ಞೆಯ ಸಂತೃಪ್ತಿಗಾಗಿ ಅತ್ಯಗತ್ಯ ಅವಶ್ಯಕತೆಗಳನ್ನು ಬಿಟ್ಟುಬಿಡಲು ಸಿದ್ಧರಾಗಿದ್ದರೆಂಬ ಸಂಗತಿಯಿಂದ ಇದನ್ನು ಊಹಿಸಬಹುದು. ಈ ವಿಷಯ ಠಾಕೂರರು ಹೇಳಿರುವುದನ್ನು ಅವರ ಮಾತುಗಳಲ್ಲಿ ಕೇಳೋಣ :

"ಒಂದು ಇಂದ್ರಿಯವನ್ನು ಕಡೆಗಣಿಸಿ ಮತ್ತೊಂದರ ಶಕ್ತಿಯನ್ನು ಬೆಳೆಸುವುದು ಸಾಧ್ಯ ಎಂಬುದನ್ನು ನೋಡಿದ್ದೇವೆ. ಸೌಂದರ್ಯ ಪ್ರಜ್ಞೆ ಮತ್ತು ಭಾವನೆಗಳೆರಡೂ ಹೃದಯಕ್ಕೆ ಸಂಬಂಧಿಸಿದವು. ಇಲ್ಲಿಗೆ ಬಂದಾಗಿನಿಂದ ನನ್ನ ಗಮನವನ್ನು ತೀವ್ರವಾಗಿ ಸೆಳೆದಿರುವ ಅಂಶ ಇದು : ಭಾವನೆ ಮತ್ತು ಅದರ ಅಭಿವ್ಯಕ್ತಿಗಳ ಕ್ಷೇತ್ರಗಳನ್ನು ಮಿತಗೊಳಿಸಿ ಸೌಂದರ್ಯ ಪ್ರಜ್ಞೆಯನ್ನೂ ಅದರ ಅಭಿವ್ಯಕ್ತಿಯ ಸಾಮರ್ಥ್ಯವನ್ನೂ ಬೆಳೆಸುವುದೂ ಸಾಧ್ಯ. ನಮ್ಮ ದೇಶದಲ್ಲೂ, ಬೇರೆಡೆಯಲ್ಲಿಯೂ ಭಾವೋತ್ಸಾಹ ಉಕ್ಕಿ ಹರಿಯುವುದನ್ನು ಹಲವಾರು ಬಾರಿ ಕಂಡಿದ್ದೇನೆ. ಇಲ್ಲಿ

ಅದು ಕಾಣುವುದೇ ಇಲ್ಲ. ಸೌಂದರ್ಯಾನುಭವದ ಸಾಕ್ಷ್ಯವನ್ನು ಎಷ್ಟು ಸಮೃದ್ಧಿಯಾಗಿ ಎಷ್ಟು ವಿಶಾಲವಾಗಿ ಕಾಣುತ್ತಿದ್ದೇನೆಂದರೆ ಈ ಅಸಾಧಾರಣ ಸಂಗತಿ ನಮಗೆ ಅರ್ಥವೇ ಆಗಲಾರದೆಂಬುದು ನನಗೆಸ್ಪಷ್ಟವಾಗಿದೆ. ತೀರಬಡವನಾದ ಮನುಷ್ಯನೂ ಇಲ್ಲಿ ಒಂದು ಪೆನ್ನಿಗ* ಬರುವಷ್ಟು ಹೂವುಗಳನ್ನು ಕೊಳ್ಳಲಿಕ್ಕಾಗಿ ಎಂದೇ ಪ್ರತಿನಿತ್ಯ ತನ್ನ ಆಹಾರವನ್ನೆ ಬಿಟ್ಟು ಬಿಡುತ್ತಾನೆ. ಅವರ ಕಣ್ಣ ಹಸಿವು ಅವರ ಹೊಟ್ಟೆಯ ಹಸಿವಿಗಿಂತ ಯಾವ ರೀತಿಯಲ್ಲೂ ಕಡಮೆಯಿಲ್ಲ."**

ಜಪಾನಿನಲ್ಲಿ ಠಾಕೂರರ ಮೇಲೆ ಗಾಢ ಪರಿಣಾಮ ಬೀರಿದ್ದು ಜಪಾನೀ ನೃತ್ಯದ ಉನ್ನತ ಸೌಂದರ್ಯ ಲಕ್ಷಣ. ಅದು ಅವರ ಅಭಿರುಚಿಗೆ ಸಂಪೂರ್ಣವಾಗಿ ಹೊಂದಿಕೊಂಡಿತು. ಅದು ತೀರ ಔಚಿತ್ಯ, ಗಾಂಭೀರ್ಯಗಳಿಂದ ಕೂಡಿದ್ದು ಸೌಂದರ್ಯ ಪ್ರಜ್ಞೆಯನ್ನಷ್ಟೇ ಆಕರ್ಷಿಸುತ್ತಿತ್ತು. ಜಪಾನೀ ನೃತ್ಯವನ್ನು ಮೆಚ್ಚಿ ಅವರು ಹೀಗೆ ಬರೆದರು.

"ನಾನು ಒಂದು ದಿನ ಜಪಾನೀ ನೃತ್ಯ ಪ್ರದರ್ಶನಕ್ಕೆ ಹೋದೆ. ಅದು ಶಾರೀರಿಕ ಚಲನವಲನಗಳ ಮಧುರ ಸಂಗೀತ ಎನ್ನಿಸಿತು ನನಗೆ. ನಮ್ಮ ದೇಶದಲ್ಲಿ ವೀಣೆಯನ್ನು ನುಡಿಸಿದಾಗ ಮೂಡುವ ಸಂಗೀತದೊಂದಿಗೆ ಅದನ್ನು ಹೋಲಿಸಬಹುದು. ಎರಡು ಘಟಕಗಳ ನಡುವೆ ಭೇದವೆಂಬುದಿಲ್ಲ. ಬೇರೆ ಬೇರೆ ಭಂಗಿಗಳ ನಡುವೆ ತಡವಿಲ್ಲ. ಭಾಗಗಳನ್ನು ಜೊಡಿಸಿರುವ ಸೂಚನೆಯೂ ಇಲ್ಲ. ಇಡೀ ದೇಹಪುಷ್ಪಭರಿತ ಬಳ್ಳಿಯಂತೆ ಬಾಗುತ್ತದೆ, ಚೆಲುವಿನಹೂಗಳ ಮಳೆಗರೆಯುತ್ತದೆ. ಜಪಾನೀ ನೃತ್ಯ ಎಂದರೆ ಪರಿಶುದ್ಧ ನೃತ್ಯವಷ್ಟೆ. ಆ ಉಡುಪು ಶರೀರವನ್ನು ಒಂದಿಷ್ಟನ್ನೂ ಪ್ರದರ್ಶಿಸಲು ಅವಕಾಶ ನೀಡುವುದಿಲ್ಲ. ಇತರ ದೇಶಗಳ ನೃತ್ಯದಲ್ಲಿ ಸುಂದರ ಶಾರೀರಕ ಚಲನೆಯೊಂದಿಗೆ ಕಾಮದೋಲವೂ ಉಂಟು. ಈ ನೃತ್ಯದಲ್ಲಿ ಕಾಮದ ಚಿಹ್ನೆಯೂ ಕಾಣಬರದು."***

* "ಜಪಾನ್ ಜಾತ್ರಿ", 13

** ಬ್ರಿಟನ್ನಿನಲ್ಲಿ ಚಲಾವಣೆಯಲ್ಲಿದ್ದ ಒಂದು ನಾಣ್ಯ.

*** "ಜಪಾನ್ ಜಾತ್ರಿ", 14

ಅಮೆರಿಕದಲ್ಲಿ ಠಾಕೂರರು ಹಲವು ವಿಷಯಗಳ ಮೇಲೆ ಉಪನ್ಯಾಸ ಮಾಲೆಯನ್ನು ಮುಗಿಸಿದರು. ಶಾಂತಿನಿಕೇತನದಲ್ಲಿ ತಮ್ಮ ಶಾಲೆಯ ವಿಷಯವಾಗಿ, ಕಲೆಯ ವಿಷಯವಾಗಿ ಮಾತನಾಡಿದರು. ಸಂಪೂರ್ಣವಾಗಿ ಆಧ್ಯಾತ್ಮಿಕ ವಿಷಯವೊಂದನ್ನು ಕುರಿತು ಮಾತನಾಡಿ, ಮನುಷ್ಯನು ಸೃಜನ ಶೀಲತೆಯಿಂದ ತನ್ನ ಸ್ವಂತ ಕ್ಷಿತಿಜವನ್ನು ವಿಸ್ತರಿಸಿಕೊಳ್ಳಬಹುದು, ಎರಡನೆಯ ಜನ್ಮವನ್ನೇ ಸಾಧಿಸಬಹುದು ಎನ್ನುವ ಸಿದ್ಧಾಂತವನ್ನು ವಿವರಿಸಿದರು. ಅವರು ಮಾಡಿದ ಉಪನ್ಯಾಸಗಳನ್ನು ಸಂಗ್ರಹಿಸಿ 'ಪರ್ಸನಾಲಿಟಿ' ಎಂದ ಹೆಸರು ಕೊಟ್ಟು ಪುಸ್ತಕ ರೂಪದಲ್ಲಿ ಪ್ರಕಟಿಸಲಾಯಿತು. ಈ ಹೊತ್ತಿಗೆ ಅವರ ಆತ್ಮೀಯ ಗೆಳೆಯರಾಗಿ ಹೋಗಿದ್ದ ಸಿ. ಎಫ್. ಆಂಡ್ರ್ಯೂಸರಿಗೆ ಈ ಪುಸ್ತಕವನ್ನು ಅರ್ಪಿಸಲಾಯಿತು.

ಮುಂದಿನ ಪ್ರವಾಸದ ಕಾರ್ಯಕ್ರಮವು 1920ರ ಮೇ ತಿಂಗಳಿನಲ್ಲಿ ಪ್ರಾರಂಭವಾಗಿ 1921ರ ಜುಲೈವರೆಗೆ ಮುಂದುವರೆಯಿತು. ಬ್ರಿಟನ್, ಅಮೇರಿಕದ ಸಂಯುಕ್ತ ಸಂಸ್ಥಾನಗಳು, ಫ್ರಾನ್ಸ್, ಜರ್ಮನಿ, ಸ್ವೀಡನ್ ಮತ್ತು ಹಲವು ದೇಶಗಳ ಪ್ರವಾಸಗಳು ಸೇರಿದ್ದ ಈ ಕಾರ್ಯಕ್ರಮದಲ್ಲಿ ಬಿಡುವಿಲ್ಲದಂತಾಗಿತ್ತು. ಈ ಬಾರಿ ಅವರೊಡನೆ ಅವರ ಮಗ ಮತ್ತು ಸೊಸೆ ಹೊರಟರು. ಪ್ರವಾಸದಲ್ಲಿ ಸ್ವಲ್ಪ ಕಾಲ ಅವರ ಕಾರ್ಯದರ್ಶಿಯಾಗಿ ಪಿಯರ್‌ಸನ್ ಅವರೊಂದಿಗಿದ್ದರು.

ಅವರು ಮೊದಲು ಬ್ರಿಟನ್ನಿಗೆ ಹೋದರು. 1912 ರಲ್ಲಿ ಅವರಿಗೆ ಬಹು ಆತ್ಮೀಯ ಸ್ವಾಗತ ದೊರಕಿತ್ತು. ಅದಕ್ಕೆ ವಿರುದ್ಧವಾಗಿ ಈ ಬಾರಿ ವಿಶ್ವಾಸ ಹೀನ ಸ್ವಾಗತ ದೊರಕಿತು. ಇದಕ್ಕೆ ಕಾರಣವನ್ನು ತಿಳಿಯುವುದು ಕಷ್ಟವೇನಲ್ಲ. ಜಾಲಿಯನ್‌ವಾಲಬಾಗಿನಲ್ಲಿ ತಮ್ಮ ದೇಶಬಾಂಧವರಿಗೆ ಗುಂಡಿಟ್ಟು ಕಗ್ಗೊಲೆ ಮಾಡಿದುದನ್ನು ವಿರೋಧಿಸಿ ಅವರು ಸ್ವಲ್ಪ ಸಮಯಕ್ಕೆ ಮೊದಲು ಚಕ್ರವರ್ತಿಯು ನೀಡಿದ್ದ ನೈಟ್‌ಹುಡ್ (ಸರ್) ಪ್ರಶಸ್ತಿಯನ್ನು ತ್ಯಜಿಸಿದ್ದರು. ಬ್ರಿಟಿಷ್ ಜನ ಔಪಚಾರಿಕವಾಗಿ ಬಹು ಸೌಜನ್ಯಶೀಲರು ಮತ್ತು ತಮ್ಮ ಔದಾಸೀನ್ಯದ ಹೊರಚಿಪ್ಪನ್ನು ಬಿಟ್ಟುಕೊಟ್ಟಾಗ ತುಂಬ ಆತ್ಮೀಯತೆಯಿಂದ ನಡೆದುಕೊಳ್ಳಬಲ್ಲರು. ಆದರೆ ರಾಷ್ಟ್ರೀಯ ಹಿತದ ಪ್ರಶ್ನೆ ಬಂದಾಗ ಇನ್ನೊಬರ ನಡತೆಯನ್ನು ಅವರು ನಿರ್ಲಿಪ್ತತೆಯಿಂದ ಕಾಣಲಾರರು. ಠಾಕೂರರು ನೈಟ್ ಹುಡ್ ಅನ್ನು ತಿರಸ್ಕರಿಸಿದ್ದು ಬ್ರಿಟಿಷ್ ಜನತೆಯ ಮನಸ್ಸನ್ನು ಅವರ ವಿರುದ್ಧವಾಗಿ ತಿರುಗಿಸಿತ್ತೆಂಬುದು ಸ್ಪಷ್ಟವಾಗಿತ್ತು.

ಠಾಕೂರರು ಇಂಗ್ಲೆಂಡನ್ನು ಬಿಟ್ಟು ಫ್ರಾನ್ಸ್ ಮೂಲಕ ಅಮೆರಿಕಕ್ಕೆ ಪ್ರಯಾಣಮಾಡಿ 1920ರ ಅಕ್ಟೋಬರ್ ತಿಂಗಳ ಕೊನೆಯಲ್ಲಿ ಆ ದೇಶವನ್ನು ಮುಟ್ಟಿದರು. ಇಂಗ್ಲೆಂಡಿನಲ್ಲಿ ದೊರೆತ ಉತ್ಸಾಹಹೀನ ಸ್ವಾಗತಕ್ಕೆ ಅವರು ಸಿದ್ಧರಾಗಿದ್ದರು ಆದರೆ ಅಂತಹುದೇ ಸ್ವಾಗತ ಅಮೆರಿಕದಲ್ಲಿ ದೊರೆತೀತೆಂದು ಅವರು ನಿರೀಕ್ಷಿಸಿರಲಿಲ್ಲ. ಈ ಪ್ರತಿಕೂಲದ ಅನುಭವವು ಅವರು ಮನಸ್ಸಿನಲ್ಲಿ, ಹೃದಯದಲ್ಲಿ ಉಳಿಯಿತು. ಅವರ ಸ್ಮೃತಿಗಳಲ್ಲಿ ಅದನ್ನು ಹೀಗೆ ಬರೆದಿಟ್ಟಿದ್ದಾರೆ :

"ನನ್ನ ಅರುವತ್ತನೆಯ ವರ್ಷದಲ್ಲಿ ಕಾಲಿರಿಸುತ್ತಲೇ ನಾನು ಅಮೆರಿಕಕ್ಕೆ ಭೇಟಿಕೊಟ್ಟ ನನ್ನ ಮೇಲೆ ಹೊಣೆಯ ಹೊರೆಯೇ ಇತ್ತು. ಯೂರೋಪಿನಲ್ಲಿ ಯುದ್ಧ ಮುಗಿದಿತ್ತು. ಆದರೂ, ಯೂರೋಪಿನಲ್ಲಿ ಕಾಣದಷ್ಟು ಮಟ್ಟಿಗೆ ಅದರ ಮತ್ತು ಅಮೆರಿಕದ ಕಣ್ಣುಗಳ ಕೆಂಪು ಬಣ್ಣದಲ್ಲಿ ಕಾಣುತ್ತಿತ್ತು. ಇದಲ್ಲದೆ ಬ್ರಿಟಿಷರು ಹಲವಾರು ವಕ್ರಮಾರ್ಗಗಳಿಂದ ಅಮೆರಿಕದ ಕಿವಿಯನ್ನು ಸಂಪೂರ್ಣವಾಗಿ ವಶಮಾಡಿಕೊಂಡಿದ್ದರು...... ಅಮೆರಿಕದ ಪ್ರಜಾಪ್ರಭುತ್ವವು ತನ್ನ ಸಮಸ್ಯೆಗಳನ್ನು ಕುರಿತು ಚಿಂತಿಸುವಂತೆ ಅವರು ಮಾಡುತ್ತಿದ್ದರು. ಅವರ ಪ್ರಚಾರ ಯಂತ್ರವನ್ನು ನನ್ನ ವಿರುದ್ಧವಾಗಿ ಸಜ್ಜುಗೊಳಿಸಿದ್ದರು. ನಾನು ಅವರ ವಿಷಯ ಕಟುವಾಗಿ ಮಾತನಾಡಬಹುದೆಂದು ಬ್ರಿಟಿಷರಿಗೆ ಹೆದರಿಕೆ. ಜಾಲಿಯನ್‌ವಾಲ ಬಾಗಿನ ಘಟನೆ ನಡೆದು ಹೋಗಿತ್ತು."*

ಆಗ ಅಮೆರಿಕವು ತಾಂತ್ರಿಕ ಜ್ಞಾನದಲ್ಲಿ ಪಾಶ್ಚಾತ್ಯ ದೇಶಗಳಿಗಿಂದ ಮುಂದಿತ್ತು. ದೈತ್ಯ ಕಾರ್ಖಾನೆಗಳು ಹಿಂದೆಂದೂ ಕಾಣದಿದ್ದ ಪ್ರಮಾಣದಲ್ಲಿ ದಿನನಿತ್ಯ ಬಳಕೆಯ ವಸ್ತುಗಳ ಉತ್ಪಾದನೆಯನ್ನು ಪ್ರಾರಂಭಿಸಿದ್ದವು. ಈ ವೇಗವಾದ ತಾಂತ್ರಿಕ ಬೆಳವಣಿಗೆಯು ಸಮಾಜದ ರಚನೆಯಲ್ಲೂ ಜನತೆಯ ದೃಷ್ಟಿಕೋನದಲ್ಲೂ ವ್ಯತ್ಯಾಸವನ್ನುಂಟು ಮಾಡಿತ್ತು. ಉತ್ಪಾದನೆಯೇ ಸಂಪೂರ್ಣವಾಗಿ ನಿಯಂತ್ರಿಸುವ ಶಕ್ತಿಯಾಗಿರುವ ಸಂಕುಚಿತ ಜೀವನವನ್ನು ಅನಿವಾರ್ಯವಾಗಿ ನಡೆಸಬೇಕಾಗಿ ಬಂದಾಗ ಜನರ ಬಾಳು ವಸ್ತುಗಳ ಉತ್ಪಾದನೆ ಮತ್ತು ಅವುಗಳ ಬಳಕೆ ಇವುಗಳ ಸುತ್ತ ಮಾತ್ರವೇ ಕೇಂದ್ರೀಕೃತವಾಗುತ್ತದೆ. ದೈತ್ಯ ಯಂತ್ರಗಳು ಸಹಜವಾಗಿ ಅಗತ್ಯವಾದುದಕ್ಕಿಂತ ಹೆಚ್ಚಾಗಿ ಸಾಮಾನುಗಳನ್ನು ಉತ್ಪಾದಿಸುತ್ತವೆ.

---

* "ಪಶ್ಚಿಮ್ ಜಾತ್ರಿರ್ ಡೈರಿ"

ಇದರಿಂದ ಜನರು ಬಲಾತ್ಕಾರರೀದ ತಮ್ಮ ಅವಶ್ಯಕತೆಗಳನ್ನು ಹೆಚ್ಚಿಸಿಕೊಳ್ಳ ಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಠಾಕೂರರು, ಇಂತಹ ಮಿತಿ ಮೀರಿದ ತಾಂತ್ರಿಕ ಬೆಳೆ ವಣಿಗೆಯು ಮನುಷ್ಯನ ಸುತ್ತ ಒಂದು ಬಗೆಯ ಚಿಪ್ಪನ್ನು ಸೃಷ್ಟಿಸಿ ಅವನನ್ನು ತನ್ನ ಪರಿಸರಕ್ಕೆ ಹೊರಗಿನವನನ್ನಾಗಿ ಉಳಿಸುತ್ತದೆ ಎಂದು ಶಂಕಿಸಿದರು. ಇದರ ಪರಿಣಾಮವಾಗಿ ಮಾನವ ಐಹಿಕ ಸಂಪತ್ತನ್ನು ಶೇಖರಿಸುತ್ತಾನೆ. ಆದರೆ ಇದಕ್ಕಾಗಿ ತನ್ನ ಅಧ್ಯಾತ್ಮಿಕ ಕಲ್ಯಾಣವನ್ನು ಬೆಲೆಯಾಗಿ ತೆರಬೇಕಾಗುತ್ತದೆ ಎಂದು ಅವರಿಗೆ ತೋರಿತು. ಸಾಂಸ್ಕೃತಿಕ ಮತ್ತು ಅಧ್ಯಾತ್ಮಿಕ ಚಟುವಟಿಕೆಗಳಲ್ಲಿ ವಿನಿಯೋಗಿಸಬಹುದಾಗಿದ್ದ ವಿರಾಮವು ಯಂತ್ರ ಪಿಶಾಚಿಗೆ ಬಲಿಯಾಗುತ್ತದೆ. ತಮ್ಮ ಅಭಿಪ್ರಾಯವನ್ನು ಮನದಟ್ಟು ಮಾಡಲು ಅವರು ಒಂದು ಉಪಮಾನವನ್ನು ಬಳಸುತಾರೆ. ಮನುಷ್ಯನು ತನ್ನ ಸುತ್ತ ಒಂದು ಪಂಜರವನ್ನು ನಿರ್ಮಿಸಿಕೊಳ್ಳು ತ್ತಾನೆ. ಅದು ಬಂಗಾರದ ಪಂಜರವೇ ಆಗಿರಬಹುದು. ಆದರೂ ಅದು ಹೊರಗಿನ ಜಗತ್ತಿನಿಂದ ಅವನನ್ನು ದೂರವಿಡುತ್ತದೆ ಎನ್ನುತ್ತಾರೆ.

ಈ ವಿಚಾರಧಾರೆಯನ್ನು ಮುಂದುವರಿಸಲು ಅವರು ಪರಸ್ಪರ ವಿರುದ್ಧವಾದ ಎರಡು ಶಬ್ದಗಳನ್ನು ಬಳಸುತ್ತಾರೆ, ಗೂಡು ಮತ್ತು ಪಂಜರ. ಪಕ್ಷಿಗೆ ವಿಶ್ರಾಂತಿ ಗಾಗಿ ಗೂಡು ಬೇಕು. ಆದರೆ ಅದಕ್ಕೆ ಆಕಾಶದಲ್ಲಿದ್ದಾಗ ಅದು ತನ್ನ ಮನೆ ಎನ್ನಿಸುತ್ತದೆ. ಅಲ್ಲಿ ಅದು ಸಹಜವಾಗಿರುತ್ತದೆ. ಅದು ಆಕಾಶಕ್ಕೆ ಹಾರಲು ಗೂಡು ಅಡ್ಡಿ ಪಡಿಸುವುದಿಲ್ಲ. ಅದರ ಬದಲು ಅದರ ವಿಶ್ರಾಂತಿಗೆ ತಾಣವನ್ನು ಒದಗಿಸಿ ನೆರವಾಗುತ್ತದೆ. ಪಕ್ಷಿಯನ್ನು ಪಂಜರದಲ್ಲಿ ಕೂಡಿ ಹಾಕಿದಾಗ ಅದರ ವಾಸಕ್ಕೆ ಇನ್ನೂ ಉತ್ತಮವಾದ ಸ್ಥಳ ದೊರಕುತ್ತದೆ, ನಿಜ. ಆದರೆ ಆಕಾಶದಲ್ಲಿ ಹಾರಾಡುವ ಸ್ವಾತಂತ್ರ್ಯವನ್ನು ಅದು ಕಳೆದುಕೊಳ್ಳುತ್ತದೆ. ಇದೇ ರೀತಿಯಲ್ಲಿ, ಮನುಷ್ಯನಿಗೆ ಆರ್ಥಿಕ ಭದ್ರತೆ ಮತ್ತು ನೆಮ್ಮದಿಯನ್ನು ನೀಡಲು ಒಂದು ಮಿತಿಯ ವರೆಗೆ ತಾಂತ್ರಿಕ ಪ್ರಗತಿ ಅಗತ್ಯ. ತದ್ವಿರುದ್ಧವಾಗಿ, ತಾಂತ್ರಿಕ ಪ್ರಗತಿಯು ಅಂತ್ಯವೇ ಇಲ್ಲದೆ ಮುಂದುವರಿದರೆ, ಐಹಿಕ ಜೀವನದ ಅಗತ್ಯಗಳನ್ನು ಬೆಳೆಸುತ್ತ ಹೋಗಿ ಆತ ತನ್ನನ್ನೆ ಒಂದು ಪಂಜರದಲ್ಲಿ ಕೂಡಿ ಹಾಕಿಕೊಳ್ಳುತ್ತಾನೆ.

ಸಂಪೂರ್ಣ ದುರಂತವಿದು ಎನ್ನಿಸಿದ ಈ ವಿಷಯದಲ್ಲಿ ಅವರ ಭಾವನೆಗಳು ಎಷ್ಟು ಬಲವತ್ತರವಾಗಿದ್ದವು ಎಂಬುದನ್ನು ಅವರ ಈ ಮಾತುಗಳಲ್ಲಿ ಕಾಣಬಹುದು.

"ತೀರ ಸಂಕೀರ್ಣವಾದ ನಮ್ಮ ಆಧುನಿಕ ಸ್ಥಿತಿಗತಿಗಳಲ್ಲಿ ಯಾಂತ್ರಿಕ ಶಕ್ತಿಗಳನ್ನು ಎಷ್ಟು ದಕ್ಷತೆಯಿಂದ ವ್ಯವಸ್ಥೆಗೊಳಿಸಲಾಗಿದೆ ಎಂದರೆ ಅರಿಸಿಕೊಳ್ಳಲು ಮನುಷ್ಯನಿಗಿರುವ ಸಾಮರ್ಥ್ಯ ಅವನ ಸ್ವಾಭಾವ ಮತ್ತು ಅಗತ್ಯಗಳಿಗನುಗುಣವಾಗಿ ಅವನ್ನು ಸರಳಗೊಳಿಸುವ ಶಕ್ತಿ, ಇವನ್ನು ಮೀರಿದ ಪ್ರಮಾಣದಲ್ಲಿ ವಸ್ತುಗಳ ಉತ್ಪಾದನೆ ಆಗುತ್ತಿದೆ.

"ಉಷ್ಣದೇಶಗಳಲ್ಲಿನ ಸ್ವಚ್ಛಂದ ಸಸ್ಯಬೆಳವಣಗೆಯಂತಹ ಈ ವಿವೇಚನಾರಹಿತ ಅತಿ-ಬೆಳವಣಿಗೆ ಮನುಷ್ಯನಿಗೆ ಸೆರೆಮನೆಯನ್ನೇ ನಿರ್ಮಿಸುತ್ತದೆ. ಗೂಡು ಸರಳವಾದದ್ದು. ಅದಕ್ಕೆ ಆಗಸದೊಂದಿಗೆ ಬಹು ಹಿಂದಿನ ಬಾಂಧವ್ಯ. ಪಂಜರ ಸಂಕೀರ್ಣ, ದುಬಾರಿ. ಹೊರಗಡೆ ಇರುವುದರೆಲ್ಲದರಿಂದ ಬಹಿಷ್ಕೃತವಾದದ್ದು ಅದು. ಮನುಷ್ಯ ಈ ವಿಕೃತ ವಸ್ತುವಿನ ಮೇಲೆ ತನ್ನ ಅವಲಂಬನೆಯನ್ನು ಹೆಚ್ಚಿಸಿಕೊಳ್ಳುತ್ತ, ಅದು ತನ್ನನ್ನು ಎಲ್ಲ ಕಡೆಗಳಲ್ಲೂ ಆವರಿಸಲು ಅವಕಾಶ ನೀಡುತ್ತ, ತನ್ನ ಪಂಜರವನ್ನು ವೇಗವಾಗಿ ನಿರ್ಮಿಸಿಕೊಳ್ಳುತ್ತಿದ್ದಾನೆ."*

1920 ರಲ್ಲಿ ಅಮೆರಿಕಕ್ಕೆ ಭೇಟಿಕೊಟ್ಟಾಗ ಅವರ ಮನಸ್ಸಿನಲ್ಲಿ ಮುಖ್ಯವಾಗಿದ್ದುದ್ದು ಈ ವಿಚಾರ ನೀತಿ. ಪ್ರೇಮ, 'ಪ್ರೀತಿ', ರಸಾನುಭವಗಳಂತಹ ಒಳ್ಳೆಯ ಅಂಶಗಳು ಬಾಳನ್ನು ಸಂತೋಷಮಯ ಮಾಡುತ್ತವೆ. ಆದರೆ ತಾಂತ್ರಿಕ ಕೌಶಲ್ಯ ಮತ್ತು ಪ್ರಾಪಂಚಿಕ ಸಂಪತ್ತಿಗಾಗಿ ಮಿತಿ ಮೀರಿದ ಆಸೆ ಇವು ಈ ಅಂಶಗಳನ್ನು ಹೊರನೂಕುತ್ತವೆ ಎಂದು ಅವರಿಗನ್ನಿಸಿತು. ಈ ಪ್ರವಾಸದಿಂದ ಹಿಂದಿರುಗುತ್ತಲೇ ಪ್ರಕಟವಾದ ಅವರ 'ಶಿಶು ಭೋಲಾನಾಥ್' ಕವನ ಸಂಗ್ರಹದಲ್ಲಿನ ಒಂದು ಕವನದ ವಸ್ತು ಇದೇ ಆಗಿದೆ.

ನಿಸರ್ಗವನ್ನಾಳುವ ಚೇತನಕ್ಕೆ ಲಾಭದ ವಿಷಯದಲ್ಲಿ ದಿವ್ಯ ನಿರ್ಲಕ್ಷ್ಯವೆಂದು ಈ ಕವನದಲ್ಲಿ ಅವರು ಕಲ್ಪಿಸಿಕೊಳ್ಳುತ್ತಾರೆ. ತನ್ನ ಸೃಜನ ಪ್ರಚೋದನೆಯ ತೃಪ್ತಿಗಾಗಿ ಅದು ಸವೆದು ಹೋದುದನ್ನೆಲ್ಲಿ ಹಳೆಯದಾದುದನ್ನೆಲ್ಲ ನಿರ್ದಯವಾಗಿ ನಿರ್ನಾಮ ಮಾಡಿ ನಿಸರ್ಗವನ್ನು ಚೇತನ ಹೊಸ ಉತ್ಸರ್ಗ ಸಿದ್ಧಗೊಳಿಸುತ್ತದೆ. ಶಿಶಿರದಂತೆ ಅದು ನಾಶಗೊಳಿಸುವುದು ಪುನರ್ ಸೃಷ್ಟಿಗಾಗಿ. ಇದಕ್ಕೆ ವಿರುದ್ಧವಾಗಿ, ತನ್ನ ತಾಂತ್ರಿಕ ಕೌಶಲ್ಯದಿಂದ ಗರ್ವ ಪಡುವ ವಿಜ್ಞಾನಿ ಲೋಭಿಯಂತೆ ಐಹಿಕ

* "ರಿಲಿಜನ್ ಆಫ್ ಮ್ಯಾನ್", ದಿ ಟೀಚರ್

ಸಂಪತ್ತನ್ನು ಕೂಡಿ ಹಾಕಲು ನಿಸರ್ಗದ ಶೋಷಣೆ ಮಾಡುತ್ತಾನೆ. ಹೀಗೆ ಮಾಡುತ್ತ ಬಾಳಿನ ಒಳ್ಳೆಯ ಅಂಶಗಳಿಂದ ತಾನು ದೂರನಾಗುತ್ತಾನೆ, ತನ್ನ ಸೇವಕರನ್ನೇ ಅವಿಶ್ರಾಂತ ದುಡಿತದ ತೊತ್ತುಗಳನ್ನಾಗಿ ಮಾಡುತ್ತಾನೆ."*

ಅಮೆರಿಕಕ್ಕೆ ಠಾಕೂರರು ನೀಡಿದ ಭೇಟಿಯಿಂದ ಯಾವ ರೀತಿಯಲ್ಲೂ ಲಾಭವಾಗಲಿಲ್ಲ ಎಂದಲ್ಲ. ಆದರ್ಶಪ್ರಿಯ ಇಂಗ್ಲೀಷ್ ಯುವಕನೆಬ್ಬ, ಲಿಯೊನಾರ್ಡ್ ಎಲ್ಮ್‌ಹರ್ಸ್ಟ್, ಅವರಿಗೆ ಪರಿಚಯವಾದದ್ದು ಅಲ್ಲಿಯೇ. ಆತ ಕೃಷಿವೃತ್ತಿ ವಿಜ್ಞಾನಿ ಕೃಷಿಯಲ್ಲಿ ಉನ್ನತ ಅಧ್ಯಯನಕ್ಕಾಗಿ ಅಮೆರಿಕಕ್ಕೆ ಬಂದಿದ್ದ ಶ್ರೀಮಂತ ಕುಟುಂಬ ಒಂದಕ್ಕೆ ಸೇರಿದ ಡರೊ ವಿಟ್ನಿ ಸ್ಟ್ರೆಯ್ಟ್ ಎಂಬಾಕೆಯನ್ನು ಮದುವೆಯಾಗಲಿದ್ದ. ಅವರಿಬ್ಬರೂ ಠಾಕೂರರ ಅಭಿಮಾನಿಗಳಾದರು. ಈ ಆತ್ಮೀಯತೆ ಎಷ್ಟು ಬೆಳೆಯಿತೆಂದರೆ, ಠಾಕೂರರ ಮೇಲ್ವಿಚಾರಣೆಯಲ್ಲಿ ಗ್ರಾಮೀಣ ಪುನರ್ನಿರ್ಮಾಣದ ಪ್ರಯೋಗಗಳನ್ನು ನಡೆಸಲು ಮುಂದೆ ಎಲ್ಮ್‌ಹರ್ಸ್ಟ್ ಮುಂದೆ ಬಂದ. ಈ ವಿಷಯವನ್ನು ಮುಂದೆ ನಾವು ವಿವರವಾಗಿ ತಿಳಿದುಕೊಳ್ಳಬಹುದು.

ಅಮೆರಿಕದಿಂದ ಹಿಂದಿರುಗಿದನಂತರ ಠಾಕೂರರು ಯೂರೋಪ್ ಖಂಡದಲ್ಲಿ ದೀರ್ಘ ಪ್ರವಾಸವನ್ನು ಕೈಗೊಂಡರು. ಅಮೇರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ ದೊರೆತ ಹೀನ ಸ್ವಾಗತಕ್ಕೆ ವಿರುದ್ಧವಾಗಿ ಫ್ರಾನ್ಸ್, ಜರ್ಮನಿ, ಸ್ವೀಡನ್ ಮತ್ತು ಆಸ್ಟ್ರಿಯಗಳಲ್ಲಿ ಎಲ್ಲೆಲ್ಲೂ ಜನರು ಅವರನ್ನು ಪ್ರೀತಿಯಿಂದ ಬರಮಾಡಿಕೊಂಡರು. ಪ್ರಾಯಶಃ ತಮ್ಮ ಪ್ರವಾಸದಲ್ಲಿ ಅವರು ಆಡಿದ ಮಾತುಗಳಲ್ಲಿ ಯುದ್ಧಪೀಡಿತ ಯೂರೋಪಿಗೆ ಸಾಂತ್ವನದ ಸ್ಪರ್ಶವಾಯಿತು. ಅವರೊಡನೆ ಹೋಗಿದ್ದ ಅವರ ಮಗ ಅವರಿಗೆ ಯೂರೋಪಿನಲ್ಲಿ ಎಲ್ಲೆಲ್ಲೂ, ಅದರಲ್ಲಿಯೂ ವಿಶೇಷವಾಗಿ ಜರ್ಮನಿಯಲ್ಲಿ, ಬಹು ವಿಶ್ವಾಸದ ಸ್ವಾಗತ ದೊರೆಯಿತು ಎಂದು ಹೇಳುತ್ತಾರೆ. ಅವರೆನ್ನುತ್ತಾರೆ :

"ಮಧ್ಯ ಯೂರೋಪಿನಲ್ಲಿ, ಉತ್ತರ ಯೂರೋಪಿನಲ್ಲಿ ಜನ ಅವರ ಪಾದ ಮುಟ್ಟಿದ ನೆಲವನ್ನು ಪೂಜೆ ಮಾಡುತ್ತಿದ್ದರು. ತುಂಬಿದ ಸಭೆಗಳಲ್ಲಿ, ರೈಲ್ವೆ ಸ್ಟೇಷನ್ನುಗಳಲ್ಲಿ ತಂದೆಯವರ ಉಡುಪಿನ ಅಂಚನ್ನು ಮುಟ್ಟಬೇಕೆಂದು ಜನರು ನೂಕು ನುಗ್ಗಾಟ ಮಾಡುವ ದೃಶ್ಯ ನಮಗೆ ಸಾಮಾನ್ಯವಾಗಿ ಹೋಯಿತು. ಅವರ

** "ಪಶ್ಚಿಮ್ ಜಾತ್ರಿರ್ ಡೈರಿ, 61

ಪುಸ್ತಕಗಳ ಮಾರಾಟ ಅದ್ಭುತವಾಯಿತು. ಜರ್ಮನಿಯಲ್ಲಿ ಲಕ್ಷಗಟ್ಟಲೆ ಪ್ರತಿಗಳು ಮಾರಾಟವಾಗಿ ಹೋದವು."*

ಸಂಸ್ಕೃತಿಯಲ್ಲಿ ಅಭಿಮಾನವಿದ್ದ ಹಲವಾರು ಪ್ರಮುಖರ ನಿಕಟ ಸಂಪರ್ಕ ಸಾಧ್ಯವಾದುದರಿಂದ ಠಾಕೂರರ ಯೂರೋಪಿನ ಪ್ರವಾಸ ಇನ್ನೊಂದು ರೀತಿಯಲ್ಲೂ ಫಲದಾಯಕವಾಯಿತು. ಭಾರತೀಯ ಅಧ್ಯಯನ ಕ್ಷೇತ್ರದಲ್ಲಿ ಬಹು ಹಿರಿಯರೆನ್ನಿಸಿಕೊಂಡಿದ್ದ ಪ್ರೊಫೆಸರ್ ಸಿಲ್ವನ್ ಲೆವಿ ಅವರ ಭೇಟಿ ಪ್ಯಾರಿಸಿನಲ್ಲಾಯಿತು. ಸಮಾಜದಲ್ಲಿ ಬಹು ಗಣ್ಯರೂ ಕಲೆಗಳ ಆಶ್ರಯದಾರರೂ ಆಗಿದ್ದ ಕಾಂಟಸ್ ದ ನೂಯಿ ಅವರ ಮತ್ತು ರೊಮಾ ರೋಲಾ ಮತ್ತು ತತ್ತ್ವಶಾಸ್ತ್ರಜ್ಞ, ಹೆನ್ರಿ ಬರ್ಗ್‌ಸನ್‌ರ ಪರಿಚಯವಾದದ್ದು ಪ್ಯಾರಿಸಿನಲ್ಲೇ.

ಜರ್ಮನಿಯ ಡರ್ಮ್‌ಸ್ಟಾಟನಲ್ಲಿ ಅವರು ಜರ್ಮನಿಯ ತತ್ತ್ವಶಾಸ್ತ್ರಜ್ಞ, ಕೌಂಟ್ ಕೆಯ್‌ಸರ್‌ಲಿಂಗರ ಅತಿಥಿಯಾಗಿದ್ದರು. ಜರ್ಮನಿಯಲ್ಲಿದ್ದಾಗಲೇ ಜರ್ಮನ್ ವಿಶ್ವವಿದ್ಯಾನಿಲಯದ ಜರ್ಮನ್ ವಿದ್ವಾಂಸ, ವಿಂಟರ್‌ನಿಟ್ಜರನ್ನೂ ಪರಿಚಯ ಮಾಡಿಕೊಂಡರು. ಜೆಕೊಸ್ಲಾವಾಕಿಯಾ ದೇಶವನ್ನು ದಾಟುವಾಗ ಅವರನ್ನು ಜೆಕ್ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಲೆಸ್ನಿಯವರಿಗೆ ಪರಿಚಯ ಮಾಡಿಕೊಡಲಾಯಿತು.

ನೊಬೆಲ್ ಸಮಿತಿಯವರ ಖಾಯಂ ಆಹ್ವಾನವನ್ನು ಮನ್ನಿಸುವುದಕ್ಕಾಗಿ ಠಾಕೂರರು ಸ್ವೀಡನ್ನಿಗೆ ಭೇಟಿಕೊಡಲು ಅವಕಾಶಮಾಡಿಕೊಂಡರು. ಸ್ಟಾಕ್‌ಹೋಮ್‌ನಲ್ಲಿ ಅವರ ಗೌರವಾರ್ಥ ಒಂದು ಭೋಜನ ಕೂಟವನ್ನು ಏರ್ಪಡಿಸಿದರು. ಸ್ವೀಡನ್ನಿನ ಅರಸರು ಅಂದು ಅಧ್ಯಕ್ಷತೆ ವಹಿಸಿದ್ದರು. ಪ್ರಸಿದ್ಧ ಬರಹಗಾರಳಾಗಿದ್ದ ಸೆಲ್ಮ ಲಾಗಿರ್‌ಲೂಫ್ ಅತಿಥಿ ಸತ್ಕಾರದ ಹೊಣೆ ಹೊತ್ತರು. ಇದಾದನಂತರ ಅವರು ವಿಯನ್ನ ಮೂಲಕ ಸ್ವದೇಶಕ್ಕೆ ಹಿಂದಿರುಗಿದರು. ಹದಿನೈದು ತಿಂಗಳ ಕಾಲ ನಡೆದ ಈ ಪ್ರವಾಸ 1921ರ ಜುಲೈ ತಿಂಗಳಲ್ಲಿ ಮುಕ್ತಾಯವಾಯಿತು.

ಮತ್ತೆ ಅವರು ಪ್ರವಾಸ ಕೈಗೂಡಿದ್ದು 1924ರ ಮಾರ್ಚ್ ತಿಂಗಳಲ್ಲಿ. ಈ

* ರತೀಂದ್ರನಾಥ ಠಾಕೂರರು, "ಅನ್ ದಿ ಎಡ್ಜಸ್ ಅಫ್ ಟೈಮ್, " ವಿತ್ ಫಾದರ್ ಅಬ್ರಾಡ್

ಬಾರಿ ಚೀನಾ ದೇಶ ಸರ್ಕಾರವೇ ಅವರನ್ನು ಆಹ್ವಾನಿಸಿತು. ಈ ಪ್ರವಾಸದಲ್ಲಿ ಕ್ಷಿತಿ ಮೋಹನ ಸೆನ್, ಪ್ರಸಿದ್ಧ ಕಲಾವಿದ ನಂದಲಾಲ ಬೋಸ್, ಮತ್ತು ಠಾಕೂರರ ತರುಣ ಸ್ನೇಹಿತ, ಲಿಯೊನಾರ್ಡ್ ಎಲ್ಮ್‌ಹರ್ಸ್ಟ್ ಅವರ ಜೊತೆಗೆ ಹೋದರು.

ಅವರು 1924ರ ಮಾರ್ಚ್ 21 ರಂದು ಹೊರಟರು. ಚೀನಾಕ್ಕೆ ಭೇಟಿ ಕೊಟ್ಟಾಗ ಠಾಕೂರರು ಷಾಂಘೈ, ಹಾಂಚೌ, ನ್ಯಾನ್‌ಕಿಂಗ್ ಮತ್ತು ಪೀಕಿಂಗ್‌ಗಳಲ್ಲಿ ಸ್ವಲ್ಪ ದಿನಗಳು ನಿಂತರು. ದೇಶದಲ್ಲೆಲ್ಲ ಅವರಿಗೆ ವಿಶ್ವಾಸದ ಸ್ವಾಗತ ದೊರೆಯಿತು. ಠಾಕೂರರ ಭೇಟಿಯು ನಿಜವಾದ ಮಹತ್ವವನ್ನು ಚೀನಾದ ಜನ ಅರ್ಥಮಾಡಿ ಕೊಂಡಂತೆ ಕಾಣುತ್ತದೆ. ಠಾಕೂರರು ಭಾರತದ ಪುರಾತನ ಸಂಸ್ಕೃತಿ ಮತ್ತು ನಾಗರಿಕತೆಗಳ ಪ್ರತಿನಿಧಿ. ಈ ಎರಡು ದೇಶಗಳ ವಿದ್ವಾಂಸರು ಪರಸ್ಪರರ ದೇಶಗಳಿಗೆ ಭೇಟಿ ಕೊಡುತ್ತಿದ್ದ ಕಾಲದ ಸಾಂಸ್ಕೃತಿಕ ಬಾಂಧವ್ಯ ಅವರ ಭೇಟಿಯಿಂದ ಮತ್ತೆ ಜೀವಂತವಾಗುತ್ತಿದೆ ಎಂದು ಅವರಿಗೆ ಅರ್ಥವಾಯಿತು. ಅವರು ಚೀನಾ ತಲುಪಿದಾಗ ಅವರಿಗೆ ಪ್ರೊಫೆಸರ್ ಲಿಅನ್‌ಚಿ ಚಾವ್ ಅವರು ಅರ್ಪಿಸಿದ ಬಿನ್ನ ವತ್ತಳೆಯಲ್ಲಿ ಈ ವಿಚಾರಗಳೂ ಭಾವನೆಗಳೂ ಪ್ರತಿಧ್ವನಿತವಾಗಿವೆ. ಬಿನ್ನವತ್ತಳೆ ಯಲ್ಲಿ ಪ್ರಸ್ತುತವಾದ ಭಾಗ ಇದು :

"ಠಾಕೂರರ ವ್ಯಕ್ತಿತ್ವದಲ್ಲೂ ಅವರ ಕಾವ್ಯದಲ್ಲೂ, ಹಿಂದೂ ಸಂಸ್ಕೃತಿ ಮತ್ತು ನಾಗರಿಕತೆಗಳಿಗೆ ಆಧಾರವಾದ ಸಂಪೂರ್ಣ ಪ್ರೇಮ ಮತ್ತು ಸಂಪೂರ್ಣ ಸ್ವಾತಂತ್ರ್ಯ, ಈ ತತ್ವಗಳ ಮಾದರಿಯನ್ನು ಕಾಣುತ್ತೇವೆ...ಆದರೆ, ಹಿಂದಿನ ಕಾಲದಲ್ಲಿ ಬುದ್ಧನ ಜೀವನ ಚರಿತ್ರೆ ಬರೆದ ಅಶ್ವಘೋಷನಷ್ಟೇ ಶ್ರೀ ಠಾಕೂರರು ನಮಗೆ ಮುಖ್ಯ ಎಂಬುದು ನನಗೆ ಖಂಡಿತ. ಚೀನದಲ್ಲಿ ಅವರು ಬೀರುವ ಪ್ರಭಾವವು ಕುಮಾರಜೀವ ಅಥವಾ ಛಾಂತಿ ಬೀರಿದ ಪ್ರಭಾವಕ್ಕಿಂತ ಯಾವ ರೀತಿಯಲ್ಲೂ ಕಡಿಮೆಯಾಗಿರುವುದಿಲ್ಲ ಎಂಬುದು ನನ್ನ ಭರವಸೆ."*

ಜಪಾನ್ ಹತ್ತಿರದಲ್ಲೇ ಇದ್ದುದರಿಂದ ಠಾಕೂರರು ಚೀನಾದಿಂದ ಅಲ್ಲಿಗೆ ಭೇಟಿ ಇತ್ತರು. ಈ ಸಂದರ್ಭದಲ್ಲಿ ಜಪಾನನ್ನು ಕುರಿತ ಅವರ ವಿಚಾರಧಾರೆಯು ಸ್ವಲ್ಪ ಸ್ವಲ್ಪ ಮಾರ್ಪಾಟಾದಂತೆ ಕಾಣುತ್ತದೆ. ಹಿಂದೆ ಅವರು ಪ್ರವಾಸ ಮಾಡಿದಾಗ

* "ಟಾಕ್ಸ್ ಇನ್ ಚೈನ"

ಜಪಾನಿನ ದೇಶೀಯ ಸಂಸ್ಕೃತಿಯನ್ನು ವಿಶೇಷವಾಗಿ ಮೆಚ್ಚಿಕೊಂಡಿದ್ದರು. ಈ ಬಾರಿ, ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ರೂಪಗೊಂಡು ತಂತ್ರಜ್ಞಾನ ಮತ್ತು ಆಕ್ರಮಣಶೀಲ ರಾಷ್ಟ್ರೀಯತೆ ಇವುಗಳನ್ನು ನೆಚ್ಚಿದ ಹೊಸ ಜಪಾನನ್ನು ಕಂಡು ಅವರಿಗೆ ತಕ್ಕಷ್ಟು ಆಘಾತವಾಯಿತು. ಅಲ್ಲಿ ಅವರು ಮಾಡಿದ ಒಂದು ಭಾಷಣದ ಒಂದು ಭಾಗ ಹೀಗಿದೆ :

"ಆದರೆ ರಾಷ್ಟ್ರದ ಈ ಸೃಷ್ಟಿಗಳು ಎಂತಹವು–ನಾಶಗೊಳಿಸುವ ಮತ್ತು ಲಾಭಗೊಳಿಸುವ ಈ ಯಂತ್ರಗಳು, ನೈತಿಕ ನಿಷ್ಠೆ ಸೋತು ಉರುಳುವಂತೆ ಮತ್ತು ಭ್ರಾತೃತ್ವ ನಾಶವಾಗುವಂತೆ ಮಾಡುವ ಈ ರಾಯಭಾರ ನಿರ್ವಹಣೆಯ ವಂಚನೆ ? ನೀವು ಆಮಿಷಕ್ಕೆ ಒಳಗಾಗಿ ಅಥವಾ ಪ್ರಾಯಶಃ ಬಲಾತ್ಕಾರಕ್ಕೊಳಗಾಗಿ ಇವನ್ನು ಸ್ವೀಕರಿಸಿದ್ದೀರಿ."*

ಅವರು ಹಿಂದಿರುಗಿದ ಕೆಲವೇ ತಿಂಗಳಲ್ಲಿ ಪೆರುವಿನಿಂದ ಆಹ್ವಾನ ಬಂದಿತು. ಸಂದರ್ಭ ಎಷ್ಟು ಮಹತ್ವದ್ದೆಂದರೆ ಠಾಕೂರರು ಸಾಧ್ಯವಿಲ್ಲ ಎನ್ನುವಂತೆಯೇ ಇರಲಿಲ್ಲ. ಪೆರು ಸ್ಪಾನಿಷ್ ಚಕ್ರಾಧಿಪತ್ಯದಿಂದ 1824ರ ಡಿಸೆಂಬರ್ 9 ರಂದು ಸ್ವಾತಂತ್ರ್ಯವನ್ನು ಗಳಿಸಿತ್ತು. ಸ್ವಾತಂತ್ರ್ಯದ ಶತಮಾನೋತ್ಸವವನ್ನು ಈಗ ಆಚರಿಸುತ್ತಿತ್ತು. ಈ ಸಂದರ್ಭಕ್ಕೆ ಅಗತ್ಯವಾದ ಮಹತ್ವವನ್ನು ನೀಡಲು ಪೆರು ಸರ್ಕಾರವು ಠಾಕೂರರನ್ನು ಆಹ್ವಾನಿಸಿತ್ತು. ಈ ಉದ್ದೇಶವು ಠಾಕೂರರ ವಿಶಾಲ ಮಾನವತಾವಾದಕ್ಕೆ ಮೆಚ್ಚಿಕೆಯಾಗುವಂತಿತ್ತು. ಆದುದರಿಂದ ಕೈ ಗೊಳ್ಳಬೇಕಾದ ಪ್ರವಾಸ ಕಠಿಣಕರವಾದರೂ ಅವರು ದೀರ್ಘವಾದ ಮತ್ತು ಶ್ರಮದಾಯಕವಾದ ಸಮುದ್ರ ಪ್ರಯಾಣಕ್ಕೆ ಒಪ್ಪಿದರು.

ಯೂರೋಪಿನ ಮಾರ್ಗವಾಗಿ ಪೆರುವಿಗೆ ಠಾಕೂರರು 1924ರ ಸೆಪ್ಟೆಂಬರಿನಲ್ಲಿ ಹೊರಟರು. ಸುರೇಂದ್ರನಾಥ ಕಾರ್ ಮತ್ತು ಪ್ರತಿಮಾದೇವಿ ಅವರೊಡನೆ ಫ್ರಾನ್ಸ್‌ವರೆಗೆ ಹೋಗಿ ಅಲ್ಲಿ ಇಳಿದು ಬಿಟ್ಟರು. ಅಟ್ಲಾಂಟಿಕ್ ಸಾಗರವನ್ನು ದಾಟಿ ಬೋನಸ್ ಐರಿಸ್ ಅನ್ನು ತಲುಪುವ ಹಡಗನ್ನು ಠಾಕೂರರು ಹತ್ತಿದರು. ಅವರ ಸ್ನೇಹಿತ, ಲಿಯೊನಾರ್ಡ್ ಎಲ್ಮ್‌ಹರ್ಸ್ಟರು ಕಾರ್ಯದರ್ಶಿಯಾಗಿ ಅವರೊಡನೆ ಹೊರಟರು. ದುರದೃಷ್ಟದಿಂದ ಸಮುದ್ರ ಪ್ರಯಾಣದ ಮಧ್ಯೆ

* "ಲೆಕ್ಚರ್ಸ್ ಅಂಡ್ ಅಡ್ರೆಸಸ್," ಇಂಟರ್ ನ್ಯಾಷನಲ್ ರಿಲೇಷನ್ಸ್.

ಠಾಕೂರರು ಅಸ್ವಸ್ಥರಾದರು. ಪರಿಣಾಮವಾಗಿ, ಅವರು ಬೋನಸ್ ಐರಿಸ್ ಅನ್ನು ತಲುಪಿದಾಗ ದಕ್ಷಿಣ ಅಮೆರಿಕದಲ್ಲಿ ಭೂಮಾರ್ಗವಾಗಿ ಪೆರು ತಲುಪಲು ತಮ್ಮ ಪ್ರಯಾಣದ ಕೊನೆಯ ಭಾಗವನ್ನು ಕೈಗೊಳ್ಳಲು ದೈಹಿಕವಾಗಿ ಸಾಧ್ಯವಾಗುವ ಸ್ಥಿತಿಯಲ್ಲಿದ್ದಾರೆಯೇ ಎಂಬ ಪ್ರಶ್ನೆ ಎದ್ದಿತು. ಇಲ್ಲಿ ಅವರನ್ನು ಸಿನೋರ ವಿಟ್ಟೋರಿಯಾ ಒಕಾಂಪೊ ಅವರು ಬರಮಾಡಿಕೊಂಡರು. ಆಕೆ ಅವರ ಆರೋಗ್ಯದ ವಿಷಯದಲ್ಲಿ ತುಂಬಾ ಕಾಳಜಿ ವಹಿಸಿದರು. ಆಕೆಯ ಒತ್ತಾಯದಿಂದ ಪೆರುವಿನ ಪ್ರಯಾಣವನ್ನು ಅನಾರೋಗ್ಯದ ಕಾರಣಕ್ಕಾಗಿ ಕೈಬಿಟ್ಟದ್ದಾಯಿತು. ಚಿಕಿತ್ಸೆ ಮತ್ತು ಆರೋಗ್ಯದ ಸುಧಾರಣೆಗಾಗಿ ಠಾಕೂರರನ್ನು ಆಕೆಯ ಗ್ರಾಮೀಣ ಗೃಹಕ್ಕೆ ಕರೆದೊಯ್ಯಲಾಯಿತು.*

ಈ ಮಹಿಳೆ ಮೃದು ಹೃದಯದಿಂದ ಮತ್ತು ಪ್ರೀತಿಯಿಂದ ತಮ್ಮನ್ನು ನಡೆಸಿಕೊಂಡ ರೀತಿ ಠಾಕೂರರ ಅಂತಃಕರಣವನ್ನು ಕಲಕಿತು. ಅವರ ನಿಕಟ ಪರಿಚಯವು ಶಾಶ್ವತ ಸ್ನೇಹವಾಗಿ ಬೆಳೆಯಿತು. ಇದರ ಗುರುತಿಗಾಗಿ ಠಾಕೂರರು ತಮ್ಮ ಮುಂದಿನ ಕವನ ಸಂಗ್ರಹ 'ಪುರಬಿ' ಯನ್ನು ಆಕೆಗೆ ಅರ್ಪಿಸಿದರು.

ಇಟಲಿಗೆ ಮುಸೋಲಿನಿ ಅವರನ್ನು ಆಹ್ವಾನಿಸಿದುದರಿಂದ ಇದರ ನಂತರದ ಪ್ರವಾಸವನ್ನು ಕೈಗೊಳ್ಳಬೇಕಾಯಿತು. ಪ್ರವಾಸದ ಕಾಲ ಅಷ್ಟೇನು ದೀರ್ಘವಾಗಿಲ್ಲದಿದ್ದರೂ, ಪ್ರಥಮ ಬಾರಿಗೆ ಬಾಲ್ಕನ್ ಪರ್ಯಾಯಪ್ರದೇಶದ ರಾಜ್ಯಗಳೂ ಅದರಲ್ಲಿ ಸೇರಿ, ಇದು ಅತ್ಯಂತ ಶ್ರಮಪೂರ್ಣವಾದ ಪ್ರವಾಸಗಳಲ್ಲಿ ಒಂದಾಯಿತು. 1926 ರ ಮೇ ತಿಂಗಳಲ್ಲಿ ಪ್ರಾರಂಭವಾದ ಈ ಪ್ರವಾಸ ಅದೇ ವರ್ಷದ ಡಿಸೆಂಬರಿನಲ್ಲಿ ಮುಗಿಯಿತು. ಹಿಂದಿನ ಬಾರಿಗಿಂತ ಈ ಬಾರಿ ಠಾಕೂರರೊಂದಿಗೆ ಹೆಚ್ಚು ಮಂದಿ ಹೋದರು. ಅವರ ಮಗ, ಸೊಸೆ ಅಲ್ಲದೆ ಅವರ ಪುಟ್ಟ ಮಗಳು ನಂದಿನಿಯೂ ಅವರೊಡನಿದ್ದಳು. ಅಲ್ಲದೆ ಪ್ರೊಫೆಸರ್ ಪ್ರಶಾಂತ ಚಂದ್ರ ಮಹಾಲನಬೀಸ್ ಮತ್ತು ಅವರ ಹೆಂಡತಿ ಇದ್ದರು.

ಠಾಕೂರರೂ ಅವರ ಜೊತೆಯವರೂ ನೇಪಲ್ಸಿನಲ್ಲಿ ಇಳಿದ ನಂತರ ಅವರನ್ನು ಪ್ರೊಫೆಸರ್ ಫಾರ್ಮಿಸಿಯವರು ಬರಮಾಡಿಕೊಂಡರು. ಈ ಪ್ರವಾಸದ ಮೇಲ್ವಿ

---

* ರತೀಂದ್ರನಾಥ ಠಾಕೂರ್, "ಆನ್ ದಿ ಎಡ್ಜಸ್ ಆಫ್ ಟೈಂ", ವಿತ್ ಫಾದರ್ ಆನ್ ದಿ ಕಾಂಟಿನೆಂಟ್.

ಚಾರಣೆ ನೋಡಿಕೊಳ್ಳಬೇಕೆಂದು ಪ್ರೊಫೆಸರಿಗೆ ಮುಸೋಲಿಲಿ ಅವರೇ ನೇರವಾಗಿ ಅಪ್ಪಣೆ ಮಾಡಿದ್ದರು. ಆತುರಾತುರವಾಗಿ ಅವರೆಲ್ಲರನ್ನು ರೈಲು ಹತ್ತಿಸಿ ರೋಮಿಗೆ ಕರೆದುಕೊಂಡು ಹೋಗಲಾಯಿತು. ಅಲ್ಲಿ ಮುಸೋಲಿನಿ ಕವಿಗೆ ಸಂದರ್ಶನ ನೀಡಿದರು. ತತ್ತ್ವಶಾಸ್ತ್ರಜ್ಞ ಬೆನೆಡೆಟೋ ಕ್ರೋಚೆಯವರನ್ನು ಭೇಟಿ ಮಾಡುವ ಅಪೇಕ್ಷೆಯನ್ನು ಠಾಕೂರರು ಸ್ಪಷ್ಟವಾಗಿ ವ್ಯಕ್ತಪಡಿಸಿದ್ದರಿಂದ ರೋಮ್‌ನಲ್ಲಿ ಈ ಭೇಟಿಯನ್ನು ಏರ್ಪಡಿಸಲಾಯಿತು. ಅನಂತರ ಅವರೆಲ್ಲ ವೆನಿಸಿಗೆ ಹೋದರು. ಅಲ್ಲಿನ ದೋಣಿಗಳಲ್ಲಿನ ವಿಹಾರ ಅವರೆಲ್ಲರಿಗೆ ತುಂಬಾ ಸಂತೋಷವನ್ನು ಕೊಟ್ಟಿತು. ಟ್ಯೂರಿನ್, ಮಿಲಾನ್‌ಗಳ ಮಾರ್ಗವಾಗಿ ಅವರು ಸ್ವಿಟ್ಜರ್ಲೆಂಡಿಗೆ ಹೋದರು.

ಇಟಲಿಯಲ್ಲಿ ಠಾಕೂರರು ಇದ್ದ ಕಾಲದಲ್ಲಿ ಅವರಿಗೆ ಒಳ್ಳೆಯ ಸ್ವಾಗತವೇ ದೊರೆತರೂ ವಾತಾವರಣ ತುಂಬಾ ಸಂಶಯದಿಂದ ಬಿಗಿಯಾಗಿದೆ ಎಂಬ ಮತ್ತು ಅವರನ್ನು ಗೂಢಚಾರರು ಗಮನಿಸುತ್ತಲೇ ಇದ್ದರು. ಎಂಬ ಭಾವನೆ ಬಂದಿತು. ವಿದೇಶಗಳಿಂದ ಬಂದವರೊಡನೆ ಸಂಪರ್ಕ ಬೆಳೆಸಿದರೆ ಅಧಿಕಾರಿಗಳಿಗೆ ಅಸಮಾಧಾನವಾಗುತ್ತಿತ್ತು. ಸರ್ವಾಧಿಕಾರ ಬೆಳೆಸಿದ ವಾತಾವರಣ ಇದಕ್ಕೆ ಕಾರಣವಾಗಿರಬೇಕು.

ಸ್ವಿಟ್ಜರ್‌ಲೆಂಡಿನಲ್ಲಿ ರೊಮಾ ರೋಲಾ ಅವರನ್ನು ಭೇಟಿ ಮಾಡಲು ಕವಿ ವಿಲ್‌ನೋವ್ ಎಂಬ ಸ್ಥಳದಲ್ಲಿ ಇಳಿದರು. ಇಲ್ಲಿಂದ ಅವರೂ ಅವರ ಜೊತೆಯವರೂ ಜ್ಯೂರಿಚ್, ವಿಯನ್ನ ಮತ್ತು ಪ್ಯಾರಿಸ್‌ಗಳನ್ನು ಹಾದು ಲಂಡನ್ನಿನಲ್ಲಿ ತಂಗಿದರು. ಠಾಕೂರರ ಸ್ನೇಹಿತ, ಎಲ್ಮ್‌ಹರ್ಸ್ಟ್‌ರು ಡೆವನ್‌ಷೈರ್ ಜಿಲ್ಲೆಯಲ್ಲಿನ ಟಾಟ್‌ನೆಸ್‌ನಲ್ಲಿನ ತಮ್ಮ ಹಳ್ಳಿಯ ಮನೆಯಲ್ಲಿ ಕೆಲವು ದಿನಗಳನ್ನು ಕಳೆಯುವಂತೆ ಠಾಕೂರರ ಮನ ಒಲಿಸಿದರು. ಎಲ್ಮ್‌ಹರ್ಸ್ಟ್‌ರು ತನ್ನ ಗೆಳತಿ ಡರೋಥಿ ಸ್ಟ್ರೈಯ್ಟ್ ಅವರನ್ನು ಮದುವೆಯಾಗಿದ್ದರು. ಆಕೆ ತಮ್ಮ ಗಣ್ಯ ಅತಿಥಿಯ ಆದರೋಪಚಾರಗಳನ್ನು ನೋಡಿಕೊಂಡರು.

ಟಾಟನೆಸ್‌ನಲ್ಲಿ ಸ್ವಲ್ಪ ಕಾಲ ಕಳೆದು ಅವರೆಲ್ಲ ಇನ್ನಷ್ಟು ಪ್ರವಾಸಕ್ಕಾಗಿ ಯೂರೋಪಿಗೆ ಬಂದರು. ಈ ಪ್ರವಾಸದಲ್ಲಿ ನಾರ್ವೆ (ಇಲ್ಲಿ ಠಾಕೂರರು ಸ್ಟೀನ್ ಕೊನೊ ಅವರನ್ನು ಭೇಟಿಯಾದರು), ಸ್ವೀಡನ್, ಡೆನ್‌ಮಾರ್ಕ್, ಅನಂತರ ಹಂಗೆರಿ, ಜರ್ಮನಿಯಲ್ಲಿ ಬರ್ಲಿನ್ ಮತ್ತು ಮ್ಯೂನಿಚ್, ಕಡೆಯ ಮತ್ತು ಭಾಗವಾಗಿ ವಿಯನ್ನಾ ಆಸ್ಟ್ರಿಯ ಸೇರಿದ್ದವು. ಅನಂತರ ಆಗ್ನೇಯ ಯೂರೋಪಿನ ರಾಜ್ಯಗಳೆಲ್ಲವನ್ನೂ

ಒಳಗೊಂಡ ಪ್ರವಾಸದ ಮತ್ತೊಂದು ಘಟ್ಟ ಪ್ರಾರಂಭ. ಅವರು ಮೊದಲು ತಂಗಿದ್ದು ಹಂಗೆರಿಯ ರಾಜಧಾನಿ, ಬುಡಾಪೆಸ್ಟಿನಲ್ಲಿ. ಅಲ್ಲಿ ಠಾಕೂರರು ಅಸ್ವಸ್ಥರಾದರು. ಆದರೆ ಇದರಿಂದ ಅವರ ಉತ್ಸಾಹವೇನೂ ಕುಗ್ಗಲಿಲ್ಲ. ಮತ್ತೆ ಆರೋಗ್ಯ ಸುಧಾರಿಸುತ್ತಲೇ ಅವರು ಬಾಲ್ಕನ್ ರಾಜ್ಯಗಳ ಪ್ರವಾಸವನ್ನು ಪ್ರಾರಂಭಿಸಿದರು. ಮತ್ತೆ ಅವರು ನಿಂತಿದ್ದು ಯುಗೋಸ್ಲಾವಿಯಾದ ರಾಜಧಾನಿ, ಬೆಲ್‌ಗ್ರೇಡ್‌ನಲ್ಲಿ. ಅಲ್ಲಿಂದ ಅವರೆಲ್ಲ ಸೋಫಿಯಾಕ್ಕೆ ಹೋದರು. ಅಲ್ಲಿ ಬಲ್ಗೇರಿಯದ ರಾಜರು ಅವರಿಗೆ ಭವ್ಯಸ್ವಾಗತವನ್ನು ನೀಡಿದರು. ಅಲ್ಲಿಂದ ಅವರು ಡ್ಯಾನ್ಯೂಬ್ ನದಿಯನ್ನು ದಾಟಿ ಬುಕಾರೆಸ್ಟ್ ತಲಪಿದರು. ಅಲ್ಲಿಂದ ಹಡಗಿನಲ್ಲಿ ಬಾಸ್ಪರಸ್ ಜಲಸಂಧಿಯಲ್ಲಿರುವ ಇಸ್ತಾಂಬುಲ್‌ಗೆ ಹೋಗಿ ಅಲ್ಲಿಂದ ಮುಂದೆ ಅಥೆನ್ಸ್‌ಗೆ ಪ್ರಯಾಣ ಮಾಡಿದರು. ಭಾರತಕ್ಕೆ ಹಿಂದಿರುಗುವಾಗ ಠಾಕೂರರು ಕೈರೊಗೆ ಬಹು ಅಲ್ಪ ಕಾಲದ ಭೇಟಿಯನ್ನಾದರೂ ಕೊಡಲು ಅವಕಾಶ ಕಲ್ಪಿಸಿಕೊಂಡರು. ಅರವತ್ತನ್ನು ದಾಟಿದ್ದ ಅವರಿಗೆ ಈ ಪ್ರವಾಸ ಬಹು ಶ್ರಮದಾಯಕವಾಗಿದ್ದಿರಬೇಕು ಆದರೆ ಠಾಕೂರರ ಆರೋಗ್ಯ ಚೆನ್ನಾಗಿದ್ದುದರಿಂದ ಅದನ್ನು ಅವರು ತಡೆದುಕೊಂಡರು.

1924 ರಲ್ಲಿನ ಯೂರೋಪ್ ಪ್ರವಾಸದ ಅನುಭವದ ಪುನರಾವರ್ತನೆಯಾಯಿತು. ಈ ಬಾರಿ ಠಾಕೂರರ ಭೇಟಿಯು, ಯೂರೋಪಿನ ಒಂದು ಅಂಚಿನಿಂದ ಮತ್ತೊಂದು ಅಂಚಿನವರೆಗೆ ಸಾಗರ ಭಾವನೆಯ ಅಲೆಯನ್ನೆಬ್ಬಿಸಿತೋ ಎನ್ನುವಂತೆ ಯೂರೋಪಿನಲ್ಲಿ ಜನ ಎಲ್ಲೆಲ್ಲೂ ಅವರನ್ನು ವಿಶೇಷ ಆತ್ಮೀಯತೆಯಿಂದ ಬರಮಾಡಿಕೊಂಡರು. ಅವರ ಮಗ ರಥೀಂದ್ರನಾಥರು ತಮ್ಮ ಅನುಭವವನ್ನು ಕುರಿತು ಹೀಗೆ ಬರೆದಿದ್ದಾರೆ.

"ಅವರು ಕಾಲಿಟ್ಟ ಕಡೆಗಳಲ್ಲೆಲ್ಲ ಸರ್ಕಾರದ ಅಧಿಕಾರಿಗಳಿಂದಲೂ ಜನತೆಯಿಂದಲೂ ಅವರಿಗೆ ರಾಜೋಚಿತ ಸ್ವಾಗತ ದೊರೆತದ್ದಷ್ಟೇ ಅಲ್ಲ. ಪ್ರವಾದಿಗೆ ಸಲ್ಲುವ ಗೌರವದಿಂದ ಅವರನ್ನು ಕಂಡರು. ಪ್ರತಿ ರೈಲ್ವೆನಿಲ್ದಾಣದಲ್ಲಿಯೂ ಅವರ ದರ್ಶನ ಪಡೆಯುವುದಕ್ಕಾಗಿ ಅಥವಾ ಅವರ ಉಡುಪಿನ ಅಂಚನ್ನು ಮುಟ್ಟಿದರೆ ಸಾಕೆಂದು ಜನರ ದೊಡ್ಡ ಗುಂಪುಗಳು ನೆರೆಯುತ್ತಿದ್ದವು......*

* ರಥೀಂದ್ರನಾಥ ಠಾಕೂರ್, ಆನ್ ದಿ ಎಡ್ಜಸ್ ಆಫ್ ಟೈಮ್, ಫ್ರಾಂಟಿಯರ್ ಇನ್ ಯೂರೋಪ್.

ಇದರ ನಂತರದ ಎರಡು ಪ್ರವಾಸಗಳೂ ಸ್ವಲ್ಪ ಕಾಲದಲ್ಲಿ ಮುಗಿದವು. ಅವರನ್ನು ಇಂಡೋನೇಷ್ಯಕ್ಕೆ ಆಹ್ವಾನಿಸಿದ ಹಾಲೆಂಡಿನ ಪ್ರೊಫೆಸರ್ ಎ ಎ. ಬೇಕ್ ಅವರು ಮೊದಲನೆಯ ಪ್ರವಾಸಕ್ಕೆ ಕಾರಣರು. ಈ ಪ್ರವಾಸ 1927 ರ ಜುಲೈ ತಿಂಗಳಲ್ಲಿ ಪ್ರಾರಂಭವಾಗಿ ಡಿಸೆಂಬರ್ ತಿಂಗಳಲ್ಲಿ ಮುಗಿಯಿತು. ಈ ಪ್ರವಾಸದಲ್ಲಿ ಅವರೊಡನೆ ಪ್ರಸಿದ್ಧ ಭಾಷಾಶಾಸ್ತ್ರಜ್ಞ, ಪ್ರೊಫೆಸರ್ ಸುನೀತಿ ಕುಮಾರ ಚಟರ್ಜಿಯವರೂ ಕಲಾವಿದ, ಸುರೇಂದ್ರನಾಥ ಕಾರ್ ಅವರೂ ಹೋದರು. ಅವರೆಲ್ಲರನ್ನು ಅಲ್ಲಿ ಬರಮಾಡಿಕೊಳ್ಳಲು ಪ್ರೊಫೆಸರ್ ಬೇಕ್ ಅವರು ಮೊದಲೇ ಇಂಡೋನೇಷ್ಯಕ್ಕೆ ಹೋಗಿದ್ದರು.

ಠಾಕೂರರು ಮತ್ತು ಅವರ ಜೊತೆಗಾರರು ಮಲಯಾ ಪರ್ಯಾಯದ್ವೀಪಕ್ಕೆ ಭೇಟಿಕೊಡುವ ಮೊದಲು ಸಿಂಗಪುರದಲ್ಲಿ ಇಳಿದರು. ಅನಂತರ ಅವರು ಇಂಡೊನೇಷ್ಯಕ್ಕೆ ಹೊರಟರು. ಸುಮಾತ್ರದಲ್ಲಿ ಅವರು ಪ್ರಸಿದ್ಧ ಬುರಬುದೂರ್ ದೇವಾ-ಲಯಕ್ಕೆ ಭೇಟಿ ಕೊಟ್ಟರು. ಈ ದ್ವೀಪಗಳ ಜನರು ಒಂದು ಘಟ್ಟದಲ್ಲಿ ಹಿಂದೂ ಸಂಸ್ಕೃತಿ ಯನ್ನು ಆತ್ಮಗತಮಾಡಿಕೊಂಡಿದ್ದರು ಎಂಬುದಕ್ಕೆ ಈ ದೇವಾಲಯ ಸ್ಪಷ್ಟವಾದ ಸಾಕ್ಷಿಯಾಗಿದೆ. ಅವರ ಚರಿತ್ರೆಯಲ್ಲಿ ಮುಂದೆ ಒಂದು ಕಾಲದಲ್ಲಿ ಅವರು ಇಸ್ಲಾಮ್ ಮತವನ್ನವಲಂಬಿಸಿದರು. ಬಾಲಿ ದ್ವಿಪದಲ್ಲಿದ್ದ ಅಲ್ಪ ಸಂಖ್ಯಾತರ ಗುಂಪು ಮಾತ್ರ ಹಿಂದೂ ಧರ್ಮವನ್ನು ಉಳಿಸಿಕೊಂಡಿತು. ಹೀಗೆ ಜನತೆಯಲ್ಲಿ ಬಹು ಮಂದಿ ಇಸ್ಲಾಂ ಮತವನ್ನನುಸರಿಸಿದರು. ಅದರೆ ಹಿಂದೂ ಸಂಸ್ಕೃತಿಯನ್ನು ಉಳಿಸಿಕೊಂಡರು. ಎರಡೂ ಸಂಸ್ಕೃತಿಗಳು ಬೆಳೆದುಕೊಂಡಂತೆ ಕಾಣುವ ವಿಶಿಷ್ಟ ನಿದರ್ಶನ ಇದು.

ಠಾಕೂರರು ಜಾವದಲ್ಲಿ ಸರಬಾಯ ಮತ್ತು ಜಗಜಕಾರ್ಟಾ(ಇಂದಿನ ಜಕಾರ್ತ) ಗಳಿಗೆ ಭೇಟಿಕೊಟ್ಟು ಬಾಲಿಗೆ ಹೋದರು. ಅಲ್ಲಿನ ಸ್ತ್ರೀಯರು ನೃತ್ಯಾಭ್ಯಾಸದಲ್ಲಿ ತುಂಬ ಆಸಕ್ತಿವಹಿಸುತ್ತಾರೆ. ಬಾಲಿಯ ಮಹಿಳೆಯರು ನೃತ್ಯಪ್ರದರ್ಶನದಿಂದ ಠಾಕೂರರಿಗೆ ತುಂಬಾ ಸಂತೋಷವನ್ನು ಕೊಟ್ಟರು. ಅವರ ಚಲನೆಗಳ ಬೆಡಗನ್ನು ಅವರು ತುಂಬಾ ಮೆಚ್ಚಿಕೊಂಡರು. ಭಾರತಕ್ಕೆ ಹಿಂದಿರುಗಿದಾಗಲೂ ಅದರ ಮಧುರ ನೆನಪು ಉಳಿದಿತ್ತು.

ಈಸ್ಟ್ ಇಂಡೀಸ್ (ಈಗ ಇಂಡೋನೇಷ್ಯಾ) ನಲ್ಲಿ ಅವರು ತಂಗಿದ್ದಾಗ,

ಕಲಾವಿದ ಸುರೇಂದ್ರನಾಥ ಕಾರ್ ಅವರು ಬಟ್ಟೆಗಳ ಮೇಲೆ ಅಚ್ಚಾದ ವಿನ್ಯಾಸಗಳನ್ನು–ಇದಕ್ಕೆ ತಾಂತ್ರಿಕವಾಗಿ 'ಬಾಟಿಕ್' ಎಂದು ಹೆಸರು ವಿಶೇಷವಾಗಿ ಮೆಚ್ಚಿಕೊಂಡರು. ಈ ಪ್ರಕ್ರಿಯೆಯಲ್ಲಿ ಬಳಸುವ ವಿಶಿಷ್ಟ ತಾಂತ್ರಿಕ ವಿಧಾನವು ಮತ್ತು ಬಳಸಿಕೊಂಡು ಒಂದನ್ನೊಂದು ಸಂಧಿಸುವ ಗೆರೆಗಳಿಂದ ಸುಂದರವಾದ ವಿನ್ಯಾಸ ಸೃಷ್ಟಿಯಾಗುತ್ತದೆ. ಈ ಗೆರೆಗಳು ವಿನ್ಯಾಸಕ್ಕೆ ಚೆನ್ನವೇ ಆದ ಸೊಗಸನ್ನು ನೀಡುತ್ತವೆ. ಶಾಂತಿನಿಕೇತನದ ಸೋದರಿ ಸಂಸ್ಥೆಯಾದ ಶ್ರೀನಿಕೇತನಕ್ಕೆ ಕಾರ್‌ರು ಈ ತಂತ್ರವನ್ನು ತಂದರು. ಬಳಕೆದಾರರಿಗೆ ಅದರ ಸಹಜ ಯೋಗ್ಯತೆ ಹಿಡಿಸಿತು. ಈಗ ಅದು ಬಹು ಜನಪ್ರಿಯವಾದ ಫ್ಯಾಶನ್ ವಿನ್ಯಾಸ.

ಹಿಂದಿರುಗುವಾಗ ಅವರೆಲ್ಲ ಥೈಲೆಂಡಿನ ರಾಜಧಾನಿ, ಬ್ಯಾಂಕಾಕ್‌ಗೆ ಬಹು ಸ್ವಲ್ಪ ಸಮಯದ ಭೇಟಿ ನೀಡಿದ್ದರು. ಅಲ್ಲಿಂದ ಭಾರತಕ್ಕೆ 1927 ರ ಅಕ್ಟೋಬರ್ 27 ರಂದು ಬಂದರು.

ಅನಂತರ ಕೆನಡಾದಿಂದ ಬಂದ ಆಹ್ವಾನಕ್ಕೆ ವಿಶೇಷ ಮಹತ್ವವಿತ್ತು. ಈವರೆಗೆ ಠಾಕೂರರು ಶ್ರೇಷ್ಠ ಸಾಹಿತಿಗಳೆಂಬ ಕಾರಣಕ್ಕಾಗಿ ಅವರಿಗೆ ಆಹ್ವಾನಗಳು ಬರುತ್ತಿದ್ದವು. ಈ ಬಾರಿ ಆಹ್ವಾನ ಬಂದದ್ದು ಕೆನಡಾದ ನ್ಯಾಷನಲ್ ಕೌನ್ಸಿಲ್ ಆಫ್ ಎಜ್ಯುಕೇಷನ್ನಿನವರು ಶೈಕ್ಷಣಿಕ ಸಮಸ್ಯೆಗಳ ಚರ್ಚೆಗಾಗಿ ಏರ್ಪಡಿಸಿದ್ದ ಸಮ್ಮೇಳನದಲ್ಲಿ ಭಾಗವಹಿಸಲೆಂದು. ಇದರಿಂದ ಠಾಕೂರರು ಅಂತರಾಷ್ಟ್ರೀಯ ಖ್ಯಾತಿ ಗಳಿಸಿದ ಶಿಕ್ಷಣತಜ್ಞರೆಂಬ ಅಂತರಾರ್ಥವಿದ್ದಿತು. ಶಿಕ್ಷಣವನ್ನು ಕುರಿತು ಅವರು ಮಾತನಾಡಬೇಕೆಂಬ ವಿಶೇಷ ವಿನಂತಿಯೂ ಇದ್ದಿತು. ಈ ಬಾರಿ ಅವರೊಂದಿಗೆ ಇಬ್ಬರು ಅಭಿಮಾನಿಗಳು–ಉಪಾಧ್ಯಾಯರಾಗಿದ್ದ, ಅಪೂರ್ವ ಕುಮಾರ ಚಂದ ಮತ್ತು ಉದಯೋನ್ಮುಖ ಕವಿ, ಸುಧೀಂದ್ರನಾಥ ದತ್ತ ಹೋದರು. ಮೆಥಡಿಸ್ಟ್ ಚರ್ಚಿನ ಪ್ರೊಫೆಸರ್ ಟಕರ್ ಅವರೂ ಅವರು ಜೊತೆಗೆ ಹೊರಟರು.

ಕೆನಡಾದಲ್ಲಿ ಅವರಿದ್ದುದು ಹತ್ತೇದಿನಗಳು. ಸಮ್ಮೇಳನ ಪಶ್ಚಿಮ ತೀರದಲ್ಲಿದ್ದ ವಾಂಕುವರಿನಲ್ಲಿ ನಡೆಯಲಿದ್ದುದರಿಂದ 1929 ರ ಮಾರ್ಚ್ ತಿಂಗಳಲ್ಲಿ ಅವರು ಶಾಂತಿ ಸಾಗರವನ್ನು ದಾಟಿದರು. ಹಿಂದಿರುಗುವಾಗ ಅವರು ಜಪಾನಿನಲ್ಲಿ ಸ್ವಲ್ಪ ಕಾಲ ನಿಂತರು. ಅಲ್ಲಿ ಅವರ ಅಭಿಮಾನಿಗಳ ಬಲಾತ್ಕಾರದಿಂದ ಒಂದು ಹೊಸ ಬಗೆಯ ಸಾಹಿತ್ಯ ರಚನೆಯನ್ನು ಮಾಡಬೇಕಾಯಿತು. ಕೈಯಲ್ಲಿ ಸಣ್ಣ ಬೀಸಣಿಗೆ

ಗಳನ್ನು ಕೊಂಡೊಯ್ಯುವುದು ಈ ಜನರಲ್ಲಿ ರೂಢಿ. ತಮ್ಮ ಸಹಿ ಇರುವ ಬರಹಗಳನ್ನು ಅವುಗಳ ಮೇಲೆ ಮೂಡಿಸುವಂತೆ ಠಾಕೂರರ ಅಭಿಮಾನಿಗಳು ಪೀಡಿಸಿದುದರಿಂದ ಅವರು ಬೀಸಣಿಗೆಗಳ ಮೇಲೆ ಬರೆಯಲು ಕೆಲವೇ ಪಂಕ್ತಿಗಳ ಸ್ವಯಂಪೂರ್ಣ ರಚನೆಗಳನ್ನು ಸೃಷ್ಟಿಸಬೇಕಾಯಿತು. ಇಂತಹ ರಚನೆಗಳು ಎಷ್ಟೊಂದು ಸೇರಿಬಿಟ್ಟುವೆಂದರೆ 'ಫೈರ್‌ಫ್ಲೈಸ್' (ಮಿಂಚು ಹುಳುಗಳು) ಎಂಬ ಹೆಸರಿನಿಂದ ಅವುಗಳ ಸಂಗ್ರಹವನ್ನೆ ಪುಸ್ತಕ ರೂಪದಲ್ಲಿ ಪ್ರಕಟಿಸಲು ಸಾಧ್ಯವಾಯಿತು. ಪುಸ್ತಕದ ಹೆಸರು ಇವು ವೈಚಾರಿಕತೆಯ ಕಿಡಿಗಳು ಎಂಬುದನ್ನು ಸೂಚಿಸುತ್ತದೆ. ಎರಡು ರಚನೆಗಳನ್ನು ಮಾದರಿಗಾಗಿ ಇಲ್ಲಿ ಕೊಡಬಹುದು.

(1) "ಆಳ ತಿಳಿಯಲಾಗದ ಇರುಳುಗಳ
ಮೇಲ್ಮೈಯ ಮೇಲೆ ತೇಲುವ
ವರ್ಣಮಯ ಬುದ್ಬುದಗಳೇ ಹಗಲುಗಳು.

(2) ಆವಿಯಲ್ಲಿನ ಗುಡ್ಡಗಳೆ ಮೋಡಗಳು.
ಕಲ್ಲಿನಲ್ಲಿನ ಮೋಡಗಳೆ ಗುಡ್ಡಗಳು–
ಕಾಲದ ಕನಸಿನ ಭ್ರಮೆ."

ಮತ್ತೆ ಠಾಕೂರರು ಕೈಗೊಂಡ ವಿದೇಶೀ ಪ್ರವಾಸ ವಿಶಾಲವಾಗಿದ್ದದ್ದು ಮಾತ್ರವಲ್ಲ, ಹಲವು ರೀತಿಗಳಲ್ಲಿ ಅರ್ಥಪೂರ್ಣವಾಗಿತ್ತು. ಅದು 1930 ರ ಮಾರ್ಚ್ ತಿಂಗಳಲ್ಲಿ ಪ್ರಾರಂಭವಾಗಿ ಅದೇ ವರ್ಷ ಡಿಸೆಂಬರಿನಲ್ಲಿ ಮುಗಿಯಿತು. ಅಮೆರಿಕಾದ ಸಂಯುಕ್ತ ಸಂಸ್ಥಾನಗಳು. ಬ್ರಿಟನ್ ಮತ್ತು ರಷ್ಯವೂ ಸೇರಿದಂತೆ ಯೂರೋಪುಗಳನ್ನು ಒಳಗೊಂಡಿತ್ತು. ಠಾಕೂರರು ರಷ್ಯಕ್ಕೆ ಭೇಟಿ ಕೊಡುತ್ತಿದ್ದುದು ಅದೇ ಮೊದಲ ಬಾರಿ. ಆ ಹೊತ್ತಿಗೆ ರಷ್ಯ ಸಂಪೂರ್ಣವಾಗಿ ಕಮ್ಯುನಿಸ್ಟರ ಹಿಡಿತಕ್ಕೆ ಬಂದಿತ್ತು. ಸಾಮಾಜಿಕ ಬದಲಾವಣೆಯಲ್ಲಿ ಅವರು ಒಂದು ದೊಡ್ಡ ಪ್ರಯೋಗವನ್ನೆ ನಡೆಸಿದ್ದರು. ಈ ಪ್ರಯೋಗಕ್ಕೆ ಠಾಕೂರರ ಪ್ರತಿಕ್ರಿಯೆಗಾಗಿ ಇಡೀ ಜಗತ್ತು ಕಾದಿತ್ತು.

ಇನ್ನೊಂದು ರೀತಿಯಲ್ಲೂ ಈ ಪ್ರವಾಸ ಮಹತ್ವದ್ದಾಗಿತ್ತು. ತಮ್ಮ ಜೀವನದ ಆರನೆಯ ದಶಕ ಮುಗಿಯುತ್ತಿದ್ದಾಗ ಠಾಕೂರರಿಗೆ ಅಭಿವ್ಯಕ್ತಿಯ ಮಾಧ್ಯಮವಾಗಿ ಚಿತ್ರಕಲೆಯಲ್ಲಿ ಆಕರ್ಷಣೆ ಮೂಡಿತ್ತು. ವಾಸ್ತವವಾಗಿ ಅವರು ತಮ್ಮ ಹಸ್ತಪ್ರ

ತಿಗಳಲ್ಲಿನ ತಪ್ಪುಗಳನ್ನು ತಿದ್ದುತ್ತಿದ್ದ ರೀತಿಯಿಂದ ಅದರ ಸೆಳೆತಕ್ಕೆ ಸಿಕ್ಕರು. ಹೀಗೆ ಸರಿಪಡಿಸುವಾಗ ಅವರು ತಿದ್ದುಪಡಿಗಳಿಗೆ ಲಯುಬದ್ಧವಾದ ರೂಪಕೊಡುತ್ತಿದ್ದರು. ಹೀಗೆ ಮಾಡುವಾಗ ವಿಚಿತ್ರ ರೂಪಗಳು ಮೂಡಿದವು. ಇದರಿಂದ ಆಕರ್ಷಿತರಾಗಿ ಅವರು ಕಲೆಯ ಕ್ಷೇತ್ರದಲ್ಲೊಂದು ಸಾಹಸ ಎಂದು, ಲೇಖನಿಯನ್ನೂ ಬಳಸಿ ಈ ರೂಪಗಳನ್ನು ಪ್ರತ್ಯೇಕವಾಗಿ ಸೃಷ್ಟಿಸಲು ಪ್ರಾರಂಭಿಸಿದರು. ಅನಂತರ ಮನುಷ್ಯರ ತಲೆಗಳು, ಆಕಾರಗಳು ಮತ್ತು ಪ್ರಕೃತಿ ದೃಶ್ಯಗಳಂತಹ ಇತರ ವಸ್ತುಗಳು ಅವರನ್ನು ಆಕರ್ಷಿಸಿದವು. ತಮ್ಮ ಆರಿಸಿದ ಚಿತ್ರಗಳನ್ನು ಯೂರೋಪ್ ಮತ್ತು ಅಮೆರಿಕಗಳಲ್ಲಿ ಪ್ರದರ್ಶಿಸಬೇಕೆಂದು ಠಾಕೂರರು ನಿರ್ಧರಿಸಿದರು. ಆದ್ದರಿಂದ ಈ ಭೇಟಿಯ ಕಾಲದಲ್ಲಿ ಅವರ ಚಟುವಟಿಕೆಗಳ ಇನ್ನೊಂದು ಮುಖವನ್ನು ಹೊರಗಿನ ಜಗತ್ತು ಕಂಡಿತು. ಅವರ ಇಂಗ್ಲೀಷ್ 'ಗೀತಾಂಜಲಿ' ಉಂಟುಮಾಡಿದ ಕೋಲಾಹಲಕ್ಕೆ ಇದನ್ನು ಹೋಲಿಸುವಂತಿಲ್ಲವಾದರೂ ಯೂರೋಪಿನ ಜನರಲ್ಲಿ ಇದು ಆಸಕ್ತಿಯನ್ನು ಕೆರಳಿಸಿತು. ಈ ಮುಪ್ಪಿನಲ್ಲೂ ಸೃಜನ ಕ್ರಿಯೆಯ ಇದೊಂದು ರೂಪದಲ್ಲಿ ಪ್ರಯೋಗಗಳನ್ನು ಕೈಗೊಳ್ಳುವಷ್ಟು ಅವರ ಮನಸ್ಸು ಸತ್ವಶಾಲಿಯಾಗಿತ್ತೆಂಬುದನ್ನು ತೋರಿಸಿಕೊಟ್ಟಿದ್ದರಿಂದ ಇದು ಇನ್ನೂ ಒಂದು ರೀತಿಯಲ್ಲಿ ಮಹತ್ವಪೂರ್ಣವೆನಿಸಿತು.

ಮತ್ತೊಂದು ಮಹತ್ವದ ಸಂಗತಿ ಎಂದರೆ ಈ ಬಾರಿ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯವು ಹಿಬ್ಬರ್ಟ್ ಉಪನ್ಯಾಸಗಳನ್ನು ನೀಡಲು ಅವರನ್ನು ಆಹ್ವಾನಿಸಿತೆಂಬುದು. ಸಾಮಾನ್ಯವಾಗಿ ಈ ಉಪನ್ಯಾಸಗಳನ್ನು ನೀಡುವವರು ಶ್ರೇಷ್ಠ ತತ್ತ್ವಶಾಸ್ತ್ರಜ್ಞರು, ಆದರೆ ಈ ಬಾರಿ ಠಾಕೂರರ ಪರವಾಗಿ ಈ ಸಂಪ್ರದಾಯವನ್ನು ಬಿಡಲಾಯಿತು. ಅವರು ವಾಸ್ತವವಾಗಿ ತತ್ವಜ್ಞಾನಿಗಳೇ. ಇದನ್ನು ಗುರುತಿಸಿದ ವಿಶ್ವವಿದ್ಯಾನಿಲಯವು ತನ್ನ ಸೂತ್ರಧಾರಿಗಳು ವಿವೇಚನೆಯುಳ್ಳವರು ತತ್ವಜ್ಞಾನವನ್ನು ಕಾಲೇಜಿನಲ್ಲಿ ಒಂದು ವಿಷಯವಾಗಿ ಅಧ್ಯಯನ ಮಾಡುವವರಷ್ಟರಲ್ಲಿಯೇ ಹುಡುಕದೆ ಈ ಹಿರಿಯರ ಕಾವ್ಯವಾಣಿಯಲ್ಲೂ ಗುರುತಿಸಬಲ್ಲವರು ಎನ್ನುವುದನ್ನು ತೋರಿಸಿಕೊಟ್ಟಿತು.

ಈ ಬಾರಿ ಠಾಕೂರರೊಂದಿಗೆ ಅವರ ಮಗ, ಸೊಸೆ ಹೊರಟರು. ಹಿಬ್ಬರ್ಟ್ ಉಪನ್ಯಾಸಗಳು 1930 ರ ಮೇ ತಿಂಗಳೊಳಗೆ ನಡೆಯಬೇಕಾಗಿದ್ದುದರಿಂದ ಅವರೆಲ್ಲ ಮೊದಲು ಬ್ರಿಟನಿಗೆ ಹೋದರು. ಅವರು ನೀಡಿದ ಉಪನ್ಯಾಸಗಳನ್ನು ಮುಂದೆ

ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯವು 'ದ ರಿಲಿಜನ್ ಆಫ್ ಮ್ಯಾನ್' ಎಂಬ ಹೆಸರಿನ ಪುಸ್ತಕವಾಗಿ ಪ್ರಕಟಿಸಿತು. ಠಾಕೂರರ ತತ್ವಜ್ಞಾನಕ್ಕೆ ಧರ್ಮವನ್ನು ಕುರಿತ ಅವರ ಪರಿಕಲ್ಪನೆಯೇ ಕೇಂದ್ರ. ಅವರೇ ಹೇಳುವಂತೆ ಅದು ಒಬ್ಬ ಕವಿ ಕಂಡ ಧರ್ಮ. ರೂಢಿಯಲ್ಲಿರುವ ಯಾವುದೇ ಧಾರ್ಮಿಕ ಆಚರಣೆಗೆ ಹೊಂದಿಕೊಂಡಿದ್ದಲ್ಲ. ಅವರ ಮನಸ್ಸು ರೂಪುಗೊಳ್ಳುತ್ತಿದ್ದ ಕಾಲದಿಂದ ಅದೂ ಬೆಳೆದು ಬಂದಿತ್ತು. ಮುಖ್ಯವಾಗಿ ಅವರ ಒಲವುಗಳು ಮತ್ತು ಮನೋಧರ್ಮದಿಂದ ರೂಪಿತವಾಗಿ ಕಡೆಗೆ ಒಂದು ದರ್ಶನವಾಯಿತು. ಈ ವಿಷಯವಾಗಿ ಅವರೇ ಹೇಳಿರುವ ಮಾತುಗಳಿವು :

"ನಮ್ಮ ಭಗವಂತನ ಮಾನವೀಯತೆ ಅಥವಾ ಅನಂತ ಮಾನವನ ದೈವತ್ವವೇ ಈ ಪುಸ್ತಕದ ವಸ್ತು. ಭಗವಂತನನ್ನು ಕುರಿತ ವಿಚಾರವು ಯಾವುದೇ ತತ್ತ್ವ ಶಾಸ್ತ್ರಕ್ಕನುಗುಣವಾದ ಚಿಂತನೆಯಿಂದ ನನ್ನ ಮನಸ್ಸಿನಲ್ಲಿ ಬೆಳೆದದ್ದಲ್ಲ. ತದ್ವಿರುದ್ಧ ವಾಗಿ, ಅದು ಪ್ರಾರಂಭದ ದಿನಗಳಿಂದ ನನ್ನ ಮನೋಧರ್ಮದ ಗತಿಯನ್ನನುಸರಿ ಸುತ್ತ ಬಂದು ಇದ್ದಕ್ಕಿದ್ದಂತೆ ನನ್ನ ಪ್ರಜ್ಞೆಗೆ ಒಂದು ನೇರದರ್ಶನವಾಗಿ ಮಿಂಚಿತು. "*

ಅವರ ಧಾರ್ಮಿಕ ವಿಚಾರಧಾರೆಯು ಬೆಳೆಯುತ್ತ ಹೋದಂತೆ ಮತ್ತು ಇತರ ಬರಹಗಳಲ್ಲಿ ಅಭಿವ್ಯಕ್ತಿ ಪಡೆಯಿತು. ಪರಿಣಾಮವಾಗಿ ಚೂರು ಚೂರಾಗಿ ಹರಿದು ಹಂಚಿಹೋಯಿತು. ಈ ಪುಸ್ತಕವು ಅವರ ವಿಚಾರಧಾರೆಯನ್ನು ಅರ್ಥಮಾಡಿ ಕೊಳ್ಳಲು ಅಮೂಲ್ಯ ಸಾಮಗ್ರಿಯನ್ನು ಒದಗಿಸಿತು. ತಮ್ಮ ತತ್ವಜ್ಞಾನವನ್ನು ಕುರಿತು ತಮ್ಮ ಎಲ್ಲ ಚಿಂತನೆಯನ್ನೂ ಒಂದೆಡೆ ಕೂಡಿಸಲು ಇಲ್ಲಿ ಅವರು ಮೊಟ್ಟ ಮೊದಲಬಾರಿಗೆ ಪ್ರಯತ್ನಿಸಿದರು. ಈ ರೀತಿಯಲ್ಲಿ ಅದು ಈ ಜಟಿಲವಾದ ವಿಷಯವನ್ನು ಕುರಿತು ತುಂಬಾ ಉಪಯುಕ್ತವಾದ ಆಧಾರವಾಯಿತಲ್ಲದೆ ಅರ್ಥ ಮಾಡಿಕೊಳ್ಳುವುದಕ್ಕೂ ಬಹು ಸಹಾಯಕವಾಗುವ ಸೂಚನೆಗಳನ್ನು ಕೊಡುತ್ತದೆ. ಅವರ ಮನಸ್ಸನ್ನು ಅರ್ಥಮಾಡಿಕೊಳ್ಳಲು ಸುಲಭವಾಗಿ ಕೈಗೆಟಕುವ ಬೀಗದ ಕೈಯನ್ನು ಅದು ಒದಗಿಸಿತು.

ಆಕ್ಸ್‌ಫರ್ಡ್‌ನಲ್ಲಿ ಉಪನ್ಯಾಸಗಳನ್ನು ಮುಗಿಸಿ ಠಾಕೂರರು ಪ್ಯಾರಿಸಿಗೆ ಹೋದರು. ಅವರ ಮುಖ್ಯ ಉದ್ದೇಶ, ಕಲಾವಿದರ ಮತ್ತು ಶ್ರೇಷ್ಠ ರಸಜ್ಞರ

* "ದರಿಲಿಜನ್ ಆಫ್ ಮ್ಯಾನ್", ಮ್ಯಾನ್ಸ್ ಯೂನಿವರ್ಸ್.

ತವರಾದ ಈ ನಗರದಲ್ಲಿ ತಮ್ಮ ಚಿತ್ರಗಳ ಪ್ರದರ್ಶನವನ್ನು ಏರ್ಪಡಿಸುವುದು. ಸುಯೋಗದಿಂದ 1920 ರಲ್ಲಿ ಇದೇ ನಗರದಲ್ಲಿ ಅವರಿಗೆ ಪರಿಚಿತರಾದ ಇಬ್ಬರು ಸ್ನೇಹಿತರು ಅವರಿಗೆ ನೆರವಾಗಲು ಮುಂದೆ ಬಂದರು. ಅವರಲ್ಲಿ ಒಬ್ಬರು ಆ ನಗರದವರೇ ಆಗಿದ್ದ ಪ್ರಸಿದ್ಧ ಕಲಾಪೋಷಕರಾದ ಕಾಂಟೆಸ್ ದ ನೂಯ್. ಮತ್ತೊಬ್ಬರು ಕವಿಗಳು 1924 ರಲ್ಲಿ ಪೆರುವಿಗೆ ಹೋಗುವಾಗ ಅಸ್ವಸ್ಥರಾದ ಸಮಯದಲ್ಲಿ ಅವರಿಗೆ ಶುಶ್ರೂಷೆ ಮಾಡಿ ಅವರಿಗೆ ಪ್ರಿಯರಾಗಿದ್ದ ಬೋನಸ್ ಐರಿಸಿನ ವಿಟ್ಟೋರಿಯೋ ಒಕಾಂಪೋ. ಈ ಇಬ್ಬರು ಸ್ನೇಹಿತರು ವಹಿಸಿದ ಶ್ರದ್ಧೆಯಿಂದ ಪ್ಯಾರಿಸಿನಲ್ಲಿ ಠಾಕೂರರ ಚಿತ್ರಗಳ ಪ್ರದರ್ಶನ ಯಶಸ್ವಿಯಾಯಿತು.

ತಮ್ಮ ಚಿತ್ರಗಳ ಪ್ರದರ್ಶನವನ್ನು ಆ ನಗರದಲ್ಲಿ ಏರ್ಪಡಿಸುವ ಉದ್ದೇಶದಿಂದ ಠಾಕೂರರು ಮುಂದೆ ಬರ್ಲಿನಿಗೆ ಹೋದರು. ಅವರ ಪ್ರವಾಸದ ಈ ಕಾಲದಲ್ಲಿ ಪ್ರೊಫೆಸರ್ ಅಮಿಯ ಚಕ್ರವರ್ತಿಯವರೂ ಅವರ ಜೊತೆಗೆ ಹೋದರು. ಮತ್ತೆ ಅವರ ಸ್ನೇಹಿತ ವರ್ಗದ ಒಬ್ಬ ಮಹಿಳೆ, ಡಾಕ್ಟರ್ ಸೆಲಿಗ್, ಪ್ರದರ್ಶನದ ವ್ಯವಸ್ಥೆಯ ಹೊಣೆಯನ್ನು ಹೊತ್ತುಕೊಂಡರು. ಅಗತ್ಯವಾದಾಗ ಅವರ ನೆರವಿಗೆ ಧಾವಿಸುವ ಇಷ್ಟೊಂದು ಮಂದಿ ಸ್ನೇಹಿತರನ್ನು ಬೇರೆ ಬೇರೆ ದೇಶಗಳಲ್ಲಿ ಕವಿಗಳಿಸಿಕೊಂಡಿದ್ದರು ಎನ್ನುವುದು ಗಮನಾರ್ಹ ಸಂಗತಿ. ಅವರ ವ್ಯಕ್ತಿತ್ವದ ಆಕರ್ಷಣೆಗೆ ಇದು ಸಮೃದ್ಧ ಸಾಕ್ಷಿ.

ಬರ್ಲಿನಿನಿಂದ ಠಾಕೂರರು ಎಲೆಸಿನಿನಲ್ಲಿ ಒಂದು ವಿದ್ಯಾರ್ಥಿ ಸಭೆಯನ್ನು ಉದ್ದೇಶಿಸಿ ಮಾತನಾಡಲು ಡೆನ್‌ಮಾರ್ಕಿಗೆ ಹೋಗಿ ಅಲ್ಲಿಂದ ಜಿನಿವಾಕ್ಕೆ ಹೋದರು. ಅಲ್ಲಿ ತಂಗಿದ್ದಾಗ ಸೋವಿಯತ್ ರಷ್ಯಾಗೆ ಭೇಟಿಕೊಡಲು ಅವರಿಗೆ ಆಹ್ವಾನ ಬಂದಿತು. ಈವರೆಗೆ ಅವರು ಆ ದೇಶಕ್ಕೆ ಹೋಗಿರಲಿಲ್ಲ. ಹೊಸ ಸಾಮಾಜಿಕ ರಾಜಕೀಯ ವ್ಯವಸ್ಥೆಯ ಪ್ರಯೋಗವು ಅಲ್ಲಿ ಹೇಗೆ ಮುಂದುವರಿಯುತ್ತಿದೆ ಎಂದು ತಿಳಿಯುಕೊಳ್ಳಲು ಅವರಿಗೆ ಸಹಜವಾಗಿಯೇ ಕುತೂಹಲವಿತ್ತು. ಆದುದರಿಂದ ಆಹ್ವಾನವನ್ನು ಸಂತೋಷದಿಂದ ಸ್ವೀಕರಿಸಿದರು. ಹೊಸ ವ್ಯವಸ್ಥೆಯಲ್ಲಿ ಒಳಿತಾದುವನ್ನು ಅವರು ನಿಸ್ಸಂಕೋಚವಾಗಿ ಮತ್ತು ಅತ್ಯಂತ ಸಹಜವಾಗಿ ಮೆಚ್ಚಿಕೊಂಡರು. ಮುಂದೆ ಎರಡು ದೇಶಗಳ ನಡುವೆ ಬಲವಾದ ಸಾಂಸ್ಕೃತಿಕ ಸಂಬಂಧಗಳು ಬೆಳೆದು ಬರಲು ಈ ಮೆಚ್ಚಿಕೆ ಬುನಾದಿಯಾಯಿತು.

ಮಾಸ್ಕೊದಲ್ಲಿ ರಷ್ಯನ್ ಲೇಖಕರೂ ಒಂದು ಸಾಂಸ್ಕೃತಿಕ ಸಂಘವೂ ಅವರಿಗೆ ಸ್ವಾಗತ ಸಮಾರಂಭವನ್ನು ಏರ್ಪಡಿಸಿದವು. ಆನಂತರ ಮಾರ್ಗನಿರ್ಮಾಪಕ 'ಕಮ್ಯೂನ್' ಒಂದಕ್ಕೆ ಅವರನ್ನು ಕರೆದುಕೊಂಡು ಹೋದರು, ಅಲ್ಲಿನ ಮಕ್ಕಳೊಂದಿಗೆ ಠಾಕೂರರು ಆತ್ಮೀಯವಾಗಿ ಬೆರೆತರು. 1930 ರ ಸೆಪ್ಟೆಂಬರಿನ ಕೊನೆಯ ಭಾಗದಲ್ಲಿ ಅವರು ಮಾಸ್ಕೊಗೆ ಹಿಂದಿರುಗಿದರು. ಅಲ್ಲಿ ಕೇಂದ್ರ ಕಾರ್ಮಿಕ ಸಂಘದ ಕಚೇರಿಯಲ್ಲಿ ಒಂದು ಸಭೆಯಲ್ಲಿ ಮಾತನಾಡಿದರು.

ಠಾಕೂರರು ರಷ್ಯನರ ಜೀವನ ವಿಧಾನವನ್ನು ಸ್ನೇಹದಿಂದ ಮೆಚ್ಚಿಕೊಂಡಿದ್ದು ಆ ದೇಶದೊಂದಿಗೆ ಅವರ ಬಾಂಧವ್ಯವನ್ನು ನಿಕಟಗೊಳಿಸಿತು. ಅವರ ಚಿತ್ರಗಳ ಪ್ರದರ್ಶನಕ್ಕೆ ಎಲ್ಲ ಸೌಲಭ್ಯಗಳೂ ದೊರತವು. ಪ್ರದರ್ಶನವೂ ಪ್ರಶಂಸೆಯನ್ನು ಗಳಿಸಿತು.

ತಮ್ಮ ಚಿತ್ರಗಳನ್ನು ನ್ಯೂಯಾರ್ಕಿನಲ್ಲಿ ಮತ್ತೊಮ್ಮೆ ಪ್ರದರ್ಶಿಸಬೇಕೆಂದು ಠಾಕೂರರು ಉತ್ಸುಕರಾಗಿದ್ದುದರಿಂದ ಅವರು ರಷ್ಯದಿಂದ ಅಮೆರಿಕಕ್ಕೆ ಹೊದರು. ಅವರ ಪ್ರಯತ್ನದಿಂದ ಪ್ರದರ್ಶನವೇನೂ ನಡೆಯಿತು. ಆದರೆ ಹಿಂದಿನ ಬಾರಿ ಕಂಡು ಬಂದ ಉತ್ಸಾಹದ ಮೆಚ್ಚಿಕೆ ಸಂಪೂರ್ಣವಾಗಿ ಮಾಯವಾಗಿತ್ತೆಂಬುದು ಸ್ಪಷ್ಟವಾಗಿತ್ತು. ಪ್ರಾಯಶಃ ಠಾಕೂರರು, ರಷ್ಯದ ಸಮಾಜದಲ್ಲಿ ತಮಗೆ ಒಳಿತೆಂದು ಕಂಡದ್ದನ್ನು ಮುಚ್ಚುಮರೆ ಇಲ್ಲದೆ ಮೆಚ್ಚಿಕೊಂಡಿದ್ದು ಅಮೆರಿಕದಲ್ಲಿನ ಅವರ ಸ್ನೇಹಿತರ ಉತ್ಸಾಹಕ್ಕೆ ತಣ್ಣೀರನ್ನು ಎರಚಿತ್ತು.

ರಷ್ಯದ ತಮ್ಮ ಭೇಟಿಯ ಅನುಭವನ್ನು ಠಾಕೂರರು ಪತ್ರಗಳ ರೂಪದಲ್ಲಿ ಬರೆದಿಟ್ಟಿದ್ದಾರೆ, ಇವನ್ನು ಒಟ್ಟಿಗೆ ಸೇರಿಸಿ 'ರಸ್ಸಿಯರ್ ಚೀಟಿ' ಎಂಬ ಸಂಕಲನದಲ್ಲಿ ಪ್ರಕಟಿಸಿದೆ. ಈ ಪತ್ರಗಳಲ್ಲಿ ಅವರು ಹೇಳಿದ ಮಾತುಗಳು ಈ ದೇಶದಲ್ಲೂ ಹೊರಗಡೆಯೂ ಕೋಲಾಹಲವನ್ನೇ ಉಂಟು ಮಾಡಿದವು. ಆ ದೇಶದಲ್ಲಿ ನಡೆಯುತ್ತಿದ್ದ ಪ್ರಯೋಗಗಳಿಗೆ ಪ್ರೇರಣೆ ಇತ್ತ ಕಮ್ಯೂನಿಸ್ಟ್ ವಿಚಾರಧಾರೆ ತೀರ ಹೊಸದಾಗಿದ್ದು, ಅದರ ವಿರುದ್ಧ ಪೂರ್ವಾಗ್ರಹವಿದ್ದದ್ದು ಅರ್ಥವಾಗುವಂತಹ ಸಂಗತಿಯೇ. ರಷ್ಯನರ ಜೀವನ ರೀತಿಯಲ್ಲಿ ಒಳಿತೆಂದು ಕಂಡದ್ದನ್ನು ಮನಸ್ಸಾರೆ ಅವರು ಹೊಗಳಿದ್ದು ಅವರಿಗೆ ರಷ್ಯದ ಜನತೆಯ ಸ್ನೇಹವನ್ನು ತಂದು ಕೊಟ್ಟಿತು. ಆದರೆ ಅವನ್ನು ಅವರ ದೇಶದವರೇ ಉಗ್ರವಾಗಿ ಟೀಕಿಸಿದ ಪ್ರಸಂಗ ವಿರಳವೇನಲ್ಲ.

ಅಷ್ಟೇ ಅಲ್ಲ, ಈ ರೀತಿ ಟೀಕೆಗಳು ಅವರನ್ನು ಕೆಣಕಿ ವಾದ ವಿವಾದಕ್ಕೆಳೆಯುವಂತೆ ಮಾಡಿದವು. ಇದು ಪತ್ರಗಳಲ್ಲೂ ಪ್ರತಿಬಿಂಬಿತವಾಗಿದೆ. ಠಾಕೂರರಿಗೆ ಅನ್ಯಾಯವಾಗದಿರಬೇಕಾದರೆ ಅವರಂತೆ ಸೂಕ್ಷ್ಮ ಮನಸ್ಸಿನವರು ಪೂರ್ವಾಗ್ರಹವಿಲ್ಲದವರು ಯಾರೇ ಆಗಲಿ ಏನು ಮಾಡುತ್ತಿದ್ದರೋ ಅಷ್ಟನ್ನೆ ಅವರು ಮಾಡಿದರೆಂಬುದನ್ನು ಗಮನಿಸಬೇಕು. ಅವರಿಗೆ ಒಳ್ಳೆಯದೆಂದು ಕಂಡದ್ದನ್ನು ಅವರು ಹೊಗಳಿದರು, ನಿಜ, ಆದರೆ ವಿವೇಚನೆಯಿದ್ದ ಅವರ ದೃಷ್ಟಿ ಮುಖ್ಯ ದೋಷಗಳನ್ನು ತೋರಿಸದೆ ಹೋಗಲಿಲ್ಲ.

ರಷ್ಯನ್ ವ್ಯವಸ್ಥೆಯ ಎರಡು ವಿಶಾಲ ಸಾಧನೆಗಳು ಅವರ ಮೆಚ್ಚಿಕೆಯನ್ನು ಗೆದ್ದವು. ಮೊದಲನೆಯದು, ಜನ ಸಾಮಾನ್ಯಕ್ಕೆ ವಿದ್ಯಾಭ್ಯಾಸ ನೀಡಲು ಬೃಹತ್ ಪ್ರಮಾಣದ ಏರ್ಪಾಟು. ಎರಡನೆಯದು, ಸಾಕಷ್ಟು ಸೌಲಭ್ಯಗಳಿಲ್ಲದವರ್ಗಗಳನ್ನು, ಆತ್ಮಗೌರವನ್ನು ಬೆಳೆಕೊಳ್ಳಲು ನೆರವಾಗುವ ಸ್ಥಿತಿಗೆ ಮೇಲೆತ್ತಿದ್ದು.

ಆದರೆ ಈ ಸಾಧನೆಗಳಿಗೆ ಸ್ಫೂರ್ತಿ ನೀಡಿದ ವಿಚಾರ ರೀತಿಯ ಏಕಪಕ್ಷೀಯತೆಯನ್ನು ಠಾಕೂರರು ಗಮನಿಸದೆ ಹೋಗಲಿಲ್ಲ. ಸಮಾಜದಲ್ಲಿ ಎರಡು ಪಕ್ಷಗಳಿವೆ, ಇವೆಂದರೆ ಸಮುದಾಯ ಮತ್ತು ವ್ಯಕ್ತಿ. ಪರಸ್ಪರ ವಿರೋಧವಾದ ಈ ವರ್ಗಗಳ ಹಿತಗಳ ಸಾಮರಸ್ಯವನ್ನು ಸಾಧಿಸದೆ ಹೋದ ವ್ಯವಸ್ಥೆಯು ತೊಂದರೆಯ ಬೀಜವನ್ನು ತನ್ನಲ್ಲಿ ಅಡಗಿಸಿ ಕೊಂಡಿರುತ್ತದೆ. ಆದರೆ ಇವೆರಡರ ನಡುವೆ ಒಂದು ಸಾಂಕೇತಿಕ ಬಾಂಧವ್ಯವಿದೆ. ಆದುದರಿಂದ ಪರಸ್ಪರ ವಿರುದ್ಧವೆನಿಸುವ ಹಿತಾಸಕ್ತಿಗಳ ಸಾಮರಸ್ಯವು ಪರಸ್ಪರ ಕಲ್ಯಾಣಕ್ಕೂ ಹಾದಿಯಾಗುತ್ತದೆ. ದುರದೃಷ್ಟದಿಂದ, ಕೈಗಾರಿಕಾ ಕ್ರಾಂತಿಯ ನಂತರ ಬಂಡವಾಳಷಾಹಿ ವ್ಯವಸ್ಥೆಯ ಬೆಳವಣಿಗೆಯು ಅನಪೇಕ್ಷಣೀಯ ಪ್ರಮಾಣದಲ್ಲಿ ವ್ಯಕ್ತಿಯ ಹಿತಾಸಕ್ತಿಯನ್ನು ಸಮರ್ಥಿಸಿದ್ದು, ಸಂಪತ್ತು ಮತ್ತು ಆರ್ಥಿಕ ಶಕ್ತಿ ಕೆಲವೇ ಕೈಗಳಲ್ಲಿ ಕೂಡಿಯುವಂತಾಯಿತು. ಇದು ಸಮುದಾಯದ ಹಿತಾಸಕ್ತಿಗಳಿಗೆ ಕೊಡಲಿಪೆಟ್ಟು ಹಾಕಿತು. ಇದಕ್ಕೆ ಪ್ರತಿಕ್ರಿಯೆಯಾಗಿ ಹೊಸ ವ್ಯವಸ್ಥೆಯಲ್ಲಿ ಸಮುದಾಯಕ್ಕೆ ಮಾತ್ರ ಲಕ್ಷ್ಯವೀಯಲಾಯಿತು. ಈ ವಾದಗ್ರಸ್ತ ವಿಷಯದಲ್ಲಿ, ಇದು ಸರಿಸುಮಾರಾಗಿ ಠಾಕೂರರ ಅಭಿಪ್ರಾಯ. ಇದರ ಸಮರ್ಥನೆಗೆ ಅವರ ಪತ್ರಗಳಿಂದ ಕೆಲವು ಪ್ರಸ್ತುತ ಭಾಗಗಳನ್ನು ಉದ್ಧರಿಸಬಹುದು. ರಷ್ಯದಲ್ಲಿ ಶಿಕ್ಷಣವನ್ನು ಕುರಿತು ಅವರೆನ್ನುತ್ತಾರೆ:

"ನಾನೀಗ ನೋಡುತ್ತಿರುವ ಸಂಗತಿ ನನ್ನನ್ನು ಬೆರಗುಗೊಳಿಸುತ್ತದೆ. ನಮ್ಮ

ಸಮಸ್ಯೆಗಳಲ್ಲಿ ಅತಿ ದೊಡ್ಡದು ಶಿಕ್ಷಣ. ಈವರೆಗೆ ಜನರಲ್ಲಿ ಬಹು ಮಂದಿಗೆ ವಿದ್ಯಾಭ್ಯಾಸದ ಸಂಪೂರ್ಣ ಸೌಲಭ್ಯಗಳಿರಲಿಲ್ಲ. ಭಾರತದಲ್ಲಿ ಸೌಲಭ್ಯಗಳಿಲ್ಲದೇ ಇಲ್ಲ. ಜನತೆಯು ಎಲ್ಲ ಸ್ತರಗಳಲ್ಲಿ ಅಚ್ಚರಿಗೊಳಿಸುವ ಉತ್ಸಾಹದಿಂದ ಶಿಕ್ಷಣವನ್ನು ಹೇಗೆ ಹರಡಲಾಗುತ್ತಿದೆ ಎಂಬುದನ್ನು ಕಂಡಾಗ ಬೆರಗಾಗದಿರಲು ಸಾಧ್ಯವಿಲ್ಲ. ಮನಸ್ಸಿನ ಮೇಲೆ ಪರಿಣಾಮವನ್ನು ಬೀರುವುದು ಶಿಕ್ಷಣ ಎಷ್ಟೊಂದು ಮಂದಿಗೆ ದೊರಕುತ್ತಿದೆ ಎಂಬುದು ಮಾತ್ರವಲ್ಲ, ಅದರ ಸಮಗ್ರತೆ ಮತ್ತು ವೇಗವೂ ಸಹ."*

ಶಿಕ್ಷಣವನ್ನು ವಿಸ್ತರಿಸಲು ಕೈಗೊಂಡ ವ್ಯಾಪಕ ಕ್ರಮಗಳು ಠಾಕೂರರ ಮನಸ್ಸಿಗೆ ಮುಟ್ಟಿವೆಂಬುದು ಸ್ಪಷ್ಟ. ಆದರೆ ಅನುಸರಿಸಿದ ಮಾರ್ಗ ಅವರಿಗೆ ಅಷ್ಟೊಂದು ಸಮಾಧಾನವೆನಿಸಲಿಲ್ಲ. ಸ್ವತಂತ್ರವಾಗಿ ಯೋಚನೆ ಮಾಡುವ ಶಕ್ತಿಯನ್ನು ನಾಶಪಡಿಸುವ ಮತ್ತು ಅದೇ ಕಾಲದಲ್ಲಿ ಕಾರ್ಖಾನೆಗಳಲ್ಲಿ ಬೃಹತ್ ಪ್ರಮಾಣದಲ್ಲಿ ಉತ್ಪಾದಿಸುವ ದಿನ ಬಳಕೆಯ ವಸ್ತುಗಳಂತೆ ಅಪೇಕ್ಷಿತ ಮಾದರಿಗೆ ಹೊಂದಿಕೊಳ್ಳುವಂತೆ ವಿದ್ಯಾರ್ಥಿಗಳ ಮನಸ್ಸನ್ನು ರೂಪಿಸುವ ಲಕ್ಷಣವುಳ್ಳ ವಿಧಾನವನ್ನು ಸಿದ್ಧಗೊಳಿಸಿದ್ದರೆಂಬುದನ್ನು ಅವರು ಗಮನಿಸಿದರು. ಇಂತಹ ವ್ಯವಸ್ಥೆ ತಮಗೆ ಅಪ್ರಿಯವೆಂಬುದನ್ನು ಹೇಳಲು ಅವರು ಹಿಂದೆಗೆಯಲಿಲ್ಲ ಎಂಬುದನ್ನು ಈ ಕೆಳಗಿನ ಮಾತುಗಳು ತೋರಿಸುತ್ತವೆ.

"ಇದರಲ್ಲಿ ದೋಷವೇ ಇಲ್ಲ ಎಂದೇನೂ ನಾನೆನ್ನುತ್ತಿಲ್ಲ. ಪ್ರಬಲದೋಷವೇ ಇದೆ. ಇದರಿಂದ ಎಂದೋ ಒಂದು ದಿನ ಅವರು ತೀರ ಹೆಚ್ಚಿನ ತೊಂದರೆಯನ್ನು ಎದುರಿಸಬೇಕಾಗುತ್ತದೆ. ಕೆಲವೇ ಮಾತುಗಳಲ್ಲಿ ಹೇಳಬೇಕೆಂದರೆ. ವಿದ್ಯಾಭ್ಯಾಸ ನೀಡಲು ಅನುಸರಿಸಿರುವ ಮಾರ್ಗಗಳಿಂದ ಅವರೊಂದು ಅಚ್ಚನ್ನು ಸಿದ್ಧಮಾಡಿದ್ದಾರೆ. ಆದರೆ ಅಚ್ಚಿನಲ್ಲಿ ಸಿದ್ಧವಾದ ವ್ಯಕ್ತಿತ್ವ ಬಹು ಕಾಲ ಉಳಿಯಲಾರದು.

"ಶಿಕ್ಷಣದ ಸಿದ್ಧಾಂತವು ಜೀವಂತ ಮನಸ್ಸನ್ನು ಒಪ್ಪಿಕೊಳ್ಳಲಾರದಾದರೆ, ಒಂದಲ್ಲ ಒಂದು ದಿನ ಅಚ್ಚು ಚೂರು ಚೂರಾಗುವುದು ಇಲ್ಲವೇ ಬಿಗಿತದಿಂದ ಮನಸ್ಸು ಒಣಗಿ ಹೋಗುವುದು ಅಥವಾ ಯಂತ್ರವಾಳುವ ಸಾಧನದ ಮಟ್ಟಕ್ಕೆ ಇಳಿಯುವುದು."**

---

* "ರಷ್ಯಿಯರ್ ಚೀಟಿ"—1

** "ರಷ್ಯಿಯರ್ ಚೀಟಿ—1"

ಇದೇ ರೀತಿ ಹೊಸ ಆಡಳಿತವು ರೂಪಿಸಿದ ಆರ್ಥಿಕ ವ್ಯವಸ್ಥೆಯನ್ನು ಕುರಿತು ಅವರೆನ್ನುತ್ತಾರೆ:

"ನನಗೆ ಇಲ್ಲಿ ಬಹು ಹಿಡಿಸಿದ ಸಂಗತಿ ಎಂದರೆ ಶ್ರೀಮಂತಿಕೆಯಿಂದ ಬರುವ ಸಂಸ್ಕೃತಿರಹಿತ ಗರ್ವದ ಕಣ್ಮರೆ. ಇದೊಂದೇ ಕಾರಣದಿಂದ ಶ್ರೀಸಾಮಾನ್ಯನ ಆತ್ಮ ಪ್ರಯತ್ನವು ನಿರುಪಾಧಿಕವಾಗಿ ಬೆಳೆದಿದೆ. ರೈತ ಮತ್ತು ಕಾರ್ಮಿಕರಂತೆ ಹಕ್ಕಿನ ಅಸಮಾನತೆಗೊಳಗಾದ ವರ್ಗಗಳವರೆಲ್ಲ ವಿಶೇಷ ಹಕ್ಕುಗಳಿರುವವರ ಗರ್ವವನ್ನು ಕೊಡವಿ ಹಾಕಿ ತಲೆ ಎತ್ತಿ ನಿಲ್ಲುವುದು ಸಾಧ್ಯವಾಗಿದೆ, ಇದನ್ನು ಕಂಡು ನನಗೆ ಸಂತೋಷವಾದಷ್ಟೆ ಅಚ್ಚರಿಯೂ ಆಗಿದೆ."*

ರಷ್ಯದಲ್ಲಿ ಅನುಸರಿಸಿದ ಹೊಸ ಆರ್ಥಿಕ ವ್ಯವಸ್ಥೆಯು ಉತ್ಪಾದನೆಯನ್ನು ಸಮಾಜಕ್ಕೆ ಒಪ್ಪಿಸಿದುದಷ್ಟೇ ಅಲ್ಲ, ವ್ಯಕ್ತಿಯ ಕ್ರಿಯಾ ಸ್ವಾತಂತ್ರ್ಯವನ್ನೂ ನಿರಾಕರಿಸಿತು. ಈ ಕೆಳಗೆ ಉದ್ಧರಿಸಿರುವ ಅವರ ಮಾತುಗಳಿಂದ ಸ್ಪಷ್ಟವಾಗು ವಂತೆ ಈ ಹೊಸ ವ್ಯವಸ್ಥೆಯಲ್ಲಿನ ಅಸಾಂಗತ್ಯವನ್ನು ಠಾಕೂರರು ಗಮನಿಸದೆ ಹೋಗಲಿಲ್ಲ:

"ಈ ಸಮಸ್ಯೆಗೆ ಹೊಂದಾಣಿಕೆಯ ಮಾರ್ಗವಲ್ಲದೆ ಬೇರೆ ಪರಿಹಾರವಿದೆ ಎಂದು ನನಗೆ ಅನ್ನಿಸುವುದಿಲ್ಲ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ವೈಯಕ್ತಿಕ ಸ್ವಾಮ್ಯವನ್ನು ಉಳಿಸಿಕೊಳ್ಳಬೇಕು. ಆದರೂ ವ್ಯಕ್ತಿಯ ಅನುಭೋಗಕ್ಕೆ ಮಿತಿ ಇರಬೇಕು. ಮಿತಿಯಾಚೆ ಇರುವುದೆಲ್ಲ ಸಮುದಾಯದ ಬಳಕೆಗೆ ಲಭ್ಯವಾಗಬೇಕು. ದುರಾಸೆ ಅಥವಾ ಕ್ರೌರ್ಯದಿಂದ ಪ್ರೇರಿತವಾದ ಮೋಸದಲ್ಲಿ ಆಸ್ತಿಯ ಒಡೆತನ ಕಡೆಗಾಣದಿರಬೇಕಾದರೆ ಇದೊಂದೇ ಮಾರ್ಗ.

"ಈ ಸಮಸ್ಯೆಯನ್ನು ಪರಿಹರಿಸುವ ಪ್ರಯತ್ನದಲ್ಲಿ ಸೋವಿಯತ್ ರಷ್ಯ ಸಮಸ್ಯೆಯೇ ಇಲ್ಲ ಎಂದಿದೆ. ಈ ಉದ್ದೇಶದಿಂದ ಉಂಟಾಗುವ ಬಲಾತ್ಕಾರಕ್ಕೆ ಕೊನೆಯೇ ಇಲ್ಲ. ವ್ಯಕ್ತಿಗೆ ಕ್ರಿಯಾ ಸ್ವಾತಂತ್ರ್ಯವೇ ಇರಬಾರದು ಎಂದು ಹೇಳ ಬರುವುದಿಲ್ಲ. ನನ್ನ ಮಾತಿನ ಅರ್ಥವೆಂದರೆ, ವ್ಯಕ್ತಿಗೆ ಅವನ ಅಗತ್ಯವಾದದ್ದು ಇರಬೇಕು. ಆದರೆ ಅದರಾಚೆ ಎಲ್ಲ ಸಮುದಾಯದ ಉಪಯೋಗಕ್ಕಾಗಬೇಕು.

* "ರಷ್ಯಿಯರ್ ಚೀಟಿ—2"

ಪರಿಹಾರವಿರುವುದು ವ್ಯಕ್ತಿ ಮತ್ತು ಸಮುದಾಯ ಎರಡರ ಹಕ್ಕುಗಳನ್ನೂ ಒಪ್ಪಿಕೊಳ್ಳುವುದರಲ್ಲಿ."*

ಈ ಕಾಲಕ್ಕೆ ಠಾಕೂರಿಗೆ ಎಪ್ಪತ್ತು ವರ್ಷ. 1912 ರಂದ 1930 ರವರೆಗೆ ಒಂಬತ್ತು ಬಾರಿ ಭಾರತದಾಚೆ ಪ್ರವಾಸ ಹೋಗಿದ್ದರು. ವಯಸ್ಸಿನ ಭಾರದಿಂದ ಕುಗ್ಗಿದ ಅವರು ಮತ್ತೆ ಇಂತಹ ಪ್ರಯಾಸವನ್ನು ತಡೆದುಕೊಳ್ಳುವಂತಿರಲಿಲ್ಲ. ಆದರೂ, ಹೊರ ಜಗತ್ತಿನೊಡನೆ ಸಾಂಸ್ಕೃತಿಕ ಬಾಂಧವ್ಯವನ್ನು ಬೆಸೆಯುವಂತಿದ್ದರ ಅವರು ಆಹ್ವಾನಗಳನ್ನು ತಿರಸ್ಕರಿಸುತ್ತಿರಲಿಲ್ಲ.

ಆದುದರಿಂದ ಪರ್ಷಿಯದ ಚಕ್ರವರ್ತಿ ರೇಜಾ ಷಾ ಪೆಹ್‌ಲ್ವಿ ಅವರನ್ನು ಆಹ್ವಾನಿಸಿದಾಗ ಠಾಕೂರರು ಒಪ್ಪಲೇ ಬೇಕಾಯಿತು. ಈ ಬಾರಿ ಅವರು ವಿಮಾನದಲ್ಲಿ ಹೋಧರು. ಪ್ರತಿಮಾದೇವಿ, ಕೇದಾರನಾಥ ಚಟರ್ಜಿ ಮತ್ತು ಅಮಿಯ ಚಕ್ರವರ್ತಿಯವರು ಅವರೊಂದಿಗೆ ಹೋದರು.

ಇಬ್ಬರು ಕವಿಗಳು, ಸಾದಿ ಮತ್ತು ಹಾಫೀಜರ ಸಮಾಧಿಗಳಿರುವ ಸಿರಾಜ್‌ಗೆ ಅವರು ಮೊದಲು ಹೋದರು. ಸಾದಿಯ ಸಮಾಧಿಗೆ ಸೇರಿದ ವನದಲ್ಲಿ ಸ್ವಾಗತ ಸಮಾರಂಭವು ಏರ್ಪಾಟಾಗಿತ್ತು. ಅನಂತರ ಅವರು ಹಾಫೀಜ್‌ನ ಸಮಾಧಿಗೆ ಭೇಟಿಕೊಟ್ಟರು.

ರಾಜಧಾನಿ ಟೆಹರಾನಿನಲ್ಲಿ ಅವರಿಗೆ ಭವ್ಯ ಸ್ವಾಗತದ ವ್ಯವಸ್ಥೆಯಾಗಿತ್ತು. ಅನಂತರ ಚಕ್ರವರ್ತಿಯೊಡನೆ ಭೇಟಿ. ಇರಾನಿನ ಜನರು ಅವರಿಗೆ ಎಲ್ಲೆಲ್ಲೂ ಬಹು ಆತ್ಮೀಯ ಸ್ವಾಗತವನ್ನು ನೀಡಿದರು. ಇದಕ್ಕೆ ವಿಶೇಷವಾದ ಕಾರಣವಿರಬೇಕೆಂದು ಠಾಕೂರರು ಸರಿಯಾಗಿಯೇ ಊಹಿಸಿದರು. ಆ ಜನರಿಗೆ ಅವರು ಒಬ್ಬ ಶ್ರೇಷ್ಠ ಕವಿಯಷ್ಟೇ ಆಗಿರಲಿಲ್ಲ. ಏಷ್ಯಕ್ಕೆ ಸೇರಿದವರಾದ್ದರಿಂದ ತಮ್ಮವರೆಂದು ಅವರು ಹೇಳಿಕೊಳ್ಳಬಹುದಾದ ಕವಿ. ಅವರ ಸಾಧನೆಗಾಗಿ ತಾವೂ ಹೆಮ್ಮೆಪಡಬಹುದಾದ ಕವಿಯೂ ಆಗಿದ್ದರು. 'ಠಾಕೂರರೂ ಒಬ್ಬ ಇಂಡೋ–ಆರ್ಯನರು, ಇಂಡೋ-ಇರಾನಿಯನರ ಪೂರ್ವಜರ ಸಮಾನ ಮೂಲ ಬುಡಕಟ್ಟಿನಿಂದಲೇ ಬಂದವರು'

* "ರಸ್ಸಿಯರ್ ಚೀಟಿ—5"

ಎಂದೂ ಅವರು ಭಾವಿಸಿದ್ದರು. ಆದ್ದರಿಂದ ಅವರು ಠಾಕೂರರು ರಕ್ತ ಸಂಬಂಧದಿಂದ ತಮ್ಮವರೆಂದು ಸ್ವೀಕರಿಸಿದರು.*

ಹಿಂದಿರುಗುವಾಗ ಠಾಕೂರರು ಖಲೀಫರ ನಾಡಾದ ಇರಾಕಿಗೂ ಸ್ವಲ್ಪ ಕಾಲದ ಭೇಟಿ ನೀಡಿದರು. ಬಾಗ್ದಾದಿನ ಮೂಲಕ ಅವರು ಮರಳಿ ತಾಯ್ನಾಡಿಗೆ 1932 ರ ಜೂನ್ ತಿಂಗಳಲ್ಲಿ ಬಂದರು.

ಇದಾದನಂತರ ಠಾಕೂರರಿಗೆ ವಿದೇಶೀ ಪ್ರಯಾಣಮಾಡಲು ಒಮ್ಮೆ ಮಾತ್ರ ಮನ ವೊಲಿಸುವುದು ಸಾಧ್ಯವಾಯಿತು. ಸಮುದ್ರಯಾನ ಮಾಡಿ ಮೇ 1934 ರಲ್ಲಿ ಸಿಲೋನಿಗೆ (ಶ್ರೀಲಂಕಾ) ಹೊರಟರು. ಈ ಪ್ರವಾಸ ಸುಮಾರು ಒಂದು ತಿಂಗಳಕಾಲ ನಡೆಯಿತು. ಉಪನ್ಯಾಸಗಳನ್ನು ಮಾಡಿದ್ದಲ್ಲದೆ ಠಾಕೂರರು ಕೊಲಂಬೊದಲ್ಲಿ ತಮ್ಮ ಚಿತ್ರಗಳ ಪ್ರದರ್ಶನವನ್ನು ನಡೆಸಿದರು. ಸಾಂಸ್ಕೃತಿಕವಾಗಿ ಭಾರತೀಯರ ಬಂಧುಗಳಾದ ಆ ಜನ ಠಾಕೂರರನ್ನು ತಮ್ಮವರೆಂದೇ ಕಂಡು ಆತ್ಮೀಯತೆಯಿಂದ ಸ್ವಾಗತಿಸಿದರು.

ಕೊಲಂಬೋಗೆ ಹೋದದ್ದು ಠಾಕೂರರ ಕಡೆಯ ವಿದೇಶೀ ಪ್ರವಾಸ. ಅವರಿಗಾಗ ಎಪ್ಪತ್ತುಮೂರುವರ್ಷ. ಅನಂತರ ಅವರ ನಿಶ್ಶಕ್ತಿಯು ಇಂತಹ ಕಾರ್ಯಕ್ರಮಗಳನ್ನು ಕೈ ಬಿಡುವಂತೆ ಮಾಡಿತು.

---

* ಪರಪ್ಪ

ಅಧ್ಯಾಯ ೧೨

ಶಿಕ್ಷಣತಜ್ಞರು ಮತ್ತು ಸಮಾಜ ಕಾರ್ಯನಿರತರು

ಠಾಕೂರರು ಶಿಕ್ಷಣತಜ್ಞರಾಗುವಂತೆ ಪ್ರೇರೇಪಿಸಿದ ಅಂಶಗಳು ಎರಡು. ಮೊದಲನೆಯದಾಗಿ ಅವರ ಮಗನು ಬೆಳೆದು, ಶಾಲೆಯಲ್ಲಿ ಕ್ರಮಬದ್ಧ ವಿದ್ಯಾಭ್ಯಾಸ ಅಗತ್ಯವಾಯಿತು. ಠಾಕೂರರ ಶಾಲಾ ಜೀವನದ ಕಹಿ ಅನುಭವವು ಅವರು ತಮ್ಮ ಮಗನನ್ನು ಬೇರೊಂದು ಬಗೆಯ ಶಾಲೆಗೆ ಕಳಿಸುವಂತೆ ಪ್ರೇರೇಪಿಸಿತು. ಎರಡನೆಯದಾಗಿ, ತಮ್ಮ ಆತ್ಮಸಾಕ್ಷಾತ್ಕಾರದ ಒಂದು ಘಟ್ಟವಾಗಿ ತಾವು ನಿರಪೇಕ್ಷವಾಗಿ ಯಾವುದಾದರೂ ಸೇವೆಯಲ್ಲಿ ತೊಡಗಬೇಕೆಂದು ಅವರೊಳಗೇ ತೀವ್ರ ಭಾವನೆಯಿತ್ತು. ಈ ಎರಡು ಸೇರಿ ಅವರು ಶಾಂತಿನಿಕೇತನದಲ್ಲಿ ಶಾಲೆಯನ್ನು ಸ್ಥಾಪಿಸುವ ನಿರ್ಣಯ ಕೈಗೊಳ್ಳುವಂತೆ ಅವರನ್ನು ಪ್ರೇರೇಪಿಸಿದವು.

ಹೀಗೆ 1901 ರಲ್ಲಿ ಶಾಲೆ ಸ್ಥಾಪಿತವಾಯಿತು. ನಿಧಾನವಾಗಿ ಅದು ಸ್ಥಿರತೆಯನ್ನೂ ತನ್ನದೇ ಆದ ಖ್ಯಾತಿಯನ್ನೂ ಪಡೆದುಕೊಂಡಿತು. ಅದು ನಿವಾಸೀ ಶಾಲೆ ಸರಿ ಸುಮಾರಾಗಿ ಭಾರತದ ಪ್ರಾಚೀನ ಅರಣ್ಯಾಶ್ರಮಗಳಲ್ಲಿನ ಗುರುಕುಲ

ಗಳ ಮಾದರಿಯನ್ನೇ ಅನುಸರಿಸಿತ್ತು. ಈ ಶತಮಾನದ ಎರಡನೇ ದಶಕದ ಸುಮಾರಿನಲ್ಲಿ ಅದು ಮುಂದಿನ ಬೆಳವಣಿಗೆಗೆ ಅಣಿಯಾಗಿತ್ತು. ಭದ್ರವಾದ ಬುನಾದಿಯ ಮೇಲೆ ಒಂದೇ ಸಮನೆ ಪ್ರಗತಿ ಹೊಂದಿದ್ದು ಅದು ಈಗ ಮತ್ತೊಂದು ಕಟ್ಟಡದ ಭಾರವನ್ನು ಹೊರಲು ಶಕ್ತವಾಗಿತ್ತು. ಈ ಮೇಲಿನ ಕಟ್ಟಡದ ರೂಪ ಹೇಗಿರಬೇಕೆಂಬುದೇ ಪ್ರಶ್ನೆಯಾಗಿತ್ತು.

ಸರಿಯಾದ ಕಾಲ ಬಂದಾಗ ಈ ಪ್ರಶ್ನೆಗೆ ಠಾಕೂರರೇ ಉತ್ತರ ಹೇಳಿದರು. ಆ ಹೊತ್ತಿಗೆ ಅವರು ಜಗತ್ತಿನ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬರೆಂದು ಖ್ಯಾತಿ ಪಡೆದಿದ್ದರು. ತಮ್ಮ ಆಧ್ಯಾತ್ಮಿಕ ಸಾಧನೆಗಳಿಂದ ಮತ್ತು ಆಕರ್ಷಕ ವ್ಯಕ್ತಿತ್ವ ದಿಂದ ವಿದೇಶಗಳ ಜನರೂ ಅವರ ಮಾತಿಗೆ ಕಿವಿಗೊಡಬೇಕೆನ್ನುವಂತಹ ಸ್ಥಾನವನ್ನು ಅವರು ಗಳಿಸಿಕೊಂಡಿದ್ದರು. ಈ ಎಲ್ಲ ಗುಣಗಳ ಸಮ್ಮಿಳನದಿಂದ ಅವರು ಭಾರತದ ಆಧ್ಯಾತ್ಮಿಕ ರಾಯಭಾರಿಯ ಹೊಣೆಗೆ ಸಹಜವಾಗಿ ಅರ್ಹರಾಗಿದ್ದರು. ಅವರಿಗೆ ವಿವಿಧ ದೇಶಗಳಿಂದ ಆಹ್ವಾನಗಳು ಬಂದವು. ತಮ್ಮ ಪ್ರವಾಸಗಳಲ್ಲಿ ಅವರು ಉಪನ್ಯಾಸಗಳನ್ನು ಮಾಡುವರೆಂಬ ನಿರೀಕ್ಷಣೆ ಇತ್ತು. ಅವರಂತೆ ಭಾರತೀಯ ಸಂಸ್ಕೃತಿಯನ್ನು ಅಡಗಿಸಿಕೊಂಡಿದ್ದವರು ವಿರಳ. ಆದುದರಿಂದ ಅವರ ಉಪನ್ಯಾಸ ಗಳಿಗೆ ಹೋದವರು ಭಾರತದ ಸಂದೇಶವನ್ನು ಕೇಳಿದರು. ಅವರು 'ಭಾರತದ ವಾಣಿ ಯಾಗಿ, ಆ ನಾಡಿನ ಸಂಸ್ಕೃತಿಯ ಜೀವಂತ ಪ್ರತೀಕವಾಗಿ' ಮಾತನಾಡುತ್ತಿದ್ದರೆಂದು ತಿಳಿಯಲು ಅವರಿಗೆ ಕಷ್ಟವೇ ಆಗಲಿಲ್ಲ.*

ಭಾರತದ ಸಂದೇಶವನ್ನು ಇತರ ದೇಶಗಳಿಗೆ ಕೊಂಡೊಯ್ಯಬೇಕೆಂದು ತಾವೇ ಸ್ವೀಕರಿಸಿದ್ದ ಹೊಣೆಯನ್ನು ಠಾಕೂರರು ನಿರ್ವಹಿಸುತ್ತಿದ್ದಾರೆ ಎಂದು ಅವರು ಗ್ರಹಿಸಿದ್ದಷ್ಟೇ ಅಲ್ಲ. ಆ ನಾಡಿನ ಅಗತ್ಯಗಳು ಅವರಿಗೆ ಸಂಪೂರ್ಣವಾಗಿ ಸ್ಪಷ್ಟ ವಾದವು. ಠಾಕೂರರು ಎಷ್ಟು ಪರಿಣಾಮಕಾರಿಯಾಗಿ ತಮ್ಮ ಪಾತ್ರವನ್ನು ನಿರ್ವಹಿಸಬಲ್ಲರು ಎನ್ನುವುದನ್ನೂ ಅವರು ಮೆಚ್ಚಿಕೊಂಡರು. ಇದೇ ಮೂಲದಿಂದ ತೆಗೆದುಕೊಂಡ ಕೆಳಗಿನ ವಾಕ್ಯ ಇದನ್ನು ಸಮರ್ಥಿಸುತ್ತದೆ :

"ಭಾರತದ ಹಿರಿಯ ಮತ್ತು ಗತಕಾಲವನ್ನು–ಕಲೆ, ವೇದಾಂತ ಮತ್ತು ನೀತಿ

* "ಲೆಕ್ಚರ್ಸ್ ಅಂಡ್ ಆಡ್ರೆಸ್", ಮುನ್ನುಡಿ, ಮೆಕ್‌ಮಿಲನ್ ಅಂಡ್ ಕೋ ಸಂಗ್ರಹಿಸಿದ್ದು.

ಶಾಸ್ತ್ರಗಳಲ್ಲಿ ಅದರ ಸಾಧನೆಗಳನ್ನು, ಭೇಟಿಕೊಡುತ್ತಿದ್ದ ಜಗತ್ತಿನ ಇತರ ಭಾಗಗಳಿಗೆ ತಮ್ಮ ದೇಶದ ಉಡುಗೊರೆಯಾಗಿ ಕೊಂಡೊಯ್ದು ಭಾರತದ ಚೇತನವನ್ನು ಜಗತ್ತಿನ ಇತರ ಭಾಗಕ್ಕೆ ತಿಳಿಸಿಹೇಳುವ ಮಹತ್ಕಾರ್ಯವನ್ನು ಡಾಕ್ಟರ್ ಠಾಕೂರರು ತಮಗೆ ತಾವೇ ನೇಮಿಸಿಕೊಂಡರು."*

ಹೊರದೇಶಗಳವರು ತಮ್ಮ ಉಪನ್ಯಾಸಗಳನ್ನು ಹೆಚ್ಚು ಹೆಚ್ಚಾಗಿ ಮೆಚ್ಚಿಕೊಳ್ಳುತ್ತಿದ್ದಾರೆ ಎನ್ನುವುದು ಠಾಕೂರರಿಗೆ ವೇದ್ಯವಾಗತೊಡಗಿತು. ತಮ್ಮ ಪ್ರವಾಸ ಕಾಲದಲ್ಲಿ ತಮಗೆ ದೊರೆಯುತ್ತಿದ್ದ ಆತ್ಮೀಯ ಸ್ವಾಗತಕ್ಕೆ ಪ್ರೇರಣೆ ತಮ್ಮ ಮೂಲಕ ಅವರು ಭಾರತದ ವಾಣಿಯನ್ನು ಕೇಳುತ್ತಿದುದು ಎನ್ನುವುದು ಠಾಕೂರರಿಗೇ ತಿಳಿದಿತ್ತು. ತಮಗೆ ಹರ್ಷೋದ್ಗಾರದ ಪ್ರಶಂಸೆ ತಮಗಾಗಿ ಅಲ್ಲ, ತಾವು ಪ್ರತಿನಿಧಿಸಿದ ಭಾರತದ ಆಧ್ಯಾತ್ಮಿಕ ಪರಂಪರೆಗಾಗಿ. ಈ ಅರಿವಿನಿಂದಲೇ ಅವರಿಗೆ ಭಾರತದ ಆಧ್ಯಾತ್ಮಿಕ ಸಂಪತ್ತಿಗಾಗಿ ಹೊರಗಿನ ಜನ ಹಸಿದಿದ್ದಾರೆ ಎಂಬುದು ಹೊಳೆದದ್ದು.

ಈ ಅರಿವು ಮತ್ತೊಂದು ಯೋಜನೆಯನ್ನು ತಂದಿತು. ಈ ಬೇಡಿಕೆ ಸರಿಸುಮಾರಾಗಿ ನಿರಂತರವೇ ಆದದ್ದರಿಂದ ತಾವು ನಿರ್ವಹಿಸುತ್ತಿದ್ದ ಕರ್ತವ್ಯವನ್ನು ಶಾಶ್ವತವಾಗಿ ವಹಿಸಿಕೊಳ್ಳಲು ಸಂಸ್ಥೆಯೊಂದು ಇರಬೇಕು ಎಂದು ಅನಿಸಿತು ಅವರಿಗೆ. ಶಾಂತಿನಿಕೇತನದಲ್ಲಿದ್ದ ಸಂಸ್ಥೆಯು ಒಂದು ವಿಶಿಷ್ಟ ಮಾದರಿಯ ವಿಶ್ವವಿದ್ಯಾನಿಲಯವಾಗಬೇಕೆಂದು ಅವರು ತೀರ್ಮಾನಿಸಿದ್ದು ಈ ಕಾರಣದಿಂದಲೇ. ಅವರು ಹೇಳಿದ ಈ ಕೆಳಗಿನ ಮಾತುಗಳಿಂದ ಇದು ಸ್ಪಷ್ಟವಾಗುತ್ತದೆ.

"ನನ್ನನ್ನು ಗೌರವಿಸಿದವರು ವಾಸ್ತವವಾಗಿ ನನ್ನ ಮೂಲಕ ಭಾರತವನ್ನು ಗೌರವಿಸಿದ್ದಾರೆ. ನನ್ನ ಬಾಳು ಮುಗಿದನಂತರ ಇದು ನಿಂತು ಹೋಗಬಾರದು. ಏಕೆಂದರೆ ನನಗೆ ಸಂದಿರುವ ಗೌರವ ವ್ಯಕ್ತಿಯಾಗಿ ನನಗೆ ಸಂಬಂಧಿಸಿದ್ದಲ್ಲ. ವಿಶ್ವಭಾರತಿಯನ್ನು ಒಪ್ಪಿಕೊಂಡು ನೀವು ಭಾರತದ ಅಮರ ಆಧ್ಯಾತ್ಮಿಕ ಸ್ವರೂಪಕ್ಕೆ ಅಭಿವ್ಯಕ್ತಿ ಕೊಡಲು ಹೊಣೆ ಸ್ವೀಕರಿಸಿದ್ದಿರಿ.**

---

* ಅದೇ

** "ವಿಶ್ವ ಭಾರತಿ", 12

ಮೊದಲನೆಯ ಮಹಾಯುದ್ಧದ ಕಡೆಯ ದಿನಗಳಲ್ಲಿ ಈ ವಿಚಾರವು ಠಾಕೂರರ ಮನಸ್ಸಿನಲ್ಲಿ ಮುಖ್ಯವಾಗಿದ್ದಿತೆಂದು ಕಾಣುತ್ತದೆ. ಆ ಮೊದಲೇ ಅವರು 1912 ರಲ್ಲಿ ಬ್ರಿಟನ್ ಮತ್ತು ಅಮೆರಿಕಗಳಲ್ಲೂ 1916 ರಲ್ಲಿ ಜಪಾನ್ ಮತ್ತು ಅಮೆರಿಕಗಳಲ್ಲೂ ಪ್ರವಾಸ ಮಾಡಿದ್ದುದರಿಂದ ಅವರಿಗಾಗಲೇ ವಿದೇಶೀ ಪ್ರವಾಸಗಳ ಸ್ವಲ್ಪ ಮಟ್ಟಿನ ಅನುಭವವಿತ್ತು. ಶಾಂತಿನಿಕೇತನದಲ್ಲಿದ್ದ ತಮ್ಮ ಸಂಸ್ಥೆಯನ್ನು ಒಂದು ವಿಶಿಷ್ಟ ಮಾದರಿಯ ವಿಶ್ವವಿದ್ಯಾನಿಲಯವನ್ನಾಗಿ ಮಾರ್ಪಡಿಸುವ ಯೋಚನೆಯು ಇದಾದನಂತರ ಸ್ವಲ್ಪ ಕಾಲದಲ್ಲಿ ಹೊಳೆಯಿತೆಂದು ಕಾಣುತ್ತದೆ.

ಈ ಹೊಸ ವಿಶ್ವವಿದ್ಯಾನಿಲಯವು ವಹಿಸಿಕೊಳ್ಳಬೇಕಾಗಿದ್ದ ವಿಶಿಷ್ಟ ಪಾತ್ರವನ್ನು ಹೊಂದಿಕೊಳ್ಳಲು ಅದು ಸಾಮಾನ್ಯ ಮಾದರಿಯನ್ನು ಬಿಡಬೇಕೆಂದು ಅವರಿಗೆ ಸ್ಪಷ್ಟವಾತ್ತು. ಈ ವಿಷಯವನ್ನು ಪರ್ಯಾಲೋಚಿಸಿ ಅವರು, ರೂಪರೇಷಯನ್ನು ಸಿದ್ಧಗೊಳಿಸುವಾಗ ಮಾರ್ಗದರ್ಶನಕ್ಕಾಗಿ ಗಮನಿಸಬೇಕಾದ ಕೆಲವು ಸೂತ್ರಗಳನ್ನು ರೂಪಿಸಿದರು.

ಉದ್ದೇಶಿತ ವಿಶ್ವವಿದ್ಯಾನಿಲಯದ ಮೂಲ ಕರ್ತವ್ಯವು ಭಾರತದ ಜ್ಞಾನವನ್ನು ಪ್ರಾತಿನಿಧಿಕವಾಗಿ ಹೊರ ಜಗತ್ತಿನ ಮುಂದಿಡುವುದಾದದ್ದರಿಂದ, ಈ ಜ್ಞಾನದ ವ್ಯಾಪಕ ಅಧ್ಯಯನಕ್ಕೆ ಅದು ಸೌಲಭ್ಯಗಳನ್ನು ಕಲ್ಪಿಸಬೇಕು, ಭಾರತದಲ್ಲಿ ಜ್ಞಾನ ಭಂಡಾರವು ಬೇರೆ ಬೇರೆ ಘಟ್ಟಗಳಲ್ಲಿ ಭಿನ್ನ ಸಂಸ್ಕೃತಿಗಳ ಆಧಾರದ ಮೇಲೆ ಬೆಳೆಯಿತು ಎಂದು ಅವರ ಅಭಿಪ್ರಾಯ. ಅವರು ಪಟ್ಟಿ ಮಾಡಿದಂತೆ ಇವು ವೈದಿಕ, ಪೌರಾಣಿಕ, ಬೌದ್ಧ, ಜೈನ, ಇಸ್ಲಾಮಿಕ್, ಸಿಖ್ ಮತ್ತು ಜೊರಾಷ್ಟ್ರಿಯನ್ ಸಂಸ್ಕೃತಿ.* ಸಾಧ್ಯವಾದ ಮಟ್ಟಿಗೂ ಅತ್ಯಂತ ಕಿರಿಯ ಸಾಂಸ್ಕೃತಿಕ ಪಂಗಡವೂ ಬಿಟ್ಟು ಹೋಗಬಾರದೆಂದು ಪಟ್ಟಿಯನ್ನು ಅದಷ್ಟು ಸಮಗ್ರಗೊಳಿಸುವುದು ಅವರ ಇಚ್ಛೆಯಾಗಿತ್ತೆಂಬುದು ಸ್ಪಷ್ಟ. ಭಾರತೀಯ ಸಂಸ್ಕೃತಿಯ ಒಳಗೊಂಡಿರುವ ಈ ಎಲ್ಲ ಅಂಶಗಳ ತಿಳಿವಳಿಕೆಯೂ ಉದ್ದೇಶಿತ ಸಂಸ್ಥೆಯಲ್ಲಿ ಲಭ್ಯವಾಗಬೇಕೆಂದು ಅವರ ಬಯಕೆ.

ಭಾರತದ ಸಂಕೀರ್ಣ ಸಂಸ್ಕೃತಿಯನ್ನು ಹೊರಗಿನವರ ಮುಂದಿಡಬಲ್ಲ ಒಂದು ವಿಶಿಷ್ಟ ಸಂಸ್ಥೆಯಿರಬೇಕೆಂಬುದು ಠಾಕೂರರ ಗುರಿಯಾಗಿತ್ತು. ಭಾರತದ ಸಾಂಸ್ಕೃತಿಕ

* "ದಿ ಸೆಂಟರ್ ಆಫ್ ಇಂಡಿಯನ್ ಕಲ್ಚರ್"

ಪರಂಪರೆಯನ್ನು ಅವರು ಬಹುವಾಗಿ ಮೆಚ್ಚಿಕೊಂಡಿದ್ದರು. ಹೊರದೇಶಗಳ ವಿದ್ಯಾವಂತ ಜನರಿಗೆ ಅದರೊಡನೆ ಸಂಪರ್ಕ ಬೆಳೆಸಬೇಕೆಂದು ಪ್ರಾಮಾಣಿಕವಾಗಿ ಹಂಬಲವಿತ್ತು ಎಂದು ನಿಜವಾಗಿ ಅವರಿಗೂ ಅನ್ನಿಸಿತ್ತು. ತನ್ನ ಸಂಸ್ಕೃತಿಯಲ್ಲಿ ಒಂದು ಪಾಲನ್ನು ಸ್ವೀಕರಿಸುವಂತೆ ಹೊರಗಿನ ಜನರನ್ನು ಆಹ್ವಾನಿಸುವುದು ಭಾರತದ ಕರ್ತವ್ಯ ಎಂದು ಅವರಿಗೆ ತೋರಿತು. ಉದ್ದೇಶಿತ ವಿಶ್ವವಿದ್ಯಾನಿಲಯ ವಿಶಿಷ್ಟವಾಗಿ ಕರ್ತವ್ಯವನ್ನು ಸ್ವೀಕರಿಸುವುದಾಗಿತ್ತು.

ಹೊಸ ವಿಶ್ವವಿದ್ಯಾನಿಲಯಕ್ಕೆ ಠಾಕೂರರು ಸೂಚಿಸಿದ ಹೆಸರು,'ವಿಶ್ವಭಾರತಿ' ಸ್ಪಷ್ಟವಾಗಿ ಅವರ ಮುಖ್ಯ ಗುರಿಯನ್ನು ತೋರಿಸುತ್ತದೆ. ಈ ಹೊಸ ಪದವನ್ನು ಸೃಷ್ಟಿಸುವಾಗ 'ಯತ್ರ ವಿಶ್ವಂ ಭವತ್ಯೇಕಾನಿದಂ' ಎಂಬ ವೇದದ ಮಾತುಗಳಿಂದ ಸ್ಫೂರ್ತಿ ಪಡೆದಂತೆ ಕಾಣುತ್ತದೆ. 'ಇಡೀ ವಿಶ್ವವೇ ನೆಲೆಸಿರುವ ಸ್ಥಳವಿದು' ಎಂದು ಈ ಮಾತುಗಳ ಅರ್ಥ. ಆಧ್ಯಾತ್ಮಿಕ ಸಂಪತ್ತಿನ ವಿನಿಮಯಕ್ಕಾಗಿ ಜಗತ್ತಿನ ವಿವಿಧ ಭಾಗಗಳಿಂದ ಜನರು ಅಲ್ಲಿಗೆ ಆಕರ್ಷಿತರಾಗುವಂತೆ ಹೊಸ ಸಂಸ್ಥೆಯು ಬೆಳೆಯಬೇಕೆಂದು ಅವರು ಯೋಚಿಸಿದ್ದರು.* ಅವರ ಬರಹದಿಂದ ಆರಿಸಿದ ಈ ಭಾಗ ಇದನ್ನು ಸ್ಪಷ್ಟವಾಗಿ ಸಮರ್ಥಿಸುತ್ತದೆ :

"ವಿಶ್ವವಿದ್ಯಾನಿಲಯಗಳು ಎಂದೂ ಜ್ಞಾನವನ್ನು ಶೇಖರಿಸಿ ವಿತರಣೆಮಾಡುವ ಯಾಂತ್ರಿಕ ಸಂಸ್ಥೆಗಳಾಗಲೇ ಬಾರದು. ಅವುಗಳ ಮೂಲಕ ಜನ ಬೌದ್ಧಿಕ ಆತಿಥ್ಯವನ್ನು ಅರ್ಪಿಸಬೇಕು. ಪ್ರತಿಯಾಗಿ ಜಗತ್ತಿನ ಇತರ ಭಾಗಗಳಿಂದ ಉಡುಗೊರೆಗಳನ್ನು ಪಡೆಯುವ ಹೆಮ್ಮೆಯ ಹಕ್ಕನ್ನು ಬೇಡಬೇಕು."**

ಇದರ ನಂತರ ಠಾಕೂರರ ಲಕ್ಷ್ಯ ಸೆಳೆದ ವಿಷಯ ಎಂದರೆ ಶಿಕ್ಷಣದ ಗುರಿಗಳು ಏನಿರಬೇಕು ಎಂಬುದು. ಮನುಷ್ಯನ ಸ್ವಭಾವದ ಸಂಪೂರ್ಣ ಅಭಿವ್ಯಕ್ತಿಯೇ ಶಿಕ್ಷಣದ ಗುರಿಯಾಗಿರಬೇಕು ಎಂದು ಅವರ ಅಭಿಪ್ರಾಯ, ಎರಡನೆಯದಾಗಿ, ಶಿಕ್ಷಣದಿಂದ ವಿದ್ಯಾರ್ಥಿ ತನ್ನನ್ನು ಸಂಪೂರ್ಣವಾಗಿ ಅಭಿವ್ಯಕ್ತಿಗೊಳಿಸಿಕೊಳ್ಳಲು ಸಮರ್ಥನಾಗಬೇಕು. ಬುದ್ಧಿಶಕ್ತಿಯ ಭಾಷೆಯಾದ ಶಬ್ದಗಳ ಭಾಷೆಯ ಮೂಲಕ ತನ್ನ ವಿಚಾರಗಳನ್ನು ಅವುಗಳದೇ ಆದ ವಿಶಿಷ್ಟ ಭಾಷೆಗಳ ಮೂಲಕ ತನ್ನ ಭಾವನೆ

---

* "ವಿಶ್ವಭಾರತಿ"—12

** ಎನ್ ಈಸ್ಟರ್ನ್ ಯುನಿವರ್ಸಿಟಿ.

ಗಳನ್ನು ಒಟ್ಟಿಗೆ ಅಭಿವ್ಯಕ್ತಿಗೊಳಿಸಲು ವಿದ್ಯಾರ್ಥಿಯನ್ನು ಪ್ರೋತ್ಸಾಹಿಸಬೇಕು. ಠಾಕೂರರ ಅಭಿಪ್ರಾಯದಲ್ಲಿ ಈ ವಿಶಿಷ್ಟ ಭಾಷೆಗಳು "ಗೆರೆಗಳ, ವರ್ಣಗಳ, ನಾದಗಳ ಮತ್ತು ಭಾಷೆಗಳು."* ಬೇರೆ ಮಾತುಗಳಲ್ಲಿ ಹೇಳುವುದಾದರೆ, ಲೇಖನ ಕಲೆ, ಚಿತ್ರಕಲೆ, ಸಂಗೀತ ಮತ್ತು ನೃತ್ಯಗಳು ಅವರ ಅಭಿಪ್ರಾಯದಲ್ಲಿ ಭಾವನೆಯ ಭಾಷೆ.

ಹೀಗೆ ಮನುಷ್ಯನ ವ್ಯಕ್ತಿತ್ವವನ್ನು ವಿಕಸನಗೊಳಿಸಲು ಆದರ್ಶ ಶಿಕ್ಷಣ ವ್ಯವಸ್ಥೆಯು, ಬುದ್ಧಿಶಕ್ತಿಗೆ ಆಹಾರವನ್ನು ಒದಗಿಸುವುದು ಮಾತ್ರವಲ್ಲದೆ ಭಾವನೆಗಳ ಬೆಳವಣಿಗೆಗೂ ಆಹಾರವನ್ನೂ ಒದಗಿಸಬೇಕೆಂದು ಅವರಿಗೆ ಎನ್ನಿಸಿತು. ಆದರೆ ಪಾಶ್ಚಾತ್ಯ ವಿಶ್ವವಿದ್ಯಾನಿಲಯಗಳಲ್ಲಿ "ಬೌದ್ಧಿಕ ತರಬೇತಿಯೇ ಸಂಪೂರ್ಣ ಪ್ರಾಶಸ್ತ್ಯವನ್ನು ಪಡೆಯುತ್ತದೆ" ಎಂಬುದನ್ನು ಅವರು ವಿಷಾದದಿಂದ ಗಮನಿಸಿದರು. ವಿಜ್ಞಾನವಾಗಲೀ ಮಾನವಿಕ ಶಾಸ್ತ್ರಗಳಾಗಲೀ ತಂತ್ರಜ್ಞಾನವಾಗಲೀ ತರಬೇತಿ ನೀಡುವುದು ಮೆದುಳಿಗೆ ಮಾತ್ರ. ಭಾವನಾಶಕ್ತಿಯು ತೀರ ಅಲಕ್ಷ್ಯಕ್ಕೆ ಗುರಿಯಾಗುತ್ತದೆ. ಲಲಿತ ಕಲೆಗಳಲ್ಲಿ ತರಬೇತಿ ಕೊಡುವುದರಿಂದ ಭಾವನಾಶಕ್ತಿ ಬೆಳೆಯುವುದಷ್ಟೇ ಅಲ್ಲ, ವಿದ್ಯಾರ್ಥಿಯು ಶಬ್ದಗಳ ಭಾಷೆಯ ಮಾಧ್ಯಮವಲ್ಲದೆ ಇತರ ಮಾಧ್ಯಮಗಳ ಮೂಲಕ ಅಭಿವ್ಯಕ್ತಿ ಪಡೆದುಕೊಳುವ ಶಕ್ತಿಗೆ ನೆರವಾಗುತ್ತದೆ ಮತ್ತು ಹೀಗೆ ಅವನು ಬಾಳಿನ ಇತರ ಮುಖಗಳ ಮೂಲಕವೂ ಮನುಷ್ಯನನ್ನು ಅರಿಯಲು ಸಹಾಯವಾಗುತ್ತದೆ. ಆದ್ದರಿಂದ ಠಾಕೂರರು ಲಲಿತ ಕಲೆಗಳ ಗುಂಪಿನ ವಿಷಯಗಳಿಗೆ ವಿಶ್ವವಿದ್ಯಾನಿಲಯಗಳು ಕಂಡ ಗುರುತಿಗಾಗಿ ತಲೆಯಾಡಿಸಿಬಿಟ್ಟರೆ ಸಾಲದು. ವಿಜ್ಞಾನ ಮತ್ತು ಮಾನವಿಕಗಳಂತೆ ಅವುಗಳಿಗೂ ಗೌರವದ ಸ್ಥಾನ ದೊರಕಬೇಕು ಎಂದು ಯೋಚಿಸಿದರು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಎರಡು ವಿಭಾಗಗಳಲ್ಲಿನ ವಿಷಯಗಳೂ ಅಧ್ಯಯನಕ್ಕೆ ನಿಶ್ಚಯಿಸಿದ ನಕ್ಷೆಯಲ್ಲಿ ಸೇರಬೇಕು. ಈ ವಿಷಯದಲ್ಲಿ ಅವರ ಅಭಿಪ್ರಾಯ ಎಷ್ಟು ದೃಢವಾಗಿತ್ತೆಂಬುದು ಅವರ ಈ ಮಾತುಗಳಲ್ಲಿ ಕಾಣುತ್ತದೆ :

"ಶಿಕ್ಷಣದ ದೊಡ್ಡ ಪ್ರಯೋಜನ ವಾಸ್ತವಾಂಶಗಳನ್ನು ಕಲೆ ಹಾಕುವುದಷ್ಟೇ ಅಲ್ಲ, ಆದರೆ ಮಾನವನನ್ನು ಅರ್ಥ ಮಾಡಿಕೊಳ್ಳುವುದು ಮತ್ತು ತನ್ನನ್ನು ಮಾನವನಿಗೆ ಅರ್ಥಮಾಡಿಕೊಡುವುದು. ಬುದ್ಧಿಶಕ್ತಿಯ ಭಾಷೆಯನ್ನಷ್ಟೇ ಅಲ್ಲದೆ

* ಅದೇ

ವ್ಯಕ್ತಿತ್ವದ ಭಾಷೆಯನ್ನು ಎಂದರೆ ಕಲೆಯ ಭಾಷೆಯನ್ನು ಸ್ವಲ್ಪಮಟ್ಟಿಗಾದರೂ ಕರಗತಮಾಡಿಕೊಳ್ಳುವುದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯ."*

ಇದೇ ಧಾಟಿಯಲ್ಲಿ ಅವರು ಕಲೆಯ ಭಾಷೆಯನ್ನು ತಿಳಿಯದೆ ಬೆಳೆಯುವುದೆಂದರೆ ಮಾನವ ಕುಲದ ದೊಡ್ಡ ಪರಂಪರಾಗತ ಆಸ್ತಿಯನ್ನು ತಿಳಿಯದೆ ಅದರ ಬಳಕೆಯನ್ನು ತಿಳಿಯದೆ ನಷ್ಟ ಅನುಭವಿಸುವುದು ಎಂದರು. ಈ ಅಭಿಪ್ರಾಯಕ್ಕೆ ಅನುಗುಣವಾಗಿ ಅವರು, ತಾವು ಉದ್ದೇಶಿಸಿದ ವಿಶ್ವವಿದ್ಯಾನಿಲಯದಲ್ಲಿ ಲಲಿತಕಲೆಗಳ ವಿಭಾಗದ ವಿಷಯಗಳ ಬೋಧನೆಗೂ ಸೌಲಭ್ಯವಿರಬೇಕೆಂದು ಬಯಸಿದರು. ಅವರು, "ಸಂಗೀತ ಮತ್ತು ಲಲಿತಕಲೆಗಳರಾಷ್ಟ್ರದ ಆತ್ಮದ ಅಭಿವ್ಯಕ್ತಿಯಅತಿಶ್ರೇಷ್ಠ ಮಾಧ್ಯಮಗಳಲ್ಲಿ ಸೇರಿವೆ, ಅವಿಲ್ಲವಾದರೆ ಜನತೆ ಮೂಕವಾಗಿ ಉಳಿಯುತ್ತದೆ" ಎಂದು ಮನಃಪೂರ್ವಕವಾಗಿ ಹೇಳಿದರು.**

ಮೂರನೆಯದಾಗಿ, ಶೈಕ್ಷಣಿಕ ಸಂಸ್ಥೆಗಳು ಜ್ಞಾನವನ್ನು ಹಂಚುವ ಕೇಂದ್ರಗಳಷ್ಟೇ ಆಗಿ ಉಳಿಯುವುದು ವಿರಳವಲ್ಲ ಎಂದು ಅವರು ವಿಷಾದಿಸುತ್ತಿದ್ದರು. ಅವರ ದೃಷ್ಟಿಯಲ್ಲಿ ಇದೇನಿದ್ದರೂ ಅಂತಹ ಸಂಸ್ಥೆಗಳ ಒಂದು ಅಮುಖ್ಯ ಕೆಲಸ. ಅವುಗಳ ಮುಖ್ಯ ಕರ್ತವ್ಯವೆಂದರೆ ಜ್ಞಾನವನ್ನು ಸೃಷ್ಟಿಸುವುದು. ಸೃಜನಾತ್ಮಕ ಮನಸ್ಸಿರುವ ವಿದ್ವಾಂಸರನ್ನು ಕರೆತಂದು ಅವರು ತಮ್ಮ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು. ಇದರಿಂದ ಅವರು ಹೊಸ ಜ್ಞಾನವನ್ನು ಸೃಷ್ಟಿಸಲು ಸಾಧ್ಯವಾಗುತ್ತದೆ. ಈ ಬಗೆಯ ಅಧ್ಯಾಪಕರೊಡನೆ ನಿಕಟ ಸಂಪರ್ಕ ಪಡೆದ ವಿದ್ಯಾರ್ಥಿಗಳು ಅವರ ಮನೋಧರ್ಮವನ್ನು ಕಲಿಯುತ್ತಾರೆ ಮತ್ತು ತಾವೇ ಜ್ಞಾನವನ್ನು ಸೃಷ್ಟಿಸಲು ಅಗತ್ಯವಾದ ಸ್ಫೂರ್ತಿಯನ್ನು ಪಡೆಯಲು ಸಾಧ್ಯವಾಗುತ್ತದೆ. ***

ಕಡೆಯದಾಗಿ, ಯಾವುದೇ ವಿದ್ಯಾ ಸಂಸ್ಥೆ ತನ್ನ ಭೌಗೋಳಿಕ ಮತ್ತು ಸಾಮಾಜಿಕ ಪರಿಸರದಿಂದ ಬೇರೆಯಾಗಿ ಒಂಟಿಯಾಗಿ ಉಳಿಯಬಾರದು ಎಂದು

---

* "ಎನ್ ಈಸ್ಟರ್ನ್ ಯುನಿವರ್ಸಿಟಿ".

** "ದಿ ಸೆಂಟರ್ ಆಫ್ ಇಂಡಿಯನ್ ಕಲ್ಚರ್"

*** "ವಿಶ್ವ ಭಾರತಿ"

ಅವರ ಭಾವನೆ. ವಿದ್ಯಾ ಸಂಸ್ಥೆಯು ತಾನಿರುವ ಪ್ರದೇಶದ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯೊಡನೆ ಸಾವಯವ ಸಂಬಂಧವನ್ನು ಸಾಧಿಸಬೇಕು. ಸಂಸ್ಥೆಯಲ್ಲಿ ಪಡೆದ ತಾಂತ್ರಿಕ ಜ್ಞಾನವನ್ನು ಆ ಪ್ರದೇಶದ ಜನರ ಆರ್ಥಿಕ ಕಲ್ಯಾಣವನ್ನು ಉತ್ತಮಗೊಳಿಸಲು ಬಳಸಬೇಕು ಇದರಿಂದ ವಿದ್ಯಾ ಸಂಸ್ಥೆಯು ಜನರ ಬಾಳಿನ ಕೇಂದ್ರದಲ್ಲಿ ಸ್ಥಾನ ಪಡೆಯುವುದು ಸಾಧ್ಯವಾಗುತ್ತದೆ ಮತ್ತು ಆ ಬಾಳಿನೊಡನೆ ಸಾವಯವ ಸಂಬಂಧವನ್ನು ಪಡೆಯುತ್ತದೆ.

ಉದ್ದೇಶಿತ ವಿಶ್ವವಿದ್ಯಾನಿಲಯವನ್ನು ರೂಪಿಸಲು ಅನುಸರಿಸಿದ ಸಾಮಾನ್ಯ ತತ್ವಗಳು ಒಟ್ಟಿನಲ್ಲಿ ಇವೇ. ಈ ಯೋಜನೆಯ ಕೆಲಸ 1918ರ ಡಿಸೆಂಬರಿನಲ್ಲಿ ಚುರುಕಾಗಿ ಪ್ರಾರಂಭವಾಯಿತು. ತನ್ನ ತಂದೆಯೊಡನೆ ಈ ಹೊಸ ಹೊಣೆಯಲ್ಲಿ ಪಾಲುಗೊಳ್ಳಲು ಶಾಂತಿನಿಕೇತನದಲ್ಲಿಯೇ ನೆಲಸುವಂತೆ ಠಾಕೂರರು ಅವರ ಮಗ ರತೀಂದ್ರನಾಥರ ಮನಸ್ಸನ್ನು ಒಲಿಸಿದರು. ತಮ್ಮ ತತ್ತ್ವಗಳಿಗನುಗುಣವಾಗಿ ಅವರು, ಹೊಸ ವಾತಾವರಣದ ಕೇಂದ್ರವಾಗಬಲ್ಲರೆಂದು ಅವರಲ್ಲಿ ಭರವಸೆ ಮೂಡಿಸಿದ ಶ್ರೇಷ್ಠ ಸೃಜನ ಚಿಂತನಶೀಲರನ್ನು ಕರೆತಂದರು. ಖ್ಯಾತ ಸಂಸ್ಕೃತ ವಿದ್ವಾಂಸ, ಬಿದು ಶೇಖರ ಶಾಸ್ತ್ರಿಗಳು ಸಂಸ್ಕೃತ, ಪಾಳಿ ಮತ್ತು ಪ್ರಾಕೃತ ಭಾಷೆಗಳ ಹೊಣೆಯನ್ನು ವಹಿಸಿಕೊಂಡರು. ಬೌದ್ಧ ಸಂಸ್ಕೃತಿಯನ್ನು ಬೋಧಿಸಲು ಸಿಂಹಳ (ಶ್ರೀಲಂಕಾ) ದಿಂದ ಒಬ್ಬ ವಿದ್ವಾಂಸರು ಬಂದರು. ಹಳೆಯ ಹಿಂದಿ ಸಾಹಿತ್ಯದ ಹೊಣೆಯನ್ನು ನಿರ್ವಹಿಸಲು ಕ್ಷಿತಿಮೋಹನ ಸೇನರು ಬಂದರು.

ಲಲಿತ ಕಲೆಗಳ ವಿಷಯ ಹೇಳಬೇಕಾದರೆ ಸಂಗೀತ ಮತ್ತು ಚಿತ್ರಕಲೆಗಳಿಗೆ ವಿಶೇಷ ಗಮನವನ್ನು ಕೊಡಲಾಯಿತು. ಚಿತ್ರಕಲೆಯಲ್ಲಿ ಬಂಗಾಳ ಚಿತ್ರಕಲೆಯ ಪಂಥದ ಸ್ಥಾಪಕರಾದ ಅಬನೀಂದ್ರನಾಥ ಠಾಕೂರರಿಂದ ಶಿಕ್ಷಣ ಪಡೆದಿದ್ದ ಇಬ್ಬರು ಬಹು ಭರವಸೆ ಮೂಡಿಸುವ ಚಿತ್ರಕಲಾವಿದರನ್ನು ನೇಮಿಸಿದರು. ಅವರು ನಂದಲಾಲ್ ಬೋಸ್ ಮತ್ತು ಸುರೇಂದ್ರನಾಥ ಕಾರ್.

ಸಂಗೀತದ ಅಧ್ಯಾಪಕರಾಗಿ ಭೀಮ ಶಾಸ್ತ್ರಿ ಮತ್ತು ವಿಷ್ಣುಪುರ ಸಂಗೀತ ಪಂಥದ ನಕುಲೇಶ್ವರ ಬ್ಯಾನರ್ಜಿಯವರನ್ನು ಕರೆತಂದರು. ಇಬ್ಬರಿಗೂ ಸಾಂಪ್ರದಾಯಿಕ ಸಂಗೀತದಲ್ಲಿ ಗಾಢವಾದ ಪರಿಶ್ರಮವಿತ್ತು.

ಈ ಹೊತ್ತಿಗೆ ಠಾಕೂರರ ಹಾಡುಗಳು ತಮ್ಮ ವೈಶಿಷ್ಟ್ಯದಿಂದ ಮಾತ್ರವಲ್ಲದೆ ತಮ್ಮರಸಾತ್ಮಕತೆಯಿಂದಲೂ ಗಳಿಸಿದ್ದ ಖ್ಯಾತಿನ್ಯಾಯವಾಗಿಯೇ ಇತ್ತು. ಜನರಕೇಳಿಕೆಯನ್ನು ಪೂರೈಸಲು ರವೀಂದ್ರ ಸಂಗೀತವನ್ನು ಶಾಂತಿನಿಕೇತನದಲ್ಲಿ ಹೇಳಿಕೊಡಲು ವ್ಯವಸ್ಥೆ ಮಾಡಬೇಕಾಯಿತು. ಸೂಕ್ಷ್ಮ ಸಂಗೀತಾಭಿರುಚಿಯ ಅಧ್ಯಾಪಕರೊಬ್ಬರು ದೊರೆತದ್ದು ಠಾಕೂರರ ಸಯೋಗ. ಆ ಅಧ್ಯಾಪಕರು ಅವರ ಸೋದರನ ಮೊಮ್ಮಗ ದಿನೇಂದ್ರನಾಥ ಠಾಕೂರ್. ಈತನಿಗೆ ರಾಗಗಳ ವಿಷಯದಲ್ಲಿ ಬೆರಗುಗೊಳಿಸುವ ನೆನಪಿನ ಶಕ್ತಿ. ಯಾರಾದರೂ ಒಂದು ಬಾರಿ ಒಂದು ಹಾಡನ್ನು ಹೇಳಿದರೆ ಸಾಕು, ಆತ ಅದನ್ನು ತಪ್ಪಿಲ್ಲದೆ ಮತ್ತೆ ಹಾಡುತ್ತಿದ್ದ. ನೆನಪಿನಿಂದಲೇ ಅದಕ್ಕೆ ಸ್ವರಪ್ರಸ್ತಾರ ಹಾಕುತ್ತಿದ್ದ.

ಈ ವಿಶಿಷ್ಟ ಶಕ್ತಿಯು ದಿನೇಂದ್ರನಾಥನನ್ನು ಒಳ್ಳೆಯ ಸಂಗೀತ ಅಧ್ಯಾಪಕನನ್ನಾಗಿ ಮಾಡಿದ್ದಲ್ಲದೆ ಠಾಕೂರರು ತಮ್ಮ ಹಾಡುಗಳಿಗೆ ಸ್ವರಪ್ರಸ್ತಾರ ಹಾಕಲು ಅವರಿಗೆ ನೆರವಾಗಲೂ ಸಾಧ್ಯ ಮಾಡಿತು. ತಮ್ಮ ಹಾಡುಗಳ ಸಂಗೀತದ ವಿಷಯದಲ್ಲಿ ಠಾಕೂರರದು ಅತಿ ನಾಜೂಕು ವಿಮರ್ಶೆ. ಏಕೆಂದರೆ ಈ ವಿಷಯದಲ್ಲಿ ಅವರು ತಮ್ಮದೇ ಆದ ಕೆಲವು ತತ್ತ್ವಗಳನ್ನು ಅನುಸರಿಸುತ್ತಿದ್ದರು. ಇದ್ದರಿಂದ ತಾವು ರಚಿಸಿದ ಹಾಡುಗಳನ್ನು ಸಂಗೀತಕ್ಕೆ ತಾವೇ ಅಳವಡಿಸಬೇಕೆಂಬುದರಲ್ಲಿ ಅವರು ಕಟ್ಟು ನಿಟ್ಟು. ತಾವೇ ಆರಿಸಿಕೊಂಡ ಈ ಕಾರ್ಯವನ್ನು ಠಾಕೂರರು ನಿರ್ವಹಿಸಲು ಸಾಧ್ಯವಾದಷ್ಟು ಶ್ರಮವನ್ನು ಲೆಕ್ಕಿಸದೆ ಕೆಲಸ ಮಾಡಲು ಅವರಿಗಿದ್ದ ಅಸಾಧಾರಣ ಶಕ್ತಿಯಿಂದ ಅವರು ಸುಮಾರು ಎರಡು ಸಾವಿರ ಹಾಡುಗಳನ್ನು ರಚಿಸಿದರೆಂಬುದನ್ನು ಗಮನಿಸಿದಾಗ ಅವೆಲ್ಲವನ್ನು ಸಂಗೀತಕ್ಕೆ ಅಳವಡಿಸಿದುದು ಒಂದು ಅಸಾಧಾರಣ ಸಾಹಸ ಎಂದೇ ಹೇಳಬೇಕು, ಈ ವಿಷಯದಲ್ಲಿ ದಿನೇಂದ್ರನಾಥರು ಅವರಿಗೆ ಪರಿಣಾಮಕಾರಿಯಾಗಿ ನೆರವಾದರೂ ಸ್ವರ ಪ್ರಸ್ತಾರದ ವಿಷಯದಲ್ಲಿ ಠಾಕೂರರ ಜ್ಞಾಪಕ ಶಕ್ತಿ ದುರ್ಬಲವೇ. ಯಾವುದಾದರೂ ಹಾಡಿಗೆ ತಾವು ಮಾಡಿದ ರಚನೆಯನ್ನು ಖಚಿತವಾಗಿ ನೆನಪಿಟ್ಟುಕೊಳ್ಳಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಹಾಡನ್ನು ಸಂಗೀತಕ್ಕೆ ಅಳವಡಿಸಿ ಸ್ವರಪ್ರಸ್ತಾರ ಹಾಕಿದ ನಂತರ ಅದನ್ನು ಮತ್ತೆ ಹೇಳಲು ಅವರು ತಮ್ಮ ಸೋದರನ ಮೊಮ್ಮಗನನ್ನೇ ಅವಲಂಬಿಸಬೇಕಾಗಿತ್ತು. ಒಮ್ಮೆ ಕವಿ ಹಾಡನ್ನು ಸಂಗೀತಕ್ಕೆ ಅಳವಡಿಸಿದ ನಂತರ ಅದನ್ನು ನೆನಪಿಟ್ಟುಕೊಂಡು ಅದರ ಸ್ವರಪ್ರಸ್ತಾರವನ್ನು ಬರೆದಿಡುವ ಕೆಲಸವನ್ನು ದಿನೇಂದ್ರ

ನಾಥರು ವಹಿಸಿಕೊಳ್ಳುತ್ತಿದ್ದರು ಆದುದರಿಂದ ಅವರ ನೆರವಿಲ್ಲದೆ ಠಾಕೂರರ ಹಾಡುಗಳನ್ನು ಶಾಶ್ವತ ರೂಪದಲ್ಲಿ ಬರೆದಿಡಲು ಸಾಧ್ಯವಾಗುತ್ತಿರಲಿಲ್ಲ. ಈ ವಿಷಯದಲ್ಲಿ ತಮ್ಮ ಬಂಧುವಿನ ಕೊಡುಗೆಯನ್ನು ಠಾಕೂರರು ಸಂಪೂರ್ಣವಾಗಿ ಗುರುತಿಸಿದರು. ಅತನನ್ನು 'ತಮ್ಮ ಎಲ್ಲ ಹಾಡುಗಳ ಉಗ್ರಾಣಾಧಿಕಾರಿ ಮತ್ತು ಅವುಗಳ ರಕ್ಷಕ ದೇವತೆ' ಎಂದು ಕರೆದರು. ಈ ಪ್ರಶಂಸೆಗೆ ಅವರು ಸಂಪೂರ್ಣ ವಾಗಿ ಅರ್ಹರು.

ಈ ರೀತಿ ಸಿದ್ಧತೆಗಳಾದ ನಂತರ ಠಾಕೂರರು ಒಂದು ಔಪಚಾರಿಕ ಸಮಾರಂಭ ದಲ್ಲಿ ವಿಶ್ವವಿದ್ಯಾನಿಲಯ ಪ್ರಾರಂಭವಾದುದನ್ನು ಘೋಷಿಸಲು ನಿರ್ಧರಿಸಿದರು. 1328 ರ ಬಂಗಾಳಿ ಪೌಷ ಅಷ್ಟಮಿಗೆ ಸರಿ ಹೊಂದುವ 1921 ರ ಡಿಸೆಂಬರ್ 22 ರಂದು ಈ ಸಮಾರಂಭ ನಡೆಯಬೇಕೆಂದು ನಿಶ್ಚಯಿಸಿದರು. ಅವರ ತಂದೆ ಬ್ರಾಹ್ಮೋಪಂಥವನ್ನು ಸ್ವೀಕರಿಸಿದುದರ ವಾರ್ಷಿಕ ದಿನ ಅಂದು. ಖ್ಯಾತ ತತ್ತ್ವ ಶಾಸ್ತ್ರಜ್ಞ ಡಾಕ್ಟರ್ ಬ್ರಜೇಂದ್ರನಾಥ ಶೀಲರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಪ್ರೊಫೆಸರ್ ಸಿಲ್ವನ್ ಲೆವಿ ಹಾಜರಿದ್ದರು. ಇದಾದನಂತರ ಅವರು ಒಂದು ಉಪನ್ಯಾಸ ಮಾಲೆ ನೀಡಲು ನಿಂತರು. ಅವರ ನಿರ್ದೇಶನ ದಲ್ಲಿಯೇ ಚೀನೀ ಭಾಷೆ ಮತ್ತು ಸಾಹಿತ್ಯಗಳ ಅಧ್ಯಯನಕ್ಕೆ ಒಂದು ಯೋಜನೆ ಯನ್ನು ಸ್ವೀಕರಿಸಲಾಯಿತು. ಸಂದರ್ಭಕ್ಕೆ ಒಪ್ಪುವಂತಹ ಗಂಭೀರ ಭಾಷಣವನ್ನು ಮಾಡಿ, ಠಾಕೂರರು ವಿಶ್ವವಿದ್ಯಾನಿಲಯವನ್ನು ಒಂದು ಸಮಿತಿಗೆ ಒಪ್ಪಿಸಿಕೊಟ್ಟರು. ಅದರೊಂದಿಗೆ ಆ ಭೂಮಿ ಕಾಣಿ ಎಲ್ಲವನ್ನೂ ಆ ಸಂಸ್ಥೆಗೇ ದಾನ ಮಾಡಿದರು. ಅವರೆಗೆ ತಾವು ಬರೆದಿದ್ದ ಪುಸ್ತಕಗಳ ಸ್ವಾಮ್ಯವನ್ನೂ ಈ ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಿದರು. ವಿಶ್ವವಿದ್ಯಾನಿಲಯದ ಹಣಕಾಸಿನ ಹೊಣೆಯನ್ನು ನಿರ್ವ ಹಿಸಲು ಪುನರಾವರ್ತಿಸುವ ಆದಾಯದ ಪ್ರಾರಂಭ ಈ ಪುಸ್ತಕಗಳ ಗೌರವಧನ ದಿಂದ ಆಗುವುದು ಸಾಧ್ಯವಾಯಿತು.

ಸುತ್ತಮುತ್ತಲಿನ ಪ್ರದೇಶದ ಕಲ್ಯಾಣದ ಕಾರ್ಯಕ್ರಮಗಳಲ್ಲಿ ಪಾಲು ಗೊಂಡು ಯಾವುದೇ ವಿದ್ಯಾಸಂಸ್ಥೆಯೂ ಸ್ಥಳೀಯ ಜೀವನದ ಭಾಗವಾಗಬೇಕೆಂಬ ತಮ್ಮ ವಿಚಾರಕ್ಕನುಗುಣವಾಗಿ ಠಾಕೂರರು ವಿಶ್ವವಿದ್ಯಾನಿಲಯದಲ್ಲಿ ಒಂದು ಗ್ರಾಮೀಣ ಕಲ್ಯಾಣ ವಿಭಾಗವನ್ನು ತೆರೆಯಲು ನಿರ್ಧರಿಸಿದರು. ಈ ಉದ್ದೇಶ ದಿಂದ ಮೂರೇ ಕಿಲೋಮೀಟರ್ ದೂರದಲ್ಲಿದ್ದ ಸುರಲ್ ಎಂಬ ಹಳ್ಳಿಯಲ್ಲಿ

ಒಂದಿಷ್ಟು ಆಸ್ತಿಯನ್ನು ಕೊಂಡುಕೊಂಡರು. ತಾವು ವಿಶ್ವವಿದ್ಯಾನಿಲಯವನ್ನು ತೆರೆವ ವರ್ಷವೇ ಗ್ರಾಮೀಣ ಕಲ್ಯಾಣ ವಿಭಾಗವನ್ನು ವಿಧ್ಯುಕ್ತವಾಗಿ ಪ್ರಾರಂಭಿಸಿ ಅದಕ್ಕೆ 'ಶ್ರೀನಿಕೇತನ' ಎಂದು ಹೆಸರಿಟ್ಟರು. ಹೀಗೆಂದರೆ ಸಂಪತ್ತಿನ ನಿಲಯ ಎಂದರ್ಥ. ಈ ಪೂರಕ ಸಂಸ್ಥೆಯು ಸುತ್ತಲಿನ ಹಳ್ಳಿಯ ಸಾಂಪತ್ತಿಕ ಯೋಗಕ್ಷೇಮ ವನ್ನು ನೋಡಿಕೊಳ್ಳಬೇಕೆಂಬುದು ಅವರ ವಿಚಾರ.

ನಾವು ಹಿಂದಿನ ಒಂದು ಅಧ್ಯಾಯದಲ್ಲಿ ಪ್ರಸ್ತಾಪಿಸಿದ ಲಿಯೊನಾರ್ಡ್ ಎಲ್ಮ್‌ಹರ್ಸ್ಟ್ ಎಂಬ ಆದರ್ಶಪ್ರಿಯ ಇಂಗ್ಲೀಷ್ ಯುವಕನು ಈ ಸಂಸ್ಥೆಯನ್ನು ಬೆಳೆಸುವುದರಲ್ಲಿ ಠಾಕೂರರಿಗೆ ಬಹು ದಕ್ಷ ನೆರವನ್ನು ನೀಡಿದ. ಎಲ್ಮ್‌ಹರ್ಸ್ಟನು 1915 ರಲ್ಲಿ ಭಾರತಕ್ಕೆ ಬಂದಿದ್ದ, 'ಗೀತಾಂಜಲಿ' ಯನ್ನು ಓದಿದ್ದ. 1920 ರಲ್ಲಿ ಠಾಕೂರರು ನ್ಯೂಯಾರ್ಕಿಗೆ ಹೋದಾಗ ಅಲ್ಲಿ ಕೃಷಿ ವಿಜ್ಞಾನವನ್ನು ಅಧ್ಯಯನ ಮಾಡುತ್ತಿದ್ದ ಈತನ ಭೇಟಿಯಾಯಿತು. ಕೂಡಲೇ ಠಾಕೂರರಿಗೆ ಆತನ ವಿಷಯ ದಲ್ಲಿ ಆದರ ಉಂಟಾಯಿತು, ಥಟ್ಟನೆ ಆತನನ್ನು ತಮ್ಮೊಡನೆ ಭಾರತಕ್ಕೆ ಬಂದು ತಮ್ಮ ಗ್ರಾಮೀಣ ಸಂಸ್ಥೆಯನ್ನು ಬೆಳೆಸುವಂತೆ ಆಹ್ವಾನಿಸಿದರು. ಆದರೆ ಎಲ್ಮ್‌ಹರ್ಸ್ಟನಿಗೆ ತನ್ನ ತರಬೇತಿಯನ್ನು ಮೊದಲು ಮುಗಿಸಿಕೊಳ್ಳುವ ತೀವ್ರ ಅಭಿಲಾಷೆ ಇತ್ತು. ಅದು ಮುಗಿದನಂತರ ಶ್ರೀನಿಕೇತನಕ್ಕೆ ಭೇಟಿಕೊಡಲು ಒಪ್ಪಿದ. 1921 ರಲ್ಲಿ ತನ್ನ ತರಬೇತಿ ಮುಗಿಯುತ್ತಲೇ ತನ್ನ ಮಾತಿಗನುಗುಣವಾಗಿ, 'ಓದು ಮುಗಿಯಿತು. ನಾನು ಬರಬಹುದೆ?'ಎಂದು ಠಾಕೂರರಿಗೆ ತಂತಿ ಕಳುಹಿಸಿದ. ಆಗ ಠಾಕೂರರು ಹಣಕಾಸಿನ ಮುಗ್ಗಟ್ಟನ್ನು ಎದುರಿಸುತ್ತಿದ್ದರು. ಇದರಿಂದ ಈ ಆರ್ಥಿಕ ಹೊಣೆಯನ್ನು ಒಪ್ಪಿಕೊಳ್ಳಲು ಸಾಧ್ಯವಾಗದೆ, 'ಬರಬೇಡಿ, ಹಣವಿಲ್ಲ' ಎಂದು ತಂತಿ ಕಳುಹಿಸಿದರು,

ಇದು ಠಾಕೂರರ ಎಷ್ಟು ಬಿಚ್ಚು ಮನಸ್ಸು ಎನ್ನುವುದನ್ನು ತೋರಿಸುತ್ತದೆ. ಇದಕ್ಕೆ ಎಲ್ಮ್‌ಹರ್ಸ್ಟನು ತೋರಿಸಿದ ಪ್ರತಿಕ್ರಿಯೆಯು ಆತನ ಸೊಗಸಾದ ಗುಣ ಗಳನ್ನು ತೆರೆದು ತೋರಿಸುತ್ತದೆ. ಹಣವಿಲ್ಲ ಎನ್ನುವುದು ಆತನನ್ನು ಹಿಂದಕ್ಕಟ್ಟ ಲಿಲ್ಲ. ಠಾಕೂರರು ಎಚ್ಚರಿಕೆ ನೀಡಿದ್ದರೂ ಆತ ಬಂದ, ತಾನೇ ಎಲ್ಲ ವೆಚ್ಚವನ್ನೂ ವಹಿಸಿಕೊಳ್ಳುವುದಾಗಿ ಹೇಳಿದ, ತನ್ನ ಗೆಳತಿ ಶ್ರೀಮತಿ ಸ್ಟ್ರೇಟ್‌ಳಿಂದ ದೊರತ ಉದಾರ ನೆರವಿನಿಂದ ಆತ ತನ್ನ ಯೋಜನೆಗೆ ತಾನೇ ಹಣ ಹಾಕಿದ.

ಹಣದ ಬಿಕ್ಕಟ್ಟಿನಿಂದ ಠಾಕೂರರಿಗೆ ವಿಶಾಲದ ಪ್ರದೇಶದಲ್ಲಿ ಕೆಲಸಮಾಡಲು ಸಾಧ್ಯವಾಗಲಿಲ್ಲ. ಆದರೆ ಇದರಿಂದ ಅವರಿಗೇನೂ ದುಃಖವಾಗಲಿಲ್ಲ. ಏಕೆಂದರೆ ಕೆಲಸದ ಗುಣಮಟ್ಟ ಮುಖ್ಯ, ಪ್ರಮಾಣವಲ್ಲ ಎಂದು ಅವರಿಗೆ ತಿಳಿದಿತ್ತು. ಗ್ರಾಮೀಣ ಪ್ರದೇಶಗಳ ಸಮಸ್ಯೆಗಳ ಪರಿಹಾರಕ್ಕಾಗಿ ಪ್ರಯೋಗಗಳನ್ನು ಪ್ರಾರಂಭಿಸಿ ಫಲಿತಾಂಶಗಳನ್ನು ಅಧ್ಯಯನ ಮಾಡಲು ಒಂದು ಮಾದರಿ ಯೋಜನೆಯಾಗಿ ಈ ಯೋಜನೆಯು ಕಾರ್ಯ ಮಗ್ನವಾಗಬೇಕು ಎಂದು ಅವರು ನಿರ್ಧರಿಸಿದರು. ಅವರು ಹೇಳಿದರು: 'ನಮ್ಮ ಗುರಿಯು ಹೊತ್ತಿಸಿದ ದೀಪವಲ್ಲದೆ ಬಂಗಾರದ ದೀಪವಲ್ಲ.'

ಎಲ್ಮ್ ಹರ್ಸ್ಟನಿಗೆ ಯೋಜನೆಯನ್ನು ಕಾರ್ಯಗತಮಾಡುವ ಹೊಣೆಯನ್ನು ವಹಿಸಿದಾಗ ಠಾಕೂರರು ಮೊದಲೇ ಕಲ್ಪಿಸಿಕೊಂಡ ಕಾರ್ಯಕ್ರಮವೇನನ್ನೂ ಹೊರಿಸದಿದ್ದದ್ದು ಉಚಿತವಾಯಿತು. ಯೋಜನೆಯ ಧೋರಣೆಗೆ ಸಂಬಂಧಿಸಿದಂತೆ ಎರಡು ಮುಖ್ಯ ನಿರ್ಣಯಗಳನ್ನು ಅವರು ತೆಗೆದುಕೊಂಡರು. ಭಾರತದ ಗ್ರಾಮೀಣ ಜನರ ಸ್ವಭಾವವನ್ನು ಅವರು ಎಷ್ಟರ ಮಟ್ಟಿಗೆ ಒಳ ಹೊಕ್ಕು ಕಂಡಿದ್ದರು ಎಂಬುದನ್ನು ಈ ನಿರ್ಣಯಗಳು ತೋರಿಸುತ್ತವೆ.

ಗ್ರಾಮೀಣ ಪುನರ್ನಿರ್ಮಾಣದ ಕೆಲಸವನ್ನು ಹೊರಗಡೆಯ ನೆರವಿನಿಂದ ಮುಂದುವರಿಸಬೇಕೆಂಬ ವಿಶಾಲ ಪ್ರಶ್ನೆಯನ್ನು ನಿರ್ಧರಿಸಬೇಕಾಗಿತ್ತು. ಠಾಕೂರರಿಗೆ "ಹಳ್ಳಿಯೊಂದನ್ನು ಹೊರಗಿನಿಂದ ಶ್ರೀಮಂತಗೊಳಿಸುವ ಯಾವುದೇ ಪ್ರಯತ್ನವೂ ಕೃತಕ"* ಎನ್ನಿಸಿತು. ಆದ್ದರಿಂದ ಈ ಪ್ರಶ್ನೆಗೆ ಅವರದು 'ಖಂಡಿತ ಬೇಡ' ಎಂದೇ ಉತ್ತರ. ಇದೇ ಧಾಟಿಯಲ್ಲಿ ಮುಂದುವರಿದು ಅವರು ಹೀಗೆ ವಾದ ಹೂಡಿದರು: "ಭವಿಷ್ಯ ಕಾಲದಿಂದ ಕದ್ದು ವರ್ತಮಾನ ಕಾಲಕ್ಕೆ ದಾನ ಕೊಟ್ಟಂತೆ ಈ ಪ್ರಯತ್ನ, ತನ್ನನ್ನು ತಾನೇ ತುಂಬಿಕೊಳ್ಳಬಲ್ಲ ಕಾರಂಜಿಯನ್ನು ಮರಳು ಗಾಡಿನಲ್ಲಿ ಸಹ ಕಾಣಬಹುದು. ಇಂತಹ ಕಾರಂಜಿ ಬತ್ತುವುದೇ ಇಲ್ಲ."**

* ಶ್ರೀನಿಕೇತನದಲ್ಲಿ ಶಿಲ್ಪ ಭಂಡಾರದ ಉದ್ಘಾಟನಾ ಭಾಷಣ.

** ಅದೇ

ಗ್ರಾಮೀಣ ಸಮಸ್ಯೆಗಳನ್ನು ಬಿಡಿಸಲು ಸಮಗ್ರ ರೀತಿಯ ಪ್ರಯತ್ನವನ್ನು ಮಾಡಬೇಕಲ್ಲದೆ ಬಿಡಿ ಬಿಡಿಯಾಗಿ ಅಲ್ಲ ಎಂಬ ನಿರ್ಧಾರವನ್ನೂ ಅವರು ಕೈಗೊಂಡರು. ಇದು ಅವರದೇ ಪರಿಕಲ್ಪನೆ. ಇದು ಸಮಗ್ರವಾಗಿರಬೇಕೆಂದರೆ ಗ್ರಾಮೀಣ ಜೀವನದ ಎಲ್ಲ ಮುಖ್ಯ ಸಮಸ್ಯೆಗಳನ್ನೂ ಒಟ್ಟಿಗೆ ಬಿಡಿಸುವ ಪ್ರಯತ್ನವನ್ನು ಮಾಡಬೇಕೆಂದಷ್ಟೇ ಅಲ್ಲ, ವ್ಯಕ್ತಿಯು ಸಂಪೂರ್ಣವಾಗಿ ಅದರಲ್ಲಿ ತೊಡಗಿ ತನ್ನ ಅತ್ಯುತ್ತಮ ಪ್ರಯತ್ನ ಮಾಡುವಂತೆ ಪ್ರಚೋದಿಸಬೇಕೆಂದು ಅರ್ಥ. ಗ್ರಾಮೀಣ ಕೆಲಸಗಾರನು ತನ್ನ ಮೆದುಳನ್ನೂ ಕೈಗಳನ್ನೂ ಬಳಸುವುದು, ತನ್ನ ತಾಂತ್ರಿಕ ಜ್ಞಾನವನ್ನು ಬಳಸುವುದು ಇಷ್ಟೇ ಅಲ್ಲದೇ ಭಾವನಾತ್ಮಕವಾಗಿಯೂ ಆತನಿಗೆ ತನ್ನ ಕೆಲಸದಲ್ಲಿ ಆಸಕ್ತಿ ಇರಬೇಕು ಎಂಬುದು ಠಾಕೂರರು ಅಭಿಪ್ರಾಯ. ಆದ್ದರಿಂದ ಅವರು ಹೀಗೆಂದರು:

"ಸಮುದಾಯದ ಯೋಗಕ್ಷೇಮ ಹಲವು ಅಂತರ್ಗತ ಅಂಶಗಳ ಸಂಯೋಗ. ಅವುಗಳಲ್ಲಿ ಪರಸ್ಪರ ನಿಕಟ ಸಂಬಂಧ ಇದ್ದು, ಅವುಗಳಲ್ಲಿ ಯಾವುದನ್ನಾದರೂ ಬೇರೆ ಇಟ್ಟರೆ ಫಲಿತಾಂಶ ತಪ್ಪಿಹೋಗುತ್ತದೆ. ಆರೋಗ್ಯ, ಬುದ್ಧಿಶಕ್ತಿ, ತಿಳಿವಳಿಕೆ ಕೆಲಸ ಮತ್ತು ಸಂತೋಷಾನುಭವ ಇವೆಲ್ಲ ಸೇರಿದಾಗ ಮಾತ್ರ ಮನುಷ್ಯನ ಯೋಗ ಕ್ಷೇಮ ಪರಿಪೂರ್ಣವಾಗುತ್ತದೆ".*

ಈ ಸಾಮಾನ್ಯ ಅಂಶಗಳನ್ನು ಮಾರ್ಗದರ್ಶಕ ತತ್ತ್ವಗಳನ್ನಾಗಿ ಮಾಡಿಕೊಂಡು ಎಲ್ಮ್‌ಹರ್ಸ್ಟನು ಶ್ರೀನಿಕೇತನದ ಸುತ್ತಮುತ್ತಲಿನ ಹಳ್ಳಿಗಳ ಗುಂಪಿನಲ್ಲಿ ಗ್ರಾಮೀಣ ಪುನರ್ನಿರ್ಮಾಣದಲ್ಲಿ ಸ್ವಾರಸ್ಯವಾದ ಪ್ರಯೋಗಗಳನ್ನು ಮಾಡಿದ. ಈ ಪ್ರಯತ್ನದಲ್ಲಿ ಗ್ರಾಮೀಣ ಅಭಿವೃದ್ಧಿಗೆ ಪರಿಣಾಮಕಾರಿಯಾದ ವಿಧಾನವೊಂದನ್ನು ಕಂಡು ಹಿಡಿದ. ಆತ ರೂಪಿಸಿದ ಒಂದು ವಿಧಾನವು, ಇದಾದ ಅನೇಕ ವರ್ಷಗಳ ನಂತರ ನಮ್ಮ ದೇಶದಲ್ಲಿ ಮೊದಲನೆಯ ಪಂಚವಾರ್ಷಿಕ ಯೋಜನೆಯ ಭಾಗವಾಗಿ ಯೋಜನಾ ಆಯೋಗದ ನೇರ ಮೇಲ್ವಿಚಾರಣೆಯಲ್ಲಿ ಪ್ರಾರಂಭಿಸಿದ ಸಮುದಾಯ ವಿಕಾಸ ಕಾರ್ಯಕ್ರಮವನ್ನು ಹೋಲುತ್ತಿತ್ತು. ಈ ಎರಡು ವಿಧಾನಗಳಲ್ಲಿನ ಸಾಮ್ಯಗಳನ್ನು ಸಂಗ್ರಹವಾಗಿ ಪ್ರಸ್ತಾಪಿಸಿದರೆ ಠಾಕೂರರ ಕಾರ್ಯಕ್ರಮದ ವಿಶಿಷ್ಟ ಅಂಶಗಳ ಉತ್ಕೃಷ್ಟತೆಯನ್ನು ಎತ್ತಿ ತೋರಿಸಬಹುದು.

---

* ಕಲಾಂತರ 'ಸ್ವರಾಜ್ ಸಾಧನ್'

ಯೋಜನಾ ಆಯೋಗವು ಅನುಸರಿಸಿದ ಕಾರ್ಯಕ್ರಮಕ್ಕೆ ವಿಶಾಲವಾಗಿ ಮೂರು ಲಕ್ಷಣಗಳಿವೆ: (1) ಅದು ಗ್ರಾಮ ಜೀವನದ ಬೇರೆ ಬೇರೆ ವಿಭಾಗಗಳಲ್ಲಿ ಏಕಕಾಲದ ಚಟುವಟಿಕೆಗಳನ್ನು ಸಾಧ್ಯಗೊಳಿಸುವ ವಿವಿಧೋದ್ದೇಶದ ಕಾರ್ಯಕ್ರಮ. (2) ಅದು ಸಂಪೂರ್ಣವಾಗಿ ಸ್ವಸಹಾಯದ ಕಾರ್ಯಕ್ರಮವಾಗಿರಬೇಕು ಎಂಬುದು ಉದ್ದೇಶ. ಹಳ್ಳಿಯ ಜನ ಕನಿಷ್ಠ ಪ್ರಮಾಣದಲ್ಲಿ ಹೊರಗಿನಿಂದ ತಾಂತ್ರಿಕ ಮತ್ತಿತರ ನೆರವನ್ನು ಪಡೆದುಕೊಂಡು ತಮ್ಮ ಪ್ರಯತ್ನದಿಂದಲೇ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಪ್ರೋತ್ಸಾಹಿಸುತ್ತದೆ. (3) ಸುಧಾರಿಸಿದ ವಿಧಾನಗಳ ಪರಿಣಾಮಕತೆಯನ್ನು ಕುರಿತು ತಾವೇ ಖಚಿತಮಾಡಿಕೊಂಡನಂತರ ಅವನ್ನು ಅನುಸರಿಸುವಂತೆ ಹಳ್ಳಿಗರ ಮನವೊಲಿಸುವ ಮೂಲಕ ಗ್ರಾಮೀಣ ಸುಧಾರಣೆಗೆ ಅನುಸರಿಸಿದ ವಿಶೇಷ ರೀತಿ. ಇದರ ತಾಂತ್ರಿಕ ಹೆಸರು ವಿಸ್ತರಣ ಸೇವೆ ಎಂದು ಚೆನ್ನಾಗಿ ಪರಿಚಿತವಾದದ್ದು.

ಎಲ್ಮ್‌ಹರ್ಸ್ಟನ ಪ್ರಯೋಗಗಳು ಈ ಎಲ್ಲ ಲಕ್ಷಣಗಳನ್ನೂ ಮುನ್ಸೂಚಿಸುವ ಪರಿಣಾಮಗಳನ್ನು ನೀಡಿತು. ಆಗಲೇ ಪ್ರಸ್ತಾಪಿಸಿದ ಸಾಮಾನ್ಯ ತತ್ತ್ವಗಳು ಇವುಗಳಲ್ಲಿ ಮೊದಲ ಎರಡನ್ನು ನಿರೀಕ್ಷಿಸಲಾಗಿತ್ತು ಎನ್ನುವುದನ್ನು ತೋರಿಸುತ್ತವೆ. ಗ್ರಾಮೀಣ ಅಭಿವೃದ್ಧಿ ಕಾರ್ಯವು ಜನರ ವೈಯಕ್ತಿಕ ಮತ್ತು ಸಾಮೂಹಿಕ ಪ್ರಯತ್ನದಿಂದ ಮಾತ್ರ ಕಾರ್ಯಗತವಾಗಬೇಕು ಮತ್ತು ಹೊರಗಿನಿಂದ ಯಾವುದೇ ನೆರವು ದೊರೆಯಲಾಗದು ಎಂದು ಠಾಕೂರರು ಅಪೇಕ್ಷಿಸಿದ್ದರು. ಎರಡನೆಯದಾಗಿ, ಠಾಕೂರರು ತಮ್ಮ ಕಾರ್ಯಕ್ರಮಕ್ಕೆ ನೀಡಬಯಸಿದ್ದ ವಿವಿಧೋದ್ದೇಶ ಸ್ವರೂಪವು ಯೋಜನಾ ಆಯೋಗವು ಅನುಸರಿಸಿದ್ದುದಕ್ಕಿಂತ ಹೆಚ್ಚಿನ ಅವಕಾಶ ಕಲ್ಪಿಸುವಂತಹದು. ಸ್ವಯಂ ಪ್ರೇರಿತ ಕಾರ್ಯಕ್ಕೆ ಅತ್ಯುತ್ತಮ ಫಲಿತಾಂಶವನ್ನು ಪಡೆಯಲು ಅದಕ್ಕೆ ನಮ್ಮ ಭಾವನಾ ಶಕ್ತಿಯೊಡನೆ ಸಂಪರ್ಕ ಕಲ್ಪಿಸುವುದು ಅಗತ್ಯ ಎಂಬ ಅಂಶವನ್ನು ಠಾಕೂರರ ಯೋಜನೆಯು ಗುರುತಿಸಿತು. ತಾನು ಯಾವ ಜನತೆಯ ಸೇವೆ ಸಲ್ಲಿಸುತ್ತಿರುವೆನೋ ಅವರಲ್ಲಿ ಪ್ರೀತಿ ಅಥವಾ ಭಕ್ತಿ ಭಾವದ ಅಭಿವ್ಯಕ್ತಿ ಅದಕ್ಕೆ ಸ್ಫೂರ್ತಿಯಾಗಬೇಕು. ಸಾಮಾಜಿಕ ಕೆಲಸವನ್ನು ಈ ಮನೋಧರ್ಮದಿಂದ ಮಾಡಬೇಕು ಎಂದು ಠಾಕೂರರು ಬಯಸಿದರು. ಅವರು ಸ್ವಯಂ ಸೇವಕರ ಗುಂಪುಗಳನ್ನು ವ್ಯವಸ್ಥಿತಗೊಳಿಸಿ ಅವಕ್ಕೆ 'ಪ್ರತಿದಳಗಳು' ಎಂಬ

ಹೆಸರನ್ನಿತ್ತರು. ಈ ದಳಕ್ಕೆ ತಾನು ನೆರವಾಗುವ ಜನರಲ್ಲಿ ಗೌರವ ಭಾವದಿಂದ, ಶ್ರದ್ಧೆಯಿಂದ ತನ್ನ ಕೆಲಸವನು ಮಾಡುವುದರಲ್ಲಿ ಆಸಕ್ತಿ ಎಂಬುದನ್ನು ಈ ಹೆಸರು ಸೂಚಿಸುತ್ತದೆ.

ವಿಸ್ತರಣ ಕಾರ್ಯಕ್ರಮದ ವಿಶಿಷ್ಟ ಅಂಶವೆಂದರೆ ಪ್ರಯೋಗಾಲಯಕ್ಕೂ ಕ್ಷೇತ್ರ ಕೆಲಸಗಾರರಿಗೂ ನಡುವೆ, ಅವರಿಗೆ ತಾಂತ್ರಿಕ ಜ್ಞಾನವನ್ನು ಒದಗಿಸುವುದ ಕ್ಕಾಗಿ, ನಿಕಟ ಸಂಪರ್ಕವನ್ನು ಉಳಿಸಿಕೊಳ್ಳುತ್ತದೆ ಎಂಬುದು. ಅದು ರೈತನಿಂದ ಪಡೆದ ಸಮಸ್ಯೆಯನ್ನು ತಂತ್ರಜ್ಞಾನವಿರುವವರ ಮುಂದೆ ಇಡುತ್ತದೆ. ಅವರು ಪರಿಹಾರವನ್ನು ಪ್ರಯೋಗಾಲಯದಲ್ಲಿ ಕಂಡು ಹಿಡಿಯುತ್ತಾರೆ. ಅದನ್ನು ಅನ್ವಯಿಸಿ ನೋಡಲು ತಾಂತ್ರಿಕ ಜ್ಞಾನವನ್ನು ರೈತನ ಬಳಿಗೆ ಕೊಂಡೊಯ್ಯಲಾಗು ವುದು. ಎಲ್ಮ್‌ಹರ್ಸ್ಟ್‌ನ ಪ್ರಯೋಗಗಳೂ ಇಂತಹದೇ ವಿಧಾನವನ್ನು ರೂಪಿಸಿತು.*

ಠಾಕೂರರ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಕಾರ್ಯಕ್ರಮದ ಭಾಗವಾಗಿ ಕೃಷಿ ಪದ್ಧತಿಗಳಲ್ಲಿ ಸುಧಾರಣೆ, ಗ್ರಾಮ ಕೈಗಾರಿಕೆಗಳ ಪುನರುಜ್ಜೀವನ, ವಯಸ್ಕರ ಅಕ್ಷರಾಭ್ಯಾಸ, ಸಹಕಾರ ಬ್ಯಾಂಕಿಂಗ್ ಮತ್ತು ವೈದ್ಯಕೀಯ ನೆರವುಗಳನ್ನು ಒದಗಿಸುವ ಕಾರ್ಯಕ್ರಮವೊಂದು ಈ ರೀತಿಯಲ್ಲಿ ಬೆಳೆಯಿತು. ಜನರಿಗೆ ಗ್ರಾಮೀಣ ಪುನರ್‌ನಿರ್ಮಾಣ ಕಾಯದಲ್ಲಿ ಸ್ಫೂರ್ತಿ ನೀಡಲು ಠಾಕೂರರು ಹೊತ್ತಿಸಿದ ಜ್ಯೋತಿ ಇದು. ಈ ದಿಸೆಯಲ್ಲಿ ಮೊಟ್ಟ ಮೊದಲ ಮಾರ್ಗಶೋಧಕ ಪ್ರಯತ್ನವಿದು. ಇದರ ಸಾಧನೆ ಕಡಿಮೆ ಏನೂ ಅಲ್ಲ.

* 'ರವಿ ಪ್ರದಕ್ಷಿಣ್' ಸಂಪಾದಕರು : ಚಾರು ಚಂದ್ರ ಭಟ್ಟಾಚಾರ್ಯ. ಪುಟ 144.

ಅಧ್ಯಾಯ ೧೩

ಚಿತ್ರಕಾರರಾಗಿ

"ನನ್ನ ಚಿತ್ರಗಳಿಗೆ ಜನ್ಮಕೊಟ್ಟಿದ್ದು ಶಿಸ್ತಲ್ಲ, ಸಂಪ್ರದಾಯವಲ್ಲ, ಚಿತ್ರ ಬರೆಯುವ ಉದ್ದೇಶಿತ ಪ್ರಯತ್ನವಲ್ಲ; ಲಯದತ್ತ ನನ್ನ ಸಹಜ ಒಲವು, ಮತ್ತು ಗೆರೆಗಳ ಮತ್ತು ವರ್ಣಗಳ ಸಮರಸವಾದ ಸಮ್ಮಿಳನದಲ್ಲಿ ನನ್ನ ಸಂತೋಷ–ಇವೇ" ಎಂದರು ಠಾಕೂರರು.

ಕಲೆಗಳ ಕ್ಷೇತ್ರಕ್ಕೆ ಠಾಕೂರರು ಕಾಲಿಟ್ಟದ್ದರ ಸಂಪೂರ್ಣ ಕಥೆ ಇಲ್ಲಿದೆ. ಹದಿವಯಸ್ಸಿನಿಂದ ಅವರಿಗೆ ಪ್ರಿಯವಾದ ಮನರಂಜನೆಯಾಗಿದ್ದ ಕಾವ್ಯ ರಚನೆಯಲ್ಲಿ ಮಗ್ನರಾಗಿದ್ದ ಅವರಿಗೆ ಚಿತ್ರಕಲೆಯಲ್ಲಿ ತರಬೇತಿ ಪಡೆಯಲು ವಿರಾಮವೇದೊರೆಯಲಿಲ್ಲ. ಮನೆಯ ವಾತಾವರಣದಲ್ಲಿ ಇದಕ್ಕೆ ಅಗತ್ಯವಾದ ಪ್ರೋತ್ಸಾಹವಿರಲಿಲ್ಲ ಎಂದೇನೂ ಅಲ್ಲ. ಅವರ ಅಣ್ಣ ಜ್ಯೋತಿರಿಂದ್ರ ನಾಥರಿಗೆ ತಮ್ಮ ಕುಟುಂಬದ ಸದಸ್ಯರ ಭಾವಚಿತ್ರಗಳನ್ನು ಬಿಡಿಸುವುದರಲ್ಲಿ ಬಹು ಆಸಕ್ತಿ. ಅಣ್ಣ ತಮ್ಮಂದಿರು ಬಹು ಆತ್ಮೀಯತೆಯಿಂದಿದ್ದರು, ಸಂಗೀತದ ಅಭ್ಯಾಸ ಮಾಡುವುದರಲ್ಲಿ ತುಂಬಾ ನಿಕಟವಾಗಿಯೇ ಇದ್ದರು. ಆದರೂ ಅಣ್ಣನ ಮೇಲ್ಪಂಕ್ತಿ ತಮ್ಮನನ್ನು ಈ "ಗೆರೆಗಳ ಮತ್ತು ವರ್ಣಗಳ ಭಾಷೆಗೆ" ಆಕರ್ಷಿಸಲಿಲ್ಲ.

ಮುಂದೊಂದು ಕಾಲದಲ್ಲಿ ಅವರಿಗಿಂತ ಹತ್ತು ವರ್ಷ ಚಿಕ್ಕವನಾಗಿದ್ದ ಅವನ ಸೋದರಳಿಯ ಅಬನೀಂದ್ರನಾಥರು ಬಂಗಾಳದ ಕಲಾಶಾಲೆ (ಬೆಂಗಾಲ್ ಸ್ಕೂಲ್ ಆಫ್ ಆರ್ಟ್) ಯನ್ನು ಸ್ಥಾಪಿಸಿದರು. ಠಾಕೂರರ ಮನೆತನದ ಎರಡು ಶಾಖೆಗಳವರು ವಾಸಿಸುತ್ತಿದ್ದ ಆವರಣದಲ್ಲಿ ಈ ಶಾಲೆ ಇತ್ತು. ಖ್ಯಾತ ವಿದೇಶೀ ಕಲಾವಿದರೂ ಭಾಗವಹಿಸುತ್ತಿದ್ದ ಕಲಾವಿದರ ಗುಂಪೊಂದರ ಚಟುವಟಿಕೆಗಳ ಕೇಂದ್ರವಾಯಿತು ಅಬನೀಂದ್ರನಾಥರ ಚಿತ್ರಶಾಲೆ. ಆದರೆ ಈ ಚಟುವಟಿಕೆಗಳೂ ಸಹ ಠಾಕೂರರನ್ನು ಆಕರ್ಷಿಸಲಿಲ್ಲ.

ಇದಕ್ಕೆ ಕಾರಣ ಹುಡುಕುವುದು ಕಷ್ಟವಲ್ಲ. ಈ ಹೊತ್ತಿಗೆ ಠಾಕೂರರು, 'ಶಕ್ತಿ ಸಾಹಿತ್ಯ' ವೆಂದು ಡಕ್ವಿನ್ಸಿ ಸಾಹಿತ್ಯದ ಎಲ್ಲ ಶಾಖೆಗಳಗೂ ಸಂಬಂಧಿಸಿದಂತೆ ಸಾಹಿತ್ಯಕ ಚಟುವಟಿಕೆಗಳಲ್ಲಿ ಮುಳುಗಿಹೋಗಿದ್ದರು. ಅಲ್ಲದೆ, ಶಾಂತಿನಿಕೇತನದಲ್ಲಿ ತಮ್ಮ ಗ್ರಾಮೀಣ ಪಾಳೆಯದಲ್ಲಿನ ಶೈಕ್ಷಣಿಕ ಚಟುವಟಿಕೆಗಳಲ್ಲಿ ಶ್ರದ್ಧೆಯಿಂದ ಆಸಕ್ತಿ ವಹಿಸಿದ್ದರು. ನಂತರದ ಘಟನೆಗಳೇ ಹೇಳುವಂತೆ ಅವರಿಗೆ ಚಿತ್ರಕಲೆಯಲ್ಲಿ ಆಸಕ್ತಿಯಾಗಲಿ ಕೌಶಲ್ಯವಾಗಲಿ ಇಲ್ಲದಿರಲಿಲ್ಲ. ಅದಕ್ಕೆ ಗಮನ ನೀಡಲು ಠಾಕೂರರಿಗೆ ಸಾಧ್ಯವಾಗಿರದ್ದು ಬಹು ಮಟ್ಟಿಗೆ ಸಾಹಿತ್ಯದಚಟುವಟಿಕೆಗಳಲ್ಲಿ ಮತ್ತು ಸ್ವಲ್ಪ ಮಟ್ಟಿಗೆ ಶೈಕ್ಷಣಿಕ ಚಟುವಟಿಕೆಗಳಲ್ಲಿ ಮಗ್ನರಾಗಿದ್ದರಿಂದ. ಅವರಿಗೆ ಅರವತ್ತೈದು ದಾಟಿದ ಮೇಲೆ ಚಿತ್ರಕಲೆಯ ಸೇವೆಯ ಹಂಬಲ ಎಷ್ಟು ಬಲವತ್ತರವಾಯಿತೆಂದರೆ ಅವರು ಅದಕ್ಕೆ ಮಣಿಯಲೇ ಬೇಕಾಯಿತು. ಈ ಹಂಬಲ ಬಲವತ್ತರವಾಗಲೆಂದೇ ಅವರು ಅಷ್ಟು ಕಾಲ ಕಾಯಬೇಕಾಯಿತು. ಈ ಹೊಸ ಆಕರ್ಷಣೆ ಅವರ ಸಾಹಿತ್ಯ ಚಟುವಟಿಕೆಗಳ ಸ್ಥಾನವನ್ನು ಕಿತ್ತುಕೊಂಡಿತೇದೇನೂ ಏಕಸ್ವಾಮ್ಯ ಪಡೆಯಲಿಲ್ಲ. ಪರಿಣಾಮವಾಗಿ, ಅವರು ಎಪ್ಪತ್ತನ್ನು ಸಮೀಪಿಸುತ್ತಿದ್ದಾಗ್ಗ ಮತ್ತು ಎಪ್ಪತ್ತಾದುದರ ತರುಣದಲ್ಲಿ ಚಿತ್ರಕಲೆ ಅವರ ಮನಸ್ಸನ್ನು ಹೆಚ್ಚು ಹೆಚ್ಚಾಗಿ ಸೆಳೆಯುತ್ತ ಬಂದಿತು.

ಹೊಸ ಮಾಧ್ಯಮಕ್ಕೆ ಅಗತ್ಯವಾದ ಕೌಶಲ್ಯಗಳನ್ನು ಕಲಿಯಲು ಮಾಮೂಲಾದ ತರಬೇತಿಯನ್ನು ಠಾಕೂರರು ಏಕೆ ಪಡೆದುಕೊಳ್ಳಲಿಲ್ಲ ಎನ್ನುವುದನ್ನೂ ಈ ಸಂಗತಿಗಳು ಸ್ಪಷ್ಟಪಡಿಸುತ್ತವೆ. ಈ ಹವ್ಯಾಸಕ್ಕೆ ಅವರಿಗೆ ಕಾಲ ವಿರಾಮ ದೊರೆಯುವ ಹೊತ್ತಿಗೆ ಇಂತಹ ತರಬೇತಿಗೆ ಸರಿಯಾದ ಹಂತವನ್ನು ಅವರು ದಾಟಿಬಿಟ್ಟಿದ್ದರು.

ಹೀಗಾದದ್ದೇ ಒಳ್ಳೆಯದಾಯಿತು. ಏಕೆಂದರೆ ಅವರು ತಮ್ಮ ಹೊಸ ಪ್ರಯೋಗವನ್ನು ಯಾವುದೇ ಸಾಂಪ್ರದಾಯಿಕ ರೀತಿಯ ಬಂಧನವಿಲ್ಲದ ಸಂಪೂರ್ಣವಾಗಿ ಸ್ವತಂತ್ರವಾದ ಮನಸ್ಸಿನೊಡನೆ ಪ್ರಾರಂಭಿಸುವುದು ಸಾಧ್ಯವಾಯಿತು. ಪ್ರಾಯಶಃ ಯಾವುದೇ ಸಾಂಪ್ರದಾಯಿಕ ವಿನ್ಯಾಸಕ್ಕೆ ಅಂಟಿಕೊಳ್ಳದ ಠಾಕೂರರ ಚಿತ್ರಗಳ ವೈಶಿಷ್ಟ್ಯಕ್ಕೆ ಕಾರಣ ಇರಬಹುದು.

ಇದು ಕಲಾವಿದರಾಗಿ ಠಾಕೂರರ ಚಟುವಟಿಕೆಗಳ ಇತಿಹಾಸ. ಬರಹಗಾರರು ತಮ್ಮ ಹಸ್ತಪ್ರತಿಗಳನ್ನು ಮತ್ತೆ ಓದಿ ತಿದ್ದುಪಾಟುಗಳನ್ನು ಮಾಡುವ ಅನೇಕ ಅವಕಾಶಗಳು ಇರುತ್ತವೆ. ಪ್ರಾರಂಭದಲ್ಲಿ ಠಾಕೂರರು ತೆಗೆದುಹಾಕಬೇಕಾದ ಭಾಗಗಳನ್ನು ನೀಲಿ ಪೆನ್ಸಿಲಿನಿಂದ ಹೊಡೆದು ಹಾಕಿ ಸಾಮಾನ್ಯವಾದ ರೀತಿಯಲ್ಲಿ ಇಂತಹ ತಿದ್ದುಪಾಟುಗಳನ್ನು ಮಾಡುತ್ತಿದ್ದರು, ಆದರೆ 1924 ರಿಂದಾಚೆ ಇಂತಹ ತಿದ್ದುಪಾಟುಗಳು ಅಸಾಧಾರಣ ಗಮನವನ್ನು ಪಡೆದವು.* ತಮ್ಮ ತಿದ್ದುಪಾಟುಗಳ ಅಸಮಂಪಾರ್ಶ್ವತೆಯನ್ನು ಸಹಿಸಲು ಅವರಿಂದಾಗಲಿಲ್ಲ, ಅವಕ್ಕೆ ಅರ್ಥವತ್ತಾದ ರೂಪವನ್ನು ಕೊಡಬೇಕೆಂಬ ಭಾವನೆ ಬೆಳೆಯುತ್ತ ಹೋಯಿತು.

ಅವರು ಹೇಳುತ್ತಾರೆ: "ನನ್ನ ಹಸ್ತ ಪ್ರತಿಗಳಲ್ಲಿನ ಗೀಟುಗಳು ಪಾಪಿಗಳಂತೆ ಮೋಕ್ಷಕ್ಕಾಗಿ ಆರ್ತಸ್ವರದಲ್ಲಿ ಬೇಡಿಕೊಂಡಾಗ ಮತ್ತು ಅವುಗಳ ಅಪ್ರಸ್ತುತತೆಯ ಈ ರೂಪ ನನ್ನ ಕಣ್ಣನ್ನು ಉರಿಸಿದಾಗ ಎಷ್ಟೋ ಬಾರಿ ನಾನು ಸ್ಪಷ್ಟವಾಗಿ ಮಾಡಬೇಕಾಗಿದ್ದ ಕೆಲಸಕ್ಕಿಂತ ಈ ಗೀಟುಗಳಿಗೆ ಲಯಬದ್ಧತೆಯ ದಯಾಪೂರ್ಣ ಮುಕ್ತಿಯ ಕೊಡುವುದರಲ್ಲಿ ಹೆಚ್ಚು ಕಾಲ ಕಳೆದಿದ್ದೇನೆ."**

ಈ ವೃತ್ತಾಂತವು ಅವರಲ್ಲಿನ ಕಲಾವಿದ ಎಚ್ಚರಗೊಳ್ಳುತ್ತಿದ್ದುದನ್ನೂ ತೋರಿಸುತ್ತದೆ. ಚಿತ್ರಕಲೆಯಲ್ಲಿ ಅವರ ಮೊದಲ ಪ್ರಯತ್ನಗಳು ಹೇಗಿದ್ದವು? ವಿಚಿತ್ರ ಆಕೃತಿಗಳು ರೂಪ ತಾಳಿದವು. ಅವುಗಳಲ್ಲಿ ಬಹು ಆಕೃತಿಗಳಿಗೆ ಲಯಾತ್ಮಕ

---

* ಪೃಥ್ವೀಶ್ ನಿಯೋಗಿ : "ಡ್ರಾಯಿಂಗ್ಸ್ ಅಂಡ್ ಪೆಯಿಂಟಿಂಗ್ಸ್ ಆಫ್ ರವೀಂದ್ರನಾಥ್" "ಸೆಂಟಿನರಿ ವಾಲ್ಯೂಮ್ ಆಫ್ ಸಾಹಿತ್ಯ ಅಕಾಡೆಮಿ".

** ಕಲ್ಕತ್ತ ಮುನಿಸಿಪಲ್ ಗೆಜೆಟ್"–ಟ್ಯಾಗೋರ್ ಮೆಮೋರಿಯಲ್ ಸ್ಪೆಷಲ್ ಸಪ್ಲಿಮೆಂಟ್

ಗುಣವೊಂದಲ್ಲದೆ ಬೇರೆ ಅರ್ಥವಿರಲಿಲ್ಲ. ಹಲವೊಮ್ಮೆ ಅವು ಪೌರಾಣಿಕ ಕತೆಗಳ ಪ್ರಾಣಿಗಳು ಅಥವಾ ಇತಿಹಾಸಪೂರ್ವ ಪಕ್ಷಿಗಳು ಮತ್ತು ಸರೀಸೃಪಗಳ ಚಿತ್ರ ರೂಪಗಳನ್ನು ಧರಿಸುತ್ತಿದ್ದವು. ಇವೆಲ್ಲ ಅಮೂರ್ತ ಲಕ್ಷಣದ ಸೃಷ್ಟಿಗಳೇ.

ಮುಂದಿನ ಘಟ್ಟದಲ್ಲಿ ಚಿತ್ರಗಳ ತಂತ್ರ ಮತ್ತು ಸಮರಸ ಎರಡೂ ಮಾರ್ಪಾಟಾದವು. ಕುಂಚ ಹಿಡಿಯುವುದರಲ್ಲಿ ಶಿಕ್ಷಣವೇ ಇಲ್ಲದ ಠಾಕೂರರು ತಮ್ಮ ಪ್ರಾರಂಭದ ರೇಖಾಕೃತಿಗಳಲ್ಲಿ ಮತ್ತು ಚಿತ್ರಗಳಲ್ಲಿ ಅಸಾಮಾನ್ಯ ವಿಧಾನ ಗಳನ್ನು ಅನುಸರಿಸುತ್ತಿದ್ದರು. ಪ್ರಾರಂಭದಲ್ಲಿ ಸುಲಭವಾಗಿ ಸಿಕ್ಕುತ್ತಿದ್ದ ಸಾಮಗ್ರಿ ಗಳೆಂದರೆ ಲೇಖನಿ ಮತ್ತು ಮಸಿ. ರೇಖಾ ಚಿತ್ರಗಳಿಗೆ ಇವೇ ಅವರ ಪರಿಕರಗಳಾಗಿ ದ್ದವು. ಒಂದು ಭಾಗವನ್ನು ಮಸಿಯಿಂದ ಆವರಿಸುವ ಅಗತ್ಯ ಕಂಡು ಬಂದಾಗ, ತಮ್ಮ ಲೇಖನಿಯ ಮೊಂಡು ತುದಿಯನ್ನೇ ಬಳಸಿಬಿಡುತ್ತಿದ್ದರು ಅನಂತರ ಎರಡು ಛಾಯೆಗಳ ರೇಖಾ ಚಿತ್ರದಲ್ಲಿ ಮಸಿಯನ್ನು ಹರಡಲು ಬೆರಳ ತುದಿ ಯನ್ನೋ, ಚಿಂದಿ ಬಟ್ಟೆಯನ್ನೋ ಉಪಯೋಗಿಸುತ್ತಿದ್ದರು ಇನ್ನೂ ಎಷ್ಟೋ ಕಾಲದ ನಂತರವೇ ಅವರು ಕ್ರಮವಾದ ಬಣ್ಣಗಳೊಡನೆ ಕ್ರೆಯಾನ್ ಮತ್ತು ಕುಂಚ ಗಳನ್ನು ಬಳಸಲು ಪ್ರಾರಂಭಿಸಿದ್ದು.*

ಅವರ ತಂತ್ರ ಸುಧಾರಿಸಿದಂತೆ ಚಿತ್ರಗಳಿಗೂ ಹೊಸ ಸ್ವರೂಪ ಬಂದಿತು. ಅವಾಸ್ತವಿಕ ಪ್ರಾಣಿಗಳನ್ನು, ಪಕ್ಷಿಗಳನ್ನು ಸೂಚಿಸುವ ಅಮೂರ್ತ ಆಕಾರಗಳಿಂದ ವಾಸ್ತವಿಕ ಛಾಯೆಯಿದ್ದ ಹೊಸ ರೂಪಗಳೂ ಆಕಾರಗಳೂ ಬಂದವು. ಯೋಜನೆ ಗಳನ್ನು ಆಕಾರಗಳನ್ನು ಸೂಚಿಸುವ ಸ್ತ್ರೀಯರ ಮುಖಗಳು, ಮುಖವಾಡಗಳು, ಭಾವಾಭಿನಯ ಮಾಡುತ್ತಿರುವ ವ್ಯಕ್ತಿಗಳು ಮತ್ತು ಮನುಷ್ಯ ರೂಪಗಳು ಸೃಷ್ಟಿ ಯಾದವು. ಅವರ ಚಿತ್ರಕಲೆ ವಾಸ್ತವಿಕತೆಯತ್ತ ಸಾಗುತ್ತಿತ್ತು. ಮುಂದಿನ ಘಟ್ಟದಲ್ಲಿ ನಿಸರ್ಗ ದೃಶ್ಯ ಚಿತ್ರಗಳು ಪ್ರಾಮುಖ್ಯತೆ ಪಡೆದವು. ಇಂತಹ ಚಿತ್ರ ಗಳಲ್ಲಿ ಗಿಡ ಮರಗಳ ಛಾಯಾರೂಪಗಳಿಗೆ ವೈದೃಶ್ಯವಾಗಿ ಬಂಗಾರದ ಹಳದಿಯ ವರ್ಣದಲ್ಲಿ ಬೆಳಗುವ ಪ್ರಭಾಮಯ ಮಧ್ಯಾಹ್ನದ ಆಕಾಶ ಎದ್ದು ಕಾಣುತ್ತಿದ್ದುದು ವಿರಳವಲ್ಲ.

* ಪೃಥ್ವೀಶ್ ನಿಯೋಗಿ; 'ಡ್ರಾಯಿಂಗ್ಸ್ ಅಂಡ್ ಪೆಯಿಂಟಿಂಗ್ಸ್ ಆಫ್ ರಬೀಂದ್ರನಾಥ್'

ಗರುಡನ ಮೂಗು, ಲವಲವಿಕೆಯ ಕಣ್ಣು ಇದ್ದ ಬಾದಾಮಿಯಾಕಾರದ ಮುಖದ ಒಬ್ಬ ಅಪಕುಂಠನಸತಿಯನ್ನು ವಿಶೇಷವಾಗಿ ಗಮನಿಸಬೇಕು. ಅವರ ಚಿತ್ರಗಳಲ್ಲಿ ಇದು ಮತ್ತೆ ಮತ್ತೆ ಕಾಣಿಸಿಕೊಳ್ಳುವ ವಸ್ತು. ಇದರಿಂದ ಈ ಚಿತ್ರದ ಮೂಲವ್ಯಕ್ತಿ ಯಾರಿರಬಹುದು ಎಂದು ಊಹಾ ಪೋಹಗಳು ಪ್ರಾರಂಭವಾದವು. ಪ್ರಸಿದ್ಧ ಕಲಾವಿದ ನಂದಲಾಲ ಬೋಸರು ಕವಿಗೇ ಈ ಪ್ರಶ್ನೆಯನ್ನು ಕೇಳಿದಂತೆ ಕಾಣುತ್ತದೆ. ಇದಕ್ಕೆ ಉತ್ತರವಾಗಿ ಅವರು, ಅವಕುಂಠನ ಧರಿಸಿದ ಹೊಳೆಯುವ ಕಣುಗಳ ಈ ಹೆಣ್ಣು ಮುಖ ಪ್ರಾಯಶ: ತೀರಿಕೊಂಡ ತಮ್ಮ ಅತ್ತಿಗೆ. ಕಾದಂಬರೀ ದೇವಿಯದ್ದಿರಬೇಕು, ಆಕೆಯ ಮುಖ ತಮ್ಮ ನೆನಪಿನಲ್ಲಿ ಉಳಿದಿದೆ ಎಂದರು.

ಅವರ ಮಾತುಗಳು ಇವು: "ನನ್ನ ಮನಸ್ಸಿನ ಮೇಲೆ ನೂತನ ಬಹೂತನಳ ಕಣ್ಣಿನ ನೋಟ ಎಷ್ಟು ಆಳವಾಗಿ ಅಚ್ಚೊತ್ತಿದೆಯೆಂದರೆ ಅದನ್ನು ನಾನು ಮರೆಯಲು ಸಾಧ್ಯವೇ ಇಲ್ಲ ಮತ್ತು ನಾನು ಭಾವಚಿತ್ರಗಳನ್ನು ಬರೆಯುವಾಗ ಆಗಾಗ ಅವಳ ಹೊಳೆಯುವ ಕಣ್ಣುಗಳು ನನ್ನ ನೋಟದ ಮುಂದೆ ಬರುತ್ತವೆ, ಇದರಿಂದಲೇ ನನ್ನ ಭಾವಚಿತ್ರಗಳಲ್ಲಿನ ಕಣ್ಣುಗಳು ಆಕೆಯ ಕಣ್ಣುಗಳಂತೆಯೇ ಇವೆ."*

ಇದರಿಂದ ನಾವು ಎರಡೂ ಅಭಿಪ್ರಾಯಗಳಿಗೆ ಬರಬಹುದು. ಮೊದಲನೆಯದಾಗಿ, ಸಾಂಪ್ರದಾಯಿಕ ಭಾರತೀಯ ಕಲೆಯಲ್ಲಿ ಮಾಡುವಂತೆ ಕವಿಯು ಜೀವಂತ ಮಾದರಿಗಳಿಂದ ಚಿತ್ರಗಳನ್ನು ಬರೆಯುತ್ತಿರಲಿಲ್ಲ. ಎರಡನೆಯದಾಗಿ, ಈ ಅತ್ತಿಗೆಯ ವಿಷಯದಲ್ಲಿ ಅವರಿಗಿದ್ದ ಗಾಢವಾದ ಪ್ರೀತಿ ವ್ಯಕ್ತವಾಗುತ್ತದೆ.

ತಮ್ಮ ಮುಪ್ಪಿನಲ್ಲೂ ಠಾಕೂರರಿಗೆ ಅವಕುಂಠನ ಧರಿಸಿದ ಆಕೆಯ ಮುಖವು ಸ್ಪಷ್ಟವಾಗಿ ನೆನಪಿತ್ತೆಂಬುದು, ಶೈಶವದ ನೆನಪುಗಳು ಆಗಾಗ ಅವರ ಕವನಗಳಿಗೆ ವಸ್ತುಗಳನ್ನು ಒದಗಿಸುತ್ತಿದ್ದ ದಿನಗಳಲ್ಲಿ ಅವರು ಬರೆದ ಪದ್ಯಗಳಿಂದಲೂ ಖಚಿತವಾಗುತ್ತದೆ. ಮುಂದಿನ ಪುಟದಲ್ಲಿಕೊಟ್ಟಿರುವ ಪಂಕ್ತಿಗಳು ಇದಕ್ಕೊಂದು ನಿದರ್ಶನ. ಇವುಗಳಲ್ಲಿ ತಮ್ಮ ಪೂರ್ವಿಕರ ಜೊರಸಾಂಕೊ ಮನೆಯ ಮಾಳಿಗೆಯ ಮೇಲಿನ ಒಂದು ಸಂಧ್ಯಾ ಕಾಲದ ದೃಶ್ಯವನ್ನು ಸ್ಮರಿಸಿಕೊಳ್ಳುತ್ತಾರೆ:

* ಮನೋರಂಜನ ಗುಪ್ತ : 'ರಬೀಂದ್ರನಾಥ್ ಚಿತ್ರಕಲಾ'.

ತನ್ನ ಪಿಟೀಲನ್ನು ಭುಜಕ್ಕೆ ಒರಗಿಸಿಕೊಂಡು
ಶುಕ್ರಗ್ರಹದ ಸ್ಫೂರ್ತಿಯಿಂದ
ಮಾಳಿಗೆಯ ಮೇಲೆ ನನ್ನ ಅಣ್ಣ
ರಾಗಗಳನ್ನು ಅಭ್ಯಾಸ ಮಾಡುವನು,

ನನ್ನ ಇಂಗ್ಲೀಷ್ ಪಾಠಗಳನ್ನು ಮುಗಿಸಿ
ನನ್ನ ಅತ್ತಿಗೆಯ ಬಳಿ ಓಡಿ ಹೋಗಿ ಹೇಳುತ್ತಿದ್ದೆ,
ಆಕೆಯ ಕೆಂಪು ಅಂಚಿನ ಸೀರೆಯ ಸೆರಗು,
ಅವಳ ಮುಖವನ್ನೂ ಮುಚ್ಚಿರುತ್ತಿತ್ತು *

ಠಾಕೂರರು ತಮ್ಮ ಉಳಿದ ಜೀವನದಲ್ಲೂ ಹೊಸ ಹವ್ಯಾಸದಲ್ಲಿ ಚುರುಕಾಗಿ ನಿರತರಾದರೆಂದು ತೋರುತ್ತದೆ.

ಚಿತ್ರಕಲೆಯನ್ನು ಶ್ರದ್ಧೆಯಿಂದ ಅವರು ಪ್ರಾರಂಭಿಸಿದ್ದು 1928 ರಲ್ಲಿ. ಅಲ್ಲಿಂದ 1940 ರ ವರೆಗಿನ ಕಾಲದಲ್ಲಿ ಅವರು ಸುಮಾರು ಎರಡು ಸಾವಿರ ಚಿತ್ರಗಳನ್ನು ರಚಿಸಿದರು. ಅವರ ಚಿತ್ರಗಳನ್ನು ಅಚ್ಚು ಮಾಡಿ 'ಚಿತ್ರಲಿಪಿ' ಎಂಬ ಹೆಸರಿನ ಎರಡು ಸಂಪುಟಗಳನ್ನು ವಿಶ್ವಭಾರತಿ ಹೊರತಂದಿದೆ. ಇವುಗಳಲ್ಲಿ ಇತರ ಚಿತ್ರಗಳ 33 ಪ್ರತಿಕೃತಿಗಳಿವೆ. ಇವುಗಳಲ್ಲಿ ಮೊದಲನೆಯದಕ್ಕೆ ವಿಶೇಷ ಮಹತ್ವವುಂಟು. ಇದರಲ್ಲಿ ಪ್ರತಿ ಚಿತ್ರಕ್ಕೂ ವ್ಯಾಖ್ಯಾನವುಂಟು. ಇದನ್ನು ಠಾಕೂರರೇ ಇಂಗ್ಲೀಷಿಗೆ ಅನುವಾದಿಸಿದ್ದಾರೆ. ಈ ವ್ಯಾಖ್ಯಾನಗಳಿಂದ ಪ್ರತಿ ಚಿತ್ರವನ್ನು ಅರ್ಥಮಾಡಿಕೊಳ್ಳಲು ನೆರವಾಗುವುದಲ್ಲದೆ ಯಾವುದಾದರೂ ಚಿತ್ರದಲ್ಲಿ ವಿಶೇಷ ವಿಚಾರವುಂಟೇ ಎನ್ನುವುದು ತಿಳಿಯುತ್ತದೆ. ಹೀಗೆ ಇವು ಚಿತ್ರಕಲೆಯನ್ನು ಕುರಿತ ಅವರ ಸಿದ್ಧಾಂತದ ಮೇಲೆ ವಿಶೇಷ ಬೆಳಕನ್ನು ಬೀರುತ್ತದೆ.

ಇದನ್ನು ಪರಿಚಯ ಮಾಡಿಕೊಳ್ಳಲು ಕೆಲವು ಚಿತ್ರಗಳನ್ನು ಇಲ್ಲಿ ಪ್ರಸ್ತಾಪಿಸಬಹುದು. ಈ ಸಂಪುಟದಲ್ಲಿ ಅಚ್ಚಾಗಿರುವ ಹದಿನೇಳನೆಯ ಚಿತ್ರವು ಒಬ್ಬ

---

* ಚಾರರ್ ಛಾಬಿ–'ಬಾಲಕ್'

ಮನುಷ್ಯ ಒಂದು ದೈತ್ಯ ಸರೀಸೃಪದ ಬೆನ್ನಿನ ಮೇಲೆ ಕುಳಿತಿರುವುದನ್ನು ತೋರಿಸುತ್ತದೆ. ವಿಕಾಸವು ಮನುಷ್ಯನಲ್ಲಿ ಒಂದು ಮಹತ್ವದ ರೂಪ ಪಡೆಯುತ್ತದೆ. ಮನುಷ್ಯ ತನ್ನ ಬುದ್ಧಿಶಕ್ತಿಯನ್ನು ಬಳಸಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕಲ್ಲದೆ ಇತಿಹಾಸಪೂರ್ವ ಸರೀಸೃಪಗಳಂತೆ ಶರೀರದ ದೈತ್ಯ ಬೆಳವಣಿಗೆಯಿಂದಲ್ಲ. ಇಂತಹ ಜೀವವನ್ನು ಒಂದು ಅಪರಿಪೂರ್ಣ ಮನಸ್ಸಿಗೆ ಕಟ್ಟಿ ಹಾಕುತ್ತದೆ ಎನ್ನುವುದು ಠಾಕೂರರಿಗೆ ಪ್ರಿಯವಾದ ವಿಚಾರಗಳಲ್ಲಿ ಒಂದು. ಈ ಚಿತ್ರವು ಈ ಭಾವನೆಯನ್ನು ವಕ್ತಪಡಿಸುತ್ತದೆ.*

ಕಲ್ಲು ಹಾಸಿರುವ ಪ್ರದೇಶದಲ್ಲಿ ಎರಡು ಹೂವುಗಳು ಸಣ್ಣ ತೂತೊಂದರಿಂದ ಇಣಕಿ ನೋಡುತ್ತಿರುವುದು ಈ ಸಂಪುಟದ ಕಡೆಯ ಚಿತ್ರ. 'ಮೂರ್ಖ ಕಲ್ಲುಗಳು' ಇಳೆಯ ವಾಣಿಯನ್ನು ಅಡಿಗಿಸಲಾರದೆಂಬುದು ಇದರ ಅರ್ಥ. ನಿಸರ್ಗವನ್ನು ತನ್ನ ಬಾಳಿನಿಂದ ಹೊರಗಟ್ಟಿ ಆಧುನಿಕ ಮಾನವನು ನಡೆಸುತ್ತಿರುವ ಸಮತೋಲನವಿಲ್ಲದ ನಗರ ಜೀವನವನ್ನು ಹಳ್ಳಿಯುವ ಅವರ ಇನ್ನೊಂದು ವಿಚಾರಕ್ಕೆ ಈ ಚಿತ್ರ ರೂಪ ಕೊಡುತ್ತದೆ. ಮಿತಿ ಮೀರಿದ ತಾಂತ್ರಿಕ ಬೆಳವಣಿಗೆಯ ಲೇಪದಿಂದ ಕಾಂತಿ ಹೀನವಾಗದ ಹಿಂದಿನ ದಿನಗಳ ಸಹಜ ಜೀವನಕ್ಕೆ ಹಿಂದಿರುಗಬೇಕೆಂದು ಕವಿ ಒತ್ತಾಯಿಸುತ್ತಾರೆ. 'ರಕ್ತಕರವಿ' ಎಂಬ ಅವರ ಒಂದು ಸಾಂಕೇತಿಕ ನಾಟಕದ ಮುಖ್ಯ ವಸ್ತು ಇದೇ ಎಂಬುದನ್ನು ಇಲ್ಲಿ ಹೇಳಬಹುದು.

ಈ ಬಗೆಯ ಚಿತ್ರಕ್ಕೂ ಅಮೂರ್ತ ಕಲೆ ಎಂದು ಸಾಮಾನ್ಯವಾಗಿ ಕರೆಯುವ ಕಲೆಗೂ ಬಹು ದೂರ. ಇಂತಹ ಚಿತ್ರಗಳು ನಿಜವಾಗಿ ವರ್ಣ, ರೇಖೆಗಳಿಂದ ಬರೆದ ಭಾವಗೀತೆಗಳೇ. ಅವು ಮನಸ್ಸನ್ನು ಉನ್ನತಿಗೊಯ್ಯುವ ಭಾವನೆಗಳನ್ನು ವ್ಯಕ್ತಪಡಿಸುತ್ತವೆ. ಈ ಮಾಧ್ಯಮವನ್ನು ಇದೇ ರೀತಿ ಬಳಸಿದ ವಾಟ್ಸ್‌ನ ಚಿತ್ರಗಳಂತೆ ಇವೆ 'ಪ್ರೇಮ ಮತ್ತು ಬಾಳು', 'ಭರವಸೆ - ಆತನ ಈ ಪ್ರಸಿದ್ಧ ಚಿತ್ರಗಳನ್ನು ನಾವು ಇಲ್ಲಿಸ್ಮರಿಸಬಹುದು. ವ್ಯತ್ಯಾಸವೆಂದರೆ, ಅಭಿಜಾತಯೂರೋಪಿನ ಕಲೆಗೆ ಸಹಜವಾದ ವಾಸ್ತವಿಕಶೈಲಿಯನ್ನು ವಾಟ್ಸ್ ಬಳಸಿದ. ಠಾಕೂರರು ತಮ್ಮದೇ ಆದ ಶೈಲಿಯನ್ನು ಬಳಸಿದರು. ಠಾಕೂರರು ಚಿತ್ರಗಳಲ್ಲಿ ವರ್ಣಗಳನ್ನೂ ಗೆರೆಗಳನ್ನೂ ಕನಿಷ್ಠ ಪ್ರಮಾಣದಲ್ಲಿ ಬಳಸುತ್ತಾರೆ.

* ''ರಿಲಿಜನ್ ಆಫ್ ಮ್ಯಾನ್'' –ದಿ ಕ್ರಿಯೇಟಿವ್ ಸ್ಪಿರಿಟ್

ನಂದಲಾಲ ಬೋಸರು ತೋರಿಸಿಕೊಟ್ಟಂತೆ, ಈ ವಿಷಯದಲ್ಲಿ ಠಾಕೂರರು ಭಾರತೀಯ ಸಂಪ್ರದಾಯವನ್ನು ಅನುಸರಿಸುತ್ತಾರೆ.* ವರ್ಣಗಳನ್ನು ಸೂಕ್ಷ್ಮವಾಗಿ ಬಳಸಿ ಆಳವನ್ನು ಸೂಚಿಸುವ ರೀತಿಯತ್ತ ಭಾರತೀಯ ಚಿತ್ರಕಾರರ ಮನಸ್ಸು ಹೋಗಲೇ ಇಲ್ಲ. ಆಕಾರ ರೇಖೆಯನ್ನು ತೋರಿಸಲು ಒಂದೇ ಛಾಯೆಯ ಬಣ್ಣಗಳಿಂದ ಮೇಲ್ಮೈಯನ್ನು ತುಂಬಿಸುವುದೇ ಅವರಿಗೆ ತೃಪ್ತಿಯನ್ನು ನೀಡಿತು. ವಾಸ್ತವವಾಗಿ ಠಾಕೂರರು ಈ ಮನೋಧರ್ಮವನ್ನು ಇನ್ನೂ ದೂರ ಕೊಂಡೊಯ್ದು ರೇಖೆಗಳ ಮತ್ತು ಬಣ್ಣಗಳ ಬಳಕೆಯನ್ನು ಇನ್ನು ಕಡಿಮೆ ಮಾಡಿದರು. ಉದಾಹರಣೆಗೆ ಮನುಷ್ಯರನ್ನು ತೋರಿಸಲು ಅವರು ಮುಖದಲ್ಲಿ ಕಣ್ಣುಗಳನ್ನೂ ಮುಗನ್ನೂ ತುಟಿಗಳನ್ನೂ ಬರೆಯುತ್ತಲೇ ಇರಲಿಲ್ಲ. ಬಾದಾಮಿ ಯಾಕಾರದ ಮೊಗವನ್ನಷ್ಟೆ ಸೂಚಿಸಿ ಉಳಿದುದನ್ನು ರಸಿಕನ ಕಲ್ಪನೆಗೇ ಬಿಡುತ್ತಿದ್ದರು. ಇಂತಹ ರಚನೆಗಳಲ್ಲಿ ಠಾಕೂರರ ಚಿತ್ರಗಳು "ವಾಸ್ತವಿಕತೆ ಇಲ್ಲದೆ ವಾಸ್ತವವಾಗಿರುತ್ತವೆ"** ಎಂದು ನಂದಲಾಲ್ ಬೋಸರು ಹೇಳಿದುದಕ್ಕೆ ಇದೇ ಕಾರಣ.

ಇದು ಅವರ ಚಿತ್ರಗಳ ಒಂದು ಕುತೂಹಲಕರ ಅಂಶವನ್ನೂ ನಮ್ಮ ಮುಂದಿಡುತ್ತದೆ. ಅವರ ರೇಖಾ ಚಿತ್ರಗಳೂ ಇತರ ಚಿತ್ರಗಳೂ ಮೊದಲು ಕಂಡಾಗ ಅವುಗಳಿಗೆ ಅಮೂರ್ತತೆಯ ಲಕ್ಷಣವಿತ್ತು, ಕ್ರಮೇಣ ಅವು ವಿಚಾರಗಳನ್ನು ಅಭಿವ್ಯಕ್ತಿಸುವುದು ಪ್ರಾರಂಭವಾಯಿತು, ಬೇರೆ ಮಾತುಗಳಲ್ಲಿ ಹೇಳುವುದಾದರೆ, ಮುಂದಿನ ಒಂದು ಘಟ್ಟದಲ್ಲಿ ಅವು ತಮ್ಮ ಅಮೂರ್ತತೆಯ ಲಕ್ಷ ವನ್ನು ಕಳಚಿ ಹಾಕಿದವು. ತಾವು ಚಿತ್ರಕಲೆಯತ್ತ ತಿರುಗಿದಾಗ, ಅದನ್ನು ತಮ್ಮ ವಿಚಾರ ರೀತಿಯನ್ನು ವ್ಯಕ್ತಪಡಿಸಲು ಬಳಸುವ ಉದ್ದೇಶ ತಮಗಿರಲಿಲ್ಲ ಎಂಬುದು ಠಾಕೂರರ ಭಾವನೆ. ಇದು ಅರ್ಥವಾಗುವ ವಿಷಯ. ಏಕೆಂದರೆ ಅವರ ಚಿತ್ರಗಳು ಜನ್ಮತಾಳಿದ ಸನ್ನಿವೇಶದಲ್ಲಿ ಅವರ ಕಲೆಯು ಬೇರೆ ರೀತಿಗಳಲ್ಲಿ ಬೆಳೆಯುವುದಕ್ಕೆ ಅವಕಾಶವೇ ಇರಲಿಲ್ಲ, ತಮ್ಮ ತಿದ್ದುಪಾಟುಗಳಿಗೆ ಲಯಬದ್ಧ ಸ್ವರೂಪ ಕೊಡದಿದ್ದರೆ ತಮ್ಮ ಸೌಂದರ್ಯಪ್ರಜ್ಞೆ ಅವನ್ನು ಸಹಿಸಲಾರದು ಎಂಬ ಒಂದೇ ಭಾವನೆ ಪ್ರಾರಂಭದಲ್ಲಿ ಅವರನ್ನು ಪ್ರಚೋದಿಸಿದ್ದು. 'ನನ್ನ ತಿದ್ದುಪಾಟುಗಳು ಕುಣಿಯುವಂತೆ, ಅವನ್ನು

* ನಂದಲಾಲ್ ಬೋಸ್ : 'ಗುರುದೇವರ್ ಅಂಕ ಛಬಿ'

** ಅದೇ

ಲಯಬದ್ಧ ಬಾಂಧವ್ಯದಿಂದ ಸೇರಿಸಿ ರಾಶಿಯನ್ನು ಅಲಂಕಾರವಾಗಿ ಮಾರ್ಪಡಿಸಲು ನಾನು ಪ್ರಯತ್ನಿಸುತ್ತೇನೆ" ಎಂದು ಅವರು ಹೇಳಿದರು.*

ಪ್ರಾಯಶ: ಈ ಪ್ರಾರಂಭದ ಅನುಭವವು, ಅವರು ಅಮೂರ್ತ ಕಲೆಯಲ್ಲಿ ಒಲವು ತೋರುವ ತಮ್ಮ ಸೌಂದರ್ಯ ಸಿದ್ಧಾಂತವನ್ನು ರೂಪಿಸಿಕೊಳ್ಳಲು ಕಾರಣವಾಯಿತು. ಅವರ ಈ ಕೆಳಗಿನ ಮಾತುಗಳು ಈ ಅಭಿಪ್ರಾಯವನ್ನು ಸಮರ್ಥಿಸುತ್ತವೆ:

“ನನ್ನ ಚಿತ್ರಗಳ ಅರ್ಥವನ್ನು ಕುರಿತು ಜನ ಅನೇಕ ಬಾರಿ ನನ್ನನ್ನು ಪ್ರಶ್ನಿಸುತ್ತಾರೆ. ನನ್ನ ಚಿತ್ರಗಳಂತೆ ನಾನೂ ಮೌನವಾಗಿರುತ್ತೇನೆ. ಅವು ವ್ಯಕ್ತಪಡಿಸಬೇಕಲ್ಲದೆ ವಿವರಿಸಬಾರದು. ಚಿಂತನೆಯು ಬಿಡಿಸಿ ನೋಡಲು, ಮಾತುಗಳು ಬಣ್ಣಿಸಲು ಅವುಗಳ ಹೊರ ರೂಪದ ಹಿಂದೆ ಏನೂ ಇಲ್ಲ; ಆ ರೂಪದಲ್ಲಿ ಅದರ ಅಂತಿಮ ಮೌಲ್ಯ ಕಂಡರೆ ಅವು ಉಳಿಯುತ್ತವೆ. ಇಲ್ಲವಾದರೆ ಅವುಗಳಲ್ಲಿ ಯಾವುದೇ ವೈಜ್ಞಾನಿಕ ಸತ್ಯವಿದ್ದರೂ ಇಲ್ಲವೇ ಅವಕ್ಕೆ ಯಾವುದೇ ನೈತಿಕ ಸಮರ್ಥನೆ ಇದ್ದರೂ ಅವನ್ನು ಜನ ತಿರಸ್ಕರಿಸುತಾರೆ. ಮರೆತುಬಿಡುತ್ತಾರೆ. ”**

ಅವರ ಪ್ರಾರಂಭದ ಅನುಭವ ಇಂತಹ ಸಿದ್ಧಾಂತವನ್ನು ಖಂಡಿತ ಸಮರ್ಥಿಸುತ್ತಿತ್ತು. ಈ ಅಭಿಪ್ರಾಯಕ್ಕೆ ಒಲಿದ ಅವರು ಕಾವ್ಯವನ್ನು ಚಿತ್ರಕಲೆಯಿಂದ ಸ್ಪಷ್ಟವಾಗಿ ಪ್ರತ್ಯೇಕಿಸಬಹುದೆಂದು ಭಾವಿಸಿದರು. ಬಳಸಿದ ಅಭಿವ್ಯಕ್ತಿಯಲ್ಲಿ ಅರ್ಥವಿರಬೇಕೆಂದು ಕಾವ್ಯ ಬೇಡುತ್ತದೆ. ಚಿತ್ರಕ್ಕೆ ಇಂತಹ ಹೊಣೆ ಇಲ್ಲ. ಅಭಿವ್ಯಕ್ತಿ ಮತ್ತು ಭಾವಗಳ ಮಾಧ್ಯಮವಾಗಿರುವ ಆಕೃತಿಗಳನ್ನು ಸೃಷ್ಟಿಸುವ ಸ್ವಾತಂತ್ರ್ಯವೂ ಅವಕ್ಕುಂಟು. ಈ ವಿಷಯದಲ್ಲಿ ಅವರ ಧೋರಣೆಯನ್ನು ಮತ್ತೆ ಹೇಳಿದ್ದಾರೆ.

---

* ‘ಚಿತ್ರ ಲಿಪಿ’, ಎರಡನೆ ಸಂಪುಟ - ಮೈ ಪಿಕ್ಚರ್ಸ್

** ಅದೇ

ಇದಕ್ಕೆ ಸಂಬಂಧಿಸಿದ ಭಾಗದ ಅನುವಾದ ಇದು:
ಚಿತ್ರಕಲೆಯ ಬೆಡಗಿನ ಬಲೆಯಲ್ಲಿ ನಾನು ಸಿಕ್ಕಿ ಬಿದ್ದೆ.
ಸಾಹಿತ್ಯ ಶ್ರೀಮಂತನ ಕುವರಿ
ತನ್ನೊಡನೆ ಸಮೃದ್ಧಿಯಾಗಿ ಅರ್ಥ ತರಬಲ್ಲಳು;
ಬಹು ವಾಚಾಳಿ ಅವಳು, ಅವಳನ್ನು ಪ್ರಸನ್ನವಾಗಿರಿಸಲು ಬಹುವಾಗಿ ಯೋಚಿಸಬೇಕು.
ಚಿತ್ರಕಲೆಯಾದರೋ ಮಿತಭಾಷಿ, ಅವಳಲ್ಲಿ ಅರ್ಥವಿಲ್ಲ.
ಅವಳೊಡನೆ ನನ್ನ ಬಾಂಧವ್ಯ ಉದ್ದೇಶರಹಿತವಾದದ್ದು. *

'ಮೂಲದಲ್ಲಿ, ಅರ್ಥ' ಎನ್ನುವ ಶಬ್ದದ ಬಳಕೆಯಲ್ಲಿ ಶ್ಲೇಷೆಯಿದೆ. ಈ ಪದವು ಹಣವನ್ನೂ ಸೂಚಿಸುತ್ತದೆ. ಒಟ್ಟು ಅರ್ಥ ಕಾವ್ಯ 'ವಾಚಾಳಿ ಮತ್ತು ಅರ್ಥಪೂರ್ಣ'. ಆದರೆ ಚಿತ್ರಕಲೆ 'ಮಿತಭಾಷಿ'.

ಎಂದರೆ ಚಿತ್ರಗಳು 'ಮಾತನಾಡಬಲ್ಲವು', ವಿಚಾರಗಳನ್ನು ಭಾವಗಳನ್ನು ವ್ಯಕ್ತಪಡಿಸಬಲ್ಲವು ಎನ್ನುವುದನ್ನು ಠಾಕೂರರು ಗಮನಿಸಲಿಲ್ಲ ಎಂದಲ್ಲ. ಇದನ್ನು ವಿಚಾರ ಮಾಡುತ್ತ ಹೋದಂತೆ, ಚಿತ್ರಕಲೆಯ ಪ್ರವೃತ್ತಿ ಅರ್ಥದ ಸಂದೇಹವನ್ನು ಬಿಟ್ಟುಕೊಡುತ್ತ ಅಮೂರ್ತತೆಯನ್ನು ಬೆಳೆಸಿಕೊಳ್ಳುವುದು ಎಂದು ಅವರಿಗೆ ತೋರಿತು. ಇತರ ಮಾತುಗಳಲ್ಲಿ ಹೇಳುವುದಾದರೆ, ಅದು ನಿರೂಪಣ ಲಕ್ಷಣವನ್ನು ಪಡೆದಿದ್ದರೂ ಅಮೂರ್ತವಾಗುವುದು. ಅದರ ಪ್ರವೃತ್ತಿ. ಅದು ಬೆಳೆಯಲು ಸಾಧ್ಯವಾಗುವುದು ಈ ರೀತಿಯಲ್ಲಿ. ಅಮೂರ್ತ ಕಲೆಯಲ್ಲಿ ದೊರಕುವ ಸ್ವಾತಂತ್ರ್ಯವನ್ನು ಬಳಸಿಕೊಂಡು ಆಕೃತಿಯನ್ನೇ ಮೌಲ್ಯದ ಮಾನವವನ್ನಾಗಿ ಮಾಡಿಕೊಂಡು ಚಿತ್ರಕಲೆಯ ಪರಿಪೂರ್ಣತೆಯನ್ನು ಸಾಧಿಸಬಹುದು ಎಂದು ಅವರು ಭಾವಿಸುತ್ತಾರೆ.

ಸಂಗೀತ ಮತ್ತು ಚಿತ್ರಕಲೆಗಳಲ್ಲಿ ಕೆಲವು ರೀತಿಯ ಸಾಮ್ಯಗಳನ್ನು ಕವಿ ಕಾಣುತ್ತಾರೆ. ಸಂಗೀತವನ್ನು ಭಾವಗಳ ಅಭಿವ್ಯಕ್ತಿಗೆ ಬಳಸಬಹುದು. ಆದರೂ ಆದು ವಾದ್ಯ ಸಂಗೀತ ಅಥವಾ ಭಾರತೀಯ ಶಾಸ್ತ್ರೀಯ ಸಂಗೀತದಲ್ಲಿ 'ಆಲಾಪ್'

* 'ಶೇಷ ಸಪ್ತಕ', ಪು. 16.

ಬಗೆಯ ಹಾಡುಗಳಲ್ಲಿ ಕಾಣುವಂತೆ ಪ್ರತ್ಯೇಕವಾಗಿ ಅಮೂರ್ತ ಸಂಗೀತವಾಗಿ ಬೆಳೆಯಬಲ್ಲದು. ಚಿತ್ರಕಲೆಗೂ ಇದೇ ರೀತಿ ಅಮೂರ್ತತೆಯಲ್ಲಿ ಬೆಳೆಯುವ ಸಾಮರ್ಥ್ಯವಿದೆ ಎಂದು ಅವರು ಭಾವಿಸುತ್ತಾರೆ.

ಈ ವಿಚಾರವನ್ನು ಅವರು ಹೀಗೆ ಬೆಳೆಸುತ್ತಾರೆ:

"ಪ್ರಾರಂಭದಲ್ಲಿ ರಾಗವು ಶಬ್ದಗಳ ಜೊತೆಗೆ ಹೊಂದಿಕೊಂಡು ಅವುಗಳಲ್ಲಿ ಅಡಗಿದ ಭಾವಗಳನ್ನು ನಿರೂಪಿಸುತ್ತಿತ್ತು ಎಂಬುದು ಪ್ರಶ್ನಾತೀತ. ಆದರೆ ಸಂಗೀತವು ದಾಸ್ಯದ ಈ ಬಂಧನವನ್ನು ಕಿತ್ತೊಗೆಯಿತು ಮತ್ತು ಖಚಿತವಲ್ಲದ ಶಬ್ದಗಳು ಮತ್ತು ಲಕ್ಷಣಗಳಿಂದ ಗ್ರಹಿಸಿದ ಮನಃಸ್ಥಿತಿಗಳನ್ನು ನಿರೂಪಿಸತೊಡಗಿತು. ವಾಸ್ತವವಾಗಿ ಮುಕ್ತವಾದ ಈ ಸಂಗೀತವು ಶಬ್ದಗಳಲ್ಲಿ ವ್ಯಕ್ತಪಡಿಸಬಹುದಾದ ಭಾವಗಳು ತನ್ನ ಉದ್ದೇಶಕ್ಕೆ ಅಗತ್ಯ ಎಂದು ಒಪ್ಪುವುದೇ ಇಲ್ಲ. ಅವೇನಿದ್ದರೂ ಸಂಗೀತ ವಿನ್ಯಾಸಗಳಲ್ಲಿ ಅಮುಖ್ಯ ಸ್ಥಾನ ಪಡೆದಿರಬಹುದು. ಸಂಗೀತಕ್ಕೆ ಹಿರಿಮೆ ಬಂದದ್ದು ಸ್ವಾತಂತ್ರ್ಯದ ಈ ಹಕ್ಕಿನಿಂದ. ಚಿತ್ರದ ಮತ್ತು ಸುನಮ್ಯ (ಪ್ಲ್ಯಾಸ್ಟಿಕ್) ಕಲೆಯ ವಿಕಸನವೂ. ವಾಸ್ತವಾಂಶಗಳು ಮತ್ತು ಘಟನೆಗಳಿಗೆ ಸಂಬಂಧಿಸಿಯೇ ಇರಬೇಕೆಂದು ಶರತ್ತಿನಿಂದ ಬಿಡುಗಡೆ ಹೊಂದಲು ಬಯಸಿಯೇ ಮುಂದುವರೆಯುತ್ತದೆ ಎಂದು ನನ್ನ ಅನುಮಾನ."*

ಆದರೆ ಈ ದೃಷ್ಟಿಯು ಅವರು ಸಂಗೀತವೂ ಸೇರಿದಂತೆ ಇತರ ಕಲೆಗಳ ವಿಷಯದಲ್ಲಿ ಸ್ವೀಕರಿಸಿದ್ದ ಅಭಿಪ್ರಾಯಗಳಿಗೆ ವಿರುದ್ಧವಾಗಿತ್ತು. ತಮ್ಮ ಜೀವನದ ಬಹು ಕಾಲ ಸೃಜನ ಸಾಹಿತ್ಯದ ಭಕ್ತರಾಗಿದ್ದ ಅವರಿಗೆ ಯಾವುದೇ ಕಲೆಯ ಅಮೂರ್ತ ಬೆಳವಣಿಗೆಯನ್ನು ಒಪ್ಪದಿದ್ದ ಅಭಿಪ್ರಾಯ ಹಿಡಿಸುತ್ತಿತ್ತು. ಅವರ ದೃಷ್ಟಿಯಲ್ಲಿ ಒಂದು ಕಲಾಸೃಷ್ಟಿಗೆ ದೇಹ ಮಾತ್ರವಲ್ಲದೆ ಆತ್ಮವೂ ಇರಬೇಕು. ಅದು ಒಂದು ವಿಚಾರವನ್ನು ನಿರೂಪಿಸಬೇಕು ಅಥವಾ ಅರ್ಥವತ್ತಾಗಿರಬೇಕು. ಇಲ್ಲವಾದರೆ ಅದು ಸೌಂದರ್ಯಭಾವವನ್ನು ಉದ್ದೀಪಿಸುವ ಐಕ್ಯತೆಯನ್ನು ಪಡೆದಿರಲಾರದು.

ಸಂಗೀತವು ಗಣಿತದಂತೆ ಅಮೂರ್ತತೆಯ ವಿಧಾನದಲ್ಲಿ ಬೆಳೆಯಬಲ್ಲದು

---

* 'ಚಿತ್ರಲಿಪಿ' ಎರಡನೆಯ ಸಂಪುಟ—ಮೈ ಪಿಕ್ಚರ್ಸ್

ಎನ್ನುವುದು ಒಪ್ಪಿದ ಮಾತೇ. ಆದರೆ ವೈಯಕ್ತಿಕವಾಗಿ ಠಾಕೂರರಿಗೆ ಸಂಗೀತವು ಈ ದಿಸೆಯಲ್ಲಿ ಬೆಳೆಯುವುದು ಒಪ್ಪಿಗೆಯಿರಲಿಲ್ಲ. ಶಾಸ್ತ್ರೀಯ ಸಂಗೀತ ಅಮೂರ್ತತೆಯದಿಸೆಯಲ್ಲಿ ಬೆಳೆಯುವ ಪ್ರವೃತ್ತಿಯುಂಟು. ಜಾನಪದ ಹಾಡುಗಳು ಭಾವನೆಗಳನ್ನು ವ್ಯಕ್ತಪಡಿಸಲು ಉಪಯೋಗವಾಗುತ್ತವೆ. ಠಾಕೂರರು ಶಾಸ್ತ್ರೀಯ ಸಂಗೀತಕ್ಕಿಂತ ಜಾನಪದ ಹಾಡುಗಳೇ ತಮಗೆ ಪ್ರಿಯವೆಂದು ಒತ್ತಿ ಹೇಳಿದರು. ಅವರ ಅಭಿಪ್ರಾಯದಲ್ಲಿ ಶಾಸ್ತ್ರೀಯ ಸಂಗೀತದಲ್ಲಿ ಒತ್ತು ಬೀಳಬೇಕಾದ ಅಂಶದ ಮೇಲೆ ಒತ್ತು ಬೀಳುವುದಿಲ್ಲ. ಠಾಕೂರರ ದೃಷ್ಟಿಯಲ್ಲಿ ಸಂಗೀತದಲ್ಲಿ ಅತ್ಯಾಲಂಕಾರವು ಭಾವನೆಯನ್ನು ಅದುಮಿ ಬಿಡುತ್ತದೆ. ಇದನ್ನು ಅವರು ಒಬ್ಬ ಹೆಂಗಸಿನ ಸಹಜ ಸೌಂದರ್ಯವನ್ನು ಹೆಚ್ಚಿಸುವ ಬದಲಾಗಿ ಸೌಂದರ್ಯವೇ ಕಾಣಿಸದಂತೆ ಮಾಡುವ ಅನವಶ್ಯಕ ಉಡುಪಿನೊಂದಿಗೆ ಹೋಲಿಸುತ್ತಾರೆ. ಅವರೆನ್ನುತ್ತಾರೆ:

"ಇದು ಲತಾಂಗಿಯಾದ ಲಾವಣ್ಯವತಿಯನ್ನು ಬಟ್ಟೆಗಳ ಸಾವಿರ ಮಡಿಕೆಗಳಲ್ಲಿ ಸುತ್ತಿದಂತೆ. ಬಟ್ಟೆಯೇನೂ ತುಂಬಾ ಬೆಲೆಬಾಳುವುದೇ ಇರಬಹುದು. ಆದರೆ ಆಕೆಯ ಲಾವಣ್ಯವನ್ನು ಮರೆಮಾಡುವ ಉದ್ಧಟತನ ಸಲ್ಲದು. ಈ ವಿಚಿತ್ರ ವಕ್ರತನಕ್ಕೆ ಕಾರಣವೆಂದರೆ ಮಹಾಗಾಯಕರು. "ಸಂಗೀತದ ಮುಖ್ಯ ಉದ್ದೇಶವು ಹಾಡು ತನ್ನದೇ ಸೊಗಸನ್ನು ವ್ಯಕ್ತಪಡಿಸಲು ಅವಕಾಶ ಕೊಡುವದಲ್ಲ, ಅದರ ಉದ್ದೇಶ ಚುರುಕಾಗಿ ರಾಗಗಳನ್ನು ಪ್ರದರ್ಶಿಸಿ ಬೆರುಗೆಬ್ಬಿಸುವುದು ಎಂದು ದೃಢವಾಗಿ ನಂಬಿರುವುದೇ."*

ರಾಗಗಳ ವಿಶೇಷ ಅಲಂಕಾರಕ್ಕಿಂತ ವಸ್ತುವಿನ ಅಭಿವ್ಯಕ್ತಿಗೆ ಹೆಚ್ಚು ಮಹತ್ವಕೊಡುವ ಆದರ್ಶವು ಠಾಕೂರರ ಹಾಡುಗಳಿಗೆ ಸ್ಫೂರ್ತಿ ನೀಡಿದ. ತಾವು ರಚಿಸಿದ ಎರಡು ಸಾವಿರಕ್ಕೂ ಹೆಚ್ಚು ಹಾಡುಗಳಿಗೆ ತಾವೇ ಸಂಗೀತ ರಚನೆ ಮಾಡುವ ಶ್ರಮವನ್ನು ಅವರು ತೆಗೆದುಕೊಂಡದ್ದು ಈ ಕಾರಣದಿಂದಲೇ. ಒಂದು ಹಾಡಿಗೆ ನಿಯೋಜಿಸುವ ರಾಗವು ಭಾವದ ಸೊಗಸನ್ನು ಕಾಣಿಸುವುದರಲ್ಲಿ ಸಹಕರಿಸಬೇಕಲ್ಲದೆ ಅದಕ್ಕಿಂತ ಮುಖ್ಯವಾಗಿ ಬಿಡಬಾರದು ಎಂದು ಅವರ ತೀವ್ರ ಭಾವನೆಯಿದ್ದುದರಿಂದಲೇ ವಿಶೇಷ ಅಲಂಕಾರಮಯವಾದ ರಾಗಗಳನ್ನು

* 'ಪರಾಯ'.

ಅವರು ಕೈಬಿಟ್ಟರು ಅವರ ಸಂಗೀತಕ್ಕೆ ವಿಶಿಷ್ಟ ಗುಣವನ್ನು ಕೊಡುವುದು ಈ ಸಂಗತಿಯೇ. ಹೀಗೆ ಸಂಗೀತವನ್ನು ಕುರಿತ ಅವರ ಸಿದ್ಧಾಂತ ಚಿತ್ರಕಲೆಯ ಸಿದ್ಧಾಂತದಿಂದ ಸಂಪೂರ್ಣವಾಗಿ ಭಿನ್ನವಾದದ್ದು. '*

ನೃತ್ಯ ಕಲೆಯಲ್ಲಿಯೂ ಅವರು ಅಮೂರ್ತ ದಿಸೆಯ ಬೆಳವಣಿಗೆಯನ್ನು ಒಪ್ಪುತ್ತಿರಲಿಲ್ಲ. ಭರತನ 'ನಾಟ್ಯಶಾಸ್ತ್ರ'ದಲ್ಲಿ ವಿವರಿಸಿದ ಅಮೂರ್ತ ನೃತ್ಯದ 'ನೃತ್ಯ' ರೀತಿಯನ್ನು ಬಿಟ್ಟು ಅವರು 'ನೃತ್ಯ' ಎಂದು ಸಾಮಾನ್ಯವಾಗಿ ಕರೆಯುವ 'ಅಭಿನಯ' ರೀತಿಯನ್ನು ಮೆಚ್ಚಿಕೊಂಡರು. ಈ ರೀತಿಯಲ್ಲಿ ನೃತ್ಯವನ್ನು ಶರೀರದ ಚಲನೆಗಳ ಅಮೂರ್ತ ಆಕಾರಕ್ಕಾಗಿ ಬಳಸುವುದಿಲ್ಲ. ಭಾವ ಮತ್ತು ವಿಚಾರಗಳ ಅಭಿವ್ಯಕ್ತಿಯ ಮಾಧ್ಯಮವಾಗಿ ಬಳಸಲಾಗುತ್ತದೆ.

ಅವರಿಗೆ ಎಪ್ಪತ್ತು ವರ್ಷ ದಾಟಿದ ನಂತರ ಠಾಕೂರರು ತಮ್ಮ ಖ್ಯಾತ ನೃತ್ಯರೂಪಗಳನ್ನು ಪ್ರದರ್ಶಿಸಲು ವಿಧಿಸಿದ ಸೂತ್ರಗಳು ಇದನ್ನು ಸಮರ್ಥಿಸುತ್ತವೆ. ಈ ಪ್ರದರ್ಶನಗಳಲ್ಲಿ ಅವರು ನೃತ್ಯವನ್ನು ವಿಚಾರಗಳ ಮತ್ತು ಭಾವಗಳ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಬಳಸಿಕೊಂಡರು. ಈ ನಾಟಕಗಳಲ್ಲಿ ಪಾತ್ರವು ದೇಹದ ಚಲನವಲನಗಳ ಮೂಲಕ ಅರ್ಥವನ್ನು ಸ್ಪಷ್ಟಗೊಳಿಸುವುದು. ಕವಿ ಅವಕ್ಕೆ ಹಾಡುಗಳನ್ನು ಸೇರಿಸಿದರು. ಈ ಹಾಡುಗಳನ್ನು ರಂಗಮಂಚದ ಹಿಂದಿನಿಂದ ಸಂದರ್ಭಕ್ಕೆ ತಕ್ಕಂತೆ ಒಬ್ಬರೋ ಅಥವಾ ಮೇಳದವರೋ ಹಾಡುತ್ತಿದ್ದರು. ಹೀಗೆ ಸಂಗೀತಕ್ಕೆ ಅಳವಡಿಸಿದ ಶಬ್ದಗಳ ಭಾಷೆ ದೇಹದ ಚಲನಗಳ ಭಾಷೆಗೆ ಜತೆಗೂಡುತ್ತಿತ್ತು. ಅಂಗಗಳ ಚಲನೆಯ ಭಾಷೆ ವಿಫಲಗೊಂಡಾಗ ಶಬ್ದಗಳ ಭಾಷೆ ನಿರ್ವಹಣೆಯನ್ನು ಪ್ರಾರಂಭಿಸುತ್ತಿತ್ತು. ಇವೆರಡೂ ಸೇರಿ ಹೆಚ್ಚಿನ ಪರಿಣಾಮವನ್ನು ಉಂಟು ಮಾಡುತ್ತಿದ್ದವು. ಸ್ಪಷ್ಟವಾಗಿ ಪ್ರಾಧಾನ್ಯ ದೊರೆಯುತ್ತಿದ್ದುದು ಅರ್ಥಕ್ಕೆ. ಅಭಿವ್ಯಕ್ತಿ ಕೊಡುತ್ತಿದ್ದವು. ಇವೆರಡೂ ಅರ್ಥಕ್ಕೆ ಪೂರಕವಾಗುತ್ತಿದ್ದವು.

ರೇಖಾಕಲೆ ಮತ್ತು ಚಿತ್ರಕಲೆಗಳ ವಿಷಯದಲ್ಲಿ ಠಾಕರರ ಅಭಿಪ್ರಾಯ ಇದಕ್ಕಿಂತ ಭಿನ್ನವಾಗಿತ್ತು ಮತ್ತು ಅವು ಸಹಜವಾಗಿ ಅಮೂರ್ತ ರೀತಿಗಳಿಂದ ವಿಕಾಸ

---

* ಶಾಂತಿದೇವ್ ಘೋಷ್: "ರಬೀಂದ್ರ ಸಂಗೀತ್, ಭಾರತೀಯ ಸಂಗೀತೇ ಗುರುದೇವರ್ ಸ್ಥಾನ್"

ಹೊಂದಬೇಕು ಎಂದು ಭಾವಿಸಿದ್ದರು ಎನ್ನುವುದು ಗಮನಿಸಬೇಕಾದ ಅಂಶ. ವಿರೋಧಾಭಾಸವೆಂದರೆ, ಅವರು ಬೋಧಿಸಿದಂತೆ ನಡೆಯಲಿಲ್ಲ. ಪ್ರಾರಂಭದ ಘಟ್ಟದಲ್ಲಿ ತಮ್ಮ ತಿದ್ದುಪಾಟು ಲಯಬದ್ಧ ರೂಪ ಕೊಡುವ ಪ್ರಯತ್ನದಿಂದ ಅಮೂರ್ತ ಮಾದರಿಯ ಚಿತ್ರಕಲೆ ಹುಟ್ಟಿತೆಂಬುದು ನಿಜ. ಆದರೆ ಅವು ಕ್ರಮೇಣ ಅಮೂರ್ತ ಸ್ವರೂಪವನ್ನು ಬಿಟ್ಟು ನಿರೂಪಣಾ ಸ್ವರೂಪವನ್ನು ಪಡೆದವು. ಕೆಲವು ವಿಚಾರಗಳು ಅಥವಾ ಮನಸ್ಸಿನ ಸ್ಥಿತಿಗಳನ್ನು ಸೂಚಿಸುವ ಮುಖಗಳ ಮತ್ತು ಆಕೃತಿಗಳ ಚಿತ್ರಗಳು ಮತ್ತು ನಿಸರ್ಗದ ದೃಶ್ಯಗಳ ಚಿತ್ರಗಳು ಸ್ಪಷ್ಟವಾಗಿ ಈ ವರ್ಗಕ್ಕೆ ಸೇರಿದವು. ಕೆಲವೊಮ್ಮೆ ಪೌರಾಣಿಕ ಡ್ರೇಗನ್‌ಗಳನ್ನೋ ಇತಿಹಾಸಪೂರ್ವ ಸರೀಸೃಪಗಳನ್ನೋ ಹೋಲುವ ವಿಲಕ್ಷಣ ಆಕಾರಗಳು ಪರಿವರ್ತನೆಯ ಘಟ್ಟವನ್ನು ಸೂಚಿಸುತ್ತವೆ.

ಈ ವಿರೋಧಾಭಾಸವು ಯಾವಾಗಲಾದರೂ ಕಾಣಿಸಿಕೊಳ್ಳಲೇ ಬೇಕಾಗಿತ್ತು. ಏಕೆಂದರೆ ಠಾಕೂರರ ಮನಸ್ಸಿನ ಮೂಲಕಸ್ವರೂಪ ಕಲೆಯ ಅಮೂರ್ತ ಸಿದ್ಧಾಂತಕ್ಕೆ ಹೊಂದಿಕೊಳ್ಳುವಂತಹುದಲ್ಲ. ಅಭ್ಯಾಸ ಬಲ ಮತ್ತು ಸಹಜ ಪ್ರವೃತ್ತಿಗಳಿಂದಲೇ ಅವರು ಪ್ರಜ್ಞಾಪೂರ್ವಕವಾಗಿ ರೂಪಿಸಿದ ವಾದದಿಂದ ದೂರವಾದರು. ಇದರಿಂದ ಸ್ವಲ್ಪ ಕಾಲಾನಂತರ ಅವರು ರಚಿಸಿದ ಚಿತ್ರಗಳಲ್ಲಿ ಅವರು ಬೋಧಿಸಿದುದಕ್ಕೂ ಅನುಸರಿಸಿದುದಕ್ಕೂ ತುಂಬ ವ್ಯತ್ಯಾಸ ಕಂಡು ಬಂದದ್ದು ಆಶ್ಚರ್ಯವಲ್ಲ.

1930ರ ಹೊತ್ತಿಗೆ ಠಾಕೂರರು ಒಂದು ಪ್ರದರ್ಶನಕ್ಕಾಗುವಷ್ಟು ಪ್ರಾತಿನಿಧಿಕ ಚಿತ್ರಗಳ ಸಂಗ್ರಹವನ್ನು ಸಿದ್ಧಮಾಡಿದ್ದರು. ಆದ್ದರಿಂದ ಆ ವರ್ಷ ಅವರು ಯೂರೋಪ್ ಮತ್ತು ಅಮೆರಿಕಗಳಿಗೆ ಭೇಟಿಕೊಟ್ಟಾಗ ವಿವಿಧ ಸಾಂಸ್ಕೃತಿಕ ಕೇಂದ್ರಗಳಲ್ಲಿ ತಮ್ಮ ಚಿತ್ರಗಳ ಪ್ರದರ್ಶನಗಳನ್ನು ಏರ್ಪಡಿಸುವ ಯೋಜನೆಯನ್ನು ಮಾಡಿದರು. 1912 ರಲ್ಲಿ ಅವರ ಕವನಗಳ ಇಂಗ್ಲೀಷ್ ಅನುವಾದ ಎಬ್ಬಿಸಿದ ಕೋಲಾಹಲ ಈಗಲೂ ಉಂಟಾದೀತೆ ? ಯಾರೂ ಖಚಿತವಾಗಿ ಹೇಳುವಂತಿರಲಿಲ್ಲ. ಈ ವಿಷಯದಲ್ಲಿ ಠಾಕೂರರಿಗೆ ಅನುಭವವಿಲ್ಲದಿದ್ದುದರಿಂದ ಅವರಿಗೆ ಆತಂಕವಿದ್ದೇ ಇತ್ತು. ಅವರು ಅನುಮಾನಿಸಿದ್ದು, ಅಳುಕಿನಿಂದ ಸಮರ್ಥಿಸಿಕೊಂಡದ್ದು ಎಲ್ಲ ಸಹಜವೇ. ಭಾರತದಾಚೆ ಮೊದಲನೆಯ ಪ್ರದರ್ಶನಕ್ಕೆ ಪ್ಯಾರಿಸ್ಸನ್ನು ಅವರು ಆರಿಸಿಕೊಂಡರು. ಈ ಗೌರವ ಪ್ಯಾರಿಸಿಗೆ ಸಲ್ಲಬೇಕಾದದ್ದೇ. ಮದಾಂ ಒಕಾಂಪೊ ಮತ್ತು ಕಾಂಟೆಸ್ ದ ನುಅಯ್ ಎಂಬಿಬ್ಬರು ಸ್ನೇಹಿತರು ಪ್ರದರ್ಶನವನ್ನು ಗ್ಯಾಲರಿ ಪಿಗಾವಲ್‌ನಲ್ಲಿ ಏರ್ಪಡಿಸಲು ನೆರವಾದ ಕಥೆಯನ್ನು ಆಗಲೇ ಹೇಳಿದೆ.

ಅವರು ಪ್ರದರ್ಶನವಲ್ಲಿ ತಮ್ಮ ಚಿತ್ರಗಳನ್ನು ಪರಿಚಯ ಮಾಡಿಕೊಡಲು ಬರೆದ ಟಿಪ್ಪಣಿ ಈ ಅಳುಕಿನ ಸಮರ್ಥನೆಯಿಂದ ಪ್ರಾರಂಭವಾಗುತ್ತದೆ:

"ಚಿತ್ರಗಳ ಜಗತ್ತಿಗೆ ಅನಗತ್ಯವಾಗಿ ನಾನು ಪ್ರವೇಶ ಮಾಡುತ್ತಿದ್ದೇನೆ. ಹೀಗೆ ಮಾಡಿ ದೇವತೆಗಳೇ ಅಂಜಿ ಎಚ್ಚರದಿಂದಿರುವೆಡೆಯಲ್ಲಿ ಅಜ್ಞಾನಿಗಳು ಅಜಾಗರೂಕರಾಗುತ್ತಾರೆ ಎಂಬ ಮಾತಿಗೆ ಒಳ್ಳೆಯ ನಿದರ್ಶನ ಒದಗಿಸುತ್ತಿದ್ದೇನೆ. ಇದಕ್ಕಾಗಿ ನಾನು ಕ್ಷಮೆ ಬೇಡಬೇಕು. ಕಲಾವಿದನಾಗಿ ನನ್ನ ಎದೆಗಾರಿಕೆ ಒಳ್ಳೆಯದೆಂದೇನೂ ನಾನು ಹೇಳಲಾರೆ. ಇದು ಸರಳ ಮನಸ್ಸಿನವರ ಎದೆಗಾರಿಕೆ. ಅಪಾಯಕಾರಿ ದಾರಿಗಳಲ್ಲಿ ಕನಸಿನಲ್ಲಿ ನಡೆಯುತ್ತ ನನ್ನ ಅಪಾಯ ತಿಳಿಯದ್ದರಿಂದಲೇ ಪಾರಾಗುವವನ ಎದೆಗಾರಿಕೆಯಂತೆ."

ಈ ಅಂಜಿಕೆಯ ಅಗತ್ಯವೇ ಇರಲಿಲ್ಲ. ರೂಢಿಯ ತರಬೇತಿ ಅವರಿಗೆ ದೊರೆಯದಿದ್ದರೂ ಅವರ ಜನ್ಮಜಾತ ಲಯಪ್ರಜ್ಞೆ ಮತ್ತು ಅಂದವಾದ ರೇಖಾ ಪ್ರಭುತ್ವ, ಇದರ ಸಾಕ್ಷ್ಯ ಅವರ ಸುಂದರ ಕೈ ಬರಹವಲ್ಲಿದೆ. ಇವುಗಳಿಂದ ದೌರ್ಬಲ್ಯದ ಗುರುತೇನೂ ಇಲ್ಲದ ತಂತ್ರವನ್ನು ಬೆಳೆಸಿಕೊಳ್ಳಲು ಅವರಿಗೆ ಸಾಧ್ಯವಾಯಿತು. ಪ್ಯಾರಿಸಿನಲ್ಲಿ ಮೊದಲನೆಯ ಪ್ರದರ್ಶನವನ್ನು ಜನ ಉತ್ಸಾಹದಿಂದ ಮೆಚ್ಚಿದುದು ಮತ್ತು ಸ್ವಲ್ಪ ಮಟ್ಟಿಗೆ 1912 ರಲ್ಲಿ ನಡೆದುದಕ್ಕೆ ಹೋಲಿಸಬಹುದಾದಂತಹ ಕೋಲಾಹಲ ಪಾಶ್ಚಾತ್ಯ ಕಲಾ ಜಗತ್ತಿನಲ್ಲಿ ಉಂಟಾದದ್ದು ಆಶ್ಚರ್ಯವಲ್ಲ.

ಪ್ರದರ್ಶಿತವಾದ ಚಿತ್ರಗಳ ಕ್ಯಾಟಲಾಗಿಗೆ ಮುನ್ನುಡಿ ಬರೆಯುತ್ತ ಕಾಂಟೆಸ್ ದನು ಆಯ್ ಅವರು ಈ ಕೆಳಗಿನ ಮಾತುಗಳಲ್ಲಿ ಸಾರ್ವಜನಿಕರ ಪ್ರತಿಕ್ರಿಯೆಯನ್ನು ಸರಿಯಾಗಿಯೇ ಊಹಿಸಿದರು:

"ತಮ್ಮ ಸೃಷ್ಟಿಯ ಮುಂದೆ ಠಾಕೂರರು ಅಳುಕುಪಡುತ್ತಿದ್ದಾರೆ. ಆದರೆ ಇದರ ಸೊಗಸು ಮತ್ತು ಪ್ರತಿಭೆಗೆ ನಮ್ಮಲ್ಲಿ ಪ್ರತಿಯೊಬ್ಬರೂ ಸಾಕ್ಷಿಯಾಗಿದ್ದೇವೆ. ನಾವು ಅವರನ್ನು ಸಹಜವಾಗಿ ಹೊಗಳುತ್ತೇವೆ. ಅವರಾದರೋ ಅನುಮಾನಿಸುತ್ತಾರೆ. ಪ್ರಶ್ನಿಸುತ್ತಾರೆ, ಹಿಂದೆಗೆಯುತ್ತಾರೆ ಮತ್ತು ಮುಗುಳ್ನಗೆ ನಗುತ್ತಾರೆ."

ಮುಂದೆ ಅವರ ಚಿತ್ರಗಳನ್ನು ಬರ್ಲಿನ್‌ನಲ್ಲಿ ಪ್ರದರ್ಶಿಸಿದಾಗಲೂ ಇಷ್ಟೇ

ಉತ್ಸಾಹದ ಸ್ವಾಗತ ದೊರಕಿತು. 'ಮ್ಯಾನ್‌ಹಿಮರ್ ತಾಗೆಬ್ಲಾಟ್' ಎಂಬ ಪತ್ರಿಕೆಯು 'ಠಾಕೂರರು ವರ್ಣಗಳಲ್ಲಿ ಬೆರಗುಪಡಿಸುವಂತಹ ಅಭಿರುಚಿಯನ್ನು ತೋರಿಸುತ್ತಾರೆ' ಎಂದು ಅವರ ಚಿತ್ರಗಳಲ್ಲಿ 'ಲಯ ಮತ್ತು ಅಂತರ್‌ಮಾಧುರ್ಯ ತುಂಬಿವೆ' ಎಂದು ಬರೆಯಿತು.

ಆದರೆ ಅತ್ಯಂತ ವ್ಯಾಪಕವಾದ ಮತ್ತು ಪ್ರಾಯಶ: ಸರಿಯಾದ ಮೌಲ್ಯ ನಿರ್ಣಯ ಬಂದದ್ದು ಬರ್ಮಿಂಗ್‌ಹಾಂ ಸಿಟಿ ಆರ್ಟ್ ಗ್ಯಾಲರಿಯಲ್ಲಿ. ಠಾಕೂರರ ಚಿತ್ರಗಳ ಪ್ರದರ್ಶನವಾದನಂತರ ಕಲಾವಿಮರ್ಶಕ, ಜೋಸೆಫ್ ಸೌತ್‌ಹಾಲ್ ಬರೆದ ಲೇಖನದಲ್ಲಿ ಅವರು ಠಾಕೂರರ ತಂತ್ರದ ಪರಿಪಕ್ವತೆಯನ್ನು ಗುರುತಿಸುತ್ತಾರೆ. ಇದಕ್ಕಿಂತ ಮುಖ್ಯವಾಗಿ, ವಿಚಾರಗಳ ಮತ್ತು ಭಾವಗಳ ಮಾಧ್ಯಮವಾಗಿ ಅವರ ಚಿತ್ರಗಳ ಆಧ್ಯಾತ್ಮಿಕ ಲಕ್ಷಣಗಳನ್ನು ಗುರುತಿಸುತ್ತಾರೆ. ಠಾಕೂರರು ಪ್ರಾರಂಭದಲ್ಲಿ ತಮ್ಮ ಕಲೆ ಅಮೂರ್ತ ಶೈಲಿಯಲ್ಲಿ ಬೆಳೆಯಬೇಕೆಂದು ಆಶಿಸಿದ್ದರೂ, ಅನಂತರ ಕಲೆಯ ವಿಷಯದಲ್ಲಿ ಅವರ ಎಂದಿನ ದೃಷ್ಟಿ ಮನೆ ಮಾಡಿತು. ಸೌತ್‌ಹಾಲ್‌ರು ಠಾಕೂರರ ಮೊದಲಿನ ಆಯ್ಕೆಯನ್ನು ಕಾಣಲೇ ಇಲ್ಲ ಎಂಬುದು ಸ್ಪಷ್ಟ. ಆದ್ದರಿಂದ ಈ ಅಧ್ಯಾಯವು ಸೌತ್‌ಹಾಲ್‌ರ ಮಾತುಗಳೊಡನೆ ಮುಕ್ತಾಯವಾಗುವುದು ಯೋಗ್ಯ.

"ನನಗೆ ಕಾಣುವಂತೆ ಠಾಕೂರರ ಚಿತ್ರಗಳ ಒಂದು ಪ್ರಬಲ ಕಲ್ಪನಾ ಶಕ್ತಿಯ ಸೃಷ್ಟಿ. ಪರ್ಷಿಯದ ಅಥವ ಭಾರತದ ಬಟ್ಟೆಗಳ ಕುಶಲ ಕಲೆಯಲ್ಲಿ ಕಾಣುವ ಲಯಪ್ರಜ್ಞೆ ಮತ್ತು ವಿನ್ಯಾಸ ಪ್ರಜ್ಞೆ ಪೌರ್ವಾತ್ಯ ಕಲಾವಿದರ ವೈಶಿಷ್ಟ್ಯ. ಠಾಕೂರರು ಶ್ರೇಷ್ಠ ಪೌರ್ವಾತ್ಯ ಕಲಾವಿದರು. ವಸ್ತುಗಳನ್ನು ವರ್ಣಗಳಲ್ಲಿ ಕಾಣುತ್ತಾರೆ. ಅವರ ವರ್ಣಪ್ರಜ್ಞೆ ನಿಜವಾಗಿಯೂ ಅಮೋಘವಾದದ್ದು.

"ಆದರೆ ಇದಕ್ಕಿಂತ ಹೆಚ್ಚಿನದು ಈ ಚಿತ್ರಗಳಲ್ಲಿ ಉಂಟು. ಮಾನವರ ಮತ್ತು ಪ್ರಾಣಿಗಳ ಆಧ್ಯಾತ್ಮಿಕ ಜೀವನ ಮತ್ತು ಇರವು ಅವರ ಲಕ್ಷಣಗಳಲ್ಲಿ, ಚಲನವಲನಗಳಲ್ಲಿ, ಹೊರ ರೂಪಗಳಲ್ಲಿ ಮತ್ತು ವರ್ಣಗಳಲ್ಲಿ ಹೇಗೆ ಪ್ರಕಟವಾಗುತ್ತವೆ ಎಂಬುದರ ಗಾಢ ಅರಿವು ಮತ್ತು ಗ್ರಹಿಕೆ ಇಲ್ಲಿದೆ." *

---

* ಮನೋರಂಜನ್ ಗುಪ್ತ: "ರಬೀಂದ್ರ ಚಿತ್ರಕಲಾ"

ಅಧ್ಯಾಯ ೧೪

ಕಡೆಯ ದಿನಗಳು

ಹಲವಾರು ಘಟನೆಗಳು ತುಂಬಿದ ಠಾಕೂರರ ಜೀವನದ ಕಡೆಯ ಅಧ್ಯಾಯಕ್ಕೆ ನಾವೀಗ ಬಂದಿದ್ದೇವೆ. ಅವರು ಅಸಾಧಾರಣ ಆರೋಗ್ಯ ಭಾಗ್ಯಪಡೆದವರೇ ಆದರೂ ಎಪ್ಪತ್ತನ್ನು ಮುಟ್ಟಿದ ನಂತರ ಅವರ ದೇಹವು ಹೆಚ್ಚಿನ ಚಟುವಟಿಕೆಗಳನ್ನು ತಡೆಯಲಾರದಾಯಿತು. ಎಪ್ಪತ್ತು ದಾಟಿದ ನಂತರ ವಿದೇಶ ಯಾತ್ರೆಗಳ ಆಯಾಸವನ್ನು ತಡೆದುಕೊಳ್ಳುವುದು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಸಿಂಹಳಕ್ಕೆ (ಶ್ರೀಲಂಕಾ) ಹೋಗಿ ಬಂದದ್ದೇ ಕಡೆಯ ಪ್ರವಾಸವಾಯಿತು. 1934 ರಿಂದ ವಿದೇಶೀ ಪ್ರವಾಸವನ್ನು ಕೈಗೊಳ್ಳಲಿಲ್ಲ. ಶಾಂತಿನಿಕೇತನದಲ್ಲಿ ಅವರು ಗ್ರಾಮಾಂತರ ನಿವಾಸದಲ್ಲಿ ಇದ್ದುಕೊಂಡು ಆಗಾಗ ಕಲ್ಕತ್ತೆಯಲ್ಲಿನ ಅವರ ಪೂರ್ವಿಕರ ಮನೆಗೆ ಹೋಗಿ ಬರುತ್ತಿದ್ದರು. ಅನಿವಾರ್ಯವಾದಲ್ಲದೆ ಭಾರತದಲ್ಲಿ ಸಹ ದೂರದ ಪ್ರಯಾಣಗಳನ್ನು ಮಾಡುತ್ತಿರಲಿಲ್ಲ.

ಎಪ್ಪತ್ತನ್ನು ಸಮೀಪಿಸುತ್ತಿದ್ದಾಗ ಚಿತ್ರಕಲೆಯ ಹೊಸ ಆಕರ್ಷಣೆಗೆ ಅವರಿ ಗಾದರೂ ಅದು ಅವರ ಪ್ರಥಮ ಆಕರ್ಷಣೆಯಾದ ಸಾಹಿತ್ಯವನ್ನು ಮರೆಸಲಿಲ್ಲ. ಕಾವ್ಯಕ್ಕೆ ಇನ್ನೂ ಪ್ರಥಮ ಸ್ಥಾನ. ಅವರ ಜೀವನದ ಈ ಅವಧಿಯಲ್ಲಿ ರಚಿಸಿದ

24 ಕೃತಿಗಳಲ್ಲಿ ಮೂರು ಮಾತ್ರ ಕಾದಂಬರಿಗಳು. ಉಳಿದ ಇಪ್ಪತ್ತೊಂದರಲ್ಲಿ ಮೂರು ನೃತ್ಯ ರೂಪಕಗಳು. ಒಂದು ಸಾಂಕೇತಿಕ ನಾಟಕ, ಉಳಿದೆಲ್ಲಾ ಕವನ ಸಂಗ್ರಹಗಳು, ಇದು ಆತ್ಮಾಭಿವ್ಯಕ್ತಿಯ ಮಾಧ್ಯಮವಾಗಿ ಅವರಿಗೆ ಕಾವ್ಯದಲ್ಲಿದ್ದ ವಿಶೇಷ ಒಲವನ್ನು ತೋರಿಸುತ್ತದೆ.

ಅವರ ಕಾವ್ಯದ ಶೈಲಿ ಮತ್ತು ಸ್ವಲ್ಪ ಕಡೆಯ ಪ್ರಮಾಣದಲ್ಲಿ ಕಾವ್ಯದ ಒಳ ವಿಷಯ ಇವೆರಡರಲ್ಲೂ ಭಿನ್ನತೆ ಕಾಣಿಸುತ್ತಿತ್ತು. ಶೈಲಿಯ ವಿಷಯವನ್ನು ಹೇಳುವುದಾದರೆ ಛಂದಸ್ಸು ಮತ್ತು ಅಲಂಕಾರಗಳಂತೆ ಭೂಷಣದ ಸಾಧನೆಗಳನ್ನು ಅವರು ಬಿಟ್ಟರು. ವಿಸ್ತಾರವಾದ ಛಂದಸ್ಸುಗಳ ಹಿಂದಿನ ವಿನ್ಯಾಸಗಳು ನಿಧಾನವಾಗಿ ಮರೆಯಾದವು. ನಾವು ಮಾಧುರ್ಯಕ್ಕಾಗಿಯೋ ಆರಿಸಿದ ಶಬ್ದಗಳಿಂದ ಕರ್ಣಾನಂದ ನೀಡುವ ಅಭ್ಯಾಸ ಕಡಮೆಯಾಯಿತು. ಹೆಚ್ಚಿನ ಕಾಲ್ಪನಿಕ ಸೂಚನೆಗಳನ್ನು ಮೂಡಿಸಬಲ್ಲ ಅಲಂಕಾರಗಳಲ್ಲಿ ಅವರಿಗಿದ್ದ ಆಕರ್ಷಣೆ ಅಷ್ಟಾಗಿ ಕಂಡು ಬರುತ್ತಿರಲ್ಲಿಲ್ಲ. ಒಟ್ಟಿನಲ್ಲಿ ಸರಳ ಶೈಲಿಯಲ್ಲಿ ಒಲವು ಸ್ಪಷ್ಟವಾಗಿ ಕಾಣುತ್ತಿತ್ತು. ಕೈ ಬಿಟ್ಟಿದ್ದನ್ನು ತುಂಬಿಕೊಡುವಂತೆ ಹಿಂದಿನ ಬರಹಗಳೊಡನೆ ಹೋಲಿಸಿದಾಗ ಒಳ ವಿಷಯದ ತೂಕ ಹೆಚ್ಚಿತು. ಗಂಭೀರ ವಿಷಯಗಳು ಮತ್ತು ಗಹನವಾದ ಆಲೋಚನೆಯಲ್ಲಿ ಹೆಚ್ಚಿನ ಒಲವು ಕಾಣುತ್ತಿತ್ತು. ಸಂಗ್ರಹವಾಗಿ ಹೇಳುದಾದರೆ ರೂಪ ಸರಳವಾದಂತೆ ಒಳ ವಿಷಯದ ತೂಕ ಮತ್ತು ಆಳ ಹೆಚ್ಚಿದವು.

ತಮ್ಮ ಮುಪ್ಪಿನಲ್ಲಿ ತಮ್ಮ ಕಾವ್ಯ ರಚನೆಗಳಲ್ಲಿ ಆದ ಮಾರ್ಪಾಡಿನ ಅರಿವು ಠಾಕೂರರಿಗಿತ್ತು. ಅವುಗಳ ವಿಶಿಷ್ಟ ಲಕ್ಷಣಗಳನ್ನು ಮನಸ್ಸಿನಲ್ಲಿಟ್ಟು ಕೊಂಡ ಅವರು ತಮ್ಮ ಹಿಂದಿನ ಬರಹಗಳನ್ನು ವಸಂತದ ಪುಷ್ಪಗಳಿಗೂ ವೃದ್ಧಾಪ್ಯದ ಬರಹಗಳನ್ನು ಪರಿಪಕ್ವಕಾಲದ ಸುಗ್ಗಿಗಳಿಗೂ ಹೋಲಿಸಿದರು. * ಈ ಹೋಲಿಕೆ ತುಂಬ ಉಚಿತವಾದದ್ದು. ವಸಂತದ ಪುಷ್ಪಗಳು ತಮ್ಮ ಹೊರಗಿನ ರೂಪದಿಂದ ನಮ್ಮ ಹೃದಯಕ್ಕೆ ಹಿಗ್ಗು ತಂದರೆ ಶರತ್ಕಾಲದ ಹಣ್ಣುಗಳು ಸತ್ತ್ವದಿಂದ ಬೆಲೆ ಬಾಳುತ್ತವೆ. ಅವರ ಅನಂತರದ ಬರಹಗಳಲ್ಲಿ ಅಭಿವ್ಯಕ್ತಿಯ ಸೊಗಸಿನಿಂದ ಓದುಗರ ಹೃದಯಗಳನ್ನು ಆಕರ್ಷಿಸುವ ಬಯಕೆಯಿಲ್ಲ. ಆಳವಾದ ಮತ್ತು ಉನ್ನತವಾದ ವಿಚಾರಗಳಿಂದ ಅವರ ಮನಸ್ಸುಗಳನ್ನು ಕಟಕುವ ಅಪೇಕ್ಷೆಯಿದೆ.

---

* 'ನವಜಾತಕ್'ಕ್ಕೆ ಮುನ್ನುಡಿ.

ಕೆಲವೊಮ್ಮೆ ಹೊರ ರೂಪದ ಸೌಂದರ್ಯವನ್ನು ಬಿಟ್ಟುಬಿಡುವ ಅಪೇಕ್ಷೆ ಎಷ್ಟು ಪ್ರಬಲವಾಗಿತ್ತೆಂದರೆ ಠಾಕೂರರು ತಮ್ಮ ರಚನೆಗಳಿಗೆ ಗದ್ಯಕಾವ್ಯದ ಲಯವನ್ನು ಹೊಂದಿಸಿಕೊಂಡರು. 1912 ರಲ್ಲಿ ಪ್ರಕಟವಾದ ಅವರ ಇಂಗ್ಲೀಷ್ 'ಗೀತಾಂಜಲಿ' ಗೆ ತಮ್ಮ ಬಂಗಾಳೀ ಕವನಗಳನ್ನು ಅನುವಾದಿಸಿದಾಗ ಇದರ ಅನುಭವ ಆಗಿದ್ದುದರಿಂದ ಅವರಿಗೆ ಈ ಹೊಂದಾಣಿಕೆ ಕಷ್ಟವಾಗಲಿಲ್ಲ. ಅನ್ಯಾರ್ಥವುಳ್ಳ ಕತೆಗಳ ಒಂದು ಸಂಗ್ರಹವನ್ನು "ಅಪಿಕ" ಎಂಬ ಹೆಸರಿನಿಂದ 1922 ರಲ್ಲಿ ಅವರು ಪ್ರಕಟಿಸಿದರು. ಅವುಗಳಿಗೆ ಒಂದು ವಿಶಿಷ್ಟ ಭಾವಗೀತಾತ್ಮಕ ಗುಣವಿದ್ದುದರಿಂದ ಕಾವ್ಯಕ್ಕೆ ಅವು ಬಹು ಚೆನ್ನಾಗಿ ಹೊಂದಿಕೊಂಡವು. ಆದರೆ ಈ ರಚನೆಗಳನ್ನು ಕಾವ್ಯಗಳ ರೂಪದಲ್ಲಿ ವಿನ್ಯಾಸಗೊಳಿಸಲಿಲ್ಲ. ಇಲ್ಲವಾದರೆ ಅವನ್ನು ಗದ್ಯಕಾವ್ಯಗಳೆಂದೇ ಭಾವಿಸಬಹುದಾಗಿತ್ತು. ಆದ್ದರಿಂದ ಈ ರಚನೆಗಳು ಅವರ ಗದ್ಯಕಾವ್ಯಗಳ ಎರಡನೆಯ ಹಂತವನ್ನು ಗುರುತಿಸುತ್ತವೆ. ಕಡೆಯ ಘಟ್ಟದಲ್ಲಿ ವಾಸ್ತವವಾಗಿ ಗದ್ಯಕಾವ್ಯಗಳ ಸಂಗ್ರಹಗಳು ಪ್ರಕಟವಾದವು. 1932 ರಿಂದ 1936 ರ ವರೆಗಿನ ಅವಧಿಯಲ್ಲಿ ಇಂತಹ ಮೂರು ಸಂಗ್ರಹಗಳು ಪ್ರಕಟವಾದವು. ಇವು ಸ್ಪಷ್ಟವಾಗಿ ಅವರ ಮುಪ್ಪಿನ ಸೃಷ್ಟಿ. *

ಒಳವಸ್ತುವಿನಲ್ಲೂ ಕೆಲವು ಹೊಸ ಲಕ್ಷಣಗಳು ಕಾಣಿಸಿಕೊಂಡವು. ಅವರ ಕವನಗಳಿಗೆ ಶೈಶವದ ಸ್ಮೃತಿಗಳು ಆಕರ್ಷಣೆಯ ವಸ್ತುವಾದದ್ದು ಅರ್ಥವಾಗುವ ಸಂಗತಿಯೇ. ಈ ಸಂಕಲನಗಳಲ್ಲಿ ಅವರ ಶೈಶವದ ಅನುಭವಗಳನ್ನು ಸ್ಮರಿಸಿಕೊಳ್ಳುವ ಹಲವು ಕವನಗಳಿರುವುದು ಆಶ್ಚರ್ಯವಿಲ್ಲ.

ತಂತ್ರ ಮತ್ತು ಒಳಗಿನ ವಸ್ತು ಎರಡರಲ್ಲಿಯೂ ಒಂದು ಹೊಸ ಪ್ರಯೋಗವನ್ನು ಈ ಘಟ್ಟದಲ್ಲಿ ಕಾಣುತ್ತದೆ. ಇಂಗ್ಲೀಷ್ ಸಾಹಿತ್ಯದಲ್ಲಿ ಅಸಂಬದ್ಧ ಕವನ ಎನ್ನುವ ಜಾತಿಯ ಬರಹಗಳಲ್ಲಿ ಠಾಕೂರರು ಪ್ರಯೋಗಗಳನ್ನು ಮಾಡಿದರು. ಇಂತಹ ರಚನೆಗಳಲ್ಲಿ ಪ್ರಾಸವೇನೋ ಇರುತ್ತದೆ. ಆದರೆ ಎಲ್ಲ ಭಾಗಗಳಿಂದ ಒಟ್ಟಾಗಿ ಅರ್ಥ ಹೊರಡುವುದಿಲ್ಲ.

---

* ಈ ಸಂಗ್ರಹಗಳ ಹೆಸರುಗಳು 'ಪುನಶ್ಚ' (1932), 'ಶೇಷ ಸಪ್ತಕ' (1935) ಮತ್ತು 'ಶ್ಯಾಮಲೀ' (1936).

1932 ರಲ್ಲಿ ಕೌತುಕವನ್ನುಂಟು ಮಾಡುವ ಸನ್ನಿವೇಶದಲ್ಲಿ ಠಾಕೂರರು ದೇಶದ ರಾಜಕೀಯ ಘಟನೆಗಳಲ್ಲಿ ಮತ್ತೆ ಕಾಲಿಟ್ಟರು. ನಡೆದ ಘಟನೆ ತೀರ ಗಂಭೀರವಾದದ್ದರಿಂದ ಅದು ಅವರನ್ನು ಸೆಳೆಯಿತು. ಈ ಸಂದರ್ಭದಲ್ಲಿ ಪಣವಾಗಿದ್ದದ್ದು ಆಗ ಪೂನಾ ಸೆರೆ ಮನೆಯುಲ್ಲಿದ್ದ ಮಹಾತ್ಮಗಾಂಧಿಯುವರ ಜೀವ. ಬ್ರಿಟಿಷ್ ಸರ್ಕಾರವು ಹಿಂದೂ ಸಮುದಾಯವನ್ನು ಒಡೆಯುವ ಸ್ಪಷ್ಟವಾದ ಉದ್ದೇಶದಿಂದ ಹಿಂದುಗಳಲ್ಲಿ ಪರಿಶಿಷ್ಟ ಜಾತಿಯುವರಿಗೆ ಪ್ರತ್ಯೇಕ ಚುನಾವಣೆಯ ಹಕ್ಕನ್ನು ಕೊಡಲು ದೃಢ ಸಂಕಲ್ಪಮಾಡಿತ್ತು. ಮಹಾತ್ಮ ಗಾಂಧಿಯುವರು ತೀವ್ರ ಪ್ರತಿಭಟನೆಯನ್ನು ಮಾಡಿದರೂ ದುರದೃಷ್ಟದಿಂದ ಯಾವ ಪರಿಣಾಮವೂ ಆಗಲಿಲ್ಲ. ಈ ವಿಷಯವಾಗಿ ಆಮರಣಾಂತ ಉಪವಾಸವನ್ನು ಕೈಗೊಳ್ಳಲು ಗಾಂಧೀಜಿಯುವರು ಯೋಚಿಸಿದರು. ಆದರೆ ಅಂತಿಮ ತೀರ್ಮಾನವನ್ನು ಕೈಗೊಳ್ಳುವ ಮೊದಲು ಅವರು ರವೀಂದ್ರನಾಥ ಠಾಕೂರರೊಡನೆ ಸಮಾಲೋಚಿಸುವುದು ಅಗತ್ಯ ಎಂದು ಅವರಿಗೆ ತೋರಿತು. ರವೀಂದ್ರರಲ್ಲಿ ಅವರಿಗೆ ಗೌರವವಿದ್ದುದು ಮಾತ್ರವಲ್ಲ. ಅವರು ವಿವೇಕಯುತವಾದ ಸಲಹೆಯುನ್ನು ಖಂಡಿತ ಕೊಡಬಲ್ಲವರಾಗಿದ್ದರು. ಗಾಂಧೀಜಿಯುವರು ರವೀಂದ್ರನಾಥರನ್ನು ಪ್ರೀತಿಯಿಂದ ಗುರುದೇವ ಎಂದು ಕರೆಯುತ್ತಿದ್ದರು.

ಉಪವಾಸವು 1932 ರ ಸೆಪ್ಟೆಂಬರ್ 20 ರಂದು ಹನ್ನೆರಡು ಘಂಟೆಗೆ ಪ್ರಾರಂಭವಾಗುವುದಿತ್ತು. ಠಾಕೂರರ ಒಪ್ಪಿಗೆಗಾಗಿ ಗಾಂಧೀಜಿ ಕಾಗದ ಬರೆದಿದ್ದರು. ಠಾಕೂರರು ತಮ್ಮ ಒಪ್ಪಿಗೆಯುನ್ನು ಸೂಚಿಸಿ ತಂತಿ ಕಳುಹಿಸಿದ್ದರು, "ಭಾರತದ ಐಕ್ಯತೆ ಮತ್ತು ಸಾಮಾಜಿಕ ಸಮಗ್ರತೆಗಾಗಿ" ಗಾಂಧೀಜಿಯುವರ ಅಮೂಲ್ಯ ಜೀವವನ್ನು ಬಲಿಕೊಟ್ಟರೂ ಸಾರ್ಥಕ ಎಂದು ಅವರು ತಿಳಿಸಿದ್ದರು. ಆದರೂ ಜನರು "ಇಂತಹ ರಾಷ್ಟ್ರೀಯ ದುರಂತವು ಕಟ್ಟಕಡೆಯುಂಚನ್ನು ಮುಟ್ಟಲು ತಮ್ಮ ಅತೀವ ನಿರ್ಲಕ್ಷ್ಯದಿಂದ ಅವಕಾಶ ಕೊಡುವುದಿಲ್ಲ "ಎಂಬ ಗಾಢವಾದ ಭರವಸೆ" ಯುನ್ನೂ ವ್ಯಕ್ತಪಡಿಸಿದ್ದರು.

ದುರದೃಷ್ಟದಿಂದ, ಠಾಕೂರರು ಕಳುಹಿಸಿದ ತಂತಿ ಅವರಿಗೆ ಸಕಾಲದಲ್ಲಿ ತಲುಪಲಿಲ್ಲ. ಇದರಿಂದ ಸೆಪ್ಟೆಂಬರ್ 20 ರ ಬೆಳಗ್ಗೆ ಗಾಂಧೀಜಿಯುವರು ಠಾಕೂರರ ಆಶೀರ್ವಾದದ ನಿರೀಕ್ಷಣೆಯಿಂದ ಉಪವಾಸವನ್ನು ಪ್ರಾರಂಭಿಸಲು ನಿರ್ಧರಿಸಿದರು. ಹಾಗೆ ಮಾಡುವ ಮೊದಲು, ಅವರು ಠಾಕೂರರಿಗೆ ಒಂದು ಪತ್ರವನ್ನು ಬರೆದರು. ಈ ಪತ್ರವು ಅವರಿಗೆ ಠಾಕೂರರ ಸಲಹೆಯುನ್ನು ಪಡೆಯಲು

ಎಷ್ಟೊಂದು ತವಕವಿತ್ತು ಎಂಬುದನ್ನು ತೋರಿಸುತ್ತದೆ. ಠಾಕೂರರನ್ನು 'ಗುರುದೇವ' ಎಂದು ಸಂಬೋಧಿಸಿ ಹೀಗೆ ಪತ್ರವನ್ನು ಮುಂದುವರೆಸಿದರು.

"ಈಗ ಮಂಗಳವಾರ ಬೆಳಗಿನ ಜಾವ ಮೂರು ಗಂಟೆ. ನಾನು ಹನ್ನೆರಡು ಘಂಟೆಗೆ ಅಗ್ನಿದ್ವಾರವನ್ನು ಹೋಗುತ್ತಿದ್ದೇನೆ. ನೀವು ಈ ಪ್ರಯತ್ನವನ್ನು ಹರಸಬಹುದಾದರೆ ನನಗೆ ನಿಮ್ಮ ಹರಕೆ ಬೇಕು. ನೀವು ನನಗೆ ನಿಜವಾದ ಸ್ನೇಹಿತರು. ಏಕೆಂದರೆ ನಿಮ್ಮ ಮನಸ್ಸಿನಲ್ಲಿರುವುದನ್ನು ಸ್ಪಷ್ಟವಾಗಿ ಹೇಳಿ ಬಿಚ್ಚು ಮನಸ್ಸಿನ ಸ್ನೇಹಿತರಾಗಿದ್ದೀರಿ. ಒಪ್ಪಿರುವಿರೋ ಇಲ್ಲವೋ ಅಂತೂ ನಿಮ್ಮ ಖಚಿತವಾದ ಅಭಿಪ್ರಾಯವನ್ನು ನಾನು ಎದುರು ನೋಡುತ್ತಿದ್ದೇನೆ. ನೀವು ಟೀಕೆ ಮಾಡಲು ನಿರಾಕರಿಸಿದ್ದೀರಿ. ನೀವೀಗ ಟೀಕೆ ಮಾಡಬೇಕಾದರೂ ನನ್ನ ನಿರಶನದ ಕಾಲದಲ್ಲೇ ಮಾಡಬೇಕಾಗುತ್ತದೆ. ಆದರೆ ನಿಮ್ಮ ಹೃದಯ ನಾನು ಮಾಡುವುದು ತಪ್ಪೆಂದು ಖಂಡಿಸಿದರೆ ನಿಮ್ಮ ಟೀಕೆಯು ನನಗೆ ತುಂಬ ಮುಖ್ಯ. ನಾನು ಮಾಡಿದ್ದು ತಪ್ಪು ಎಂದು ಕಂಡರೆ ನನ್ನ ತಪ್ಪೊಪ್ಪಿಗೆಯ ಬೆಲೆ ಏನೇ ಆಗಲಿ ನನ್ನ ತಪ್ಪನ್ನು ಬಹಿರಂಗವಾಗಿ ಒಪ್ಪಿಕೊಳ್ಳುತ್ತೇನೆ. ಇದನ್ನು ಮಾಡದಿರುವಂತಹ ಗರ್ವ ನನಗಿಲ್ಲ. ನಾನು ಮಾಡುವುದು ಸರಿ ಎಂದು ನಿಮಗೆ ತೋರಿದರೆ ನನಗೆ ನಿಮ್ಮ ಆಶೀರ್ವಾದ ಬೇಕು. ಅದು ನನಗೆ ಶಕ್ತಿಯನ್ನು ಕೊಡುತ್ತದೆ."

ಸುಯೋಗದಿಂದ ಗಾಂಧೀಜಿಯವರು ಉಪವಾಸವನ್ನು ಪ್ರಾರಂಭ ಮಾಡುವ ಮೊದಲೇ ಠಾಕೂರರ ಒಪ್ಪಿಗೆಯ ತಂತಿ ಸಂದೇಶ ಅವರ ಕೈಸೇರಿತು. ಆದ್ದರಿಂದ ಗಾಂಧೀಜಿಯವರಿಗೆ ತಾವು ಹೋಗಲಿದ್ದ ಚಂಡ ಮಾರುತದ ನಡುವೆ ತಮಗೆ ಶಕ್ತಿ ನೀಡಲು ಆಪ್ತ ಮಿತ್ರರು ಮಾನಸಿಕವಾಗಿ ತಮ್ಮೊಡನೆ ಇರುವರೆಂದು ತಿಳಿಯುವ ಸಮಾಧಾನ ಲಭ್ಯವಾಯಿತು.

ಮತ್ತೊಂದು ಅದೃಷ್ಟದ ಸಂಗತಿ ಎಂದರೆ ಉಪವಾಸವು ದುರಂತದಲ್ಲಿ ಮುಕ್ತಾಯವಾಗಲಿಲ್ಲ ಎನ್ನುವುದು ಗಾಂಧೀಜಿಯವರ ದೃಢ ನಿಲವು ಕಡೆಗೆ ಅಧಿಕಾರ ರೂಢರಲ್ಲಿ ವಿವೇಕವನ್ನು ಮೂಡಿಸಿತು. ಪರಿಶಿಷ್ಟ ಜಾತಿಯ ಹಿಂದು ಗಳಿಗೇ ಪ್ರತ್ಯೇಕ ಚುನಾವಣೆಯ ಹಕ್ಕನ್ನು ನೀಡುವ ಸಲಹೆಯನ್ನು ಕೈಬಿಡಲಾ ಯಿತ್ತು. ಈ ನಿರ್ಧಾರವನ್ನು ಗಾಂಧೀಜಿಯವರಿಗೆ ಅವರು ಉಪವಾಸ ಪ್ರಾರಂಭಿಸಿದ ಆರು ದಿನಗಳ ನಂತರ 1932 ರ ಸೆಪ್ಟೆಂಬರ್ 26 ರಂದು ತಿಳಿಸಲಾ

ಯಿತು ಈ ಹೊತ್ತಿಗೆ ಗಾಂಧೀಜಿಯವರಿಗೆ ಅಗತ್ಯವಾದಾಗ ತಾವು ಅವರ ಬಳಿ ಇರಬೇಕೆಂದು ಠಾಕೂರರು ಪುಣೆಗೆ ಬಂದಿದ್ದರು. ಇದರಿಂದ ಅವರ ಸಮ್ಮುಖದಲ್ಲಿ ಉಪವಾಸವನ್ನು ಮುಕ್ತಾಯ ಮಾಡುವುದು ಸಾಧ್ಯವಾಯಿತು.

ಅವರಿಬ್ಬರ ನಡುವಿನ ಪ್ರೀತಿ ಹೇಗೆ ಗಾಢವಾದ ಸ್ನೇಹವಾಗಿ ಫಲಿಸಿತು, ಒಬ್ಬರಿನ್ನೊಬ್ಬರಿಗಾಗಿ ಎಷ್ಟು ಯೋಚಿಸುತ್ತಿದ್ದರು ಎಂಬುದು ಈ ಘಟನೆಯಿಂದ ವ್ಯಕ್ತವಾಗುತ್ತದೆ. ಕೆಲವು ವರ್ಷಗಳ ನಂತರ ನಡೆದ ಮತ್ತೊಂದು ಸಂಗತಿಯು ಗಾಂಧೀಜಿಯು ಗುರುದೇವರ ಆರೋಗ್ಯ ಮತ್ತು ನೆಮ್ಮದಿಗಳ ವಿಷಯದಲ್ಲಿ ಎಷ್ಟೊಂದು ಕಳಕಳಿ ಹೊಂದಿದ್ದರು ಎಂಬುದನ್ನು ತೋರಿಸುತ್ತದೆ.

1935 ರ ಹೊತ್ತಿಗೆ ವಿಶ್ವಭಾರತಿಯ ಹಣಕಾಸಿನ ಸ್ಥಿತಿಯು ತೀರ ಕೆಟ್ಟಿತ್ತು. ಅವರು 'ನೈಟ್‌ಹುಡ್' ಪ್ರಶಸ್ತಿಯನ್ನು ತ್ಯಜಿಸಿದುದರಿಂದ ಅವರಿಂದ ದೂರವಾಗಿದ್ದ ವಿದೇಶಿ ಸರ್ಕಾರದಿಂದ ಅವರು ಯಾವುದೇ ಅರ್ಥಿಕ ನೆರವನ್ನು ನಿರೀಕ್ಷಿಸುವಂತಿರಲಿಲ್ಲ. ಸಂಸ್ಥಾನಗಳ ರಾಜರುಗಳಿಂದ ಸ್ವಲ್ಪ ನೆರವು ಬರುತ್ತಿದ್ದದ್ದು ನಿಜ. ಆದರೆ ಅದು ತೀರ ಸ್ವಲ್ಪ. ತಮ್ಮ ವಿಶ್ವವಿದ್ಯಾನಿಲಯಕ್ಕೆ ಹಣ ತರಲು ಠಾಕೂರರು ಮುಖ್ಯವಾಗಿ ತಮ್ಮ ಸಂಪನ್ಮೂಲಗಳನ್ನೆ ನೆಚ್ಚಬೇಕಾಗಿತ್ತು. ಅವರ ಪುಸ್ತಕಗಳ ಗೌರವಧನ, ಅವರ ಜಮೀನಿನ ವರಮಾನ ಮತ್ತು ಅವರ ವಿದೇಶೀ ಉಪನ್ಯಾಸ ಪ್ರವಾಸಗಳ ಆದಾಯ ಇವೇ ಅವರಿಗೆ ಆಧಾರ. ಸಾಮಾನ್ಯ ಆರ್ಥಿಕ ಹಿಂಜರಿತದಿಂದ ಅವರ ಜಮೀನಿನ ವರಮಾನ ಇಳಿಮುಖವಾಗಿತ್ತು. ವೃದ್ಧಾಪ್ಯದ ನಿಶ್ಶಕ್ತಿಯಿಂದ ಅವರಿಗೆ ಶ್ರಮದಾಯಕ ವಿದೇಶೀ ಪ್ರವಾಸಗಳನ್ನು ಕೈಗೊಳ್ಳುವುದು ಅಸಾಧ್ಯವಾಗಿತ್ತು. ಹೀಗೆ ಮುಖ್ಯವಾದ ಎರಡು ಸಂಪನ್ಮೂಲಗಳು ಬರಿದಾದ್ದರಿಂದ ತಮ್ಮ ಸಂಸ್ಥೆಗೆ ಹಣಕಾಸನ್ನು ಒದಗಿಸಲು ಹೊಸ ವಿಧಾನಗಳನ್ನು ಹುಡುಕುವ ಗಂಭೀರ ಸಮಸ್ಯೆಯನ್ನು ಎದುರಿಸಬೇಕಾಯಿತು.

ತಮ್ಮ ವಿಶ್ವವಿದ್ಯಾನಿಲಯಕ್ಕೆ ಹಣ ಒದಗಿಸುವ ಸಮಸ್ಯೆಯು ಎದುರಾದಾಗ ಅವರ ಸಂಶೋಧಕ ಬುದ್ಧಿ ಹೊಸದೊಂದು ರೀತಿಯಲ್ಲಿ ಸಮಸ್ಯೆಯನ್ನು ಬಿಡಿಸಿತು. ತಮ್ಮ ವಿದ್ಯಾರ್ಥಿಗಳ ಸಹಾಯದಿಂದ ಭಾರತದ ವಿವಿಧ ಭಾಗಗಳಲ್ಲಿ ನೃತ್ಯ ನಾಟಕಗಳನ್ನು ಪ್ರದರ್ಶಿಸಿ, ಈ ಪ್ರದರ್ಶನಗಳಿಗೆ ಟಿಕೆಟ್ ಹಾಕುವ ಮೂಲಕ ಹಣ ಶೇಖರಿಸುವ ಯೋಚನೆ ಅವರಿಗೆ ಬಂತು. ಈ ಪ್ರಯತ್ನದಿಂದ ತನ್ನದೇ ಆದ

ವಿಶಿಷ್ಟ ಲಕ್ಷಣಗಳನ್ನು ಬೆಳೆದುಕೊಂಡ ಹೊಸ ನೃತ್ಯ ರೀತಿ ಹುಟ್ಟಿಕೊಂಡಿತು. ಇದು ಹೊಸ ನೃತ್ಯ ಪಂಥ ಎಂದೇ ಸಾರ್ಥಕವಾಗಿ ಕರೆಸಿಕೊಳ್ಳುವ ಮಟ್ಟಿಗೆ ತನ್ನ ವಿಶಿಷ್ಟ ಲಕ್ಷಣಗಳನ್ನು ಪಡೆದುಕೊಂಡಿತು.

ಹಣವನ್ನು ಶೇಖರಿಸಲು ಠಾಕೂರರು ಈ ವಿಧಾನವನ್ನು ಅನುಸರಿಸಬೇಕಾಗಿ ಬಂದದ್ದು ವಿಷಾದದ ಸಂಗತಿಯೇ. ವಯಸ್ಸಾಗುತ್ತಿದ್ದ ಅವರ ದೇಹಕ್ಕೆ ಇದರಿಂದ ತುಂಬ ಆಯಾಸವಾಯಿತು.

1936 ನೆಯ ಇಸವಿ ಇದು. ತಮ್ಮ ಪ್ರವಾಸದ ಕಾರ್ಯಕ್ರಮದಲ್ಲಿ ಪಾಟ್ನ, ಅಲಹಾಬಾದ್ ಮತ್ತು ಲಾಹೋರುಗಳಿಗೆ ಭೇಟಿಕೊಟ್ಟು ಮುಂದಿನ ಪ್ರದರ್ಶನಕ್ಕಾಗಿ ಠಾಕೂರರು ದೆಹಲಿಗೆ ಹೋದರು. ಸಹಜವಾಗಿ ಇದು ಗಾಂಧೀಜಿಯವರ ಗಮನವನ್ನು ಸೆಳೆಯಿತು. ಗುರುದೇವರ ಆರೋಗ್ಯ ಇದನ್ನು ತಡೆಯಲಾರದೆಂದು ಗಾಂಧೀಜಿ ವಿರೋಧಿಸಿದರು. ವೈಯುಕ್ತಿಕವಾಗಿ ತಮಗೆ ತೀರ ಅನನುಕೂಲವಾದರೂ ಠಾಕೂರರು ಇದನ್ನು ನಡೆಸುವುದು ಏಕೆ ಅನಿವಾರ್ಯವಾಯಿತು ಎಂದು ತಿಳಿದಾಗ ಗಾಂಧೀಜಿಯವರು 60,000 ರೂಪಾಯಿಗಳನ್ನು ಶೇಖರಿಸಿಕೊಟ್ಟು ಠಾಕೂರರಿಗೆ ಅವರ ಪ್ರವಾಸವನ್ನು ನಿಲ್ಲಿಸಿ ಶಾಂತಿನಿಕೇತನಕ್ಕೆ ಹಿಂದಿರುಗಲು ಮನವಿಮಾಡಿಕೊಂಡರು. ಮೀರತ್‌ನಲ್ಲಿ ಆಗಲೇ ಪ್ರದರ್ಶನ ನೀಡಲು ಒಪ್ಪಿಕೊಂಡಿದ್ದುದರಿಂದ ಠಾಕೂರರು ಅದೊಂದು ಕಾರ್ಯಕ್ರಮವನ್ನು ಮುಗಿಸಿ, ಗಾಂಧೀಜಿಯವರ ಮನವಿಯಂತೆ ಹಿಂದಿರುಗಿದರು.

1941 ರ ಫೆಬ್ರವರಿ 17 ರಂದು ಗಾಂಧೀಜಿ ಶಾಂತಿನಿಕೇತನಕ್ಕೆ ಭೇಟಿ ನೀಡಿದರು ಈ ನಡುವೆ ಠಾಕೂರರ ಆರೋಗ್ಯ ಕೆಟ್ಟಿತ್ತು. ಸಹಜವಾಗಿ ಅವರಿಗೆ ತಮ್ಮ ವಿಶ್ವವಿದ್ಯಾನಿಲಯದ ಭವಿಷ್ಯವನ್ನು ಕುರಿತು ಚಿಂತೆಯುಂಟಾಗಿತ್ತು. ಅಷ್ಟೊಂದು ಆದರದಿಂದ ತಾವು ಹತ್ತಿರ ಹತ್ತಿರ ನಲವತ್ತು ವರ್ಷಗಳ ಕಾಲ ಬೆಳೆಸಿದ್ದ ಸಂಸ್ಥೆಗೆ ಭವಿಷ್ಯ ಬಾಯಿ ತೆರೆದು ಕುಳಿತಿದೆ ಎಂಬ ಯೋಚನೆಯಿಂದ ಅವರಿಗೆ ನೋವಾಗುತ್ತಿತ್ತು. ತಮ್ಮ ದೇಹಸ್ಥಿತಿಯ ವಿಷಯವನ್ನು ಗಮನಿಸಿದಾಗ ತಮ್ಮ ಚಿಂತೆಗಳನ್ನು ತಮ್ಮ ಅತ್ಯಂತ ಆತ್ಮೀಯ ಗೆಳೆಯನೊಡನೆ ಮನಸ್ಸು ಬಿಚ್ಚಿ ತೋಡಿಕೊಳ್ಳುವ ಕಾಲ ಬಂದಿದೆ ಎಂದು ಅವರಿಗೆನ್ನಿಸಿತು. ಗಾಂಧೀಜಿಯ ಭೇಟಿಯ ಲಾಭ ಪಡೆದು ಅವರು ಮುಂದೆ ವಿಶ್ವವಿದ್ಯಾನಿಲಯವನ್ನು ನಡೆಸಿಕೊಂಡು

ಹೋಗಲು ಅದನ್ನು ಗಾಂಧೀಜಿಯವರ ಪಾಲನೆಗೆ ಒಪ್ಪಿಸಿದರು. ಸರಿಯಾದ ಕಾಲ ಬಂದಾಗ ಈ ಪ್ರಾರ್ಥನೆ ಸಾರ್ಥಕವಾಗಿ ಫಲಿಸಿತು. ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹ್ರೂ ಅವರು ಸ್ವತ: ಅವರಿಗೆ ಠಾಕೂರರಲ್ಲಿ ತುಂಬ ಮೆಚ್ಚಿಕೆಯಾಗಿದ್ದ ವಿಶ್ವ ಭಾರತಿಯು ಕೇಂದ್ರ ವಿಶ್ವವಿದ್ಯಾನಿಲಯಗಳಲ್ಲಿ ಒಂದಾಗಿ ಪರಿಗಣಿತವಾಗುವಂತೆ ಒಂದು ಮಸೂದೆ ಅಂಗೀಕೃತವಾಗುವಂತೆ ಮಾಡಿದರು.

ಠಾಕೂರರ ಜೀವನದ ಕಡೆಯ ದಶಕದಲ್ಲಿ ಅವರಿಗೂ ಅವರ ಕಿರಿಯ ಸಮಕಾಲೀನ ಸುಭಾಷ ಚಂದ್ರ ಬೋಸರಿಗೂ ನಡುವೆ ಆತ್ಮೀಯತೆ ಬೆಳೆಯಿತು. ಸುಭಾಷ ಚಂದ್ರರು ಮುಂದೆ ಭಾರತೀಯ ರಾಷ್ಟ್ರೀಯ ಸೇನೆ ಕಟ್ಟಿ ಸ್ವಾತಂತ್ರ್ಯ ಸಮರದಲ್ಲಿ ಅದರ ನಾಯಕರಾಗಿ ತಮ್ಮ ದೇಶದ ಅಚ್ಚು ಮೆಚ್ಚಿನ ನೇತಾಜಿಯಾದರು. ಬ್ರಿಟಿಷ್ ಸಾಮ್ರಾಜ್ಯಶಾಹಿಯು ಅತ್ಯಂತ ಕ್ರೌರ್ಯವನ್ನು ತೋರುತ್ತಿದ್ದ ಕಾಲದಲ್ಲಿ ಮತ್ತೆ ಮತ್ತೆ ಅದನ್ನು ಧಿಕ್ಕರಿಸಿದ ಸುಭಾಷ್ ಚಂದ್ರರ ಪೌರುಷವನ್ನು ಠಾಕೂರರು ಮೆಚ್ಚಿಕೊಂಡರು. ಠಾಕೂರರನ್ನು ಭೇಟಿಯಾಗಲು ಬಂದು ಸುಭಾಷ್ ಚಂದ್ರರು ಜೊರಸಾಂಕೊದಲ್ಲಿ ಅವರ ಪೂರ್ವಿಕರ ಮನೆಯಲ್ಲಿ ಇಳಿದು ಕೊಳ್ಳುತ್ತಿದ್ದದು ಅಪರೂಪವಲ್ಲ.

ಒಮ್ಮೆ 1939 ರ ಜನವರಿಯಲ್ಲಿ ಸುಭಾಷ್ ಚಂದ್ರರು ಶಾಂತಿ ನಿಕೇತನಕ್ಕೆ ಭೇಟಿಕೊಡುವುದಕ್ಕೂ ಏರ್ಪಾಟಾಯಿತು. ನಿರ್ಭಯ ಯುವ ಜನತೆಯ ಸಂಕೇತ ಎಂದು ಸುಭಾಷ್ ಚಂದ್ರರನ್ನು ಠಾಕೂರರು ಎಷ್ಟು ಮೆಚ್ಚಿಕೊಂಡಿದ್ದರು ಎಂದರೆ ಅವರಿಗೆ ಯೋಗ್ಯಸ್ವಾಗತ ನೀಡಲು ತೀರ್ಮಾನಿಸಿ ಆ ಸಂದರ್ಭದಲ್ಲಿ ಅರ್ಪಿಸಲು ಒಂದು ಬಿನ್ನವತ್ತಳೆಯನ್ನೂ ಸಿದ್ಧಮಾಡಿದ್ದರು. ದುರದೃಷ್ಟದಿಂದ ಈ ಭೇಟಿ ನಡೆಯಲಿಲ್ಲ. ಆದರೆ ಸುಯೋಗದಿಂದ ಅವರಿಗೆ ಒಪ್ಪಿಸಲು ಸಿದ್ಧ ಮಾಡಿದ ಬಿನ್ನವತ್ತಳೆ ಇದೆ. ಅದರ ಪ್ರಾರಂಭದ ಕೆಲವು ಪಂಕ್ತಿಗಳನ್ನು ಕೆಳಗೆ ಕೊಟ್ಟಿದೆ. ತಮ್ಮ ತರುಣ ಸ್ನೇಹಿತನ ವಿಷಯದಲ್ಲಿ ಠಾಕೂರರಿಗೆ ಎಷ್ಟು ಗೌರವದ ಭಾವನೆಗಳಿದ್ದವು ಎಂಬುದು ಇದರಿಂದ ವ್ಯಕ್ತವಾಗುತ್ತದೆ :

“ ಬಂಗಾಳದ ಕವಿಯಾಗಿ ನಾನು ನಿಮ್ಮನ್ನು ಜನತೆಯ ನಾಯಕನ ಗೌರವಾನ್ವಿತ ಪೀಠಕ್ಕೆ ಆಹ್ವಾನಿಸುತ್ತೇನೆ. ದುಷ್ಟತನದ ಪ್ರಭುತ್ವಕ್ಕೆ ಸವಾಲು ನೀಡಲು ದೇವಾಂಶ

ಸಂಭೂತ ರಕ್ಷಕನೊಬ್ಬ ಕಾಲಕಾಲಕ್ಕೆ ಅವತರಿಸುವನೆಂಬ ಪವಿತ್ರ ಭರವಸೆಯನ್ನು ಗೀತೆಯು ನೀಡಿದೆ."

ಇಂತಹ ರಕ್ಷಕನ ಪೀಠದಲ್ಲಿ ಸುಭಾಷ್ ಚಂದ್ರರನ್ನು ನಿಲ್ಲಿಸಲು ಠಾಕೂರರಿಗೆ ಒಪ್ಪಿಗೆಯಿತ್ತು ಎಂಬುದು ಸ್ಪಷ್ಟ.

ಇಂತಹ ಪ್ರೀತಿ ದೊರೆಯದೆ ಹೋಗುವುದಿಲ್ಲ. ಹೀಗೆ ಪ್ರೀತಿ ವ್ಯಕ್ತವಾದಾಗ ಸುಭಾಷರು ಆತ್ಮೀಯತೆಯನ್ನು ತೋರಿದರು. ತಮ್ಮ ಲೇಖನಿಯ ಬಲದಿಂದ ಯುವಜನತೆ ಮಹೋದ್ದೇಶಗಳಿಗಾಗಿ ಹೋರಾಡಲು ಸ್ಫೂರ್ತಿ ನೀಡಿದ ಮಾನವ ಕುಲದ ಕವಿ ಎಂದು ಅವರು ಠಾಕೂರರನ್ನು ಪ್ರಶಂಸಿದರು.

ಸಾರ್ವಜನಿಕ ಕೆಲಸಕಾರ್ಯಗಳಿಗೆ ಉದ್ದೇಶಿಸಿದ "ಮಹಾಜಾತಿ ಸದನ"ದ ಶಂಕುಸ್ಥಾಪನೆಯನ್ನು ಮಾಡುವಂತೆ ಸುಭಾಷ್ ಚಂದ್ರರು ಠಾಕೂರರನ್ನು ಪ್ರಾರ್ಥಿಸಿದರು. ಆರೋಗ್ಯವು ಕೆಡುತ್ತಿದ್ದರೂ ಠಾಕೂರರು ಒಪ್ಪಿದರು. ಆ ಸಂದರ್ಭದಲ್ಲಿ ಮಾತನಾಡುತ್ತ ಸುಭಾಷ್ ಚಂದ್ರರು ಠಾಕೂರರನ್ನು ಈ ಮಾತುಗಳಲ್ಲಿ ಪ್ರಶಂಸಿದರು: "ಅನಂತ ಕಾಲದ ವಾಣಿಯಾಗಿ ನೀವು ಪುನರ್ಜನ್ಮ ತಾಳಿದ ಈ ರಾಷ್ಟ್ರದ ಭರವಸೆ ಮತ್ತು ಆಕಾಂಕ್ಷೆಗಳಿಗೆ ಸದಾ ಭಾವೋದ್ದೀಪ್ತ ಅಭಿವ್ಯಕ್ತಿಯನ್ನು ನೀಡಿದ್ದೀರಿ. ಸಾವಿಲ್ಲದ ಯೌವನದ ಸಂದೇಶ ನಿಮ್ಮದು. ನೀವು ಕಾವ್ಯವನ್ನು ಬರೆದಿರುವುದು, ಕಲೆಯನ್ನು ಸೃಷ್ಟಿಸಿರುವುದು ಮಾತ್ರವಲ್ಲ. ಕಾವ್ಯಕಲೆಗಳಲ್ಲೇ ಬದುಕಿದ್ದೀರಿ. ನೀವು ಭಾರತದ ಕವಿ ಮಾತ್ರವಲ್ಲ ಇಡೀ ಮಾನವ ಕುಲ ಕವಿ."

ಮುಂದೆ ಎರಡನೆಯ ಪ್ರಪಂಚ ಯುದ್ಧದ ಕಾಲದಲ್ಲಿ ಸುಭಾಷ್ ಚಂದ್ರರು ಬರ್ಲಿನ್‌ನಲ್ಲಿ ಫ್ರೀ ಇಂಡಿಯಾ ಲೀಗ್‌ನ್ನು ಸ್ಥಾಪಿಸಿದಾಗ ಭಾರತವನ್ನು ಕುರಿತು ಠಾಕೂರರು ರಚಿಸಿದ 'ಜನಗಣಮನ' ಹಾಡನ್ನು ರಾಷ್ಟ್ರಗೀತೆಯನ್ನಾಗಿ ಸ್ವೀಕರಿಸಲು ತೀರ್ಮಾನವಾಯಿತು. ಅವರ ಸೂಚನೆಯಂತೆಯೇ 1942 ರಲ್ಲಿ ಹ್ಯಾಂಬರ್ಗ್‌ನಲ್ಲಿ ನಡೆದ ಒಂದು ಸಮಾರಂಭದಲ್ಲಿ ಈ ಹಾಡನ್ನು ವಾದ್ಯಮೇಳದಲ್ಲಿ ನುಡಿಸಲಾಯಿತು.

ತಮ್ಮ ಮುಪ್ಪಿನಲ್ಲಿ ಠಾಕೂರರಿಗೆ ಕಾಳಿಂಪಾಂಗ್ ತುಂಬಾ ಪ್ರಿಯವಾಯಿತು. ಇದು ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯಲ್ಲಿರುವ ಒಂದು ಗಿರಿಧಾಮ. ಅದರ ಹಿತವಾದ ಹವೆಯಿಂದ ಪ್ರಸಿದ್ಧವಾಗಿದೆ. ಇಲ್ಲಿನ ನಿಸರ್ಗ ರಮಣೀಯತೆ

ಮತ್ತೊಂದು ಆಕರ್ಷಣೆಯಾಗಿರಬಹುದು. ಅದರ ಸಮೃದ್ಧ ಹಸಿರು ಸಸ್ಯ ಸಂಪತ್ತು. ಮತ್ತು ಉತ್ತರ ಬಂಗಾಳದ ಮೈದಾನ ಪ್ರದೇಶಕ್ಕೆ ಇಳಿಯುವ ಮುನ್ನ ಕಮರಿಯ ಮೂಲಕ ಹರಿಯುವ ತೀಸ್ತ ನದಿಯ ಮುನ್ನುಗ್ಗುವ ನೀರು ಈ ಸ್ಥಳದ ಸುಂದರ ದೃಶ್ಯಗಳಲ್ಲಿ ಕೆಲವು. ವಿಶ್ರಾಂತಿಗಾಗಿ ಮತ್ತು ಆರೋಗ್ಯದ ಸುಧಾರಣೆಗಾಗಿ ಠಾಕೂರರು ಬೇಸಿಗೆಯನ್ನು ಮಾಗೀಕಾಲವನ್ನು ಇಲ್ಲಿ ಕಳೆಯುತ್ತಿದ್ದರು.

ಕಾಳಿಂಪಾಂಗ್ ಬಳಿ ಸರ್ಕಾರದ ಸಿಂಕೋನಾ ತೋಟವಿದೆ. ಅದರ ಕೇಂದ್ರ ಕಚೇರಿ ಮೌಂಗ್‌ಪೂ ಎಂಬ ಸ್ಥಳದಲ್ಲಿದೆ. ತೋಟದ ರಸಾಯನ ವಿಜ್ಞಾನದ ಅಧಿಕಾರಿ, ಡಾಕ್ಟರ್ ಮನಮೋಹನ ಸೇನರ ಹೆಂಡತಿ ಮೈತ್ರೇಯಿ ದೇವಿಯವರಲ್ಲಿ ಠಾಕೂರರಿಗೆ ತುಂಬ ವಿಶ್ವಾಸ. ಆಕೆ ಈ ತೋಟದಲ್ಲಿ ಸ್ವಲ್ಪಕಾಲ ಇರುವಂತೆ ಆಹ್ವಾನಿಸಿದಾಗ ಸಹಜವಾಗಿಯೇ ಠಾಕೂರರು ಇಲ್ಲ ಎಂದು ಹೇಳುವಂತಿರಲಿಲ್ಲ. 1938 ರಲ್ಲಿ ಈ ಸಣ್ಣ ಸ್ಥಳದಲ್ಲಿ ಮನಮೋಹಕ ಪರಿಸರದಲ್ಲಿ ಎರಡು ತಿಂಗಳನ್ನು ಕಳೆದರು. ಮೈತ್ರೇಯಿ ದೇವಿಯವರು ಅವರನ್ನು ಬಹು ವಿಶ್ವಾಸದಿಂದ ಮತ್ತು ಎಚ್ಚರಿಕೆಯಿಂದ ನೋಡಿಕೊಂಡಿದ್ದು ಇನ್ನೊಂದು ಆಕರ್ಷಣೆಯಾಯಿತು. ಠಾಕೂರರಿಗೆ ಆ ಸ್ಥಳ ತುಂಬ ಹಿಡಿಸಿ ಅವರು ಮತ್ತೆ ಅಲ್ಲಿಗೆ ಹೋದದ್ದು ಆಶ್ಚರ್ಯವಲ್ಲ. ಅವರು ಅಲ್ಲಿಗೆ ಕಡೆಯ ಬಾರಿ ಹೋದದ್ದು 1940 ರ ಬೇಸಿಗೆಯಲ್ಲಿ. ಅವರ ಹುಟ್ಟು ಹಬ್ಬ ಸಾಮಾನ್ಯವಾಗಿ ಮೇ 8 ರಂದು ಬೀಳುತ್ತಿತ್ತು. ಆ ವರ್ಷ ಠಾಕೂರರ ಹುಟ್ಟು ಹಬ್ಬವನ್ನೂ ಅಲ್ಲಿಯೇ ಆಚರಿಸಲಾಯಿತು.

ಇದಾದ ಸ್ವಲ್ಪ ಕಾಲದಲ್ಲೇ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಅಪೇಕ್ಷೆಯ ಮೇರೆಗೆ ಶಾಂತಿನಿಕೇತನದಲ್ಲಿ 1940 ರ ಆಗಸ್ಟ್ ಏಳರಂದು ಒಂದು ಸಮಾರಂಭವನ್ನು ಏರ್ಪಡಿಸಲಾಯಿತು. ವಿಶೇಷವಾಗಿ ಹೇಳಬೇಕಾದ ಸಂದರ್ಭ ಇದು. ಹಿಂದೆ ಹಿಬ್ಬರ್ಟ್ ಉಪನ್ಯಾಸಗಳನ್ನು ಕೊಡುವಂತೆ ಅವರನ್ನು ಆಹ್ವಾನಿಸಿ ಇದೇ ವಿಶ್ವವಿದ್ಯಾನಿಲಯ ಗೌರವಿಸಿತ್ತು. ಈಗ ಅದು ಅವರಿಗೆ ಡಾಕ್ಟರ್ ಆಫ್ ಲಿಟರೇಚರ್ ಗೌರವ ಪ್ರಶಸ್ತಿಯನ್ನು ನೀಡಲು ನಿರ್ಧರಿಸಿತು. ಠಾಕೂರರ ಆರೋಗ್ಯ ಸ್ಥಿತಿಯಲ್ಲಿ ಅವರು ಆಕ್ಸ್‌ಫರ್ಡ್‌ಗೆ ಪ್ರಯಾಣ ಮಾಡುವುದು ಅಸಾಧ್ಯವಾದುದ್ದರಿಂದ ಶಾಂತಿನಿಕೇತನದಲ್ಲಿ ಠಾಕೂರರ ನಿವಾಸದಲ್ಲೆ ಒಂದು ಸರಳಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ನೀಡಲು ಏರ್ಪಾಟಾಯಿತು. ಆಗ ಭಾರತದ ಪ್ರಧಾನ

16

ನ್ಯಾಯಾಧೀಶರೂ ಹಿಂದೆ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯೂ ಆದ ಸರ್ ಮಾರಿಸ್ ಗ್ವೆಯರ್ ಅವರು ಠಾಕೂರರಿಗೆ ಪ್ರಶಸ್ತಿ ಪತ್ರ ನೀಡಿದರು.

ಇದಾದ ಸ್ವಲ್ಪ ಕಾಲದಲ್ಲೇ ಠಾಕೂರರ ದೇಹಸ್ಥಿತಿ ತೀವ್ರವಾಗಿ ಕೆಡುತ್ತ ಹೋಯಿತು. ಅವರ ದೃಷ್ಟಿ ಮಂದವಾಯಿತು. ಓಡಾಟವೇ ಕಷ್ಟವಾಗಿ ತಳ್ಳು ಕುರ್ಚಿಯಲ್ಲಿ ಕರೆದೊಯ್ಯಬೇಕಾಯಿತು. 1940 ರ ಶರತ್ಕಾಲದಲ್ಲಿ ಅವರು ಕಲ್ಕತ್ತೆಯ ತಮ್ಮ ಪೂರ್ವಿಕರ ಮನೆಗೆ ಬಂದರು. ಕಾಳಿಂಪಾಂಗಿಗೆ ಹೋಗುವ ಅಪೇಕ್ಷೆಯನ್ನು ವ್ಯಕ್ತಪಡಿಸಿದರು. ಅವರ ವೈದ್ಯರು ಇದನ್ನು ಕೈಬಿಡುವಂತೆ ಸಲಹೆ ಮಾಡಿದರೂ ಅಲ್ಲಿಗೆ ಹೋಗಬೇಕೆಂಬ ಆಸೆ ಬಲವತ್ತರವಾಗಿದ್ದು ವೈದ್ಯರ ಸಲಹೆಯನ್ನು ಕಡೆಗಣಿಸಿ ಹೋದರು. ದುರದೃಷ್ಟದಿಂದ ಅವರ ವೈದ್ಯರ ಭಯ ನಿಜವೇ ಆಯಿತು. ಅಲ್ಲಿ ಕೆಲವು ದಿನಗಳ ನಂತರ ಅವರ ಆರೋಗ್ಯ ಎಷ್ಟು ಕೆಟ್ಟಿತೆಂದರೆ, ಅವರನ್ನು ಕಲ್ಕತ್ತೆಗೆ ವೈದ್ಯರ ಮೇಲ್ವಿಚಾರಣೆಯಲ್ಲೇ ತರಬೇಕಾಯಿತು. ಅಲ್ಲಿ ಚಿಕಿತ್ಸೆಯಾದ ನಂತರ 1940 ರ ನವೆಂಬರ್‌ನಲ್ಲಿ ಶಾಂತಿನಿಕೇತನಕ್ಕೆ ಹಿಂದಿರುಗು ವಷ್ಟು ಚೇತರಿಸಿಕೊಂಡರು.

ಅವರ ಮುಂದಿನ ಹುಟ್ಟು ಹಬ್ಬವನ್ನು ಉಚಿತ ಘನತೆಯೊಂದಿಗೆ 1941 ರ ಮೇ 8 ರಂದು ಆಚರಿಸಲಾಯಿತು. ಇಂತಹ ಸಂದರ್ಭದಲ್ಲಿ ಒಂದು ಕವನ ಅಥವಾ ಭಾಷಣದ ರೂಪದಲ್ಲಿ ಸಂದೇಶ ನೀಡುವುದು ರೂಢಿಯಾಗಿತ್ತು. ಆ ವರ್ಷ ಒಂದು ಸಂದೇಶವನ್ನು ಬರೆದುಕೊಟ್ಟರು. ಅದು ನಿರಾಸೆಯಿಂದ ತುಂಬಿತ್ತು. ಈ ನಿರಾಸೆಗೆ ಅಂದಿನ ಜಗತ್ತಿನ ಸನ್ನಿವೇಶವೇ ಕಾರಣ. ಪ್ರಬಲ ರಾಷ್ಟ್ರಗಳು ತೀವ್ರಸ್ವಾನಿಯ ಮಾರಕ ಯುದ್ಧವನ್ನು ನಡೆಸುತ್ತಿದ್ದವು. ಉಳಿದ ರಾಷ್ಟ್ರಗಳು ಯಾವ ಕ್ಷಣವಾದರೂ ಯುದ್ಧದ ಸುಳಿಗೆ ಸಿಕ್ಕುವ ಭೀತಿಯಿತ್ತು.

ಈ ಶತಮಾನದ ನಾಲ್ಕನೆಯ ದಶಕವು ಇತಿಹಾಸದ ಅತ್ಯಂತ ಕರಾಳ ಪುಟ. ಆಕ್ರಮಣಶಾಹೀ ರಾಷ್ಟ್ರೀಯತೆಯು, ಸಂಸ್ಕೃತಿ ಮತ್ತು ನೈತಿಕ ಸದ್ಗುಣಗಳನ್ನು ಅನುಸರಿಸುವ ಎಲ್ಲ ತೋರಿಕೆಯನ್ನು ಬಿಸುಟು ಅತ್ಯಂತ ವಿಕಾರ ರೂಪದಲ್ಲಿ ಕಾಣಿಸಿಕೊಂಡಿತು. ಜಪಾನೀ ಸಾಮ್ರಾಜ್ಯಶಾಹಿಯು ಕೊರಿಯ ಮತ್ತು ಮಂಚೂರಿಯ ಗಳನ್ನು ನುಂಗಿ ತೃಪ್ತಿಯಾಗದೆ ಚೀನವನ್ನು ತನ್ನ ದಾಸನನ್ನಾಗಿ ಮಾಡಿಕೊಳ್ಳಲು ನಿರ್ದಯ ಸಮರವನ್ನು ಪ್ರಾರಂಭಿಸಿತ್ತು. ಪೂರ್ವಕಾಲದ ರೋಮಿನ ಚಕ್ರವರ್ತಿಗಳ

ಪಾತ್ರವನ್ನು ಅನುಕರಿಸುವ ಕನಸನ್ನು ಕಂಡ ಇಟಲಿಯ ಸರ್ವಾಧಿಕಾರಿ ಮುಸೋಲಿನಿ ಆಫ್ರಿಕ ಖಂಡದಲ್ಲಿ ಇನ್ನೂ ರಾಜಕೀಯ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದ ಏಕಮಾತ್ರ ದೇಶ ಅಬಿಸೀನಿಯುವನ್ನು ಗೆಲ್ಲಲು ಒಂದು ಯುದ್ಧವನ್ನು ಪ್ರಾರಂಭಿಸಿದ. ಯುರೋಪಿನ ವಿಸ್ತಾರವಾದ ಭೂಭಾಗದಲ್ಲಿ ಜರ್ಮನ್ ಜನಾಂಗದ ಹಿರಿಮೆಯನ್ನು ಸ್ಥಾಪಿಸಲು ಹಿಟ್ಲರನು ಅಕ್ಕಪಕ್ಕಾದ ದೇಶಗಳನ್ನು ಗೆಲ್ಲುವುದಕ್ಕಾಗಿ ಜೈತ್ರಯಾತ್ರೆ ಹೊರಟಿದ್ದ. ಆತನು ಆಗಲೆ ಪೋಲೆಂಡನ್ನು ಆಕ್ರಮಿಸಿ ಅದನ್ನು ಸೋವಿಯತ್ ರಷ್ಯದೊಂದಿಗೆ ಹಂಚಿಕೊಂಡು ಬಿಟ್ಟಿದ್ದ. ಇದಾದ ಸ್ವಲ್ಪ ಕಾಲದಲ್ಲೆ ಫ್ರಾನ್ಸ್ ಮತ್ತು ನೆದರ್‌ಲೆಂಡ್ಸ್ ಶರಣಾಗತವಾದವು ಗ್ರೇಟ್ ಬ್ರಿಟನ್ನಿನ ಸೈನ್ಯವು ನುಚ್ಚು ನುರಿಯಾಗುವಂತಹ ಸೋಲನ್ನು ಅನುಭವಿಸಿ, ಉದ್ದೇಶಿತ ಆಕ್ರಮಣವನ್ನು ತಡೆಗಟ್ಟಲು ಉಗ್ರ ಪ್ರಯತ್ನವನ್ನು ಮಾಡಿ ತನ್ನ ದ್ವೀಪದಲ್ಲಿ ಸೇರಿಕೊಂಡು ರಕ್ಷಿಸಿ ಕೊಳ್ಳುತ್ತ ತನ್ನ ಗಾಯಗಳನ್ನು ನೆಕ್ಕುತ್ತಿತ್ತು.

ಇಂತಹ ಮಬ್ಬು ಹಿನ್ನೆಲೆಯಲ್ಲಿ ಠಾಕೂರರನ್ನು ಸಹಜವಾಗಿ ನಿರಾಸೆ ಮುತ್ತಿತು. ಈ ಮಹಾಪ್ರಳಯದಲ್ಲಿ ಅವರು ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ತಾಂತ್ರಿಕ ಕೌಶಲದ ಲಾಭ ಪಡೆದು ಕಾತರದಿಂದ ಪಾಲಿಸಿದ ನಿಷ್ಕರುಣ ಮತ್ತು ದುರಾಶಾಪೂರಿತ ರಾಷ್ಟ್ರೀಯತೆಯ ತರ್ಕಬದ್ಧ ಪರಿಣಾಮವನ್ನೆ ಕಂಡರು. ವಾಸ್ತವ ವಾಗಿ, ಜಗತ್ತಿನ ಮೊದಲನೆಯ ಮಹಾಯುದ್ಧದ ಕಾಲದಲ್ಲಿಯೂ ಇಂತಹ ಅನುಭವದಿಂದಲೆ ಅವರು ನೊಂದಿದ್ದರು. ಜಗತ್ತಿನ ವಿವಿಧ ಭಾಗಗಳಿಗೆ ಭೇಟಿ ನೀಡಿದಾಗ ಅವರು ರಾಷ್ಟ್ರೀಯತೆಯ ಈ ರೂಪವನ್ನು ಖಂಡಿಸಲು ಹಿಂದೆಗೆದಿರ ಲಿಲ್ಲ.

1917 ರಲ್ಲಿ, ಮೊದಲನೆಯ ಮಹಾಯುದ್ಧ ಪ್ರಜ್ವಲಿಸುತ್ತಿದ್ದಾಗಲೆ ಅವರು ಸಾಮ್ರಾಜ್ಯಶಾಹಿಯಿಂದ ಶಕ್ತಿಗೂಡಿಸಿಕೊಳ್ಳುವ ರಾಷ್ಟ್ರೀಯತೆಯ ವಿರುದ್ಧ ಈ ಮಾತುಗಳಲ್ಲಿ ಪ್ರತಿಭಟನೆ ಸಾರಿದ್ದರು:

"ಬಹು ಕಾಲದಿಂದ ರಾಷ್ಟ್ರವು ಊನಗೊಂಡ ಮಾನವ ಕುಲದಿಂದಲೇ ಬಲಗೊಳ್ಳುತ್ತದೆ. ಮನುಷ್ಯರು ಭಗವಂತನ ಅತ್ಯಂತ ಸುಂದರ ಸೃಷ್ಟಿ. ಆದರೆ ಯುದ್ಧಾಸಕ್ತರೂ ಹಣಗಳಿಸುವವರೂ ಆದ ಗೊಂಬೆಗಳಾಗಿ ಲಕ್ಷಾಂತರ ಮಂದಿ ರಾಷ್ಟ್ರೀಯ ಕಾರ್ಖಾನೆಗಳಿಂದ ಹೊರಬೀಳುತ್ತಿದ್ದರು. ತಮ್ಮ ಕರುಣಾಜನಕ

ಯಾಂತ್ರಿಕ ಪರಿಪೂರ್ಣತೆಗಾಗಿ ಅವರು ಹೆಮ್ಮೆಯಿಂದ ಬೀಗುತ್ತಿದ್ದರು. ಮಾನವ ಸಮಾಜವು, ಹೆಚ್ಚು ಹೆಚ್ಚಾಗಿ, ಅಚ್ಚರಿಯಾಗುವಂತಹ ದಕ್ಷತೆಯ ತಂತಿಗಳ ವ್ಯವಸ್ಥೆಯು ಎಳೆಯುವ ರಾಜಕಾರಣಿಗಳು, ಸೈನಿಕರು, ಉತ್ಪಾದಕರು ಮತ್ತು ಆಡಳಿತಾಧಿಕಾರಿಗಳು ಇವರ ತೊಗಲು ಗೊಂಬೆಗಳ ಪ್ರದರ್ಶನವಾಗಿ ಬೆಳೆಯಿತು."*

ಈ ಸಂದರ್ಭದಲ್ಲಿ ಸಾಮ್ರಾಜ್ಯಶಾಹಿ ಪ್ರಬಲ ರಾಷ್ಟ್ರಗಳು ಯುದ್ಧದಲ್ಲಿ ತೊಡಗಿದ್ದು ಇನ್ನೂ ಮಾರಕ ಪ್ರಮಾಣವನ್ನು ಪಡೆಯಿತು. ಠಾಕೂರರು ಇದರಲ್ಲಿ "ದುರಹಂಕಾರೀ ಶಕ್ತಿಯು ಸೆರಿಗೆ ಕಟ್ಟಿದ ಅಪಾಯಗಳು" ಎಂತಹವು ಎಂಬುದನ್ನು ತೋರಿಸುವ ವಿಧಿಯ ಎಚ್ಚರಿಕೆಯನ್ನು ಕಂಡರು. ತಾವು ಮಾನವಕೋಟಿಯನ್ನು ಎಚ್ಚರಿಸುವ ಧ್ವನಿಯನ್ನು ಎತ್ತಬೇಕೆಂದು ಅವರಿಗೆ ತೋರಿತು. ಇದರ ಪರಿಣಾಮವಾಗಿ ಇದೇ ಅವರ ಸಂದೇಶದ ಪಲ್ಲವಿಯಾಯಿತು. ಮುಂದೆ ಇದು ಇಂಗ್ಲಿಷಿಗೆ ಅನುವಾದವಾಗಿ 'ದ ಕ್ರೈಸಿಸ್ ಆಫ್ ಸಿವಿಲಿಜೇಷನ್' ಎಂಬ ಹೆಸರಿನಲ್ಲಿ ಪ್ರಕಟವಾಯಿತು. ತಮ್ಮ ಭಾಷಣದಲ್ಲಿ ಅವರು ಹೀಗೆಂದರು:

"ಈ ನಡುವೆ ಅನಾಗರಿಕತೆಯ ಪಿಶಾಚಿಯು ಎಲ್ಲ ನಟನೆಯನ್ನೂ ಬಿಟ್ಟು, ವಿನಾಶದ ಸ್ವೇಚ್ಛಾಚಾರದಲ್ಲಿ ಮಾನವಕೋಟಿಯನ್ನು ಹರಿದು ತಿನ್ನಲು ವಿಷದ ಹಲ್ಲುಗಳನ್ನು ತೋರುತ್ತ ಹೊರಬಿದ್ದಿದೆ. ಜಗತ್ತಿನ ಒಂದು ಕೊನೆಯಿಂದ ಇನ್ನೊಂದು ಕೊನೆಯವರೆಗೆ ದ್ವೇಷದ ವಿಷಮಯ ಹೊಗೆಯು ವಾತಾವರಣವನ್ನು ಕಪ್ಪುಗೊಳಿಸುತ್ತದೆ. ಪ್ರಾಯಶ: ಪಶ್ಚಿಮದ ಮನೋವೃತ್ತಿಯಲ್ಲಿ ಸುಪ್ತವಾಗಿ ಅಡಗಿದ್ದ ಹಿಂಸೆಯು ಕಡೆಗೂ ಎಚ್ಚರಗೊಂಡು ಮನುಷ್ಯನ ಚೇತನವನ್ನೆ ಹೊಲೆಗೆಡಿಸುತ್ತಿದೆ."

ಆದರೆ ಮಾನವ ಕುಲವನ್ನು ನಿಜವಾಗಿ ಪ್ರೀತಿಸುತ್ತಿದ್ದ ಅವರು ಆಶಾದಾಯಕ ಧ್ವನಿಯನ್ನು ನುಡಿಸದೆ ಮುಕ್ತಾಯ ಮಾಡುವಂತಿರಲಿಲ್ಲ, ನಾವು ಮನುಷ್ಯನಲ್ಲಿ ವಿಶ್ವಾಸವನ್ನು ಸಂಪೂರ್ಣವಾಗಿ ಕಳೆದುಕೊಳ್ಳದಿದ್ದಲ್ಲಿ ಬದುಕದೆ ಬೇರೆ ದಾರಿಯಿಲ್ಲ. ಆದ್ದರಿಂದ ಮಾನವ ಕೋಟಿಗೆ ಠಾಕೂರರ ಎಚ್ಚರಿಕೆಯು ಈ ಕೆಳಗಿನ ರೀತಿಯಲ್ಲಿ ಮುಕ್ತಾಯವಾದದ್ದು ಅರ್ಥವಾಗುವ ವಿಷಯ:

* "ನ್ಯಾಷನಲಿಸಂ"-ನ್ಯಾಷನಲಿಸಂಇನ್ ದಿ ವೆಸ್ಟ್

"ನಾನು ಸುತ್ತ ನೋಡಿದಾಗ ಹೆಮ್ಮೆಯ ನಾಗರಿಕತೆಯು ಪುಡಿಯಾಗುತ್ತಿರುವ ಅವಶೇಷಗಳು ನಿರರ್ಥಕತೆಯ ಬೃಹದ್ ರಾಶಿಯಂತೆ ಬಿದ್ದಿರುವುದನ್ನು ಕಾಣುತ್ತೇನೆ. ಆದರೂ ಮಾನವನಲ್ಲಿ ವಿಶ್ವಾಸವನ್ನು ಕಳೆದುಕೊಳ್ಳುವ ಮಹಾ ಪಾಪವನ್ನು ಮಾಡುವುದಿಲ್ಲ. ಈ ಪ್ರಳಯವು ಮುಗಿದು, ಸೇವೆ ಮತ್ತು ತ್ಯಾಗಗಳ ಚೇತನದಿಂದ ವಾತಾವರಣವು ಪರಿಶುದ್ಧವಾದ ನಂತರ ಮಾನವನ ಇತಿಹಾಸದಲ್ಲಿ ಹೊಸದೊಂದು ಅಧ್ಯಾಯವು ಪ್ರಾರಂಭವಾಗುವ ಭವಿಷ್ಯದತ್ತ ಕಣ್ಣನ್ನೊಡಿಸಬೇಕೆಂದು ನನ್ನ ಆಸೆ."

ಇದಾದ ನಂತರ ಅವರು ಹೆಚ್ಚು ಕಾಲ ಬದುಕಲಿಲ್ಲ. ಆ ವರ್ಷದ ಹುಟ್ಟು ಹಬ್ಬವೇ ಅವರು ಕಂಡ ಕಡೆಯ ಹುಟ್ಟು ಹಬ್ಬವಾಯಿತು. 1941 ರ ಜುಲೈ ತಿಂಗಳಿನಲ್ಲಿ ಅವರ ಸ್ಥಿತಿ ಎಷ್ಟು ವಿಷಮಿಸಿತ್ತೆಂದರೆ ಜುಲೈ 25 ರಂದು ಚಿಕಿತ್ಸೆಗಾಗಿ ಅವರನ್ನು ಕಲ್ಕತ್ತೆಯ ನಿವಾಸಕ್ಕೆ ಕರೆದುಕೊಂಡು ಹೋಗಬೇಕಾಯಿತು. ಐದು ದಿನಗಳ ನಂತರ ಜುಲೈ 30 ರಂದು ಅವರಿಗೆ ಶಸ್ತ್ರಚಿಕಿತ್ಸೆಯಾಯಿತು. ಅತ್ಯುತ್ತಮ ವೈದ್ಯಕೀಯ ನೆರವು ದೊರೆತರೂ ಅವರು ಚೇತರಿಸಿಕೊಳ್ಳಲಿಲ್ಲ. ಜೀವವು ದೇಹ ದಿಂದ ನಿಧಾನವಾಗಿ ಹರಿದು ಹೋಗಿ, 1941 ರ ಆಗಸ್ಟ್ 7 ರಂದು ಮಧ್ಯಾಹ್ನ ಶಾಂತವಾಗಿ ಕೊನೆಯುಸಿರೆಳೆದರು.

ಕಲ್ಕತ್ತೆಯು ತನ್ನ ಇತಿಹಾಸದಲ್ಲಿ ಕಂಡು ಕೇಳರಿಯದಂತಹ ದೃಶ್ಯವನ್ನು ಕಂಡಿತು. ಅಂತ್ಯಕ್ರಿಯೆಗಾಗಿ ಠಾಕೂರರ ದೇಹವನ್ನು ಹೂಗ್ಲಿಯ ತೀರಕ್ಕೆ ಕೊಂಡೊಯ್ದಾಗ ಸಾವಿರಾರು ಜನರು ತಮ್ಮ ಪ್ರೀತಿಯ ಕವಿಯ ಕಡೆಯ ದರ್ಶನ ಕ್ಕಾಗಿ ಕಿಕ್ಕಿರಿದರು. ಸಂಜೆಯ ಸೂರ್ಯನೊಡನೆ ಉರಿಯುತ್ತಿದ್ದ ಚಿತೆಯಲ್ಲಿ ಅವರ ದೇಹದ ಎಲ್ಲ ಗುರುತು ಕಣ್ಮರೆಯಾಯಿತು.

ಅವರ ಕಾವ್ಯದಷ್ಟೇ ಮನಮೋಹಕವಾದ ಘಟನೆಗಳಿಂದ ತುಂಬಿದ ಮತ್ತು ಭವ್ಯವಾದ ಅವರ ಬಾಳು ಹೀಗೆ ಮುಕ್ತಾಯವಾಯಿತು. ಠಾಕೂರರು ಭಾರತದ ಸಂಸ್ಕೃತಿಯ ಶ್ರೇಷ್ಠ ಸಾರವನ್ನು ಪ್ರತಿನಿಧಿಸುತ್ತಿದ್ದರು ಮತ್ತು ಭಾರತದ ವಾಣಿಯಾಗಿ ಕರ್ತವ್ಯನಿರತರಾಗಿದ್ದರು. ಸಾವು ಸಹ ಅವರ ವಾಣಿಯನ್ನು ಸುಮ್ಮನಾಗಿಸಲು ಸಮರ್ಥವಾಗಲಿಲ್ಲ. ಮೃತ್ಯುವಿನಲ್ಲಿ ಕಣ್ಮರೆಯಾದ ಠಾಕೂರರು ತಮ್ಮ ಬರಹ ಗಳಿಂದ ಭಾರತದ ವಾಣಿಯಾಗಿ ಶ್ರಮಿಸುತ್ತಿದ್ದಾರೆ.

ಅನುಬಂಧ-ಅ

ವಂಶವೃಕ್ಷಗಳ ಪಟ್ಟಿ

ನಕ್ಷೆ I

ಪಂಚಾನನ

ಸಂತೋಷರಾಮ್ ಜಯರಾಮ್

ಆನಂದೀರಾಮ್ ನೀಲಮಣಿ ದರ್ಪನಾರಾಯಣ ಗೋವಿಂದರಾಮ ಸಿದ್ಧೇಶ್ವರಿ

ರಾಮಲೋಚನ ರಾಮಮಣಿ ರಾಮವಲ್ಲಭ ಕಮಲಮಣಿ

ನಕ್ಷೆ II–ಅ

ರಾಮಲೋಚನ
ಮ. ಮೇನಕಾದೇವಿ

ದ್ವಾರಕನಾಥ (ದತ್ತು ಮಗ) (1794—1846)
ಮ. ದಿಗಂಬರ ದೇವಿ

ದೇವೇಂದ್ರನಾಥ (1817-1905) ಗಿರೀಂದ್ರನಾಥ (1820-1854) ನಾಗೇಂದ್ರನಾಥ (1829-1858)

ನಕ್ಷೆ II–ಆ

ರಾಮಮಣಿ (1956—1833)
ಮ. ಅಲಕಾ ದೇವಿ

ರಾಧಾನಾಥ (1790-1830) ದ್ವಾರಕನಾಥ (ಚಿಕ್ಕಪ್ಪ ರಾಮಮಣಿ ದತ್ತು ತೆಗೆದುಕೊಂಡರು)

ನಕ್ಷೆ III-ಅ

ದೇವೇಂದ್ರನಾಥ (1817—1905)

ಮ. ಶಾರದಾ ದೇವಿ
ಮಗಳು (ಅಲ್ಪಾಯು)

ದ್ವಿಜೇಂದ್ರನಾಥ (1840—1926)
ಮ. ಸರ್ವಸುಂದರಿ ದೇವಿ

ಸತ್ಯೇಂದ್ರನಾಥ (1842—1923)
ಮ. ಜ್ಞಾನದಾನಂದಿನಿ ದೇವಿ

ಹೇಮೇಂದ್ರನಾಥ (1844—1881)
ಮ. ನೀಪಮಯ ದೇವಿ

ಬೀರೇಂದ್ರನಾಥ (1844—1915)
ಮ. ಪ್ರಫುಲ್ಲಮಯ ದೇವಿ

ಸೌದಾಮಿನೀ ದೇವಿ (1844—1915)
ಮ. ಶಾರದಾ ಪ್ರಸಾದದೇ ಪ್ರಸಾದ ಗಂಗೂಲಿ

ಜ್ಯೋತಿರಿಂದ್ರನಾಥ (1849—1925)
ಮ. ಕಾದಂಬರೀ ದೇವಿ

ಸುಕುಮಾರಿ ದೇವಿ (1850—1861)
ಮ. ಹೇಮೇಂದ್ರನಾಥ ಮುಖರ್ಜಿ

ಪುಣ್ಯೇಂದ್ರನಾಥ (1851—1857)

ಶರತ್‌ಕುಮಾರಿ ದೇವಿ (1854—1920)
ಮ. ಜಗೂನಾಥ ಮುಖರ್ಜಿ

ಸ್ವರ್ಣಕುಮಾರಿ ದೇವಿ (1856—1922)
ಮ. ಜಾನಕೀನಾಥ ಘೋಸಲ್

ವರ್ಣಕುಮಾರಿ ದೇವಿ (1858—1981)
ಮ, ಸತೀಶಚಂದ್ರ ಮುಖರ್ಜಿ

ಸೋಮೇಂದ್ರನಾಥ (1859—1922)

ರವೀಂದ್ರನಾಥ (1861—1941)
ಮ. ಮೃಣಾಲನಿ ದೇವಿ

ಬುಧೇಂದ್ರನಾಥ (1863—1864)

ನಕ್ಷೆ III–ಆ

ಗಿರೀಂದ್ರನಾಥ (1820—1854)
ಮ. ಯೋಗಮಾಯಾ ದೇವಿ

ಗಣೇಂದ್ರನಾಥ (1841—1969) | ಕಾದಂಬಿನಿ | ಕುಮುದಿನಿ | ಗುಣೇಂದ್ರನಾಥ (1847—1881) ಮ. ಸೌದಾಮಿನಿ ದೇವಿ

ಗುಣೇಂದ್ರನಾಥರ ಮಕ್ಕಳು:

ಗಗನೇಂದ್ರನಾಥ (1867-1938) | ಸಮರೇಂದ್ರನಾಥ (1870-1 51) | ಅಬನೀಂದ್ರನಾಥ (1871-1951) | ವಿನಯಾನಿದೇವಿ | ಸುನಯನಿದೇವಿ

ವಿನಯಾನಿದೇವಿ — ಪ್ರತಿಮಾ ದೇವಿ

ನಕ್ಷೆ IV

ರವೀಂದ್ರನಾಥ (1861—1941)
ಮ. ಮೃಣಾಲಿನಿ ದೇವಿ

ಮಾಧುರಿಲತ (1886-1918) ಶರತ್ ಚಂದ್ರ ಚಕ್ರವರ್ತಿ (ಮಕ್ಕಳಾಗಲಿಲ್ಲ) | ರತೀಂದ್ರನಾಥ (1888-1961) ಪ್ರತಿಮಾದೇವಿ (ಮಕ್ಕಳಾಗಲಿಲ್ಲ) | ರೇಣುಕಾ (1890-1903) | ಮೀರಾ (1892-1969) ಮ. ನಾಗೇಂದ್ರ ನಾಥ ಗಂಗೂಲಿ | ಶಮೀಂದ್ರನಾಥ (1894-1907)

ಮೀರಾರ ಮಕ್ಕಳು:

ನೀತೀಂದ್ರನಾಥ (1912—1932) | ನಂದಿತಾ (1916—1967) ಮ. ಕೃಷ್ಣ ಕೃಪಲಾನಿ (ಮಕ್ಕಳಾಗಲಿಲ್ಲ)

ಅನುಬಂಧ-ಆ

ರವೀಂದ್ರನಾಥ ಠಾಕೂರರ ಮುಖ್ಯ ಕೃತಿಗಳ ಪಟ್ಟಿ
(ಪ್ರಕಟವಾದ ಅನುಕ್ರಮದಲ್ಲಿ)

I
ಬಂಗಾಳಿಯಲ್ಲಿ

1878	ಕವಿಕಾಹಿನಿ	ಕಾವ್ಯ
1880	ವನಫೂಲ್	ವೃತ್ತಾಂತ ಕವನ
1881	ವಾಲ್ಮೀಕಿ ಪ್ರತಿಭಾ	ಗೀತ ನಾಟಕ
	ಭಗ್ನ ಹೃದಯ	ಕವನ ಸಂಕಲನ
	ರುದ್ರ ಚಂಡ	ಕಿರು ನಾಟಕ
1882	ಸಂಧ್ಯಾ ಸಂಗೀತ	ಕವನ ಸಂಕಲನ
	ಕಾಳ ಮೃಗಯಾ	ಗೀತ ನಾಟಕ
1883	ಬಹೂ—ಠಾಕೂರಾಣಿಯರ್ ಹಾತ್	ಕಾದಂಬರಿ
	ಪ್ರಭಾತ್ ಸಂಗೀತ್	ಕವನ ಸಂಕಲನ
1884	ಛಬೀ ಓ ಗಾನ	ಕವನ ಸಂಕಲನ
	ಪ್ರಕೃತೀರ್ ಪ್ರತಿಶೋಧ್	ಪದ್ಯ ನಾಟಕ
	ನಳಿನಿ	ನಾಟಕ
	ಶೈಶವ್ ಸಂಗೀತ್	ಕವನ ಸಂಕಲನ
	ಭಾನುಸಿಂಘ್ ಠಾಕೂರರ ಪದಾವಳಿ	ಹಿಂದಿನ ವೈಷ್ಣವ ಶೈಲಿಯಲ್ಲಿ ರಚಿಸಿದ ಕವನಗಳು
1886	ಕರಿ ಓ ಕೋಮಲ್	ಕವನ ಸಂಕಲನ

1887	ರಾಜಶ್ರೀ	ಕಾದಂಬರಿ
1888	ಮಾಯರ್ ಖೇಲಾ	ಗೀತನಾಟಕ
1889	ರಾಜಾ ಓ ರಾಣಿ	ಪದ್ಯ ನಾಟಕ
1890	ವಿಸರ್ಜನ್	ರಾಜಶ್ರೀ ಕಾದಂಬರಿ ಆಧಾರಿತ ಪದ್ಯ ನಾಟಕ
	ಮಾನಸೀ	ಕವನ ಸಂಗ್ರಹ
1892	ಚಿತ್ರಾಂಗದಾ	ಪದ್ಯ ನಾಟಕ
	ಗೋರೇ ಗಾಲದ್	ಹಾಸ್ಯ ನಾಟಕ
1891	ಸೋನಾರ್ ತಾರೀ	ಕವನ ಸಂಕಲನ
	ಚೋಟ ಗಲ್ಪಾ	ಸಣ್ಣ ಕಥೆಗಳು
(1984)	ವಿಚಿತ್ರ ಗಲ್ಪಾ	ಸಣ್ಣ ಕಥೆಗಳು
	ಕಥಾ ಚತುಷ್ಟಯ್	ಸಣ್ಣ ಕಥೆಗಳು
1895	ಗಲ್ಪಾ—ದಶಕ್	ಸಣ್ಣ ಕಥೆಗಳು
1896	ನಾಡಿ	ನೀಳಕವನ
	ಚಿತ್ರ	ಕವನ ಸಂಕಲನ
1897	ವೈಕುಂಠರ್ ಕಥಾ	ಹಾಸ್ಯ ನಾಟಕ
1899	ಕಾಣಿಕಾ	ಕವನ ಸಂಕಲನ
1900	ಕಥಾ	ವೃತ್ತಾಂತ ಕವನಗಳು
	ಕಾಹಿನೀ	ವೃತ್ತಾಂತ ಕವನಗಳು ಮತ್ತು ಸರಳ ರಗಳೆಯಲ್ಲಿ ಕಿರು ನಾಟಕಗಳು
	ಕಲ್ಪನ	ಕವನ ಸಂಕಲನ
	ಕ್ಷಣಿಕ	ಕವನ ಸಂಕಲನ
1901	ನೈವೇದ್ಯ	ಬಹುಮಟ್ಟಿಗೆ ಸುನೀತಗಳನ್ನೊಳಗೊಂಡ ಕವನ ಸಂಕಲನ

1903	ಚೋಖೇರ್ ಬಾಲಿ	ಕಾದಂಬರಿ
	ಕರ್ಮಫಲ್	ಕತೆ
1906	ಖೇಯು	ಕವನ ಸಂಕಲನ
	ನೌಕಾ ದುಬಿ	ಕಾದಂಬರಿ
1907	ಪ್ರಾಚೀನ್ ಸಾಹಿತ್ಯ	ಸಾಹಿತ್ಯ ವಿಮರ್ಶೆ
	ಆಧುನಿಕ ಸಾಹಿತ್ಯ	ಸಾಹಿತ್ಯ ವಿಮರ್ಶೆ
	ಹಾಸ್ಯ ಕೌತುಕ್	ಹಾಸ್ಯ ಚಿತ್ರಗಳು
	ವ್ಯಂಗ್ಯ ಕೌತುಕ್	ಹಾಸ್ಯ ಚಿತ್ರಗಳು
1908	ಪ್ರಜಾಪತಿರ್ ನಿರ್ಬಂಧ	ಕಾದಂಬರಿ ಅನಂತರ 'ಚಿರಕುಮಾರ ಸಭಾ' ಎಂದು ಹೆಸರಿಡಲಾಯಿತು. ಸ್ವಲ್ಪ ಕಾಲದ ನಂತರ ನಾಟಕ ರೂಪ ಪ್ರಕಟವಾಯಿತು.
	ಶಾರದೋತ್ಸವ	ನಾಟಕ
	ಮುಕುಟ್	ಕಿರುನಾಟಕ
1909	ಶಾಂತಿನಿಕೇತನ್ (ಭಾಗಗಳು 1–8)	ಧರ್ಮ ಮತ್ತು ತತ್ವಜ್ಞಾನ ವನ್ನು ಕುರಿತ ಉಪನ್ಯಾಸಗಳು
	ಶಿಶು	ಮಕ್ಕಳ ಪದ್ಯಗಳ ಸಂಕಲನ
1910	ಶಾಂತಿನಿಕೇತನ್ (ಭಾಗಗಳು 9–11)	ಧರ್ಮ ಮತ್ತು ತತ್ವಜ್ಞಾನ ವನ್ನು ಕುರಿತ ಉಪನ್ಯಾಸಗಳು
	ಗೋರಾ	ಕಾದಂಬರಿ
	ಗೀತಾಂಜಲಿ	ಕವನಗಳು, ಗೀತಗಳು
	ರಾಜಾ	ಸಾಂಕೇತಿಕ ನಾಟಕ
1911	ಶಾಂತಿ ನಿಕೇತನ (ಭಾಗಗಳು 12–13)	ಧರ್ಮ ಮತ್ತು ತತ್ತ್ವಜ್ಞಾನ ವನ್ನುಕುರಿತ ಉಪನ್ಯಾಸಗಳು
1912	ಡಾಕ್‌ಘರ್	ಅನ್ಯಾರ್ಥ ನಾಟಕ
	ಗಲ್ಪ ಚರಿತಿ	ಸಣ್ಣ ಕಥೆಗಳು
	ಮಾಲಿನಿ	ನಾಟಕ
	ಅತ್ತಿ ಗಲ್ಪ	ಸಣ್ಣ ಕಥೆಗಳು

	ಚೈತಾಲಿ	ಕವನ ಸಂಕಲನ
	ಜೀವನ್ ಸ್ಮೃತಿ	ಜೀವನ ನೆನಪುಗಳು
	ಅಚಲಾಯತನ್	ಸಾಂಕೇತಿಕ ನಾಟಕ
1914	ಸ್ಮರಣ್	ತೀರಿಕೊಂಡ ಅವರ ಹೆಂಡತಿಯನ್ನು ಕುರಿತ ಕವನಗಳ ಸಂಕಲನ
	ಉತ್ಸರ್ಗ	ಕವನ ಸಂಕಲನ
	ಗೀತಿಮಾಲ್ಯ	ಗೀತಗಳು, ಕವನಗಳು
	ಗೀತಾಲಿ	ಗೀತಗಳು, ಕವನಗಳು
1915	ಶಾಂತಿನಿಕೇತನ್ (ಭಾಗ 14)	ಧರ್ಮ ಮತ್ತು ತತ್ವಜ್ಞಾನವನ್ನು ಕುರಿತ ಉಪನ್ಯಾಸಗಳು
1916	ಶಾಂತಿನಿಕೇತನ್ (ಭಾಗಗಳು 15-17)	ಧರ್ಮ ಮತ್ತು ತತ್ವಜ್ಞಾನವನ್ನು ಕುರಿತ ಉಪನ್ಯಾಸಗಳು
	ಫಲ್ಗುಣಿ	ನಾಟಕ
	ಘರೇ ಬೈರೇ	ಕಾದಂಬರಿ
	ಬಲಾಕ	ನೀಳ್ಗವನಗಳು
	ಚದುರಂಗ	ಕಾದಂಬರಿ
	ಗಲ್ಪ ಸಪ್ತಕ	ಸಣ್ಣ ಕಥೆಗಳು
1918	ಗುರು	'ಅಚಲಾಯತನ' ನಾಟಕದ ಪರಿಷ್ಕೃತ ರೂಪ
	ಪಲಾತಕಾ	ವೃತ್ತಾಂತ ಕವನಗಳು
1920	ಅರೂಪತನ್	ಸಾಂಕೇತಿಕ ನಾಟಕ 'ರಾಜಾ' ದ ಪರಿಷ್ಕೃತ ರೂಪ
	ಪಯ್ಲಾ ನಂಬರ್	ಕತೆ
1921	ಋಣ ಶೋಧ್	ಕಿರು ನಾಟಕ 'ಶಾರದೋತ್ಸವ'ದ ಪರಿಷ್ಕೃತ ರೂಪ

1922	ಮುಕ್ತಧಾರಾ	ಸಾಂಕೇತಿಕ ನಾಟಕ
	ಲಿಪಿಕಾ	ಗದ್ಯ ಕವನಗಳು
	ಶಿಶು ಭೋಲಾನಾಥ್	ಮಕ್ಕಳ ಪದ್ಯಗಳ ಸಂಕಲನ
1925	ಪೂರಬೀ	ಕವನ ಸಂಕಲನ
	ಗೃಹಪ್ರವೇಶ	ನಾಟಕ
	ಪ್ರವಾಹಿನಿ	ಗೀತೆಗಳು
1926	ಚಿರಕುಮಾರ ಸಭಾ	'ಪ್ರಜಾಪತಿರ್ ನಿರ್ಬಂಧ'ದ ನಾಟಕ ರೂಪ
	ಸದ್ಬೋಧ	ನಾಟಕ
	ರಕ್ತ ಕರವೀ	ಸಾಂಕೇತಿಕ ನಾಟಕ
1927	ಋತು ರಂಗ	ಗೀತ ನಾಟಕ
1928	ಶೇಷ ರಕ್ಷ	ಹಾಸ್ಯ ನಾಟಕ 'ಗೋರೇ ಗಲದ್'ನ ಪರಿಷ್ಕೃತ ರೂಪ
1929	ಯೋಗಾಯೋಗ	ಕಾದಂಬರಿ
	ಶೇಷರ್ ಕವಿತಾ	ಕಾದಂಬರಿ
	ತಪತಿ	ನಾಟಕ 'ರಾಜಾ ಓ ರಾಣಿ'ಯ ಗದ್ಯರೂಪ
	ಮಾಹು ಆ	ಕವನ ಸಂಕಲನ.
1931	ವನವಾಣಿ	ಗೀತಗಳು, ಕವನಗಳು
	ಶಾಪಮೋಚನ	ಹಾಡುಗಳು ಕಿರುನಾಟಕ
1932	ಪುನಶ್ಚ	ಗದ್ಯ ಕವನಗಳು
1933	ದುಯಿ ವನ್	ಕಾದಂಬರಿ
	ಮನುಷೇರ್ ಧರ್ಮ	ಕಲ್ಕತ್ತ ವಿಶ್ವವಿದ್ಯಾನಿಲಯದಲ್ಲಿ ಮಾಡಿದ ಕಮಲಾ ಉಪನ್ಯಾಸಗಳು

(1933)	ಚಂಡಾಲಿಕಾ	ನೃತ್ಯ ನಾಟಕ
	ತಾಸೇರ್ ದೇಶ್	ಸಾಂಕೇತಿಕ ನಾಟಕ
	ಬನ್‌ಷಾರಿ	ನಾಟಕ
1934	ಮಾಲಾಂಥ	ಕಾದಂಬರಿ
	ಚಾರ್ ಅಧ್ಯಾಯ್	ಕಾದಂಬರಿ
1935	ಶೇಷ ಸಪ್ತಕ್	ಗದ್ಯ ಕವನಗಳು
	ಬಿತಿಕಾ	ಕವನ ಸಂಕಲನ
936	ಚಿತ್ರಾಂಗದಾ	ಮೂಲ ಪದ್ಯ ನಾಟಕದ ಆಧಾರದಿಂದ ರಚಿಸಿದ ನೃತ್ಯ ನಾಟಕ
	ಪತ್ರಪುತ್	ಗದ್ಯ ಕವನಗಳು
	ಶ್ಯಾಮಲೀ	ಗದ್ಯ ಕವನಗಳು
1937	ಖಾಪ್‌ಛಾರಾ	ಅಸಂಬದ್ಧ ಕವನಗಳು
1938	ಪ್ರಾಂತಿಕ್	ಕವನ ಸಂಕಲನ
	ಚಂಡಾಲಿಕಾ	ನೃತ್ಯಾ ನಾಟಕ
	ಸೆನ್‌ಜುತಿ	ಕವನ ಸಂಕಲನ
1939	ಪ್ರಹಸಿನಿ	ಕವನ ಸಂಕಲನ
	ಆಕಾಶ್ ಪ್ರದೀಪ್	ಕವನ ಸಂಕಲನ
	ಶ್ಯಾಮಾ	ನೃತ್ಯ ನಾಟಕ
1940	ನವಜಾತಕ	ಕವನ ಸಂಕಲನ
	ಷನಾಯಿ್	ಕವನ ಸಂಕಲನ
	ಛೆಲೆಬೆಲಾ	ಶೈಶವದ ಸ್ಮೃತಿಗಳು
	ರೋಗ ಶಯ್ಯಾಯ್	ಕವನ ಸಂಕಲನ
1941	ಆರೋಗ್ಯ	ಕವನ ಸಂಕಲನ
	ಜನ್ಮ ದಿನ	ಕಮ ಸಂಕಲನ
	ಗಲ್ಪ ಸಲ್ಪ	ಕವನಗಳು ಮತ್ತು ಕತೆಗಳು
	ಸಭ್ಯತಾರ್ ಸಂಕಟ್	ಕಡೆಯ ಹುಟ್ಟು ದಿನದ ಭಾಷಣ.

II

(ಇಂಗ್ಲಿಷಿನಲ್ಲಿ)

(ಅವರೇ ಮಾಡಿದ ಅನುವಾದಗಳೂ ಸೇರಿದಂತೆ)

1912	ಗೀತಾಂಜಲಿ	ಸ್ವಂತ ಬಂಗಾಳಿ ಕವನಗಳಿಂದ ಅನುವಾದ
1913	ದ ಗಾರ್ಡ್‌ನರ್	ಸ್ವಂತ ಬಂಗಾಳಿ ಕವನಗಳಿಂದ ಅನುವಾದ
	ಕ್ರೆಸೆಂಟ್ ಮೂನ್	ಸ್ವಂತ ಬಂಗಾಳಿ ಕವನಗಳಿಂದ ಅನುವಾದ
	ಚಿತ್ರಾ	ಸ್ವಂತ ನಾಟಕ 'ಚಿತ್ರಾಂಗದ'ದ ಅನುವಾದ
1914	ಸಾಧನಾ	1912–13 ರಲ್ಲಿ ಅಮೆರಿಕದಲ್ಲಿ ಮಾಡಿದ ಉಪನ್ಯಾಸಗಳು
1917	ನ್ಯಾಷನಲಿಸಮ್	1916–17 ರಲ್ಲಿ ಜಪಾನ್ ಮತ್ತು ಅಮೆರಿಕಗಳಲ್ಲಿ ಮಾಡಿದ ಉಪನ್ಯಾಸಗಳು
	ಪರ್ಸನಾಲಿಟಿ	1916–17 ರಲ್ಲಿ ಜಪಾನ್ ಮತ್ತು ಅಮೆರಿಕಗಳಲ್ಲಿ ಮಾಡಿದ ಉಪನ್ಯಾಸಗಳು
1919	ದ ಸೆಂಟರ್ ಆಫ್ ಇಂಡಿಯನ್ ಕಲ್ಚರ್	ಇಂಗ್ಲಿಷಿನಲ್ಲಿ ಉಪನ್ಯಾಸಗಳು
1922	ಕ್ರಿಯೇಟಿವ್ ಯೂನಿಟಿ	ಇಂಗ್ಲಿಷಿನಲ್ಲಿ ಪ್ರಬಂಧಗಳು
1925	ಟಾಕ್ಸ್ ಇನ್ ಚೈನ	ಚೀನದಲ್ಲಿ ಮಾಡಿದ ಉಪನ್ಯಾಸಗಳು
1928	ಫೈರ್ ಫ್ಲೈಸ್	ಸ್ವಂತ ಬಂಗಾಳಿ ಕವನಗಳಿಂದ ಅನುವಾದ
	ಲೆಕ್ಚರ್ಸ್ ಅಂಡ್ ಆಡ್ರೆಸಸ್	ಉಪನ್ಯಾಸಗಳಿಂದ ಆಯ್ದವು
1931	ದ ಚೈಲ್ಡ್	ಇಂಗ್ಲಿಷಿನಲ್ಲಿ ಒಂದು ಸಾಂಕೇತಿಕ ಕವನ
	ದ ರಿಲಿಜನ್ ಆಫ್ ಮ್ಯಾನ್	ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಮಾಡಿದ ಹಿಬ್ಬರ್ಟ್ ಉಪನ್ಯಾಸಗಳು
1932	ಮಹಾತ್ಮಗಾಂಧಿ ಅಂಡ್ ಡಿಪ್ರೆಸ್ಡ್ ಹ್ಯುಮ್ಯಾನಿಟಿ	ಮಹಾತ್ಮ ಗಾಂಧಿಯವರ ಪ್ರಶಂಸೆ

ಆಧುನಿಕ ಭಾರತದ ನಿರ್ಮಾಪಕರು

ಪ್ರಕಟಣ ವಿಭಾಗ
ಸಮಾಚಾರ ಮತ್ತು ಪ್ರಸಾರ ಖಾತೆ
ಭಾರತ ಸರ್ಕಾರ